SRI Y. RAMACHANDRA (Deputy Minister for Development Panchayat Raj and Municipal Administration).—Sir I beg to lay :

(*a*) Notification No. P/M 8 MLR 64 dated 2nd September 1965 (Mysore Municipalities Taxation Rules, 1965)

(*b*) Notification No. PLH 8 MLR 65 dated 20th September 1965 (Mysore Municipalities (claims to property) (procedure) Rules, 1965)

as required under sub-section (6) of section 323 of the Mysore Municipalities Act, 1964.

Thirty-fourth Report of the Business Advisory Committee

MR. SPEAKER.—I beg to present the 34th Report of the Business Advisory Committee.

MR. DEPUTY SPEAKER (Sri A. R. Panchagavi).—Sir, I beg to move :

"That this Assembly agrees with the 34th Report of the Business Advisory Committee."

MR. SPEAKER.—I suppose the House concurs with this Report.

HON'BLE MEMER.—Yes.

Motion was adopted

Member's Representation

Sri S. SIVAPPA (Shravanabelagola).—Before taking up the business on the Agenda, I bring to your notice that I had given...

Mr. SPEAKER.—It is best to wait a little. There are two Bills, the Prevention of Fragmentation and consolidation of Holdings Bill, and the Mysore Warehouses (Amendment), Bill. I suppose the First Bill goes to the Select Committee, so that the scope of Debate may be confined and it need not be in great detail. The Mysore Warehousing (Amendment) Bill is a very small Bill and if we can finish this, perhaps the rest of the day can be utilised for the other Bill. Even if we finish it earlier, we can get up. Can we take up the Mysore Warehousing Bill ? Is the Hon'ble Minister ready ?

Sri S. NIJALINGAPPA (Chief Minister).—The Hon'ble Minister is not present.

Mr. SPEAKER.—Then we can take up the Prevention of Fragmentation and Consolidation of Holdings Bill.

Mysore Prevention of Fragmentation and Consolidation of Holdings Bill, 1964

Motion to consider

Sri M. V. KRISHNAPPA.—Sir, I beg to move :

"That the Mysore Prevention of Fragmentation and Consolidation of Holdings Bill, 1964, be taken into consideration."

Mr. SPEAKER.—Motion moved :

"That the Mysore Prevention of Fragmentation and Consolidation of Holdings Bill, 1964, be taken into consideration."

† ಶ್ರೀ ಎಂ. ವಿ. ಕೃಷ್ಣಪ್ಪ.—ಸ್ವಾಮಿ, ಈ ಮಾನ್ಯ ಸಭೆಯ ಮುಂದೆ ಮೈಸೂರು ಸಂಸ್ಥಾನ ದಲ್ಲಿರುವ ಭೂಮಿ ಹಿಡುವಳಿಗಳು ಛಿದ್ರ ಛಿದ್ರವಾಗಿ ಉಳುವವನಿಗೆ ಅನೇಕ ರೀತಿಯಲ್ಲಿ ತೊಂದರೆ ಯಾಗುವಂತಹ ಪರಿಸ್ಥಿತಿ ಅನೇಕ ಕಡೆ ಇದೆ. ಇದು ಪೂರ್ವ ಕಾಲದಿಂದಲೇ ನಮ್ಮ ದೇಶದಲ್ಲಿ ಭೂಮಿಯ ಮಾಲೀಕನಿಗೆ ಹಾಗೂ ಉಳುವವನಿಗೆ ಸಂಬಂಧಪಟ್ಟಂತೆ ಆಗುತ್ತಿದೆ. ಇದು ಲಾ ಆಫ್ ಇನ್‌ಹೆರಿಟೆನ್ಸ್ ಎನ್ನುವಂತೆ ನಮ್ಮ ದೇಶದಲ್ಲಿ ಬಹು ಹಿಂದಿನಿಂದಲೂ ಜಾಯಿಂಟು ಫ್ಯಾಮಿಲಿ ಸಿಸ್ಟಂನಂತೆ ಭೂಮಿಯ ಪಾಲುದಾರರಾಗಿದ್ದೇವೆ ಮತ್ತು ಎಲ್ಲ ಭೂಮಿಯನ್ನೂ ಹಂಚಿಕೊಂಡಿದ್ದಾರೆ.

ನಮ್ಮ ದೇಶದಲ್ಲಿ 100ಕ್ಕೆ 80 ಜನರು ತಮ್ಮ ಜೀವನೋಪಾಯಕ್ಕಾಗಿ ಭೂಮಿಯನ್ನು ಅವಲಂಬಿಸಿಕೊಂಡಿರುತ್ತಾರೆ. ಮತ್ತು ಭೂಮಿ ತಲತಲಾಂತರದಿಂದ ವಿಭಾಗವಾಗಿ ಹಂಚಲ್ಪಡುತ್ತಿದೆ. ಹೀಗಾಗಿ ನಮ್ಮಲ್ಲಿ ಭೂಹಿಡುವಳಿಗಳು ಛಿದ್ರಛಿದ್ರವಾಗಿ ಹಂಚಿ ಹೋಗಿರುವುದರಿಂದ ನಾವು ವಿಮಾನದಲ್ಲಿ ಪ್ರಯಾಣ ಮಾಡುತ್ತಿರುವಾಗ ಕೆಳಗಡೆಗೆ ನೋಡಿದರೆ ಒಂದು ಜಿಗ್‌ಜಾಗ್ ಫಜಲ್ಲಿನಂತೆ ಕಾಣುತ್ತದೆ. ಆದರೆ ನಾವು ಯೂರೋಪ್—ಅಮೇರಿಕಾಗಳಲ್ಲಿ ಇದೇ ದೃಶ್ಯವನ್ನು ನೋಡಿದಲ್ಲಿ ಅಲ್ಲಿ ದೊಡ್ಡ ದೊಡ್ಡ ಪ್ಲಾಟುಗಳು ಮಾತ್ರ ಕಣ್ಣಿಗೆ ಬೀಳುತ್ತವೆ. ಆದರೆ ನಮ್ಮಲ್ಲಿ ಭೂಮಿ ಛಿದ್ರಛಿದ್ರವಾಗಿ ಭಾಗ ವಿಭಾಗಗಳಾಗಿ, ಅವುಗಳಿಗೆ ಬಾಂಡು, ಕಲ್ಲು ಮತ್ತು ಬೇಲಿಗಳನ್ನು ಹಾಕಿ ಒಂದರಿಂದ ಒಂದನ್ನು ಪ್ರತ್ಯೇಕಿಸಿರುವುದರಿಂದ ಅವು ವಕ್ರವಕ್ರವಾಗಿ ಕಾಣುತ್ತದೆ. ಉದಾಹರಣೆ ಗಾಗಿ ಹೇಳುವುದಾದರೆ, ನಮ್ಮ ಅಜ್ಜನ ಕಾಲಕ್ಕೆ ನಮಗೆ 300 ಎಕರೆ ಭೂಮಿ ಇತ್ತು. ಆತನಿಗೆ 5 ಜನ ಮಕ್ಕಳು. ಅದನ್ನು ಹಂಚಿದ್ದರಿಂದ ಒಬ್ಬೊಬ್ಬರಿಗೂ 60 ಎಕರೆ ಜಮೀನು ಬಂತು. ನಮ್ಮ

(ಶ್ರೀ ಎಂ. ವಿ. ಕೃಷ್ಣಪ್ಪ)

ತಂದೆಗೆ ನಾವು 5 ಜನ ಮಕ್ಕಳು. ಆ ಭೂಮಿಯನ್ನು ಪುನಃ ಹಂಚಿದ್ದರಿಂದ ನಮಗೆ ಒಬ್ಬೊಬ್ಬರಿಗೆ 12 ಎಕರೆ ಬಂತು. ನನಗೆ ಈಗಾಗಲೇ 5 ಜನ ಮಕ್ಕಳಿದ್ದಾರೆ. ನಾನು ಅವರಿಗೆ ಈ ಭೂಮಿಯನ್ನು ಹಂಚುವಾಗ ಒಬ್ಬೊಬ್ಬರಿಗೂ ಏನು ಬರುತ್ತೆ ಎಂದರೆ ಕೈಗೆ ದೊಣ್ಣೆ ಬರುತ್ತದೆ ಎಂದು ಕಾಣುತ್ತದೆ. ಕಾರಣ ಅವನಿಗೆ ಒಳ್ಳೆಯ ಜಮೀನು ಬಂತು, ನನಗೆ ಕೆಟ್ಟ ಜಮೀನು ಬಂತು ಎಂದು ಅವರು ಹೊಡೆದಾಟಕ್ಕೆ ಪ್ರಾರಂಭ ಮಾಡುತ್ತಾರೆ, ಅದಕ್ಕಾಗಿ ಅವರಿಗೆ ಕೈಗೆ ದೊಣ್ಣೆ ಬರುತ್ತೆಂದು ಹೇಳಿದೆನು. ಹೀಗೆ ನಮ್ಮಲ್ಲಿ ಭೂಮಿಯನ್ನು ಜನರು ಹರಿದು ಹಂಚಿಕೊಳ್ಳುತ್ತಾ ಬಂದಿದ್ದಾರೆ. ನಾನು ನೋಡಿದ್ದರಲ್ಲಿ ಅನೇಕ ಕಡೆಗಳಲ್ಲಿ ಈ ಭೂಮಿ ಹಂಚಿಕೆಯಿಂದಲೇ ಜನರಲ್ಲಿ ಜಗಳಗಳುಂಟಾಗುತ್ತವೆ ಎಂದು ಕಂಡು ಬಂದಿದೆ. ಒಬ್ಬನಿಗೆ 9 ಎಕರೆ ಜಮೀನಿದ್ದರೆ ಅದು ಒಂದು ಕಡೆ ಇರುವುದಿಲ್ಲ. 12 ಕಡೆ ಇರುತ್ತದೆ. ಒಂದು ಕಡೆ ಅರ್ಧ ಎಕರೆ, ಇನ್ನೊಂದು ಕಡೆ ಕಾಲೆಕರೆ ಮತ್ತೊಂದು ಕಡೆ ಅರ್ಧ ಎಕರೆ ಹೀಗಿರುತ್ತದೆ. ನಮ್ಮಲ್ಲಿ ಈ ಭೂಮಿಯ ಹಂಚಿಕೆಯು ತೆನ್ನಾಲಿರಾಮಕೃಷ್ಣನು ಕಥೆಯನ್ನು ಬರೆದಂತಿದೆ. ಈ ಪದ್ಧತಿಯನ್ನು ಆದಷ್ಟು ಬೇಗ ತಪ್ಪಿಸಬೇಕೆಂದು ಸರ್ಕಾರದವರ ಇರಾದೆ. ಅದಕ್ಕಾಗಿ ಸಭೆಯು ಈ ಮುಂದೆ ಮಸೂದೆಯನ್ನು ತರಲಾಗಿದೆ. ಒಬ್ಬ ಮನುಷ್ಯನಿಗೆ ಎಷ್ಟೇ ಭೂಮಿಯಿರಲಿ—ಅದು 10 ಎಕರೆ ಇರಲಿ, 50 ಎಕರೆ ಇರಲಿ ಅದು ಒಂದು ಕಡೆಯಲ್ಲೇ ಇರಬೇಕು. ಅದರಿಂದ ರೈತರಿಗೂ ಬಹಳ ಅನುಕೂಲ. ಈ ಮಾನ್ಯ ಸಭೆಯಲ್ಲಿ ರೈತರ ಮಕ್ಕಳೇ ಹೆಚ್ಚಾಗಿರುವುದರಿಂದ ನಾನು ಈ ವಿಚಾರದಲ್ಲಿ ಅಷ್ಟು ಹೆಚ್ಚಿನ ವಿವರಗಳನ್ನು ಹೇಳಬೇಕಾಗಿಲ್ಲ. ಜಮೀನು ಎಷ್ಟು ಛಿದ್ರವಾಗಿದ್ದರೆ ಮಾಲೀಕನಿಗೆ ಅಷ್ಟೂ ತೊಂದರೆಯಾಗುತ್ತದೆ. ಆ ತೊಂದರೆಯನ್ನು ತಪ್ಪಿಸುವ ಉದ್ದೇಶದಿಂದ ಸರ್ಕಾರದವರು ಈಗ ಈ ಮಸೂದೆಯನ್ನು ತರಬೇಕಾಯಿತು. ಮೇಲಾಗಿ ಈಗ ದೇಶಾದ್ಯಂತವೂ ಒಂದು ಏಕರೀತಿಯ ಶಾಸನವನ್ನು ಜಾರಿಗೆ ತರಬೇಕೆಂಬುದು ಸರ್ಕಾರದವರ ನೀತಿಯಾಗಿರುವುದರಿಂದಲೂ ಇದನ್ನು ತರಬೇಕಾಯಿತು. ನಮ್ಮ ವಿಶಾಲ ಮೈಸೂರು ರಾಜ್ಯದಲ್ಲಿ ಈಗಾಗಲೇ ಭೂಮಿಯನ್ನು ಛಿದ್ರಗೊಳಿಸತಕ್ಕ ಕಾರ್ಯವನ್ನು ತಡೆಗಟ್ಟತಕ್ಕ ಬಗ್ಗೆ ಶಾಸನವನ್ನು ಬೊಂಬಾಯಿ ಕರ್ಣಾಟಕ ಹಾಗೂ ಹೈದ್ರಾಬಾದ್ ಕರ್ಣಾಟಕ ಪ್ರಾಂತದಲ್ಲಿ ಜಾರಿಗೆ ತರಲಾಗಿದೆ. ಈ ಶಾಸನ ಬೊಂಬಾಯಿ ಕರ್ಣಾಟಕದಲ್ಲಿ 1947ರ ಆಕ್ಟ್ ಪ್ರಕಾರ, ಅಂದರೆ "ಬಾಂಬೆ ಪ್ರಿವೆನ್ಷನ್ ಆಫ್ ಫ್ರಾಗ್‌ಮೆಂಟೇಷನ್ ಅಂಡ್ ಕನ್‌ಸಾಲಿಡೇಷನ್ ಆಫ್ ಹೋಲ್ಡಿಂಗ್ಸ್ ಆಕ್ಟ್ 1947"ರ ಪ್ರಕಾರ ಅಲ್ಲಿ ಜಾರಿಗೆ ಬಂದಿದೆ. ಅನಂತರ ಹೈದ್ರಾಬಾದ್ ಕರ್ಣಾಟಕದಲ್ಲಿ 1956ರಲ್ಲಿ" ಹೈದ್ರಾಬಾದ್ ಕನ್ಸಾಲಿಡೇಷನ್ ಆಫ್ ಹೋಲ್ಡಿಂಗ್ಸ್ ಅಂಡ್ ಪ್ರಿವೆನ್‌ಷನ್ ಆಫ್ ಫ್ರಾಗ್‌ಮೆಂಟೇಷನ್ ಆಕ್ಟ್ 1956"ರ ಪ್ರಕಾರ ಅಲ್ಲಿ ಜಾರಿಯಲ್ಲಿದೆ. ಈಗಾಗಲೇ ನಮ್ಮ ಕಳೆದ ಒಂದೆರಡು ಯೋಜನೆಗಳಲ್ಲಿ 11 ಲಕ್ಷ ಎಕರೆಗಳಷ್ಟು ಭೂಮಿಯನ್ನು ಕನ್‌ಸಾಲಿಡೇಟ್ ಮಾಡಲಾಗಿದೆ. ಆದರೆ ಈ ಕಾರ್ಯ ಭರದಿಂದ ಸಾಗಬೇಕಾಗಿದೆ. ಈ ಶಾಸನವನ್ನು ಈಗ ಹೊಸ ಮೈಸೂರು ಪ್ರಾಂತ್ಯದ ಮಂಗಳೂರು, ಮದ್ರಾಸ್ ಕರ್ಣಾಟಕ ಬಳ್ಳಾರಿ, ಕೊಡಗು ಜಿಲ್ಲೆ ಇತ್ಯಾದಿ ಕಡೆಗಳಲ್ಲಿ ಜಾರಿಗೆ ತರಬೇಕಾಗಿದೆ. ಒಂದು ಉದ್ದೇಶದಿಂದ ಈಗ ಈ ಬಿಲ್ಲನ್ನು ಈ ಮಾನ್ಯ ಸಭೆಯ ಮುಂದೆ ತರಲಾಗಿದೆ. ಈಗಾಗಲೇ ಛಿದ್ರಛಿದ್ರವಾಗಿರತಕ್ಕ ಭೂಮಿಗಳನ್ನು ಒಂದುಗೂಡಿಸುವುದರಿಂದ ರೈತರಿಗೆ ಅನುಕೂಲವಾಗುತ್ತದೆ. ಗ್ರಾಮಗಳಲ್ಲಿ ಜಗಳಗಳು ಕಡಮೆಯಾಗುತ್ತವೆ. ನಾಲ್ಕಾರು ಕಡೆಗಳಿಗೆ ತಿರುಗಾಡುವುದು ತಪ್ಪುತ್ತದೆ. ಭೂಮಿಯಿಂದ ಆದಾಯವೂ ಜಾಸ್ತಿಯಾಗುತ್ತದೆ. ಆದರೆ ಹಾಗೆ ಮಾಡುವುದಕ್ಕೆ ಸರ್ಕಾರಕ್ಕೆ ಸಾಧ್ಯವಿದೆಯೇ ಎಂದು ಕೆಲವರಲ್ಲಿ ಅನುಮಾನ ಬಂದಿದೆ. ಕಾರಣ ಭೂಮಿಯಲ್ಲಿ ಎಲ್ಲ ಕಡೆಗಳಲ್ಲೂ ಸಾರ ಒಂದೇ ಸಮನಾಗಿರುವುದಿಲ್ಲ. ಒಳ್ಳೆಯ ಭೂಮಿಯನ್ನು ಕೊಟ್ಟು ಕೆಟ್ಟ ಭೂಮಿಯನ್ನು ಹೇಗೆ ತೆಗೆದುಕೊಳ್ಳುತ್ತಾರೆ ಎಂಬುದು ಎಲ್ಲರಲ್ಲೂ ಒಂದು ಸಮಸ್ಯೆಯನ್ನು ಉಂಟುಮಾಡಿದೆ. ಪಂಜಾಬಿನಲ್ಲಿ ಈ ಕಾರ್ಯ ಬಹಳ ಚೆನ್ನಾಗಿ ನಡೆದಿದೆ. ಕರ್ಣಾಟಕದಲ್ಲೂ ಕೆಲವು ಕಡೆ ಚೆನ್ನಾಗಿ ನಡೆದಿದೆ. ಇದರಿಂದ ಜನರಿಗೂ ಬಹಳ ಅನುಕೂಲವಾಗಿದೆ. ಆದರೆ ಇದನ್ನು ಜಾರಿಗೆ ತರುವುದರಲ್ಲಿ ಕೆಲವು ತೊಂದರೆಗಳಿವೆ. ಅಧಿಕಾರಿಗಳು ಜಮೀನಿನ ಮೌಲ್ಯವನ್ನು ಹೆಚ್ಚು ಕಡಮೆ ಮಾಡಲು ಅವಕಾಶವಿದೆ, ಕೆಲವು ಶ್ರೀಮಂತರಿಗೆ ಹೆಚ್ಚಿನ ಅನುಕೂಲ ಮಾಡಲು ಅವರ ಜಮೀನಿಗೆ ಹೆಚ್ಚು ಬೆಲೆಯನ್ನು ಹಾಕಿ ಬಡವನ ಜಮೀನಿಗೆ ಕಡಮೆ ಬೆಲೆಯನ್ನು ಹಾಕತಕ್ಕ ಸಂಭವಗಳಿವೆ. ಏಕೆಂದರೆ ನನಗೆ ಈಗಾಗಲೆ ಅಂಥ 3-4 ದೂರುಗಳು ಬಂದಿವೆ. ಅದನ್ನು ನಿವಾರಣೆ ಮಾಡಲು ಸೆಲೆಕ್ಟ್ ಸಮಿತಿಯವರು ಆಲೋಚನೆ ಮಾಡುವುದಕ್ಕೆ ಅವಕಾಶವಿದೆ. ಒಟ್ಟಿನಲ್ಲಿ ಮಸೂದೆಯ ಧ್ಯೇಯ ಒಳ್ಳೆಯದು. ಆದರೆ ಸರ್ಕಾರದವರು ಜಾರಿಗೆ ತರತಕ್ಕ ಭೂಸುಧಾರಣಾ ಶಾಸನಕ್ಕೂ ಇದಕ್ಕೂ ಹೇಗೆ ಹೊಂದಾವಣಿಕೆಯಾಗುತ್ತದೆಂದು ಶ್ರೀ ರಾಮೇಗೌಡರು ಮತ್ತು ಇನ್ನಿತರೇ ಕೆಲವು ಮಾನ್ಯ ಸದಸ್ಯರು ಕೇಳಿದರು. ಅಂಥ ತೊಂದರೆಯೇನೂ

ಆಗುವುದಿಲ್ಲ. ಸರ್ಕಾರದವರು ಆಯಾಯ ಪ್ರದೇಶಕ್ಕೆ ಅನುಗುಣವಾಗಿ ಇಂತಿಷ್ಟು ಭೂಮಿಗೆ ಕಡಮೆ ಇಡಬಾರದು ಎಂಬ ಒಂದು ಮಿತಿಯನ್ನು ನಿಗದಿ ಮಾಡುತ್ತಾರೆ. ಆ ಮಿತಿಗಿಂತ ಕಡಮೆ ಯಾಗಬಾರದು. ಆದರೆ ನಮ್ಮಲ್ಲಿರತಕ್ಕ ಭೂಮಿಯನ್ನು ಒಂದು ಸೋಷಿಯಲ್ ಜಸ್ಟೀಸ್ ಪ್ರಕಾರ ಹಂಚುವುದಕ್ಕೆ ಸಾಧ್ಯವಿಲ್ಲ. ಕಾರಣ ನಮ್ಮಲ್ಲಿರತಕ್ಕ ಭೂಮಿ 36 ಕೋಟಿ ಎಕರೆ ಇದ್ದರೆ ಜನಸಂಖ್ಯೆ 46 ಕೋಟಿಯಿದೆ. ಹಂಚಿದರೆ ಒಬ್ಬೊಬ್ಬರಿಗೆ ಮುಕ್ಕಾಲು ಎಕರೆ ಬರಬಹುದು. ಆದುದರಿಂದಲೇ ನಾವು ಉಳತಕ್ಕವನಿಗೇ ಜಮೀನಿರಬೇಕೆಂದು ಭೂಸುಧಾರಣಾ ಕಾನೂನನ್ನು ತಂದಿದ್ದೇವೆ.

ಆದ್ದರಿಂದ ಈ ಭೂಸುಧಾರಣೆಯಲ್ಲಿ ಸರ್ಕಾರ ಜಮೀನನ್ನು ಹಂಚುವುದಕ್ಕೂ ಫ್ರಾಗ್ಮೆಂಟೇಶನ್ ಆಫ್ ಹೋಲ್ಡಿಂಗ್ಸ್ ಕನ್‌ಸಾಲಿಡೇಟ್ ಮಾಡುವುದಕ್ಕೂ ಯಾವ ಸಂಬಂಧವೂ ಇಲ್ಲ. ಅದು ಕಾಂಟ್ರಡಿಕ್ಟರಿ ಆಗುವುದಿಲ್ಲ. ಆದ್ದರಿಂದ ಮಾನ್ಯಸಭೆಯ ಸದಸ್ಯರು ಈ ಮಸೂದೆಯನ್ನು ಪೂರ್ಣವಾಗಿ ಒಪ್ಪುತ್ತಾರೆ ಎಂದು ನಂಬಿದ್ದೇನೆ. ಅನೇಕ ರೈತರಿಗೆ ಇದರಿಂದ ಹೆಚ್ಚು ಬೆಳೆಯು ವುದಕ್ಕೆ ಅನುಕೂಲವಾಗುತ್ತದೆ. ಮುಖ್ಯವಾಗಿ ಹಳ್ಳಿಗಳಲ್ಲಿ ರೈತರು ಜಗಳಗಳನ್ನು ಆಡುವುದು ಕಡಿಮೆಯಾಗುತ್ತದೆ. ಏಕೆಂದರೆ ಅನೇಕ ಜಮೀನುಗಳಲ್ಲಿ ತಕರಾರು ಇರುತ್ತವೆ. ಒಬ್ಬರ ಜಮೀನಿನ ಮಧ್ಯದಲ್ಲಿ ಮತ್ತೊಬ್ಬರು ಹೋಗಲು ಬಿಡುವುದಿಲ್ಲ. ಆ ದೃಷ್ಟಿಯಿಂದ ರೈತರ ಕ್ಷೇಮಕ್ಕೆ, ರೈತರ ಹಿತಸಾಧನೆಗೆ ಅನುಕೂಲವಾಗತಕ್ಕ ಈ ಮಸೂದೆಯನ್ನು ಮಾನ್ಯ ಸದಸ್ಯರು ಒಪ್ಪಬೇಕೆಂದು ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

[MR. DEPUTY SPEAKER in the Chair]

ಶ್ರೀ ಎಸ್. ಶಿವಪ್ಪ.—ಈ ಒಂದು ಮಸೂದೆ ಜಾರಿಗೆ ಬಂದರೆ ಮೈಸೂರು ಸಂಸ್ಥಾನದಲ್ಲಿ ಎಷ್ಟು ಜನ ಸಣ್ಣ ಸಣ್ಣ ಹಿಡುವಳಿದಾರರು ಮಾಯವಾಗುತ್ತಾರೆ ಎಂಬುದನ್ನು ದಯವಿಟ್ಟು ಹೇಳಬೇಕು.

ಶ್ರೀ ಎಂ. ವಿ. ಕೃಷ್ಣಪ್ಪ.—ಯಾರೂ ಹೋಗುವುದಿಲ್ಲ, ಪ್ರತಿಯೊಬ್ಬನಿಗೂ ಜಮೀನು ಸಿಕ್ಕುತ್ತದೆ. ಒಬ್ಬರಿಂದ ಒಬ್ಬರಿಗೆ ಎಕ್ಸ್‌ಚೇಂಜ್ ಆಗುತ್ತದೆ ಅಷ್ಟೆ. ಮೈಸೂರು ಸಂಸ್ಥಾನದಲ್ಲಿ 5ರಿಂದ 10 ಎಕರೆವರೆಗೂ ಶೇಕಡ 70ರಷ್ಟು ಹಿಡುವಳಿದಾರರು ಇದ್ದಾರೆ.

Main features of this Bill is when it is enforced, nobody will be deprived of land. He may get a less fertile or more fertile land.

ಒಬ್ಬ ಮನುಷ್ಯನ ಭೂಮಿ ಬಹಳ ಫಲವತ್ತಾಗಿರತಕ್ಕ ಶ್ರೀಮಂತರ ಭೂಮಿಯ ಪಕ್ಕದಲ್ಲಿರುತ್ತದೆ ಅವನದು ಅಷ್ಟು ಫಲವತ್ತಾಗಿರುವುದಿಲ್ಲ ಅಂತಹ ಸಂದರ್ಭದಲ್ಲಿ ಎಕ್ಸ್‌ಚೇಂಜ್ ಆಗುತ್ತದೆ ಅಷ್ಟೇ ಹೊರತು ಯಾರಿಗೂ ಭೂಮಿ ಹೋಗುವುದಿಲ್ಲ, ಇದು ಮುಖ್ಯವಾದ ಅಂಶ.

This is only to prevent future fragmentation.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಸ್ವಾಮಿ, ಈ ಮಾನ್ಯ ಸಭೆಯ ಮುಂದೆ ಮಂಡಿಸಿರತಕ್ಕ ಮೈಸೂರು ಪ್ರಿವೆನ್‌ಷನ್ ಆಫ್ ಫ್ರಾಗ್ಮೆಂಟೇಷನ್ ಅಂಡ್ ಕನ್‌ಸಾಲಿಡೇಷನ್ ಆಫ್ ಹೋಲ್ಡಿಂಗ್ಸ್ ಬಿಲ್ 1964 ಎಂದು ಹೇಳತಕ್ಕ ಈ ವಿಧೇಯಕ ಏನಿದೆ ಇದನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಇದಕ್ಕೆ ಕಾರಣವಾದರೂ ಇಷ್ಟೆ. ಶಾಸ್ತ್ರೀಯವಾದಂತಹ ಯಾವ ಒಂದು ತತ್ವದ ಆಧಾರದ ಮೇಲೆ ಈ ವಿಧೇಯಕವನ್ನು ಈ ಸಭೆಯ ಮುಂದೆ ಮಾನ್ಯ ಮಂತ್ರಿಗಳು ಮಂಡಿಸಿಲ್ಲ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರು ಇಲ್ಲಿ ಅನೇಕ ಸಾರಿ ತಮ್ಮ ಭಾಷಣದಲ್ಲಿ ಈ ದೇಶದಲ್ಲಿರತಕ್ಕ ಜನತೆಯ ಪರ್ ಕ್ಯಾಪಿಟಾ ಒಂದು ಎಕರೆಗಿಂತ ಕಡಿಮೆ ಬೀಳುತ್ತದೆ ಎಂದು ಹೇಳಿ ಈ ಸಭೆಗೆ ತಿಳಿಸಿದ್ದಾರೆ. ಎಕನಾಮಿಕ್ ಆಗಿ ವ್ಯವಸಾಯ ಮಾಡತಕ್ಕ, ಪ್ರಾಫಿಟಬಲ್ ಆಗಿ ವ್ಯವಸಾಯ ಮಾಡತಕ್ಕ ಮಟ್ಟಕ್ಕೆ ಸಣ್ಣ ಹಿಡುವಳಿಗಳನ್ನು ಏರಿಸಬೇಕು ಸಣ್ಣಪುಟ್ಟ ಡಿವಿಜನ್‌ಗಳು ಆಗದ ರೀತಿಯಲ್ಲಿ ತಡೆಗಟ್ಟಬೇಕು ಎಂಬ ಯಾವ ಒಂದು ತತ್ವದ ಮೇಲೆ ಈ ಮಸೂದೆಯನ್ನು ಇಲ್ಲಿ ಇವತ್ತು ಅವರು ಮಂಡಿಸಿದ್ದಾರೆ, ಇದರ ಉದ್ದೇಶ ಏನಿದೆ ಇದು ಸ್ವಾಗತಾರ್ಹವಾಗಿದ್ದರೂ ಕೂಡ ಇದನ್ನು ತಂದಿರತಕ್ಕ ಆಧಾರ ಸರಿಯಾಗಿಲ್ಲ ಎಂಬುದನ್ನು ಮಾನ್ಯ ಮಂತ್ರಿಗಳು ಯೋಚನೆ ಮಾಡಬೇಕಾದ ಸನ್ನಿವೇಶ ಇದೆ. ಉದಾಹರಣೆಗೆ ಹೇಳುವುದಾದರೆ ಸೆಕ್ಷನ್ 4ರಲ್ಲಿ ಹೇಳಿರುವ ಅಂಶಗಳನ್ನು ನಿರ್ಣಯ ಮಾಡತಕ್ಕವರು ಯಾರು? ಪ್ರಾಫಿಟಬಲ್ ಆಗಿ ಕಲ್ಟಿವೇಟ್ ಮಾಡತಕ್ಕ ಏರಿಯಾ ಅಂತ ನಿಷ್ಕರ್ಷೆ ಮಾಡತಕ್ಕ ಅಧಿಕಾರಿ ಯಾರು? ಯಾವರೀತಿ ವಿಮರ್ಶೆ ಮಾಡುತ್ತಾರೆ ಎಂಬ ಬಗ್ಗೆ ಯಾವ ವಿಧವಾದ ಸೂಚನೆಯನ್ನೂ ಕೊಟ್ಟಿಲ್ಲ. ಡೆಫನಿಷನ್‌ನಲ್ಲೂ ಕೂಡ ನಿರ್ದಿಷ್ಟವಾದ ಅಭಿಪ್ರಾಯವಿಲ್ಲ. ನನ್ನ ಸ್ವಂತ ಅನುಭವದಲ್ಲಿ ಹೇಳುವುದಾದರೆ

(ಶ್ರೀ ಎಚ್. ಡಿ. ದೇವೇಗೌಡ)

ತಾವು ಕ್ಲಾರಿಫಿಕೇಷನ್ ರೂಪದಲ್ಲಿ ತಿಳಿಸಿದಿರಿ. ಯಾರನ್ನೂ ಜಮೀನಿನಿಂದ ಹೊರದೂಡುವುದಿಲ್ಲ, ಇರತಕ್ಕ ಸಣ್ಣ ಹಿಡುವಳಿಯನ್ನು ಮಾರ್ಪಾಡು ಮಾಡಿ ಲಾಭದಾಯಕವಾಗಿ ಕೆಲಸ ಮಾಡುವುದರ ಬಗ್ಗೆ ಮತ್ತು ವ್ಯವಸಾಯದ ಉತ್ಪನ್ನವನ್ನು ಹೆಚ್ಚು ಮಾಡತಕ್ಕ ಒಂದು ಉದ್ದೇಶದಿಂದ ಇದನ್ನು ತಂದಿದ್ದೀರಿ. ಆದರೆ ಇದು ಫಲಕಾರಿಯಾಗುವುದಿಲ್ಲ ಎಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ತಮ್ಮ ಉದ್ದೇಶ ಫಲಕಾರಿಯಾಗಬೇಕಾದರೆ ರೈತರಲ್ಲಿರತಕ್ಕ ಜಮೀನನ್ನು ವಾಪಸ್ಸು ತೆಗೆದು ಕೊಳ್ಳಬೇಕು, ರಾಷ್ಟ್ರೀಕರಣ ಮಾಡಬೇಕು. ಹಾಗೆ ಮಾಡಿ ಶಾಸ್ತ್ರೀಯವಾಗಿ ಜಮೀನನ್ನು ವಿಂಗಡಣೆ ಮಾಡಿದರೆ ತಮ್ಮ ಅಭಿಪ್ರಾಯ ಸಫಲವಾದೀತು. ಹಾಗಲ್ಲದೆ ಸುಮ್ಮನೆ ಅಡ್‌ಜಸ್ಟ್ ಮಾಡತಕ್ಕ ಕೆಲಸ ಮಾತ್ರ ಮಾಡಿದರೆ ಪ್ರಾಯಶಃ ತಮ್ಮ ಉದ್ದೇಶ ಸಫಲವಾಗುವುದಿಲ್ಲ ಎಂಬುದು ನನ್ನ ಅಭಿಪ್ರಾಯ. ಇದು ಸುಮ್ಮನೆ ಒಂದು ತೇಪೆ ಹಾಕತಕ್ಕ ಕೆಲಸ ಮಾತ್ರ ಆಗುತ್ತದೆ. ತಾತ್ಕಾಲಿಕ ಪರಿಹಾರ ದೊರೆಯಬಹುದು ಎಂಬ ಆಶೆ ಏನೋ ಇದೆ ಆದರೆ ಕೊನೆಯಲ್ಲಿ ಕೆಟ್ಟ ಪರಿಣಾಮವಾಗುತ್ತದೆ ಯಾದುದರಿಂದ ನನ್ನ ಸ್ಪಷ್ಟ ಅಭಿಪ್ರಾಯ ಈ ವಿಷಯದಲ್ಲಿ ಏನೆಂದರೆ ತಾವು ರೈತರಿಗೆ ನಿಜವಾಗಿಯೂ ಸಹಾಯ ಮಾಡಬೇಕು, ಯಾರು ಇವತ್ತು ಸಣ್ಣ ಹಿಡುವಳಿದಾರರು ಇದ್ದಾರೋ ಅವರಿಗೆ ಸಹಾಯ ಮಾಡಬೇಕೆಂದು ಇದ್ದೀರೋ ಅವರಿಗೆ ಇದರಿಂದ ಹೆಚ್ಚಿನ ಸಹಾಯ ವಾಗಬೇಕಾದರೆ ಇರತಕ್ಕ ಜಮೀನನ್ನೆಲ್ಲಾ ರಾಷ್ಟ್ರೀಕರಣ ಮಾಡಬೇಕು ಮತ್ತು ಶಾಸ್ತ್ರೀಯವಾದ ಒಂದು ಆಧಾರವನ್ನು ಇಟ್ಟುಕೊಂಡು ಮುಂದುವರಿಯಬೇಕು. ಹಾಗೆ ಮಾಡುವಾಗ ಜನಸಂಖ್ಯೆಯ ಆಧಾರವನ್ನು ಇಟ್ಟುಕೊಳ್ಳಬಹುದು ಇಲ್ಲದೇ ಹೋದರೆ ಇದಕ್ಕೆ ಸರ್ಕಾರದವರು ಒಂದು ಎಕ್ಸ್‌ಪರ್ಟ್ ಬಾಡಿಯನ್ನು ರಚನೆ ಮಾಡಿ ಜಮೀನು ವಿಂಗಡಣೆ ಮಾಡತಕ್ಕದ್ದರ ಬಗ್ಗೆ ಯೋಚನೆ ಮಾಡುವುದು ಸೂಕ್ತ ಎಂದು ನನ್ನ ಸ್ಪಷ್ಟ ಅಭಿಪ್ರಾಯ. ನೀವು ಈಗ ತಂದಿರುವ ಬಿಲ್‌ನಿಂದ ಬಹಳ ಗಂಭೀರ ಪರಿಸ್ಥಿತಿ ಬರುತ್ತದೆ. ಕನ್‌ಸಾಲಿಡೇಷನ್ ಅಧಿಕಾರಿಗಳು ಯಾರಿದ್ದಾರೆ ಅವರಿಗೆ ಬಹಳ ಹೆಚ್ಚಿನ ಅಧಿಕಾರವನ್ನು ಕೊಟ್ಟಿದ್ದೀರಿ. ಅದರಿಂದ ರೈತರನ್ನು ಹೆಚ್ಚಿನ ಕೋರ್ಟು ವ್ಯಾಜ್ಯಗಳಿಗೆ ಗುರಿ ಮಾಡುತ್ತೀರೇ ಹೊರತು ನಿಜವಾಗಿಯೂ ಇದರಿಂದ ಅವರಿಗೆ ಫಲ ದೊರೆಯುವುದಿಲ್ಲ. ಈ ಬಿಲ್ಲನ್ನು ಡ್ರಾಫ್ಟ್ ಮಾಡಿರತಕ್ಕ ಲಾ ಡಿಪಾರ್ಟ್‌ಮೆಂಟಿನ ಅಧಿಕಾರಿಗಳು ಯಾರಿದ್ದಾರೆ ಅವರ ಮನಸ್ಸಿನಲ್ಲಿ ಏನಿದೆ ಎಂಬುದು ಅರ್ಥವಾಗುವುದಿಲ್ಲ. ಇದರಲ್ಲಿ ಬಹಳ ಹಿಂಸೆ ಕೊಡತಕ್ಕ ಸನ್ನಿವೇಶಗಳು ಇವೆ. ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ವರ್ಣನಾತೀತವಾದದ್ದು. ಇದು ಪರಿಶೀಲನಾ ಸಮಿತಿಗೆ ಹೋಗುತ್ತದೆ ಎಂದು ತಿಳಿಸಿದ್ದಾರೆ ಅವರೂ ಕೂಡ ಇದನ್ನು ಬಹಳ ಹುಷಾರಾಗಿ ಯೋಚನೆ ಮಾಡ ಬೇಕಾಗುತ್ತದೆ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಇದನ್ನು ಜಾಯಿಂಟ್ ಸೆಲೆಕ್ಟ್ ಸಮಿತಿಗೆ ಕಳುಹಿಸುವುದಕ್ಕೆ ಬದಲಾಗಿ ಮಾನ್ಯ ಮಂತ್ರಿಗಳು ಈ ಬಿಲ್ಲನ್ನು ವಾಪಸು ತೆಗೆದುಕೊಂಡು ಇದನ್ನು ಒಂದು ಶಾಸ್ತ್ರೀಯವಾದ ಆಧಾರದ ಮೇಲೆ ತಜ್ಞರ ಅಭಿಪ್ರಾಯವನ್ನು ಪಡೆದು ಮಾಡಿದರೆ ಒಳ್ಳೆಯ ದಾಗುತ್ತದೆಯೇ ಹೊರತು ಇಲ್ಲದೇ ಇದ್ದರೆ ಪ್ರಯೋಜನವಾಗುವುದಿಲ್ಲ. ಒಂದು ಕಡೆ ಜಮೀನು ಹಂಚಿಕೆ ಮಾಡತಕ್ಕ ಪ್ರಶ್ನೆ ಬಂದಾಗ ಅದನ್ನು ತೀರ್ಮಾನ ಮಾಡುವುದಕ್ಕೆ ಲಾಟರಿ ಹಾಕಬೇಕೆಂದು ಹೇಳುತ್ತೀರಿ.

2-30 P.M.

ಪರಿಹಾರ ಕೊಡಲು ಲಾಟರಿ ಹಾಕುತ್ತೇವೆ, ಅದರಲ್ಲಿ ಯಾರ ಹೆಸರು ಬರುತ್ತದೆಯೋ ಅವರಿಗೆ ಕೊಡುತ್ತೇವೆ ಎಂದು ಹೇಳುವುದು ಸರಿಯಲ್ಲ. ಐದಾರು ಜನಗಳಿಗೆ ಹಂಚಬೇಕಾದಾಗ ಯಾರಿಗೆ ಮೊದಲು ಕೊಡಬೇಕು, ನಂತರ ಯಾರಿಗೆ ಕೊಡಬೇಕು ಎಂದು ಹೇಳಲು ಈ ಬಿಲ್ಲಿನಲ್ಲಿ ಒಂದು ಶಾಸ್ತ್ರೀಯವಾದ ಆಧಾರದಮೇಲೆ ಉಲ್ಲೇಖಿಸಿರುವುದಿಲ್ಲ. ಈ ಬಿಲ್ಲಿನಲ್ಲಿ ಅನೇಕ ಲೋಪದೋಷ ಗಳಿವೆ, ಎನ್‌ಕಂಬ್ರೆನ್ಸಸ್ ವಿಚಾರದಲ್ಲಿ ಯಾವರೀತಿ ಮಾಡಬೇಕು, ಕೋರ್ಟು ಡಿಕ್ರಿಯಾದರೆ ಯಾವ ರೀತಿ ವಿಲೆ ಮಾಡಬೇಕು ಎಂಬ ವಿಚಾರಗಳೆಲ್ಲಾ ಸ್ಪಷ್ಟವಾಗಿ ನಮೂದಿಸಲ್ಪಡದೆ ಅಸಮಂಜಸವಾದ ಕಲಮುಗಳು ಕೆಲವಿವೆ. ಇದನ್ನೆಲ್ಲಾ ಸಮಿತಿಯವರು ವಿಮರ್ಶೆ ಮಾಡುವುದು ಸೂಕ್ತ. ಇದು ಸೆಲೆಕ್ಟ್ ಕಮಿಟಿಗೆ ಹೋಗುವುದರಿಂದ ನಾನು ಹೆಚ್ಚು ಕಾಲ ತೆಗೆದುಕೊಳ್ಳುವುದಿಲ್ಲ. ನಾನು ಮೊದಲೇ ಹೇಳಿದ ಹಾಗೆ ಇಡೀ ಭೂಮಿಯನ್ನು ರಾಷ್ಟ್ರೀಕರಣ ಮಾಡಿ ಪುನಃ ಬೇಕಾದರೆ ಶಾಸ್ತ್ರೀಯ ಆಧಾರದ ಮೇಲೆ ಹಂಚುವುದು ಸೂಕ್ತ. ಈ ಬಿಲ್ಲನ್ನು ವಾಪಸು ತೆಗೆದುಕೊಂಡು ಒಂದು ಸರಿಯಾದ ಆಧಾರದಮೇಲೆ ಪುನರ್ವಿಂಗಡಣೆ ಮಾಡುವುದಕ್ಕೆ ನನ್ನ ಸ್ವಾಗತವಿದೆ. ಮಾನ್ಯ ಮಂತ್ರಿಗಳು ಇದನ್ನೆಲ್ಲಾ ಯೋಚನೆ ಮಾಡಿ ತಕ್ಕ ತಿದ್ದುಪಡಿ ಮಾಡಿ ಸರಿಯಾದ ಬಿಲ್ಲನ್ನು ತರಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಎಂ. ಆರ್. ಪಾಟೀಲ್ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಭೂ ವಿಭಜನೆ ನಿರೋಧಕ ಮತ್ತು ಹಿಡುವಳಿಗಳನ್ನು ಒಂದುಗೂಡಿಸುವುದಕ್ಕೆ ಸಂಬಂಧಪಟ್ಟ ವಿಧೇಯಕ ವನ್ನು ನಮ್ಮ ಮುಂದಿಡುತ್ತಾ ಸಂಬಂಧಪಟ್ಟ ಮಂತ್ರಿಗಳು ಬಹಳ ಚೆನ್ನಾಗಿ ಅದರ ಅಂಶಗಳನ್ನು ವಿವರಿಸಿದ್ದಾರೆ. ಇದರ ಅನುಭವ ಮುಂಬಯಿ ಪ್ರಾಂತದಿಂದ ಬಂದವರಿಗೆ ಸಾಕಷ್ಟು ಉಂಟು. ಇದರಿಂದ ರೈತರಿಗೆಷ್ಟು ತೊಂದರೆಯಾಗುತ್ತಿತ್ತು, ಸಂಕಟವಾಗುತ್ತಿತ್ತು, ಶ್ಯಾನುಭೋಗರಿಂದ ಹಿಡಿದು ಸರಕಾರದವರೆಗೆ ಬರುವಾಗ ಹಂತ ಹಂತದಲ್ಲೂ ಎಷ್ಟು ತೊಂದರೆಯಾಗುತ್ತಿತ್ತು ಎಂಬು ದನ್ನು ಹೇಳಬೇಕೆಂದಿದ್ದೇನೆ. ಇವತ್ತು ನಮ್ಮೆದುರಿಗಿರುವ ಬಿಲ್ಲಿನಲ್ಲಿ ಎರಡು ಭಾಗಗಳಿವೆ, ಒಂದು ಭೂ ವಿಭಜನೆಯನ್ನು ನಿರೋಧಿಸುವುದು, ಮತ್ತೊಂದು ಹಿಡುವಳಿಗಳನ್ನು ಒಂದುಗೂಡಿಸುವುದು. ಒಂದರಿಂದ 14ರವರೆಗಿರುವ ಕ್ಲಾಜುಗಳು ಭೂ ವಿಭಜನೆ ನಿರೋಧಕ್ಕೆ ಸಂಬಂಧಪಟ್ಟಿವೆ, 15 ರಿಂದ 41ರವರೆಗಿರುವ ಕ್ಲಾಜುಗಳು ಹಿಡುವಳಿಗಳನ್ನು ಒಂದುಗೂಡಿಸುವುದಕ್ಕೆ ಸಂಬಂಧಪಟ್ಟಿವೆ. ಫ್ರಾಗ್‌ಮೆಂಟೇಷನ್ ವಿಚಾರ ಸರಕಾರಕ್ಕೆ ತೊಂದರೆದಾಯಕವಲ್ಲ, ಸರಕಾರದವರು ನೋಟಿಫಿ ಕೇಷನ್ ಮೂಲಕ ಸ್ಟ್ಯಾಂಡರ್ಡ್ ಏರಿಯಾ ಎಷ್ಟೆಂಬುದನ್ನು ಗೊತ್ತುಮಾಡಬಹುದು. ಕೆಲವು ಕಡೆ 6 ಎಕರೆ, ಕೆಲವು ಕಡೆ 8 ಎಕರೆ, ಮತ್ತೆ ಕೆಲವು ಕಡೆ 3 ಎಕರೆ ಸ್ಟ್ಯಾಂಡರ್ಡ್ ಏರಿಯಾ ಎಂದು ಗೊತ್ತು ಮಾಡಿದ್ದಾರೆ. ಅದರ ಕೆಳಗಿರುವುದು ಫ್ರಾಗ್ಮೆಂಟಾಗುವುದು. ಫ್ರಾಗ್ಮೆಂಟ್ ಆಗದ ಹಾಗೆ ಹಂಚ ಬೇಕು, ಕೋರ್ಟು ಆಜ್ಞೆ ಮೂಲಕ ವಿಭಾಗವಾಗುವಾಗ ಅಥವ ಅಣ್ಣತಮ್ಮಂದಿರು ಭಾಗ ಮಾಡಿಕೊಳ್ಳುವಾಗ ಫ್ರಾಗ್ಮೆಂಟಾಗದ ಹಾಗೆ ನೋಡಿಕೊಳ್ಳುವುದು ಅವಶ್ಯಕವಾಗುತ್ತದೆ. ಎಕನಾಮಿಕ್ ಹೋಲ್ಡಿಂಗ್ ಎಂದರೆ ಒಂದು ಸ್ಟ್ಯಾಂಡರ್ಡ್ ಏರಿಯ. ಹಾಗಿರುವಾಗ ತೊಂದರೆ ಇಲ್ಲ. ಕೆಲವು ಕಲಮುಗಳು ಒಂದಕ್ಕೊಂದು ವಿರೋಧವಾಗಿವೆ. ಅದನ್ನು ಹೇಳುತ್ತೇನೆ. ಸಾಮಾನ್ಯವಾಗಿ ಕನ್‌ಸಾಲಿಡೇಷನ್ ಆಫ್ ಹೋಲ್ಡಿಂಗ್ಸ್ ವಿಚಾರವಿರುವ ಭಾಗಗಳಲ್ಲಿ ಈ ರೀತಿ ಇದೆ. ಇದರಿಂದ ಎಷ್ಟು ತೊಂದರೆಯಾಗುತ್ತದೆಂಬುದನ್ನು ಹೇಳುತ್ತೇನೆ. ಸಾಮಾನ್ಯವಾಗಿ ನೀರಾವರಿ ಜಮೀನಿರುವ ಕಡೆ ಒಂದು ಎಕರೆಗೆ ಒಂದು ತುಂಡು ಮಾಡುವುದುಂಟು. ಪಂಜಾಬಿನಲ್ಲಿ ಆ ರೀತಿ ಇದೆ. ಉಳಿದ ಕಡೆ ತುಂಡುಗಳನ್ನು ಕೂಡಿಸುವುದಿದೆ. ಸಣ್ಣ ಹಿಡುವಳಿ ಇರುವುದನ್ನು ಒಟ್ಟಿಗೆ ಸೇರಿಸುವರು. ಒಂದು ಜಮೀನು ಊರ ಹತ್ತಿರ ಇರಬಹುದು, ಇನ್ನೊಂದು ಊರಿಗೆ ದೂರ ಇರಬಹುದು. ಅವೆರಡನ್ನೂ ಎರಡು ಭಾಗ ಮಾಡಬಹುದು. ಒಬ್ಬರಿಗೆ ದೂರದಲ್ಲಿರುವ ಜಮೀನು ಮಾತ್ರ ಕೊಟ್ಟರೆ ಅಸಮಾಧಾನವಾಗುವುದು. ಈ ದಿವಸ ನಮ್ಮ ಮುಂದಿರುವ ಬಿಲ್ಲು ಮುಂಬಯಿ ಪ್ರಾಂತದ ಬಿಲ್ಲಿನ ನಕಲು ಎಂದು ಹೇಳಬಹುದು. ಹೈದರಾಬಾದು ಪ್ರದೇಶದ ಬಿಲ್ಲೂ ಸಹ ಇದನ್ನೇ ಅನುಸರಿಸಿದೆ. ಆದರೆ ಇದರಲ್ಲಿರುವ ಒಂದು ದೋಷ ಒಮ್ಮೆ ರಾಜ್ಯ ಸರಕಾರ ಒಂದು ಪ್ರದೇಶಕ್ಕೆ ಸ್ಕೀಮನ್ನು ಮಾಡಿದಮೇಲೆ ನಂತರ ಬೇರೆ ಸ್ಕೀಮು ಲಾಗು ಆಗುವವರೆಗೆ ಏನು ಮಾಡಬೇಕು, ಎಷ್ಟು ಎಕರೆ ಒಂದು ಹಿಡುವಳಿಗಿರಬೇಕು ಎಂಬ ಸೂಚನೆ ಇಲ್ಲಿಲ್ಲ. ಇದಕ್ಕೆಲ್ಲಾ ರಾಜ್ಯ ಸರಕಾರದ ಆರ್ಡರಿರುತ್ತದೆ ಅಥವಾ ಸಂಬಂಧಪಟ್ಟ ಅಡ್ಮಿನಿಸ್ಟ್ರೇಟಿವ್ ಅಧಿಕಾರಿ ಇದನ್ನು ನೋಡಿಕೊಳ್ಳುತ್ತಾನೆ. ಸ್ಕೀಮು ಈ ಸಂಬಂಧದಲ್ಲಿ ಹೇಗಿರಬೇಕು, ಯಾವರೀತಿ ಮಾಡಿದರೆ ಸರಿಯಾಗಿರುತ್ತದೆ ಎಂಬುದನ್ನೆಲ್ಲಾ ಒಬ್ಬ ಅಧಿಕಾರಿ ನೋಡಿಕೊಳ್ಳುತ್ತಾನೆ. ಉತ್ತರ ಪ್ರದೇಶದಲ್ಲಿ ಹೀಗುಂಟು. ಅಲ್ಲಿ ಫ್ರಾಗ್ಮೆಂಟ್ ಎಂದರೆ ಮೂರೂವರೆ ಎಕರೆಯವರೆಗಿರುವುದು. ಅದಕ್ಕಿಂತ ಅಂದರೆ ಮೂರೂವರೆ ಎಕರೆಗಿಂತ ಕಡಮೆಯಿದ್ದಾಗ ಸಾಧ್ಯವಿದ್ದರೆ ಅದಕ್ಕೆ ತಕ್ಕಷ್ಟು ಜಮೀನು ಕೂಡಿಸಬಹುದು. ಮತ್ತು ಒಮ್ಮೆ ಕೂಡಿಸಿದರೆ ಯಾವುದೇ ಜಮೀನನ್ನೂ ಕೂಡ ಅದಕ್ಕಿಂತ ಕಡಮೆಯಾಗದಂತೆ ನೋಡಿಕೊಳ್ಳ ಬೇಕು, ಕಡಮೆಯಾಗುವಂತೆ ಭಾಗಮಾಡಬಾರದು ಎಂಬ ತತ್ವವಿದೆ. ಆದರೆ ಈ ದಿವಸ ನಮ್ಮೆದುರಿ ಗಿರುವ ಬಿಲ್ಲಿನಲ್ಲಿ ಅದ್ಯಾವುದೂ ಇಲ್ಲ. ಹೀಗಿರುವಾಗ ಕೇವಲ ಒಬ್ಬ ಅಧಿಕಾರಿಯ ಕೈಲಿ ಈ ಅಧಿಕಾರ ಕೊಡಲಾಗುತ್ತಿದೆ. ಆತನಿಗೆ ಇದರ ಅನುಭವವಿಲ್ಲದಿರಬಹುದು, ರೈತರ ವಿಚಾರವೇ ತಿಳಿಯದಿರ ಬಹುದು. ಆಗ ಅಂಥ ಸೆಟ್ಲ್‌ಮೆಂಟ್ ಕಮಿಷನರಿಂದ ತೊಂದರೆಯಾಗುವುದು. ಆತ ಉದ್ದೇಶ ಪೂರ್ವಕವಾಗಿ ರೈತರಿಗೆ ಹಾನಿಯಾಗಬೇಕೆಂದು ಏನೂ ಮಾಡದಿರಬಹುದು. ಆದರೆ ಜಮೀನಿನ ವಿಚಾರ ಹೇಗೆ ಎಂಬುದೇ ಗೊತ್ತಿಲ್ಲದಿರುವಾಗ ಅಂಥ ಅಧಿಕಾರಿ ನಿಯಮಗಳನ್ನು ರಚಿಸಿದರೆ ಜನರಿಗೆ ಕಷ್ಟವಾಗುವುದು, ಮುಂಬಯಿ ಪ್ರಾಂತದಲ್ಲಿರುವ ಕಾಯಿದೆಯಿಂದ ತೊಂದರೆಯಾಗುತ್ತಿದೆ. ಮುಂಬಯಿ ಪ್ರಾಂತದಲ್ಲಿ 50 ಎಕರೆಯವರೆಗೆ ಕೂಡಿಸುವುದು ಎಂದು ಗೊತ್ತು ಮಾಡಿದೆ. ಈಗ ಶ್ರೀಮಾನ್ ಹುಲ್ಕೋಟಿಯವರ 50 ಎಕರೆ ಇದ್ದರೆ ಅದನ್ನೆಲ್ಲಾ ಕೂಡಿ ಒಂದು ಬ್ಲಾಕ್ ಮಾಡಿದೆ. ಹಾಗೆ ಮಾಡುವುದಕ್ಕೆ ಮುಂಚೆ ಇಡೀ ಊರಿನಲ್ಲಿರುವುದನ್ನೆಲ್ಲಾ ಸರ್ವೆಮಾಡುವುದು ಅನಾವಶ್ಯಕ. ಮೊದಲೇ ಸರ್ವೆ ಆಗಿರುವಾಗ ಪುನಃ ಮಾಡಿದರೆ ತೊಂದರೆಯಾಗುವುದು. ನಮ್ಮ ಗ್ರಾಮದಲ್ಲಿ 400 ಸರ್ವೆ ನಂಬರುಗಳಿವೆ, ಅವನ್ನು ಪುನಃ ಸರ್ವೆಮಾಡಿ 292 ಆಗಿ ಹೆಚ್ಚುಕಡಮೆ ಆದುವು. ಒಬ್ಬೊಬ್ಬರಿಗೆ ಜಮೀನು 4 ಎಕರೆಯವರೆಗೆ ಕಡಮೆಯಾಗಿದೆ, ಎಷ್ಟೋ ಜಮೀನು 16 ಎಕರೆ ಇದ್ದುದು

(ಶ್ರೀ ಎಂ. ಆರ್. ಪಾಟೀಲ್)

12 ಎಕರೆಯಾಗಿದೆ, 16 ಎಕರೆ ಇದ್ದುದು 20 ಎಕರೆ ಆಗಿದೆ, ಸರ್ವೇಯರು ಈ ರೀತಿ ಮಾಡಿದ್ದಾರೆ. ಇದರಿಂದ ಅಣ್ಣತಮ್ಮಂದಿರಿಗೆ ವ್ಯಾಜ್ಯ ಬರುತ್ತದೆ. ಪುನಃ ಸರ್ವೆ ಮಾಡುವಂಥಾದ್ದು ಅನಾವಶ್ಯಕ. ಈ ಯೋಜನೆ ಏನಿದೆ ಇದನ್ನು ಒಬ್ಬ ಸೆಕ್ರೆಟರಿ ಅಥವಾ ಕಮಿಷನರ ಕೈಯಲ್ಲಿ ಕೊಟ್ಟಿದ್ದೇ ಆದರೆ ಜನಗಳಿಗೆ ಬಹಳ ಅನ್ಯಾಯವಾಗುತ್ತದೆ. ನಮ್ಮ ಊರಿನಲ್ಲಿ 400 ಸರ್ವೆ ನಂಬರುಗಳಿರುವ ಕಡೆ 292 ಜನ ಅಣ್ಣ ತಮ್ಮಂದಿರಿಗೆ ಹಿಸ್ಸೆ ಇದೆ. ರೀಸರ್ವೆ ಮಾಡಿದ್ದರಿಂದ 16 ಎಕರೆ ಇದ್ದವನಿಗೆ 12 ಎಕರೆ ಆಯಿತು. ಆದ್ದರಿಂದ ಇದನ್ನು ತೆಗೆದುಹಾಕುವುದು ಮೊದಲನೆಯದು.

ಎರಡನೆಯದು ಕನ್ಸಾಲಿಡೇಷನ್ ಆಫೀಸರು ಕಾಗದದ ಮೇಲೆ ಎಲ್ಲ ಮಾಡಿರುತ್ತಾನೆ. ಕ್ಲಾಜ್ 29ರಲ್ಲಿ ಹೀಗೆ ಹೇಳಿದ್ದಾರೆ :

> "When a Consolidation Officer proceeds to prepare a scheme under section 16, during the continuance of the consolidation proceedings..........................
>
> (*b*) no person shall transfer any land in respect of which a notification under section 15 has been issued."

ಒಂದು ಸ್ಕೀಂ ಮಾಡುತ್ತೇವೆಂದು ನೋಟಿಫಿಕೇಷನ್ ಮಾಡಿದರೆ ನಾಲ್ಕು ತಿಂಗಳಲ್ಲಿ ಅದು ಮುಗಿಯಬೇಕು. ನಮ್ಮಲ್ಲಿ 1954ನೆ ಇಸವಿಯಲ್ಲಿ ಷುರು ಆದಂಥ ಕನ್ಸಾಲಿಡೇಷನ್ ಸ್ಕೀಂ 1965ನೆ ಇಸವಿ ಆದರೂ ಸಹಿತ ಪೂರ್ತಿಯಾಗಿಲ್ಲ, ರಿಕಾರ್ಡ್ ಆಫ್ ರೈಟ್ಸ್ ಆಗಿಲ್ಲ. ಹೀಗೆ 10 ವರ್ಷವಾದರೂ ಜಮೀನನ್ನು ವಂತಿಗೆಗೆ ಕೊಡುವುದಕ್ಕೆ ಬರುವುದಿಲ್ಲ, ಮಾರಾಟ ಮಾಡುವುದಕ್ಕೆ ಬರುವುದಿಲ್ಲ, ದಾನ ಕೊಡುವುದಕ್ಕೆ ಬರುವುದಿಲ್ಲ, ಎಂದು ಹೇಳಿದರೆ ಅದರ ಕಷ್ಟ ಏನು ಎನ್ನುವುದನ್ನು ಯೋಚನೆ ಮಾಡಬೇಕು. ಬೆಂಗಳೂರು ನಗರದಲ್ಲಿ ಹತ್ತು ವರ್ಷಗಳವರೆಗೂ ಯಾವ ಮನೆಯನ್ನೂ ಬಾಡಿಗೆಗೆ ಕೊಡುವುದಕ್ಕೆ ಬರುವುದಿಲ್ಲ, ಮಾರಾಟ ಮಾಡುವುದಕ್ಕೆ ಬರುವುದಿಲ್ಲ, ಹಂಚಿಕೆ ಮಾಡುವುದಕ್ಕೆ ಬರುವುದಿಲ್ಲ ಎನ್ನುವ ಕಾಯಿದೆಯನ್ನು ಮಾಡಿದರೆ ಇಲ್ಲಿ ಬೆಂಗಳೂರು ಪಟ್ಟಣದವರಿಗೆ ಎಷ್ಟು ಕಷ್ಟವಾದೀತು ಎಂದು ಯೋಚನೆ ಮಾಡಿದರೆ ಹಳ್ಳಿಗಳಲ್ಲಿರುವ ರೈತರಿಗೂ ಈ ಕಾಯಿದೆಯಿಂದ ಅಷ್ಟೇ ತೊಂದರೆಯಾಗುತ್ತದೆ ಎನ್ನುವುದನ್ನು ದೇಶದಲ್ಲಿರುವವರು ತಿಳಿದುಕೊಳ್ಳಬೇಕು. ಬೊಂಬಾಯಿನಲ್ಲಿದ್ದ ಮತ್ತು ಹೈದರಾಬಾದಿನಲ್ಲಿದ್ದ ಕಾಯಿದೆಯನ್ನು ಇದರಲ್ಲಿ ಅಳವಡಿಸಿದ್ದಾರೆ. ಭಾರತದ ಇತರ ದೇಶದೊಳಗೆ ಇರುವ ಕನ್ಸಾಲಿಡೇಷನ್ ಆಕ್ಟ್‌ಗಳನ್ನು ನಾನು ಓದಿದ್ದೇನೆ. ರೈತನಿಗೆ ಹಿಂಸೆ ಕೊಡುವ ಕಲಮು ಬೇರೆ ಯಾವ ಕಾಯಿದೆಯಲ್ಲಿಯೂ ಇಲ್ಲ. 10 ವರ್ಷದವರೆಗೆ ಮಾರಾಟ ಮಾಡುವುದಕ್ಕೆ ಬರುವುದಿಲ್ಲ ; ಎಂದರೆ ಮಕ್ಕಳ ಲಗ್ನ ಮಾಡಬೇಕಾಗುತ್ತದೆ, ತಂದೆ ತಾಯಿಗಳು ತೀರಿಕೊಂಡು ಆ ಬಗ್ಗೆ ಹಣ ಬೇಕಾಗಿರುತ್ತದೆ, ಹೀಗೆ ಏನಾದರೂ ತೊಂದರೆ ಬಂದಾಗ ಜಮೀನನ್ನು ಅಡಮಾನ ಮಾಡುವುದಕ್ಕಾಗುವುದಿಲ್ಲ, ಮಾರಾಟ ಮಾಡುವುದಕ್ಕಾಗುವುದಿಲ್ಲ ಎನ್ನುವಂಥ ನಿರ್ಬಂಧಗಳನ್ನು ಹಾಕಿದರೆ ಭೂಮಿಯನ್ನೇ ನಂಬಿಕೊಂಡಿದ್ದು ಬೇರೆ ಆಧಾರ ಇಲ್ಲದೆ ಇರುವವರಿಗೆ ಬಹಳ ಹಿಂಸೆಯಾಗುತ್ತದೆ ಎನ್ನುವ ಕಲ್ಪನೆಯನ್ನು ಮಾಡಿಕೊಳ್ಳಬೇಕು. ಇದಲ್ಲದೆ ಈ ವಿಷಯಗಳೆಲ್ಲ ರೈತರಿಗೆ ಎಲ್ಲಿ ತಿಳಿದಿರುತ್ತದೆ ! ನಮ್ಮಲ್ಲಿ ಜಮೀನುಗಳನ್ನು ಮಾರಿದ್ದಾರೆ, ಒತ್ತೆ ಹಾಕಿದ್ದಾರೆ. ಹೀಗೆ ಸಾವಿರಾರು ಭೂಮಿಗಳು ಹಸ್ತಾಂತರ ಆಗಿರುತ್ತವೆ. ಹೀಗೆ ಏನಾದರೂ ಆಗಿದ್ದರೆ, ಈ ಕಾಯಿದೆಗೆ ವಿರೋಧವಾಗಿ ಏನಾದರೂ ಆಗಿದ್ದರೆ ಅದು ರದ್ದಾದಂತೆ ಎಂದು ತಿಳಿಸಲಾಗಿದೆ. ಭೂಮಿಯನ್ನು ಮಾರಿದಂಥ ಮನುಷ್ಯ ಒಂದು ವೇಳೆ ದುಷ್ಟ ಮನುಷ್ಯನಿದ್ದರೆ ಕೋರ್ಟಿನಲ್ಲಿ ಒಂದು ದಾವೆ ಹಾಕಿದರೆ ಆ ಜಮೀನು ಮರಳಿ ಬರುತ್ತದೆ. ಇಂತಹ ಸಾವಿರಾರು ಪ್ರಕರಣಗಳು ಆಗಿರುವುದರಿಂದ ಈ ಕ್ಲಾಜಿನಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಬೇಕಾಗುತ್ತದೆ.

ಕನ್ಸಾಲಿಡೇಷನ್ ಆಫೀಸರು ಅವರು ಮಾಡುವ ಸ್ಕೀಮಿಗೆ ಅಫೆಕ್ಟ್ ಆಗುವಂತೆ ಇದ್ದರೆ ಮಾತ್ರ ಪರಭಾರೆ ಮಾಡುವುದನ್ನು ನಿಷೇಧಿಸಬಹುದು. ಇಲ್ಲದೆ ಇದ್ದರೆ ಯಾವ ರೀತಿ ಮಾಡಬಹುದು ಎನ್ನುವುದು ಆಕ್ಟ್‌ನಲ್ಲಿಲ್ಲ. ಬೊಂಬಾಯಿ ಆಕ್ಟ್‌ನಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಏಳೆಂಟು ಸಲ ತಿದ್ದುಪಡಿಯನ್ನು ಮಾಡಿದ್ದಾರೆ. ನಿಯಮಗಳಲ್ಲಿ ಸಹಿತ 10—12ನೇ ತಿದ್ದುಪಡಿ ಮಾಡಿದ್ದಾರೆ. ಇದರಿಂದ ರೈತರಿಗೆ ಹಿಂಸೆಯಾಗುತ್ತದೆ. ಈ ಕಾಯಿದೆಯನ್ನು ನಾವೆಲ್ಲರೂ ಒಟ್ಟಾಗಿ ಕುಳಿತು ನೋಡಿ ರೈತರಿಗೆ ಹಿಂಸೆ ಕೊಡತಕ್ಕ ಕಲಮುಗಳು ಈ ಕಾಯಿದೆಯಲ್ಲಿ ಯಾವುವಿದೆ ಅವನ್ನು ನಿಶ್ಚಿತವಾಗಿ ತೆಗೆದು ಹಾಕತಕ್ಕದ್ದು ಯೋಗ್ಯ.

ಇದರಲ್ಲಿ ರೈತರಿಗೆ ಹಿಂಸೆ ಕೊಡತಕ್ಕ ಕಲಮುಗಳನ್ನು ತೆಗೆದು ಹಾಕಬೇಕು ಅಥವಾ ದುರಸ್ತು ಮಾಡಬೇಕೆಂದು ಸೂಚಿಸುತ್ತೇನೆ.

ಇನ್ನು 34ನೆ ಕಲಮನ್ನು ತಮ್ಮ ಮುಂದೆ ಓದುವುದಕ್ಕೆ ಪ್ರಯತ್ನ ಮಾಡುತ್ತೇನೆ.

"Notwithstanding anything contained in any law for the time being in force, no holding allotted under this Act, nor any part thereof shall be.........

(*a*) except in accordance with such conditions as may be prescribed :

(*b*) sub-divided......with the permission in writing of the State Government."

ಇದರೊಳಗೆ ಏನು ಹೇಳುತ್ತಾರೆಂದರೆ, ಆ ಸ್ಕೀಂ ಪೂರ್ತಿಯಾಗಿ ರಿಕಾರ್ಡ್ ಆಫ್ ರೈಟ್ಸ್‌ನಲ್ಲಿ ಎಂಟ್ರಿಯಾದ ಮೇಲೆ ಯಾವುದಾದರೂ ಒಂದು ಜಮೀನನ್ನು ಮಾರಬೇಕು ಎಂದರೆ, ಒಂದು ಫೋಡ್ ನಂಬರನ್ನು ಹೋಲ್ಡಿಂಗ್ ನಂಬರನ್ನು ಮಾರಬೇಕಾದರೆ ಅಥವಾ ಯಾವುದೇ ಕ್ರಮ ತೆಗೆದು ಕೊಳ್ಳಬೇಕಾದರೆ ಮುಂದೆ ಈ ಕಾಯಿದೆಯನ್ನು ಅನುಸರಿಸಿ ಮಾಡಬಹುದಾದಂಥ ಕೆಲವು ನಿಯಮ ಗಳಿಗೆ ಒಳಪಟ್ಟು ಮಾರಬಹುದು ಎಂದು ಹೇಳಿದ್ದಾರೆ. ಬೊಂಬಾಯಿ ಸರ್ಕಾರದವರು ಮೊದಲ ಸಲ ಮಾಡಿದ ನಿಯಮವನ್ನು ಅನೇಕ ಸಲ ಬದಲಾಯಿಸಿದರು. ಅವರು ಮಾಡಿದ ನಿಯಮ ಹೀಗೆ ಇದೆ. All applications shall be submitted to the Collector and the transfer of holdings may be permitted on the price fixed by the Collector, secondly to the holder of an adjoining area, and thirdly to such *bona fide* holders of land who have insufficient lands.

ಟೆನೆನ್ಸಿ ಕಾಯಿದೆಯೊಳಗೆ ಇಂಥದಿಲ್ಲ. ಟೆನೆನ್ಸಿ ಕಾಯಿದೆಯ ನಿಯಮಗಳ ಪ್ರಕಾರ ಗೇಣಿ ದಾರರಿಗೆ ಕೊಟ್ಟಂಥ ಜಮೀನನ್ನು ಗೇಣಿದಾರರಿಗೆ ಮಾರಬೇಕು ಅಥವಾ ಹತ್ತಿರವಿದ್ದವನಿಗೆ ಮಾರ ಬೇಕು ಎಂದು ಇರುವಂಥ ಯಾವುದಾದರೂ ಒಂದು ನಿಯಮವನ್ನು ಹಾಕಬಹುದು. ಆದರೆ ಸ್ವತಃ ವ್ಯವಸಾಯ ಮಾಡತಕ್ಕ ಜಮೀನ್ದಾರನಾದವನು ತನ್ನದೇ ಆದ ಜಮೀನನ್ನು ಮಾರಬೇಕಾದರೆ ಡೆಪ್ಯುಟಿ ಕಮಿಷನರಿಗೆ ಅರ್ಜಿ ಹಾಕಬೇಕು, ಮತ್ತು ಡೆಪ್ಯುಟಿ ಕಮೀಷನರು ಗೊತ್ತು ಮಾಡುವ ಕಿಮ್ಮತ್ತಿಗೆ ಇಂಥಿಂಥವರಿಗೇ ಕೊಡಬೇಕು ಎಂದು ಇದೆ. ಡೆಪ್ಯುಟಿ ಕಮಿಷನರು ಎಂದರೆ ಅವರೇ ಸ್ವತಃ ಎಲ್ಲವನ್ನೂ ನೋಡುವುದಿಲ್ಲ. ಶ್ಯಾನುಭೋಗರಿಂದ ಪ್ರಾರಂಭವಾಗುತ್ತದೆ. ಶ್ಯಾನುಭೋ ಗರು ಹೇಗಿರುತ್ತಾರೆ ಎನ್ನುವ ವಿಷಯ ಎಲ್ಲರಿಗೂ ಗೊತ್ತಿರುವುದೇ ಆಗಿದೆ. ಶ್ಯಾನುಭೋಗರಿಂದ ಸರ್ಕಲ್ ಆಫೀಸರಿಗೆ ಹೋಗುತ್ತದೆ, ಅಲ್ಲಿಂದ ತಹಸೀಲ್ದಾರರಿಗೆ ಹೋಗುತ್ತದೆ, ಅವರಿಂದ ಅಸಿಸ್ಟೆಂಟ್ ಕಮೀಷನರಿಗೆ ಹೋಗಿ ಕೊನೆಗೆ ಡೆಪ್ಯುಟಿ ಕಮೀಷನರಿಗೆ ಹೋಗುತ್ತದೆ. ಅಲ್ಲಿ ಎಷ್ಟು ಮಂದಿ ಕಾರ ಕೂನರಿರುತ್ತಾರೆ ಎನ್ನುವುದೂ ಗೊತ್ತು. ಹೀಗಿರುವಾಗ ಕನಸಾಲಿಡೇಷನ್ ಸ್ಕೀಂ ಕನಫರ್ಮ್ ಆಯಿತು ಎಂದರೆ ಜಮೀನನ್ನು ಒಬ್ಬರೂ ಮಾರಾಟ ಮಾಡುವುದಕ್ಕಾಗುವುದಿಲ್ಲ.

ಈ ಒಂದು ಕಾಯಿದೆಯನ್ನು ತಂದಿರುವುದರಿಂದ ಯಾರಾದರೂ ಒಬ್ಬರು ತಮ್ಮ ಜಮೀನನ್ನು ಇನ್ನೊಬ್ಬರಿಗೆ ಮಾರಾಟ ಮಾಡಿಕೊಳ್ಳಲು ಒಂದು ಸಾವಿರ ರೂಪಾಯಿಗಳನ್ನು ಖರ್ಚು ಮಾಡದಿದ್ದರೆ ಸರ್ಕಾರದಿಂದ ಪರ್ಮಿಷನ್ ಸಿಕ್ಕುವುದಿಲ್ಲ. ಯಾರಾದರೂ ಅಣ್ಣತಮ್ಮಂದಿರು 4-5 ಜನ ಭಾಗ ಮಾಡಿಕೊಳ್ಳಬೇಕಾದರೆ ಸರ್ಕಾರದವರ ಪರ್ಮಿಷನ್ ತೆಗೆದುಕೊಳ್ಳಬೇಕು. ಶ್ಯಾನುಭೋಗರಿಂದ ಹಿಡಿದು ತಹಶೀಲ್ದಾರರು, ಅಸಿಸ್ಟೆಂಟ್. ಕಮೀಷನರು, ಡೆಪ್ಯುಟಿ ಕಮೀಷನರು, ಡಿವಿಜನಲ್ ಕಮೀ ಷನರು ಆಮೇಲೆ ಸೆಟ್ಲ್‌ಮೆಂಟ್ ಕಮೀಷನರ್ ಈ ಸರ್ಕಾರದ ಏಜೆನ್ಸಿಗಳ ಮುಖಾಂತರ ಅರ್ಜಿಗಳು ಬರಬೇಕು. ಅರ್ಜಿಗಳನ್ನು ಕೊಟ್ಟಮೇಲೆ ಅವುಗಳನ್ನು ಫಾಲೋ ಅಪ್ ಮಾಡದಿದ್ದರೆ 3-4 ವರ್ಷ ಗಳಾದರೂ ಪರ್ಮಿಷನ್ ಸಿಕ್ಕುವುದಿಲ್ಲ. ಆ ಅರ್ಜಿಗಳನ್ನು ಫಾಲೋ ಅಪ್ ಮಾಡಿದರೆ 15 ದಿವಸಗಳಲ್ಲಿ ಪರ್ಮಿಷನ್ ಸಿಕ್ಕುತ್ತದೆ, ಈ ಒಂದು ಕಠೋರವಾದ ಕಾನೂನನ್ನು ಮಾಡಿದಮೇಲೆ. ಬೊಂಬಾಯಿನಲ್ಲಿ ಈ ಕಾನೂನಿಗೆ ಕೆಲವು ತಿದ್ದುಪಡಿಗಳನ್ನು ಮಾಡಿಕೊಂಡು ಬಂದರು. ಬೊಂಬಾಯಿ ಕರ್ನಾಟಕದ ವರಾದ ನಾವು 1956ನೇ ಇಸವಿಯಲ್ಲಿ ಈ ರಾಜ್ಯದಲ್ಲಿ ಕೂಡಿಕೊಂಡೆವು. ಆ ನಂತರ ನಾನು ಈ ಮಸೂದೆಗೆ ಸಂಬಂಧಪಟ್ಟ ಮಂತ್ರಿಗಳ ಕಡೆಗೆ ಹೋಗಿ ನಮ್ಮ ಸಂಕಟಗಳನ್ನು ಅವರಲ್ಲಿ ನಿವೇದನೆ ಮಾಡಿಕೊಂಡಮೇಲೆ ಅವರು ಇದರಲ್ಲಿ ನಿಮಗೆ ಏನೇನು ತೊಂದರೆಗಳಿವೆ, ಎಂಬುದನ್ನು ಬರೆದು ಕಳುಹಿಸಿ ಮತ್ತು ಇದರಲ್ಲಿ ಏನೇನು ತಿದ್ದುಪಡಿಗಳನ್ನು ಮಾಡಬೇಕೆಂಬುದನ್ನು ಬರೆದು ಕೊಡಿ ಎಂದು ಹೇಳಿದರು. ಅದಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ. ನಾನು ಬರೆದು ಕೊಟ್ಟಂತೆ ಮಾನ್ಯ ಮಂತ್ರಿಗಳು ಆ ಕಾನೂನಿನಲ್ಲಿ ಕೆಲವು ಬದಲಾವಣೆಗಳನ್ನು ಮಾಡಿದರು. ಈ ಬದಲಾವಣೆಗಳನ್ನು

(ಶ್ರೀ ಎಂ. ಆರ್. ಪಾಟೀಲ್)

ಮಾಡಿದಂತಹ ಕಾಪಿಗಳು ನಮ್ಮ ಲಕ್ಷ್ಯಕ್ಕೆ ಬಂದಿಲ್ಲವೆಂದು ತಹಶೀಲ್ದಾರರು ಮತ್ತು ಅಸಿಸ್ಟೆಂಟ್ ಕಮೀಷನರು ಹೇಳುತ್ತಿದ್ದಾರೆ. ಕೆಲವು ನೌಕರ ವರ್ಗದವರು ತಲಾಟಿಗಳು ಕೂಡ ಆ ಕಾನೂನಿಗೆ ಸಂಬಂಧಪಟ್ಟಂತಹ ತಿದ್ದುಪಡಿಗಳ ಕಾಪಿಗಳಾವುವೂ ನಮ್ಮ ಕಡೆಗೆ ಬಂದಿಲ್ಲ ಎಂದು ಹೇಳುತ್ತಿದ್ದಾರೆ. ನಾನು ಸುಮಾರು 8-10 ಕನ್‌ಸಾಲಿಡೇಷನ್ ಆಕ್ಟ್‌ಗಳನ್ನು ಓದಿದ್ದೇನೆ. ಹಿಂದೆ ಇದ್ದಂತಹ ಸೆಟಲ್‌ಮೆಂಟ್ ಕಮೀಷನರು ನನಗೆ ಬಹಳ ಉಪಕಾರ ಮಾಡಿದ್ದಾರೆ. ಯಾವು ಯಾವುದೋ ಪುಸ್ತಕಗಳನ್ನು ಕೊಟ್ಟರು. ಅನೇಕ ಆಫೀಸರುಗಳನ್ನು ಕರೆಸಿ ನನ್ನ ಜೊತೆಯಲ್ಲಿ ಚರ್ಚೆ ಮಾಡಿಸಿದರು. ನಾನು ಹೇಳಿದಂತಹ ಪ್ರತಿಯೊಂದು ಮಾತನ್ನೂ ಒಪ್ಪಿಕೊಂಡು ಇದರಿಂದ ರೈತರಿಗೆ ಕಷ್ಟವಿದೆ ಎನ್ನುವುದನ್ನೂ ಸಹ ಅವರು ಒಪ್ಪಿಕೊಂಡರು. ಅದರಲ್ಲಿ ಮಾಡಬೇಕಾದ ತಿದ್ದುಪಡಿಗಳನ್ನು ಕಳುಹಿಸಿ ನೋಡೋಣ ಎಂದು ಹೇಳಿದರು. ಈ ಕಾಯಿದೆಯೊಳಗೆ ಮಾಡಿರುವಂತಹ ನಿಯಮಗಳಿಂದ ರೈತರಿಗೆ ಪ್ರತಿಯೊಬ್ಬರಿಗೂ ತೊಂದರೆಯಾಗುತ್ತದೆ. ಇದನ್ನು ನೋಡಿದರೆ ಈಗ ಇರತಕ್ಕ ಭೂಮಿಯನ್ನೆಲ್ಲಾ ಮಾರಿ ಪಟ್ಟಣವನ್ನು ಸೇರತಕ್ಕದ್ದು ಒಳ್ಳೆಯದು ಎನ್ನುವ ಕಲ್ಪನೆ ರೈತರಿಗೆ ಬರುತ್ತದೆ. ಈ ಮಸೂದೆಯಲ್ಲಿರತಕ್ಕ ತೊಂದರೆಗಳನ್ನೆಲ್ಲಾ ಮಾನ್ಯ ಮಂತ್ರಿಗಳು ಗಮನಿಸಿ ಮನಗಂಡು ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕೆಂದಿದ್ದಾರೆ. ಅದರ ಸಲುವಾಗಿ ಮಾನ್ಯ ಮಂತ್ರಿಗಳನ್ನು ಅಭಿನಂದಿಸಬೇಕಾಗಿದೆ.

ಇನ್ನು 24ನೇ ಕಲಮ'ನ್ನು ದುರಸ್ತಿ ಮಾಡುವಾಗ ಅದಕ್ಕೆ ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಕೊಟ್ಟು ಇದುವರೆಗೂ ನಡೆದಿರುವಂತಹ ವ್ಯವಹಾರಗಳನ್ನು ವ್ಯಾಲಿಡ್ ಮಾಡುವಂತೆ ಮಾಡಿ ಈ ಕಾಯಿದೆಯನ್ನು ಪಾಸ್ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಕಲಮು 34ರಲ್ಲಿ 'Alienation of and Sub-Division of consolidated holdings! ಎಂದು ಹೇಳಿದ್ದಾರೆ. ಕನ್‌ಸಾಲಿಡೇಟೆಡ್ ಹೋಲ್ಡಿಂಗ್ಸ್ ಎಂದರೆ ಎರಡು ಜಮೀನುಗಳನ್ನು ಕೂಡಿಸಿ ಒಂದು ಮಾಡಿದರೆ ಅದಕ್ಕೆ ಕನ್‌ಸಾಲಿಡೇಟೆಡ್ ಹೋಲ್ಡಿಂಗ್ ಎಂದು ಅರ್ಥವಾಗುತ್ತದೆ. ಲ್ಯಾಂಡ್ ಅಲಾಟೆಡ್ ಎಂದರೆ ಒಂದು ಜಮೀನನ್ನು ಮತ್ತೊಬ್ಬರ ವಶಕ್ಕೆ ಕೊಡಿಸಿದರೆ ಅದನ್ನು ಲ್ಯಾಂಡ್ ಅಲಾಟೆಡ್ ಎಂದು ತಿಳಿಯತಕ್ಕದ್ದು. ಈ ಮಸೂದೆಯಲ್ಲಿ ಅನೇಕ ಲೋಪದೋಷಗಳಿವೆ. ಅವುಗಳೆಲ್ಲವನ್ನೂ ದುರಸ್ತಿ ಮಾಡುವುದು ಒಳ್ಳೆಯದು. ಆದ್ದರಿಂದ ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಇದನ್ನು ಅಲ್ಲಿ ಕೂಲಂಕಷವಾಗಿ ಪರಿಶೀಲನೆ ಮಾಡಿ ಪುನಃ ಇದನ್ನು ಈ ಸಭೆಯ ಮುಂದೆ ತರುವುದು ಒಳ್ಳೆಯದೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಇಟ್ಟಿರತಕ್ಕ ಮಸೂದೆಯೇನಿದೆ ಇದರ ಉದ್ದೇಶ ಬಹಳ ಸಾಧುವಾಗಿದೆ. ಆದರೆ ಈ ಮಸೂದೆಯಲ್ಲಿ ಹೇಳಿರತಕ್ಕಂಥ ವಿಚಾರಗಳನ್ನು ನಾವು ಬಹಳವಾಗಿ ಗಹನ ಯೋಚನೆಮಾಡಬೇಕಾಗಿದೆ. ಈ ಮಸೂದೆ ಸೆಲೆಕ್ಟ್ ಕಮಿಟಿಗೆ ಹೋಗುತ್ತದೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಾ ಇರುವುದರಿಂದ ಪ್ರಾಸಂಗಿಕವಾಗಿ ಈ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕೆಂದು ನಾನು ಇಷ್ಟಪಡುತ್ತೇನೆ. ಸಣ್ಣ ಸಣ್ಣ ಹಿಡುವಳಿಗಳಿಂದ ಇವೊತ್ತು ನಮ್ಮಲ್ಲಿ ಆಗುತ್ತಿರತಕ್ಕಂಥ ಅನರ್ಥವನ್ನು ಮಾನ್ಯ ಮಂತ್ರಿಗಳು ಈ ಮಸೂದೆಯನ್ನು ಈ ಸಭೆಯ ಮುಂದೆ ಮಂಡಿಸುವಾಗ ಬಹಳ ಚೆನ್ನಾಗಿ ಹೇಳಿದರು. ರೈತರ ಮತ್ತು ನಮ್ಮ ಒಂದು ಅನುಭವದಲ್ಲಿ ನೋಡಿರುವಹಾಗೆ ಒಂದು ಊರಿನಲ್ಲಿರತಕ್ಕ ಎಲ್ಲಾ ಸರ್ವೆ ನಂಬರುಗಳಲ್ಲಿಯೂ ತಂದೆಯ ಆಸ್ತಿಯನ್ನು ನಾಲ್ಕಾರು ಮಕ್ಕಳು ಹಂಚಿಕೊಂಡು ಸಂಸಾರವನ್ನು ನಡೆಸತಕ್ಕಂಥ ಒಂದು ಪದ್ಧತಿಯು ನಮ್ಮ ದೇಶದ ಎಲ್ಲಾ ಹಳ್ಳಿಗಳಲ್ಲಿಯೂ ಬಂದಿದೆ. ಹೀಗಿರುವುದರಿಂದ ರೈತರು ಸಣ್ಣಸಣ್ಣ ಹುಲ್ಲು ಹಿತ್ತಲುಗಳನ್ನು ಕಟ್ಟಿಕೊಳ್ಳುವುದಕ್ಕೆ ಕೂಡ ಕಷ್ಟವಾಗುತ್ತಿದೆ. ಈಗ ಕೆಲವು ಹಳ್ಳಿಗಳಲ್ಲಿ ಕೆಲವು ಪುಂಡರು ಇರುತ್ತಾರೆ. ಅವರು ಜಮೀನು ಹೊಡೆಯಬೇಕೆಂದು ಅಲ್ಲಿ ಖಾಲಿ ಇರತಕ್ಕ ಜಮೀನುಗಳಿಗೆ ಬೇಲಿಯನ್ನು ಹಾಕಿಕೊಂಡು ಅವುಗಳನ್ನು ಪಾಳು ಬಿಟ್ಟಿರುವ ಸನ್ನಿವೇಶಗಳನ್ನು ನಾವು ಕಣ್ಣಿನಲ್ಲಿ ನೋಡುತ್ತಿದ್ದೇವೆ. ಈಗ ಹಳ್ಳಿಗಳಲ್ಲಿ ಪೂರ್ವದಲ್ಲಿ ಇದ್ದಹಾಗೆ ಒಟ್ಟು ಕುಟುಂಬಗಳು ಇಲ್ಲ. ಮಕ್ಕಳು ಮದುವೆಯಾದ ಕೂಡಲೆ ಪಾಲನ್ನು ಕೇಳುತ್ತಾರೆ. ಗಂಡ ಹೆಂಡತಿ ಒಂದು ಸಂಸಾರವನ್ನು ಹೂಡಿಕೊಂಡು ಆವರು ಬರೀ ಜಮೀನನ್ನೇ ನಂಬಿಕೊಂಡು ಜೀವನವನ್ನು ಮಾಡಬೇಕು. ನಮ್ಮ ಮಾನ್ಯ ರೆವಿನ್ಯೂ ಮಂತ್ರಿಗಳಾದ ಶ್ರೀಮಾನ್ ಕೃಷ್ಣಪ್ಪನವರು ಹೇಳುತ್ತಿದ್ದಾರೆ, ನಾನು ಎಲ್ಲರಿಗೂ ದರಕಾಸ್ತು ಜಮೀನನ್ನ ಕೊಡುತ್ತಿದ್ದೇನೆ ಎಂದು ಒಂದು ಎಕರೆ, ಎರಡು ಎಕರೆ ಜಮೀನನ್ನು ಕೊಟ್ಟರೆ ಅದರಿಂದ ರೈತರು ಹೇಗೆ ಉದ್ಧಾರ

ವಾಗುತ್ತಾರೋ ಅದು ಭಗವಂತನಿಗೆ ಅರ್ಥ ಆಗಬೇಕು. ಇದು ಮಂತ್ರಿಗಳಿಗೂ ಅರ್ಥವಾಗಿರಬಹುದು. ಇದು ನಮಗಂತೂ ಚೆನ್ನಾಗಿ ಅರ್ಥವಾಗುತ್ತಿದೆ. ನಾವು ಬರೀ ಜಮೀನನ್ನೇ ನಂಬಿಕೊಂಡು ಹತ್ತಾರು ಎಕರೆ ಜಮೀನನ್ನು ಇಟ್ಟುಕೊಂಡು ಎಷ್ಟೋ ಭಕ್ತಿ ಶ್ರದ್ಧೆಯಿಂದ ದುಡಿದರೂ ಕೂಡ ಅದರಲ್ಲಿ ಸರಿಯಾಗಿ ಬೆಳೆಯನ್ನು ಬೆಳೆಯುವುದಕ್ಕಾಗುವುದಿಲ್ಲ. ನಮ್ಮ ಸಂಸಾರಕ್ಕೆ ನಮ್ಮ ಮಕ್ಕಳಿಗೆ ಸಾಕಾಗುವಷ್ಟು ಬೆಳೆ ಅದರಲ್ಲಿ ಆಗುವುದಿಲ್ಲ. ಈಗಿನ ಒಂದು ಪ್ರಕೃತಿಯ ಸನ್ನಿವೇಶದಲ್ಲಿ ನಾವು ಜಮೀನಿನಲ್ಲಿ ಯಾವ ಬೆಳೆಯನ್ನು ಸರಿಯಾಗಿ ಬೆಳೆಯುವುದಕ್ಕಾಗುವುದಿಲ್ಲ. ನಾವು ಹೊರಗಡೆಯವರನ್ನು ಆಹಾರ ಕೇಳತಕ್ಕ ಒಂದು ಪರಿಸ್ಥಿತಿ ಬಂದಿದೆ.

Mr. DEPUTY SPEAKER.—The House will now adjourn to meet again after half an hour.

The House adjourned for Recess at three of the Clock and reassembled at Thirty Minutes past Three of the Clock.

[MR. DEPUTY SPEAKER in the Chair]

ಶ್ರೀ ಟಿ. ಎನ್. ಪಾದಪ್ಪಗೌಡ—ಸ್ವಾಮಿ, ನಾನು ಹಿಂದೆ ಹೇಳಿದಹಾಗೆ ನಮ್ಮಲ್ಲಿ ಸಣ್ಣ ಸಣ್ಣ ಹಿಡುವಳಿದಾರರು ಹಿಂದಿನಿಂದ ಬಂದಂಥ ಒಂದು ಪದ್ಧತಿಯನ್ನು ಅನುಸರಿಸಿಕೊಂಡು ಬಂದು ಅದರಿಂದ ನಮ್ಮ ವ್ಯವಸಾಯಗಾರರೂ ಕೂಡ ಬಹಳ ತೊಂದರೆಪಡುತ್ತಿದ್ದಾರೆ. ಈ ಮಸೂದೆಯ ಉದ್ದೇಶ ಸಾಧುವಾಗಿದ್ದರೂ ಕೂಡ ಇವತ್ತು ಒಂದು ಹಿಡುವಳಿ ಎಂದರೆ, ಅದರ ಮಿತಿ ಎಷ್ಟಿರಬೇಕು ಎನ್ನುವ ವಿಚಾರದಲ್ಲಿ ಈ ಕಾನೂನಿನಲ್ಲಿ ಯಾವುದೇ ಒಂದು ಅಂಕಿ ಇಲ್ಲ. ಆದ್ದರಿಂದ ರೈತನಾದವನು ಜಮೀನಿನಿಂದಲೇ ಬದುಕಬೇಕಾದರೆ ಕನಿಷ್ಟಪಕ್ಷ 10 ಎಕರೆಯಾದರೂ ಉತ್ಕೃಷ್ಟವಾದ ಭೂಮಿ ಒಬ್ಬ ಹಿಡುವಳಿದಾರನಿಗೆ ಇರಬೇಕಾಗುತ್ತದೆ. ಈ ರೀತಿ ಮಿತಿ ಇಟ್ಟುಕೊಂಡರೆ ಬಹಳ ಒಳ್ಳೆಯದು. ಇಲ್ಲದಿದ್ದರೆ ಜನಗಳಿಗೆ ಒಳ್ಳೆಯ ಭೂಮಿ ಸಿಗದೆ ಹೋಗುತ್ತದೆ. ಇವತ್ತು ಇಂಗ್ಲೆಂಡ್ ದೇಶದಲ್ಲಿ ಒಂದು ಕಾಯಿದೆ ಇದೆ. ಆ ಕಾಯಿದೆಯ ಪ್ರಕಾರ ಈ ಹೋಲ್ಡಿಂಗ್ಸನ್ನು ಸಿಕ್ಕಾಪಟ್ಟೆ ಹಂಚದೆ, ಮಾರದೇಯಿರುವುದರಿಂದ ಉಂಡುಂಡೆಯಾಗಿ ಭೂಮಿ ಮನೆಯ ಹಿರಿಯಮಗನಿಗೆ ಮಾತ್ರ ಸಿಗುತ್ತದೆ. ಆದರೆ ಅಲ್ಲಿ ಬೇರೆ ಬೇರೆಯವರು ಬೇರೆಬೇರೆ ಕಸಬುಗಳನ್ನು ಮಾಡುತ್ತಾರೆ. ಅಲ್ಲಿ ಅವರಿಗೆ ವಿದ್ಯಾಭ್ಯಾಸ ಮುಂತಾದ ಎಲ್ಲಾ ಸೌಕರ್ಯಗಳನ್ನೂ ಕೊಡುತ್ತಾರೆ. ಆದ್ದರಿಂದ ಅಲ್ಲಿನವರು ಜೀವನವನ್ನು ಹೊರೆಯುವುದಕ್ಕೆ ಸಮರ್ಥರಾಗಿರುತ್ತಾರೆ. ಕೆಲವರು ಜಮೀನಿನಿಂದ ತಮ್ಮ ಹೊಟ್ಟೆ ಹೊರೆದುಕೊಳ್ಳುತ್ತಾರೆ. ಇವತ್ತಿನ ದಿವಸ ನಮ್ಮ ದೇಶದ ಪರಿಸ್ಥಿತಿಯಲ್ಲಿ ಈಗಿರತಕ್ಕ ನಿರುದ್ಯೋಗಿಗಳಿಗೆ ಯಾವ ಒಂದು ಅವಕಾಶವನ್ನು ಸಹ ಕಲ್ಪನೆಮಾಡಿಕೊಟ್ಟಂತೆ ಕಾಣಲಿಲ್ಲ. ಬಹಳ ಜನ ನಿರುದ್ಯೋಗಿಗಳಾಗಿದ್ದಾರೆ. ಇವರಿಗೆಲ್ಲರಿಗೂ ಕೆಲಸ ಸಿಗುತ್ತದೆನ್ನುವ ಭರವಸೆ ಇವತ್ತು ನಮಗಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಈ ಕಾನೂನನ್ನು ನಾವು ಜಾರಿಗೆ ತರುವುದಾದರೆ ಬಹಳ ಅಲ್ಲೋಲಕಲ್ಲೋಲವಾಗುತ್ತದೆ. ಇವತ್ತು ಸಮಾಜವಾದೀ ಸಮಾಜ ರಚನೆ ಮಾಡಬೇಕೆಂದೇನೋ ಹೇಳುತ್ತಾರೆ. ಎಲ್ಲರಿಗೂ ಭೂಮಿ ಕೊಡುತ್ತೇವೆ, ಭೂಮಿಯಿಂದಲೇ ಅನೇಕರು ಜೀವನ ಮಾಡುತ್ತಿದ್ದಾರೆಂದು ಹೇಳುವ ವಾದ ನಮ್ಮಲ್ಲಿ ಬಂದಿದೆ. ಶ್ರೀಮಾನ್ ಕೃಷ್ಣಪ್ಪನವರು ಹೇಳಿದರು, ನಮ್ಮ ದೇಶದಲ್ಲಿರತಕ್ಕ ಭೂಮಿಯನ್ನೆಲ್ಲಾ ಹಂಚಿದರೆ ಪ್ರತಿಯೊಬ್ಬನಿಗೂ ಸುಮಾರು ಮುಕ್ಕಾಲು ಎಕರೆ ಜಮೀನು ಕೂಡ ಬರುವುದಿಲ್ಲವೆಂದು. ಮುಕ್ಕಾಲು ಎಕರೆ ಭೂಮಿಯನ್ನು ತೆಗೆದುಕೊಂಡವನು ಹೇಗೆ ಜೀವನ ಮಾಡಬೇಕು ಎನ್ನುವುದನ್ನು ಸರ್ಕಾರ ವಿಚಾರಮಾಡಬೇಕಾದ ಸಂಗತಿ. ಈ ಕಾನೂನನ್ನು ಜಾರಿಗೆ ತರುವುದಕ್ಕೆ ಮೊದಲೇ ದೇಶದಲ್ಲಿ ಇವತ್ತು ನಾನಾರೀತಿಯ ಉದ್ಯೋಗಗಳನ್ನು ಕಲ್ಪನೆಮಾಡಬೇಕು. ಆ ರೀತಿ ಕಲ್ಪನೆಮಾಡಿಕೊಂಡು ಜನಗಳಿಗೆ ಕೆಲಸಕೊಟ್ಟು ನಮ್ಮ ದೇಶಕ್ಕೆ ಬೇಕಾದಂಥ ಎಲ್ಲಾ ಸಾಮಾನುಗಳನ್ನೂ ತಯಾರುಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಅದಕ್ಕಾಗಿ ಬೇಕಾದಷ್ಟು ಜನರೂ ಸಹಾಯಮಾಡಬೇಕು. ಬೇರೆ ಕೆಲಸವೇನಾದರೂ ಕೊಡುತ್ತಾರೆಂಬ ನಂಬಿಕೆ ನಮ್ಮ ಜನಗಳಿಗೆ ಬಂದನಂತರ ಈ ಕಾನೂನನ್ನು ಜಾರಿಗೆ ತರತಕ್ಕದ್ದು ಸೂಕ್ತವೆಂದು ನನಗನ್ನಿಸುತ್ತದೆ. ಈ ಕಾನೂನು ಪ್ರಕಾರ ಸರ್ಕಾರ ಮೊದಲೇ ಒಂದು ನೋಟಿಫಿಕೇಷನ್ ಹೊರಡಿಸಿ ಕೆಲವು ಪ್ರದೇಶಗಳಲ್ಲಿ ಸಂಬಂಧಪಟ್ಟ ಆಫೀಸರುಗಳೇ ಹೋಗಿ ಕಾನೂನು ಪರಿಚಯವನ್ನು ರೈತಾಪಿ ಜನಗಳಿಗೆ ಮಾಡಿಕೊಟ್ಟು

(ಶ್ರೀ ಟಿ. ಎನ್. ಮಾದಪ್ಪಗೌಡ)

ಒಂದೇ ಕಡೆ ಭೂಮಿಯನ್ನು ಹಂಚುವ ಏರ್ಪಾಡು ಮಾಡುತ್ತಿದ್ದರು. ಇದಕ್ಕೆ ಈಗಿನ ಜನ ಬಹಳ ಬೇಗ ಒಪ್ಪಿಕೊಳ್ಳುತ್ತಾರೆಂಬುದಾಗಿ ನನಗನ್ನಿಸುತ್ತದೆ. ಕಾರಣ, ಈ ಭೂಮಿಯ ವ್ಯಾಮೋಹ ಜನಗಳಲ್ಲಿ ಬಹಳಮಟ್ಟಿಗೆ ಇರುವುದರಿಂದ, ಕೆಲವು ಕಡೆಗಳಲ್ಲಿ ಭೂಮಿಯ ಯೋಗ್ಯತೆ ಒಂದೇ ತರಹ ಇಲ್ಲದೆ ಇರುವುದರಿಂದ, ಹೆಚ್ಚು ಕಡಿಮೆಯಾಗುವುದರಿಂದ, ಕಾಂಪನ್ಸೇಷನ್ ಕೊಡಬೇಕಾಗುತ್ತದೆ. ಆದರೆ ಕಾಂಪನ್ಸೇಷನ್ ಕೊಡುವುದು ಬಹಳ ಕಷ್ಟವಾಗಿರುತ್ತದೆ. ಆ ಬಗ್ಗೆ ಇವರು ಮಾಡುವ ನಿರ್ಣಯ ಜನಗಳಿಗೆ ಒಪ್ಪಿಗೆಯಾಗದೆ ಇರಬಹುದು. ಇದರಿಂದ ಜನಗಳಲ್ಲಿ ಬಹಳ ತಪ್ಪು ಅಭಿಪ್ರಾಯವನ್ನುಂಟು ಮಾಡುತ್ತದೆಯೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕೆಂದು ಇಷ್ಟಪಡುತ್ತೇನೆ. ಈ ಬಗ್ಗೆ ಮೊದಲೇ ನೋಟಿಫಿಕೇಷನ್ ಮಾಡುವುದಕ್ಕೆ ಬದಲಾಗಿ ಇವತ್ತು ಏನು ವಾಸ್ತವವಾದ ಸ್ಥಿತಿ ಇದೆಯೋ ಅದನ್ನು ಗಮನದಲ್ಲಿಟ್ಟುಕೊಂಡು ವ್ಯವಸಾಯಾಭಿವೃದ್ಧಿಗೆ ಅನುಕೂಲವಾಗುವ ಹಾಗೆ ಈ ಒಂದು ಸರ್ಕಾರ ಮಿತಿಯನ್ನು ನಿಗದಿ ಮಾಡಿ ಒಂದೊಂದು ಪ್ರದೇಶದಲ್ಲಿರತಕ್ಕ ಜಮೀನುಗಳನ್ನು ಸರ್ವೆ ನಂಬರ್‌ಗಳಾಗಿ ವಿಂಗಡಿಸಿ ಹಂಚಬೇಕು. ಆದರೆ ಐದು ಎಕರೆಗಳಿಗಿಂತ ಕಡಮೆ ಇರಕೂಡದು, 10 ಎಕರೆ ಮಿನಿಮಂ ಆಗಿರಬೇಕೆಂಬ ಮಿತಿಯನ್ನು ಹಾಕಬೇಕು. ಗದ್ದೆಗಳನ್ನು ವಿಭಾಗ ಮಾಡಿಕೊಳ್ಳುವ ರೈತರಿಗೆ ಈ ರೀತಿ ನೀತಿಯ ವ್ಯವಸ್ಥೆ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ. ಏಕೆಂದರೆ, ಹೊಸದಾಗಿ ನಾವು ಈ ಕಾನೂನನ್ನು ಜಾರಿಗೆ ತರುವಾಗ ಜನಗಳ ಮನಸ್ಸನ್ನು ನಾವು ಕೆಡಿಸದೆ ಇರಬೇಕು. ಆಗ ನಾನು ಹಿಂದೆ ಹೇಳಿದ ಹಾಗೆ, ಇದು ಉತ್ಕೃಷ್ಟವಾದ ಕಾನೂನು ಆಗುತ್ತದೆ. ಆದರೆ ಇದಕ್ಕೆ ಮಿತಿ ಸರಿಯಾದ ರೀತಿಯಲ್ಲಿ ಇರಬೇಕು. ಈ ಬಗ್ಗೆ ಇತರ ತೊಂದರೆಗಳನ್ನು ಸ್ಮಾಲ್ ಹೋಲ್ಡಿಂಗ್ಸ್‌ನವರು ಹೊಂದಿರುವುದರಿಂದ, ಹೆಚ್ಚಿಗೆ ಆಹಾರ ಬೆಳೆಯಲು ತೊಂದರೆಯಾಗಿದೆ. ಈಗಿನ ಪರಿಸ್ಥಿತಿಯಲ್ಲಿ ಹೆಚ್ಚಿಗೆ ಆಹಾರವನ್ನು ಬೆಳೆಯುವುದು ಅತ್ಯಾವಶ್ಯಕ. ಅಂತಹವರಿಗೆ ತಿಳುವಳಿಕೆ ಹೇಳಿದರೆ ಜನಗಳಿಗೆ ಸರಿಯಾದ ರೀತಿಯಲ್ಲಿ ಅರ್ಥವಾಗುತ್ತದೆ. ಕಾಲಕ್ರಮದಲ್ಲಿ ಇಂತಹ ಕಾನೂನುಗಳಿಗೆ ಹೊಂದಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಅಧಿಕಾರಿಗಳಿಗೇನೋ ಬಹಳ ಪವರ್ಸನ್ನು ಕೊಟ್ಟಿದ್ದಾರೆ, ಮಾನ್ಯ ಮಂತ್ರಿಗಳು ಈ ಕಾರ್ಯಕ್ರಮ ಕೈಗೂಡುವುದರಲ್ಲಿ ಯಾವ್ಯಾವ ರೂಪದಲ್ಲಿ ತೊಂದರೆಗಳು ಬರಬಹುದು ಎಂಬುದನ್ನು ಚೆನ್ನಾಗಿ ಊಹಿಸಿ ಮಾತನಾಡಿದರು. ಇಂತಹ ಸಂದರ್ಭವಿರುವಾಗ ಜಮೀನಿನ ಮಿತಿ ಮೀರದಂತೆ, ಮಿತಿ ಕಡಿಮೆಯಾಗದಂತೆ ಇರತಕ್ಕಂಥ ಹಿಡುವಳಿಗಳನ್ನು ಗೊತ್ತುಮಾಡಿ. ಬೇಕಾದರೆ ಮೊದಲು ಸರ್ವೆ ಮಾಡಿ. ನಂಬರ್ ಸಹ ಹಾಕಿ. ಆದರೆ ನಾಳೆ ರೈತರಿಗೆ ಜಮೀನನ್ನು ಮಾರುವ ಸಂದರ್ಭ ಬಂದರೂ ಕೂಡ ಅದರಲ್ಲ ಅರ್ಧಂಬರ್ಧ ಮಾಡದೆ ಪೂರ್ತಿಯಾಗಿ ಒಂದು ಮಿತಿಯನ್ನು ನಿರ್ಧರಿಸಬೇಕು. ಅವನು ಪೂರ್ತಿ ಉಂಡುಂಡೆಯಾಗಿರತಕ್ಕ ಜಮೀನನ್ನು ಮಾರಬೇಕು. ಆದರೆ ಅದರಲ್ಲಿ ಒಂದೊಂದು ಭಾಗ ಮಾರುವುದಕ್ಕೆ ಅವನಿಗೆ ಅವಕಾಶವಿಲ್ಲದಂತೆ ಮಾಡಬೇಕಾಗುತ್ತದೆ. ಏಕೆಂದರೆ, ಒಂದು ಸರ್ವೆ ನಂಬರ್ ಏನಾದರೂ ಇದ್ದರೆ ಅದರಲ್ಲಿ ಅರ್ಧ ಒಂದು ಕಡೆ, ಇನ್ನರ್ಧ ಇನ್ನೊಂದು ಕಡೆ—ಹೀಗೆ ಉಳಿಸಿಕೊಳ್ಳುತ್ತಾನೆ. ಆದ್ದರಿಂದ ಇಂಗ್ಲೆಂಡಿನ ಪದ್ಧತಿಯಂತೆ ಇಲ್ಲಿ ಮಾಡಬೇಕಾಗುತ್ತದೆ. ಅಲ್ಲಿ ಸ್ಮಾಲ್ ಹೋಲ್ಡಿಂಗ್ಸ್‌ನ ಹೆಚ್ಚು ಭಾಗ ಹಿರಿಮಗನಿಗೆ ಮಾತ್ರ ಹೋಗುತ್ತದೆ. ಈ ಕಾಯಿದೆ ಸೆಲೆಕ್ಟ್ ಕಮಿಟಿಗೆ ಹೋಗುವುದರಿಂದ ಬಹಳ ಕೂಲಂಕಷವಾಗಿ ಪ್ರತಿಯೊಂದು ವಿಧಿಯನ್ನು ಕೂಡ ಬಹು ಯೋಚನೆಮಾಡಿ ಚರ್ಚೆ ಮಾಡಬೇಕಾಗಿರುವುದರಿಂದ ನಾನು ಈ ಸಮಯದಲ್ಲಿ ಹೆಚ್ಚಿಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಇಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ (ಬಾಗೇವಾಡಿ).—ಮಾನ್ಯ ಅಧ್ಯಕ್ಷರೇ ಈ ಕನ್‌ಸಾಲಿಡೇಷನ್ ಆಫ್ ಹೋಲ್ಡಿಂಗ್ಸ್ ಮಸೂದೆ ಮೊದಲು ಬೊಂಬಾಯಿ ಕರ್ಣಾಟಕದೊಳಗೆ 1944ನೇ ಇಸವಿಯಲ್ಲಿ ಜಾರಿಗೆ ಬಂತು. ಅದು ನಮ್ಮ ಬಿಜಾಪುರ ಜಿಲ್ಲೆಯ ಬಾಗೇವಾಡಿ ಮತ್ತು ಇಂಡಿ ತಾಲ್ಲೂಕುಗಳಲ್ಲಿ ಜಾರಿಗೆ ಬಂದಮೇಲೆ ನಮ್ಮ ಮಂತ್ರಿಗಳ ಗಮನಕ್ಕೆ ಒಂದು ವಿಷಯವನ್ನು ತಂದೆನು. ಅದೇನೆಂದರೆ, ಎಲ್ಲ ಭಾಗದಲ್ಲೂ ಬೇರೆ ಬೇರೆ ವಿಧವಾದ ಭೂಮಿಯಿರುವುದರಿಂದ ಅದೆಲ್ಲ ಭಾಗವನ್ನು ಸರ್ವೆ ಮಾಡಬೇಕೆಂದು ಹೇಳಿದ್ದು. ಕೆಲವು ಕಡೆ ನಮ್ಮ ಸರ್ಕಾರದವರು ಆರೀತಿ ಮಾಡಿದ್ದಾರೆ. ನಮ್ಮ ಪ್ರದೇಶದಲ್ಲಿ ಕೆಲವು ಕಡೆ ಎರೆ ಭೂಮಿ ಹಾಗೂ ಮಟ್ಟಿ ಭೂಮಿ ಬೇರೆ ಇದೆ. ಅಂತಹ ಕಡೆಗಳಲ್ಲಿ ಮುಂಗಾರು ಮಳೆಯಾದರೆ ರೈತರಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಹಿಂಗಾರು ಮಳೆಯಾದರೂ ರೈತರು ಹೆಚ್ಚು ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಕೆಲವು ಕಡೆಗಳಲ್ಲಿ ನಮ್ಮ ಪ್ರದೇಶದ ರೈತರು ಬೆಂಗಳೂರಿಗೆ ಹೋಗಿ ಜಮೀನು ಮಾರಿದ್ದರೂ ಇನ್ನೂ ಹಣ ಬಂದಿಲ್ಲ. ಅವರಿಗೆ ಸರಿಯಾಗಿ ಪ್ರೊಟೆಕ್ಷನ್ ಸಿಕ್ಕಿಲ್ಲ, ಅಂದಮೇಲೆ ರೈತರಿಗೆ ಭೂಸುಧಾರಣೆ ಮಾಡಬೇಕೆಂದು

ಬೇರೆ ಹೇಳುತ್ತಾರೆ. ಕೆಲವರು ತಮ್ಮಲ್ಲಿರುವ ಜಮೀನನ್ನು ಮಾರಬೇಕೆಂದು ಹೇಳುತ್ತಾರೆ. ಮತ್ತೆ ಕೆಲವರು ಒಳ್ಳೆಯ ಜಮೀನು ಇದ್ದರೆ ಅದನ್ನು ಸುಧಾರಣೆ ಮಾಡಬೇಕೆಂದು ಹೇಳುತ್ತಾರೆ. ಆದರೆ ಯಾವ ಜಮೀನ್ದಾರನೇ ಆಗಲಿ ಸುಮಾರು ಐನೂರು ಆರುನೂರು ರೂಪಾಯಿಗಳನ್ನು ಖರ್ಚು ಮಾಡಿ ಕೊಂಡು ಬಿಜಾಪುರದಿಂದ ಬೆಂಗಳೂರಿಗೆ ಹೋಗಿ ತನ್ನ ಜಮೀನನ್ನು ಮಾರಿಕೊಂಡು ಬರುತ್ತಾನೆ. ರೈತನಿಗೆ ಸಂಕಟ ಬಂದರೆ ಆಗ ತನ್ನಲ್ಲಿರುವ ಜಮೀನನ್ನು ಮಾರುತ್ತಾನೆ. ಆದರೆ ಜಮೀನಿನ ಬೆಲೆ ಯನ್ನು ಯಾರು ನ್ಯಾಯವಾಗಿ ಕೊಡುವುದಿಲ್ಲ. ಇಂತಹ ಪರಿಸ್ಥಿತಿ ನಮ್ಮ ಪ್ರದೇಶದಲ್ಲಿ ಉಂಟಾಗಿ ಅಲ್ಲೋಲಕಲ್ಲೋಲವಾಗಿದೆ. ಅದರೆ ಬೊಂಬಾಯಿ ಕರ್ಣಾಟಕದವರು ಮಾಡಿದ್ದು ಯಶಸ್ವಿ ಯಾಗಿಲ್ಲ. ರೈತರ ಮನಸ್ಸಿನಲ್ಲಿ ಯಾವ ಒಂದು ರೀತಿಯ ಉಪಯೋಗ ಪರಿಣಾಮವುಂಟಾಗಲಿಲ್ಲ. ಮಂತ್ರಿಗಳನ್ನು ನಾನು ಭೇಟಿಮಾಡಿ ಈ ವಿಚಾರವಾಗಿ ಈಗಾಗಲೇ ಮಾತನಾಡಿದ್ದೇನೆ. ನಮಗೆ ಬೆಂಗಳೂರಿನವರೆಗೂ ಹೋಗಿ ಅಲ್ಲಿ ಜಮೀನು ಮಾರುವ ಪರಿಸ್ಥಿತಿ ತುಂಬಾ ಅಲ್ಲೋಲಕಲ್ಲೋಲ ವಾಗುತ್ತದೆ.

ಈ ಕಾಯಿದೆ ಪ್ರಕಾರ ಒಂದು ಮನೆಯಲ್ಲಿ 10 ಜನ ಅಣ್ಣ ತಮ್ಮಂದಿರಿದ್ದರೆ, ಅವರಿಗಿರುವ ಜಮೀನನ್ನು ತುಂಡುತುಂಡು ಮಾಡುವುದಕ್ಕೆ ಪರ್ಮಿಷನ್ ಕೊಡುತ್ತಾರೆ. ಇದನ್ನು ಸರ್ವೆ ಮಾಡು ವುದಕ್ಕೆ ಎಷ್ಟು ಸಿಬ್ಬಂದಿ ಬೇಕು, ಅವರಿಗೆ ಅನಾವಶ್ಯಕವಾಗಿ ಎಷ್ಟು ಖರ್ಚಾಗುತ್ತದೆ? ಇದರಿಂದ ರೈತರಿಗೆ ಸಹಾಯ ಮಾಡುತ್ತೀರಾ ? ಇಲ್ಲ, ಅದರ ಬದಲು ರೈತರನ್ನು ತೊಂದರೆಗೆ ಹಾಕುತ್ತೀರಿ. ಇದು ಸೆಲೆಕ್ಟ್ ಕಮಿಟಿಗೆ ಹೋಗುವುದರಿಂದ ನಾನು ಜಾಸ್ತಿ ಹೇಳಲು ಇಷ್ಟಪಡುವುದಿಲ್ಲ. ಬೊಂಬಾಯಿ ಸರ್ಕಾರದಲ್ಲಿ ಈ ಕಾಯಿದೆ ಯಶಸ್ವಿಯಾಗಿಲ್ಲ. ಆದ್ದರಿಂದ ಈ ಕಾಯಿದೆಯನ್ನು ಕೂಲಂಕಷವಾಗಿ ವಿಚಾರಮಾಡದೆ ಜಾರಿಗೆ ತರಬೇಡಿ. ನನ್ನ ಅಭಿಪ್ರಾಯದಲ್ಲಿ 4-5 ಎಕರೆ ಜಮೀನಿದ್ದರೆ, ಅದನ್ನು ತುಂಡು ಮಾಡಬಾರದು. ಅದು ಒಬ್ಬ ರೈತನಿಗೇ ಸೇರಬೇಕು. ಈ ಕಾಯಿದೆಯಂತೆ ತುಂಡು ಮಾಡಿದರೆ, ಇಡೀ ಮೈಸೂರು ರಾಜ್ಯದಲ್ಲಿ ಅಲ್ಲೋಲಕಲ್ಲೋಲವಾಗುತ್ತದೆ. ಈ ತರಹ ಕರಾರನ್ನು ಕಾಂಗ್ರೆಸ್ ಕಮಿಟಿಯಲ್ಲಿ ಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿದೆ. ಈ ಠರಾವನ್ನು ಕಳುಹಿಸಿದ ಮೇಲೂ ಈ ಬಿಲ್ಲನ್ನು ತಂದಿರುವುದು ಸರಿಯಲ್ಲ. ರೆವಿನ್ಯು ಮಿನಿಸ್ಟರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಮಸೂದೆಯನ್ನು ಅತಿಶಯವಾಗಿ ವಿಚಾರಮಾಡಬೇಕು. ವಿಚಾರಮಾಡದೆ ಇವತ್ತು ಜಾರಿಗೆ ಕೊಟ್ಟು, ನಾಳೆ ತಿದ್ದುಪಡಿ ಮಾಡುವುದು ಸರಿಯಲ್ಲ. ಅದರಿಂದ ಸರ್ಕಾರಕ್ಕೆ ವ್ಯಥಾ ರೊಕ್ಕ ಖರ್ಚಾಗುತ್ತದೆ. ಅದರಿಂದ ರೈತರಿಗೂ ಸಂತೋಷವಾಗುವುದಿಲ್ಲ. ಅದೇ ಹಣವನ್ನು ಬಾವಿ ತೆಗೆಯುವುದಕ್ಕೆ, ಟ್ರಾಕ್ಟರ್ ತೆಗೆದುಕೊಳ್ಳುವುದಕ್ಕೆ, ಧಾನ್ಯ ಪರಿಸ್ಥಿತಿ ಕೆಟ್ಟಿರುವ ಈ ಕಾಲದಲ್ಲಿ ಆ ಸ್ಥಿತಿ ಸುಧಾರಿಸುವುದಕ್ಕೆ ಭೂಸುಧಾರಣೆ ಜಾರಿಗೆ ತರುವುದಕ್ಕೆ ಖರ್ಚುಮಾಡಿ. ಇಂಥ ಯೋಗ್ಯ ವಿಚಾರ ಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ಈ ಕಾಯಿದೆ ತರಬೇಕು. ಇಂಥ ವಿಚಿತ್ರ ಕಾನೂನನ್ನು ಜಾರಿಗೆ ತಂದು ರೈತರಿಗೆ ತೊಂದರೆ ಕೊಡಬೇಡಿ. ಈಗ ಇರುವ ಯುದ್ಧ ಪರಿಸ್ಥಿತಿಯಲ್ಲಂತೂ ಇದರ ಆವಶ್ಯಕತೆಯನ್ನು ಸ್ವಲ್ಪ ಆಲೋಚನೆ ಮಾಡಬೇಕು. ನಾನು ಹೇಳಿದ ವಿಚಾರಗಳನ್ನೆಲ್ಲಾ ಸೆಲೆಕ್ಟ್ ಸಮಿತಿಯಲ್ಲಿ ಯೋಚಿಸಿ ಸೂಕ್ತ ಸಲಹೆ ಮಾಡುತ್ತಾರೆಂದು ನಂಬಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, ಸಭಾಪತಿಗಳೇ, ನಾನು ಈ ವಿಧೇಯಕವನ್ನು ಮನಃಪೂರ್ವಕವಾಗಿ ವಿರೋಧ ಮಾಡುತ್ತೇನೆ. ಸ್ವಾಮಿ, ಆಡಳಿತ ನಡೆಸತಕ್ಕಂಥ ಸರ್ಕಾರಕ್ಕೆ ರಾಜ್ಯದಲ್ಲಿ ಬೇಸಾಯ ಮಾಡುವ ಜನಗಳಿಗೆ ಸರಿಯಾದ ಸವಲತ್ತು ಕೊಡುವುದಕ್ಕೆ ಆಗದೆ, ಸರಿಯಾದ ರೀತಿಯಲ್ಲಿ ಅವರ ಅಭಿವೃದ್ಧಿಗೆ, ಅವರ ಕಲ್ಯಾಣದಕಡೆಗೆ ಗಮನಕೊಡುವುದಕ್ಕೆ ಶಕ್ತಿ ಸಾಲದೆ, ಜಮೀನು ಕಾಣೆ ವಿಷಯದಲ್ಲಿ ಭೋಗ್ಯ ಮಾಡಬೇಡಿ ; ಜಮೀನು ಹಂಚಿಕೆ ಮಾಡಬೇಡಿ, ಆಧಾರ ಮಾಡಬೇಡಿ, ಕ್ರಯ ಮಾಡಬೇಡಿ ಹಾಗೂ ನವಣೆ ಬೆಳೆಯಿರಿ, ಕುರುಚಲು ಬೆಳೆಯಿರಿ, ಉಚ್ಚೆಂಗಿ ಬೆಳೆಯಿರಿ, ಕಡಲೆ ಬೆಳೆಯಿರಿ ಎಂದು ಹೇಳತಕ್ಕಂಥಾದ್ದನ್ನು ನೋಡಿದರೆ, ನಾನಾದರೂ ತಿಳಿದು ಕೊಂಡಿದ್ದೇನೆ : ಇದು ಯಾವ ಸರ್ಕಾರಕ್ಕೂ ಎಂತಹ ಕಾಲದಲ್ಲಿಯೂ ಕೂಡ ಸರಿಯಾದುದಲ್ಲ. ನಾಗರೀಕನು ವಾಸ ಮಾಡತಕ್ಕಂಥ ಯಾವ ರಾಜ್ಯದಲ್ಲಿಯೂ ಅಕ್ಷರಶಃ ಯಾವನೂ ಕೂಡ ಮನಸ್ಸಿನಲ್ಲಿ ಕನಸಿನಲ್ಲಿ ಯೋಚನೆ ಮಾಡಬಾರದ ವಿಷಯ. ಇಲ್ಲಿ ಏನಾಗಿದೆ ಎಂದರೆ, ಎಲ್ಲಿ ಜನ ಹೆಚ್ಚಾದರೆ ಅವರಿಗೆ ಆಹಾರ ಕೊಡಬೇಕಾಗಿ ಬರುತ್ತದೆಯೋ ಎಂದು, ಅದಕ್ಕಾಗಿ ಮಕ್ಕಳ ನಿಯಂತ್ರಣ ಮಾಡ ಬೇಕೆನ್ನುವ ಒಂದು ಕಾನೂನನ್ನು ಇಲ್ಲಿ ತಂದು ಪಾಸು ಮಾಡಿದಿರಿ. ಜನರಲ್ಲಿರುವ ಜಮೀನನ್ನು ಅವರ ಮಕ್ಕಳಿಗೆ ಹಂಚಬೇಡಿ ಎನ್ನುವಂತಹ ಒಂದು ಕಾನೂನನ್ನು ಈಗ ಇಲ್ಲಿತೆಗೆದುಕೊಂಡು ಬಂದಿ ದ್ದೀರಿ. ನೀವು ಕಳೆದ ಹದಿನೆಂಟು ವರ್ಷಗಳಿಂದಲೂ ಹೇಳುತ್ತಲೇ ಬರುತ್ತಿದ್ದೀರಿ. ರೈತನ ಅಭಿವೃದ್ಧಿ ಯಾಗಬೇಕು, ರೈತನ ಕಲ್ಯಾಣವಾಗಬೇಕು, ಎಂದು ಹೇಳುತ್ತ ಬರುತ್ತಿದ್ದವರು ಇಲ್ಲಿಯವರೆಗೆ ಈ ದಿಸೆಯಲ್ಲಿ ಏನು ಸಾಧನೆ ಮಾಡಿದ್ದೀರಿ ಎಂದು ನಾನು ಇಲ್ಲಿ ಸರ್ಕಾರದವರನ್ನು ಕೇಳುತ್ತೇನೆ.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಇವೊತ್ತು ಇಲ್ಲಿ ಮೈಸೂರು ಪ್ರಿವೆನ್‌ಷನ್ ಆಫ್ ಫ್ರಾಗ್‌ಮೆಂಟೇಷನ್ ಅಂಡ್ ಕನ್‌ಸಾಲಿಡೇಷನ್ ಆಫ್ ಹೋಲ್ಡಿಂಗ್ಸ್ ಬಿಲ್, 1964 ಎನ್ನುವುದನ್ನು ತರುವುದಕ್ಕೆ ಮುಂಚೆ ಮೈಸೂರು ಸರಕಾರ ಏನು ಮಾಡುತ್ತಿತ್ತು ? ನಿದ್ದೆ ಮಾಡುತ್ತಿತ್ತೇ ಎಂದು ನಾನು ಕೇಳುತ್ತೇನೆ. ಈ ದೇಶದಲ್ಲಿ ಭೂಸುಧಾರಣೆ ಕಾನೂನನ್ನು ತರಬೇಕು ಎಂದು ಹೇಳುತ್ತಿದ್ದೀರಿ. ಅದರಲ್ಲೇ ಒಬ್ಬೊಬ್ಬರಿಗೆ ಒಂದು ರೀತಿಯಾದ ಹೋಲ್ಡಿಂಗ್ಸ್ ಇರುತ್ತದೆ. ಒಬ್ಬರಿಗೆ ಒಂದು ಸಾವಿರ ಎಕರೆಗಳಷ್ಟು ಇರುತ್ತದೆ. ಒಬ್ಬರಿಗೆ ನಾಲ್ಕು ಎಕರೆಗಳಷ್ಟು ಸಣ್ಣ ಹೋಲ್ಡಿಂಗು ಇರುತ್ತದೆ. ಇಂತಹ ಹೋಲ್ಡಿಂಗುಗಳು ಇರುವುದು ಸರಿಯಲ್ಲ. ಭೂಮಿ ಇಲ್ಲದೆ ಇರುವವರಿಗೆ ಉಳುವವರಿಗೆ ಭೂಮಿಯನ್ನು ಕೊಡಬೇಕು ಎಂದು 1946-47ನೇ ಇಸವಿಯಿಂದಲೂ ಒಂದೇ ಸಮನೆ ಹೇಳುತ್ತಲೇ ಬರುತ್ತಿದ್ದೀರಿ. ಹಾಗೆ ಹೇಳುತ್ತ ಬಂದು ಭೂಸುಧಾರಣೆಯ ಕಾನೂನನ್ನು ತಂದು ಜಾರಿಗೆ ಕೊಡಲು 18 ವರ್ಷಗಳಾದರೂ ಇನ್ನೂ ಆಗಲಿಲ್ಲ. ಇದನ್ನು ಜಾರಿಗೆ ಕೊಡುವುದಕ್ಕೆ ಮುಂಚೆಯೇ ಇಂತಹ ಒಂದು ಬಿಲ್ಲನ್ನು ಈಗ ಏತಕ್ಕಾಗಿ ಇಲ್ಲಿ ತರಬೇಕು ? 1964ನೇ ಇಸವಿಯಲ್ಲೇ ಈ ಭೂಸುಧಾರಣೆ ಕಾನೂನನ್ನು ಜಾರಿಗೆ ತಂದು ಪಾಸು ಮಾಡಿಸಿ ಕಾನೂನುಗಳ ಕಡತಕ್ಕೆ ಸೇರಿಸಬೇಕು ಎಂದು ತಂದಾಗ ಇದರಿಂದ ಜನಗಳಿಗೆ ಏನೇನು ಅನುಕೂಲಗಳಾಗಿವೆ ಮತ್ತು ಇದರ ಬಗ್ಗೆ ಯಾವ ಯಾವ ರೀತಿಯ, ಆಕ್ಷೇಪಣೆಗಳು ಬರುತ್ತವೆ ಎನ್ನುವುದನ್ನೆಲ್ಲಾ ಗಮನದಲ್ಲಿ ಇಟ್ಟುಕೊಳ್ಳದೆ ಈಗ ಇಂತಹ ಕಾನೂನನ್ನು ಇಲ್ಲಿ ಪುನಃ ಏಕೆ ತರುತ್ತಿದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ತಾವು ಇಂತಹ ಕಾನೂನು ಹೈದರಾಬಾದು ಕರ್ಣಾಟಕದಲ್ಲಿದೆ, ಬೊಂಬಾಯಿ ಕರ್ಣಾಟಕದ ಭಾಗದಲ್ಲಿದೆ ಅದರಂತೆ ಇಲ್ಲಿಯೂ ಕೂಡ ಒಂದು ಕಾನೂನನ್ನು ಮಾಡಬೇಕೆಂದು ಹೇಳಿ ತರುತ್ತಿದ್ದೀರಿ. ನಾನೂ ಕೂಡ ಹೈದರಾಬಾದು ಕರ್ನಾಟಕದ ಭಾಗದವರಿಂದ ಹಾಗೂ ಬೊಂಬಾಯಿ ಭಾಗದವರಿಂದ ಅಲ್ಲಿರುವ ಈ ಕಾನೂನು ಹೇಗೆ ಕೆಲಸ ಮಾಡುತ್ತಿದೆ ಎನ್ನುವುದನ್ನು ಕೇಳಿ ತಿಳಿದುಕೊಂಡಿದ್ದೇನೆ. ಇದು ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿದೆ ಮತ್ತು ಇದರಿಂದ ಜನರಿಗೆ ಎಷ್ಟು ಮಟ್ಟಿನ ಅನುಕೂಲಗಳು ಆಗಿವೆ ಎನ್ನುವುದನ್ನೆಲ್ಲಾ ಕೇಳಿ ತಿಳಿದುಕೊಂಡಿದ್ದೇನೆ. ಇವೊತ್ತು ಇಲ್ಲಿಯೇ ಮಾತನಾಡಿದ ಮಾನ್ಯ ಸದಸ್ಯರಾದ ಶ್ರೀಮಾನ್ ಎಂ. ಆರ್. ಪಾಟೀಲರವರನ್ನೂ ಕೂಡ ಮುಂಬಯಿ ಭಾಗದಲ್ಲಿರುವ ಇಂತಹ ಕಾನೂನು ಅಲ್ಲಿನ ಜನತೆಗೆ ಎಷ್ಟು ಮಟ್ಟಿನ ಅನುಕೂಲಗಳನ್ನು ಮಾಡಿಕೊಟ್ಟಿದೆ ಎನ್ನುವುದನ್ನೂ ಕೇಳಿ ತಿಳಿದುಕೊಂಡಿದ್ದೇನೆ. ಅವರೇ ಮಾತನಾಡುವಾಗ ಇಲ್ಲಿ ಹೇಳಿದರು : It is a curse on the agriculturist family; It is a curse on the farmer.'' ಒಂದು ಭೂಮಿಯನ್ನು ಟ್ರಾನ್ಸ್‌ಫರು ಮಾಡಬೇಕಾದರೆ ಅಲ್ಲಿನ ಜನ ತಹಶೀಲು ಆಫೀಸಿನಿಂದ ಹಿಡಿದು ಸರಕಾರದವರೆಗೆ ಬರಲು ಸುಮಾರು ಒಂದು ಸಾವಿರದಷ್ಟು ಹಣವನ್ನು ವೆಚ್ಚ ಮಾಡಬೇಕಾಗಿ ಬರುತ್ತದೆ. ಇದರಿಂದಾಗಿ ಜನ ಅಲ್ಲಿ ರಕ್ತದಿಂದ ಕೈ ತೊಳೆಯುತ್ತಿದ್ದಾರೆ ಮತ್ತು ಬಹಳ ಕಷ್ಟಗಳಿಗೆ ಸಿಕ್ಕಿ ತೊಂದರೆಪಡುತ್ತಿದ್ದಾರೆ ಎಂದೂ ಅವರು ಹೇಳಿದರು. ಹೀಗಿರುವಾಗ ನಮ್ಮ ಮೈಸೂರು ಸರಕಾರದವರು ಇಂತಹ ಕಾನೂನನ್ನು ತಂದು ಇಲ್ಲಿ ಪಾಸುಮಾಡುವುದು ಖಂಡಿತ ಸರಿಯಾದುದಲ್ಲ ಎಂದು ನಾನು ಹೇಳುತ್ತೇನೆ. ಅಲ್ಲದೆ ಈ ಸಭೆಯಲ್ಲೇ ಅದೇ ಭಾಗದಿಂದ ಬಂದಿರುವ ಅನುಭವಿಗಳೂ ಹಾಗೂ ಅಲ್ಲಿನ ಕಷ್ಟಸುಖಗಳನ್ನು ಚೆನ್ನಾಗಿ ತಿಳಿದಂತಹವರೂ ಆಗಿರುವ ಈ ಸಭೆಯ ಮಾನ್ಯ ಸದಸ್ಯರು ಇಲ್ಲಿ ಹೇಳುವಾಗ ಸರಕಾರ ಅವರ ಅಭಿಪ್ರಾಯವನ್ನು ಏತಕ್ಕಾಗಿ ಪರಿಶೀಲನೆ ಮಾಡಿ ಯೋಚನೆ ಮಾಡಬಾರದು ಎಂದು ನಾನು ಇಲ್ಲಿ ಕೇಳುತ್ತೇನೆ. ಇಂತಹ ಕಾನೂನನ್ನು ಈಗ ಸೆಲೆಕ್ಟು ಕಮಿಟಿಗೆ ಕಳುಹಿಸಿ ಅದನ್ನು ಕಾನೂನಾಗಿ ತಂದರೆ ಇದರಿಂದ ಜನಗಳಿಗೇನೂ ಅನುಕೂಲವಾಗುವುದಿಲ್ಲ. ಇದಕ್ಕೋಸ್ಕರ ನಾನು ತಮ್ಮಲ್ಲಿ ಕೇಳುವುದು ಈಗ ಭೂಸುಧಾರಣೆಯನ್ನು ತಂದು ಏನೇನು ಸಾಧನೆ ಮಾಡಿದ್ದೀರಿ ! ಜನತೆಗೆ ಎಷ್ಟು ಮಟ್ಟಿನ ಅನುಕೂಲಗಳನ್ನು ಮಾಡಿಕೊಟ್ಟಿದ್ದೀರಿ ? ಎಷ್ಟು ಎಕರೆಗಳಷ್ಟು ಭೂಮಿಯನ್ನು ಜನತೆಗೆ ಹಂಚಿದ್ದೀರಿ ? ಇವೊತ್ತು ನಮ್ಮ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಕೃಷ್ಣಪ್ಪನವರಿಗೆ ಅವರ ತಾತನ ಕಾಲದಿಂದಲೂ ಬಂದಿರುವ ಆಸ್ತಿ ಇದೆ. ಅವರಿಗೆ ಐದು ಜನ ಅಣ್ಣ ತಮ್ಮಂದಿರುಗಳು ಇರಬಹುದು. ಅವರಿಗೆ ಸುಮಾರು 300 ಎಕರೆಗಳಷ್ಟು ಭೂಮಿ ಇದ್ದರೆ ಒಬ್ಬೊಬ್ಬರಿಗೆ 60 ಎಕರೆಗಳಷ್ಟು ಬರಬಹುದು. ಇದರಲ್ಲಿ ನಮ್ಮ ಮಾನ್ಯ ಶ್ರೀ ಕೃಷ್ಣಪ್ಪನವರಿಗೆ ಐದು ಜನ ಮಕ್ಕಳಿದ್ದರೆ ಅವರಿಗೆಲ್ಲಾ ಆ ಭೂಮಿಯನ್ನು ಹಂಚಬೇಕಾಗಿ ಬರುತ್ತದೆ ಎಂದೆ. ಇಂಥ ಕಾನೂನು ಮಾಡುವುದು ಸರಿಯಲ್ಲ. ನಾವು ಒಂದು ದೇಶದಲ್ಲಿ ಕಾನೂನು ಮಾಡುವಾಗ ಅದು ಈ ದೇಶದಲ್ಲಿರುವ ಸುಮಾರು ಎರಡೂವರೆ ಕೋಟಿ ಜನತೆಗೂ ಅನುಕೂಲವಾಗುವಂತಹ ಶಾಸನಮಾಡಿ ಶಾಸನದ ಕಡತಕ್ಕೆ ಸೇರಿಸಬೇಕು. ಆ ರೀತಿ ಮಾಡುವಾಗ ಇದರಿಂದ ಜನತೆಗೆ ಆಗುವ ಅನುಕೂಲಗಳೇನು ಮತ್ತು ಸುತ್ತುಮುತ್ತಲಿರುವ ಪ್ರದೇಶಗಳಿಂದ ಬರುವ ಜನತೆಗೆ ಆಗುವ ತೊಂದರೆಗಳೇನು ಎನ್ನುವುದನೆಲ್ಲಾ

ಚೆನ್ನಾಗಿ ಯೋಚನೆ ಮಾಡಿಕೊಂಡು ಅನಂತರ ಒಂದು ಕಾನೂನನ್ನು ತರಬೇಕು. ಹಾಗೆ ಯಾವುದನ್ನೂ ಯೋಚನೆ ಮಾಡದೆ ಇಂತಹ ಒಂದು ಕಾನೂನು ತರುವುದು ಸರಿಯಲ್ಲ. ಇನ್ನೂ ಭೂಸುಧಾರಣೆಯನ್ನೇ ಸರಿಯಾಗಿ ಮಾಡಿ ಜಾರಿಗೆ ತಂದಿಲ್ಲ. ಭೂಸುಧಾರಣೆ ಮಾಡಬೇಕೆಂದು ಹಿಂದೆ ಶ್ರೀಮಾನ್ ಜತ್ತಿಯವರ ವರದಿಯ ಆಧಾರದ ಮೇಲೆ ಒಂದು ಭೂಸುಧಾರಣಾ ಆಕ್ಟು ಎಂದು ಮಾಡಿ ಇಲ್ಲಿ ತೆಗೆದುಕೊಂಡು ಬರಲು ಎಷ್ಟು ಎಡರು ತೊಡರುಗಳು ಬಂದವು ಎನ್ನುವುದನ್ನೆಲ್ಲಾ ನಾವು ಚೆನ್ನಾಗಿ ತಿಳಿದುಕೊಂಡಿದ್ದೇವೆ. ಇದನ್ನೆಲ್ಲಾ ಯೋಚನೆ ಮಾಡಿ ಜನರ ಹಿತಕ್ಕೋಸ್ಕರ ಒಂದು ಕಾನೂನು ಮಾಡಬೇಕೆಂದು ಯೋಚಿಸದೆ ಇಂತಹ ಒಂದು ಕಾನೂನನ್ನು ಏತಕ್ಕಾಗಿ ತರುತ್ತಿದ್ದೀರಿ! ಇದರಿಂದ ಜನತೆಯ ಹಿತಸಾಧನೆ ಮಾಡಿದಂತಾಗಲಿಲ್ಲ. ಅಲ್ಲಲ್ಲಿ ಭೂಮಿ ತುಂಡು ತುಂಡಾಗಿ ಹೋಗುತ್ತಿದೆ, ಛಿದ್ರವಾಗಿ ಹೋಗುತ್ತಿದೆ, ಎಂದು ಹಿಂದೆ ಈ ಭೂಸುಧಾರಣೆ ತರಬೇಕೆಂದು ಹೇಳಿ ತಂದರೂ ಇಲ್ಲಿಯವರೆಗೆ ಅದನ್ನೇತಕ್ಕಾಗಿ ಜಾರಿಗೆ ತರಲಿಲ್ಲ? ನಮ್ಮ ದೇಶದಲ್ಲಿ ಶ್ರೀಮಂತರು ಅವರಿಗೆ ಅವಶ್ಯಕವಿಲ್ಲದಿದ್ದರೂ ಕೂಡ ಅವರಲ್ಲಿ ಸಾವಿರಗಟ್ಟಲೆ ಎಕರೆಗಳಷ್ಟು ಭೂಮಿ ಇದೆ. ಆದರೆ ರೈತರಾಗಿ ಕೆಲಸ ಮಾಡುತ್ತಿರುವ ಜನರಲ್ಲಿ ಭೂಮಿಯೇ ಇಲ್ಲ. ಅವರಿಗೆಲ್ಲ ಭೂಮಿಯನ್ನು ಎಲ್ಲಿಂದ ತಂದು ಕೊಡಲು ಸಹಾಯ ಮಾಡುತ್ತೀರಿ? ಉಳುವವನಿಗೇ ಭೂಮಿಯನ್ನು ಕೊಡಬೇಕೆಂದೇನೋ ಹೇಳುತ್ತೀರಿ. ಆದರೆ ಆ ರೀತಿ ಮಾಡಲು ಆಗುತ್ತಿಲ್ಲ. ಅಪ್ಪನಿಗೆ ಸುಮಾರು 60 ಎಕರೆಗಳಷ್ಟು ಭೂಮಿ ಇದ್ದರೆ ಅವನಿಗೆ ಇರುವ ನಾಲ್ಕು ಮಕ್ಕಳಿಗೆ ಅವನ ಆಸ್ತಿಯನ್ನು ಹಂಚುವಾಗ ಇಷ್ಟು ಎಕರೆಗಳಷ್ಟು ಎಂದು ಹಂಚಬೇಡವೇ? ಆದರೆ ಇವೊತ್ತು ನಮ್ಮ ಕೃಷ್ಣಪ್ಪನವರ ಮಕ್ಕಳಂತಹವರು ಒಬ್ಬರು ಇಂಜನೀಯರಾಗಬೇಕು, ಒಬ್ಬರು ಡಾಕ್ಟರಾಗಬೇಕು, ಒಬ್ಬರು ಪೈಲಟ್ ಆಗಬೇಕು, ಒಬ್ಬರು ಮೈಸೂರು ಸರಕಾರದಲ್ಲಿ ಒಂದು ಉನ್ನತ ಉದ್ಯೋಗ ಪಡೆಯಬೇಕು ಎಂದು ಇರುವಂತಹ ಜನರ ಬಗ್ಗೆ ನಾನು ಇಲ್ಲಿ ಹೇಳುತ್ತಿಲ್ಲ. ಒಂದು ಬಡ ಸಂಸಾರದಲ್ಲಿರುವ ಮಕ್ಕಳ ಬಗ್ಗೆ ಇಲ್ಲಿ ಹೇಳುತ್ತಿದ್ದೇನೆ. ಅವರಿಗೆ ಒಂದು ಹಿಡಿ ಅನ್ನ ಮಾಡಿಕೊಳ್ಳಲು ಇದರಂತೆ ಭೂಮಿಯನ್ನು ಇಟ್ಟುಕೊಳ್ಳುವುದಕ್ಕೇ ಸಾಧ್ಯವಿಲ್ಲ. ನೀವೆಲ್ಲ ಬಹು ದೊಡ್ಡದಾಗಿ ಅಗ್ರಿಕಲ್ಚರು ಸೆಕ್ಟರನ್ನು ಮುಂದೆ ತರಬೇಕು ಎಂದು ಹೇಳುತ್ತಿದ್ದೀರಿ ಅದನ್ನು ಮಾಡಲು ಯಾವ ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೀರಿ? ಆಹಾರವನ್ನು ಜಾಸ್ತಿ ಬೆಳೆಯಬೇಕು ಎಂದು ಹೇಳುತ್ತಿದ್ದೀರಿ. ಆಹಾರ ಹೆಚ್ಚು ಬರದೇ ಹೋದರೆ ಬೆಲೆಗಳು ಹೆಚ್ಚಿ ಹೋಗುತ್ತವೆ ಎಂದು ಹೇಳುತ್ತೀರಿ. ಆದರೆ ನೀವು ಮಾಡುತ್ತಿರುವ ಕಾರ್ಯಕ್ರಮಗಳು ಇದಕ್ಕೆ ಅನುಕೂಲವಾಗುವಂತೆ ಇಲ್ಲ. ಸರಕಾರ ಅನ್-ಎಕನಾಮಿಕ್ ಹೋಲ್ಡಿಂಗ್‌ಗಳನ್ನು ತಪ್ಪಿಸಲು ತಕ್ಕ ಕ್ರಮಗಳನ್ನು ಮಾಡಿಲ್ಲ.

"The property should go to the first son. Then what happens to the other sons ? One man will go to the military ; one will become an Advocate and the others will have some other functions to discharge."

ಎಂದು ಹೇಳಬಹುದು. ಒಂದು ಸಣ್ಣ ಸಂಸಾರದಲ್ಲಿ ಹತ್ತು ಜನ ಮಕ್ಕಳಿದ್ದರೆ ಅವರಿಗೆ ಭೂಮಿ ಕೊಡಲು ಹೆಚ್ಚು ಇಲ್ಲದೆ ಇದ್ದರೆ ಅವರಿಗೆಲ್ಲಾ ಹೇಗೆ ಕೊಡುವುದಕ್ಕೆ ಆಗುತ್ತದೆ? ಇಂತಹ ಕಾನೂನು ಮಾಡಿ ಇದರಿಂದ ಜನಕ್ಕೆ ಅನುಕೂಲವಾಗದೇ ಹೋದರೆ ಅದರಿಂದ ಆಗುವ ಉಪಯೋಗವೇನು ಎಂದು ನಾನು ಇಲ್ಲಿ ಕೇಳಬೇಕಾಗಿದೆ. ಈ ಕಾನೂನು ಹೇಗಿದೆ ಎಂದರೆ ಹಿಂದೆ ಎಂದೂ ಇಲ್ಲದಂತಹ "ಬಾರಬೇರಿಯಸ್ ಲಾ" ಆಗಿದೆ ಎಂದು ಹೇಳಬಹುದು. ಒಂದು ಬಡ ಸಂಸಾರದಲ್ಲಿ ಹತ್ತು ಎಕರೆಗಳಷ್ಟು ಭೂಮಿ ಇದ್ದರೆ ಅವರ ಮೂರು ನಾಲ್ಕು ಮಕ್ಕಳಿಗಾಗಿ ಯಾವ ಭೂಮಿಯನ್ನೂ ಹಂಚುವುದಕ್ಕೆ ಸಾಧ್ಯವಿಲ್ಲ ಎಂದು ಮಾಡಿದರೆ ಅವರಿಗೆ ಅನುಕೂಲ ಮಾಡಿದಂತಾಗುತ್ತದೆಯೇ? ಬಡ ಜನಕ್ಕೆ ಮುಖ್ಯವಾಗಿ ಇರುವ ಅನ್ನಸಂಪತ್ತನ್ನು ಕಿತ್ತುಕೊಂಡಂತಾಗುವುದಿಲ್ಲವೇ? ಹೊಟ್ಟೆ ತುಂಬಾ ಊಟ ಮಾಡುವ ಹೊಟ್ಟೆಯ ಮೇಲೆ ಈ ರೀತಿಯಾಗಿ ಸರಕಾರ ಹೊಡೆಯುವುದು ಸರಿಯೇ ಎಂದು ನಾನು ಇಲ್ಲಿ ಕೇಳುತ್ತೇನೆ. ಇಂತಹ ಕಾನೂನು ಮಾಡಿ ಇದರಿಂದೇನು ಸಾಧನೆ ಮಾಡಿದಂತಾಗುತ್ತದೆ ಎಂದು ಇಲ್ಲಿ ನಾನು ಕೇಳಬೇಕಾಗಿದೆ. ದೇಶದಲ್ಲಿ ಜನ ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯಬೇಕೆಂದು ಕಾನೂನು ಮಾಡಿದಿರಿ. ಆದರೆ ಅದರಂತೆ ಹೆಚ್ಚು ಬೆಳೆ ಮಾಡಲು ಸಾಧ್ಯವಾಗಲಿಲ್ಲ, ಬೆಳೆಯುವವನಿಗೆ ಹೆಚ್ಚು ಅನುಕೂಲಗಳನ್ನು ಮಾಡಿಕೊಡಲಿಲ್ಲ. ಅದರಿಂದಾಗಿ ಅವನು ಹೆಚ್ಚು ರಾಗಿ ಬೆಳೆಯಲು ಆಗಲಿಲ್ಲ. ಸುಮ್ಮನೆ ನೀವು ಮಾಡುತ್ತಿರುವುದೆಲ್ಲಾ ಬರೀ ಕಾಗದದ ಪುರಾಣವಾಗಿದೆಯೇ ಹೊರತು ಬೇರೆ ಏನೂ ಆಗಲಿಲ್ಲ. ಇದರಿಂದ ಜನರ ಹಿತರಕ್ಷಣೆ ಮಾಡಿದಂತಾಗುವುದಿಲ್ಲ. ಇದರಲ್ಲಿರುವ ಕ್ಲಾಸು (9)ನ್ನು ಖಂಡಿತ ತೆಗೆದು ಹಾಕುವುದು ಸೂಕ್ತವಾಗಿದೆ. ಇದು ಎಷ್ಟು ಜರ್ಜರೀಭೂತವಾಗಿದೆ ಎನ್ನುವುದನ್ನು ತಾವೇ ನೋಡಿ : "Restriction on partition of land"

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

4-00 P.M.

ಸರ್ಕಾರದವರು ಹೀಗೆ ಈ ದಿವಸ ಈ ಪ್ರಿವೆನ್‌ಷನ್ ಆಫ್ ಫ್ರಾಗ್‌ಮೆಂಟೇಷನ್ ಅಂಡ್ ಕನ್‌ಸಾಲಿಡೇಷನ್ ಆಫ್ ಹೋಲ್ಡಿಂಗ್ಸ್ ಮಸೂದೆಯನ್ನು ಜಾರಿಗೆ ತರಬೇಕೆಂಬ ಉದ್ದೇಶವಿಟ್ಟುಕೊಂಡಿದ್ದಾಗ ಆ ಭೂಸುಧಾರಣಾ ಶಾಸನವನ್ನು ಏಕೆ ತಂದರು ? ಅದನ್ನು ಜಾರಿಗೆ ತಂದ ಅಭಿಪ್ರಾಯವಾದರೂ ಏನು ! ಇದನ್ನು ಸರ್ಕಾರದವರು ಹೇಳಬೇಕಾಗಿತ್ತು. ಇವರು ಆಡಳಿತವನ್ನು ತೆಗೆದುಕೊಂಡು ಇಲ್ಲಿಗೆ 18 ವರ್ಷಗಳಾಯಿತು, ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ದೇಶದಲ್ಲಿರತಕ್ಕ ಎಲ್ಲಾ ಮಕ್ಕಳಿಗೂ ಎಷ್ಟೆಷ್ಟು ಉದ್ಯೋಗಗಳನ್ನು ಕಲ್ಪಿಸಿದ್ದಾರೆ, ಎಷ್ಟೆಷ್ಟು ಕಾರ್ಖಾನೆಗಳನ್ನು ಸ್ಥಾಪಿಸಿದ್ದಾರೆ, ಎಷ್ಟೆಷ್ಟು ರೈತರ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿದ್ದಾರೆ, ದೇಶದಲ್ಲಿರತಕ್ಕ ಜನರಿಗೆಲ್ಲಾ ಉಣ್ಣಲಿಕ್ಕೆ ಅನ್ನ, ಉಡಲಿಕ್ಕೆ ಬಟ್ಟೆಗಳನ್ನು ಒದಗಿಸಿಕೊಳ್ಳಲು ಸರ್ಕಾರದವರೇನು ಅನುಕೂಲ ಕಲ್ಪಿಸಿದ್ದಾರೆ, ದೇಶದಲ್ಲಿ ನಿರುದ್ಯೋಗ ಸಮಸ್ಯೆಯನ್ನು ಇವರೆಷ್ಟುಮಟ್ಟಿಗೆ ನಿವಾರಣೆ ಮಾಡಿದ್ದಾರೆ ಎಂಬುದನ್ನೆಲ್ಲಾ ಹೇಳಿದ್ದರೆ ನಾನು ಇದನ್ನು ಒಪ್ಪುತ್ತಿದ್ದೆ. ಅಂಥ ಒಳ್ಳೆಯ ಪರಿಸ್ಥಿತಿ ಇದ್ದಿದ್ದರೆ ನಾವೀ ದಿವಸ ಆ ಪಾಕೀಸ್ತಾನದವರನ್ನೂ, ಚೀನಾದವರನ್ನೂ ಅಧಃಪಾತಾಳಕ್ಕೆ ತುಳಿದುಹಾಕುತ್ತಿದ್ದೆವು. ಈ ಆಡಳಿತ ಪಕ್ಷದವರು ಅಧಿಕಾರಕ್ಕೆ ಬಂದು 18 ವರ್ಷಗಳು ಕಳೆಯುತ್ತಿರುವಾಗ ಇವರು ದೇಶದಲ್ಲಿ ಏನು ಅಂಥ ಅನುಕೂಲ ಕಲ್ಪಿಸಿದ್ದಾರೆ, ದೇಶೋದ್ಧಾರ ಕಾರ್ಯಗಳೇನನ್ನು ಮಾಡಿದ್ದಾರೆಂಬುದನ್ನು ಹೇಳಲಿ ? ಇವರು ಅಧಿಕಾರವನ್ನೇನೋ ಮಾಡಿದ್ದಾರೆ. ಕಾರುಗಳಲ್ಲಿ ಓಡಾಡಿದ್ದಾರೆ, ಶುಚಿಯಾದ ಊಟ ತಿಂಡಿಗಳನ್ನು ಸೇವನೆ ಮಾಡಿದ್ದಾರೆ, ಸೊಗಸಾದ ಬಂಗಲೆಗಳಲ್ಲಿ ವಾಸಮಾಡಿದ್ದಾರೆ. ಆದರೆ ಇವರು ಬೆಳಸಿರತಕ್ಕದ್ದೇನೆಂದು ಕೇಳಿದರೆ—ಕಾಗದದ ಫೈಲುಗಳು ಮಾತ್ರ. ಆ ಕಾರ್ಯ ಒಂದನ್ನು ಬಿಟ್ಟರೆ ಇವರು ಇನ್ನಾವ ಕ್ಷೇತ್ರದಲ್ಲಿ ವಿದ್ಯೆ, ವ್ಯವಸಾಯ, ಆರೋಗ್ಯ, ಈ ಬಾಬುಗಳಲ್ಲಿ ಇವರೇನು ಪುರುಷಾರ್ಥ ಸಾಧನೆ ಮಾಡಿದ್ದಾರೆಂಬುದನ್ನು ಹೇಳಲಿ. ದೇಶದಲ್ಲಿರತಕ್ಕ ರೈತನ ಮಕ್ಕಳಲ್ಲಿ ಎಷ್ಟು ಜನರನ್ನು ಇಂಜಿನಿಯರಿಂಗ್ ಬಾಬಿನಲ್ಲಿ, ಮೆಡಿಕಲ್ ಬಾಬಿನಲ್ಲಿ ಪಾರಂಗತರನ್ನಾಗಿ ಮಾಡಿದ್ದಾರೆ ! ಎಸ್. ಎಸ್. ಎಲ್. ಸಿ. ಓದಿರತಕ್ಕ ಜನರಿಗೇ ಕೆಲಸಗಳಿಲ್ಲ. ನೆನ್ನೆ ತಾನೆ ಶ್ರೀ ದೇವರಾಜ ಅರಸರು ಮಾತನಾಡುತ್ತಾ, ನಾಲ್ಕು ಸಾವಿರ ಜನರು ಅರ್ಜಿ ಹಾಕಿಕೊಂಡಿದ್ದುದರಲ್ಲಿ 200 ಜನರಿಗೆ ಮಾತ್ರ ಕೆಲಸ ಕೊಡಲು ಸಾಧ್ಯವಾಯಿತೆಂದು ಹೇಳಿದರು. ಹಾಗಿರುವಾಗ ಸರ್ಕಾರದವರು ಇಂಥ ಮಸೂದೆಯನ್ನು ತರುವುದರ ಅರ್ಥವೇನೆಂಬುದೇ ನನಗೆ ತಿಳಿಯುತ್ತಿಲ್ಲ. ನಾಳೆ ಸರ್ಕಾರದವರು ಈ ಕಾನೂನನ್ನು ಶಾಸನ ಕಡತಕ್ಕೇರಿಸಿದ ಮೇಲೆ ಸರ್ಕಾರದವರು ಕೊಡತಕ್ಕ ಪರಿಹಾರ ದ್ರವ್ಯವನ್ನು ಪಡೆದ ಜನರು ಆ ಹಣವನ್ನು ತೆಗೆದುಕೊಂಡು ಎಲ್ಲಿಗೆ ಹೋಗಬೇಕು ! ಯಾವ ಊರಿಗೆ ಹೋಗಬೇಕು ? ಪರಿಹಾರದಿಂದ ಬರತಕ್ಕ ಹಣವೇನಿದೆ ಅದಕ್ಕೆ ರೂಪಾಯಿಗೆ 17 ಪೈಸೆ ಬೆಲೆ ಇರುವಾಗ ಆ ದುಡ್ಡನ್ನು ತೆಗೆದುಕೊಂಡು ಅವರೆಲ್ಲಿಗೆ ಹೋಗಬೇಕು ? ಇಲ್ಲಿ ಹೇಳಿರತಕ್ಕ ಯಾವ ಯಾವ ಸೆಕ್ಷನ್‌ಗಳ ಬಗ್ಗೆ ಏನೇನು ಕ್ರಮಗಳನ್ನು ಕೈಗೊಳ್ಳಬೇಕು ಎಂಬುದನ್ನು ಎಲ್ಲಿ ವಿವರಿಸಿದ್ದಾರೆ! ನಾನು ಅಧಿಕಾರಿಗಳನ್ನು ದೂಷಣೆ ಮಾಡಬೇಕೆಂದು ಹೇಳುತ್ತಿಲ್ಲ. ಇಂಥ ಕಾನೂನನ್ನು ಜಾರಿಗೆ ತರುವುದರ ಬಗ್ಗೆ ಸರ್ಕಾರದವರ ರೀತಿ ನೀತಿ, ಅವರ ತತ್ವ ಏನಿದೆ ಎಂಬುದನ್ನು ನಾನು ಕೇಳುತ್ತಿದ್ದೇನೆ. ಅವರೇ ನನಗೆ ಅದನ್ನು ಹೇಳಿಕೊಡಬೇಕು. ಭೂಸುಧಾರಣೆಯ ಆಕ್ಟಿನಲ್ಲಿ ಸೇರಿಸಿರುವಂತೆ ಇದರಲ್ಲಿಯೂ ಕೋ-ಆಪರೇಟೀವ್ ಸೊಸೈಟಿಗಳನ್ನು ಹೇಳಿದ್ದಾರೆ. ಇನ್ನೂ ಏನೇನನ್ನೋ ಸೇರಿಸಿದ್ದಾರೆ. ಹೀಗೆ ಕಷ್ಟಪಟ್ಟು ಕೆಲಸ ಮಾಡತಕ್ಕ ಜನರನ್ನು ಪರಿಹಾರ ಪಡೆದು ಊರನ್ನು ಬಿಟ್ಟು ಹೋದಮೇಲೆ ಶ್ರಮಜೀವನಕ್ಕೆ ಅಭ್ಯಾಸವಿಲ್ಲದ ಜನಗಳಿರತಕ್ಕ ಊರಿನಲ್ಲಿರತಕ್ಕ ಭೂಮಿಯನ್ನು, ಅಂದರೆ ಮುಂದೆ ಫ್ರಾಗ್‌ಮೆಂಟೇಷನ್ ಮತ್ತು ಕನ್‌ಸಾಲಿಡೇಷನ್ ಮಾಡಿದ ನಂತರ ಉಳಿಯತಕ್ಕ ಭೂಮಿಯನ್ನು ಊರಿನಲ್ಲಿ ವ್ಯವಸಾಯ ಮಾಡತಕ್ಕ ಜನರೇ ಇಲ್ಲದ ಮೇಲೆ; ಅದನ್ನು ಯಾರು ಉಳಬೇಕು ! ಅಲ್ಲಿ ಯಾರು ಕೆಲಸ ಮಾಡಬೇಕು ! ಆ ಊರಿನಲ್ಲಿ ಎತ್ತುಗಳಿಲ್ಲ, ನೇಗಿಲುಗಳಿಲ್ಲ, ಉಳತಕ್ಕ ಜನರಿಲ್ಲ. ಇಂಥ ಕಾನೂನನ್ನು ಸರ್ಕಾರದವರೇಕೆ ಮಾಡುತ್ತಾರೆ ? ಅದಕ್ಕೆ ನಾನು ಶ್ರೀಮಾನ್ ಕೃಷ್ಣಪ್ಪನವರಿಗೆ ಹೇಳುವುದೇನೆಂದರೆ—ಅವರಿನ್ನೂ ಮಾಡತಕ್ಕ ಒಳ್ಳೆಯ ಕಾರ್ಯಗಳು ರಾಜ್ಯದಲ್ಲಿ ಅನೇಕವಿವೆ ; ಆದುದರಿಂದ ಇದನ್ನು ಹಿಂದಕ್ಕಿಟ್ಟು, ಅಗತ್ಯವಾಗಿ ಮಾಡಬೇಕಾಗಿರುವಂಥ ಪವಿತ್ರವಾದ ಕಾನೂನುಗಳು ಇನ್ನೂ ಅನೇಕ ಇವೆ, ಅವುಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಆದರೆ ಸರ್ಕಾರದವರು ಇಂಥ ಒಂದು ಕಾನೂನನ್ನು ತರುವುದರಿಂದ ಏನಾಗುತ್ತದೆ ಎಂದರೆ—ಕುಶಲ ವರ್ಗದವರಿಗೆ, ಪಂಡಿತರಿಗೆ ಮಧ್ಯಮ ವರ್ಗದವರಿಗೆ ಅನುಕೂಲ ಸಿಕ್ಕಿ ಅವರ ಜೀವನ ಸುಗಮವಾಗಿ ಸಾಗುತ್ತದೆ, ಅಷ್ಟು ವಿನಾ ಇದರಿಂದ ಹಳ್ಳಿಯ ಜನರಿಗೇನೂ ಅನುಕೂಲವಾಗುವುದಿಲ್ಲ. ಮಾನ್ಯ

ಮಂತ್ರಿಗಳ ಅಜ್ಜನಿಗೆ 300 ಎಕರೆ ಜಮೀನಿರಬಹುದು, ಅವರ ಮುತ್ತಜ್ಜನಿಗೆ ಒಂದು ಸಾವಿರ ಎಕರೆ ಜಮೀನಿರಬಹುದು. ಆದರೆ ಅವರು ಆಳವಾಗಿ ವಿಚಾರ ಮಾಡಿ ಇದಕ್ಕೆ ಕೈಹಾಕಬೇಕಾಗಿತ್ತು. ನನಗೆ ಈ ಮಸೂದೆಯ ಮೇಲೆ ಮಾತನಾಡಬೇಕೆಂಬ ಇರಾದೆಯಿರಲಿಲ್ಲ. ಆದರೆ ಈ ಬಿಲ್ಲನ್ನು ಓದಿದ ಮೇಲೆ ಇದರಿಂದ ನಾಳೆ ಹಳೆಯ ಮೈಸೂರಿನವರಿಗೆ ಎಷ್ಟು ತೊಂದರೆಯಾಗುತ್ತದೆಂಬುದು ನನಗೆ ಅರಿವಾಗಿ ಇಲ್ಲಿರತಕ್ಕ ಒಂದೊಂದು ಕ್ಲಾಜೂ ಮನಸ್ಸನ್ನು ಚುಚ್ಚುತ್ತಿದೆ. ಇಲ್ಲಿ ಸರ್ಕಾರದವರು ಹೇಳಿರತಕ್ಕ ಡೆಫಿನಿಷನ್ ಕ್ಲಾಜ್ ಬಹಳ ಅರ್ಥಗರ್ಭಿತವಾಗಿದೆ.

"agricultural year", "Commissioner", "consolidation of holdings", "consolidation Officer", "Co-operative Society", has been defined.

"fragment" means a plot of land of less extent than the appropriate standard area determined under this act :

Provided that no plot of land shall be deemed to be fragment by reason of any diminution in its area by diluvian."

ಇಲ್ಲಿ ಹೇಳಿರತಕ್ಕ ಸ್ಟಾಂಡರ್ಡ್ ಏರಿಯಾ ಎಂದರೇನೆಂಬುದನ್ನು ನಾನು ಇದರಲ್ಲೆಲ್ಲಾ ಹುಡುಕಿದೆ, ಅದು ಎಲ್ಲಿಯೂ ನನಗೆ ಸಿಕ್ಕಲಿಲ್ಲ. ಸ್ಟಾಂಡರ್ಡ್ ಏರಿಯಾ ಎಂದರೇನು ? ಅನ್ ಸ್ಟಾಂಡರ್ಡ್ ಏರಿಯಾ ಎಂದರೇನು ? ಅನ್‌ಸ್ಟಾಂಡರ್ಡ್ ಏರಿಯಾ ಎಂದು ಯಾವಾಗ ಕರೆಯಬೇಕು? ಅದೇನು 10 ಗುಂಟೆಯೇ, 10 ಎಕರೆಯೇ, 100 ಎಕರೆಯೇ ಎಂಬುದನ್ನು ತಿಳಿದುಕೊಳ್ಳಲು ಇದರಲ್ಲೆಲ್ಲಾ ಹುಡುಕಿ ನೋಡಿದೆ, ಎಲ್ಲಿಯೂ ಸಿಕ್ಕಲಿಲ್ಲ. ಇನ್ನು ಹೇಳಿರತಕ್ಕ ಫ್ರಾಗ್‌ಮೆಂಟ್ ಎಂದರೇನು? ಸ್ವಾಮಿ, ಈ ದಿವಸ ಸರ್ಕಾರದವರಿಗೆ ಸ್ಟಾಂಡರ್ಡ್ ಏರಿಯಾ ಎಷ್ಟಿರಬೇಕು ಅನ್ನುವುದು ಗೊತ್ತಿಲ್ಲ.

"(1) 'standard area' in respect of any class of land means the area which the State Government may, from time to time, determine under Section 5 as the minimum area necessary for profitable cultivation in any particular local area and includes the standard area revised under the said section ;"

ಇಲ್ಲಿ ಹೇಳಿರತಕ್ಕದ್ದನ್ನು ನೋಡಿದರೆ—ನಾಳೆ ಸರ್ಕಾರದವರು ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿಯ ಸ್ಟಾಂಡರ್ಡ್ ಏರಿಯಾ ನಿರ್ಧರಿಸುವಂತೆ ಕಂಡುಬರುತ್ತಿದೆ. ಟಿ. ನರಸೀಪುರಕ್ಕೇ ಒಂದು ಸ್ಟಾಂಡರ್ಡ್ ಏರಿಯಾ, ಚಾಮರಾಜನಗರಕ್ಕೇ ಒಂದು ಸ್ಟಾಂಡರ್ಡ್ ಏರಿಯಾ, ಮಂತ್ರಿಗಳ ತಾಲ್ಲೂಕಿಗೇ ಒಂದು ಸ್ಟಾಂಡರ್ಡ್ ಏರಿಯಾ, ಮುತ್ತುಕದ ಹಳ್ಳಿಗೇ ಒಂದು ಸ್ಟಾಂಡರ್ಡ್ ಏರಿಯಾ ಮಾಡಬಹುದು ಎಂಬುದನ್ನು ಇಲ್ಲಿ ತಿಳಿಸಲಾಗಿದೆ. ಆದರೆ ನನಗೆ ಇಲ್ಲಿಯವರೆಗೂ ಸ್ಟಾಂಡರ್ಡ್ ಏರಿಯಾ ಎಂದರೇನೆಂಬುದೇ ತಿಳಿದಿಲ್ಲ. ಅದನ್ನು ನನಗೆ ರಾಜಸ್ವ ಮಂತ್ರಿಗಳು ತಿಳಿಸಬೇಕಾಗಿದೆ. ಇನ್ನು ನಾಳೆ ಸೆಕ್ಷನ್ (5) ರಲ್ಲಿ ಹೇಳಿರುವಂತೆ ನಿಗದಿ ಮಾಡಿದನಂತರ ಎಂದರೆ, ಹಾಗೆ ನಿಗದಿ ಮಾಡತಕ್ಕವರು ಯಾರು ? ಯಾವಾಗ ಅವರು ನಿಗದಿ ಮಾಡುವುದು ? ಅದನ್ನು ಎಷ್ಟು ಕಾಲದಲ್ಲಿ ನಿಗದಿಮಾಡುತ್ತಾರೆ ಎಂಬುದು ಗೊತ್ತಾಗಲಿಲ್ಲ. ಅದನ್ನು ಅವರು ಯಾವ ಆಧಾರದ ಮೇಲೆ ನಿಗದಿ ಮಾಡುತ್ತಾರೆಂಬುದೂ ಸಹಾ ಗೊತ್ತಿಲ್ಲ. ಒಂದು ಕೆರೆಯ ಕೆಳಗೆ ಒಂದು ಸಾವಿರ ಎಕರೆ ಭೂಮಿಯಿದ್ದರೆ ಅಲ್ಲಿ ಒಂದು ಸಾವಿರ ಸಂಸಾರಗಳಿರುತ್ತವೆ. ಅದು ತುಕಡಿ ತುಕಡಿಯಾಯಿತು ಅನ್ನುವುದಾದರೆ, ನಾಳೆಯ ದಿನ ಅಲ್ಲಿ ಎಷ್ಟು ಜನರು ಬೇಸಾಯ ಮಾಡಿಕೊಂಡಿರಬೇಕು ! ಉಳಿದವರ ಗತಿಯೇನಾಗಬೇಕು ಇದು ಖಂಡಿತ ಅರ್ಥವಿಲ್ಲದ ಕಾನೂನು. ಮಾನ್ಯ ಮಂತ್ರಿಗಳು ವಿಮಾನದಲ್ಲಿ ಹೋಗುತ್ತಿದ್ದಾಗ ಜಮೀನೆಲ್ಲ ತುಂಡುತುಂಡಾಗಿ ಕಂಡಿತೆಂದು ಹೇಳಿದರು. ಅದನ್ನು ಈಗ ಒಂದುಗೂಡಿಸಬೇಕೆಂದು ಅವರು ಹೊರಟಿದ್ದಾರೆ. ಮಾನ್ಯ ಮಂತ್ರಿಗಳು ಬೇರೆ ರಾಷ್ಟ್ರಗಳಿಗೆ ಹೋಗಿದ್ದಾಗ ಅಲ್ಲಿ ಹಾಗಿರಲಿಲ್ಲವೆಂದು ಹೇಳಿದರು. ಅಲ್ಲಿ ಇದನ್ನು ಯಾವ ಆಧಾರದ ಮೇಲೆ ಮಾಡಿದ್ದಾರೆ, ಅಲ್ಲಿ ಎಕನಾಮಿಕ್ ಹೋಲ್ಡಿಂಗ್ ಅಂದರೆಷ್ಟು, ಹೇಗೆ ಭೂಮಿಯನ್ನು ಕನ್‌ಸಾಲಿಡೇಷನ್ ಮಾಡಿದ್ದಾರೆಂಬುದನ್ನು ಹೇಳಿದ್ದರೆ ಚೆನ್ನಾಗಿತ್ತು. ಇದರ ಮೇಲೆ ವ್ಯಾಖ್ಯಾನ ಮಾಡುತ್ತಾ ಹೋದರೆ ಸಾಯಂಕಾಲದವರೆಗೂ ಮಾತನಾಡಬಹುದು, ಅಷ್ಟೊಂದು ಇದರಲ್ಲಿ ಅಳವಡಿಸಿದ್ದೀರಿ.

CLAUSE 8 : No land in any local area shall be transferred or partitioned or sub-divided so as to create a fragment.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಇದನ್ನು ಹೇಗೆ ಮಾಡಬೇಕು ? ಅದಕ್ಕೇ ಕೇಳಿದೆ. ಸೆಕ್ಷನ್ ಎಂಟರೊಳಗೆ ನಾಲ್ಕು ಜನ ಅಣ್ಣ ತಮ್ಮಂದಿರು ಇದ್ದಾರೆ, ಒಬ್ಬನು ಇಂಗ್ಲೆಂಡಿಗೆ ಹೋಗಿ ಎಫ್. ಆರ್. ಸಿ. ಎಸ್. ಮಾಡಿಕೊಂಡು ಬರಬೇಕೆಂದು ಅಪೇಕ್ಷೆಪಡುತ್ತಾನೆ, ತುಂಗಭದ್ರಾ ನಾಲೆಯ ಕೆಳಗೆ ಜಮೀನು ಇರುತ್ತದೆ ಆಗ ಅವನು ಅವರ ಅಪ್ಪನನ್ನು ನನಗೆ ನನ್ನ ಭಾಗ ಮಾಡಿ ಕೊಡು ಎಂದು ಕೇಳುತ್ತಾನೆ. ಅದೇ ರೀತಿ ಇನ್ನೊಬ್ಬ ಬೆಂಗಳೂರಿನಲ್ಲಿದ್ದುಕೊಂಡು ಎಂ.ಬಿ.ಬಿ.ಎಸ್. ಪಾಸ್ ಮಾಡಿಕೊಂಡು ಜೀವನ ಮಾಡಬೇಕೆಂದು ಇರುತ್ತಾನೆ, ಅಂತಹ ಸಂದರ್ಭದಲ್ಲಿ ನೀವು ಫ್ರಾಗ್‌ಮೆಂಟೇಷನ್ ಮಾಡಬೇಡಿ ಎಂದು ಹೇಳಿದರೆ ಅವರಿಗೆ ದುಡ್ಡು ಕೊಡುವವರು ಯಾರು ! ಶ್ರೀಮಂತರು ದುಡ್ಡು ಕೊಡುತ್ತಾರೆಯೇ ? ಅವರಿಗೆ ಹಣ ಕೊಡಲು ಹಣವಂತರು ಮುಂದೆ ಬರುತ್ತಾರೆಯೇ ? ಜಮೀನನ್ನೇ ನಂಬಿಕೊಂಡು ತನ್ನ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು ಎಂದು ಅಪೇಕ್ಷೆಯನ್ನಿಟ್ಟುಕೊಂಡಿರತಕ್ಕಂತಹವರಿಗೆ ಇದು ಒಂದು ಕುಠಾರಪ್ರಾಯವಾಗಿದೆ. ಅದ್ದರಿಂದ ನನ್ನ ಸಲಹೆ ಏನೆಂದರೆ, ಇದಕ್ಕೆ ಯಾವ ಪರಿಣತರ ಸಮಿತಿಯೂ ಕೂಡ ಬೇಕಾಗಿಲ್ಲ. 64ರಲ್ಲಿ ತಾವು ರಿಲಿಜಿಯಸ್ ಎಂಡೋಮೆಂಟ್ ಬಿಲ್ ತಂದು ಯಾವ ರೀತಿ ಕೋಲ್ಡ್ ಸ್ಟೋರೆಜ್‌ನಲ್ಲಿ ಇಟ್ಟಿದ್ದೀರೋ ಅದೇ ರೀತಿ ಇದನ್ನೂ ಕೂಡ ಸ್ವಲ್ಪ ಕಾಲ ಕೋಲ್ಡ್ ಸ್ಟೋರೇಜ್‌ನಲ್ಲಿ ಇಡಿ. ದೇವರ ದಯದಿಂದ ಪಾಕೀಸ್ತಾನ ನಾಶವಾಗಿ, ಚೈನಾ ಸರ್ವನಾಶವಾಗಿ ಹಿಂದೂಸ್ಥಾನದಲ್ಲಿ ಮತ್ತೆ 1967ರಲ್ಲಿ ಚುನಾವಣೆ ನಡೆದರೆ ಈ ಬಿಲ್‌ನಿಂದ ತಮಗೆ ಅಪಘಾತವಾದೀತು ಎಂಬ ಭಯ ಇದೆ ; ಆದ್ದರಿಂದ ಸರ್ಕಾರದಲ್ಲಿ ಬಹಳ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ ವ್ಯವಸಾಯಗಾರರಿಗೆ ಈ ಬಿಲ್ಲು ಬಹಳ ಕುಠಾರಪ್ರಾಯವಾಗಿದೆ. ಆದ್ದರಿಂದ ಇದನ್ನು ಮಾಡಬಾರದು ; ಇದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗಬೇಕಾಗಿಲ್ಲ, ಯಾವ ಪರಿಣತರೂ ಇದನ್ನು ಪರಿಶೀಲನೆ ಮಾಡಬೇಕಾಗಿಲ್ಲ ಸರ್ಕಾರದವರು ಇದನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri R. S. HEGDE (Honnawar).—Sir, while congratulating the Revenue Minister for the introduction of the Mysore Prevention of Fragmentation and Consolidation of Holdings Bill, 1964, I must at once say that the proposed Act with suitable amendments is bound to afford good basis for the effective and intensive implementation of the modern method of cultivation and as such it is bound to be definite land mark in the development of the agricultural sector. By and large it is a progressive piece of legislation. The traditional Indian sentimental feeling attached to land should inevitably be sacrificed in the interest of national agricultural development. Sir, it has been repeatedly stressed by the Planning Commission and land experts in India, that there is a great pressure on agricultural land as nearly 70 per cent is supposed to be occupied with agriculture; so much so it has affected production in the food front. Even to relieve the pressure on land, the proposed Act is a Penaced. With Hindu system of joint family and partition of property, almost every two or three generations, with the present rate of human production the time is not too far when a situation will arise that the lands will be cut into small pieces and the bunds generally erected to demarcate the boundary between different owners might eat away half of the aggregate area affecting production to a great extent. The criticism is that we have only fragments and they should not create doubts regarding the bona fides under the Act. What the Act aims at is not to encourage the acts of parties resulting in future fragments and to legally back up all those acts which support consolidation.

In the preamble to the Act, it is provided to prevent the fragmentation and to provide for the consolidation of holdings. With this objective in view the proposed Act has to be examined. Nevertheless, I make the following suggestions.

The definition in clause 2 (c) is not happy. It is not contemplated in the Act that the Government is to snatch away the lands from the owners and distribute to others. Besides, the word 'fragment' does not appear in that definition of "consolidation of holding" when the very scheme is to consolidate the fragments. Section 2 (1) has to be suitably modified. Standard area is not going to be uniform throughout the State. Natural, topographical historical, sociological and other considerations with regard to agricultural operation have to be necessarily taken into account while fixing the area. Government should not be empowered to fix the standard area. It must be left to the legislature.

In Section 5 (2) the standard area should not be revised often. The Act must be given a fair trial for atleast 25 years. Revision of the area will create unnecessary complications.

Section 7 deserves to be re-examined. Section 7 prohibits the creation of the lease in respect of a fragment. But it is very important to note that Section 7 does not make provision for prohibition of the transfer of an existing lease which is a fragment. Suitable provision has to be made preventing transfer of a lease which is a fragment. The wording of the Act is analogous to the Bombay Act. The High Court of Mysore held that it is not applicable to leases which are fragments Proviso to Section 7 rightly provides for mortgages of a fragment to Government, Co-operative Society, Land Mortgage Bank. A land holder can mortgage his property to any one of these institutions. But it must necessarily be provided that when these lands are to be sold, to realise the debt they must be purchased by a contiguous holder of land.. When once the Government or the co-operative society or a bank is to sell the property for the realisation of the debt, a condition has to be imposed that when it is auctioned it must be purchased only by a person who is a contigous owner. When you are imposing certain limits with regard to auction sales by courts, I should envisage a situation when such conditions are imposed even to auction sales held by Government or held by a Bank or by a Co-operative society. Therefore the proviso also must be suitably amended so as to make a provision that in the event of sale by the Government or by a co-operative society or by a bank to which a fragment has been mortgaged, in that sale, only a contiguous owner should purchase that land.

Then Sir, Section 11 has to be examined. Under Section 11, if a fragment is sold contrary to the provisions of this Act, it is made penal. It says that he has to pay Rs. 500. He pays Rs. 500; what about his land? Section 11 (3) says that the Deputy Commissioner is to summarily evict; all-right, the Deputy Commissioner summarily evicts the person; what next? The person who sells the land will not get the land; the person to whom the property is sold will not get the land; If the Deputy Commissioner evicts a person, who is to be in possession of the land? Are you going to create a no-man's land so far as that land is concerned? Therefore, a suitable amendment has to be made so as to make it clear as to in whom the property vests after the Deputy Commissioner evicts

(SRI R. S. HEGDE)

the man from the fragment which has been sold by a person to another. Therefore, that also requires to be re-examined.

Then, finally, I submit that the fragment has to be sold to a contiguous owner. Take for instance, there are four contiguous owners by the side of a fragment; to whom it has to be sold? What I submit is even in selling a fragment to a contiguous owner, priority has to be fixed either on the basis of the area held by the contiguous owner or by some other basis.

SRI H. D. DAVE GOWDA (Holenarasipur).—Highest bidder.

SRI R. S. HEGDE.—It is not going to be auctioned. Highest bidder comes in only when there is auction. Therefore, if it is to be privately negotiated, then priority has to be fixed in cases of fragment which has to be sold to contiguous owners who are more than 4 or 5. Otherwise if this is not fixed, there is going to be certain unhealthy competition as far as the price is concerned. Therefore, with a view to create certain healthy atmosphere among the contiguous owners, it is absolutely essential that certain suitable provision has to be made in the Act with regard to fixing of priority as far as selling of a particular fragment to a contiguous owner is concerned.

Then, Sir, in Chapter 3, it must be very clearly envisaged that this Act is going to consolidate holdings which are fragments. Otherwise, there is bound to be so much of confusion regarding the implementation of Chapter 3 under this Act and also implementation of the Mysore Tenancy Act and the implementation of the Joint co-operative farming under the Co-operative Societies Act.

SRI C. J. MUCKANNAPPA.—Have you seen the fate of co-operative farming societies now?

SRI R. S. HEGDE.—I am not concerned with that. I submit that Section 15 should confine itself to consolidation of fragments only. Section 15 should not aim at redistribution of holdings which are not fragments. If it aims at redistribution of holdings which are not fragments, then there is bound to be conflict between the Tenancy Act and the provisions of the proposed Act. In order to avoid any conflict in the effective implementation of both these Acts, Chapter 3 of this Act should aim only at the consolidation of fragments and the Settlement Commissioner should only be empowered to deal with fragments which are to be disposed of by private negotiations. It is common knowledge that it is the contguous owner that will further the method of consolidation. But if there are fragments left despite elimination of private sale, the consolidation officer should only be empowered to deal with those fragments and not with the properties held by land owners which are not fragments.

Then Sri M. R. Patil made certain suggestions regarding sections 29 and 34. Regarding Section 34, he has quoted the Bombay Rule. The Rules made by the Bombay Government in my humble submission are quite consistent and those rules must be there. Otherwise, there is

going to be a conflict between section 34 of the Bombay Act and also Section 64 of the Tenancy Act. In Section 64 of the Bombay Tenancy Act, a land has to be sold to the tenant only. If a rule under fragmentation Act is not made, then the Bombay Act will be evaded. Then it need not be sold to the tenant; it can be sold to any person. So, in order to prevent such contingencies, the Bombay Act has made certain rules so that there should not be inconsistencies between the Tenancy Act and the provisions of the Fragmentation Act. Therefore while fully endorsing the principles laid down in the present Act, Sir, I submit, this Act must only be confined to the consolidation of fragments and it should not touch even the fringe of the other holdings of the owners. Thank you, Sir.

(MR. SPEAKER in the Chair).

4-30 P.M.

SRI V. S. PATIL (Belgaum).—Sir, this Bill has been introduced, I hope, with the best intention of developing agriculture in the State. Just like our Land Reforms Act, this also is an important part of developing agriculture. When we were in Bombay area, this was considered essential and an Act was passed in 1947 and it is being implemented in that area since that time. No doubt, at least on our side, the agricultural lands have been divided into such tiny portions that it has become rather difficult for the efficient working or production of the agricultural produce. By these tiny divisions, the working of schemes like the Grow More Food and others have been hampered. Not only that when these tiny portions are there which are not sufficient for any small family to subsist, still they have to remain in that villge for the sake of that tiny portion of land wasting the whole of their energy without any work, because these tiny portions do not give them complete employment for the whole year. Further these small portions are divided in such a way that if any development is thought of by cultivators, due to these unhealthy divisions, it becomes impossible for them to develop agriculture unless some surrounding portions are amalgamated with that. The result is that the cultivators are without any work and the land is practically wasted even though we can get twice or thrice the yield if they are consolidated and turned into some good area which will give full employment to the cultivator and facilitate developing them. These are the basic principles on which the Bombay Act was passed and at that time we expected that certainly good results will come out. All the Legislatures including the Parliament pass laws with the definite view to benefit the population in country as a whole. But when we leave these matters for the implementation to our beuracracy, the whole thing is turned upside down. Our Bombay Act of 1947, even though it is worked out practically in the whole of Bombay area, still it is not completely finished or the consolidation work is not at all completed throughout the whole area. Such a long period has elapsed–practically 18 years! But still all the consolidation work has

(SRI V. S. PATIL)

not at all been done and the main object with which the Act was passed, is practically frustrated by the lethergy and carelessness and lack of enthusiasm on the part of our beuracracy. The expenditure that is incurred is heavy—there is no doubt about it. But it has not proved beneficial because of lack of enthusiam and sincerity amongst our beauracrats. In order to avoid this, I feel, Sir that some changes ought to be made in the present Bill which is drafted on the lines of the Bombay Act. The provisions must be simple, must be understandable and must be less expensive. If these things are kept in view, then I feel the criticism that is levelled against the present measure may lose its force. I personally do not know the actual conditions in this area. But I feel Sir, that due to the vast increase in the population, it is quite natural and as agricultural lands are divisible to any extent, possibly the same conditions must have been prevailing in this area also. A village about 50 or 60 years back consisted of about 200-250 people. It has now swelled up to more than 1000 or 1500. So, the division of land is inevitable. But this division is not generally done on any scientific basis. They went on dividing whatever was there in equal parts between the sharers.

Sri C. J. MUCKANNAPPA.—Provide them other avenues of employment.

Sri V. S. PATIL.—That will depend upon the Government. I do not know whether our Government can do it, because they throw the burden on Delhi and Delhi sends it back directly to Bangalore or Bombay and this huge work of giving employement is being tossed from the Centre to the State and from the State to the Centre. It is a very difficult job. Unless we are shocked by some other nation or by some other calamity, just as we were shocked by the Chinese and the Pakistanis recently, unless there is some such shock, I do not think our Government will open their eyes and take up this big job of employment. They require some such shock. So, my submission is that the measure should be simplified as far as possible. The powers vested in the beuracracy should be cut down as far as possible to the minimum because we know how our beuracrats are working. We had passed a law for the betterment levy in 1961. According to Government sources or admission, we have raised more than 80 crores of rupees as loan for the construction of these big irrigation projects. They are completed. But is there any recovery? Government have appointed several officers. They are simply sitting in their places with their paraphernalia and practically doing nothing. They have done nothing at all. They become a burden on the State treasury. This is the way in which our beuracrats are working and that is the reason why all our efforts and the efforts of this House as well as of the Parliament, are not bearing fruit. That should not be the case and that is why I should like to request the Hon'ble Minister in charge of this Bill to minimise the powers given to these beuracrats

and see how best the Bill can be simplified. As my Hon'ble friend Sri M. R. Patil suggested, the U. P. Bill may be taken as the model. I have not studied it, but it is his opinion. As this Bill is going to a Joint Select Committee or a Select Committee, I think this aspect of the matter, to simplify the Bill, to curtail the powers of these officers, should be looked into and see that the real intention behind the prasent Bill is implemented. If these views are taken as the basis, I think, Sir, my friends in the old Mysore area will not object to the passing of this Bill.

Many of us, or every villager, know that it is impossible for him to meet the expenses of his family on the small piece of land that has been allotted to his share. But as there is no other employment outside, he has to stick to it, and that is creating half-starve people in our country. In order to remove all this, I think the Bill should be passed and implemented. It is not merely passing. We have passed many laws, but they have not been implemented at all.

SRI C. J. MUCKANNAPPA.—They are waiting for an auspicious hour.

SRI V. S. PATIL.—That should not be the fate of the present Bill. Take for instance, the Land Reforms Act. In Bombay that Act has been implemented from 1947 or 1948. Here, it has just come into being on the 2nd of August. But even the rules, which are required to be framed, I think, the Government has not as yet framed. They may be framing. But so many rules are required to be framed and so many matters are entrusted to the Government for framing of the rules it will require some more time for framing the rules. Then we have to establish those tribunals. All these things will require a lot of time. I think delay is always dangerous. Delay will not in any way be beneficial either to the rulers or to the ruled, either to the ruling party or to the opposition party. and in general, it will be harmful to the nation. That is why I should like to submit that the, idea to implement must be before the legislators when we pass any particular enactment. That is why I should like to request the Hon'ble Minister in charge to go through all these matters and see how we can simplify all these sections.

I have gone through these provisions. I wanted to say particular thing on these various sections or clauses. But, as the matter is going to be referred to the Joint Select Committe, I think the Committee will look into it and when the report comes up, then, I will offer my remarks on the various sections. So, Sir, I commend this Bill to the House and I hope, that all other members also will support the Bill and try to implement it.

ಶ್ರೀ ವಿ. ಮಸಿಯಪ್ಪ (ಹಿರಿಯೂರು).—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಈ ಮಾನ್ಯ ಸಭೆಯ ಮುಂದೆ ಮಂಡಿಸಿರತಕ್ಕ, 1964ನೇ ಇಸವಿಯ ಮೈಸೂರು ಪ್ರಿವೆನ್‌ಷನ್ ಆಫ್ ಫ್ರಾಗ್‌ಮೆಂಟೇಷನ್ ಅಂಡ್ ಕನ್‌ಸಾಲಿಡೇಷನ್ ಆಫ್ ಹೋಲ್ಡಿಂಗ್ಸ್ ಮಸೂದೆಯನ್ನು ನಾನು ಸಂತೋಷದಿಂದ ಸ್ವಾಗತಿಸುತ್ತೇನೆ. ಇದನ್ನು ಸ್ವಾಗತಿಸುತ್ತಾ, ಇದರಲ್ಲಿ ಕಂಡುಬರಬಹುದಾದಂಥ ಕೆಲವಾರು ಲೋಪದೋಷಗಳನ್ನು ಅಥವಾ ಇದರಲ್ಲಿರತಕ್ಕಂಥ ಕ್ಲಾಜುಗಳ ಬಗ್ಗೆ ಮುಂದೆ ಉದ್ಭವಿ

(ಶ್ರೀ ಪಿ. ಮಸಿಯಪ್ಪ)

ಸುವಂತಹ ಸಮಸ್ಯೆಗಳ ಬಗ್ಗೆ, ಈ ಮಾನ್ಯ ಸಭೆಯ ಅನೇಕ ಸದಸ್ಯರು ಕೆಲವಾರು ಅಂಶಗಳನ್ನು ಇಟ್ಟಿದ್ದಾರೆ. ಮಾನ್ಯ ರೆವಿನ್ಯೂ ಸಚಿವರು ಇದನ್ನು ಮಂಡಿಸುತ್ತಾ, ಇದು ಸೆಲೆಕ್ಟ್ ಕಮಿಟಿಗೆ ಹೋಗುವುದರಿಂದ ಪ್ರತಿಯೊಂದು ಕ್ಲಾಜನ್ನೂ ಕೂಡ ಸೆಲೆಕ್ಟ್ ಕಮಿಟಿಯು ಕೂಲಂಕಷವಾಗಿ ಪರಿಶೀಲನೆಮಾಡಿ, ಇನ್ನು ಅನೇಕ ತಿದ್ದುಪಡಿಗಳನ್ನು ಈ ಸಭೆಯ ಮುಂದೆ ಪುನಃ ತಂದು ಅದರ ವರದಿಯನ್ನು ಇಲ್ಲಿ ಚರ್ಚೆಮಾಡುವುದಕ್ಕೆ ಅವಕಾಶವಿರುವುದರಿಂದ ಹೆಚ್ಚಿನ ಚರ್ಚೆಗೆ ಈಗ ಇಲ್ಲಿ ಅಗತ್ಯವಿಲ್ಲವೆಂದು ಹೇಳಿರುವುದರಿಂದ ನಾನಾದರೂ ಮುಖ್ಯವಾದ ಒಂದೆರಡು ಅಂಶಗಳನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ಈ ಫ್ರಾಗ್‌ಮೆಂಟೇಷನ್ನನ್ನು ನಿಲ್ಲಿಸುವ ಬಗ್ಗೆ ಹೆಚ್ಚು ಪ್ರಯತ್ನ ಸರ್ಕಾರ ಮಾಡಬೇಕು. ಇದು ದೇಶದಲ್ಲಿ ಈಗಿನ ಪರಿಸ್ಥಿತಿಯಲ್ಲಿ ದಿನೇ ದಿನೇ ಈ ಜಮೀನುಗಳ ಹಂಚಿಕೆ ಅಥವಾ ಭಾಗವಾಗತಕ್ಕದ್ದು ಅನ್‌-ಇಕನಾಮಿಕ್ ಹೋಲ್ಡಿಂಗ್ ಎಂಬ ಮಟ್ಟಕ್ಕೆ ಹೋಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಹೆಚ್ಚು ಉತ್ಪಾದನಾ ದೃಷ್ಟಿಯಿಂದ ಮತ್ತು ಆರ್ಥಿಕ ದೃಷ್ಟಿಯಿಂದ ಕಡಿಮೆ ಖರ್ಚಿನಿಂದ ವ್ಯವಸಾಯ ಮಾಡತಕ್ಕ, ರೈತನಿಗೆ ಇರತಕ್ಕ ಎಲ್ಲಾ ಶಕ್ತಿಗಳನ್ನು ಪೂರ್ಣವಾಗಿ ಉಪಯೋಗಿಸುವ, ದೃಷ್ಟಿಯಿಂದ ಇದನ್ನು ಲೆಕ್ಕಹಾಕಿ ಬಹಳ ಮಟ್ಟಿಗೆ ಭೂಮಿಯನ್ನು ಹಂಚಿಕೆ ಮಾಡುವಂಥಾದ್ದನ್ನು ತಡೆಗಟ್ಟುವುದು ಈಗಿನ ಸನ್ನಿವೇಶದಲ್ಲಿ ಅವಶ್ಯಕವಾಗಿದೆಯೆಂದು ನಾನು ಒಪ್ಪಿಕೊಳ್ಳುತ್ತೇನೆ. ಅದಕ್ಕೋಸ್ಕರವೇ ಈ ಫ್ರಾಗ್‌ಮೆಂಟೇಷನ್ನನ್ನು ಜಾರಿಗೆ ತರಬೇಕೆಂದು ಸರ್ಕಾರ ಯೋಚನೆಮಾಡಿರುವುದು ಸಕಾಲಿಕವಾಗಿದೆ ಫ್ರಾಗ್‌ಮೆಂಟೇಷನ್‌ಗೆ ಸಂಬಂಧಿಸಿದ ಕ್ಲಾಜಸ್ಸಿನಲ್ಲಿ ಹೆಚ್ಚು ತೊಂದರೆ ಕಾಣುವುದಿಲ್ಲವೆಂದು ನನಗನ್ನಿಸುತ್ತದೆ. ಆದರೆ ಕನ್‌ಸಾಲಿಡೇಷನ್ ಆಫ್ ಹೋಲ್ಡಿಂಗ್ಸ್‌ನಲ್ಲಿ ಬಹಳವಾಗಿ ಯೋಚನೆಮಾಡತಕ್ಕ ಅಂಶಗಳು ಹೆಚ್ಚಾಗಿವೆ. ಅದರಲ್ಲೂ ಕೂಡ ಕನ್‌ಸಾಲಿಡೇಷನ್ ಮಾಡತಕ್ಕ ಸಂದರ್ಭದಲ್ಲಿ ಲ್ಯಾಂಡ್ ರಿಫಾರಮ್ಸ್ ಆಕ್ಟನ್ನು ಜಾರಿಗೆ ತಂದು ಅದರಲ್ಲಿನ ಸೀಲಿಂಗ್ ಆನ್ ಹೋಲ್ಡಿಂಗ್ಸ್ ಪ್ರತಿಯೊಂದು ಕುಟುಂಬಕ್ಕೆ 27 ಅಥವಾ 18 ಸ್ಟ್ಯಾಂಡರ್ಡ್ ಎಕರೆ ಎಂಬುದಾಗಿ ನಿಗದಿ ಮಾಡುವ ಸಂದರ್ಭದಲ್ಲಿ ಇದರಲ್ಲಿ ಸಣ್ಣ ಹೋಲ್ಡಿಂಗ್ಸನ್ನು ದೊಡ್ಡ ಹೋಲ್ಡಿಂಗ್ಸ್‌ನಲ್ಲಿ ಸೇರಿಸಿ ಅವನ್ನೆಲ್ಲಾ ವಿಭಾಗ ಮಾಡುವಂಥಾದ್ದು ವಿಮರ್ಶಾತ್ಮಕವಾಗಿರುವುದಾಗಿದೆ. ಎಷ್ಟು ಎಕರೆ ಸ್ಟ್ಯಾಂಡರ್ಡ್ ಏರಿಯಾ ಮಾಡುತ್ತಾರೆ ಮತ್ತು ಯಾವ್ಯಾವ ಏರಿಯಾಗಳಲ್ಲಿ ಇದನ್ನು ಜಾರಿಗೆ ತರುತ್ತಾರೆ ಅಥವಾ ವಿಲೇಜ್‌ವೈಜ್ ಹೋಬಳಿವೈಜ್, ತಾಲ್ಲೂಕುವೈಜ್ ಮಾಡುತ್ತೇವೆಂಬುದು ನಿಗದಿ ಮಾಡಿರುವುದಿಲ್ಲ. ನನಗೊಂದು ಮುಖ್ಯವಾದ ವಿಷಯವೇನೆಂದರೆ ಭೂಮಿಯ ಸ್ವಭಾವ ರೈತರಿಗೆ ಗೊತ್ತಿದೆ. ಪ್ರತಿಯೊಂದು ಭೂಮಿ ಭೂಮಿಗೂ ಒಂದು ಅಂತರವಿರುತ್ತದೆ, ಒಂದೊಂದು ಭಾಗದಲ್ಲಿ ವ್ಯತ್ಯಾಸವಿರುತ್ತದೆ. ಇದಲ್ಲದೆ ನಮ್ಮ ದೇಶದಲ್ಲಿ ವ್ಯವಸಾಯಾಭಿವೃದ್ಧಿ, ನೀರಾವರಿ ಸೌಲಭ್ಯ ಬಹಳ ಮಟ್ಟಿಗೆ ಆಗಬೇಕು. ಕೆಲವು ಕಡೆಗಳಲ್ಲಿ ಎರೆ ಭೂಮಿ, ಕೆಂಪು ಭೂಮಿ ಇರುತ್ತದೆ, ನೀರಾವರಿ ಪ್ರದೇಶಗಳು ಇರುವ ಕಡೆಗಳಲ್ಲಿ ಕೆಲವು ಕಡೆ ದೊಡ್ಡ ಕೆರೆಗಳು, ಸಣ್ಣ ಕೆರೆಗಳು, ಕಪಿಲೆ ಬಾವಿಗಳು, ಈ ರೀತಿ ಬೇರೆಬೇರೆ ಇವೆ. ಅವುಗಳಲ್ಲಿ ವ್ಯತ್ಯಾಸ ಇವೆ. ಬತ್ತದ ಬೆಳೆ ಬೆಳೆಯುವುದಕ್ಕಾಗಿ ವಾಸ್ಟ್ ಏರಿಯಾಗಳಲ್ಲಿ ಕೆಲವು ಪ್ರಾಜೆಕ್ಟುಗಳಿವೆ. ಇನ್ನು ಮಲೆನಾಡು ಪ್ರದೇಶಗಳಲ್ಲಿ ಅಡಿಕೆ ಬೆಳೆಯನ್ನು ಬೆಳೆಯುತ್ತಾರೆ. ಚಿಕ್ಕನಾಯಕನಹಳ್ಳಿ, ತಿಪಟೂರು ಮತ್ತು ಅರಸೀಕೆರೆಗಳಲ್ಲಿ ತೆಂಗು ಬೆಳೆಯನ್ನು ಬೆಳೆಯುತ್ತಾರೆ. ಇದರಲ್ಲಿ ಕನ್‌ಸಾಲಿಡೇಷನ್ ಮಾಡುವ ಸಂದರ್ಭದಲ್ಲಿ ಅಲ್ಲಿನ ಏರಿಯಾಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತಾರೆ. ಹಾಗೆಯೇ ಸಣ್ಣ ಸಣ್ಣ ತುಂಡುಗಳನ್ನು ಸೇರಿಸಿ ದೊಡ್ಡದು ಮಾಡುವ ಸಂದರ್ಭದಲ್ಲಿ ಬರೀ ಎರೆ ಭೂಮಿಯನ್ನು ಬದಲಾಯಿಸುವುದಾಗಲೀ ಅಥವಾ ಕೆಂಪು ಭೂಮಿಯನ್ನು ಬದಲಾಯಿಸುವ ಸಂದರ್ಭದಲ್ಲಾಗಲೀ ಯಾರಿಗೂ ತೊಂದರೆಯಾಗುವುದಿಲ್ಲ. ಅಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಭೂಮಿ ಇರುತ್ತದೆ. ಕೆಲವು ಕಡೆಗಳಲ್ಲಿ 10 ಪಲ್ಲ, ಅಥವಾ 12 ಪಲ್ಲ ಬತ್ತ ಬೆಳೆಯುತ್ತಾರೆ, 15 ಮಣ ಹತ್ತಿ ಬೆಳೆಯಬಹುದು—ಸ್ವಲ್ಪದರಲ್ಲಿ ಅಡ್ಜಸ್ಟ್ ಮಾಡಬಹುದು ಬತ್ತ ಅಥವಾ ಇನ್ನೊಂದು ಬೆಳೆ ಬೆಳೆಯಬಹುದು, ಆದರೆ ಅಡಿಕೆ, ತೆಂಗು, ಅಥವಾ ಹೊಗೆಸೊಪ್ಪು ಬೆಳೆ ಬೆಳೆಯುವ ಸಂದರ್ಭದಲ್ಲಿ ಸ್ವಲ್ಪ ಕಷ್ಟವಾಗುತ್ತದೆ.

ಈ ವಿಷಯವನ್ನು ಕೂಲಂಕಷವಾಗಿ ವಿಮರ್ಶೆ ಮಾಡಬೇಕು. ಮತ್ತು ಈ ವಿಷಯದಲ್ಲಿ ದೇಶಾದ್ಯಂತ ರೈತ ವರ್ಗದವರ ಅಭಿಪ್ರಾಯವನ್ನು ಸಂಗ್ರಹಣೆ ಮಾಡಬೇಕು. ಈ ಕಾನೂನನ್ನು ಜಾರಿಗೆ ತರುವುದಕ್ಕೆ ಮುಂಚೆ ಇದರ ಬಗ್ಗೆ ಸಾಧಕ ಬಾಧಕಗಳೇನಿವೆ, ಇದರಿಂದ ಒಳ್ಳೆಯ ಪರಿಣಾಮ ಉಂಟಾಗುತ್ತದೆಯೇ ಅಥವಾ ದುಷ್ಪರಿಣಾಮ ಉಂಟಾಗುತ್ತದೆಯೇ ಎಂಬುದನ್ನು ಕೂಡ ಇದಕ್ಕೆ ಸಂಬಂಧಪಟ್ಟ ಇಲಾಖೆಯವರು ದೀರ್ಘವಾಗಿ ಆಲೋಚನೆ ಮಾಡತಕ್ಕದ್ದು ಅವಶ್ಯಕವಾಗಿರುತ್ತದೆ. ಈ ಮಸೂದೆಯ ಮೂಲ ಉದ್ದೇಶ ಹೆಚ್ಚಿಗೆ ಆಹಾರವನ್ನು ಉತ್ಪಾದನೆ ಮಾಡುವುದಕ್ಕೆ ಬೇಕಾದಂತಹ

ಸೌಲಭ್ಯಗಳನ್ನು ಒದಗಿಸುವುದು. ಈ ಒಂದು ದೃಷ್ಟಿಯಿಂದ ಈ ಮಸೂದೆಯ ಮೂಲ ಉದ್ದೇಶ ಸಾರ್ಥಕವಾಗುವ ರೀತಿಯಲ್ಲಿ, ಈ ಕಾನೂನಿನಲ್ಲಿ ಅಗತ್ಯವಾಗಿ ಆಗಬೇಕಾಗಿರತಕ್ಕ ಬದಲಾವಣೆಗಳನ್ನು ಮಾಡತಕ್ಕದ್ದು ಅವಶ್ಯಕ ಎಂದು ನಾನು ಭಾವಿಸುತ್ತೇನೆ. ಸೆಲೆಕ್ಟ್ ಕಮಿಟಿಯವರು ಈ ಮಸೂದೆಯನ್ನು ಕೂಲಂಕಷವಾಗಿ ವಿಮರ್ಶೆ ಮಾಡಿ ಇದರಲ್ಲಿ ಅಗತ್ಯವಾಗಿ ಆಗಬೇಕಾಗಿರತಕ್ಕ ಬದಲಾವಣೆಗಳನ್ನು ಮಾಡಿ ಅವರು ಈ ಮಾನ್ಯ ಸಭೆಗೆ ತಮ್ಮ ವರದಿಯನ್ನು ಕೊಡುತ್ತಾರೆಂದು ನಾನು ನಂಬಿದ್ದೇನೆ. ಮತ್ತು ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿಕೊಡುವುದಕ್ಕೆ ಈ ಮಾನ್ಯ ಸಭೆಯವರು ಒಪ್ಪಿಗೆಯನ್ನು ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಂಡು ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಮಾನ್ಯ ಅಧ್ಯಕ್ಷರೇ, ಈಗ ಈ ಸಭೆಯ ಮುಂದಿರುವ ಮೈಸೂರು ಪ್ರಿವೆನ್‌ಷನ್ ಆಫ್ ಫ್ರಾಗ್ಮೆಂಟೇಷನ್ ಅಂಡ್ ಕನ್‌ಸಾಲಡೇಷನ್ ಆಫ್ ಹೋಲ್ಡಿಂಗ್ಸ್ ಬಿಲ್ಲನ್ನು ನಾನು ವಿರೋಧಿಸುತ್ತೇನೆ. ನಾನು ಅನೇಕ ವೇಳೆ ಈ ಸಭೆಯಲ್ಲಿ ಹೇಳಿದ್ದೇನೆ, ಸರ್ಕಾರದವರು ಯಾವ ಒಂದು ಕಾನೂನನ್ನು ತರಬೇಕಾದರೂ ಕೂಡ ಪೂರ್ವಭಾವಿಯಾಗಿ ಸರಿಯಾಗಿ ಸಮಾಲೋಚನೆಯನ್ನು ನಡೆಸದೆ ಅದನ್ನು ತರಬಾರದು ಎಂದು. ಇಂಥಾ ಕಾನೂನನ್ನು ತಂದು ದೇಶದಲ್ಲಿರತಕ್ಕ ರೈತ ವರ್ಗದವರಿಗೆ ಕೊಡಬಾರದ ತೊಂದರೆಯನ್ನು ಕೊಡುತ್ತಿದ್ದಾರೆ. ಇವೊತ್ತು ನಮ್ಮ ದೇಶದಲ್ಲಿ ರೈತರು ಈ ಸರ್ಕಾರ ಏತಕ್ಕೆ ಬಂತು, ಇಂಗ್ಲೀಷಿನವರು ಇದ್ದಾಗ ನಾವು ಎಷ್ಟೋ ಸುಖವಾಗಿದ್ದೆವು, ಎಂದು ಹೇಳುತ್ತಿದ್ದಾರೆ. "ಮಾರಿ ಕಣ್ಣು ಹೋತನ ಮೇಲೆ" ಎನ್ನುವ ಹಾಗೆ ಸರ್ಕಾರದ ಕಣ್ಣು ಯಾವಾಗಲೂ ರೈತರ ಮೇಲೆಯೇ ಇರುತ್ತದೆ. ರೈತರ ಮಕ್ಕಳಾದ ಶ್ರೀಮಾನ್ ಕೃಷ್ಣಪ್ಪನವರು ಸರ್ಕಾರದ ಕಣ್ಣು ರೈತರ ಮೇಲೆ ಬೀಳದ ಹಾಗೆ ಮಾಡಬೇಕು, ನಿಮಗೆ ಸಾಧ್ಯವಾದರೆ ರೈತರಿಗೆ ಉಪಕಾರವನ್ನು ಮಾಡಿ, ಇಲ್ಲದಿದ್ದರೆ ಅವರ ತಂಟೆಗೆ ಹೋಗಬೇಡಿ. ಎಂದು ಕೇಳಿಕೊಳ್ಳುತ್ತೇನೆ. ರೈತರಿಗೆ ಸಂಬಂಧಪಟ್ಟ ಕಾನೂನುಗಳನ್ನು ಒಂದಾದ ಮೇಲೆ ಒಂದು ತರುತ್ತಿದ್ದಾರೆ. ಈಗಾಗಲೇ ಲ್ಯಾಂಡ್ ರಿಫಾರಮ್ಸ್ ಕಾನೂನನ್ನು ತಂದಿದ್ದಾರೆ. ಲ್ಯಾಂಡ್ ರೆವಿನ್ಯೂ ರಿವೈಜ್ ಮಾಡಿದ್ದಾರೆ. ಈ ರೀತಿಯ ಕಾನೂನುಗಳನ್ನು ತಂದು ರೈತರನ್ನು ಬಹಳವಾಗಿ ಗೋಳು ಹುಯ್ದುಕೊಳ್ಳುತ್ತಿದ್ದಾರೆ. ಇದರಿಂದ ಸರ್ಕಾರದವರಿಗೇನೂ ಒಳ್ಳೆಯದಾಗುವುದಿಲ್ಲ. ರೈತರೇ ದೇಶದ ಬೆನ್ನುಮೂಳೆ ಎಂದು ಹೇಳುತ್ತಾರೆ. ಆದರೆ ಅವರಿಗೆ ಸುಮ್ಮನೆ ಕಿರುಕುಳವನ್ನು ಕೊಡುತ್ತಾರೆ. ಇದು ನ್ಯಾಯವಲ್ಲ ಎಂದು ನಾನು ಹೇಳುತ್ತೇನೆ. ನಮಗೆ ಸ್ವರಾಜ್ಯ ಬಂದ ಮೇಲೆ ನಮ್ಮ ದೇಶದಲ್ಲಿ ಒಂದೇ ಸರ್ಕಾರ ಆಡಳಿತವನ್ನು ನಡೆಸುತ್ತಿದೆ. ಈ ಮಸೂದೆಯ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ "Both the first Five-Year plan and the Second Five-Year plan have emphasised that in all States, Programmes for Consolidation of Holdings should be expanded and pursued with vigour." ಎಂದು ಹೇಳಿದ್ದಾರೆ. ಹೀಗಿದ್ದರೂ ಕೂಡ ಇದುವರೆಗೂ ಇವರು ಏನು ಮಾಡುತ್ತಿದ್ದರು ! ಫ್ರಾಗ್ಮೆಂಟೇಷನ್ ಅನ್ನು ಪ್ರಿವೆಂಟ್ ಮಾಡಬೇಕೆಂಬ ಅಭಿಪ್ರಾಯ ಸರ್ಕಾರಕ್ಕೆ ಇದ್ದಾಗ ಜನಗಳು ತಮ್ಮ ಜಮೀನನ್ನು ಮಾರಾಟ ಮಾಡುವುದಕ್ಕೆ, ಫ್ರಾಗ್ಮೆಂಟೇಷನ್ ಮಾಡುವುದಕ್ಕೆ ಸರ್ಕಾರದವರು ಏತಕ್ಕೆ ಅವಕಾಶವನ್ನು ಕೊಟ್ಟರು ! ಜಮೀನನ್ನು ಭಾಗ ಮಾಡಕೂಡದು ಎಂದು ಏತಕ್ಕೆ ಕಾನೂನನ್ನು ಮಾಡಲಿಲ್ಲ ? ಇದುವರೆಗೂ ಏತಕ್ಕೆ ಸುಮ್ಮನೆ ಕಣ್ಣುಮುಚ್ಚಿಕೊಂಡು ಕುಳಿತುಕೊಂಡಿದ್ದರು ? ನಮ್ಮ ಹಳೆಯ ಮೈಸೂರು ಪ್ರದೇಶದಲ್ಲಿ ಆಕಾರ-ಬಂದು ಎಂದು ಇತ್ತು. ವಿಲೇಜ್ ಮ್ಯಾಪ್ ಅಂದರೆ ನಕಾಶೆಯಲ್ಲಿ ಸರಿಯಾದ ಸರ್ವೆ ನಂಬರ್ಸ್ ಮಾಡಿ ಪ್ರತಿಯೊಂದು ಹಳ್ಳಿಗೂ ಹಂಚಿಕೆಯಾಗತಕ್ಕಂಥ ಒಂದು ಲೆಕ್ಕವನ್ನು ತಯಾರು ಮಾಡುತ್ತಿದ್ದರು. ನಮಗೆ ಸ್ವರಾಜ್ಯ ಬಂದ ಮೇಲೆ ರೆಕಾರ್ಡ್ ಆಫ್ ರೈಟ್ಸ್ ಬಂತು. ಮ್ಯುಟೇಷನ್ ರಿಜಿಸ್ಟರ್ ಬೇರೆ ಇಟ್ಟಿದ್ದಾರೆ. ಈಗ ಪ್ರತಿಯೊಂದು ಸರ್ವೆನಂಬರಿಗೂ ಸಬ್ ನಂಬರ್ ಮಾಡಿ ಅದಕ್ಕೆ ಒಂದು ಅಟ್ಲಾಸ್ ಬುಕ್ ಮಾಡಿದ್ದಾರೆ. ಮೊದಲು ಇಷ್ಟು ಫ್ರಾಗ್ಮೆಂಟೇಷನ್ ಇರಲಿಲ್ಲ. ಸರ್ವೆ ನಂಬರ್ ಒಂದು ಯೂನಿಟ್ ಆಗಿತ್ತು. ಸಾಮಾನ್ಯವಾಗಿ ಒಂದು ಸರ್ವೆನಂಬರ್ ಒಂದು ಸಂಸಾರಕ್ಕೆ ಸಾಕಾಗಿತ್ತು. ರೆಕಾರ್ಡ್ ಆಫ್ ರೈಟ್ಸ್ ಮಾಡದೆ ಇದ್ದರೆ ಇವೊತ್ತು ಈ ಕಾನೂನನ್ನು ತರಬೇಕಾಗಿತ್ತು. ಅದನ್ನು ಏತಕ್ಕೆ ಮಾಡಿದರು ? ಈ ತರಹ ಫ್ರಾಗ್ಮೆಂಟೇಷನ್ ಮಾಡಕೂಡದು ಸರ್ವೆ ನಂಬರ್‌ಗಳು ಯೂನಿಟ್ಟಾಗಿರಬೇಕು ಸಬ್ ನಂಬರ್ ಆಗಿ ಡಿವೈಡ್ ಮಾಡಕೂಡದು ಎಂದು ಮಾಡಿದ್ದರೆ ಚೆನ್ನಾಗಿತ್ತು. ಈಗ ರೆಕಾರ್ಡ್ ಆಫ್ ರೈಟ್ಸ್ ಮಾಡಿ ಅದರಲ್ಲಿ ಬೇಕಾದಷ್ಟು ಎಂಟ್ರೀಸ್ ಮಾಡಿ ಅದು ಹನುಮಂತರಾಯನ ಬಾಲ ಬೆಳೆದ ಹಾಗೆ ಬೆಳೆದುಕೊಂಡು ಹೋಗುತ್ತಿದೆ. ಇವೊತ್ತು ರೆಕಾರ್ಡ್ ಆಫ್ ರೈಟ್ಸ್‌ನಲ್ಲಿ ಅನೇಕ ಎಂಟ್ರಿಗಳನ್ನು ಮಾಡಿ ನೂರಾರು ಸಬ್ ನಂಬರುಗಳನ್ನು ಮಾಡಿದ್ದಾರೆ. ಈಗ ಅದನ್ನು ಕಿತ್ತುಹಾಕಬೇಕೆಂದು ಈ ಕಾನೂನನ್ನು ತಂದಿದ್ದಾರೆ. ಇದನ್ನು ಸರ್ಕಾರದವರು ಸ್ವಲ್ಪ

(ಶ್ರೀ ಎಚ್. ಆರ್. ಕೇಶವಮೂರ್ತಿ)

ಯೋಚನೆ ಮಾಡಬೇಕು. ಲಿಮಿಟೇಷನ್ ಆಫ್ ಹೋಲ್ಡಿಂಗ್ಸ್ ಮಿನಿಮಮ್ ಎಕ್ಸ್‌ಟೆಂಟ್ ಎಷ್ಟು ಇರಬೇಕೆಂಬುದಕ್ಕೆ ಇದರಲ್ಲಿ ಒಂದು ಸಲಹೆಯನ್ನು ಮಾಡಿದ್ದಾರೆ. ಈ ಮಸೂದೆಯ ಕ್ಲಾಜ್ (4) ರಲ್ಲಿ; The State Government may, after such enquiry as it deems fit and after Consultation with such authority as may be prescribed provisionally settle for any class of land in any local area the Minimum area that can be Cultivated profitably as a separate plot.'' ಎಂದು ಹೇಳಿದ್ದಾರೆ. ಇದು ಅರ್ಥವಿಲ್ಲದ್ದು. ಇದರಲ್ಲಿ ಒಂದು ಡೆಫಿನೆಟ್ ಆದ ಪ್ರಾಪೋಜಿಷನ್ ಇಲ್ಲ. ಈ ಮಸೂದೆಯ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ '' During Consolidation proceedings, noboby will become landless however small his holdings may be, and big holders will not get enlarged holdings'' ಎಂದು ಹೇಳಿದ್ದಾರೆ. ಆಮೇಲೆ ಸ್ಟ್ಯಾಂಡರ್ಡ್ ಏರಿಯಾ ಇಷ್ಟು ಎಂದು ಫಿಕ್ಸ್ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಸ್ಟ್ಯಾಂಡರ್ಡ್ ಏರಿಯಾವನ್ನು ಯಾವ ರೀತಿ ಫಿಕ್ಸ್ ಮಾಡುತ್ತಾರೆಂಬುದು ಗೊತ್ತಾಗಲಿಲ್ಲ. ಇಂಥಾ ವಿರೋಧಾಭಾಸವಾದ ಕಾನೂನನ್ನು ಏತಕ್ಕೆ ಸರ್ಕಾರದವರು ತರುತ್ತಾರೆಂದು ನಾನು ಅವರನ್ನ ಕೇಳುತ್ತೇನೆ. ಸ್ಟ್ಯಾಂಡರ್ಡ್ ಏರಿಯಾ ಫಿಕ್ಸ್ ಮಾಡುತ್ತೇವೆ ಎಂದರೆ ಬರೀ ಭೂಮಿಯ ವಿಸ್ತೀರ್ಣದ ಮೇಲೆ ಹೆಚ್ಚು ಬೆಳೆಯನ್ನು ಬೆಳೆಯುವುದಕ್ಕಾಗುವುದಿಲ್ಲ. ಒಂದು ಲಾಭದಾಯಕವಾದ ಬೆಳೆ ಬರಬೇಕಾದರೆ ಅದಕ್ಕೆ ರೈತನ ಒಂದು ಪ್ರಯತ್ನ ಬೇಕು. ಒಳ್ಳೆಯ ಮೆನ್ಯೂರ್ ಬೇಕು. ಇಂಟೆನ್‌ಸೀವ್ ಕಲ್ಟಿವೇಷನ್ ಬೇಕು. ಎಷ್ಟೇ ದೊಡ್ಡ ಜಮೀನು ಇದ್ದರೂ ಕೂಡ ಅದು ಸೋಮಾರಿಯಾಗಿರತಕ್ಕ ರೈತನ ಕೈಗೆ ಸೇರಿ ಅವನು ಸರಿಯಾಗಿ ವ್ಯವಸಾಯ ಮಾಡದಿದ್ದರೆ ಆ ಹೋಲ್ಡಿಂಗ್ಸ್ ಲಾಭದಾಯಕವಾಗುವುದಿಲ್ಲ. ಆದ್ದರಿಂದ ಈ ಕಾನೂನು ಪ್ರಕಾರ ಲೋಕಲ್ ಏರಿಯಾದಲ್ಲಿ ಯಾವುದು ಲಾಭದಾಯಕವಾದ ಏರಿಯಾ ಆಗುತ್ತದೆ ಎಂದು ತಾವು ಆಲೋಚನೆ ಮಾಡುತ್ತೀರಿ, ಯಾವ ಆಧಾರದ ಮೇಲೆ ಸ್ಟ್ಯಾಂಡರ್ಡ್ ಏರಿಯಾವನ್ನು ಫಿಕ್ಸ್ ಮಾಡುತ್ತೀರೆಂದು ನಾನು ಕೇಳುತ್ತೇನೆ. ಒಟ್ಟಿನಲ್ಲಿ ರೈತರಲ್ಲಿರತಕ್ಕ ಹೆಚ್ಚಿಗೆ ಜಮೀನನ್ನು ಕಿತ್ತುಕೊಳ್ಳಬೇಕೆಂದು ಸರ್ಕಾರದವರ ಉದ್ದೇಶ ಇರಬಹುದು. ಆದರೆ ಅವರಿಗೆ ಸ್ಲೋಪಾಯ್ಜನ್ ಕೊಟ್ಟು ಅವರನ್ನು ಸಾಯಿಸುವ ಉದ್ದೇಶ ಈ ಕಾನೂನಿನಲ್ಲಿ ಇದೆ. ಬೇರೆ ದೇಶಗಳಲ್ಲಿ ಎಂದರೆ ಚೈನಾದೇಶದಲ್ಲಿ 1948 ನೇ ಇಸವಿಯಲ್ಲಿ ಅಲ್ಲಿದ್ದಂಥಾ ಜಮೀನೆಲ್ಲವನ್ನೂ ನ್ಯಾಷನಲೈಜ್ ಮಾಡಿದರು. ಆಗ ಆ ದೇಶದಲ್ಲಿ ಎಷ್ಟು ಜನ ಇದ್ದಾರೆ ಎಷ್ಟು ಜಮೀನು ಇದೆ ಎಂಬುದನ್ನೆಲ್ಲಾ ಲೆಕ್ಕಾಚಾರಹಾಕಿ ಒಂದು ಕುಟುಂಬಕ್ಕೆ ಒಬ್ಬ ಮನುಷ್ಯನಿಗೆ ಇಷ್ಟಿಷ್ಟು ಎಕರೆ ಜಮೀನು ಎಂದು ಹಂಚಿದರು. ಆದ್ದರಿಂದ ಅಲ್ಲಿ ರೈತರಿಗೆ ತಲೆನೋವು ಇಲ್ಲ. ಆ ತರಹ ಕಾನೂನನ್ನು ಇಲ್ಲಿಯೂ ತಂದು ನಮ್ಮ ದೇಶದಲ್ಲಿ ಎಷ್ಟು ಎಕರೆ ಜಮೀನು ಇದೆ, ಎಷ್ಟು ಜನಗಳಿದ್ದಾರೆ, ಎಂಬುದನ್ನೆಲ್ಲಾ ಲೆಕ್ಕಹಾಕಿ ಅದನ್ನು ಏತಕ್ಕೆ ಹಂಚಬಾರದು ! ಈ ತರಹ ಅರ್ಥವಾಗದೆ ಇರುವ ಕಾನೂನನ್ನು ತಂದು ರೈತರಿಗೆ ತಲೆ ನೋವನ್ನುಂಟು ಮಾಡುತ್ತಿದ್ದಾರೆ. ಇದು ನ್ಯಾಯವೇ ? ಜಪಾನಿನಲ್ಲಿ ಬೆಟ್ಟಗುಡ್ಡಗಳ ಮೇಲೆಲ್ಲಾ ಸರ್ವೆ ಮಾಡಿದ್ದಾರೆ. ಅಲ್ಲಿ ಸಣ್ಣ ಪ್ಲಾಟುಗಳು ಇವೆ. ಅಲ್ಲಿ ರೈತರು ಪ್ರಯತ್ನಮಾಡಿ ಇಂಟೆನ್‌ಸೀವ್ ಕಲ್ಟಿವೇಷನ್ ಮಾಡಿ ಇಷ್ಟು ಪ್ರಾಫಿಟ್ ಬರಬೇಕೆಂದು ಲೆಕ್ಕಾಚಾರ ಹಾಕಿಕೊಂಡು, ಬೆಳೆಯನ್ನು ಬೆಳೆದು, ಅವರು ಇಡೀ ವಿಶ್ವಕ್ಕೇ, ಮಾದರಿಯಾಗಿದ್ದಾರೆ. ಹೀಗಿರುವಾಗ ಯಾವ ಆಧಾರದ ಮೇಲೆ ಸ್ಟ್ಯಾಂಡರ್ಡ್ ಏರಿಯಾ ಫಿಕ್ಸ್ ಮಾಡುತ್ತೀರಿ ! ನೀವು ಯಾವರೀತಿ ಬೇಕಾದರೂ ಕಾನೂನನ್ನು ಮಾಡಿ. ನಮ್ಮ ದೇಶದ ಕಾನೂನುಗಳಲ್ಲಿ ಸಿವಿಲ್ ಲಾಸ್ ಇವೆ, ಆ ಕಾನೂನು ಪ್ರಕಾರ ಜಾಯಿಂಟ್ ಫ್ಯಾಮಿಲಿಯಲ್ಲಿ ಇರತಕ್ಕವರು ಪ್ರತಿಯೊಬ್ಬರೂ ಜಮೀನು ತೆಗೆದುಕೊಳ್ಳುವುದಕ್ಕೆ ಹಕ್ಕು ಇರುತ್ತದೆ. ಇಂಗ್ಲೆಂಡಿನಲ್ಲಿ ಭೂಮಿ ಎಲ್ಲಾ ದೊಡ್ಡ ಮಗನಿಗೆ ಹೋಗುತ್ತದೆ. ಸಿವಿಲ್ ಕಾನೂನನ್ನು ಬದಲಾಯಿಸಿದರೆ ಕನ್‌ಸಾಲಿಡೇಷನ್ ಮಾಡಬೇಕಾದ ಅವಶ್ಯಕತೆ ಇರುವುದಿಲ್ಲ. ಜಮೀನು ಎಷ್ಟು ಇರುತ್ತದೆಯೋ ಅಷ್ಟೆಲ್ಲಾ ಹಿರಿಯಮಗನಿಗೇ ಹೋಗುತ್ತದೆ. ಆ ರೀತಿಯ ಕಾನೂನನ್ನು ಏತಕ್ಕೆ ಮಾಡಬಾರದು ! ನೀವು ಮಾಡತಕ್ಕ ಕಾನೂನು ಯಾವಾಗಲೂ ಕಾಂಪ್ಲಿಕೇಟಾದ ಕಾನೂನಾಗಿರುತ್ತದೆ. ಇದರಿಂದ ಲೀಗಲ್ ಪ್ರೊಫೆಷನ್ನಿನಲ್ಲಿರುವವರಿಗೆ ಕೆಲವರಿಗೆ ಆಹಾರವನ್ನ ದೊರಕಿಸಿಕೊಟ್ಟಹಾಗಾಗುತ್ತದೆ. ಈ ಕಾನೂನಿನಲ್ಲಿ ಬೇಕಾದಷ್ಟು ಡಿಸ್‌ಪ್ಯೂಟ್ಸ್ ಬರುತ್ತವೆ. ಆದ್ದರಿಂದ ಲಾಯರುಗಳಿಗೆ ಆದಾಯವನ್ನು ದೊರಕಿಸಿಕೊಟ್ಟಂತಾಗುತ್ತದೆಯೇ ಹೊರತು ಇದರಿಂದ ಬೇರೆ ಯಾವ ಪ್ರಯೋಜನವೂ ಆಗುವುದಿಲ್ಲ ಎಂದು ಮಾತ್ರ ನಾನು ಹೇಳಬಲ್ಲೆ.

ಇನ್ನು ಈ ಮಸೂದೆಯ ಕ್ಲಾಜುಗಳಿಗೆ ಬಂದರೆ ಇದರಲ್ಲಿ ಕ್ಲಾಜ್ (7) ರಲ್ಲಿ '' No person shall transfer any fragment in respect of which a notice has been given

under sub-section (2) of section 6, except to the owner of " Contiguous survey number or recognised sub-division of a survey number." ಎಂದು ಹೇಳಿದ್ದಾರೆ. ಇದು ನ್ಯಾಯವೇ ? ಈಗ ಒಂದು ಗ್ರಾಮದಲ್ಲಿ ಒಂದೇ ಸರ್ವೆ ನಂಬರಿನಲ್ಲಿ ಬೇರೆ ಒಬ್ಬ ಮನುಷ್ಯನ ಜಮೀನು ಇದ್ದರೆ ಅವನು ಪಕ್ಕದ ಜಮೀನನ್ನು ಕಡಿಮೆ ಖರೀದಿಗೆ ಕೇಳುತ್ತಾನೆ. ಆ ಜಮೀನಿಗೆ ಹೆಚ್ಚಿಗೆ ಬೆಲೆ ಇದ್ದರೂ ಕೂಡ ಅದನ್ನು ಅವನಿಗೆ ಕಡಿಮೆ ಬೆಲೆಗೆ ಕೊಟ್ಟು ಜಮೀನ್ದಾರನು ತನಗೆ ಬರತಕ್ಕ ಆದಾಯವನ್ನು ಕಳೆದುಕೊಂಡು ಅವನು ಜಮೀನನ್ನ ಕೊಡಬೇಕೇ ಎಂಬುದನ್ನು ಆಲೋಚನೆ ಮಾಡಬೇಕು. ಒಂದು ಸರ್ವೆ ನಂಬರಿನ ಪಕ್ಕದಲ್ಲಿ ಇನ್ನೊಬ್ಬರು ಇರುತ್ತಾರೆ. ಆ ಸರ್ವೆ ನಂಬರಿನ ಜಮೀನನ್ನು ಮಾರಬೇಕಾದ ಸಂದರ್ಭ ಬರುತ್ತದೆ. ಆ ಜಮೀನು ಪಕ್ಕದವನಿಗೆ ಸಿಕ್ಕದ ಹಾಗೆ ಮಾಡಬೇಕೆಂದು ಅವನಿಗೆ ಎದುರು ಪಾರ್ಟಿ ಆ ಜಮೀನಿನ ಬೆಲೆಯನ್ನು ಏರಿಸುತ್ತಾನೆ. ಅಥವಾ ಒಂದು ಸಾವಿರ ರೂಪಾಯಿ ಬೆಲೆ ಇರುವ ಜಮೀನಿಗೆ 10 ರೂಪಾಯಿ ಕೊಡುತ್ತೇನೆಂದು ಹೇಳುತ್ತಾನೆ. ಆಗ ಆಸೆ ಹುಟ್ಟಿಸುತ್ತೀರಿ—ಜಮೀನು ಮಾರುವವನಿಗೆ ಹೆಚ್ಚು ದುಡ್ಡು ಕೊಟ್ಟು ತೆಗೆದುಕೊಳ್ಳುವುದಕ್ಕೆ ಕೊಳ್ಳುವವನಿಗೆ ಹೇಗೆ ಸಾಧ್ಯ ? ಅದೂ ಅಲ್ಲದೆ, ಕನ್‌ಸಾಲಿಡೇಷನ್ ಆಫೀಸರಿಗೆ ಅಧಿಕಾರ ಕೊಡುತ್ತೀರಿ. ಸಾಮಾನ್ಯವಾಗಿ ನಿಷ್ಠುರಾದ ಅಧಿಕಾರಿಗಳಿದ್ದರೆ ಪರವಾಗಿಲ್ಲ. ಅದಿಲ್ಲವಿದ್ದರೆ, ಅಧಿಕಾರಿಗಳಿಗೆ ಅಪ್ರಮಾಣಿಕರಾಗಲು ಅವಕಾಶ ಕಲ್ಪಿಸಿ ಕೊಟ್ಟಹಾಗಾಗುತ್ತದೆ.

5-00 P.M.

SETION 9 : Restriction on partition of land—ಈಗ ಒಂದು ಜಾಯಿಂಟ್ ಫ್ಯಾಮಿಲಿಯಲ್ಲಿರುವ ಜಮೀನನ್ನು ವಿಭಾಗ ಮಾಡಬೇಕಾಗಿದ್ದರೆ, ಫ್ರಾಗ್‌ಮೆಂಟೇಶನ್ ಇಲ್ಲದಹಾಗೆ ಮಾಡಬೇಕು ಎಂದು ಹೇಳುತ್ತೀರಿ. ಇದನ್ನು ಹೇಗೆ ಮಾಡುವುದು ? ಈಗ ಒಂದು ಕುಟುಂಬದಲ್ಲಿ ಅಣ್ಣ ತಮ್ಮಂದಿರಿದ್ದರೆ, ಮೂರು ತರಹ ಜಮೀನಿದ್ದರೆ, ಖುಷ್ಕಿ, ತರಿ, ಬಾಗಾಯಿತು, ಈ ರೀತಿ ಮೂರು ತರಹ ಜಮೀನು ಇರುತ್ತದೆ. ಅದರಲ್ಲಿ ತೆಂಗು, ಅಡಿಕೆ ಹಂಬು ಇರುತ್ತದೆ, ಗದ್ದೆ ಇರುತ್ತದೆ. ಇವಿಷ್ಟನ್ನೂ ಎಲ್ಲರೂ ಹಂಚಿಕೊಳ್ಳುವುದು ಬೇಡವೆ ? ವಿಳ್ಳೇದೆಲೆ ತೋಟವಿರುತ್ತದೆ, ಗದ್ದೆ ಇರುತ್ತದೆ ಊರೊಳಗೆ ಹುಲ್ಲು ಬಣವೆ ಇರುತ್ತದೆ. ಹುಲ್ಲನ್ನು ಒಟ್ಟಿಕೊಳ್ಳುವುದಕ್ಕೆ ಭೂಮಿ ಬೇಡವೇ ? ಹಂಚಿಗೆ ಬೇಡವೆ ?

> "Where, by transfer, decree, succession or otherwise, two or more persons are entitled to shares in an undivided agricultural land in any local area for which standard areas have been fixed, and the land has to be partitioned among them, such partition shall be affected so as not to create a fragment."

ಅಂತ ಹೇಳುತ್ತೀರಿ. ಅದು ಹೇಗೆ ಸಾಧ್ಯ ? ಒಂದೇಕಡೆ, ತೆಂಗಿನತೋಟ, ವಿಳ್ಳೇದೆಲೆ ತೋಟ, ಹುಲ್ಲುಹಿತ್ತಲು, ಇದನ್ನೆಲ್ಲಾ ಎಲ್ಲರಿಗೂ ಕೊಡಬೇಕೆಂದರೆ ಸಾಧ್ಯವೆ ? ಏಕೆಂದರೆ ಪ್ರತಿಯೊಬ್ಬ ಪಾಲುದಾರರೂ ತಮಗೆ ಎಲ್ಲತರಹದಲ್ಲಿಯೂ ಅವರವರ ಭಾಗ ಬೇಕೆನ್ನಬಹುದು. ಹೀಗೆ ಕಾನೂನು ಮಾಡಿರುವುದು ನ್ಯಾಯವೆ ? Is it practicable ? ತಾವೇ ಆಲೋಚನೆಮಾಡಿ ಈ ವಿಷಯದಲ್ಲಿ.

14. Fragment not to be sold in Court sale or created such sale. ಇದು ಸಾಧ್ಯವೇ ? Is it not a controversial clause ? ಈ ತರಹ ಮಾಡಿದರೆ, ಕೋರ್ಟಿನವರು ಒಪ್ಪುತ್ತಾರೆಯೇ ? ಮೈಸೂರು ಹೆರಿಡಿಟರಿ ವಿಲೇಜ್ ಆಫೀಸೆಸ್ ಅಬಾಲಿಶನ್ ಆಕ್ಟಿಗೆ ಏನು ಗತಿ ಆಯಿತೊ ಇದಕ್ಕೂ ಅದೇ ಆಗುತ್ತದೆ. ಇನ್ನೂ ಕೆಲವು ಆಕ್ಟುಗಳಿಗೆ ಕೋರ್ಟಿನಿಂದ ಸ್ಟೇ ಕೊಟ್ಟಿದ್ದಾರೆ. ಅದೇ ಪ್ರತಿಫಲ ಈ ಮಸೂದೆಗೆ ಆಗುತ್ತದೋ ಎಂದು ನನ್ನ ಭಾವನೆ.

16. Preparation of the scheme and the principle to be followed in such preparation. ಕನ್‌ಸಾಲಿಡೇಷನ್ ಆಫೀಸರ್ ಅಂತ ಮಾಡಿಕೊಂಡಿದ್ದೀರಿ. He happens to be the hero of this whole Act. ಅವರಿಗೆ ಸಾಮಾನ್ಯವಾಗಿ ಒಬ್ಬ ಡೆಪ್ಯುಟಿ ಕಮೀಶನರ ಪವರ್ ಕೊಡಬೇಕು. ನೀವು ಈಗಾಲೇ ಜಿಲ್ಲೆಗೆ ಇಬ್ಬರು ಡೆಪ್ಯುಟಿ ಕಮೀಶನರನ್ನು ಮಾಡುತ್ತಾ ಇದ್ದೀರಿ. ಪ್ರತಿ ಜಿಲ್ಲೆಗೂ ಮೂರನೆ ಡೆಪ್ಯುಟಿ ಕಮೀಶನರನ್ನು ಮಾಡಬೇಕೆಂದು ನಿಮ್ಮ ಆಸೆ, ಉದ್ದೇಶವಿದೆ. ಈ ಮೂರನೆ ಡೆಪ್ಯುಟಿ ಕಮೀಶನರ ಪದವಿಯನ್ನು ಪಡೆಯುವ ಅದೃಷ್ಟ ಯಾರಿಗೆ ಇದೆಯೋ ?

(ಶ್ರೀ ಹೆಚ್. ಆರ್. ಕೇಶವಮೂರ್ತಿ)

ಕನ್‌ಸಾಲಿಡೇಶನ್ ಆಫೀಸರು ವಿಲೇಜ್ ಪಂಚಾಯಿತಿ ಅಭಿಪ್ರಾಯ ತೆಗೆದುಕೊಂಡು ಸ್ಕೀಮು ಮಾಡಬೇಕೆಂದು ಹೇಳಿದೆ. ಎಲ್ಲರಿಗೂ ಗೊತ್ತಿರುವ ಹಾಗೆ ವಿಲೇಜ್ ಪಂಚಾಯಿತಿಗಳಲ್ಲಿ ಪಾರ್ಟಿ ಪಾಲಿಟಿಕ್ಸ್ ಇರುತ್ತದೆ. ಆ ಪಂಚಾಯಿತಿಯಲ್ಲಿ ಯಾರ ಪಾರ್ಟಿಯ ಮೆಜಾರಿಟಿ ಆಗಿರುತ್ತದೋ, ಅದು ಕನ್‌ಸಾಲಿಡೇಶನ್ ಆಫೀಸರ ಜೊತೆ ಸೇರಿಕೊಂಡು, ತಮಗೆ ಯಾರ್‍ಯಾರು ಆಗುವುದಿಲ್ಲವೋ, ಅವರಿಗೆ ಏನಾದರೂ ತೊಂದರೆ ಕೊಡಬಹುದು, ಅವರ ಜಮೀನನ್ನು ತೆಗೆದುಕೊಂಡು ಅವರನ್ನು ಇಲ್ಲ ಸಲ್ಲದ ಕಿರುಕುಳಕ್ಕೆ ಸಿಕ್ಕಿಸಬಹುದು. ಅಷ್ಟೇ ಅಲ್ಲ: ಮೆಜಾರಿಟಿ ಪಾರ್ಟಿಯಾದರೂ ಕನ್‌ಸಾಲಿಡೇಶನ್ ಆಫೀಸರೂ ಷರೀಕಾಗಿಬಿಟ್ಟರೆ, ಸಾಮಾನ್ಯ ಜನಗಳಿಗೆ ಆ ಊರಿನಲ್ಲಿರುವುದಕ್ಕೇ ಅವಕಾಶವಿಲ್ಲದೆ ಹೋಗಬಹುದು. ಈ ತರಹ ಕ್ಲಾಜಿನಿಂದ ಮುಂದೆ ಏನು ಪ್ರತಿಫಲ ದೊರೆಯುತ್ತದೆಂಬುದನ್ನು ಊಹಿಸಿಕೊಳ್ಳಿ ಎಂದು ಇಷ್ಟು ಮಾತ್ರ ತಮಗೆ ಸೂಚನೆಕೊಟ್ಟು, ಈ ಸೆಕ್ಷನ್ನನ್ನು ಇಲ್ಲಿಗೇ ಬಿಡುತ್ತೇನೆ.

17. Schemes to provide for compensation : ಕನ್‌ಸಾಲಿಡೇಶನ್ ಆಫೀಸರು ಕಾಂಪೆನ್ಸೇಶನ್ ಪ್ರೊವೈಡ್ ಮಾಡಲಿಕ್ಕೆ ಏನೇನು ಸಲಿಸೆ ಕೊಟ್ಟಿದ್ದೀರಿ? ಇದಕ್ಕೆ ಒಂದು ಸೈಂಟಿಫಿಕ್ ಬೇಸಿಸ್ ಬೇಕು. ಸೆಲೆಕ್ಟ್ ಕಮಿಟಿಯವರು, ಯಾರಿಗೂ ಅನ್ಯಾಯವಾಗದ ರೀತಿಯಲ್ಲಿ ಒಂದು ಸೈಂಟಿಫಿಕ್ ಬೇಸಿಸ್ ಅನ್ನು ತಯಾರು ಮಾಡಿ, ಆ ರೀತಿಯಲ್ಲಿ ಕಾಂಪೆನ್‌ಸೇಶನ್ ಕೊಡಿಸುವುದಕ್ಕೆ ಪ್ರಯತ್ನ ಮಾಡಬೇಕು.

19. Lands reserved for public purposes : Is it practicable? ಇದು ಖಂಡಿತವಾಗಿಯೂ ಇಲ್ಲ. (ಬಿ)ನಲ್ಲಿ ಹೇಳಿರುವಂತೆ proportionate cut ಪ್ರತಿಯೊಂದು ಸರ್ವೆ ನಂಬರಿನಲ್ಲಿಯೂ ಮಾಡುವುದು ಸರಿಯೇ? ಇಂಥ ಕಾನೂನು ಮಾಡಿದರೆ, ಇದನ್ನು ಜಾರಿಗೆ ತರುವುದಕ್ಕೆ ಸಾಧ್ಯವೇ?

22. Right to possession of new holdings : ಮೂರನೆ ಎರಡು ಭಾಗ ಜನರುಗಳು ಒಪ್ಪಿದಿದ್ದರೆ, ಏನು ಬೇಕಾದರೂ ಮಾಡಬಹುದು ಎಂದು ಹೇಳಿದ ಹಾಗಾಯಿತು ಇದರಿಂದ, constitutional guarantee, (fundamental rights to a citizen) ಉಳಿಸಿಕೊಂಡು ಹೋದಹಾಗೆ ಆಯಿತೆ? ಪ್ರತಿಯೊಬ್ಬನಿಗೂ ಮೂಲಭೂತವಾದ ಒಂದು ಅಧಿಕಾರವಿದೆ, ಅದನ್ನು ಎಕ್ಸರ್‌ಸೈಸ್ ಮಾಡಲು ಅವಕಾಶವಿರಬೇಕು. ಒಂದು ಬ್ರೂಟ್ ಮೆಜಾರಿಟಿ ಇದೆಯೆಂದು ಮೂಲಭೂತ ಹಕ್ಕುಗಳನ್ನು ಮೊಟಕು ಮಾಡಬಾರದು. If two-thirds do not agree to enter into possession ಅಂದರೆ, where is the safety for the minority? Fundamental rights infringe ಮಾಡಿದ ಹಾಗೆ ಆಗುವುದಿಲ್ಲವೆ? ಇದು ಈ ಕ್ಲಾಜಿನಲ್ಲಿ ಇದೆಯೊ ಇಲ್ಲವೋ ಅನ್ನುವುದನ್ನು ನೀವು ಯೋಚನೆ ಮಾಡಬೇಕು.

29. Stay of certain proceedings and ban on transfer of land during the continuance of consolidation proceedings :

ಇದರಲ್ಲಿ ತಾವು ಏನೇ ಹೇಳಿದರೂ, ಒಂದು ಮಾತ್ರ ಹೇಳುತ್ತೇನೆ. (ಎ) (1) ರಲ್ಲಿ ಹೀಗೆ ಹೇಳಿದೆ

> "for realisation of the land revenue and other revenue demands either by forfeiture, attachment, distraint and sale of movable or immovable property of a defaulter."

ಲ್ಯಾಂಡ್ ರೆವಿನ್ಯೂ ಕೋಡಿನಲ್ಲಿ 158 ಸೆಕ್ಷನ್ನಿನಲ್ಲಿ ಏನು ಇದೆ ಎಂದರೆ :

> "The claim of the State Government shall have precedence over all others. The claim of the State Government to any moneys recoverable under the proceedings of this chapter shall have precedence over any other demand or claim whether in respect of mortgage or, etc.."

ಇದರಲ್ಲಿ ಯಾವುದು ನ್ಯಾಯ? ಲ್ಯಾಂಡ್ ರೆವಿನ್ಯೂ ಕೋಡಿನಲ್ಲಿರುವುದು ಸರಿಯೆ, ಈ ಮಸೂದೆಯಲ್ಲಿರುವುದು ಸರಿಯೇ?

ಇದೇ ರೀತಿಯಾಗಿ ಲ್ಯಾಂಡು ರಿಫಾರಂಸ್ ಆಕ್ಟು, ಇಂಡಿಯನ್ ರಿಜಿಸ್ಟ್ರೇಷನ್ನು ಆಕ್ಟು ಎಂದು ಇವೆ. ಇವೆಲ್ಲಾ ಒಂದಕ್ಕೊಂದು ಸೇರಿಕೊಂಡು ಇಲ್ಲಿ ಇಲ್ಲಸಲ್ಲದ ಕಾಂಪ್ಲಿಕೇಷನ್ನುಗಳಿಗೆ ಅವಕಾಶವಾಗಿದೆ. ಆದುದರಿಂದ ಇಂತಹ ಕಾನೂನನ್ನು ಏತಕ್ಕಾಗಿ ಇಲ್ಲಿ ಮಾಡಬೇಕು ?

Interruption.

ಶ್ರೀ ಹೆಚ್. ಆರ್. ಕೇಶವಮೂರ್ತಿ.—ಈ ಬಿಲ್ಲಿನಲ್ಲೇ ಇರುವಂತೆ ಎಂದರೆ ಇದರಲ್ಲಿ "Stay of certain proceedings" ಎಂದಿದೆ, ಇದರಲ್ಲಿ ಲ್ಯಾಂಡ್ ರೆವೆನ್ಯೂ ವಸೂಲಿ ಮಾಡುವ ಹಾಗೆ ಮಾಡಿದರೆ ರೈತಾಪಿ ಬಡ ಜನಗಳಿಗೆ ಬಹಳ ತೊಂದರೆಯಾಗುತ್ತದೆ. ಕಂದಾಯ ಕೊಡ ಬೇಕಾಗಿಲ್ಲ ಎಂದರೆ Payment already made. Can it be Stayed ? (ಎ) ನಲ್ಲಿ ತಾವೇ ಓದಿ ನೋಡಿ :

(a) no proceedings :—

(1) for realisation of the land revenue and other revenue demands either by forfeiture, attachment, distraint and sale of movable or immovable property of a defaulter,......

ಎಂದಿದೆ. ಹಾಗೆ ಇದೇ ಬಿಲ್ಲಿನಲ್ಲಿರುವ ಕ್ಲಾಸು 31 (2) ರಲ್ಲಿ

> "If the holding to which a mortgage, debt or other encumbrance is transferred under sub-section (1) is of less market value than the original holding from which it is transferred, the mortgagee, creditor or other encumbrancer as the case may be, shall subject to the provisions of section 33, be entitled to the payment of such compensation by the owner of the holdings as the case may require, as the Consolidation Officer may determine. ಎಂದಿದೆ,

ಇದರೊಳಗೆ ಹೀಗೆ ಇದ್ದರೆ ತೊಂದರೆಯಾಗುತ್ತದೆ. ಯಾರೋ ಒಬ್ಬರು ಜಮೀನಿನ ಆಧಾರದ ಮೇಲೆ ಸಾಲ ಕೊಟ್ಟಿರುತ್ತಾರೆ, ಆದರೆ ಅವರ ಸಾಲದ ಹಣ ಪಡೆಯಲು ಈಗ ಈ ಬಿಲ್ಲಿನಂತೆ ಅವಕಾಶ ಇರುವುದಿಲ್ಲ, ಇಲ್ಲದ ತೊಂದರೆಗಳಿಗೆ ಅಂತಹ ಜನ ಸಿಗಬೇಕಾಗುತ್ತದೆ. ಇದರ ಬಗ್ಗೆ ಈಗಾಗಲೇ ಮಾತನಾಡಿದ ಮಾನ್ಯ ಸದಸ್ಯರಾದ ಶ್ರೀಮಾನ್ ಎಂ. ಆರ್. ಪಾಟೀಲರು ಕೂಡ ಹೇಳಿದರು. ಲ್ಯಾಂಡು ಪಾರ್ಟಿಷನ್ನುಗಳನ್ನು ಮಾಡುವಾಗ ಇಲ್ಲದ ತರಲೆಗಳಿಗೆ ಅವಕಾಶ ಮಾಡಿಕೊಟ್ಟ ಹಾಗಾಗುತ್ತದೆ. ಇಂತಹವುಗಳಿಗೆ ಅವಕಾಶ ಕೊಡಬಾರದು. ಕಾನೂನು ಮಾಡುವಾಗ ಇಲ್ಲದ ಸಲ್ಲದ ವ್ಯವಹಾರಗಳು ಬರುವಂತೆ ಮಾಡಬಾರದು. ಹಾಗೇ ಅಲೀಯನೇಷನ್ ಮಾಡುವಾಗಲೂ ತೊಂದರೆಗಳಾಗುತ್ತವೆ. ಇದರಲ್ಲಿನ ಸೆಕ್ಷನ್ನು 34 ರಲ್ಲಿ ಹೀಗೆ ಇದೆ :

> 34. Alienation of and sub-division of consolidated holdings: Notwithstanding anything contained in any law for the time being in force, no holding allotted under this Act, nor part thereof shall be :—
>
> (b) sub-divided (including sub-division by a decree or order of Civil Court or any other competent authority) except with the permission in writing of the State Government."

ಇದು ಹೇಗೆ ಸಾಧ್ಯ ಎಂದು ನಾನು ಇಲ್ಲಿ ಕೇಳಬೇಕಾಗಿದೆ. ಸಾಮಾನ್ಯವಾಗಿ ಈಗ ಪ್ರೊಹಿಬಿಷನ್ನು ಲಾ ಎಂದು ಮಾಡಿದಿರಿ, ಅದರಿಂದೇನೂ ಜನಕ್ಕೆ ಅನುಕೂಲವಾಗಲಿಲ್ಲ. ಕುಡಿಯುವವನು ಕುಡಿಯುತ್ತಲೇ ಇದ್ದಾನೆ. ಅದನ್ನು ತಪ್ಪಿಸುವುದಕ್ಕೆ ಆಗಲಿಲ್ಲ. ಸುಮ್ಮನೆ ಕಾನೂನು ಎನ್ನುವುದು ಕಾಗದದಲ್ಲಿ ಇದೆ. ಅದೇ ರೀತಿಯಾಗಿ ಈಗಲೂ ಕೂಡ ಈ ಕಾನೂನನ್ನು ಇಲ್ಲಿ ತಂದು ಸುಮ್ಮನೆ ಬರೀ ಕಾಗದದಲ್ಲಿ ಇರುವಂತೆ ಮಾಡಿದರೆ ಅದರಿಂದ ಜನತೆಗೆ ಏನು ಅನುಕೂಲ ಮಾಡಿದಂತಾಯಿತು ?

(ಶ್ರೀ ಹೆಚ್. ಆರ್. ಕೇಶವಮೂರ್ತಿ)

ಹಾಗೇ ಇದರಲ್ಲಿರುವ 36 ನೇ ಕ್ಲಾಜನ್ನು ನೋಡಿ. ಇದರಲ್ಲಿ Power to vary scheme on the ground of error, irregularity or informality: (1) If after a scheme has come into force, it appears to the State Government that the scheme is defective on account of an error etc...etc...

ಇದರಲ್ಲಿರುವಂತೆ ತಪ್ಪುಗಳನ್ನು ಯಾರು ಎಂದು ಸರಕಾರಕ್ಕೆ ತಿಳಿಸುವವರು ! ಅದನ್ನು ಯಾರು ಸರಿ ಮಾಡುತ್ತಾರೆ? ಇದರಿಂದ ಇಲ್ಲದ ಸಲ್ಲದ ತೊಂದರೆಗಳು ರೈತಾಪಿ ಜನಕ್ಕೆ ಆಗುತ್ತದೆ. ಇದೇ ನಾಗಿದೆ ಎಂದರೆ ' ಬೆಕ್ಕಿಗೆ ಚೆಲ್ಲಾಟ ಇಲ್ಲಿಗೆ ಪ್ರಾಣಸಂಕಟ ' ಎನ್ನುವಂತೆ ಬಡ ರೈತರ ಸ್ಥಿತಿಯಾಗಿದೆ. ಇದರಿಂದೇನೂ ಜನಕ್ಕೆ ಪ್ರಯೋಜನವಾಗುವುದಿಲ್ಲ. ಸುಮ್ಮನೆ ರೈತರನ್ನು ಗೋಳುಹುಯ್ಯುವುದಕ್ಕಾಗಿ ಮಾಡುವಂತಹ ಕಾನೂನಾಗಿದೆ. ಬಡ ಜನ ತಮ್ಮ ಭೂಮಿಯನ್ನುಳಿಸಿಕೊಳ್ಳಲು ಇದರಿಂದಾಗು ವುದಿಲ್ಲ, ಇಂತಹವುಗಳಿಗೆ ಅವಕಾಶ ಕೊಡಬಾರದು.

ಇನ್ನು 37 ನೇ ಕ್ಲಾಸಿನಲ್ಲಿ ಹೀಗಿದೆ :

Power to vary or revoke scheme at any time :—

A scheme for the consolidation of holdings confirmed under this Act may, at any time, be varied or revoked by a subsequent scheme prepared, published and confirmed in accordance with this Act."

ಇಂತಹುದನ್ನು ಏತಕ್ಕಾಗಿ ಇಲ್ಲಿ ಪ್ರೊವೈಡು ಮಾಡಿದ್ದೀರಿ? ಇದರಿಂದೇನು ಅನುಕೂಲ ವಾಗುತ್ತದೆ ಎಂದು ನಾನು ಇಲ್ಲಿ ಕೇಳಬೇಕಾಗಿದೆ.

ಹಾಗೇ ಕ್ಲಾಸು 46 ರಲ್ಲಿ

"BAR OF JURISDICTION : (1) No Civil Court shall have jurisdiction to settle, decide or deal with any question which is by or under this Act required to be settled, decided or dealt with by the State Government or any officer or authority."

Is it not a challenge to the Constitution and the right of the Court? ಎಂದು ನಾನು ಇಲ್ಲಿ ಕೇಳುತ್ತೇನೆ.

ಒಟ್ಟಿನಲ್ಲಿ ನಾನು ಆಗಲೇ ಇದರ ಬಗ್ಗೆ ಹೇಳಿದಂತೆ ಹಾಗೂ ಮಾನ್ಯ ಸದಸ್ಯರಾದ ಶ್ರೀ ಪಿ. ಎಸ್. ಪಾಟೀಲರವರೂ ಹೇಳಿದಂತೆ ಕಾನ್‌ಸಾಲಡೇಷನ್ ಆಫ್ ಹೋಲ್ಡಿಂಗ್ಸ್ ಎಂದು ಮಾಡಬೇಕಾದರೆ ಮೆಕನೈಸೇಷನ್ ಆಫ್ ಅಗ್ರಿಕಲ್‌ಚರ್‌ಗೆ ಇಲ್ಲಿ ಏರ್ಪಾಡು ಮಾಡಬೇಕು. ಅಮೆರಿಕಾ ದೇಶದಲ್ಲಿ ಮೆಕನೈಸ್ಡ್ ಅಗ್ರಿಕಲ್‌ಚರ್ ಇದೆ ಮತ್ತು ಅಲ್ಲಿ ಜನ ಅದಕ್ಕೆ ಹೊಂದಿಕೊಂಡಿದ್ದಾರೆ. ಅವರಿಗೆ ಬೇಕಾಗುವ ಟ್ರಾಕ್ಟರುಗಳು ಇತ್ಯಾದಿ ಉಪಕರಣಗಳನ್ನು ಅವರೇ ತಯಾರುಮಾಡಿ ಉಪಯೋಗಿಸು ತ್ತಿದ್ದಾರೆ. ಅದೇ ರೀತಿಯಾಗಿ ನಮ್ಮಲ್ಲೂ ಕೂಡ ಟ್ರಾಕ್ಟರುಗಳು ಇತ್ಯಾದಿ ವ್ಯವಸಾಯಕ್ಕೆ ಬೇಕಾಗುವ ಸಾಧನ ಸಲಕರಣೆಗಳನ್ನು ಒದಗಿಸಿಕೊಟ್ಟರೆ ನಮ್ಮ ಜನರೂ ಕೂಡ ಇಲ್ಲಿ ವ್ಯವಸಾಯ ಮಾಡಲು ಅನುಕೂಲವಾಗ ಬಹುದು. ಈಗ ಇರುವಂತೆ ಈ ಕಾನೂನನ್ನು ತಂದರೆ ಇಲ್ಲದ ಲೀಗಲ್ ಕಾಂಪ್ಲಿಕೇಷನ್ನುಗಳು ಬರಲು ಅವಕಾಶವಾಗುತ್ತದೆ. ಇದಕ್ಕೆ ಅವಕಾಶಕೊಡಬಾರದು. ಇಂತಹ ಕಾನೂನು ಮಾಡುವುದರಿಂದ ರೈತಾಪಿ ಜನಕ್ಕೆ ಏನೂ ಅನುಕೂಲವಾಗುವುದಿಲ್ಲ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಸ್ವಾಮಿ, ಸರ್ಕಾರದವರು ಭೂ ಹಿಡುವಳಿಗ ಳನ್ನು ಒಂದುಗೂಡಿಸುವ ಹಾಗೂ ಭೂಮಿ ಛಿದ್ರೀಕರಣವಾಗುವುದನ್ನು ತಡೆಗಟ್ಟತಕ್ಕ ಬಗ್ಗೆ ಈ ಒಂದು ಮಸೂದೆಯನ್ನು ಸಭೆಯ ಮುಂದೆ ಮಂಡಿಸಿದ್ದಾರೆ.

ಈ ಮಸೂದೆಯು ಸೆಲೆಕ್ಟ್ ಸಮಿತಿಯ ಮುಂದೆ ಹೋಗುತ್ತದೆ, ಎನ್ನುವ ಕಾರಣದಿಂದ ಇದರ ಮೇಲಿನ ಚರ್ಚೆಯನ್ನು ಆದಷ್ಟು ಮಿತಿಗೊಳಿಸಲಾಗಿದೆಯೆಂದು ನಾನು ತಿಳಿದುಕೊಂಡಿದ್ದೇನೆ.

Mr. SPEAKER.—Whoever said that? The member wanted 15 minutes and he is having 15 minutes.

ಶ್ರೀ ಎಸ್. ಗೋಪಾಲ ಗೌಡ.—ನಮ್ಮ ರಾಜ್ಯದಲ್ಲಿ ಭೂಸುಧಾರಣಾ ಕಾನೂನು ಜಾರಿಗೆ ಬಂದಮೇಲೆ, ಈಗ ಸರ್ಕಾರದವರು ಈ ಮಸೂದೆಯನ್ನು ಜಾರಿಗೆ ತರಲು ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಈಗಾಗಲೇ ಈ ಕಾನೂನು ಮುಂಬೈ ಕರ್ಣಾಟಕದಲ್ಲಿ 1947 ರಲ್ಲೇ ಜಾರಿಗೆ ಬಂದಿದೆಯೆಂದೂ, ಹೈದ್ರಾಬಾದ್ ಕರ್ಣಾಟಕದಲ್ಲಿ 1956 ರಲ್ಲೇ ಜಾರಿಗೆ ಬಂದುದಾಗಿ ಮಾನ್ಯ ಸಚಿವರು ತಿಳಿಸಿದ್ದಾರೆ. ಅಷ್ಟೇ ಅಲ್ಲದೆ ಈ ಕಾನೂನು ಪ್ರಕಾರ ಈಗಾಗಲೇ 11 ಲಕ್ಷ ಎಕರೆಗಳಷ್ಟು ಭೂಮಿಯನ್ನು, ಅಂದರೆ ಛಿಧ್ರ ಛಿಧ್ರವಾಗಿದ್ದ ಭೂಮಿಯನ್ನು ಒಂದುಗೂಡಿಸಲಾಗಿದೆ ಎಂದು ಹೇಳಿದರು. ಈ ಮಸೂದೆಯ ಉದ್ದೇಶವೇನೋ ಸ್ವಾಗತಾರ್ಹವಾದುದೇ. ಉಳುಮೆ ಮಾಡತಕ್ಕ ರೈತನಿಗೆ ಸಾಕಷ್ಟು ಜಮೀನಿರಬೇಕು, ಅವನ ಕೃಷಿ ಲಾಭದಾಯಕವಾಗಿರಬೇಕು, ಅವನ ಹಿಡುವಳಿ ಭೂಮಿ ಒಂದು ಆರ್ಥಿಕ ಹಿಡುವಳಿಯಾಗಿ ಮಾರ್ಪಾಡಾಗಬೇಕು ಎಂದು ಹೇಳತಕ್ಕದ್ದೆಲ್ಲವೂ ಅಗತ್ಯವಾದವುಗಳೇ ಆಗಿವೆ. ರಾಷ್ಟ್ರೀಯವಾಗಿ ಕೃಷಿಯ ಉತ್ಪತ್ತಿಯನ್ನು ಹೆಚ್ಚು ಮಾಡುವ ದೃಷ್ಟಿಯಿಂದ ಹಾಲಿ ಇರುವ ಅನಾರ್ಥಿಕ ಹಿಡುವಳಿಗಳನ್ನು ಆರ್ಥಿಕ ಹಿಡುವಳಿಗಳನ್ನಾಗಿ ಮಾಡಬೇಕೆಂಬುದು ಅವಶ್ಯಕವಾದ ಒಂದು ಬೇಡಿಕೆಯಾಗಿದೆ. ಆದರೆ ದುರಾದೃಷ್ಟದಿಂದ ದೇಶಕ್ಕೆ ಸ್ವಾತಂತ್ರ್ಯ ಬಂದು 18 ವರ್ಷಗಳಾದಾಗ್ಯೂ, ದೇಶದಲ್ಲಿ ಕೃಷಿಯನ್ನು ವೃದ್ಧಿಮಾಡಿ ಆಹಾರ ಧಾನ್ಯಗಳನ್ನು ಹೆಚ್ಚು ಮಾಡತಕ್ಕ ಬಗ್ಗೆ, ಹಾಗೂ ಭೂಮಿಯನ್ನು ಉಳತಕ್ಕ ರೈತನಿಗೂ ಮತ್ತು ಉಳತಕ್ಕ ಭೂಮಿಗೂ ಇರತಕ್ಕ ಸಂಬಂಧವನ್ನು ಖಚಿತಗೊಳಿಸತಕ್ಕ ಬಗ್ಗೆ ಇಲ್ಲಿ ಯಾವ ಪ್ರಯತ್ನಗಳೂ ನಡೆಯದಿರುವುದರಿಂದ ಇಲ್ಲಿ ಯಾವ ಪ್ರಗತಿಯೂ ಆಗದೆ ನಿಂತಿದೆ. ನೆನ್ನೆಯ ದಿವಸ ಯಾರೋ ಹೇಳಿದಂತೆ ನಾವು ಈ ದಿವಸ ತಿನ್ನತಕ್ಕ ಮೂರು ಚಪಾತಿಗಳಲ್ಲಿ ಒಂದು ಚಪಾತಿ ಭಿಕ್ಷೆ ಬೇಡಿ ತಂದ ಗೋಧಿಯಿಂದ ತಯಾರಿಸಿ ತಿನ್ನುತ್ತಿದ್ದೇವೆ ಎಂಬುದು ವಾಸ್ತವ. ಅಂದರೆ ನಮ್ಮಲ್ಲಿರತಕ್ಕ 36 ಕೋಟಿ ಎಕರೆ ಭೂಮಿ 46 ಕೋಟಿ ಜನರಿಗೆ ಅನ್ನ ಕೊಡಲಾರದಂಥದ್ದಾಗಿದೆ ಅನ್ನುವುದು ಈಗ ಎಲ್ಲರಿಗೂ ಸ್ಪಷ್ಟವಾಗಿ ತಿಳಿದಂತಾಗಿದೆ. ಇದಕ್ಕೆ ಅನೇಕ ಕಾರಣಗಳು ಇವೆ. ಅವುಗಳನ್ನು ನಾನೀಗ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ನಮ್ಮ ಸರ್ಕಾರ ಇಂಥ ಒಂದು ಮಸೂದೆಯ ಬಗ್ಗೆ ಪ್ರಗತಿಪರವಾದ ಹೆಜ್ಜೆಯನ್ನಿಟ್ಟಿರಲ್ಲ. ರಾಜ್ಯಗಳ ವಿಲೀನೀಕರಣವಾಗಿ ಮುಂಬೈ ಕರ್ಣಾಟಕ, ಹೈದ್ರಾಬಾದ್ ಕರ್ಣಾಟಕ, ಕೊಡಗು, ಬಳ್ಳಾರಿ, ದಕ್ಷಿಣ ಕನ್ನಡ ಈ ಭಾಗಗಳು 1956 ರಲ್ಲೇ ಒಂದಾಗಿ ಸೇರಿದುವು. ಈಗ 1965 ರ ತನಕ ನಮ್ಮ ಸರ್ಕಾರ ಇಂಥ ಯಾವ ಒಂದು ವಿಚಾರಕ್ಕೂ ಕೈಹಾಕದೆ ಭೂಮಿಯ ಸಂಬಂಧದಲ್ಲಿ ಆಗಬೇಕಾಗಿದ್ದ ಯಾವ ಒಂದು ಮಾರ್ಪಾಡುಗಳನ್ನೂ ಮಾಡದೆ ವಿಳಂಬ ಮಾಡಿದ್ದರಿಂದ ಪರಿಸ್ಥಿತಿ ಇಷ್ಟು ಹದಗೆಡುವುದಕ್ಕೆ ಕಾರಣವಾಯಿತು ಎಂದು ಹೇಳಬಹುದು. ಆದರೆ ಮಾನ್ಯ ಸಚಿವರು ಈ ಮಸೂದೆಯನ್ನು ಮಂಡಿಸತಕ್ಕ ಕಾಲದಲ್ಲಿ ಇದರಲ್ಲಿ ಅಂಥ ಕಾಂಟ್ರವರ್ಸಿಯೇನೂ ಇಲ್ಲ, ಇದರಿಂದ ಯಾರೂ ಭೂಮಿಯನ್ನು ಕಳೆದುಕೊಳ್ಳುವುದೂ ಇಲ್ಲ, ಇದರಿಂದ ಭೂಮಿ ಯಾರಿಗೂ ದೊಡ್ಡದೂ ಕೂಡ ಆಗುವುದಿಲ್ಲ ಎಂಬುದಾಗಿ ಹೇಳಿದರು. ಈಗ ಈ ಮಸೂದೆಯಲ್ಲಿ ಹೇಳಿರತಕ್ಕದ್ದನ್ನು ನೋಡಿದರೆ, ಇದರಿಂದ ಹೇಗೆ ಉದ್ದೇಶವನ್ನು ಸಾರ್ಥಕಗೊಳಿಸಲು ಸಾಧ್ಯವಾಗಬಹುದು ಅನ್ನುವುದನ್ನು ಆಲೋಚನೆ ಮಾಡುವುದಾದರೆ, ಮುಂದೆ ಇದರಲ್ಲಿ ಹೇಳಿರುವಂತೆ ಒಂದು ತುಂಡು ಭೂಮಿ ಎಂದರೇನು ಎಂಬುದನ್ನು ನಿರ್ಧರಿಸಿ, ಆರ್ಥಿಕ ಹಿಡುವಳಿ ಇಂತಿಷ್ಟು ಎಕರೆಗಳಿಗಿಂತ ಕಡಮೆಯಾಗಿರಬಾರದು ಎಂಬುದನ್ನು ನಿರ್ಧರಿಸಿ, ಇನ್ನು ಫ್ರಾಗ್‌ಮೆಂಟೇಷನ್ ಎಂದರೇನು, ಇದನ್ನು ಯಾವ ಆಧಾರದ ಮೇಲೆ ನಿರ್ಧರಿಸಲಾಗುವುದು ... ಅದನ್ನು ತರೀ ಭೂಮಿಯ ಆಧಾರದ ಮೇಲೆ ನಿರ್ಧರಿಸಲಾಗುತ್ತದೆಯೋ ಅಥವಾ ಖುಷ್ಕಿ ಭೂಮಿಯ ಆಧಾರದ ಮೇಲೆ ನಿರ್ಧರಿಸಲಾಗುತ್ತದೆಯೋ ಅನ್ನುವುದನ್ನೆಲ್ಲಾ ಖಚಿತವಾಗಿ ತೀರ್ಮಾನ ಮಾಡಿದನಂತರ ಮುಂದಕ್ಕೆ ಆ ಭೂಮಿ ಪುನಃ ವಿಭಜನೆಯಾಗದಂತೆ ನೋಡಿಕೊಳ್ಳುವುದಕ್ಕೆ ಈ ಮಸೂದೆಯಿಂದ ಅವಕಾಶವಾಗಬಹುದು. ಅಂಥದನ್ನು ತಡೆಗಟ್ಟಲು ಇದರಿಂದ ಕ್ರಮ ಕೈಗೊಳ್ಳಬಹುದು. ಇದನ್ನು ಮಾನ್ಯ ಸಚಿವರು ಮಾತನಾಡುತ್ತಾ ನಮ್ಮ ದೇಶದಲ್ಲಿ 5-10 ಎಕರೆಯೊಳಗಿರತಕ್ಕ ರೈತರೇ ಶೇಕಡ 75 ರಷ್ಟು ಇರುತ್ತಾರೆಂತ ಬೇರೆ ಹೇಳಿದ್ದಾರೆ. ಹಿಂದೆ ಒಂದು ಕುಟುಂಬಕ್ಕೆ 600 ಎಕರೆ ಜಮೀನಿದ್ದರೆ ಅದು ಮುಂದಿನ ಮೂರು ತಲೆಮಾರುಗಳಲ್ಲಿ ಕುಟುಂಬಗಳು ಹಿಸ್ಸೆಯಾಗುವುದರಿಂದ ಅದು ಎರಡನೇ ತಲೆಮಾರಿಗೆ 100 ಎಕರೆಗಿಳಿಯಬಹುದು, ಅದರ ಮುಂದಿನ ತಲೆಮಾರಿನಲ್ಲಿ ಕುಟುಂಬಕ್ಕೆ ಒಂದೂವರೆ ಎಕರೆಗಿಳಿಯಬಹುದು. ನಮಗೆಲ್ಲರಿಗೂ ಈ ದಿವಸ ಗೊತ್ತಿರುವಹಾಗೆ 3-4 ಜನ ಅಣ್ಣತಮ್ಮಗಳಲ್ಲಿ ಜಗಳಗಳು ಬಂದು, ಅವರು ಗೇಣೀ ಜಮೀನಿನಲ್ಲಿರತಕ್ಕ ಅಡಕೆ ಮರಗಳನ್ನೂ ಸಹಾ 50 ಇವನಿಗೆ 50 ಅವನಿಗೆ ಎಂತ ಭಾಗ ಮಾಡಿಕೊಳ್ಳುತ್ತಿರುವುದನ್ನು ನೋಡುತ್ತಿದ್ದೇವೆ. ಇಂಥದಕ್ಕೆಲ್ಲಾ ಈಗ ಅವಕಾಶವಿದೆ. ಅನೇಕ ಕಾರಣಗಳಿಂದ ಸಮಷ್ಟಿ ಕುಟುಂಬಗಳು ಒಡೆದುಹೋಗುತ್ತಿರುವುದರಿಂದಲೂ, ಹಂಚಿಕೆ ಆಗತಕ್ಕ ಆಸ್ತಿಪಟ್ಟಿಯಲ್ಲಿ ಭೂಮಿಯನ್ನು ಸೇರಿಸಿರುವುದರಿಂದಲೂ ಈ ಒಂದು ಪರಿಸ್ಥಿತಿ ಉದ್ಭವಿಸಿದೆ. ಈ ದಿವಸ ನಮ್ಮ ದೇಶದಲ್ಲಿ ಭೂಮಿಯನ್ನೇ ಅವಲಂಬಿಸಿಕೊಂಡಿರತಕ್ಕಂಥ 100 ಜನರಲ್ಲಿ ಒಬ್ಬನಲ್ಲಿ ಅರ್ಧ ಎಕರೆ.

(ಶ್ರೀ ಎಸ್. ಗೋಪಾಲಗೌಡ)

ಇರಬಹುದು, ಇನ್ನೊಬ್ಬನಲ್ಲಿ 5 ಎಕರೆ ಇರಬಹುದು, ಮತ್ತೊಬ್ಬನಲ್ಲಿ 200 ಎಕರೆಗಳಿರಬಹುದು, ಈ ನೂರರಲ್ಲಿ 60 ಜನರನ್ನು ಹೊರಗೆ ಹಾಕಿ ಇಲ್ಲಿ ಆರ್ಥಿಕ ಹಿಡುವಳಿಗಳನ್ನು ಸ್ಥಾಪಿಸುವುದೆಂದರೆ ಅದು ಬಹಳ ಕಷ್ಟ. ಇಂಥ ಒಂದು ಕಾರ್ಯವನ್ನು ಸ್ಟಾಲಿನ್ನಿನಂಥ ಒಬ್ಬ ವ್ಯಕ್ತಿ ರಷ್ಯಾ ದೇಶದಲ್ಲಿ ಮಾಡಿರಬಹುದು. ಅಮೆರಿಕಾ ದೇಶದಲ್ಲಿ ರೈತರ ಮಕ್ಕಳೆಲ್ಲಾ ಯುದ್ಧದಲ್ಲಿ ಮಡಿದುಹೋದನಂತರ ಅಲ್ಲಿ ಕೈಗಾರಿಭಿವೃದ್ಧಿ ಆದ ನಂತರ ಅಲ್ಲಿ ಇದನ್ನು ಹಾಗೆಯೇ ಸಾಧಿಸಿರಬಹುದು. ಹಾಗೇ ಕಡಿಮೆ ಜಮೀನಿದ್ದು ಜನಸಂಖ್ಯೆ ಹೆಚ್ಚು ಇರತಕ್ಕಂಥ ಜಪಾನ್ ದೇಶದಲ್ಲಿ ಇಂಟೆನ್‌ಸೀವ್ ಕಲ್ಟಿವೇಷನ್ ಅಂದರೆ ಸಾಂದ್ರ ವ್ಯವಸಾಯ ಪದ್ಧತಿಯು ಅಲ್ಲಿ ಜಾರಿಗೆ ಬಂದನಂತರ ಅಲ್ಲಿ ಈ ಸಮಸ್ಯೆಯನ್ನು ಬಗೆಹರಿಸಲಾಯಿತು. ಆದರೆ ಇಲ್ಲಿ ನಮ್ಮ ಸರ್ಕಾರದವರ ಧೋರಣೆ ಏನೆಂಬುದೇ ಇನ್ನೂ ಗೊತ್ತಾಗುವಂತಿಲ್ಲ. ಈ ಕಾನೂನುಗಳು ಪ್ರತ್ಯೇಕ ಪ್ರತ್ಯೇಕವಾಗಿ ಬರುತ್ತವೆ, ಲ್ಯಾಂಡ್ ರೆವೆನ್ಯೂ ಆಕ್ಟನ್ನು ಪ್ರತ್ಯೇಕವಾಗಿ ಬರೆಯುತ್ತೇವೆ, ಭೂ ಸುಧಾರಣೆಯ ಆಕ್ಟನ್ನು ಪ್ರತ್ಯೇಕವಾಗಿ ತರುತ್ತೇವೆ, ಕನ್‌ಸಾಲಿಡೇಷನ್, ಪ್ರಿವೆನ್‌ಷನ್ ಆಫ್ ಫ್ರ್ಯಾಗ್‌ಮೆಂಟೇಷನ್ ಅಂತ ಪ್ರತ್ಯೇಕವಾಗಿ ತರುತ್ತೇವೆ. ಇನ್ನೂ ಅನೇಕ ಭೂಮಿಗೆ, ರೈತರಿಗೆ ಸಂಬಂಧಪಟ್ಟ ಕಾನೂನುಗಳನ್ನು ತರುತ್ತೇವೆ. ಸಮಗ್ರವಾಗಿ ಉಳುಮೆಮಾಡುವ ರೈತನ ಹಿತದೃಷ್ಟಿಯಿಂದ ಯಾರು ಸ್ವತಃ ಕಷ್ಟಪಟ್ಟು ಶ್ರಮವಹಿಸಿ ಭೂಮಿಯಿಂದ ಉತ್ಪಾದನೆ ಮಾಡುತ್ತಾನೋ ಕೃಷಿಯನ್ನೇ ಜೀವನದ ಕಸುಬಾಗಿ ಅವಲಂಬಿಸಿಕೊಂಡಿದ್ದಾನೋ ಅವನ ಹಿತದೃಷ್ಟಿಯಿಂದ ಮತ್ತು ರಾಷ್ಟ್ರದ ಒಟ್ಟು ಕೃಷಿ ಉತ್ಪಾದನೆಯನ್ನು ಹೆಚ್ಚುಮಾಡುವ ದೃಷ್ಟಿಯಿಂದ ಈ ಎರಡನ್ನೂ ಪ್ರಾಧಾನ್ಯವಾಗಿಟ್ಟುಕೊಂಡು ಪ್ರಗತಿಯನ್ನು ಅಥವಾ ಸುಧಾರಣೆಯನ್ನು ಸಾಧಿಸಬೇಕಾದರೆ ಸಾಹಸದ ಹೆಜ್ಜೆಯನ್ನು ಇಡಬೇಕಾಗುತ್ತದೆ.

5-30 P.M.

ತಾವು ನೋಡಿ ಈ ಸ್ಕೀಂನ್ನು ಜಾರಿ ಮಾಡುವುದರಲ್ಲಿ ಕ್ರಮ ಏನಿದೆ ಎಂದರೆ ಕನ್‌ಸಾಲಿಡೇಷನ್ ಆಫೀಸರ್ಸ್ ಇದನ್ನು ಜಾರಿ ಮಾಡುತ್ತಾರೆ. ಕಾನೂನು ಪ್ರಕಾರ ಮಾಡುವಾಗ 'ಏನ್ರಪ್ಪಾ ಇಷ್ಟೆಲ್ಲಾ ಗೊಂದಲಗಳು ಇವೆ ಇದರ ಪ್ರಕಾರ ಎಲ್ಲಾ ಹೋಲ್ಡಿಂಗ್‌ಗಳನ್ನೂ ಕನ್‌ಸಾಲಿಡೇಟ್ ಮಾಡುತ್ತೇವೆ' ಎಂದು ಹೇಳುತ್ತಾರೆ. ಆ ರೀತಿ ಮಾಡಿ ವಿಲೇಜ್ ಪಂಚಾಯ್ತಿಯವರಿಗೆ ವಹಿಸುತ್ತಾರೆ. ಅದಾದ ಮೇಲೆ ಈ ಸ್ಕೀಂಗೆ ಯಾರಾದರೂ ವಿರೋಧ ಮಾಡಿದರೆ ಅದನ್ನು ಅವರು ಸರ್ಕಾರದ ಮುಂದೆ ಇಡುತ್ತಾರೆ, ಸರ್ಕಾರ ಪುನಃ ಆ ಬಗ್ಗೆ ತಿದ್ದುಪಡಿಗಳನ್ನು ಮಾಡಿ ಜನರ ಮುಂದೆ ಇಡುತ್ತದೆ ಆಗಲೂ ಕೂಡ ಏನಾಗುತ್ತದೆ ?

> "The State Government may, after taking into consideration the objections, either confirm the scheme, with or without amendments, or may refuse to confirm it."

ಮಾಡಬಹುದು, ವಿರೋಧ ಬಂದರೆ ಮಾಡದೆಯೇ ಇರಬಹುದು. ಮೂರನೆಯ-ಎರಡು ಭಾಗ ಅಂತ ಬರೆಯುತ್ತಾರೆ. ಇದು ನಿರ್ಣಯವಾಗುವಾಗ ಕೋರ್ಟುಗಳಲ್ಲಿ ಪ್ರತಿಯೊಬ್ಬನಿಗೂ ಸ್ಟೇ ಸಿಕ್ಕಬಹುದು ಈ ರೀತಿ ಅನೇಕ ಸಲ ರಿವೈಸ್ ಆಗಿದೆ, ಮುಂಬೈನಲ್ಲಿ ಪಾಟೀಲ್ ಅವರ ಅನುಭವ ಹೇಗಿದೆಯೋ ಹೇಳಬಹುದು ನನಗೆ ಅಲ್ಲಿನ ಅನುಭವ ಇಲ್ಲ. ಸರ್ವಾಧಿಕಾರದಿಂದ ನಾವು ಮುಂದುವರಿದು ಈ ಸುಧಾರಣೆಯನ್ನು ತರುವಂತಹ ಶಕ್ತಿಯನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಜನರನ್ನು ಒಲಿಸಿಕೊಂಡು ಗೌರವದಿಂದ ಸಾಧಿಸುವುದು ಕೂಡ ಇಂತಹ ಒಂದು ಸನ್ನಿವೇಶದಲ್ಲಿ ಕಠಿಣವೇ ಇದೆ. ಬಹಳ ಜನ ಸಣ್ಣ ಹೋಲ್ಡರ್ಸ್ ಇದ್ದಾರೆ, ಚಿಕ್ಕ ಚಿಕ್ಕ ಹಿಡುವಳಿಗಳಲ್ಲಿ ಸಾಗುವಳಿ ಮಾಡುತ್ತಾ ಇದ್ದಾರೆ. ಅಂತಹವರ ಇವಿಕ್ಷನ್ ಆಗುವುದಿಲ್ಲ ಎಂದು ಹೇಳಿದ್ದೀರಿ. ಆದರೆ "Right to possession of new holdings :—ಎಂಬಲ್ಲಿ (3)......in the prescribed manner evict any person from any land." ಎಂದು ಹೇಳಿದೆ. ಹಿಡುವಳಿಗಳ ಸ್ಥಳಾಂತರ ಆಗಲೇಬೇಕಾಗುತ್ತದೆ. ಇವತ್ತು ಆಕ್ಯುಪೈ ಮಾಡಿರುವ ಭೂಮಿಯನ್ನು ಯಾರು ಹೊಂದಿದ್ದಾರೋ ಅವರನ್ನು ಹೊರಗೆ ಅಟ್ಟದೆ ಅದರ ಪಕ್ಕದಲ್ಲಿರುವ ಹೋಲ್ಡಿಂಗ್‌ನ್ನು ಒಂದು ದೊಡ್ಡ ಹೋಲ್ಡಿಂಗ್ ಆಗಿ ಮಾಡುವುದಕ್ಕೆ ಶಕ್ಯವಿಲ್ಲ. ಸಣ್ಣ ಹಿಡುವಳಿ ಇದ್ದವನು ಅದನ್ನು ಕಳೆದುಕೊಳ್ಳದೆ ಬೇರೆ ಯಾರಿಗೂ ಹೆಚ್ಚು ಭೂಮಿ ಸಿಕ್ಕದಂತೆ ಕನ್‌ಸಾಲಿಡೇಷನ್ ಸಾಧಿಸಬೇಕೆಂಬ ಒಂದು ಉದ್ದೇಶವನ್ನು ತಾವು ಹೊಂದಿದ್ದೀರಿ. ಇದನ್ನು ಸಾಧಿಸುವುದಕ್ಕೆ ಹೇಗೆ ಸಾಧ್ಯ ಎಂಬುದನ್ನು ನಾವು ವಿಚಾರ ಮಾಡಬೇಕಾಗಿದೆ,

ಕೊನೆಯದಾಗಿ, ಈ ಯೋಜನೆಯನ್ನು ಕಾರ್ಯಗತ ಮಾಡಬೇಕೆಂದು ಕೇಂದ್ರ ಸರ್ಕಾರದ ಯೋಜನಾ ಮಂಡಲಿಯವರು ಬಹಳ ಉತ್ಸುಕರಾಗಿದ್ದಾರೆ ಎಂಬ ಮಾತು ಇಲ್ಲಿ ಪ್ರಸ್ತಾಪವಾಗಿದೆ. ಅವರು ಹಣವನ್ನೂ ಕೂಡ ಈ ಯೋಜನೆಗೆ ಕೊಡುತ್ತಾರೆ. ಈಗಿರುವ ಪ್ರಕಾರ 3 ಲಕ್ಷ ರೂಪಾಯಿ

"The cost on this account comes to nearly Rs. 3 lakhs per taluk".

ಒಟ್ಟು ಈ ಯೋಜನೆಗೆ ಇಡೀ ರಾಜ್ಯದಲ್ಲಿ 500 ಲಕ್ಷ ರೂಪಾಯಿಗಳ ಖರ್ಚು ತಗಲುತ್ತದೆ.

"The total cost of covering all the Taluks will be about Rs. 500 lakhs in the State"

ಸಧ್ಯಕ್ಕೆ ಧಾರವಾಡ, ಬೆಳಗಾಂ, ಬಿಜಾಪುರ, ನಾರ್ತ್ ಕೆನರಾ ಮತ್ತು ಗುಲ್ಬರ್ಗಾ ಈ ಜಿಲ್ಲೆಗಳಲ್ಲಿ ಇದನ್ನು ಕ್ರಮೇಣ ಜಾರಿಗೆ ತರಬೇಕೆಂದು ಹೇಳಿ ಸರ್ಕಾರದವರು ಆಶಿಸಿದ್ದಾರೆ. ಕೇಂದ್ರ ಸರ್ಕಾರದವರು ಇದಕ್ಕೆ ಹಣ ಕೊಡುತ್ತಾರೆ. ಆದ್ದರಿಂದ ನಾವು ಅಧಿಕಾರಿಗಳನ್ನು ನೇಮಕಮಾಡಿ ಈ ಕಾರ್ಯವನ್ನು ಆರಂಭಿಸೋಣ ಎಂಬುದು ಸರ್ಕಾರದ ಅಭಿಪ್ರಾಯವಿದ್ದಂತೆ ಕಾಣುತ್ತದೆ. ಇದರಲ್ಲಿ ನಾನು ಮೊದಲೇ ಹೇಳಿದ ಹಾಗೆ ದೇಶದಲ್ಲಿ ಸದುದ್ದೇಶದಿಂದ ಆಡಿದ ಮಾತುಗಳನ್ನು ನಾವು ಕಳೆದ ಅನೇಕ ವರ್ಷಗಳಿಂದ ಕೇಳುತ್ತಾ ಬಂದಿದ್ದೇವೆ. ಈ ಕಾರ್ಯದಲ್ಲಿ, ಈ ದಿಕ್ಕಿನಲ್ಲಿ ಎಷ್ಟುಮಟ್ಟಿಗೆ ಕೆಲಸ ನಡೆದಿದೆ ಎಂಬುದನ್ನು ನೋಡಿದ್ದೇವೆ. ಆದ್ದರಿಂದ ಈ ಮಸೂದೆಯ ಬಗ್ಗೆ ಹೇಳುವಾಗ ಆದ್ದರಿಂದ ಒಂದು ದೊಡ್ಡ ದೇಶೋದ್ಧಾರವಾಗಿಬಿಡುತ್ತದೆ ಎಂಬ ಸಂತೋಷವಾಗಲಿ ಅಥವಾ ಇದರಿಂದ ಮಾನ್ಯ ಸ್ನೇಹಿತರು ಕೆಲವರು ಹೇಳಿದ ಹಾಗೆ ಭಾರಿ ಗಂಡಾಂತರ ಬಂದು ತಲೆ ಮೇಲೆ ಬಿದ್ದು ಬಿಡುತ್ತದೆ ಎಂಬ ಮಾತು ಆಗಲಿ ನನಗೆ ಕಂಡುಬರಲಿಲ್ಲ. ಏಕೆಂದರೆ ಮಾನ್ಯ ಸರ್ಕಾರದವರು ಯಾವ ರೀತಿ ಇಂತಹ ಕೆಲಸಗಳಿಗೆಲ್ಲಾ ಗಮನ ಕೊಟ್ಟು ಶ್ರಮ ವಹಿಸುತ್ತಾರೆ ಎಂಬುದು ನಮಗೆಲ್ಲಾ ಗೊತ್ತಿರುವುದರಿಂದ ನಾನು ಈ ಮಸೂದೆಯ ಬಗ್ಗೆ ಇನ್ನು ಹೆಚ್ಚು ಹೇಳುವುದಕ್ಕೆ ಇಷ್ಟ ಪಡುವುದಿಲ್ಲ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಪಿ. ರೇವಣಸಿದ್ದಪ್ಪ (ತಿಪಟೂರು).—ಅಧ್ಯಕ್ಷರೇ, ಆರು ತಿಂಗಳ ಅವಧಿ ಮುಗಿಯುವುದರೊಳಗೆ ಈ ಅಧಿವೇಶನವನ್ನು ಕರೆದು ರೆವಿನ್ಯೂ ಸಚಿವರು ಮತ್ತು ಇತರ ಸ್ನೇಹಿತರನ್ನು ಸಂದರ್ಶಿಸಲು ಅವಕಾಶ ಮಾಡಿಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ಈ ಮಸೂದೆಯ ವಿಷಯದಲ್ಲಿ ನನ್ನ ಒಂದೆರಡು ಸಲಹೆಗಳನ್ನು ಮಾಡುತ್ತೇನೆ. ಈ ಮಂತ್ರಿಗಳಿಗೆ ಇರತಕ್ಕ ಕೆಲವು ಪೋರ್ಟ್‌ಫೋಲಿಯೋಗಳನ್ನು ಬೇರೆಯವರಿಗೆ ಹಂಚಿ ಹಾಕಿದ್ದಾರೆ ಅದನ್ನು ಒಂದುಗೂಡಿಸಿದ್ದರೆ ವ್ಯವಸಾಯಕ್ಕೆ ಉತ್ತೇಜನ ಕೊಟ್ಟು ರೈತರಿಗೆ ಅನುಕೂಲ ಮಾಡಿದ ಹಾಗಾಗುತ್ತಾ ಇತ್ತೋ ಏನೋ ಎಂದು ನನಗೆ ಅನಿಸುತ್ತದೆ. ಮಳೆಬೆಳೆ ಇಲ್ಲದಿರುವಾಗ ಇಂಥ ಬಿಲ್ಲುಗಳನ್ನು ತಂದು ರೈತರಿಗೆ ಅನುಕೂಲ ಮಾಡುವುದನ್ನು ಬಿಟ್ಟು ಸುಮ್ಮನೆ ಕಾಲವನ್ನು ವ್ಯಯಮಾಡುತ್ತಿದ್ದಾರೆ...

Mr. SPEAKER.—It is a Reflection upon the House. The House is engaged in this discussion, but the member is contributing towards contempt.

(ಅಲ್ಲಿಗೆ ಶ್ರೀ ರೇವಣಸಿದ್ದಪ್ಪನವರು ತಮ್ಮ ಭಾಷಣವನ್ನು ನಿಲ್ಲಿಸಿದರು.)

† ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಈ ಕಾನೂನಿನಲ್ಲಿ ಮುಖ್ಯವಾಗಿ ಎರಡು ಭಾಗಗಳಿವೆ, ಮೊದಲನೆಯದು ಭೂ ವಿಭಜನೆಯನ್ನು ನಿರೋಧಿಸುವುದಕ್ಕೆ ಸಂಬಂಧಪಟ್ಟಿದೆ, ಅದು ಬಹಳ ಮುಖ್ಯವಾದುದು. ದೇಶದಲ್ಲಿ ಈ ಕಾನೂನು ಜಾರಿಗೆ ಬಂದಮೇಲೆ ಯಾವ ಯಾವ ಪ್ರದೇಶಗಳಲ್ಲಿ ಎಷ್ಟು ಎಕರೆ ಒಟ್ಟಿಗೆ ಒಬ್ಬರ ಅನುಭವದಲ್ಲಿರಬೇಕು, ಎಷ್ಟಕ್ಕಿಂತ ಕಡಮೆಯಾಗಿ ವಿಭಜನೆ ಮಾಡಬಾರದು ಎಂದು ನಿಗದಿಮಾಡುತ್ತಾರೆ, ನಂತರ ಅದಕ್ಕಿಂತ ಕಡಮೆಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಇದು ಬಹಳ ಮುಖ್ಯವಾದುದು. ಈ ಕಾನೂನು ಜಾರಿಗೆ ಬಂದನಂತರ ಭೂಮಿಯು ಈಗಿನಂತೆ ಹರಿದು ಹಂಚಿಹೋಗುವುದಕ್ಕೆ ಅವಕಾಶವಿರುವುದಿಲ್ಲ. ಎರಡನೆಯದು ಸಣ್ಣ ಹಿಡುವಳಿಗಳನ್ನು ಒಂದುಗೂಡಿಸುವುದಕ್ಕೆ ಸಂಬಂಧಪಟ್ಟಿದೆ. ಈ ವಿಷಯದಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲ. ಇದರ ಅನುಭವವಿರುವ ವ್ಯವಸಾಯಗಾರರೆಲ್ಲಾ ಈಗ ಈ ವಿಚಾರದಲ್ಲಿ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು, ಮುಂಬಯಿ ಕರ್ಣಾಟಕದ ಶ್ರೀಯುತರುಗಳಾದ ಎಂ. ಆರ್. ಪಾಟೀಲರು, ವಿ. ಎಸ್. ಪಾಟೀಲರು ಮತ್ತು ಆರ್. ಎಸ್. ಹೆಗ್ಗಡೆಯವರು ಈಗಾಗಲೆ ತಮ್ಮ ಅನುಭವವನ್ನು ಹೇಳಿದ್ದಾರೆ. ಈ ಕಾನೂನನ್ನು ಜಾರಿಗೆ ತರುವಾಗ ಬಹಳ ನ್ಯೂನತೆಗಳಿರುವುದರಿಂದ ತೊಂದರೆಯಾಗುತ್ತದೆ, ಅಧಿಕಾರಿಗಳಿಗೆ ಬಹಳ ಅಧಿಕಾರ ಕೊಡುವುದರಿಂದ ಅವರು ತಮ್ಮ ಅಧಿಕಾರ

(ಶ್ರೀ ಎಂ. ವಿ. ಕೃಷ್ಣಪ್ಪ)

ವನ್ನು ದುರುಪಯೋಗಪಡಿಸಿಕೊಳ್ಳಲು ಅವಕಾಶ ಕೊಡುತ್ತಿದ್ದೀರಿ, ಚಿಕ್ಕ ರೈತರಿಗೆ ಇದರಿಂದ ತೊಂದರೆಯಾಗಬಹುದು, ಇದಕ್ಕೆ ಆದಷ್ಟು ಅವಕಾಶವಿಲ್ಲದಂತೆ ಮಾಡಬೇಕು ಎಂದು ಸಲಹೆಮಾಡಿದ್ದಾರೆ. ಇದಕ್ಕಾಗಿ ಈ ವಿಧೇಯಕವನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕಾಗಿದೆ. ತೊಂದರೆಯಿಲ್ಲದಿದ್ದರೆ ಕಳುಹಿಸಬೇಕಾಗಿರಲಿಲ್ಲ. ಈ ವಿಧೇಯಕವನ್ನು ನಾವು ಹೊಸದಾಗಿ ಶಾಸನ ಕಡತಕ್ಕೆ ಏರಿಸುತ್ತಿಲ್ಲ, ಈಗಾಗಲೆ ಇದು ಸಂಸ್ಥಾನದ ಅರ್ಧ ಭಾಗದಲ್ಲಿ ಜಾರಿಯಲ್ಲಿದೆ, ಉಳಿದ ಭಾಗದಲ್ಲಿ ಜಾರಿಗೆ ತರಬೇಕಾಗಿದೆ, ಹಾಗೆ ತರಬೇಕಾದ್ದು ಅನಿವಾರ್ಯವಾಗಿದೆ. ಮುಂಬಯಿ ಮತ್ತು ಹೈದರಾಬಾದು ಕರ್ಣಾಟಕಗಳಲ್ಲಿ ಇದು ಜಾರಿಯಲ್ಲಿದೆ, ದೇಶಕ್ಕೆಲ್ಲಾ ಒಂದೇ ರೀತಿಯಾದ ಕಾನೂನನ್ನು ಜಾರಿಗೆ ತರಲು ಇದನ್ನು ತಂದಿದ್ದೇವೆ. ಇದನ್ನು ಜಾರಿಗೆ ತರುವಾಗ ರೈತರಿಗಾಗುವ ತೊಂದರೆಯನ್ನು ತಪ್ಪಿಸಲು ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಇರುವ ಕೊರತೆಯನ್ನು ಸರಿಪಡಿಸುವುದಕ್ಕೆ ಪ್ರಯತ್ನಪಡುತ್ತೇವೆ. ಎತ್ತು ಕರು ಹಾಕಿತು ಎಂದು ಯಾರಾದರೂ ಹೇಳಿದರೆ ಕೊಟ್ಟಿಗೆಗೆ ಕಟ್ಟಿ ಎಂದು ಹೇಳುವವರು ನಾವಲ್ಲ. ಕನ್‌ಸಾಲಿಡೇಷನ್ ಆಗಲೇಬೇಕು, ರೈತರು ಹಳ್ಳಿಗಳಲ್ಲಿ ಸಣ್ಣ ಹೊಲಗಳನ್ನು ಹೊಂದಿದ್ದರೆ ಅವನ್ನು ಪಕ್ಕದವರಿಗೆ ಹಂಚಬೇಕೆಂದು ಅನೇಕ ಕಡೆ ಗೊತ್ತು ಮಾಡಿದ್ದಾರೆ, ಹೀಗೆ ಅನೇಕ ರಾಜ್ಯಗಳವರು ಮಾಡಿರುವುದನ್ನು ನಾವು ಈಗ ಮಾಡುತ್ತಿದ್ದೇವೆ. ಏಕೆಂದರೆ, ಈಗ ಆ ಸ್ಟೇಜ್ ಬಂದಿದೆ. ಹಿಂದೆ ಜಮೀನುಗಳು ಬಹಳವಾಗಿ ಅರ್ಧ ಎಕರೆ, 2 ಗುಂಟೆ ಹೀಗೆಲ್ಲಾ ಕಲವರಲ್ಲಿದೆ. ಇದನ್ನು ಶ್ರೀ ಮಾದಪ್ಪಗೌಡರು ಬಹಳ ಸ್ವಾರಸ್ಯವಾಗಿ ಹೇಳಿದರು. 2-3 ಗುಂಟೆ ಹೊಲ ಹಳ್ಳಿಗಳಲ್ಲಿದ್ದರೆ ಅದರಿಂದ ಹೇಗೆ ಉಪಕಾರವಾಗುತ್ತದೆ? ಅದಿಲ್ಲದಿದ್ದರೆ ಪೇಟೆಗಳಲ್ಲಿ ಸೇರಿ ಜನರು ಉದ್ಧಾರವಾಗುತ್ತಿದ್ದರು, ಈಗ ಅಲ್ಪಸ್ವಲ್ಪ ಜಮೀನಿಗಾಗಿ ಹಳ್ಳಿಗಳಲ್ಲೇ ಇದ್ದುಕೊಂಡು ಅದರಿಂದ ಜೀವನ ನಡೆಯದೆ ಬೇರೆ ಮಾರ್ಗವಿಲ್ಲದೆ ಅನೇಕರು ತೊಂದರೆಗೀಡಾಗಿದ್ದಾರೆ. ಪರಂಗಿಯವರ ಆಡಳಿತ ನಮ್ಮ ದೇಶದಲ್ಲಿದ್ದಾಗ ಚೆನ್ನಾಗಿತ್ತು ಎಂದು ಶ್ರೀ ಕೇಶವಮೂರ್ತಿಯವರು ಹೇಳಿದರು. ಬ್ರಿಟನ್ನಿನಲ್ಲಿ ದೊಡ್ಡ ಮಗನಿಗೆ ಮಾತ್ರ ಆಸ್ತಿಯ ಹಕ್ಕಿರುತ್ತದೆ, 300 ಎಕರೆ ಭೂಮಿ ಒಬ್ಬರಿಗಿದ್ದರೆ ಅದು ತುಂಡಾಗದೆ ಹಾಗೆಯೇ ಉಳಿಯುತ್ತದೆ. ಉಳಿದ ಮಕ್ಕಳು ಬೇರೆ ದೇಶಗಳಿಗೆ ಹೋಗಿ ದೊಡ್ಡ ಎಂಜನಿಯರುಗಳಾಗಿ ದೊಡ್ಡ ದೊಡ್ಡ ಇತರ ಹುದ್ದೆಗಳಿಗೆ ಸೇರಿ ಸುಖವಾಗಿ ಜೀವನಮಾಡಲು ಅದರಿಂದ ಅವಕಾಶವಾಗಿದೆ. ಅದಕ್ಕೆ ಅವರ ದೇಶದಲ್ಲಿರುವ ಭೂಶಾಸನವೇ ಕಾರಣ. ನಾನು ಹೇಳುತ್ತಿರುವುದು ನೂರು ವರ್ಷದ ಹಿಂದಿನ ವಿಚಾರ. ಆಗ ಶೇಕಡ 90 ಮಂದಿ ವ್ಯವಸಾಯಗಾರರಾಗಿದ್ದರು. ಎಲ್ಲರಿಗೂ ಅಲ್ಲಿ ನಮ್ಮಲ್ಲಿರುವಂತೆ ಭೂಮಿಯನ್ನು ಹಂಚಿದ್ದರೆ ಅಲ್ಲೂ ಕೂಡ ಎಲ್ಲರೂ ಬಡತನದಲ್ಲಿರುತ್ತಿದ್ದರೋ ಏನೋ. ಮೊದಲನೆಯ ಮಗನಿಗೆ ಮಾತ್ರ ಆಸ್ತಿಗೆ ಹಕ್ಕನ್ನು ಅಲ್ಲಿ ಕೊಟ್ಟಿರುವುದರಿಂದ ಇತರ ಮಕ್ಕಳು ದೇಶಕ್ಕೆ ಕೀರ್ತಿ ತರಲು ಅವಕಾಶವಾಗಿದೆ ಎಂದು ಕಾಣುತ್ತದೆ. ಆದುದರಿಂದ ಈಗ ತಂದಿರುವ ಕಾನೂನಿನಿಂದ ಅನರ್ಥವಾಗುತ್ತದೆಯೆಂದು ತಿಳಿಯಬಾರದು. ಕಡಮೆ ಭೂಮಿ ಇರುವವರಿಂದ ಕಿತ್ತುಕೊಳ್ಳುವುದಿಲ್ಲ, ಎವಿಕ್‌ಷನ್ ಆದರೆ ಬೇರೆ ಜಮೀನು ಅವರಿಗೆ ದೊರೆಯುತ್ತದೆ. ಆರು ತುಂಡುಗಳಿದ್ದರೆ ಅವನ್ನು ಸೇರಿಸಿ ಒಂದು ತುಂಡು ಮಾಡುತ್ತೇವೆ. ಇದರಿಂದ ಒಂದೇ ಸ್ಥಳದಲ್ಲಿ ಭೂಮಿ ಇದ್ದಂತಾಗುತ್ತದೆ. ಸಣ್ಣಪುಟ್ಟ ರೈತರಿಗೆ ಕಿರುಕುಳ ಕೊಟ್ಟು ಅವರನ್ನು ಭೂರಹಿತರನ್ನಾಗಿ ಮಾಡುವುದಿಲ್ಲ. ಅವರಿಗೆ ಅನುಕೂಲವಾಗಿರುವ ಕಡೆ ಒಂದೇ ಸ್ಥಳದಲ್ಲಿ ಭೂಮಿ ದೊರೆಯಬೇಕೆಂಬುದೇ ಮೂಲ ಉದ್ದೇಶ. ಈ ಬಿಲ್ಲನ್ನು ಜಾರಿಗೆ ತರದೆ ವಾಪಸು ತೆಗೆದುಕೊಳ್ಳಬೇಕೆಂದು ಶ್ರೀ ಮುಕ್ಕಣ್ಣಪ್ಪನವರು ಹೇಳಿದರು. ಇದು ಪ್ರೋಗ್ರೆಸಿವ್ ಕಾನೂನು, ಆದುದರಿಂದ ವಾಪಸು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇದು ಜಾರಿಗೆ ಬಂದಮೇಲೆ ಒಂದೊಂದು ಜಿಲ್ಲೆಯಲ್ಲಿ ಒಂದೊಂದು ತಾಲ್ಲೂಕಿನಲ್ಲಿ ಮಾತ್ರ ಜಾರಿಗೆ ಕೊಟ್ಟು ಕ್ರಮೇಣ ವಿಸ್ತರಿಸಲಾಗುವುದು. ಏಕೆಂದರೆ ಜಾರಿಗೆ ತರುವಾಗ ತೊಂದರೆಯಾದರೆ ಅದನ್ನು ಸರಿಪಡಿಸಬಹುದು. ಇಡೀ ದೇಶಕ್ಕೆ ಏಕರೂಪವಾದ ಒಂದೇ ಶಾಸನವನ್ನು ಜಾರಿಗೆ ತರಬೇಕೆಂಬುದೇ ಮೂಲ ಉದ್ದೇಶ. ಇದನ್ನು ಸಭೆ ಪರ್ಯಾಲೋಚಿಸಬೇಕು ಎಂದು ಪ್ರಾರ್ಥಿಸುತ್ತೇನೆ.

Mr. SPEAKER.—I put the motion to the vote of the House. The Question is :—

Sri B. R. SUNTHANKAR.—May I know whether it has come to the notice of the Government that a large number of Grampanchayats in the Marathi areas as well as Taluk Boards are deprived of the benefits of this publication about Panchayati Raj ?

Sri RAMAKRISHNA HEGDE.—I do not accept his contention. Most of the people - 99 per cent of the Marathi speaking people—also know Kannada and they speak Kannada.

Sri V. S. PATIL.—The Floor of this House is a sacred place. We respect it and we are expected to keep it sacred. If anybody utters falsehood on the Floor of the House, we are entitled to and we seek the protection of the Chair also in order to keep this place sacred.

Mr. SPEAKER.—It is perfectly right.

Sri SANJEEVANATH AIKALA.—Is it not a fact that the same articles appear in different papers in different ways ?

Sri RAMAKRISHNA HEGDE.—I do not know whether the Hon'ble Member has made such a research, and if it is brought to my notice I will see that it will not occur again.

ಶ್ರೀ ಎಸ್. ಗೋಪಾಲ ಗೌಡ.—ಕಾಲದಿಂದ ಕಾಲಕ್ಕೆ ಪ್ರಕಟಿತವಾಗುವ ಪ್ರಕಟಣೆಗಳ ಬಗ್ಗೆ ಇದರಲ್ಲಿ ವಿವರಗಳನ್ನು ಕೊಟ್ಟಿದೆ. ಇದರಲ್ಲಿ 'ಮಾರ್ಚ್ ಆಫ್ ಮೈಸೂರು' ಹಾಗೂ ಪರಿಶಿಷ್ಟದಲ್ಲಿ ಕೊಟ್ಟಿರುವ 63 ಪ್ರಕಟಣೆಗಳು ಎಲ್ಲವೂ ಇಂಗ್ಲಿಷ್ ಭಾಷೆಯಲ್ಲಿಯೇ ಇದುವರೆಗೆ ಪ್ರಕಟವಾಗುತ್ತಿವೆ. ಇನ್ನುಮುಂದೆ ಇವನ್ನೆಲ್ಲಾ ಕನ್ನಡದಲ್ಲೇ ಪ್ರಕಟಣೆ ಮಾಡಲು ಸರಕಾರದವರು ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳುವರೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ನಾನಾಗಲೇ ಹೇಳಿದೆ. ಒಂದು ಪತ್ರಿಕೆ ಮಾಸ ಪತ್ರಿಕೆಯಾಗಿ ಕನ್ನಡದಲ್ಲಿ ಆಗುತ್ತಿದೆ. ಇನ್ನೊಂದು ವಾರ ಪತ್ರಿಕೆಯನ್ನು ಕನ್ನಡದಲ್ಲೇ ಮಾಡಿಸಿ ಹೊರಡಿಸಬೇಕೆಂದು ಸರಕಾರದ ಉದ್ದೇಶವಾಗಿದೆ. ಮತ್ತು ಇನ್ನುಳಿದ ವರದಿಗಳು ಹಾಗೂ ಪ್ರಕಟಣೆಗಳನ್ನು ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಕನ್ನಡದಲ್ಲಿಯೇ ಪ್ರಕಟಿಸುತ್ತೇವೆ.

Sri V. M. DEO.—Sir, Sri V. S. Patil raised a point. He said that this is a sacred place and nobody should utter falsehood on the Floor of the House. There is every sense in what the Hon'ble Minister said and it is a fact that 99 per cent of the Marathi speaking people can understand Kannada because they have been living amongst us. I cannot understand how the Hon'ble Member, Sri V. S. Patil goes to such an extent and loses balance. This should be taken note of. If I am not reasonable, please let me know.

Mr. SPEAKER.—The Chair will decide now whether the member is reasonable or not. I am grateful to the Member for having said so much sense. But, what is it that Sri Patil said? He said that this House is a sacred place, and I said 'Yes.' What is it that is wrong?

Sri N. O. SAMAJI.—(Marathi).

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದರಲ್ಲಿ 'ಮಾಗಣಿ' ಯಾವುದೋ ಅದು ನನಗೆ ಅರ್ಥವಾಗುವುದಿಲ್ಲ.

Mr. SPEAKER.—Does the Hon'ble Minister Know what '*magani*' is?

Sri RAMAKRISHNA HEGDE.—Yes, Sir. It is a request.

Mr. SPEAKER.—'*Magani*' is a fish.

(*Laughter*)

We now go on to the passed over Question. I put Question No. 126.

Levying of Contribution for Restoration of Tanks.

**Q.*—126. Sri S. V. RAMEGOWDA (Malur).—

Will the Government be pleased to state:—

whether they would consider the question of abolishing the present system of levying contribution whenever tanks are restored in view of the fact that an additional sum of Rs. 4 per acre has been levied on the wet lands in connection with the restoration of tanks in the State?

A.—Sri VEERENDRA PATIL (Minister for Public Works).—
No.

ಶ್ರೀ ಹೆಚ್. ಆರ್. ಕೇಶವ ಮೂರ್ತಿ.—ಸಾಮಾನ್ಯವಾಗಿ ಲ್ಯಾಂಡು ಕಾಂಟ್ರಿಬ್ಯೂಷನ್ನು ಎಲ್ಲಿ ಕೊಡಬಹುದೋ ಅಂತಹ ಕಡೆಗಳಿಂದ ವಸೂಲು ಮಾಡಬಹುದು. ಆದರೆ ಕೆಲವು ಕಡೆಗಳಲ್ಲಿ ಸೆಂಟ್ರಲ್ ಗವರ್ನಮೆಂಟಿನಿಂದ ಗ್ರಾಂಟು ಎಂದು ದುಡ್ಡು ತೆಗೆದುಕೊಂಡು ಕೆರೆಗಳನ್ನು ರಿಪೇರಿ ಮಾಡಿದ್ದರೆ ಅಂತಹ ಕಡೆಗಳಲ್ಲಿ ಏತಕ್ಕಾಗಿ ಕಾಂಟ್ರಿಬ್ಯೂಷನ್ನನ್ನು ವಸೂಲು ಮಾಡಬೇಕು ?

ಶ್ರೀ ವೀರೇಂದ್ರ ಪಾಟೀಲ್.—ಟ್ಯಾಂಕುಗಳನ್ನು ಹೊಸದಾಗಿ ಕಟ್ಟಿದರೆ ಆಗ ಅವರಿಂದ ಕಾಂಟ್ರಿಬ್ಯೂಷನ್ನನ್ನು ವಸೂಲು ಮಾಡಬೇಕಾಗುತ್ತದೆ. ಇಲ್ಲದೆ ಟ್ಯಾಂಕುಗಳನ್ನು ರೆಸ್ಟೋರು ಮಾಡಿದರೆ ಅಂತಹ ಕಡೆಗಳಲ್ಲೂ ಕಾಂಟ್ರಿಬ್ಯೂಷನ್ನುಗಳನ್ನು ವಸೂಲು ಮಾಡಬೇಕಾಗುತ್ತದೆ.

ಸುಮ್ಮನೆ ಎಲ್ಲ ಕಡೆಗಳಲ್ಲಿಯೂ ಕಾಂಟ್ರಿಬ್ಯೂಷನ್ನುಗಳನ್ನು ವಸೂಲು ಮಾಡುವುದಕ್ಕಾಗುವುದಿಲ್ಲ. ಅದಕ್ಕಾಗಿ ಕಾನೂನು ಮಾಡಲಾಗಿದೆ. 1963ರಲ್ಲೇ Mysore Irrigation Betterment Levy Act ಎಂದು ಆಗಿದೆ. ಅದರ ಪ್ರಕಾರ ಎಲ್ಲೆಲ್ಲಿ ಕಾಂಟ್ರಿಬ್ಯೂಷನ್ನು ವಸೂಲು ಮಾಡಬೇಕೋ ಅಲ್ಲೆಲ್ಲಾ ವಸೂಲಿ ಮಾಡಲಾಗುತ್ತಿದೆ.

Mr. SPEAKER:—Question Hour is over.

2-00 P.M.

PAPERS LAID ON THE TABLE.

Sri D. DEVARAJ URS (Minister for Transport and Tourism).—I beg to lay :—

"(i) Notification No. HD 9 TMT 63 dated 6th September 1965 (Reduction of Tax payable) ;

(ii) Notification No. HD 29 TMI 62 dated 18th September 1965 (Reciprocal agreement between Mysore and Madras regarding single point taxation) ;"

as required under sub-section (2) of Section 16 of the Mysore Motor Vehicles Taxation Act, 1957.

Mr. SPEAKER.—The Notifications are laid on the Table of the House.

Member's Representation.

Sri C. J. MUCKANNAPPA (Sira).—Yesterday, when we made representation for allotting time for discussion on food production, you were pleased to tell the Opposition Leader to wait for an opportune time.

Mr. SPEAKER.—I think it is coming about. I am mentioning to the House that the question of food production will be discussed tomorrow and the day after tomorrow. I have received a resolution and tentative understanding that it can be taken up tomorrow and the day after.

MYSORE SOCIETIES REGISTRATION (AMENDMENT) BILL, 1965.

Motion to consider

Sri M. V. KRISHNAPPA (Minister for Revenue).—I beg to move :

"That the Mysore Societies Registration (Amendment) Bill, 1965 be taken into consideration".

Mr. SPEAKER.—Motion moved :

"That the Mysore Societies Registration (Amendment) Bill, 1965, be taken into consideration".

† ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಇರತಕ್ಕ ಸೊಸೈಟಿಗಳ ರಿಜಿಸ್ಟ್ರೇಷನ್ ಆಕ್ಟ್ ಪ್ರಕಾರ ರಾಜ್ಯದಲ್ಲಿರತಕ್ಕ ಯಾವುದಾದರೊಂದು ಸೊಸೈಟಿಯು ಒಂದು ಕಾಯಿದಾ ಭಂಗ ಕೃತ್ಯವನ್ನು ನಡೆಸಿದಲ್ಲಿ, ಇಲ್ಲವೆ ಅಂಥ ಕೃತ್ಯ ನಡೆಯುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಲ್ಲಿ ಅಂತಹ ಪ್ರಸಂಗದಲ್ಲಿ ನಡೆಸತಕ್ಕ ವಿಚಾರಣೆಯನ್ನು ಸೊಸೈಟಿಗಳ ಇನ್‌ಸ್ಪೆಕ್ಟರ್ ಜನರಲ್‌ರವರೇ ನಡೆಸಬೇಕೆಂದು ಹೇಳಿದೆ. ಆದರೆ ಅವರು ಇಡೀ ರಾಜ್ಯಕ್ಕೇ ಒಬ್ಬ ಅಧಿಕಾರಿಗಳಾಗಿರುವುದರಿಂದ ಅಂಥ ವಿಚಾರಣೆಯನ್ನು ರಾಜ್ಯಾದ್ಯಂತವೂ ಒಬ್ಬರಿಂದಲೇ ನಡೆಸುವುದಕ್ಕೆ ಸಾಧ್ಯವಿಲ್ಲ. ಆ ಒಂದು ತೊಂದರೆಯನ್ನು ತಪ್ಪಿಸುವುದಕ್ಕಾಗಿ, ಇದರಲ್ಲಿ ಒಂದು ತಿದ್ದುಪಡಿಯನ್ನು ಮಾಡಿ ಅಂಥ ವಿಚಾರಣೆಗಳನ್ನು ರಿಜಿಸ್ಟ್ರಾರ್ ಅವರಾಗಲೀ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಪಡೆದವರಾಗಿರಲೀ ನಡೆಸಬಹುದು ಎಂದು ತಿದ್ದುಪಡಿಯನ್ನು ಮಾಡಲಾಗಿದೆ. ಇದೊಂದು ಚಿಕ್ಕ ತಿದ್ದುಪಡಿ. ಈ ಮಾನ್ಯ ಸಭೆಯವರು ಇದನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ನಾನೂ ಸಹಾ ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಇದರಲ್ಲಿ ಅಧಿಕಾರವನ್ನು ಇನ್ನೊಬ್ಬರಿಗೆ ಡೆಲಿಗೇಟ್ ಮಾಡಲಾಗುತ್ತದೆಂದು ಹೇಳಿರುವುದರಲ್ಲಿ, ಹಾಗೆ ಡೆಲಿಗೇಟ್ ಮಾಡತಕ್ಕ ಅಧಿಕಾರಿಗಳ ಅಂತಸ್ತೇನೆಂಬುದನ್ನು ತಿಳಿಸಿದ್ದರೆ ಚೆನ್ನಾಗಿತ್ತು. ಆ ನಂತರ ಹಾಗೆ ಆ ಒಬ್ಬ ಅಧಿಕಾರ ಪಡೆದು ವಿಚಾರಣೆ ನಡೆಸಿದ ಅಧಿಕಾರಿಯ ತೀರ್ಮಾನದ ಮೇಲೆ ಅಪೀಲಿಗೆ ಅವಕಾಶ ಇದೆಯೇ, ಇಲ್ಲವೇ ಎಂಬುದನ್ನು ಹೇಳಿಲ್ಲ. ಇದನ್ನೆಲ್ಲಾ ಆಲೋಚನೆ ಮಾಡಿ ಸರಿಪಡಿಸಿ ಮಂಡಿಸಬೇಕೆಂದು ಹೇಳುತ್ತೇನೆ

ಶ್ರೀ ಎಂ. ವಿ. ಕೃಷ್ಣಪ್ಪ.—ಸಿಕ್ಕಿಸಿಕ್ಕಿದವರಿಗೆಲ್ಲಾ ಡೆಲಿಗೇಟ್ ಮಾಡುವುದಿಲ್ಲ. ಯಾರು ಡಿಸ್ಟ್ರಿಕ್ಟ್ ಛಾರ್ಜಿನಲ್ಲಿರುತ್ತಾರೋ ಅಂಥವರಿಗೆ ಮಾತ್ರ ಈ ಅಧಿಕಾರವನ್ನು ಕೊಡಲಾಗುತ್ತದೆ. ಆದರೆ ಆ ವಿಚಾರವನ್ನು ಇಲ್ಲಿ ಖಚಿತವಾಗಿ ಹೇಳದೆ ಇರಬಹುದು. ಆದರೂ ಅಂಥ ತೊಂದರೆಯೇನೂ ಆಗುವುದಿಲ್ಲ. ಯಾರು ಡಿಸ್ಟ್ರಿಕ್ಟ್ ಛಾರ್ಜಿನಲ್ಲಿರುತ್ತಾರೋ ಅಂಥವರಿಗೆ ಮಾತ್ರವೇ ಕೊಡಲಾಗುವುದು. ಇದನ್ನು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ.

Mr. SPEAKER.—The Hon'ble Minister may kindly reply if he wants.

Sri M. V. KRISHNAPPA.—There is nothing. It can simply be accepted.

Mr. SPEAKER.—The question is :

"That Mysore Societies Registration (Amendment) Bill, 1965, be taken into consideration."

The motion was adopted.

Clause 2.

Mr. SPEAKER.—The question is :

"That Clause 2 stands part of the Bill."

The motion was adopted.

Clause 2 was added to the Bill.

The Title, Preamble and Clause 1.

Mr. SPEAKER.—The question is :

"That the Title, the Preamble and Clause 1, stand part of the Bill."

The motion was adopted.

The Title, the Preamble and Clause 1 were added to the Bill.

Motion to pass.

Sri M. V. KRISHNAPPA.—I beg to move :

"That the Mysore Societies Registration (Amendment) Bill, 1965, be passed."

Mr. SPEAKER.—The question is :

"That the Mysore Societies Registration (Amendment) Bill, 1965, be passed."

The motion was adopted.

Mr. SPEAKER.—Next Bill please.

MYSORE CATTLE TRESPASS BILL, 1965.

as reported by the Select Committee.

(Motion to consider).

Sri R. M. PATIL (Minister for Development, Panchayati Raj and Municipal Administration).—I beg to move :

"That the Mysore Cattle Trespass Bill, 1965, as reported by the Select Committee be taken into consideration."

Mr. SPEAKER.—Motion moved :

"That the Mysore Cattle Trespass Bill, 1965, as reported by the Select Committee be taken into consideration."

Sri R. M. PATIL.—This Bill was referred to the Select Committee and the Select Committee was pleased to consider and suggest some measures. They have suggested certain clauses which are very important and the report of the Committee is also there. This Bill may be considered in detail because a number of suggestions which are new are added to the Bill in order to make the measurs more effective. It was brought to the notice of the Committee that certain areas in the State are more affected on account of the stray cattle and persistent defaulters who do not respect the law at all and will allow their cattle. In order to make provision for such persistent defaulters and also for stray cattle, the measures have been suggested in this and they are more effective. The Police aid also was suggested under certain circumstances. In some areas the Police force is requisitioned quite a number of times and that too after the crops are destroyed. As there is likelihood of assaulting the owners of the fields or their servants and there is likelihood of damaging the crops by the cattle, the aid of the Police can be taken in order to protect the crops as well as to prevent the breach of peace.

(SRI R. M. PATIL)

Then, heavier penalties in respect of such owners of the cattle are also suggested. Therefore, these are very important clauses and they may be considered. This is the sum and substance of the report of the Committee and the amended provisions.

Mr. SPEAKER.—Is there anybody to speak on this ?

†ಶ್ರೀ ಬಿ. ಭಾಸ್ಕರ ಶೆಟ್ಟಿ (ಕೌಪು).—ಸ್ವಾಮಿ, ಈ ಜಾನುವಾರುಗಳ ಕಾನೂನು ಭಂಗ ಬಾಯಿದೆಯನ್ನು ನಾನು ಕೆಲವು ಮಟ್ಟಿಗೆ ಸ್ವಾಗತಿಸಿದರೂ ಇದರಿಂದ ಬರಬಹುದಾದ ಕೆಲವು ತೊಂದರೆಗಳನ್ನು ನಾನೀಗ ಈ ಮಾನ್ಯ ಸಭೆಯ ಮುಂದಿಡಬಿಚ್ಛಿಸುತ್ತೇನೆ.

ಸರ್ಕಾರದವರು ಮೂಕ ಪ್ರಾಣಿಗಳ ಮೇಲೆ ಒಂದು ಬಾಯಿದೆಯನ್ನು ಈ ದಿವಸ ತಂದಿದ್ದಾರೆ. ಇದಕ್ಕೆ ಬದಲಾಗಿ ಮಾನವೀಯತೆಯನ್ನು ಕಳೆದುಕೊಂಡು ರಾಜ್ಯದಲ್ಲಿ ಸ್ವೇಚ್ಛೆಯಾಗಿ ತಿರುಗತಕ್ಕ ರಾಜಕೀಯ ಗೂಳಿಗಳ ಬಗ್ಗೆ ಒಂದು ಬಾಯಿದೆಯನ್ನು ತಂದಿದ್ದರೆ ಬಹಳ ಫಲಪ್ರದವಾಗುತ್ತಿತ್ತೆಂದು ನಾನು ಭಾವಿಸಿದ್ದೇನೆ. ಈ ಕಾನೂನನ್ನು ಕತ್ತೆಗಳ ಮೇಲೂ ಕೂಡ ಹೇರಿದ್ದಾರೆ. ಈ ಮಸೂದೆಯನ್ನು ಶಾಸನಕಡತಕ್ಕೇರಿಸಿದರೆ, ರಾಜಕೀಯಕ್ಕೆ ಒಂದು ಹೆಚ್ಚಿನ ಅವಕಾಶಮಾಡಿಕೊಟ್ಟು ಆದರಿಂದ ರಾಜ್ಯದಲ್ಲಿ ಹೆಚ್ಚಿನ ಗೊಂದಲಾಗಳಾಗುವುದಕ್ಕೆ ಇದು ಎಡೆಗೊಡಬಹುದೆಂದು ನನಗನಿಸುತ್ತಿದೆ. ಹಳ್ಳಿ ಹಳ್ಳಿಗಳಲ್ಲೆಲ್ಲಾ ಇದರಿಂದ ರಾಜಕೀಯ ಗೊಂದಲ ಹೆಚ್ಚಾಗುತ್ತದೆ. ಅಷ್ಟು ವಿನಾ ಅನುಕೂಲವೇನೂ ಆಗಲಾರದು. ಈ ಜಾನುವಾರುಗಳ ಕಾನೂನು ಉಲ್ಲಂಘನೆಯನ್ನು ತಡೆಯುವುದಕ್ಕೆ ತಾವು ಈ ಬಿಲ್ಲಿನಲ್ಲಿ,

"Any person authorised by the State Government in this behalf, or any member of the watch and ward staff of a village or Town panchayat, may seize or cause to be seized any cattle trespassing on any land in a village and doing damage to such land or to any crop or produce thereon"

ಎಂದು ಹೇಳಿವೆ. ವಿಲೇಜ್ ಪಂಚಾಯಿತಿ ಇಲ್ಲವೇ ವಾಚ್ ಅಂಡ್ ವಾರ್ಡ್ ಇರತಕ್ಕವರು ಈಗಾಗಲೇ ರಾಜಕೀಯದಲ್ಲಿ ಬಿದ್ದು ತೊಳಲಾಡುತ್ತಾ ಇದ್ದಾರೆ. ಹಳ್ಳಿಗಳಲ್ಲಿ ಟ್ರೆಸ್ ಪಾಸ್ ಮಾಡದೇ ಬಯಲು ಪ್ರದೇಶಗಳಲ್ಲಿ ಜಾನುವಾರುಗಳನ್ನು ಕಟ್ಟಿ ಹಾಕಿ ರೈತರು ತಮ್ಮ ಕೆಲಸಗಳಿಗೆ ಹೋಗುತ್ತಾರೆ. ಅಂತಹ ಸಂದರ್ಭದಲ್ಲಿ ಯಾವನಾದರೂ ವ್ಯಕ್ತಿಯ ಮೇಲೆ ಇಲ್ಲದೇ ಇದ್ದರೆ ಕುಟುಂಬದ ಮೇಲೆ ವೈರ ಇದ್ದರೆ ಆ ದನಗಳನ್ನು ಬಿಚ್ಚಿಕೊಂಡು ಬಂದು ಟ್ರೆಸ್‌ಪಾಸ್ ಮಾಡಿದೆ ಎಂದು ಹೇಳಿ ಕಾನೂನು ಉಲ್ಲಂಘನೆಯಾಯಿತು ಎಂದು ದೊಡ್ಡಿಗೆ ಕಟ್ಟತಕ್ಕ ಸಂದರ್ಭ ಇದೆ, ಮಾತ್ರವಲ್ಲದೆ ಈ ಕಾನೂನನ್ನು ಜಾರಿ ಮಾಡುವ ಬಗ್ಗೆ ಒಂದು ಕ್ಲಾಸ್‌ಅನ್ನು ಹಾಕಿದ್ದೀರಿ :—

"30. Power of State Government to authorise local authorities to exercise powers under the Act.—The State Government, may by notification, authorise any local authority within the area subject to the jurisdiction of such local authority, to exercise all or any of the powers of the State Government or the District Magistrate under this Act, subject to such restrictions and conditions as may be prescribed in such notification."

ಇಂಡಿವಿಜ್ಯುಯಲ್ಸ್ ಎಂದರೆ ವ್ಯಕ್ತಿಗಳು ಯಾರನ್ನಾದರೂ ತಾವು ಈ ಕಾನೂನನ್ನು ಪರಿಪಾಲನೆ ಮಾಡುವುದಕ್ಕಾಗಿ ರಾಜ್ಯಸರ್ಕಾರದವರು ಅಥವಾ ಸಂಬಂಧಪಟ್ಟ ಅಧಿಕಾರಿಗಳು ನೇಮಕ ಮಾಡಬಹುದು, ಹೀಗಿರುವಾಗ ಇದರಲ್ಲಿ ಇನ್ನೂ ಹೆಚ್ಚಿನ ರಾಜಕೀಯ ಬೆಳೆದು ಬರಲಿಕ್ಕೆ ಸಾಧ್ಯವಿದೆ. ಈ ತನಕ ತಂದಿರುವ ಕಾನೂನನ್ನು ನೋಡಿದರೆ ನಾಮಿನೇಷನ್ ಮಾಡತಕ್ಕದ್ದು ಏನಿದೆ ಇದು ನಮಗೆ ಬಹಳ ಹೆದರಿಕೆಯನ್ನುಂಟುಮಾಡುತ್ತಾ ಇದೆ. ತಾವು ಯಾರನ್ನಾದರೂ ಈ ಕಾನೂನನ್ನು ಜಾರಿಗೆ ತರುವ ವಿಷಯದಲ್ಲಿ ನೇಮಕ ಮಾಡಬಹುದು ಅಂತಹ ಸಂದರ್ಭದಲ್ಲಿ ತಮ್ಮ ಜನರನ್ನೇ ನೇಮಕ ಮಾಡತಕ್ಕ ಅಭ್ಯಾಸ ತಮ್ಮಲ್ಲಿ ಜಾಸ್ತಿಯಾಗಿದೆ. ಹಾಗೆ ತಮ್ಮವರು ಯಾರನ್ನಾದರೂ ನೇಮಕ ಮಾಡಿ ಈ ಒಂದು ಕಾನೂನನ್ನು ಪರಿಪಾಲನೆ ಮಾಡುವುದಕ್ಕೆ ಬಿಟ್ಟರೆ ಈ ತನಕ ರಾಜಕೀಯದಲ್ಲಿ

ತೊಳಲಾಡುತ್ತಿರುವ ಪರಿಸ್ಥಿತಿ ಇನ್ನೂ ವಿಷಮ ಸ್ಥಿತಿಗೆ ಬರುತ್ತದೆ. ಮದರಾಸ್‌ನಲ್ಲಿ ಈಗಿರುವ ಕಾನೂನು ಪ್ರಕಾರ ದೊಡ್ಡಿಗಳನ್ನು ವಿಲೇಜ್ ಪಟೇಲರ ಮನೆಯಲ್ಲೇ ನಿರ್ಮಿಸಿದ್ದಾರೆ. ನಾನು ನೋಡಿದ ಮಟ್ಟಿಗೆ ಆ ಜಾನುವಾರುಗಳಿಗೆ ಅಲ್ಲಿ ಕೊಡತಕ್ಕ ನೀರು, ಹುಲ್ಲು ತಿಂಡಿ ತಿನಸುಗಳು ಬಹಳ ಕಡಿಮೆ ರೀತಿಯದು ಆಗಿದೆ. ತಾವೇನೋ ಕಾನೂನು ಮಾಡುತ್ತೀರಿ, ಆದರೆ ಅವರು ಸರಿಯಾಗಿ ಕೊಡುತ್ತಾರೆಯೋ ಇಲ್ಲವೋ ಎಂಬುದನ್ನು ನೋಡಿಕೊಳ್ಳಬೇಕು. ಜಾನುವಾರುಗಳನ್ನು ದೊಡ್ಡಿಗೆ ಸೇರಿಸಿದಾಗ ಅವಕ್ಕೆ ಸರಿಯಾಗಿ ಹೊಟ್ಟೆಗೆ ಹಾಕದಿದ್ದರೆ ಹೇಗೆ ? ಆದ್ದರಿಂದ ಅಧಿಕಾರಿಗಳು ಅನಿರೀಕ್ಷಿತ ಭೇಟಿಕೊಟ್ಟು ಅವಕ್ಕೆ ಸಾಕಾದಷ್ಟು ಹೊಟ್ಟೆಗೆ ಹಾಕುತ್ತಾರೆಯೇ ಇಲ್ಲವೇ ಎಂಬುದನ್ನು ನೋಡಬೇಕು, ಅದನ್ನೂ ಸಹ ಈ ಕಾನೂನಿನಲ್ಲಿ ಸೇರಿಸಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಮಾತ್ರವಲ್ಲದೆ ಜಾನುವಾರುಗಳನ್ನು ದೊಡ್ಡಿಯಲ್ಲಿ ಕಟ್ಟುವಾಗ ರಶೀದಿಯನ್ನು ಪಡೆದು ಕಟ್ಟಬೇಕೆಂದು ತಾವು ಇದರಲ್ಲಿ ಅಳವಡಿಸಿಕೊಂಡಿದ್ದೀರಿ. ಆದರೆ ಹಳ್ಳಿಗಳಲ್ಲಿ ಅವಿದ್ಯಾವಂತ ರೈತರು, ಜಾನುವಾರುಗಳ ಟ್ರೆಸ್ ಪಾಸ್ ಮಾಡಿದಂತಹ ರೈತರು ಯಾರಿದ್ದಾರೆ ಅವರ ದನಕರುಗಳನ್ನು ದೊಡ್ಡಿಗೆ ಕಟ್ಟುವಾಗ ಅಲ್ಲಿಯ ಮುಖಂಡರು ಅಥವಾ ಪೌಂಡ್ ಕೀಪರ್ಸ್ ಪ್ರತಿಭಾವಂತ ವ್ಯಕ್ತಿಗಳಾದರೆ ರಶೀದಿ ಕೊಡದೇ ಹಾಗೆಯೇ ಕಳುಹಿಸುವ ಒಂದು ಪರಿಸ್ಥಿತಿ ಇದೆ, ರಶೀದಿ ಕೇಳಿದರೆ 'ರಶೀದಿ ಏಕೆ ಹೋಗಪ್ಪ ಅದಕ್ಕೆ ತಕ್ಕ ಏರ್ಪಾಡು ಮಾಡುತ್ತೇವೆ.' ಎಂದು ಕಳುಹಿಸಿಬಿಡುವ ಪರಿಸ್ಥಿತಿ ಇದೆ. ಆದ್ದರಿಂದ ಇದರಿಂದ ಹೆಚ್ಚು ಪ್ರಯೋಜನವಾಗುತ್ತದೆಯೇ ಎಂಬ ವಿಚಾರವನ್ನು ಇವತ್ತು ವಿಚಾರ ಮಾಡಬೇಕಾಗಿದೆ. ಮಾತ್ರವಲ್ಲದೆ ಪೌಂಡ್ ಕೀಪರ್ಸ್ ಯಾರಿದ್ದಾರೆ ಅವರನ್ನು ನೇಮಕ ಮಾಡುವಾಗ ಒಳ್ಳೆಯವರನ್ನು ನೋಡಿ ವ್ಯವಹಾರ ಜ್ಞಾನ ಇರುವವರನ್ನು ನೇಮಕ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು "Removal of Cattle to specified places" ಎಂಬ ಕ್ಲಾಸ್ 14 ಇದೆ, ಅದರ ಬಗ್ಗೆ ಹೇಳುವುದಾದರೆ, ಗೋಮಾಳ ಸಾಕಾದಷ್ಟು ಒಂದು ಹಳ್ಳಿಯಲ್ಲಿ ಅಥವಾ ಸ್ಪೆಸಿಫೈಡ್ ಏರಿಯಾದಲ್ಲಿ ಇಲ್ಲದೇ ಇದ್ದರೆ ಮತ್ತು ಅಲ್ಲಿ ಜಾನುವಾರುಗಳು ಜಾಸ್ತಿ ಇದ್ದರೆ ಅವುಗಳನ್ನು ಸಂಬಂಧಪಟ್ಟ ಅಫೀಸರು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸಬಹುದು ಎಂದು ಈ ಕಾನೂನಿನಲ್ಲಿ ಅಳವಡಿಸಿಕೊಂಡಿದ್ದೀರಿ, ಇದರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ. ಮಂಗಳೂರಿನಲ್ಲಿ ಇದ್ದ ಗೋವುಗಳನ್ನು ಅಲ್ಲಿ ಗೋಮಾಳ ಇಲ್ಲದೇ ಇದ್ದರೆ ಬೆಂಗಳೂರಿಗೆ ಸಾಗಿಸುವ ಏರ್ಪಾಡು ಮಾಡಿದರೆ ಬಡ ರೈತರಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಈ ಕ್ಲಾಜನ್ನು ತೆಗೆದುಬಿಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ತಾವು ಇಡೀ ರಾಜ್ಯದ ಮಟ್ಟದಲ್ಲಿ ಏರಿಯಾ ನಿಗದಿಮಾಡಿದ್ದೀರಿ, ತಾಲ್ಲೂಕು ಅಥವ ಜಿಲ್ಲಾಮಟ್ಟದಲ್ಲಿ ಮಾಡಿಲ್ಲ. ರಾಜ್ಯಮಟ್ಟದಲ್ಲಿ ಈ ವಿಷಯವನ್ನು ತೆಗೆದುಕೊಳ್ಳಬಾರದು. ಇದರಿಂದ ದನಗಳನ್ನು ಬೆಂಗಳೂರಿಗೆ ಸಾಗಿಸಬೇಕೆಂದು ಸಂಬಂಧಪಟ್ಟ ಅಫೀಸರು ಆರ್ಡರು ಮಾಡಿದರೆ ಕಷ್ಟವಾಗುತ್ತದೆ. ಆದುದರಿಂದ ಈ ಸಂಬಂಧವಾದ ಕ್ಲಾಜನ್ನು ತೆಗೆಯಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸುತ್ತೇನೆ.

†ಶ್ರೀ ಸಿದ್ದಯ್ಯ ಕಾಶೀಮಠ್.—ಅಧ್ಯಕ್ಷರೇ, ದೇಶದಲ್ಲಿ ತುಡುಗು ದನಗಳ ಹಾವಳಿಯನ್ನು ತಪ್ಪಿಸುವುದಕ್ಕಾಗಿ ಈಗ ತಂದಿರುವ ವಿಧೇಯಕವು ಸ್ವಾಗತಾರ್ಹವಾಗಿದೆ. ಈ ರೀತಿಯ ವಿಧೇಯಕವು ಇದುವರೆಗೆ ಇಲ್ಲದಿದ್ದುದರಿಂದ ರಾಜ್ಯದಲ್ಲಿ ತುಡುಗು ದನಗಳ ಹಾವಳಿಯು ಜಾಸ್ತಿಯಾಗಿ ಅದನ್ನು ತಡೆಗಟ್ಟಲು ರೈತರು ಸರಕಾರದಲ್ಲಿ ಅನೇಕ ವೇಳೆ ಮನವಿಮಾಡಿದ್ದರು. ಮುಖ್ಯವಾಗಿ ಹೇಳಬೇಕೆಂದರೆ ಹುಬ್ಬಳ್ಳಿಯಲ್ಲಿ ರೈತರಿಗೆ ಬಹಳ ಕಷ್ಟವಾಗಿತ್ತು. ಇದರ ಬಗ್ಗೆ ಎಲ್ಲ ಮಂತ್ರಿಗಳಿಗೂ ಕೂಡ ಅವರು ಹೋದಾಗ ಮನವಿಮಾಡುತ್ತಿದ್ದರು. ಇದನ್ನು ಕಣ್ಣಾರೆ ಕಂಡು ತುಡುಗು ದನಗಳ ಹಾವಳಿಯನ್ನು ತಡೆಗಟ್ಟಿ ಸಂಬಂಧಪಟ್ಟ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಲು ಈಗ ಈ ಒಂದು ಕಾನೂನನ್ನು ತಂದಿರುತ್ತಾರೆ.

ಎರಡನೆಯ ಕ್ಲಾಜಿನಲ್ಲಿ ಕ್ಯಾಟಲ್ ಎಂಬುದನ್ನು ವಿವರಿಸುವಾಗ ಆಕಳು, ಎತ್ತು ಮತ್ತು ಹೋರಿ ಮುಂತಾದುವುಗಳನ್ನು ಖಚಿತವಾಗಿ ಅಡಕಮಾಡಿದ್ದರೆ ಚೆನ್ನಾಗಿತ್ತು. ಹಾಗೆ ಮಾಡಿದಿರುವುದರಿಂದ ಅಸ್ಪಷ್ಟವಾಗಿರುವುದರಿಂದ ಅವನ್ನು ಸಹ ಸೇರಿಸಬೇಕೆಂದು ಸೂಚಿಸಬಯಸುತ್ತೇನೆ.

5ನೆಯ ಕ್ಲಾಜಿನಲ್ಲಿ ಪೌಂಡ್ ಕೀಪರುಗಳನ್ನು ನೇಮಕಮಾಡುವ ವಿಚಾರವಿದೆ. ಮುಂಬಾಯಿ ಕರ್ಣಾಟಕದಲ್ಲಿ ದೊಡ್ಡಿಗಳಿವೆ. ಅಲ್ಲಿ ಪಟೇಲರು, ಮುನಿಸಿಪಾಲಿಟಿ ಮತ್ತು ಪಂಚಾಯಿತಿಗಳವರು ಅವುಗಳ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದಾರೆ. ಈ ಮಸೂದೆಯಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಪೋಲೀಸ್ ಪಟೇಲರನ್ನು ಅಥವಾ ಗ್ರಾಮಗಳಲ್ಲಿರುವವರನ್ನು ನೇಮಕಮಾಡಬಹುದು ಎಂದು ತಿಳಿಸಿದ್ದಾರೆ. ಪ್ರತಿಯೊಂದು ಗ್ರಾಮದಲ್ಲೂ ಕೂಡ ಪಂಚಾಯಿತಿ ಸೆಕ್ರೆಟರಿ ಇರುವುದರಿಂದ ಅವರು ಮೇಲ್ವಿಚಾರಣೆ ನೋಡಿಕೊಳ್ಳಲು ಅವಕಾಶ ಕಲ್ಪಿಸಬೇಕೆಂದು ಸಲಹೆ ಮಾಡುತ್ತೇನೆ.

(ಶ್ರೀ ಸಿದ್ದಯ್ಯ ಕಾಶೀಮಠ್)

ಇನ್ನು 7ನೆಯ ಕ್ಲಾಜಿನಲ್ಲಿ ಜಮೀನಿಗೆ ಡ್ಯಾಮೇಜ್ ಮಾಡುವ ದನಗಳ ವಿಚಾರ ನಮೂದಾಗಿದೆ. ಅದರ ಪ್ರಕಾರ ಹೊಲದ ಮಾಲೀಕ, ಸರಕಾರದಿಂದ ಅಧಿಕಾರ ಪಡೆದವರು, ವಾಚ್ ಅಂಡ್ ವಾರ್ಡಿನವರು, ಪಂಚಾಯಿತಿಯವರು ಡ್ಯಾಮೇಜ್ ಮಾಡುವ ದನಗಳನ್ನು ಹಿಡಿದು ದೊಡ್ಡಿಗೆ ಕೊಡ ಬಹುದು. ಇದರಿಂದ ಸ್ವಲ್ಪ ತೊಂದರೆಯಾಗುತ್ತದೆ. ದನಗಳನ್ನು ರಸ್ತೆಮೇಲೆ ಬಿಡದೆ ಇರುವು ದಕ್ಕಾಗುವುದಿಲ್ಲ. ಅದಕ್ಕೆ ಅವಕಾಶಕೊಟ್ಟು ಡ್ಯಾಮೇಜ್ ಮಾಡಿದಾಗ ಮಾತ್ರ ಶಿಕ್ಷೆಗೆ ಅವಕಾಶ ಮಾಡಿದ್ದರೆ ಚೆನ್ನಾಗಿತ್ತು.

9ನೆಯ ಕ್ಲಾಜಿನಲ್ಲಿ ಬೇಕಾದಾಗ ಪೋಲೀಸಿನವರ ಸಹಾಯ ಪಡೆಯಲು ಅವಕಾಶವಿದೆ. ಎಷ್ಟೋ ಕಡೆ ಪೋಲೀಸಿನವರು ಸಹಾಯಮಾಡುತ್ತಾರೆ. ಆದರೆ ಹುಬ್ಬಳ್ಳಿ ಪ್ರದೇಶದಲ್ಲಿ ಪೋಲೀಸ ರನ್ನು ಕರೆದಾಗ ಬರುತ್ತಿರಲಿಲ್ಲ. ಆದುದರಿಂದ ಕ್ಲಾಜಿನಲ್ಲಿ ಇದಕ್ಕೆ ಅವಕಾಶ ಮಾಡಿರುವುದು ಸೂಕ್ತವಾಗಿದೆ.

ಜುಲ್ಮಾನೆ ಹಾಕುವುದು ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಹಾಕುವುದು ಉಚಿತವಲ್ಲ. ಎಲ್ಲ ಕಡೆಯೂ ಯೂನಿಫಾರಂ ಕಾನೂನು ಮಾಡುವಾಗ ಒಂದೇ ದರದಲ್ಲಿ ಹಾಕುವುದು ಸೂಕ್ತ.

14ನೆಯ ಕ್ಲಾಜಿನಲ್ಲಿ ದನಗಳನ್ನು ಒಂದು ಊರಿನಿಂದ ಬೇರೆ ಊರಿಗೆ ಸಾಗಿಸಲು ಅವಕಾಶ ಮಾಡಲಾಗಿದೆ. 20ನೆಯ ಕ್ಲಾಜಿನಲ್ಲಿ ಕಾನೂನಿಗೆ ವಿರುದ್ಧವಾಗಿ ನಿರ್ಬಂಧವಲ್ಲಿಟ್ಟಿದ್ದರೆ ದೂರು ಕೊಡಬಹುದು ಎಂದು ತಿಳಿಸಿದೆ. ಆದರೆ ಅದು ಕಾರ್ಯಸಾಧ್ಯವಲ್ಲ. ಆದುದರಿಂದ ಜನರಿಗೆ ಸಾಧ್ಯವಾಗುವಂತೆ ತಕ್ಕ ಬದಲಾವಣೆ ಮಾಡಬೇಕು.

15ನೆಯ ಕ್ಲಾಜಿನಲ್ಲಿ 7 ದಿವಸಗಳೊಳಗಾಗಿ ರಾಸುಗಳನ್ನು ಕ್ಲೈಂ ಮಾಡದಿದ್ದರೆ ಏನು ಮಾಡ ಬೇಕೆಂಬುದನ್ನು ನಮೂದಿಸಿದೆ. ಆದರೆ ಕತ್ತೆಗಳು ಮತ್ತು ಕುರಿಗಳಿಗೆ 3 ದಿವಸ ಮಾತ್ರ ಅವಕಾಶ ಕೊಟ್ಟಿರುವುದೇಕೆ? ಬೇರೆ ಸಂದರ್ಭಗಳಲ್ಲಿ 7 ದಿನಗಳ ಅವಕಾಶ ಕೊಟ್ಟು ಹೀಗೆ ವ್ಯತ್ಯಾಸ ಮಾಡಿರುವುದೇಕೆ? ಅವೇನು ತಪ್ಪುಮಾಡಿವೆ? ಎಲ್ಲ ಸಂದರ್ಭಗಳಲ್ಲೂ 7 ದಿವಸಗಳ ಅವಕಾಶ ಕೊಡಬೇಕಾದ್ದು ಅವಶ್ಯಕ. 3 ದಿವಸಗಳಲ್ಲಿ ಕ್ಲೈಂ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಕತ್ತೆ ಮತ್ತು ಕುರಿಗಳ ವಿಚಾರದಲ್ಲೂ ಕೂಡ 7 ದಿವಸಗಳ ಅವಕಾಶ ಕೊಡಬೇಕೆಂದು ಸೂಚಿಸುತ್ತೇನೆ.

ಮಾರಾಟಮಾಡುವಾಗ ಆಫೀಸರುಗಳು ಮತ್ತು ಪೌಂಡ್ ಕೀಪರುಗಳು ರಾಸುಗಳನ್ನು ಕೊಳ್ಳಬಾರದೆಂದು ನಿರ್ಬಂಧಪಡಿಸಿರುವುದು ಸ್ವಾಗತಾರ್ಹವಾದ ವಿಚಾರ, ಹಿಂದೆ ಹಾಗೆ ಮಾಡು ತ್ತಿದ್ದ ಸಂದರ್ಭಗಳಿದ್ದುವು. ಆದರೆ ಹಾಗೆ ಮಾಡಿದರೆ ಅದಕ್ಕೆ ಜುಲ್ಮಾನೆ ವಗೈರೆ ಹಾಕುವು ದನ್ನೇನೂ ಸೂಚಿಸಿರುವುದಿಲ್ಲ. 27ನೆಯ ಕ್ಲಾಜಿನಲ್ಲಿ ಪೆನಾಲ್ಟಿ ವಿಚಾರವಿದೆ, ಒಂದು ವೇಳೆ ಕೊಂದು ಕೊಂಡರೆ ಅಥವಾ ಮಾರಾಟದಲ್ಲಿ ಭಾಗವಹಿಸಿದರೆ ಜುಲ್ಮಾನೆ ಹಾಕಬೇಕು ಎಂದಿದೆ. ಇದು ಸರಿ ಯಾಗಿದೆಯೆ ಎಂಬುದನ್ನು ಪರಿಶೀಲಿಸಬೇಕು.

22ನೆಯ ಕ್ಲಾಜಿನಲ್ಲಿ ಅತಿಕ್ರಮವಾಗಿ ಯಾವನು ದನಗಳನ್ನು ದೊಡ್ಡಿಗೆ ತರುತ್ತಾನೋ ಅಂಥಹ ವನಿಗೆ ಒಂದು ನೂರು ರೂಪಾಯಿಗಳ ತನಕ ದಂಡ ಹಾಕಬೇಕು ಎಂದು ಇದೆ. ಈ ರೀತಿಯಾಗಿ ದಂಡ ಹಾಕುತ್ತಾ ಹೋದರೆ ಯಾರೂ ದನಗಳನ್ನು ದೊಡ್ಡಿಗೆ ತರುವುದಿಲ್ಲ. ಆದುದರಿಂದ ದಂಡ ಹಾಕುವು ದನ್ನು ಕಡಿಮೆ ಮಾಡಬೇಕು. ಒಟ್ಟಿನಲ್ಲಿ ಈ ಪಶುಗಳ ಅತಿಕ್ರಮಣಕ್ಕೆ ಸಂಬಂಧಪಟ್ಟ ವಿಧೇಯಕ ವನ್ನು ಮತ್ತೊಮ್ಮೆ ಸ್ವಾಗತಿಸಿ ನಾನು ಸಲಹೆ ಮಾಡಿದಂಥ ತಿದ್ದುಪಡಿಗಳನ್ನು ಇದರಲ್ಲಿ ಸೇರಿಸ ಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

2-30 P.M.

MR. SPEAKER.—Is Sri M. R. Patil participating in the Debate? He is a member of the Committee. Generally members of the committee do not participate, not that there is any rigid rule, but it is only a convention.

SRI M. R. PATIL (Hubli).—I do not want to participate unless the Opposition members bring out any new points.

†SRI V. S. PATIL (Belgaum I).—Sir, as this is a very simple Bill, we expected some good changes would have been made by our committee members.

MR. SPEAKER.—They have done their best.

SRI V. S. PATIL.—But the outlook is rather not good.

MR. SPEAKER.—Sri Patil, you always feel that they have done their best. He may suggest some changes.

SRI V. S. PATIL.—Sir, there were two Chairmen Sri Ramakrishna Hegde and Sri R. M. Patil. Sri Ramakrishna Hegde wanted to centralise every power in the hands of the Government and Sri Patil's views are that everything should be centred round the Police Department. Both these views have been incorporated in this particular Bill.

This is a draft practically on the lines of the Central Act No. I of 1871, which was brought into force by the British Government. Their main purpose was to centralise all powers in the hands of the Government and through their District Magistrates. The District Magistrate was practically a powerful individual when the British Raj was here. We expected that since the Policy of our Government is to decentralise all these powers it would be better to give to the people concerned some powers as far as possible. This matter of cattle trespass is a very simple thing which affects only the village people in the rural areas in the real sense of the term. Now we have started our village panchayats. We have delegated some powers to them to manage their own affairs, so far as village administration is concerned and we expected that these, powers are enlarged, as and when we feel that it is better in the interests of the country to increase their responsibilities. This is a measure to prevent the stray cattle from damaging agriculture crops or garden crops or horticultural gardens and in a very few cases by the owners of cattle intentionally for these purposes, this Act has been in force for such a long time. So far as the enforcement of the provisions of this Act is concerned, it must be the primary duty of the village or the town panchayat to look after these matters. It is not a concern of the Government or the Commissioner or the Deputy Commissioner or the District Magistrate at all. I do not know why the Hon'ble Members of the Select Committee did not take this point of view into consideration when they studied, scrutinised, analysed and then put this draft before this Hon'ble House. Clause 5 is merely a reproduction of the old Act of 1871. Sir, it is now nearly 90 years back that this particular Act was passed when the British Government was in our country. They wanted to centralise all powers in the hands of the District Magistrate and that was why they did it. But, now we have to give these powers or decentralise these powers in the village entitled or the Panchayatraj, which we are now calling. My submission is that this Bill, this Act, ought to have been a part of the Village Panchayat Act itself, a chapter in that Bill which is pending before this House. Now, as it is given as an independent one, still we can make some change.

(SRI V. S. PATIL)

The power of appointment of pound keepers is given to the district magistrate. I do not know why the district magistrate should be overburdened when other works especially the tour programmes of Hon'ble Ministers, the Deputy Ministers and Parliamentary Secretaries too—are there for him to attend to. Secondly, this--the organisation of the Police patels is also likely to be eclipsed in the near future. That was also an archaic idea of the British Government, to keep their hold from the village to the centre through these officers. That also must go. If the village patel is to be appointed as the pound keeper, I think many difficulties are likely to come up, because under this Act, there are some provisions contained in clauses 12, 13 and 14. These clauses are incorporated in this Bill in order to give more powers to the cattle pound keeper. Even he can ask for the deposit of security, which will be even hundreds of rupees from the person whose cattle is seized. We know that some of the Police patels are paid a remuneration by the Government to the extent of three rupees per month. Even there are Patels serving on three rupees per month. Can these officers be allowed to take security from the owners of cattle which may go up to a thousand or two thousand rupees? That may create some difficulties in the actual working. That is why my suggestion is, instead of giving this power to the District Magistrate, the Secretary of the Village Panchayat should be invested with this power of cattle pound keeper. Being the servant of the Panchayat, he will have funds of the Panchayat to maintain the cattle. It is not so in the case of the police patel. Supposing, there will be 10 or 15 cattle impounded; it would be impossible for the patel to feed them for even a day or two.

It has been already suggested in sub-clause (*c*) of clause 2 read with clause 10. "The State Government, may by notification, authorise any local authority within the area, subject to the jurisdiction of the local authority..." etc. So, there is an idea before this Committee to hand over this matter to the Village Panchayat if we read these clauses conjointly. Then, why should we not make a specific law instead of having this intermediary clause to appoint a District Magistrate?

Sir, I have sent some amendments and their copies have been supplied to us. So far as these amendments are concerned, I will speak on them then they are being moved.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ನಮ್ಮ ದೇಶದಲ್ಲಿರತಕ್ಕ ಪುಂಡುದನಗಳು ಯಾವುದಾದರೂ ಆಸ್ತಿಪಾಸ್ತಿಗೆ ತೊಂದರೆ ಮಾಡುವುದಾದರೆ ಅವುಗಳನ್ನು ಹಿಡಿಯುವುದಕ್ಕೆ ಅವುಗಳನ್ನು ದೊಡ್ಡಿಯಲ್ಲಿ ಇಡುವುದಕ್ಕೆ ಯಾವ ರೀತಿ ಕಾಯಿದೆಗಳನ್ನು ಮಾಡಬೇಕು, ಅವುಗಳ ಪಾಲನೆ ಬಗ್ಗೆ ಯಾವ ರೀತಿ ನಿಯಮಗಳನ್ನು ಅನುಸರಿಸಬೇಕೆಂಬ ವಿಷಯವಾಗಿ ಈ ಒಂದು ಸಣ್ಣ ವಿಧೇಯಕದಲ್ಲಿ 33 ವಿಧಿ ನಿಯಮಗಳನ್ನು ಪ್ರಿಂಟ್ ಮಾಡಿ ನಮ್ಮ ಕೈಲಿ ಈ ಸರ್ಕಾರದವರು ಕೊಟ್ಟಿದ್ದಾರೆ. ನನ್ನ ಮಾನ್ಯ ಸ್ನೇಹಿತರಾದ ಶ್ರೀ ವಿ. ಎಸ್. ಪಾಟೀಲ್ ಅವರು ಹೇಳಿದ ಹಾಗೆ ಈ ವಿಧೇಯಕ ಸೆಲೆಕ್ಟ್ ಕಮಿಟಿಗೆ ಹೋಗಿ ಬಂದ ಮೇಲೆ ಇಲ್ಲಿರತಕ್ಕ ದೋಷಗಳು ದೂರವಾಗಬೇಕಾದುದು ಸಹಜ. ಅನಂತರ ಈ ಸಭೆಗೆ ಪುನರ್ಪರಿಶೀಲನೆಗೆ ಬರಬೇಕಾದುದು ನ್ಯಾಯ. ಆದರೆ ಈ ವಿಧೇಯಕ ಸೆಲೆಕ್ಟ್ ಕಮಿಟಿಗೆ ಹೋಗಿ, ಅಲ್ಲಿ ದೀರ್ಘವಾಗಿ ಚರ್ಚೆಯಾಗಿ ಬಂದಿದ್ದರೂ ಇದರಲ್ಲಿರತಕ್ಕ ದೋಷಗಳು ನಿಜವಾಗಿ ದೂರವಾಗಿಲ್ಲ

ವೆಂಬುದು ನನಗೆ ಭಾಸವಾಗುತ್ತಿದೆ. ಏಕೆಂದರೆ ಕ್ಲಾಜ್ 2 ಇಲ್ಲಿ Definitions (a) Cattle includes elephants, camels, buffoloes, horses, mares." ಇತ್ಯಾದಿಗಳನ್ನು ಸೇರಿಸಿದ್ದಾರೆ. ಆದರೆ ಇದರಲ್ಲಿ ಹೇಸರ ಕತ್ತೆ ಎಂಬುದನ್ನು ಸೇರಿಸಿಲ್ಲ. ಮತ್ತು ಜೀಬ್ರ ಎಂಬುದನ್ನೂ ಸಹ ಸೇರಿಸಿಲ್ಲ. ಈ ವಿಚಾರವನ್ನು ಸರ್ಕಾರದವರು ಯೋಚನೆ ಮಾಡಬೇಕು. ಕತ್ತೆಗಳು ಮಾಡುವ ಹಾವಳಿಗಿಂತಲೂ ಹೇಸರ ಕತ್ತೆಗಳ ಹಾವಳಿ ಬಹಳ ಜಾಸ್ತಿ. ಹಿಂದೆ ಒಂದು ಸಾರಿ ಶ್ರೀಮಾನ್ ಕೃಷ್ಣಪ್ಪ ನವರು ಇದೇ ಸಭೆಯಲ್ಲಿ ಪಂಜಾಬಿನಲ್ಲಿ ಒಂದು ಕತ್ತೆ ಏನು ಮಾಡಿತು ಎಂಬ ವಿಷಯವನ್ನು ಹೇಳಿದರು. ಅಲ್ಲಿ ಕತ್ತೆಗಳು ಹೇಸರ ಕತ್ತೆಗಳಂತೆ ಹಾವಳಿ ಮಾಡುತ್ತಿದ್ದುವು ಎಂಬುದನ್ನು ಹೇಳಿದ್ದರು. ಆದ್ದರಿಂದ ಈ ಡಿಫಿನಿಷನ್ನಿನಲ್ಲಿ ಹೇಸರಕತ್ತೆ ಅಥವಾ ಜೀಬ್ರವೆಂಬುದನ್ನು ಸೇರಿಸಬೇಕು. ಅದು ಇದರಲ್ಲಿ ಇಲ್ಲ ದಿದ್ದರೆ ಬಹಳ ತೊಂದರೆಯಾಗುತ್ತದೆ ಎಂಬುದಾಗಿ ನಾನು ಸರ್ಕಾರದವರಿಗೆ ಹೇಳುತ್ತೇನೆ.

ಇನ್ನೊಂದು ವಿಷಯ. ಕಾಡುಮೃಗವಾದ ಮುಳ್ಳು ಹಂದಿ ಗ್ರಾಮಗಳಲ್ಲಿ ಜನಗಳಿಗೆ ತುಂಬಾ ತೊಂದರೆ ಮಾಡುತ್ತದೆ, ಗಿಡಗಳನ್ನೆಲ್ಲಾ ನಾಶಮಾಡುತ್ತವೆ. ಜೋಳದ ಬೆಳೆಯನ್ನು ಸಹ ಕೆಡಿಸು ತ್ತದೆ. ಅದನ್ನು ಇದರಲ್ಲಿ ಸೇರಿಸಿಲ್ಲ. ಕೂಡಲೆ ಡೆಫನಿಷನ್ನಿನಲ್ಲಿ ಮುಳ್ಳುಹಂದಿಯನ್ನು ಸಹ ಸೇರಿಸ ಬೇಕು. ಅದೇ ರೀತಿ ಕಂಡಿಯನ್ನು ಸಹ ಸೇರಿಸಬೇಕು.

ಶ್ರೀ ಆರ್. ಎಂ. ಪಾಟೀಲ್.—ಇದರಲ್ಲಿ ಹೇಳಿರುವುದು ಸಾಕಿದ ಪ್ರಾಣಿಗಳು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆನೆ ಸಾಕಿದ ಪ್ರಾಣಿಯಾದರೂ ಆಗಬಹುದು, ಸಾಕಿದ ಪ್ರಾಣಿ ಆಗದೆಯೂ ಇರಬಹುದು. ನಾನು ಎಲ್ಲವನ್ನು ಕಾಡುಮೃಗಗಳೆಂದು ಹೇಳಲಿಲ್ಲ. ಅದು ಬೇರೆ ಪ್ರಶ್ನೆ. ಈ ಕಾನೂನುಗಳನ್ನು ಓದುತ್ತಾ ಓದುತ್ತಾ ಕಾನೂನು ಪಂಡಿತರುಗಳು ಒಂದೊಂದು ಸಾರಿ ಏನೇನೋ ಮಾಡಿಬಿಡುತ್ತಾರೆ. ಅವುಗಳನ್ನು ಸರಿಯಾಗಿ ರಚನೆಮಾಡಬೇಕು.

ಇನ್ನು ಕಂಪನ್ಸೇಷನ್ ಕೊಡುವ ಬಗ್ಗೆ ಇದರಲ್ಲಿ ಒಂದು ಕಾನೂನನ್ನು ಇಟ್ಟಿದ್ದಾರೆ. ನಾನು ಜನಗಳಿಗೆ ತೊಂದರೆಯಾಗಬಾರದೆಂಬ ದೃಷ್ಟಿಯಿಂದ ಇದನ್ನು ಹೇಳುತ್ತಿದ್ದೇನೆ. ಒಂದು ಕಡೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್, ಇನ್ನೊಂದು ಕಡೆ ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಎಂದು ಮಾಡಿದ್ದಾರೆ. There are two District Magistrat'es ; the Deputy Commissioner and Additional Deputy Commissioner. Among these two who is to exercise this power ?

MR. SPEAKER.—Please see sub-clause (b) on Page 10, District Magistrate means the Deputy Commissioner of the district exercising the powers of a District Magistrate.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ನನ್ನ ಅನುಮಾನ ಪರಿಹಾರವಾಯಿತು.

ಇನ್ನು Establishment of Pounds, Control of Pounds, and Appointment of Pound-keepers ವಿಷಯವಾಗಿ ಹೇಳುವುದಾದರೆ, ಅವನನ್ನು District Magistrate ನೇಮಕ ಮಾಡುತ್ತಾರೆ. ಆ ಪೌಂಡ್ ಕೀಪರ್ರಿಗೆ ಕಮಿಷನ್ ಏನಾದರೂ ಕೊಡುತ್ತಾರೆಯೇ ಸಂಬಳ ಕೊಡುತ್ತಾರೆಯೋ, ಏನೂ ಇಲ್ಲ. ಅಂದ ಮೇಲೆ ಎಲ್ಲಿಯಾದರೂ ಒಂದು ಪೌಂಡ್ ಇಟ್ಟರೆ ಅದನ್ನು ನೋಡಿಕೊಳ್ಳುವುದು, ಮೆಂಟಿನೆನ್ಸ್ ಯಾರು ಮಾಡುವುದು ಎಂಬುದನ್ನು ಇದರಲ್ಲಿ ಹೇಳಲಿಲ್ಲ.

ಶ್ರೀ ಆರ್. ಎಂ. ಪಾಟೀಲ್.—ಅದನ್ನು ರೂಲ್ಸ್ ಮೇಕಿಂಗ್ ಪವರ್‌ನಲ್ಲಿ ಮಾಡುವುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಸರ್ಕಾರಕ್ಕೆ ಎಷ್ಟೋ ಸಾರಿ ಈ ಬಗ್ಗೆ ಬಿನ್ನಹ ಮಾಡಿದ್ದೇನೆ ಸ್ಟ್ಯಾಟ್ಯೂಟ್‌ಗಿಂತ ರೂಲ್-ಮೇಕಿಂಗ್ ಪವರ್ ಬಹಳ ಜೋರಾಗಿರುತ್ತದೆಯೇ? ಅದು ನ್ಯಾಯವೇ, ಎಂದು ಕೇಳುತ್ತೇನೆ.

SRI R. M. PATIL.—That is always there.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪೌಂಡನ್ನು ಮೇಂಟೇನ್ ಮಾಡುವವರು ಯಾರು ಎಂಬುದು ಇದರಲ್ಲಿ ಇಲ್ಲ. ಸೆಲೆಕ್ಟ್ ಕಮಿಟಿಯವರೂ ಕೂಡ ಇದನ್ನು ಗಮನಿಸದೇ ಇರುವುದರಿಂದ ಸರ್ಕಾರ ದವರು ಇದನ್ನು ಸ್ವಲ್ಪ ಯೋಚನೆ ಮಾಡಬೇಕೆಂದು ನಾನು ಹೇಳುತ್ತೇನೆ.

> *Clause 7 : Seizure of cattle damaging land* "(1) Any person authorised by the State Government in this behalf or any member of the watch and ward staff of a village or Town panchayat, may seize or cause to be seized any cattle trespassing

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

on any land in a village and doing damage to such land or to any crop or produce thereon" ಎಂದು ಹೇಳಿದ್ದಾರೆ. ಆ ಮೇಲೆ ಸ್ವಲ್ಪ ಮುಂದಕ್ಕೆ ನೋಡಿ.

> "*Clause 8: Cattle damaging public roads, cannals, embankments, etc.*, Whenever any cattle are found straying on or doing damage to public roads, parks, pleasure grounds, orchards, plantations, canals, drainage works, embankments, or the sides or slopes of such roads, parks, grounds, orchards, plantations, canals, drainage works and embankments and the like, persons incharge of such roads, parks, grounds, orchards, plantations. canals, drainage works, embankments and the like, or any officer of police, may seize or cause to be seized such cattle and shall send them or cause them to be sent within twenty-four hours of the seizure to the nearest pound." ಎಂದು ಹೇಳಿದ್ದಾರೆ.

Who is in charge of these properties? Any person living round about the place notices stray cattle damaging such property, he cannot seize them.

Mr. SPEAKER.—Is the member in charge of that road ?

Sri C. J. MUCKANNAPPA.—The officer in charge of the road is not there ; I have noticed damage being done. What is to be done ? Supposing a person whose property or cattle is seized on behalf of the Government, he may say that just beccuse they are not in good terms the property has been seized and he is unnecessarily harassed. Then he goes to court and the court will have to hold that the seizure is illegal. He has to pay fine ; so the provisions are not clear and they are not helpful to keep stray cattle under check and control. ಆದಕ್ಕೋಸ್ಕರವಾಗಿ ಕ್ಲಾಜ್ 7 ಕ್ಕೂ ಮತ್ತು 8ಕ್ಕೂ ಬಹಳ ವ್ಯತ್ಯಾಸ ಕಾಣುತ್ತದೆ. ಆದ್ದರಿಂದ ಈ ಮಸೂದೆ ಪಾಸಾಗುವುದಕ್ಕೆ ಮುಂಚೆ ಇದನ್ನು ಮತ್ತೊಮ್ಮೆ ಸರ್ಕಾರದವರು ನೋಡಬೇಕೆಂದು ನಾನು ಹೇಳುತ್ತೇನೆ. ಈ ಮಸೂದೆಯನ್ನು ಆತುರ ಆತುರವಾಗಿ ತಂದು ಈ ಸಭೆಯಲ್ಲಿ ಇದನ್ನು ಪಾಸು ಮಾಡುವುದು ನನಗೇನೋ ಸರಿ ಕಾಣುವುದಿಲ್ಲ. ಈಗ ಪಬ್ಲಿಕ್ ರೋಡಿನಲ್ಲಿ ದನಗಳು ಡ್ಯಾಮೇಜ್ ಮಾಡಿದಾಗ ಅವುಗಳನ್ನು ಯಾರು ಸೀಜ್ ಮಾಡಬೇಕೆಂಬುದು ಇದರಲ್ಲಿ ಇಲ್ಲ. ಆದ್ದರಿಂದ ಸರ್ಕಾರದವರು ಈ ಕಡೆ ಸ್ವಲ್ಪ ನೋಡಬೇಕೆಂದು ನಾನು ಹೇಳುತ್ತೇನೆ. ಸಿಲೆಕ್ಟ್ ಕಮಿಟಿಯಲ್ಲಿ ಕೂಡ ಈ ಮಸೂದೆ ಚರ್ಚೆಯಾಗುವಾಗ ಮಧ್ಯೆ ಮಧ್ಯೆ ಅದರ ಅಧ್ಯಕ್ಷರುಗಳೂ ಬದಲಾವಣೆಯಾದರು. ಆ ಮೇಲೆ ಕ್ಲಾಜ್ 9 ರಲ್ಲಿ:

> "*Police to aid seizures*: Whenever there is resistance or likelihood of resistance to a seizure under Section 7 or 8 or the likelihood of the cattle seized being attempted to be rescued from persons making such seizure, the person seizing or causing the seizure of the cattle may require the aid of the police in preventing such resistance or rescue and any officer of police shall, when so required render the aid necessary." ಎಂದು ಹೇಳಿದ್ದಾರೆ.

Take the case of an out-post where the head constable is not present. There is a complaint not to seize. In such circumstance, who is to come to aid ?

Sri R. M. PATIL.—Always there will be a Station House Officer and he is always in charge of the Police station. If the head constable is not there, an officer who is nominated as a Station Officer takes charge of the complaint.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪೋಲೀಸ್ ಸ್ಟೇಷನ್ನಿಗೆ ಕಂಪ್ಲೇಂಟ್ ಕೊಡುವುದಕ್ಕೆ ಹೋದಾಗ, ಅಲ್ಲಿ "The Head constable is not there; there is only one constable. He has to seize cattle. A particular individual makes a complaint." ಎಂದು ಹೇಳುತ್ತಾರೆ.

Sri R. M. PATIL.—It is only imagination.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.. ಇದು ಸ್ವಲ್ಪ ಇಮ್ಯಾಜಿನರಿಯಾಗಿರುವುದರಿಂದ ಇದನ್ನು ಸ್ವಲ್ಪ ವಿಚಾರಮಾಡಬೇಕೆಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

Mr. SPEAKER.—The House will now adjourn for Tea and will meet after half an hour.

The House adjourned for Recess at Three of the Clock and reassembled at Thirty Minutes past Three of the Clock.

[MR. SPEAKER in the Chair.]

Sri B. R. SUNTHANKAR (Belgaum City).—Mr. Speaker, Sir, though I fully agree with the objects of this legislation, I cannot fully support the report of the Select Committee because it is only one-sided as all the members of the Select Committee are from the Ruling Party, *i.e.*, the Congress Party and not a single member is there from the Opposition. That is why this report is a one-party report *i.e.*, the Congress Party Report. When the Original Bill was under discussion, the entire Opposition had staged a walk-out in protest against certain actions and misdeeds of the Government and taking advantage of that walk-out the Government hurried through the legislation and got the Select Committee appointed.

Mr. SPEAKER.—Does the member suggest that they should have waited ?

Sri B. R. SUNTHANKAR.—Certainly. The heavens would not have fallen had the Ruling Party waited. That shows what scant respect the Ruling Party has for the Opposition. Certainly, the Ruling Party could have waited for the co-operation of the Opposition. That means the Ruling Party does not want the co-opeartion of the Opposition. That is why, though I fully agree with the objects of the legislation, I cannot fully support the report of the Select Committee. With these priliminary remarks, I will come to the Bill proper.

As has already been pointed out by my Hon'ble Colleague Sri V. S. Patil, the original Bill was cast on the model of the old Act of 1871, an Act which was enacted nearly a century back. The Select Committee

(Sri B. R. SUNTHANKAR)

has effected no material changes in the original Act: they have no doubt made minor changes but the character of the legislation remains outmoded; it remains the same as that of the Act of 1871. According to the old Act, the control and administration of this legislation was entirely in the hands of the District Magisirate. The District Magistrate in the British regime was all in all in the district. So, all the powers were entrusted to the District Magistrate at that time. But now, the times have changed. We are living in an independent India and we are living in an age of what is called decentralisation. So, there should be decentralisation wherever possible. Here is a legislation in which the Government could have easily decentralised the powers, because, as has been already pointed by some previous speakers. this legislation deals mostly with villages. The administration and control of this legislation should have been transferred to the Panchayatiraj institutions; that has not been done. The Select Committee could have certainly done that. The first Chairman of the Select Committee was the previous Development Minister Sri Ramakrishna Hegde who is considered as a champion of decentralisation of the panchayatiraj in this House, and in spite of his being the first Chairman, he has failed to introduce decentralisation in this legislation. Even now there is a clause at the end which seeks to delegate the power of the State Government to various local authorities. That is not a new provision; there was such a provision in the old Act also. Whenever it was found suitable to the British Government, they used to transfer certain powers to the local bodies. As a matter of Fact, the entire control and administration of the Cattle Trespass Act should have been completely handed over to the panchayatiraj institutions. That has not been done. I would like to request the Government even at this stage to see that the powers of this legislation are transferred as far as possible to Gram panchayats and Panchayatiraj institutions.

Coming to clause 5 about appointment of pound-keepers, I doubt very much how far the police patel of a village will be competent to perform all the duties of a pound-keeper. Some of these duties were certainly there in the old Act, but for all practical purposes the old Act was non-existent. It was rarely exercised. Now when they are enacting this legislation afresh, they will have to see that it is properly administered and it serves the purpose for which it is enacted. The pound-keeper will have to maintain a register, furnish a copy of the register, keep accounts and do so many other things. As has been pointed out by my colleague Sri V. S. Patil clauses 12, 13 and 14 give wide powers in the hands of the pound-keeper and I doubt very much whether the police patel will be the efficient officer to maintain the office of pound-keepers. So I feel that management and control of cattle pounds should be entrusted to Gram Panchayats and the Secretary or any other officer of the Gram Panchayat should be appointed as pound-keeper. That will be in fitness of things.

SRI R. M. PATIL.—The Hon'ble member may kindly read clause 30.

Sri B. R. SUNTHANKAR.—I have already referred to that. That provision was there in the old Act and it is not new. The only thing was it was not properly exercised.

Then coming to clause 6(4) which says that the pound-keeper shall take charge of the cattle and provide them with sufficient food and water, this is a good provision because the experience of the present cattle pounds is very bad. This seems to be a new suggestion made by the Select Committee and it is a very good suggestion because the past experience is that these cattle pounds are neglected. The cattle impounded are not provided with sufficient fodder and water. It is simply a hell for the cattle to be impounded in the present cattle pounds.

Then I come to the provisions of clauses 12 and 13. Under clause 12, the owner of the cattle may come forward and claim the cattle. For that he will have to simply deposit some amount by making a declaration. This provision may be all right in villages where everybody knows whose cattle is the one which is impounded, but in bigger towns and cities this clause may give scope for fake persons to come as owners and claim the cattle. So there should be some provision for ascertaining that the person who appears and claims the cattle as his own is the genuine owner of the cattle. There is no such provision in this clause and so any fake person may come forward and claim the cattle as his own.

Mr. SPEAKER.—Shall we add 'on satisfying proof of his ownership'

Sri B. R. SUNTHANKAR.—Some such provision should be there. People are not now so much law-abiding as they were in 1871.

Similarly, the provision of clause 14 may cause some hardship. For want of sufficient grazing area the resident owner may be asked to remove his useless cattle to such place or places within the State and within such period as may be specified in the order. That is very likely to cause hardship to the resident owner. Where can he send his cattle ? You may direct that he should remove the cattle to such and such a place, but it may be impossible for him to remove the cattle to that place. So if this clause is enforced the result will be that the resident owner will be forced to sell his cattle to the butcher. This will certainly cause hardship. I think this provision should be removed.

As regards the administration of this measure, as I have already pointed out the present administration and control of cattle pounds is very defective. It is not satisfactory at all. After the passing of this enactment Government will have to see that the cattle pounds are properly administered. A large number of new pounds will have to be established and they should be properly maintained, managed and controlled and all care should be taken to see that they are provided with sufficient fodder and water.

With these words, I conclude.

V>31 N65
N65-1-1-5
(B) 4820

[Resignation of Sri R. K. Prasad from the membership Legislative Assembly].—Announcement.

MR. SPEAKER.—Before I call upon anybody else to speak, I have an announcemrnt to make. I have received a letter from the Hon'ble Member Sri R. K. Prasad that he is resigning his membership of this Assembly.

Mysore Cattle Trespass Bill, 1965 as reported by the Select Committee—*Motion to consider* (*contd.*)

SRI ANNARAO GANAMUKHI (Afzalpur).—Sir, I have a few remarks to make in connection with this Bill. As far as the definition clause is concerned, the word 'cattle' has been so amplified as to include Elephants, Camels, Pigs and Asses besides other animals. In our experience, so far I think, no elephant or camel has been impounded in any of the Pounds. We are too far in visualizing that elephants and camels will be left free and that they will do some damage, because every camel will have one or two persons with it to protect it. Elephants are mainly found in jungles. Therefore, it would be a far-fetched idea to amplify this definition of cattle so as to include so many animals. As far as asses are concerned, I should say, they are never kept in the house. If at all they are found, they are found somewhere else.

MR. SPEAKER.—I did not follow the idea.

SRI ANNARAO GANAMUKHI.—The keepers of asses never keep them in their house. They are found somewhere else.

MR. SPEAKER.—I very much appreciate the great import of the remark that asses are not kept in the house; asses are outside on the road.

SRI ANNARAO GANAMUKHI.—With regard to pigs, if anybody is given the power to detain them then our whole sense of the measure will go to dogs; because in bigger smaller towns we never know who the owner is. He may come after three or four months to catch them. In my experience, nobody has brought these pigs to the Pounds.

MR. SPEAKER.—One of the canons of drafting is, if it is redundant it does not matter, but never omit.

SRI ANNARAO GANAMUKHI.—If redundant things are brought in, in the legislation, then of course, we have nothing to do. We are concerned with practical things which are useful in life. Pigs do damage, but they are the pigs which are not kept by anybody. They are stray. Nobody will bring them to the Pound.

MR. SPEAKER.—Pigs are never orphans. They breed plentifully.

SRI ANNARAO GANAMUKHI.—I feel that if these four items, *viz.*, pigs, asses, elephants and camels, are omitted, this amplification would be all right.

As per clause 4, the controlling authority is the District Magistrate. There is the District Magistrate and the Pound-keeper and in between here is nobody else. The District Magistrate cannot directly administer all these things. Therefore, there is necessity for a supervisory authority at the lower level, because the District Magistrate cannot have control at the Tahsil or Taluk level. At this level, the supervisory authority can do the necessary supervision. Sub-clause (4) of Clause 6 says :—

> "The pound-keeper shall take charge of the cattle and provide them with sufficient food and water until they are disposed of in accordance with the provisions of this Act."

Another thing that strikes me is, on many occasions the milking cows are also brought to the Pounds, and the Pound-keeper is left free to take advantage of the milk and not to credit the sale proceeds. On the other hand, the Government expects him to consume the whole milk and credit only the penalty part of it. Therefore, there must be a provision that the pound-keeper should sell the milk and the proceeds should be deposited to the fund. I feel such a provision is very necessary.

Clause 7 is as follows :—

> "7. Seizure of cattle damaging land—(1) Any person authorised by the State Government in this behalf, or any member of the watch and ward staff of a village or Town panchayat, may seize or cause to be seized any cattle trespassing on any land..."

As per the category of animals included in the definition, he can seize or cause to be seized any of them. Here, I should like to make one suggestion. In many villages some bulls are left for religious purposes and they are used as breeding bulls also. For such cattle, I think, nobody should be given the power to seize them, because they are very useful. Nobody seizes them even if any amount of damage is done to the crop. In almost every village there are one or two bulls and they are called 'goolies'. It is not correct to interfere with religious sentiments. It is a very useful animal for the village.

Mr. SPEAKER.—It can be equally useful even if it does not do damage to the crops. Suppose damage is prevented, it can be useful.

Sri ANNARAO GANAMUKHI.—When no owner wants to seize them, why should Government take care to provide such a provision ?

Mr. SPEAKER.—One section of society may be like that.

Sri ANNARAO GANAMUKHI.—Every section of the society in the village never touch these bulls. It goes to every field.

Mr. SPEAKER.—It is a trivial matter.

Sri ANNARAO GANAMUKHI.—Therefore, I feel, that there must be some provision to make an exception in cases of such *Goolies*.

(SRI ANNARAO GANAMUKHI)

CLAUSE 8

Clause 8 does not include premises. Premises means House premises, land premises, etc. There should be no damage to these premises also. But there is no inclusion of premises here. I think, it is only the land owners and agriculturists who are inconvenienced and not others the word "premises" should be included here. Therefore, the word "premises" should be included.

4-00 P.M.

Mr. SPEAKER.—It is included in Clause 7. It is widely defined there. Land does include premises.

Sri ANNARAO GANAMUKHI.—The land may be a house, and all that. The land does not include premises.

Mr. SPEAKER.—This is classified under Clauses 7 and 8, as private property and public property. Clause 7 is wide enough. Clause 8 deals with public property such as roads, canals where anybody can get access.

Sri ANNARAO GANAMUKHI.—Under Clause 7 the word "premises" can be appropriately included which will serve a useful purpose, so that the category of House premiss will be protected from this.

CLAUSE 11

It deals with fines and charges for feeding. Clause 18 also deals with disposal of fines, expenses and surplus proceeds of sale.

Here also I find that there is a presumption in this Bill that the pounds are constructed and they are ready for use. I do not know who constructs the pounds and who maintains them and with what funds. I do not think there are any details about this in the Bill.

Sri C. J. MUCKANNAPPA.—The Local Authority will do it.

Sri ANNARAO GANAMUKHI.—There is no provision in the Bill like that. Unless there is a provision in the Bill, the Local Authority cannot spend. If it is so, out of what funds should they spend ? Is it out of the general fund at the cost of Government or at the cost of Local authority ? There is difference between the two. The Law Minister must go through the provisions and then see whether he can do anything about the funds. Out of the funds collected, a part can be set apart for the construction of pounds and their repairs. This lacuna can be filled in.

All funds recovered under Clause 25 may be appropriated. This will be used towards the payment of compensation for loss or damage to property. But there is no provision whatsoever for meeting the expenditure on construction of pounds. Therefore, Sir, in my opinion, these suggestions should be attended to. I think, the Bill is perfectly allright in all other respects. It needs only minor amendments.

†ಶ್ರೀ ವಿ. ಮಸಿಯಪ್ಪ (ಹಿರಿಯೂರು).—ಮಾನ್ಯ ಅಧ್ಯಕ್ಷರೇ, ಸೆಲೆಕ್ಟ್ ಕಮಿಟಿಯವರು ತಿದ್ದುಪಡಿಗಳನ್ನು ಸೂಚಿಸಿ ಮಾನ್ಯ ಸಭೆಯ ಮುಂದೆ ತಂದಿರತಕ್ಕಂಥ ಈ ರಾಜ್ಯದ ಕ್ಯಾಟಲ್ ಟ್ರೆಸ್ ಪಾಸ್ ಬಿಲ್ಲನ್ನು ನಾನು ಸ್ವಾಗತ ಮಾಡುತ್ತಾ ಇದ್ದೇನೆ. ಸೆಲೆಕ್ಟ್ ಕಮಿಟಿಯವರು ಬಹಳ ಮುಖ್ಯವಾಗಿರತಕ್ಕ ಕೆಲವಾರು ಬದಲಾವಣೆಗಳನ್ನು ಸೂಚಿಸಿ ತಿಳಿಸಿದ್ದಾರೆ. ಸುಮಾರು 8-9 ಬದಲಾವಣೆಗಳನ್ನು ಅವರು ಸಲಹೆ ಮಾಡಿದ್ದಾರೆ. ಈ ಒಂದು ಕಾನೂನು ರಾಜ್ಯದಲ್ಲಿ ಬಹಳ ಅಗತ್ಯವಾಗಿತ್ತು. ದನಗಳು ಅಥವಾ ಬೇರೆ ಪ್ರಾಣಿಗಳು ಸ್ಟ್ರೇ ಕ್ಯಾಟಲ್ ಎನಿಸಿದೆ ಅವು ಮನುಷ್ಯರೇ ಸಾಕಿ, ಬೆಳೆಸಿ ಅವುಗಳಿಂದ ಆದಾಯವನ್ನು ಮಾಡಿಕೊಳ್ಳಬೇಕೆನ್ನತಕ್ಕಂಥ ದೃಷ್ಟಿಯಿಂದ ಸಾಕಿದ ಪ್ರಾಣಿಗಳಾಗಿವೆ. ಅವುಗಳನ್ನು ಸಾಕಿದಂತಹ ಯಜಮಾನರುಗಳು ಅವನ್ನು ಸರಿಯಾದ ರೀತಿಯಲ್ಲಿ ನಿಗಾವಣೆ ನೋಡಿಕೊಳ್ಳದೆ ಇರುವುದರಿಂದ ಮತ್ತು ಕೆಲವು ಸಂದರ್ಭಗಳಲ್ಲಿ ಅಕಸ್ಮಿಕವಾಗಿ ಆಗತಕ್ಕ ತೊಂದರೆಗಳು, ಪಕ್ಕದ ರೈತರು ಮತ್ತು ಪ್ರಯಾಣಿಕರಿಗೆ, ವಾಹನಗಳಿಗೆ ಹೀಗೆ ಅನೇಕ ರೀತಿಯಲ್ಲಿ ಅವುಗಳು ತೊಂದರೆಯನ್ನುಂಟು ಮಾಡತಕ್ಕದ್ದನ್ನು ದೇಶದಲ್ಲಿ ನಾವು ಕಾಣುತ್ತಾ ಇದ್ದೇವೆ, ಈ ತೊಂದರೆಯನ್ನು ನಿವಾರಣೆ ಮಾಡುವುದು ಬಹಳ ಅವಶ್ಯಕವಾಗಿತ್ತು. ಮತ್ತು ಇವತ್ತು ಹಳ್ಳಿಗಳಲ್ಲಿ ಅನೇಕ ಸನ್ನಿವೇಶಗಳಲ್ಲಿ ನಾವು ನೋಡಿದ ಹಾಗೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ವ್ಯಾಜ್ಯ, ವ್ಯವಹಾರಗಳು ಬಹುಮಟ್ಟಿಗೆ ಈ ದನಗಳು, ಕುರಿಗಳು, ಮೇಕೆಗಳು ಒಬ್ಬರ ಹೊಲದಿಂದ ಇನ್ನೊಬ್ಬರ ಹೊಲಕ್ಕೆ ಹೋಗಿ ಫಸಲು ಹಾಳು ಮಾಡುವುದರಿಂದ ಉಂಟಾಗತಕ್ಕದ್ದಾಗಿದೆ. ಆದ್ದರಿಂದ ಇದಕ್ಕೆ ಒಂದು ಸಮಗ್ರವಾದ ಮತ್ತು ಸಮರ್ಪಕವಾದ ಕಾನೂನನ್ನು ಮಾಡಿ ಸರಿಯಾದ ರಕ್ಷಣೆಯನ್ನು ಕೊಟ್ಟು, ವ್ಯವಸ್ಥಿತವಾದ ನಿಗಾವಣೆ ಮಾಡತಕ್ಕ ಒಂದು ಬುದ್ಧಿ ಅವುಗಳ ಮಾಲೀಕರಲ್ಲಿ ಉಂಟು ಮಾಡತಕ್ಕ ರೀತಿಯಲ್ಲಿ ಬಂದೋಬಸ್ತು ಮಾಡತಕ್ಕ ಏರ್ಪಾಡು ಅವಶ್ಯಕವಾಗಿತ್ತು.

ಈ ಮಸೂದೆಯನ್ನು ತಂದಿರುವುದು ಸೂಕ್ತವಾಗಿದೆ, ಸಕಾಲಿಕವಾಗಿದೆ. ಆದರೆ ಇದರಲ್ಲಿ ಇರತಕ್ಕಂಥ ಪ್ರತಿಯೊಂದು ಕ್ಲಾಸ್‌ನ ಬಗ್ಗೆ ಹೆಚ್ಚಿಗೆ ಮಾತನಾಡತಕ್ಕ ಆವಶ್ಯಕತೆ ಏನೂ ಇಲ್ಲ. ಕಾರಣ ಬಹಳ ಮಟ್ಟಿಗೆ ಅನೇಕ ಸದಸ್ಯರು ಈಗಾಗಲೇ ಬಿಟ್ಟು ಹೋಗಿರತಕ್ಕ ಅಂಶಗಳನ್ನು ಸೂಚನೆ ಮಾಡಿದ್ದಾರೆ. ಆದರೆ ಒಂದೆರಡು ಅಂಶಗಳನ್ನು ಮಾತ್ರ ನಾನು ಸಲಹೆ ಮಾಡಿ ನನ್ನ ಭಾಷಣವನ್ನು ಮುಕ್ತಾಯ ಮಾಡಬೇಕೆಂದಿದ್ದೇನೆ. ಕುರಿ ಮತ್ತು ಕತ್ತೆಗಳ ಬಗ್ಗೆ ಕ್ಲಾಜ್ 15ರಲ್ಲಿ :—

"Provided that in the case of asses or sheep the claim shall be made within three days from the date of their impounding."

ಎಂದು ಹೇಳಿದ್ದಾರೆ. ನನಗೆ ಈ ವ್ಯತ್ಯಾಸವನ್ನು ಮಾಡಬೇಕಾಗಿರತಕ್ಕ ಅಗತ್ಯ ಕಂಡು ಬರಲಿಲ್ಲ. ಬೇರೆ ಪ್ರಾಣಿಗಳಿಗೆ 7 ದಿವಸ ಆವಕಾಶ ಮಾಡಿದ್ದಾರೆ. 7 ದಿವಸ ಎಂದು ಮಾಡಿರುವ ಉದ್ದೇಶ ಇಷ್ಟೆ. ಮಾಲೀಕರಿಗೆ ಸೇರಿದ ಪ್ರಾಣಿಗಳು ಎಲ್ಲಿ ಹೋಗಿವೆ, ಏನು ಎಂದು ಹುಡುಕಿ ಪತ್ತೆ ಮಾಡಲು ಮತ್ತು ಹರಾಜು ಮಾಡಲು ಇನ್ನು ಏನಾದರೂ ಕ್ರಮ ತೆಗೆದುಕೊಂಡಿದ್ದರೆ ಅದನ್ನು ಕಂಡು ಹಿಡಿಯಲು ಅವಕಾಶವಾಗಲಿ ಎಂಬ ದೃಷ್ಟಿಯಿಂದ 7 ದಿವಸ ಅವಧಿಯನ್ನು ಇಟ್ಟಿದ್ದಾರೆ. ಕುರಿಗಳು ಮತ್ತು ಕತ್ತೆಗಳ ಬಗ್ಗೆ ಇದನ್ನು ಕಡಿಮೆ ಮಾಡಿರುವುದು ಸಮರ್ಪಕವಾಗಿಲ್ಲ. ಕುರಿ ಜಾಗ್ರತೆ ನಮಗೆ ಸೇರಿದ್ದು, ನಿಮಗೆ ಸೇರಿದ್ದು ಅಲ್ಲ ಎಂದು ಐಡೆಂಟಿಫೈ ಮಾಡುವುದು ಸ್ವಲ್ಪ ಕಷ್ಟ. ಆದುದರಿಂದ ಇವುಗಳ ಬಗ್ಗೆ ಅದೇ ರೀತಿ 7 ದಿವಸ ಅವಧಿ ಇರುವುದು ಸೂಕ್ತ ; ಎಂದು ಸಲಹೆ ಮಾಡಲು ಇಷ್ಟಪಡುತ್ತೇನೆ. ಮೇಲಾಗಿ ಪ್ರಾಣಿಗಳನ್ನು ಹರಾಜು ಹಾಕತಕ್ಕ ಸಂದರ್ಭದಲ್ಲಿ ದನಗಳನ್ನು ದೊಡ್ಡಿಗೆ ಸೇರಿಸಿದ ಮೇಲೆ ಪ್ರಕಟಣೆ ಮಾಡುವ ವಿಧಾನ ಒಂದು ಇದೆ. ವಾಯಿದೆ ಹೋಗಿದ್ದ ಕೂಡಲೆ ದೊಡ್ಡಿಯ ಮೇಲ್ವಿಚಾರಕರು ಪಕ್ಕದಲ್ಲಿ ಪೋಲೀಸ್ ಸ್ಟೇಷನ್‌ಗೆ ತಿಳಿಸಬೇಕು ಎಂದು ಅದನ್ನು ಪೋಲೀಸ್ ಕಟ್ಟಡದಲ್ಲಿ ಸರಿಯಾಗಿ ಪ್ರಚುರಪಡಿಸಬೇಕೆಂದೂ ಗೊತ್ತು ಮಾಡಿದ್ದಾರೆ. ಇದರಿಂದ ತೊಂದರೆ ಏನಾಗುತ್ತದೆ ಎಂದು ಮಾನ್ಯ ಸಭೆಯ ಗಮನಕ್ಕೆ ತರಲು ಇಚ್ಛೆ ಪಡುತ್ತೇನೆ. ನಮ್ಮ ತಾಲ್ಲೂಕಿನ ಅನುಭವ ಹೇಳಿದರೆ ತಪ್ಪಾಗಲಾರದು ಎಂದು ತಿಳಿದುಕೊಂಡಿದ್ದೇನೆ. ನಮ್ಮ ತಾಲ್ಲೂಕಿನಿಂದ ಚಿತ್ರದುರ್ಗ ತಾಲ್ಲೂಕಿಗೆ ಎಮ್ಮೆಗಳು ತಪ್ಪಿಸಿಕೊಂಡು ಹೋಗಿದ್ದುವು. ತಪ್ಪಿಸಿಕೊಂಡು ಹೋದ ದನಗಳನ್ನು ದೊಡ್ಡಿಯಲ್ಲಿ ಇಟ್ಟಾಗ ಅದನ್ನು ಯಾರೂ ಕ್ಲೈಮ್ ಮಾಡಲಿಲ್ಲ. ಅವನ್ನು ಹರಾಜು ಹಾಕಿದರು. ಇಂತಹ ಸಂದರ್ಭದಲ್ಲಿ ತಕ್ಷಣ ಮೇಲ್ವಿಚಾರಕರಿಗೆ ಇನ್‌ಫರ್ಮೇಷನ್ ಸಿಕ್ಕುವುದು ಕಷ್ಟ. ಆ ದನಗಳ ಮಾಲೀಕರು ಯಾವುದೋ ಕೆಲಸಕ್ಕೆ ಅಲ್ಲಿಗೆ ಹೋಗಿದ್ದಾಗ ಯಾವುದೋ ಎಮ್ಮೆಗಳು ಬಂದಿದ್ದುವು ಹರಾಜು ಹಾಕಿದರು ಎಂಬುದನ್ನು ತಿಳಿದು ಅವನ್ನು ಪತ್ತೆ ಮಾಡಿ ಹಣ ಕೊಟ್ಟು ಅವುಗಳನ್ನು ತೆಗೆದುಕೊಂಡು ಹೋಗುವುದಕ್ಕೆ ಅವಕಾಶವಾಯಿತು. ಕೆಲವು ಸಂದರ್ಭಗಳಲ್ಲಿ ವ್ಯಾಜ್ಯದಿಂದಾಗಿ ಯಾವುದೋ ಹತ್ತಿರ ಇರುವ ದೊಡ್ಡಿ ಬಿಟ್ಟು ತೊಂದರೆ ಕೊಡೋಣ ಎನ್ನುವ ಉದ್ದೇಶದಿಂದ ದೂರ ಇರುವ ದೊಡ್ಡಿಗಳಿಗೆ ಅಟ್ಟಿ ದನಗಳನ್ನು, ರಾಸುಗಳನ್ನು ಅಲ್ಲಿ ಕೊಡುತ್ತಾರೆ. ಇದಕ್ಕೆ

(ಶ್ರೀ ವಿ. ಮಸಿಯಪ್ಪ)

† Sri M. V. RAMA RAO (Minister for Home).—With your permission, I would like to place some facts relating to this incident before the House. A person by name Kariyanna, son of Sanna Ugrappa lived in an isolated house in Varadapura Village in Sira Taluk of Tumkur District. The village consists of about 4 or 5 houses only and the boundary of Andhra Pradesh is about a furlong from Kariyanna's house. Kariyanna and his four brothers who lived about a mile and a half from Varadapura village were leaders of one group and another group was headed by a person called Teacher Dasappa, Badagi Gundappa and some others. There were disputes between these two groups and a number of cases and counter cases had been filed by each party against the other.

Mr. SPEAKER.—Is there anything pending in the court pertaining to this ?

Sri M. V. RAMA RAO.—Security proceedings are in the court.

Mr. SPEAKER.—I think security proceedings are also proceedings pending in the court. The Hon'ble Minister may be brief to see that he does not violate it if possible.

SRI M. V. RAMA RAO.—I am not referring to facts of those cases. Action has been taken against both the groups under the security sections of the Code of Criminal Procedure by the Police and these persons had to appear before the Court of the Magistrate in this connection on the 6th of October 1965. On the morning of this particular day, a crowd of about 55 persons led by a person named Saneerappa and some of those persons residing within the jurisdiction of Police Station of Kariyagalahalli, Sira Taluk and some others residing in Madakasira. Taluk, surrounded the House of Kariyanna and heaped ragi hay and jola stacks in front of the House and set fire to the House. They are understood also to have made two big holes in the back wall of the House and inserted ragi hay and jola stack and set fire to it and also through the sky light. As a result of this, the following 9 persons were smoked to death :

Kariyanna	Rathnamma
Hanumakka	Kariyanna
Ammajamma	Korappa
Sarojamma	Sakamma
Allappa	

Puttamma, elder sister of the deceased and three others who were sleeping in a portion of the house between the main building and the cattle-shed, were not affected. On seeing the smoke, Police Constable Kariyappa who was at Tadakalurpalya came running to Varadapura village. On seeing the Police Constable the accused persons ran away. The Police Constable along with some villagers tried to rescue the inmates but the above mentioned 9 persons were dead and they rescued Puttamma and 3 others.

A case has been taken up under the relevant sections of the Indian Penal Code for investigation against Saneerappa and other accused persons. The Deputy Inspector General of Police, Central Range visited the village on 7-10-1965 and made detailed enquiries and issued instructions to the Investigating Officers. The Assistant Superintendent of Police, Tiptur, is camping at the village and the Superintendent of Police, Tumkur District is camping at Sira and guiding the investigation. The Superintendent of Police, Anantapur has instructed the jurisdictional police officers to render all assistance in rounding up the accused who may be found in Madakasira Taluk. So far 11 persons out of the 56 have been arrested and further investigation is proceeding.

SRI K. LAKKAPPA.—One clarification. The matter is not pending in the court. I will not touch the investigation matter. I want to know whether the area has been declared as disturbed area under the new Police Act.

MR. SPEAKER.—Under Rule 63 (2), nothing else can be done after hearing the statement.

Introduction of Bills.

Sri R. M. PATIL (Minister for Development, Panchayat Raj and Municipal Administration).—I beg to introduce the following Bills :

1. The Bangalore Water Supply and Sewerage (Amendment) Bill, 1965.
2. The City of Bangalore Municipal Corporation (Amendment) Bill, 1965.
3. The Channarayapatna Town Municipality (Alteration of Limits) Validation Bill, 1965.

Mr. SPEAKER.—The Bills are introduced :

Sri D. DEVARAJ URS (Minister for Transport and Tourism).—I beg to introduce the Mysore Maternity Benefit Repealing Bill, 1965, which has been published in the *Mysore Gazette*, under rule 64 of the Rules of Procedure and Conduct of Business in the Mysore Legislative Assembly.

Mr. SPEAKER.—The Mysore Maternity Benefit Repealing Bill, 1965 is introduced.

Motion Re: MEASURES TO STEP UP FOOD PRODUCTION AND TO PREVENT ANY SCARCITY IN THE STATE.

ಶ್ರೀ ಡಿ. ಎಂ. ಸಿದ್ಧಯ್ಯ (ಬಳಿಗೆರೆ).—ಮಾನ್ಯ ಸಭಾಪತಿಗಳೆ, ನಾನು ಈ ಸಭೆಯ ಮುಂದೆ ಈ ಸೂಚನೆಯನ್ನು ಮಂಡಿಸುತ್ತೇನೆ.

"ಆಹಾರ ಉತ್ಪಾದನೆಯನ್ನು ಹೆಚ್ಚಿಸಲು ಮತ್ತು ಯಾವುದೇ ಕಾಲದಲ್ಲಿ ರಾಜ್ಯದಲ್ಲುಂಟಾಗುವ ಯಾವುದೇ ರೀತಿಯ ಅಭಾವ ಪರಿಸ್ಥಿತಿಯನ್ನು ತಡೆಗಟ್ಟಲು ಸರ್ಕಾರದವರು ಎಲ್ಲ ಕ್ರಮಗಳನ್ನೂ ಕೈಕೊಳ್ಳಬೇಕೆಂದು ಈ ಸಭೆಯವರು ಶಿಫಾರಸ್ಸು ಮಾಡುತ್ತಾರೆ."

Mr. SPEAKER.—Motion moved :

"That this House recommends to the Government that they should take all measures to step up food production and to prevent any scarcity in the State at any time."

† ಶ್ರೀ ಡಿ. ಎಂ. ಸಿದ್ದಯ್ಯ.—ಮಾನ್ಯ ಅಧ್ಯಕ್ಷರೆ, ಈ ನಿರ್ಣಯವು ದೇಶದ ಹಿತದೃಷ್ಟಿಯಿಂದ ಬಹಳ ಪ್ರಾಮುಖ್ಯವಾದಂಥ ನಿರ್ಣಯ. ನಮ್ಮ ದೇಶಕ್ಕೆ ಈಗ ಒದಗಿರತಕ್ಕಂಥ ಪರಿಸ್ಥಿತಿಯಲ್ಲಿ ನಾವು ನಮ್ಮ ದೇಶವನ್ನು ಆಕ್ರಮಣ ಮಾಡಿದ ಪಾಕೀಸ್ಥಾನೀಯರನ್ನೂ ಮತ್ತು ಚೀಣೀಯರನ್ನೂ ನಮ್ಮ ದೇಶದಿಂದ ಹೊಡೆದಟ್ಟುವುದು ಎಷ್ಟು ಮುಖ್ಯವೋ ಅದಕ್ಕಿಂತಲೂ ಹೆಚ್ಚು ಮುಖ್ಯ, ನಮ್ಮ ದೇಶದಲ್ಲಿ ಆಹಾರವನ್ನು ನಾವು ಉತ್ಪಾದನೆ ಮಾಡಿ ನಮ್ಮ ಕಾಲಿನ ಮೇಲೆ ನಾವು ನಿಲ್ಲುವುದು. ಪರಕೀಯರ ಸಹಾಯವನ್ನೇ ಯಾವಾಗಲೂ ಅಪೇಕ್ಷೆ ಮಾಡಿ ನಾವು ಜೀವಿಸತಕ್ಕದ್ದು ಈ ಪರಸ್ಥಿತಿಯಲ್ಲಿ ಅಷ್ಟು ಗೌರವಯುತವಾಗಿ ಕಾಣುವುದಿಲ್ಲ ಮತ್ತು ಯಾವ ದೇಶ ಆಹಾರದ ವಿಷಯದಲ್ಲಿ ಸ್ವಾವಲಂಬನೆಯನ್ನು ಅನುಸರಿಸಿ, ತನಗೆ ಬೇಕಾದ ಆಹಾರವನ್ನು ತಾನೇ ಬೆಳೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುವುದಿಲ್ಲವೋ ಆ ದೇಶ ಅಂತರ ರಾಷ್ಟ್ರೀಯ ಪಂಕ್ತಿಯಲ್ಲಾಗಲಿ ಅಥವಾ ಇತರ ಸ್ವತಂತ್ರ ರಾಷ್ಟ್ರಗಳ ಪಂಕ್ತಿಯಲ್ಲಾಗಲಿ, ಗೌರವದಿಂದ ಮತ್ತು ಮರ್ಯಾದೆಯಿಂದ ಬಾಳಲು ಕಷ್ಟ ಎಂಬುದನ್ನು ನಾನು ಪ್ರಪ್ರಥಮವಾಗಿ ತಮ್ಮ ಅವಗಾಹನೆಗೆ ತರಲಿಚ್ಛಿಸುತ್ತೇನೆ. ನಮ್ಮ ದೇಶ ವ್ಯವಸಾಯದ ದೇಶ ಮತ್ತು ವ್ಯವಸಾಯ ಕಸಬನ್ನೇ ನೂರಕ್ಕೆ ಎಂಭತ್ತರಷ್ಟು ಜನ ಅನುಸರಿಸಿರತಕ್ಕ ದೇಶ. ಈ ದೇಶದಲ್ಲಿ ನಾವು ಸಾಕಷ್ಟು ಆಹಾರವನ್ನು ಬೆಳೆದು ನಮಗೆ ಬೇಕಾದಷ್ಟನ್ನು ನಾವೇ ಉಪಯೋಗಿಸಿ

(ಶ್ರೀ ಡಿ. ಎಂ. ಸಿದ್ದಯ್ಯ)

ಕೊಳ್ಳತಕ್ಕಂಥ ಕಾರ್ಯಕ್ರಮಗಳನ್ನು ಕೈಕೊಳ್ಳಕ್ಕಂಥಾದ್ದು ಬಹಳ ಹೆಚ್ಚಿನ ಹಾಗೂ ಪವಿತ್ರವಾದ ಕರ್ತವ್ಯ. ನಾನು ಮಂಡಿಸಿರತಕ್ಕ ನಿರ್ಣಯವಾದರೂ ಕೂಡ ಆಹಾರದ ಉತ್ಪಾದನೆಯನ್ನು ಹೆಚ್ಚಿಸಲು ಸರ್ಕಾರದವರು ಕೈಕೊಳ್ಳಬೇಕಾದಂಥ ಕ್ರಮಗಳು ಅದರಲ್ಲೂ ಕೂಡ ಮುಖ್ಯವಾದಂಥ ಅಂಶ ಯಾವುದೇ ರೀತಿಯ ಅಭಾವ ಪರಿಸ್ಥಿತಿಯನ್ನು ತಡೆಗಟ್ಟಲು ನಾವು ಎಲ್ಲಾ ಕಾರ್ಯಕ್ರಮಗಳನ್ನೂ ಕೂಡ ಕೈಕೊಳ್ಳಬೇಕು ಎಂಬುದು. ಮಳೆ ಇಲ್ಲದೆ ಬೆಳೆಗಳು ಹೋಗಲಿ ಅಥವಾ ಯಾವುದೇ ಕಾರಣ ದಿಂದ ನಾವು ಸಾಕಾದಷ್ಟು ಆಹಾರವನ್ನು ಬೆಳೆದುಕೊಳ್ಳುವುದಕ್ಕೆ ತೊಂದರೆಯಾದರೆ ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ಬೇರೆ ಯಾವ ರೀತಿಯಲ್ಲಿ ನಾವು ಏನೇನು ಕಾರ್ಯಕ್ರಮಗಳನ್ನು ಕೈಕೊಳ್ಳ ಬೇಕೋ ಅವೆಲ್ಲವನ್ನೂ ಕೂಡ ಕೈಗೊಂಡು ನಮಗೆ ಸಾಕಾದಷ್ಟು ಆಹಾರವನ್ನು ಬೆಳೆದು ದೇಶದಲ್ಲಿರ ತಕ್ಕ ಎಲ್ಲಾ ಪ್ರಜೆಗಳಿಗೂ ಕೂಡ ಆಹಾರವನ್ನು ಒದಗಿಸಿತಕ್ಕಂಥಾದ್ದು ಸರ್ಕಾರದವರ ಹಾಗೂ ಸಾರ್ವಜನಿಕರ ಕರ್ತವ್ಯವೆಂದು ಹೇಳಿ, ನಾನು ನಮ್ರತೆಯಿಂದ ಸೂಚಿಸುತ್ತೇನೆ.

ನಮ್ಮ ಮೈಸೂರು ದೇಶದಲ್ಲಿರುವ ಸುಮಾರು 21 ಲಕ್ಷ ಎಕರೆ ನೀರಾವರಿಯಲ್ಲಿ ನಾವು ಆಹಾರ ವನ್ನು ಬೆಳೆಯುತ್ತಿದ್ದೇವೆ. ನಮ್ಮಲ್ಲಿರುವ ನೀರಾವರಿ ಮತ್ತು ಖುಷ್ಕಿ ಜಮೀನು ಸೇರಿಕೊಂಡು 277·5 ಲಕ್ಷ ಎಕರೆಗಳಲ್ಲಿ ಮಾತ್ರ ವ್ಯವಸಾಯ ಮಾಡುತ್ತಿದ್ದಾರೆ. ನಮ್ಮಲ್ಲಿ 474 ಲಕ್ಷ 34 ಸಾವಿರ ಎಕರೆ ಇದ್ದರೂ ಕೂಡ, ಅದರಲ್ಲಿ ನೀರಾವರಿ ಆಗಿರುವುದು 21 ಲಕ್ಷ ಎಕರೆ ಮಾತ್ರ. ಭಾರತದಲ್ಲಿ ನೀರಾವರಿ ಪ್ರದೇಶ ಸರಾಸರಿ ಸೇಕಡ 17·3ರಷ್ಟಿದ್ದರೆ ಮೈಸೂರಲ್ಲಿ 8·4ರಷ್ಟಿದೆ. ನಾವು ಮಳೆಯ ಆಸರೆಯಿಂದ ಬೆಳೆಯುವುದು ಸೇಕಡ 9·6 ಅಂದಮೇಲೆ ನಾವು ಯಾವಾಗಲೂ ಮಳೆ ನೆಚ್ಚಿಕೊಂಡು ಬೆಳೆದು ಆಹಾರವನ್ನು ಸಾಕಷ್ಟು ಒದಗಿಸುವುದು ಕಷ್ಟವಾಗುತ್ತದೆ. ಈ ದೃಷ್ಟಿಯಿಂದ ಸರಕಾರ ದವರು ಅನೇಕ ಯೋಜನೆಗನ್ನು ತಯಾರಿಸಿದ್ದಾರೆ. ಅದರಲ್ಲಿ ದೊಡ್ಡ ದೊಡ್ಡ ನೀರಾವರಿ ಯೋಜನೆ ಗಳು, ಸಣ್ಣ ನೀರಾವರಿ ಯೋಜನೆಗಳು ಮತ್ತು ಬಾವಿ ತೆಗೆಸಿ ಅವಕ್ಕೆ ಪಂಪು ಸೆಟ್ಟನ್ನು ಹಾಕಿ, ಬೆಳೆ ತೆಗೆಯುವುದು ಮತ್ತು ವಿದ್ಯುಚ್ಛಕ್ತಿ ಸಹಾಯದಿಂದ ಆಹಾರ ಉತ್ಪಾದನೆ ಮಾಡುವುದು, ಹೀಗೆ ವಿವಿಧ ರೀತಿಯಲ್ಲಿ ಕಾರ್ಯಕ್ರಮ ಕೈಕೊಂಡಿರುವುದು ಕಾಣಬರುತ್ತದೆ. ಈ ಮೂಲಕ ಆಹಾರವನ್ನು ಹೆಚ್ಚಿಸಲು ಸರಕಾರ ಪ್ರಯತ್ನ ಮಾಡಿದೆ. ದೊಡ್ಡ ದೊಡ್ಡ ನೀರಾವರಿ ಯೋಜನೆ ಹತ್ತಾರು ನಮಗೆ ಕಾಣಬರುತ್ತಿವೆ. ಆದರೆ ಅವು ಶೀಘ್ರವಾಗಿ ಫಲ ಕೊಡುವುದಿಲ್ಲ, ಅದಕ್ಕೆ 10-15 ವರ್ಷ ಬೇಕಾಗು ತ್ತದೆ. ಸಣ್ಣ ಯೋಜನೆಗಳಾದರೆ ಬಹಳ ಬೇಗ ಫಲ ಕೊಡುವುದರಿಂದ ಅವನ್ನು ಹೆಚ್ಚಾಗಿ ಕೈಕೊಳ್ಳ ಬೇಕೆಂದು ಹೇಳಬಯಸುತ್ತೇನೆ. ಮುಖ್ಯವಾಗಿ ಸಣ್ಣ ಸಣ್ಣ ಪಿಕಪ್‌ಗಳನ್ನು ಹಾಕುವುದು, ಮಧ್ಯಮ ವರ್ಗದ ನೀರಾವರಿ ಯೋಜನೆ ಮತ್ತು ಬಾವಿಗಳನ್ನು ತೆಗೆಸುವುದು ಮುಂತಾದುವನ್ನು ಸಣ್ಣ ನೀರಾವರಿ ಯೋಜನೆಯಲ್ಲಿ ಕೈಕೊಂಡು ತನ್ಮೂಲಕ ಹೆಚ್ಚು ಆಹಾರ ಬೆಳೆಯುವುದು ಬಹಳ ಮುಖ್ಯ ವಾದುದು. ಬಾವಿಗಳನ್ನು ತೆಗೆಯಬೇಕೆಂಬ ಮನೋಭಾವನೆ ರೈತರಲ್ಲೂ ಸರಕಾರದಲ್ಲೂ ಇತ್ತೀಚಿಗೆ ಹೆಚ್ಚಾಗಿ ಬೆಳೆದು ಅನೇಕ ರೈತರು ಮುಂದೆ ಬಂದು ಬಾವಿಗಳನ್ನು ತೆಗೆದು ಐ.ಪಿ. ಸೆಟ್ಟುಗಳನ್ನು ಜೋಡಿಸಿ ಆಹಾರ ಬೆಳೆದು ಬಹಳ ಮಟ್ಟಿಗೆ ಆಹಾರ ಪರಿಸ್ಥಿತಿಯನ್ನು ಸುಧಾರಿಸುತ್ತಿದ್ದಾರೆ. ಆದರೆ ಈ ದಿವಸ ರೈತರಿಗಿರುವ ಕಷ್ಟವೇನೆಂದರೆ ಸರಕಾರ ಕೊಡುವುದು 3,000 ರೂಪಾಯಿ. ಅದರಲ್ಲಿ 500 ರೂಪಾಯಿ ಸಬ್ಸಿಡಿ ರೂಪವಾಗಿ ಮತ್ತು 2,500 ರೂಪಾಯಿ ಸಾಲದ ರೂಪವಾಗಿ ಸಲ್ಲುತ್ತದೆ. ಆ 3,000 ರೂಪಾಯಿಗಳಲ್ಲಿ ಬಾವಿಯನ್ನು ಪೂರ್ಣವಾಗಿ ತೆಗೆಯುವುದಕ್ಕಾಗುವುದಿಲ್ಲ. ಹೀಗಾಗಿ ಅನೇಕ ರೈತರು ಸಾಲ ಪಡೆದರೂ ಬಾವಿಯನ್ನು ಪೂರ್ಣಮಾಡಲು ಸಾಧ್ಯವಾಗದೆ ಅರ್ಧಕ್ಕೇ ನಿಲ್ಲಿಸುತ್ತಿದ್ದಾರೆ. ಇದರಿಂದ ಸರಕಾರದ ಹಣ ಸದುಪಯೋಗವಾಗುತ್ತಿಲ್ಲ ಮತ್ತು ಹೆಚ್ಚು ಆಹಾರ ಬೆಳೆಯುವುದಕ್ಕೆ ಸಾಧ್ಯವಾಗಿಲ್ಲ. ಆದುದರಿಂದ ಸರಕಾರ ಈಗ ತುರ್ತು ಪರಿಸ್ಥಿತಿಯಲ್ಲಿ ಹೆಚ್ಚು ಹಣ ರೈತರಿಗೆ ಕೊಡುವ ಯೋಚನೆ ಮಾಡಬೇಕೆಂದು ಸಲಹೆ ಮಾಡಬಯಸುತ್ತೇನೆ. ಹಾಗೆ ಮಾಡುವಾಗ ರಿಸರ್ವ್ ಬ್ಯಾಂಕಿನಿಂದ ಕೊನೆಯ ಪಕ್ಷ 5,000 ರೂಪಾಯಿಗಳನ್ನು ಆಪೆಕ್ಸ್ ಬ್ಯಾಂಕಿನ ಮೂಲಕ ಒಬ್ಬ ರೈತನಿಗೆ ಕೊಟ್ಟರೆ 500 ರೂಪಾಯಿಗಳ ಸಬ್ಸಿಡಿ ಕೊಡಬೇಕಾಗಿಲ್ಲ. ಅದಕ್ಕೆ ಕಡಮೆ ದರ್ಜೆ ಬಡ್ಡಿ ಹಾಕಿಕೊಟ್ಟರೆ ಅದರಿಂದ ಬಾವಿಯನ್ನು ಪೂರ್ಣ ಮಾಡಿ, ಆ ಮೂಲಕ ಹೆಚ್ಚು ಆಹಾರ ಬೆಳೆಯಲು ಸಹಾಯವಾಗುತ್ತದೆ. ಇದನ್ನು ಸರಕಾರ ದವರು ಆದಷ್ಟು ಜಾಗ್ರತೆ ಜಾರಿಗೆ ತರುತ್ತಾರೆಂದು ಆಶಿಸುತ್ತೇನೆ. ಇದರ ಜೊತೆಗೆ ನಮ್ಮಲ್ಲಿ ಶರಾವತಿಯ ವಿದ್ಯುಚ್ಛಕ್ತಿ ಬೇಕಾದಷ್ಟಿದೆ. ಅದರಲ್ಲಿ ನಮ್ಮ ದೇಶಕ್ಕೆ ಬೇಕಾದಷ್ಟನ್ನು ಉಪಯೋಗಿಸಿ ಕೊಂಡು ಪರ ಪ್ರಾಂತಗಳಿಗೆ ಹೆಚ್ಚಾಗಿರುವುದನ್ನು ಕೊಡುವ ಪದ್ಧತಿ ಇದೆ. ಅದರ ಪ್ರಕಾರ ಕೊಡುತ್ತಿದ್ದಾರೆ, ಇದು ಹೆಮ್ಮೆಯ ವಿಷಯ. ಆದರೆ ನಮ್ಮ ದೇಶದಲ್ಲಿ ಅನೇಕರು ಬಾವಿ ತೆಗೆದು ತನ್ಮೂಲಕ ವ್ಯವಸಾಯವನ್ನು ಮಾಡಿ ಆಹಾರವನ್ನು ಹೆಚ್ಚಾಗಿ ಬೆಳೆಯಲು ಯೋಚನೆ ಮಾಡುತ್ತಿದ್ದಾರೆ.

ಅದಕ್ಕೆ ಸರಕಾರ ಬಾವಿ ತೆಗೆಯುವ ರೈತರಿಗೆ ಹೆಚ್ಚು ವಿಳಂಬವಿಲ್ಲದೆ ಜಾಗ್ರತೆ ಪವರ್ ಮತ್ತು ಐ.ಪಿ. ಸೆಟ್ ಮುಂತಾದ ಸೌಲಭ್ಯಗಳನ್ನು ಒದಗಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಕೆಲವು ದಿವಸಗಳ ಹಿಂದೆ ನಮ್ಮ ಕಡೆ ಪ್ರವಾಸ ಮಾಡಿದಾಗ ಸಣ್ಣ ಸಣ್ಣ ಹಳ್ಳಿಗಳಲ್ಲಿ ಒಂದೊಂದು ಕಡೆ 8-10 ಬಾವಿಗಳನ್ನು ತೆಗೆದು ಪಂಪುಸೆಟ್ಟುಗಳಿಗೆ ಅರ್ಜಿ ಹಾಕಿ ಪವರ್ ತೆಗೆದುಕೊಳ್ಳಲು ಕಾತುರರಾಗಿರುವುದನ್ನು ನೋಡಿ ಸಂತೋಷ ಪಟ್ಟು ಆದಷ್ಟು ಬೇಗ ಅವರಿಗೆ ಪವರ್ ಕೊಡಿಸುವುದಾಗಿ ಭರವಸೆ ಕೊಟ್ಟರು. ಇದು ಹೆಚ್ಚು ಆಹಾರ ಬೆಳೆಯಲು ಬಹಳ ಮುಖ್ಯವಾಗಿ ಆಗಬೇಕಾದ ಒಂದು ಕಾರ್ಯ. ಇದನ್ನು ಸರಕಾರದವರು ಬಹಳ ತ್ವರಿತವಾಗಿ ನೆರವೇರಿಸಬೇಕೆಂದು ಮನವಿಮಾಡುತ್ತೇನೆ. ಇದರ ಜೊತೆಗೆ ನಮ್ಮ ದೇಶದಲ್ಲಿ ನೀರಾವರಿಯಾಗುವುದನ್ನು ಪಕ್ಕದ ಪ್ರಾಂತಗಳಾದ ಮದ್ರಾಸ್ ಮತ್ತು ಆಂಧ್ರ ಗಳೊಂದಿಗೆ ಹೋಲಿಕೆ ಮಾಡಿದರೆ ನಮ್ಮದು ಕಡಮೆ. ಆಂಧ್ರದಲ್ಲಿ ಸೇಕಡ 45 ಭಾಗ ನೀರಾವರಿಯಾ ದರೆ ನಮ್ಮಲ್ಲಿ ಕೇವಲ ಸೇಕಡ ಎಂಟು ಭಾಗ ಆಗುತ್ತಿದೆ. ನಮ್ಮ ದೊಡ್ಡ ಯೋಜನೆಗಳನ್ನು ಪೂರ್ಣ ಮಾಡಿ ನಮ್ಮಲ್ಲಿ ದೊರೆಯುವ ಪ್ರತಿಯೊಂದು ತೊಟ್ಟು ನೀರನ್ನೂ ಪೂರ್ಣವಾಗಿ ಉಪಯೋಗ ಮಾಡಿ ಕೊಂಡರೆ ಸೇಕಡ 27ರಷ್ಟು ನೀರಾವರಿಯಾಗುವುದು. ಇಂಥ ಪರಿಸ್ಥಿತಿ ಇರುವಾಗ ಒಂದು ತೊಟ್ಟು ನೀರನ್ನೂ ಕೂಡ ಅನ್ಯಾಯ ಮಾಡದೆ ಸಣ್ಣ ಪಿಕಪ್‌ಗಳನ್ನು ಸಾಧ್ಯವಿರುವ ಕಡೆ ಹಾಕಬೇಕು, ಸರ್ವೆ ಮಾಡಿ ಸಣ್ಣ ಸಣ್ಣ ನೀರಾವರಿ ಯೋಜನೆಗಳಿಗೆ ಸರಕಾರ ಹೆಚ್ಚು ಸಹಾಯ ಮಾಡಬೇಕು. ಈಗ ಸರಕಾರದವರು ಸಣ್ಣ ಯೋಜನೆಗಳನ್ನು ತಯಾರಿಸಿ ಬಹಳ ಜಮೀನು ನೀರಾವರಿಗೆ ಬರುವಂತೆ ಏರ್ಪಾಡು ಮಾಡಿದ್ದಾರೆಂದು ಕೇಳಿದ್ದೇನೆ. ಹಾಗೆ ಮಾಡಿದ್ದರೆ ಅದು ನಿಜವಾಗಿಯೂ ಸ್ತುತ್ಯಾರ್ಹ ವಾದ ವಿಚಾರ. ಇದರ ಜೊತೆಗೆ ಆಹಾರ ಹೆಚ್ಚಾಗಿ ಬೆಳೆಯಲು ಮುಖ್ಯವಾಗಿ ಬೇಕಾಗಿರುವುದು ಗೊಬ್ಬರ ಅಂದರೆ ರಸಾಯನಿಕ ಗೊಬ್ಬರ. ಅದನ್ನು ಹೆಚ್ಚಾಗಿ ಕೊಡಬೇಕಾಗಿದೆ. ಮೊದಲನೆಯ ಮೂರು ಪಂಚವಾರ್ಷಿಕ ಯೋಜನೆಗಳಲ್ಲಿ ಸರಕಾರದವರು ಸಾಧ್ಯವಾದಷ್ಟು ಮಟ್ಟಿಗೆ ಗೊಬ್ಬರವನ್ನು ಕೊಟ್ಟರು. ಆದರಿಂದ ಸ್ವಾಭಾವಿಕವಾಗಿ ಆಹಾರದ ಉತ್ಪತ್ತಿ ಹೆಚ್ಚಾಗಿದೆ. ಸಾಕಾದಷ್ಟು ಗೊಬ್ಬರ ಒದಗಿಸಿದರೆ ಹೆಚ್ಚು ಆಹಾರವನ್ನು ಕಾಣಬಹುದು. ಆದರೆ ಈಗಿನ ಪರಿಸ್ಥಿತಿಯಲ್ಲಿ ಫರ್ಟಿಲೈಜರ್ಸ್ ಎಷ್ಟು ಮಟ್ಟಿಗೆ ಸಿಕ್ಕುತ್ತಿದೆ ಎಂಬುದನ್ನು ವಿಚಾರಮಾಡಬೇಕಾಗಿದೆ. ಈ ಕೆಮಿಕಲ್ ಫರ್ಟಿಲೈಜರ್ಸ್ ಸಾಕಾದಷ್ಟು ಸಿಕ್ಕದಿದ್ದರೆ ನಮ್ಮ ರೈತರು ಹಿಂದಿನಿಂದ ಅನೂಚಾನವಾಗಿ ಉಪಯೋಗಿಸುತ್ತಿದ್ದ ಗೊಬ್ಬರವನ್ನೇ ಸರಿಯಾದ ರೀತಿಯಲ್ಲಿ ಕಾಪಾಡಿಕೊಂಡು ಅದರ ರಸ ಕಳೆಯದೆ ಹೆಚ್ಚು ಸಹಾಯ ವಾಗುವ ಹಾಗೆ ಇಟ್ಟುಕೊಂಡರೆ ನೆರವಾಗುತ್ತದೆ. ಕಾಂಪೋಸ್ಟ್ ಮೆನ್ಯೂರನ್ನು ಕೂಡಿಹಾಕಿ ಮಣ್ಣು ಗೊಬ್ಬರ ಸೇರಿಸಿ ಕೊಳೆಯುವಂತೆ ಮಾಡಿ ಅದು ಶಕ್ತಿಯುತವಾಗುವಂತೆ ನೋಡಿಕೊಂಡು ಉಪಯೋಗ ಮಾಡಿಕೊಳ್ಳಬೇಕು. ಈ ಸಮಯದಲ್ಲಿ ಸರಕಾರದವರು ಹಿಂದೆ ಮಾಡಿದಂತೆ ಕಾಂಪೋಸ್ಟ್ ಮೆನ್ಯೂರನ್ನು ತಯಾರಿಸಿಕೊಡಬೇಕು. ಪ್ರತಿ ಪಂಚಾಯಿತಿಯೂ ಎರಡು ಸಾವಿರ ರೂಪಾಯಿಗಳ ಕಾಂಪೋಸ್ಟ್ ಮೆನ್ಯೂರನ್ನು ತಯಾರು ಮಾಡಿಕೊಡಬೇಕು. ಈ ರೀತಿ ಮಾಡಲು ಪಂಚಾಯಿತಿಗಳಿಗೆ ಸಹಾಯ ಮಾಡಬೇಕು. ಇದರ ಜೊತೆಗೆ ಹಸಿರು ಗಿಡದ (ಗ್ರೀನ್ ಮೆನ್ಯೂರ್) ಗೊಬ್ಬರ ತಯಾರಿಸುವ ಪದ್ಧತಿ ಇದೆ, ಹಸಿರ ಗಿಡ ತಂದು ಕೊಳೆಸಿ ಗೊಬ್ಬರ ಮಾಡುವುದುಂಟು. ಇದಕ್ಕೆ ಪ್ರೋತ್ಸಾಹ ಕೊಡಬೇಕು. ನಮ್ಮ ದೇಶದಲ್ಲಿ ನೈಟ್ ಸಾಯಿಲ್ ಗೊಬ್ಬರಕ್ಕಾಗಿ ಉಪಯೋಗಿಸುವ ಪದ್ಧತಿಯಿಲ್ಲ. ಅದಕ್ಕೆ ಮತ ಅಥವಾ ಧರ್ಮ ಅಡ್ಡಿ ಬರುತ್ತದೆ. ಅದೇ ಜಪಾನ್ ದೇಶದಲ್ಲಿ ಜನರು ಅದನ್ನು ಸ್ವಲ್ಪವೂ ಹಾಳುಮಾಡದೆ ಸರಿಯಾಗಿ ಹದಮಾಡಿ ಅದರ ಉಪಯೋಗದಿಂದ ಹೆಚ್ಚಿನ ಆಹಾರ ಬೆಳೆಯುತ್ತಾರೆ. ನಮ್ಮವರೂ ಕೂಡ ಆ ಬಗ್ಗೆ ಪ್ರಯತ್ನ ಮಾಡಿ ಹಳ್ಳಿಗಳಲ್ಲಿ ಮಾಸ್ ಲ್ಯಾಟ್ರಿನ್ ಒಂದು ಕಡೆ ಮಾಡಿ ಅಲ್ಲಿ ಎಲ್ಲರೂ ಹೋಗುವ ಮನೋಭಾವ ಅವರಲ್ಲಿ ಮೂಡುವಂತೆ ಮಾಡಬೇಕು. ಇದು ಕಠಿಣ ಸಮಯವಾದರೂ ಹೆಚ್ಚು ಪ್ರಚಾರ ಮಾಡಿ ಜನರು ಇದಕ್ಕೆ ಸಹಕರಿಸು ವಂತೆ ಮಾಡಬೇಕು. ಕೆಮಿಕಲ್ ಫರ್ಟಿಲೈಜರ್ಸ್ ಸಿಕ್ಕದಿರುವಾಗ ಈ ರೀತಿಯಾಗಿ ನಮ್ಮಲ್ಲಿ ಸಿಕ್ಕುವ ವಸ್ತುಗಳನ್ನೇ ಸರಿಯಾದ ರೀತಿಯಲ್ಲಿ ಉಪಯೋಗಿಸಿ ಗೊಬ್ಬರ ತಯಾರಿಸಲು ಪ್ರೋತ್ಸಾಹ ಕೊಡಬೇಕು. ಹೀಗೆ ಮಾಡಿದರೆ ಹೆಚ್ಚು ಆಹಾರ ಬೆಳೆಯಲು ಸಾಧ್ಯವಾಗುತ್ತದೆಂದು ಸಲಹೆ ಮಾಡುತ್ತೇನೆ.

ಮೂರನೆಯದಾಗಿ ಇನ್ನೂ ಮುಖ್ಯವಾದ ಮತ್ತೊಂದು ಸಲಹೆ ಏನೆಂದರೆ ಬರೀ ಒಂದು ಬೆಳೆ ಬೆಳೆಯುತಕ್ಕ ಜಮೀನಿನಿಂದ ಎರಡು ಬೆಳೆ ತೆಗೆಯುತಕ್ಕ ಯೋಚನೆ ಮಾಡಬೇಕು ಮತ್ತು ಎರಡು ಬೆಳೆ ಬೆಳೆಯುತಕ್ಕ ಜಮೀನಿನಲ್ಲಿ ಮೂರು ಬೆಳೆ ತೆಗೆಯುತಕ್ಕದ್ದನ್ನು ಕೂಡ ಯೋಚಿಸಬೇಕು. ಮೊನ್ನೆ ತಾನೆ ಮಾನ್ಯ ಮುಖ್ಯ ಮಂತ್ರಿಗಳು ಜಪಾನ್ ದೇಶದವರ ಸಹಾಯದಿಂದ ಮಂಡ್ಯದ ಹತ್ತಿರ ಆರು ಕೋಟಿ ರೂಪಾಯಿ ವೆಚ್ಚ ಮಾಡಿ ಬತ್ತವನ್ನು ಅಧಿಕ ಪ್ರಮಾಣದಲ್ಲಿ ಬೆಳೆಯುವುದಕ್ಕೆ ಒಂದು ಯೋಜನೆಯನ್ನು ಪ್ರಾರಂಭ ಮಾಡಿದರು. ಜಪಾನ್ ಮುಂತಾದ ದೇಶಗಳಲ್ಲಿನಂತೆ ನಾವು ಹೆಚ್ಚು ಬೆಳೆಗಳನ್ನು ತೆಗೆಯುವುದರ ಜೊತೆಗೆ ಹೆಚ್ಚು ಹೆಚ್ಚು ಆಹಾರವನ್ನು ಉತ್ಪಾದನೆ ಮಾಡುವುದಕ್ಕೆ ಹೊಸ ಹೊಸ

(ಶ್ರೀ ಡಿ. ಎಂ. ಸಿದ್ದಯ್ಯ)

ರೀತಿಯ ಕ್ರಮಗಳನ್ನು ಅನುಸರಿಸುವಂತೆ ನಮ್ಮ ಜನರಲ್ಲಿ ನಾವು ತಕ್ಕಷ್ಟು ಪ್ರಚಾರ ಮಾಡಬೇಕು. ರೈತರಿಗೆ ಸಾಕಷ್ಟು ತಿಳುವಳಿಕೆ ಕೊಟ್ಟು ಅವರು ಒಂದು ಫಲವತ್ತಾದ ಜಮೀನಿನಿಂದ ಒಂದು ಬೆಳೆಯನ್ನು ಬೆಳೆದು ಸುಮ್ಮನೆ ಕುಳಿತ್ತಿರುವುದು, ನಾವು ಬತ್ತವನ್ನೇ ಬೆಳೆಯುತ್ತೇವೆ ಎಂದು ಉಳಿದ ಬೆಳೆಗಳನ್ನು ಉಪೇಕ್ಷೆ ಮಾಡುವುದು, ಇಂಥ ತುರ್ತು ಪರಿಸ್ಥಿತಿಯಲ್ಲಿ ದುಡ್ಡು ಬರತಕ್ಕ ವಸ್ತುಗಳನ್ನು ಬೆಳೆಯುತ್ತೇವೆ ಎಂದು ಹೇಳುವುದು, ಇವುಗಳನ್ನೆಲ್ಲ ಕಡಮೆ ಮಾಡಿ ಆಹಾರ ಧಾನ್ಯಗಳನ್ನು ಹೆಚ್ಚಾಗಿ ಬೆಳೆಯತಕ್ಕ ಸಲಹೆಯನ್ನು ರೈತರಿಗೆ ಕೊಡತಕ್ಕದ್ದು ಬಹಳ ಮುಖ್ಯವಾದುದು.

ಇದರ ಜೊತೆಗೆ ಇನ್ನೂ ಒಂದು ಸಲಹೆ ಏನೆ ಎಂದರೆ ಕಾಂಟೂರ್ ಬಂಡಿಂಗ್ ಮತ್ತು ಸಾಯಿಲ್ ಕನ್‌ಸರ್ವೇಷನ್ ಮಾಡತಕ್ಕದ್ದು ಬಹಳ ಮುಖ್ಯ. ಭೂಮಿಯಲ್ಲಿರುವ ಸಾರವು ನಷ್ಟವಾಗದೆ ಅದನ್ನು ಉಪಯೋಗಿಸಿಕೊಳ್ಳಲು ಏನು ವ್ಯವಸ್ಥೆ ಮಾಡಬೇಕೋ ಅದನ್ನು ಮಾಡಿ ಯಾವ ಭೂಮಿಯೂ ಕೂಡ ವ್ಯರ್ಥವಾಗಬಾರದು, ಬಂಜರು ಬಿದ್ದಿರಬಾರದು ಮತ್ತು ಪ್ರತಿಯೊಂದು ಭೂಮಿಯಲ್ಲಿಯೂ ಕೂಡ ಆಹಾರವನ್ನು ಸಾಧ್ಯವಾದಷ್ಟೂ ಹೆಚ್ಚಿಗೆ ಬೆಳೆಯುವುದಕ್ಕೆ ಪ್ರಯತ್ನ ಮಾಡತಕ್ಕದ್ದು ಬಹಳ ಮುಖ್ಯವಾದುದು.

ಈ ಎಲ್ಲ ಸಲಹೆಗಳನ್ನೂ ಸರ್ಕಾರದವರು ಜಾರಿಗೆ ಕೊಡಬೇಕಾದ ಸಂದರ್ಭದಲ್ಲಿ ಅವರಿಗೆ ಬರತಕ್ಕ ಕಷ್ಟವಾದರೂ ಏನು ಎನ್ನುವುದನ್ನು ಯೋಚನೆ ಮಾಡಬೇಕು. ಮೊನ್ನೆ ಮಹಾ ಪ್ರಧಾನಿಯವರು ತಮ್ಮ ಪ್ರಸಾರ ಭಾಷಣದಲ್ಲಿ ರೈತರು ಇವತ್ತಿನ ದಿವಸ ಯಾವ ತ್ಯಾಗ ಮತ್ತು ಬಲಿದಾನಕ್ಕೂ ಕೂಡ ಸಿದ್ಧರಾಗಿರಬೇಕೆಂದು ಕರೆ ಕೊಟ್ಟಿದ್ದಾರೆ. ಸೈನಿಕರು ಯುದ್ಧದಲ್ಲಿ ರಕ್ತವನ್ನೂ, ಪ್ರಾಣವನ್ನೂ ಕೊಡುತ್ತಿದ್ದಾರೆ. ಹಾಗೆಯೇ ರೈತರೂ ಬೆವರು ಸುರಿಸುವುದಕ್ಕೆ ಸಾಧ್ಯ, ಕಷ್ಟಪಡುವುದಕ್ಕೆ ಸಾಧ್ಯ. ರೈತರು ಅಪಾರ ತ್ಯಾಗವನ್ನು ಈಗಲಾದರೂ ಮಾಡಬೇಕೆಂದು ಕರೆ ಕೊಟ್ಟಿದ್ದಾರೆ. ರೈತರು ಕೂಡ ಅಂಥ ತ್ಯಾಗಕ್ಕೆ ಸಿದ್ಧರಾಗಿದ್ದಾರೆ. ಸರ್ಕಾರದ ಯಾವ ಯಂತ್ರದ ಮೂಲಕ ಇದನ್ನು ಅನುಷ್ಠಾನಕ್ಕೆ ತರಬೇಕು ಎನ್ನುವ ವಿಷಯವನ್ನು ಕೂಡ ಮಹಾ ಪ್ರಧಾನಿಗಳು ಪ್ರಸ್ತಾಪಿಸಿ ಜಿಲ್ಲಾಧಿಕಾರಿಗಳು ತಮ್ಮ ಕೆಲಸವನ್ನು ಸೀನಿಯರ್ ಅಧಿಕಾರಿಗಳಿಗೆ ಬಿಟ್ಟು ತಾವೇ ಮುಖಂಡರಾಗಿ ಜಿಲ್ಲೆಯ ಆಹಾರವನ್ನು ಹೆಚ್ಚಾಗಿ ಬೆಳೆಯತಕ್ಕ ವಿವಿಧ ಯೋಜನೆಗಳ ಮುಖಂಡರಾಗಿ ರೈತರಿಂದ ಸ್ಫೂರ್ತಿದಾಯಕವಾದ ರೀತಿಯಲ್ಲಿ ಕೆಲಸ ಮಾಡಿಸಬೇಕು. ಅಂಥ ರಾಷ್ಟ್ರ ಮನೋಭಾವ ಮತ್ತು ದೇಶಪ್ರೇಮ ಉಳ್ಳಂಥ ಅಧಿಕಾರಿಗಳನ್ನು ಜಿಲ್ಲಾಧಿಕಾರಿಗಳಾಗಿ ಹಾಕಬೇಕು ಎಂದು ಸೂಚಿಸಿದ್ದಾರೆ. ಈ ಎಲ್ಲ ಯೋಜನೆಗಳನ್ನು ಜಾರಿಗೆ ತರಬೇಕಾದರೆ ಸರ್ಕಾರದವರು ವ್ಯವಸಾಯ ಇಲಾಖೆ ಅಥವಾ ಸಂಬಂಧಪಟ್ಟ ಇಲಾಖೆಯನ್ನು ಬಹುಮಟ್ಟಿಗೆ ಮಾರ್ಪಾಡು ಮಾಡಿ ಅದರಲ್ಲಿ ನಿಜವಾಗಿಯೂ ರಾಷ್ಟ್ರ ಹಿತೈಷಿಗಳಾಗಿ, ದೇಶಭಕ್ತರಾಗಿ ಈ ಒಂದು ತುರ್ತುಪರಿಸ್ಥಿತಿಯಲ್ಲಿ ನಾವು ಅಧಿಕಾರಿಗಳು, ಇವರು ಸಾರ್ವಜನಿಕರು ಎನ್ನುವ ಮನೋಭಿಪ್ರಾಯವನ್ನು ಮರೆತು ನಾವೆಲ್ಲರೂ ಮಾಡಬೇಕಾದ ಸೇವೆ, ತ್ಯಾಗ, ಬಲಿದಾನ ಅಪಾರವಾಗಿದೆ. ಆದುದರಿಂದ ಏನೇನು ಯೋಜನೆಗಳನ್ನು ಸರ್ಕಾರದವರು ಹಾಕುತ್ತಾರೆಯೋ ಅವೆಲ್ಲ ರೈತನಿಗೆ ನೇರವಾಗಿ ಅತ್ಯಲ್ಪ ಕಾಲದಲ್ಲಿ ಮುಟ್ಟುವ ರೀತಿಯಲ್ಲಿ ಕೆಲಸ ಮಾಡಬೇಕು. ಈ ಮಾತನ್ನು ಹೇಳುವಾಗ ಸರ್ಕಾರದವರು ಅನೇಕ ಯೋಜನೆಗಳಲ್ಲಿ ಬೇಕಾದಷ್ಟು ಹಣವನ್ನು ನೀಡಿದ್ದಾಗ್ಯೂ ಕೂಡ ಅದು ಸಂಬಂಧಪಟ್ಟ ಇಲಾಖೆಯ ಮೂಲಕ ರೈತನಿಗೆ ತಲುಪತಕ್ಕದ್ದು ಬಹಳ ನಿಧಾನವಾಗುತ್ತದೆ ಮತ್ತು ಸಕಾಲದಲ್ಲಿ ತಲುಪದೆ ಇರುತ್ತದೆ ಎಂದು ಹೇಳಬೇಕಾಗಿದೆ. ಇದರಿಂದ ವ್ಯವಸಾಯಕ್ಕೆ ಬಹಳ ತೊಂದರೆಯಾಗುತ್ತದೆ. ಸೀಸನಲ್ ಕಂಡಿಷನ್ಸ್ ಎಂದರೆ ಋತು ನಿಯಮಗಳನ್ನನುಸರಿಸಿ ಬೆಳೆಯನ್ನು ಬೆಳೆಯಬೇಕಾಗಿರುವುದರಿಂದ ಯಾವ ಕಾಲದಲ್ಲಿ ಭೂಮಿಯನ್ನು ಹದ ಮಾಡಬೇಕು, ಯಾವ ಕಾಲದಲ್ಲಿ ಗೊಬ್ಬರ ಹಾಕಬೇಕು, ಯಾವ ಕಾಲದಲ್ಲಿ ಬಿತ್ತನೆ ಹಾಕಬೇಕು, ಯಾವ ಕಾಲದಲ್ಲಿ ನೆಡಬೇಕು ಎನ್ನುವುದು ನಿಯಮವಾಗಿರುವುದರಿಂದ ಆ ಕಾಲಕ್ಕೆ ರೈತನಿಗೆ ಸರಿಯಾದ ರೀತಿಯಲ್ಲಿ ಅವನಿಗೆ ಬೇಕಾದ ಗೊಬ್ಬರ, ಒಳ್ಳೆಯ ಬೀಜಗಳು ಮತ್ತು ಉತ್ಪಾದನೆಯನ್ನು ಮಾಡುವುದಕ್ಕೆ ಬೇಕಾದ ಸರಿಯಾದ ರೀತಿಯ ಸಹಾಯ ದೊರೆಯದೆ ಇದ್ದರೆ ಅಥವಾ ಆ ಸಹಾಯ ಕೆಲಸವಾದ ಮೇಲೆ ದೊರೆತರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ ಎಂದು ಸರ್ಕಾರದಲ್ಲಿ ಸೂಚಿಸಬಯಸುತ್ತೇನೆ. ಏನು ಸಹಾಯವನ್ನು ಸರ್ಕಾರ ನೀಡುತ್ತದೆ ಅದನ್ನು ತುರ್ತಾಗಿ ನೀಡಬೇಕು ಮತ್ತು ಆದಷ್ಟು ಬೇಗ ಯುದ್ಧ ಪರಿಸ್ಥಿತಿಯಲ್ಲಿ ಎಲ್ಲವನ್ನೂ ಬದಿಗಿಟ್ಟು ಯುದ್ಧದ ಸಿದ್ಧತೆಗೋಸ್ಕರ ಹೇಗೆ ಸಿದ್ಧರಾಗಿ ಆಕ್ರಮಣಕಾರರನ್ನು ಎದುರಿಸಿ, ನಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದಕ್ಕೆ ಇಡೀ ದೇಶವೇ ಒಬ್ಬ ಮನುಷ್ಯನಾಗಿ ಹೇಗೆ ನಿಂತಿತೋ ಹಾಗೆಯೇ ಇಲಾಖಾಧಿಕಾರಿಗಳು, ಸರ್ಕಾರದವರು, ರೈತರು ಎಲ್ಲರೂ ಕೂಡ ಆದಷ್ಟುಮಟ್ಟಿಗೆ ಈ ಕಾರ್ಯದಲ್ಲಿ ಮನಃಪೂರ್ಣವಾಗಿ ಸಹಕರಿಸಿ ರೈತರಿಗೆ

ಏನೇನು ಸಹಾಯಗಳನ್ನು ಒದಗಿಸಬೇಕೋ ಅದನ್ನು ಒದಗಿಸಿಕೊಟ್ಟರೆ ಆಹಾರವನ್ನು ಹೆಚ್ಚು ಬೆಳೆಯುವುದರಲ್ಲಿ ಯಾವ ವಿಧವಾದ ಸಂಶಯವೂ ಇಲ್ಲ. ಹೀಗೆ ರೈತನನ್ನು ಉತ್ತೇಜಿತನನ್ನಾಗಿ ಮಾಡಿದರೆ, ಅವನಿಗೆ ದೇಶದ ಪರಿಸ್ಥಿತಿಯನ್ನು ವಿವರಿಸಿದರೆ ಅವರು ಮುಂದೆ ಬಂದು ಹೆಚ್ಚು ಆಹಾರವನ್ನು ಬೆಳೆಯುವುದಕ್ಕೆ ಸಿದ್ಧವಾಗುತ್ತಾರೆ. ಹೀಗೆ ಕೆಲಸ ಮಾಡಿಸುವ ಪಕ್ಷದಲ್ಲಿ ನಮ್ಮ ಏನೇನು ಯೋಜನೆಗಳಿವೆ ಅವು ಫಲಪ್ರದವಾಗುವುದರಲ್ಲಿ ಯಾವ ವಿಧವಾದ ಸಂಶಯವೂ ಇಲ್ಲ ಎನ್ನುವ ಮಾತನ್ನು ನಾನು ತಮಗೆ ಸೂಚಿಸಬಯಸುತ್ತೇನೆ.

ಈ ಸಂದರ್ಭದಲ್ಲಿ ಇನ್ನೊಂದು ಮುಖ್ಯವಾದ ಅಂಶವೇನೆಂದರೆ ಯಾರು ಹೆಚ್ಚಾಗಿ ಬೆಳೆಯುತ್ತಾರೆ ಹಾಗೆ ಬೆಳೆಯುವವರು, ಕೊಂಡು ತಿನ್ನುವವರು ಮತ್ತು ಬೆಳೆಯುವವನಿಗೂ, ಕೊಂಡು ತಿನ್ನುವವನಿಗೂ ಮಧ್ಯೆ ಇರುವ ಮಧ್ಯವರ್ತಿ ಜನಗಳು ವ್ಯಾಪಾರ ದೃಷ್ಟಿಯಿಂದ ಕೊಂಡು ಮಾರುವ ವರ್ತಕ ಜನರು ಬಹಳ ಪ್ರಾಮಾಣಿಕವಾಗಿ ವರ್ತಿಸಬೇಕು. ಅನೇಕ ಸಂದರ್ಭಗಳಲ್ಲಿ ಆಹಾರವಿದ್ದರೂ ಕೂಡ ಕೃತಕ ಆಹಾರಾಭಾವ ಕೇಳಿ ಬಂದಿರತಕ್ಕ ಪರಿಸ್ಥಿತಿ ಎಲ್ಲರ ಗಮನಕ್ಕೂ ಬಾರದೆ ಇರತಕ್ಕ ವಿಷಯವಲ್ಲ. ಹೆಚ್ಚಿಗೆ ಬೆಳೆಯುವವರು ತಮಗೆ ಎಷ್ಟು ಬೇಕೋ ಅಷ್ಟನ್ನು ಇಟ್ಟುಕೊಂಡು ಉಳಿದುದನ್ನು ಇತರ ಜನಗಳ ದೃಷ್ಟಿಯಿಂದ, ದೇಶದ ದೃಷ್ಟಿಯಿಂದ ಸರ್ಕಾರ ಏನು ಬೆಲೆ ನಿಗದಿ ಮಾಡುತ್ತದೆಯೋ ಆ ಪ್ರಕಾರ ಮಾರತಕ್ಕ ಪ್ರಾಮಾಣಿಕತೆಯನ್ನು ಹೊಂದಬೇಕು. ಅನೇಕ ಜನ ರೈತರು ಬೆಳೆದುದನ್ನು ಪ್ರಾಮಾಣಿಕವಾಗಿ ಒಪ್ಪಿಸುತ್ತಿದ್ದಾರೆ. ಆದರೆ ಕೆಲವು ಜನ ಬೆಳೆದವರು ಹೆಚ್ಚು ಬೆಲೆಯನ್ನು ತೆಗೆದು ಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಧಾನ್ಯವನ್ನು ಬಚ್ಚಿಡುತ್ತಾರೆ ಮತ್ತು ಕಷ್ಟ ಬಂದಾಗ ಒಂದಕ್ಕೆ ಎರಡರಷ್ಟು ಬೆಲೆಗೆ ಮಾರಿ ಲಾಭ ಸಂಪಾದನೆ ಮಾಡುತ್ತಾರೆ. ಆದುದರಿಂದ ಯಾರು ಯಾರು ಹೆಚ್ಚು ಬೆಳೆದು ತಮ್ಮಲ್ಲಿ ಇಟ್ಟುಕೊಂಡಿರುತ್ತಾರೆಯೋ ಅಂಥವರಿಂದ ಸರ್ಕಾರದವರು ವಿಶ್ವಾಸದಿಂದ ವಸೂಲ್ಮಾಡಬೇಕು. ಒಂದು ವೇಳೆ ಹಾಗೆ ಕೊಡುವುದಕ್ಕೆ ಇಷ್ಟಪಡದೆ ಇದ್ದರೆ ಜುಲುಮೆಯಿಂದ ಆದರೂ ವಸೂಲು ಮಾಡಿವರೆ ಸರಿಯಾದ ರೀತಿ ಹಂಚುವ ಪ್ರಯತ್ನ ಮಾಡುವುದಕ್ಕೆ ಆಹಾರ ಸಮಸ್ಯೆ ಯನ್ನು ಬಗೆಹರಿಸುವುದಕ್ಕೆ ಸಹಾಯವಾಗುತ್ತದೆ. ಕೊಂಡು ತಿನ್ನುವವರೂ ಸಹ ಅಭಾವ ಪರಿಸ್ಥಿತಿ ಇರುವುದರಿಂದ ಮುಂದೆ ಉದ್ವಿಗ್ನ ಪರಿಸ್ಥಿತಿ ಬರಬಹುದು ಎಂದು ತಮಗೆ ತಿನ್ನಲು ಎಷ್ಟು ಬೇಕೋ ಅದಕ್ಕಿಂತಲೂ ಜಾಸ್ತಿ ಕೊಂಡು ಇಟ್ಟುಕೊಳ್ಳತಕ್ಕ ಮನೋವೃತ್ತಿಯನ್ನು ಹೊಂದಿರುತ್ತಾರೆ. ಆದುದರಿಂದ ಕೊಳ್ಳುವವರೂ ಕೂಡ ತಮಗೆ ಎಷ್ಟು ಆವಶ್ಯಕತೆ ಇದೆಯೋ ಅಷ್ಟನ್ನು ಮಾತ್ರ ಕೊಳ್ಳುವ ಮನಸ್ಸು ಮಾಡಿದರೆ ನಮ್ಮ ಉಳಿದ ಸಹೋದರರಿಗೂ ಆಹಾರವನ್ನು ನಾವೇ ನೀಡಿದ ಹಾಗೆ ಆಗುತ್ತದೆ. ಈ ಮಧ್ಯೆ ಮಧ್ಯವರ್ತಿಯಾಗಿ ಕೆಲಸ ಮಾಡತಕ್ಕ ಜನ ಬಹಳ ಅಪಾಯಕಾರಿಯಾದ ಜನ. ಇವರು ಇವತ್ತಿನ ದಿವಸ ವ್ಯಾಪಾರ ಮಾಡುತ್ತ ಲಾಭಕೋರತನದಿಂದ ಕಾಳಸಂತೆಯಲ್ಲಿ ಮಾರುವುದಕ್ಕೆ ಪ್ರಯತ್ನ ಮಾಡದೆ ನ್ಯಾಯವಾಗಿ ಏನು ಲಾಭ ತೆಗೆದುಕೊಳ್ಳಬೇಕೋ ಅದನ್ನು ತೆಗೆದು ಕೊಳ್ಳಬೇಕು. ನಾವು ಪತ್ರಿಕೆಗಳಲ್ಲಿ ನೋಡಿರುತ್ತೇವೆ : ಅಲ್ಲಲ್ಲಿ ಆಹಾರವನ್ನು ದಾಸ್ತಾನು ಮಾಡಿರತಕ್ಕ ಸಾವಿರಾರು ಮೂಟೆ ಆಹಾರ ಧಾನ್ಯವನ್ನು ಕಾಳಸಂತೆಯಲ್ಲಿ ಮಾರಲು ಇಟ್ಟುಕೊಂಡಿದ್ದುದನ್ನು ಪತ್ತೆ ಮಾಡಿರುತ್ತಾರೆ. ಈ ರೀತಿಯಾಗಿ ದಾಸ್ತಾನು ಮಾಡಿರುವವರನ್ನು ಮತ್ತು ತಪ್ಪು ಮಾಡುವವರನ್ನು ಬಹಿರಂಗವಾಗಿ ಶಿಕ್ಷೆ ಮಾಡಿ ದೇಶದ್ರೋಹಿಗಳನ್ನು, ಚೈನಾ ಮತ್ತು ಪಾಕಿಸ್ಥಾನಕ್ಕೆ ಸಹಾಯಕ ರಾಗಿರುವವರನ್ನು ಹೇಗೆ ರಕ್ಷಣಾ ಕಾನೂನು ಪ್ರಕಾರ ಜೈಲಿನಲ್ಲಿಡುತ್ತಾರೆಯೋ ಅದೇ ಪ್ರಕಾರವಾಗಿ ಶಿಕ್ಷೆ ಮಾಡಿದ ಪಕ್ಷದಲ್ಲಿ ಕಾಳಸಂತೆಯನ್ನು ತಪ್ಪಿಸಬಹುದು.

[MR. DEPUTY SPEAKER in the Chair.]

2-30 P.M.

ಇವತ್ತಿನ ದಿವಸ ಹಳ್ಳಿಗಳಲ್ಲಿ ಹೆಚ್ಚಿಗೆ ಜೋಳವನ್ನು ಬೆಳೆಯುತ್ತಾರೆ. ಆ ರೀತಿ ಹೆಚ್ಚಿಗೆ ಬೆಳೆದಿದ್ದುದನ್ನು ರಾತ್ರಿ ಹೊತ್ತು 50 ರೂಪಾಯಿಗಳಿಗೆ ಬದಲಾಗಿ 100 ರೂಪಾಯಿಗಳಿಗೆ ಮಾರಿ ಲಾರಿಗಳಲ್ಲಿ ಕಳುಹಿಸುತ್ತಿದ್ದುದನ್ನು ನಾನೇ ಹೋದವರ್ಷ ಕೇಳಿದ್ದೇನೆ. ಅಲ್ಲ ಧಾನ್ಯಗಳನ್ನು ಶೇಖರಿಸಿದರೂ ಅಲ್ಲಿಂದಲೇ ಒಂದಕ್ಕೆರಡರಷ್ಟು ಮಾರಿ ಹೆಚ್ಚು ಲಾಭ ಸಂಪಾದಿಸುವ ದೃಷ್ಟಿಯಿಂದ ಕೆಲವರು ದೇಶದ್ರೋಹ ಮಾಡುವಂತಹ ಕೆಲಸಗಳನ್ನು ಮಾಡುತ್ತಿದ್ದರು. ಅಂಥಾದ್ದನ್ನು ತಪ್ಪಿಸಬೇಕಾದುದು ಬಹಳ ಮುಖ್ಯವಾದ ಕೆಲಸ. ಸುಮ್ಮನೆ ಹೆಚ್ಚು ಆಹಾರೋತ್ಪಾದನೆ ಮಾಡಿದರೆ ಮಾತ್ರ ಈಗಿನ ಆಹಾರ ಸಮಸ್ಯೆ ಬಗೆಹರಿಯುವುದಿಲ್ಲ. ವಿತರಣೆ ಅಥವಾ ಹಂಚಿಕೆ ಬಹಳ ಮುಖ್ಯವಾದುದು. ಅದನ್ನು ನಾವು ಚೆನ್ನಾಗಿ ಜ್ಞಾಪಕದಲ್ಲಿಡಬೇಕು. ಆಹಾರೋತ್ಪಾದನೆ ಮಾಡುವ ಜೊತೆಗೆ ಆಹಾರ ಹಂಚಿಕೆ ಸರಿಯಾಗಿ ನಡೆಸಬೇಕು. ಈ ಕೆಲಸದಲ್ಲಿ ಸಹಕಾರ ಸಂಘಗಳ ಪಾತ್ರ ಬಹಳ ದೊಡ್ಡದು. ಸಹಕಾರ ಸಂಘಗಳು ಚೆನ್ನಾಗಿ ಬೆಳೆಯಬೇಕೆಂಬುದು ಎಲ್ಲರ ಆಶೆಯಾಗಿದೆ. ಕೆಲವು ಸಹಕಾರ ಸಂಘ

(ಶ್ರೀ ಡಿ. ಎಂ. ಸಿದ್ದಯ್ಯ)

ಗಳೇ ತಮ್ಮಲ್ಲಿರತಕ್ಕ ದಾಸ್ತಾನನ್ನು ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರಿ, ಲಕ್ಷಾಂತರ ರೂಪಾಯಿಗಳ ಹಣವನ್ನು ಸಂಪಾದಿಸಿದ್ದಾರೆ. ಅಂತಹ ಸಹಕಾರ ಸಂಘಗಳನ್ನು ಈ ಸರ್ಕಾರದವರೇ ಹಿಡಿದಿದ್ದಾರೆ. ಒಂದು ಸಂದರ್ಭದಲ್ಲಿ ಮಿಲಿಟರಿಯನ್ನು ಉಪಯೋಗಿಸಿ ಸಹಕಾರ ಸಂಘದವರು ಪಡೆದಂಥ ಹಣ, ದಾಸ್ತಾನನ್ನು ಅವರು ಭದ್ರಪಡಿಸಬೇಕಾಯಿತು. ಮಿಲಿಟರಿ ತತ್ವಗಳು ಎಂಬುದಾಗಿ ಏನು ಹೇಳುತ್ತಾರೋ ಅವನ್ನು ಅನುಷ್ಠಾನಕ್ಕೆ ಬರುವ ರೀತಿ ಮಾಡಬೇಕು. ಆದರೆ ಬರೀ ಪೇಪರ್ ಮೇಲೆ ಅಥವಾ ಬಾಯಲ್ಲಿ ವೇದಾಂತ ಹೇಳಿದರೆ ಸಾಲದು. ಈ ತುರ್ತು ಪರಿಸ್ಥಿತಿಯನ್ನು ನಾವು ಸುಧಾರಿಸಿ ಜನಗಳಿಗೆ ಯಾವ ವಿಧವಾದಂಥ ಆತಂಕಗಳೂ ಬಾರದಹಾಗೆ ನೋಡಿಕೊಳ್ಳಬೇಕು. ವೈಯಕ್ತಿಕವಾಗಿ ವರ್ತಕರೇ ಆಗಲೀ, ಸಹಕಾರ ಸಂಘಗಳೇ ಆಗಲೀ ಅಥವಾ ರೈತರೇ ಆಗಲೀ, ಇಂತಹ ತುರ್ತುಪರಿಸ್ಥಿತಿಯಲ್ಲಿ ಸರ್ಕಾರದ ಹಿತಕ್ಕೆ ಅಹಿತವಾಗಿ ವರ್ತಿಸಿದ್ದೇಆದರೆ ಅದನ್ನು ಸರ್ಕಾರದವರು ಬಹಳ ಕಟುವಾಗಿ ವ್ಯವಹರಿಸಬೇಕು. ಅವರು ಯಾವ ರೀತಿಯಲ್ಲಿಯೂ ಕೂಡ ಈ ಒಂದು ಸನ್ನಿವೇಶವನ್ನು ದುರುಪಯೋಗಪಡಿಸಿಕೊಂಡು ಲಾಭ ಪಡೆಯುವುದಾಗಲೀ ಅಥವಾ ದೇಶಕ್ಕೆ ತೊಂದರೆ ಮಾಡುವುದಾಗಲೀ, ಅದರೆ ಅಂಥಾದ್ದಕ್ಕೆ ಈ ಸರ್ಕಾರ ಖಂಡಿತ ಅವಕಾಶ ಕೊಡಬಾರದು. ಇಂಥಾ ಸಂದರ್ಭಗಳಲ್ಲಿ ಬಹಳ ಹದ್ದುಬಸ್ತಿನಿಂದ ನಿಷ್ಪಕ್ಷಪಾತವಾಗಿ ವ್ಯವಹರಿಸಬೇಕು. ಆಹಾರೋತ್ಪಾದನೆ ಮತ್ತು ಆಹಾರ ವಿತರಣೆ ಜೋಡಣೆಯಾಗಬೇಕೆಂದು ನಾನು ನಮ್ರತೆಯಿಂದ ಸರ್ಕಾರಕ್ಕೆ ಸೂಚಿಸಬಯಸುತ್ತೇನೆ.

ಇನ್ನು ಇವತ್ತಿನ ದಿವಸ ಪರದೇಶಗಳಿಂದ ಆಹಾರವನ್ನು ತರಿಸುವ ಒಂದು ಯೋಚನೆ ಇದೆ. ಅಮೆರಿಕಾ ದೇಶಕ್ಕೆ ನಮ್ಮ ಮಾನ್ಯ ಪ್ರಧಾನಿಯವರು ಅವರ ಪರವಾಗಿ ಮಂತ್ರಿಗಳನ್ನು ಕಳುಹಿಸಿದ್ದಾರೆ. ಇವತ್ತು ಪಾಕಿಸ್ತಾನ ಮತ್ತು ಹಿಂದೂಸ್ಥಾನದ ಹೋರಾಟದ ಹಿನ್ನೆಲೆಯನ್ನು ಅವಲೋಕಿಸಿದರೆ ನಮ್ಮ ಸ್ನೇಹಿತರೆನೆಸಿಕೊಂಡಿದ್ದ ಪ್ರಜಾಪ್ರಭುತ್ವ ರಾಷ್ಟ್ರಗಳು ಹಿಂಬದಿಯಿಂದ ನಮ್ಮ ಮೇಲೆಯೇ ಹೋರಾಟ ಮಾಡುತ್ತಿದ್ದಾರೆಯೋ ಎನ್ನುವಂತಿದೆ. ವಿಶ್ವಸಂಸ್ಥೆಯವರು ತೋರಿಸಿದ ಮನೋವೃತ್ತಿಯ ಪ್ರಕಾರ ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿಯವರೇ ಯುದ್ಧ ನಿಲ್ಲಿಸಿ ಎಂಬುದಾಗಿ ಸೂಚನೆ ಕೊಟ್ಟಿದ್ದಾರೆ. ಅವರು ಈ ವಿಚಾರದಲ್ಲಿ ವೀಕ್ಷಕರನ್ನು ಕಳುಹಿಸಿದ್ದಾರೆ. ಅವರು ಯುದ್ಧ ವಿರಾಮ ಸೂಚನೆ ಕೊಟ್ಟರೂ, ಇನ್ನೂ ಕೆಲವಾರು ಕಡೆಗಳಲ್ಲಿ ಆಕ್ರಮಣಗಳು ಕಠಿಣವಾಗಿಯೇ ನಡೆಯುತ್ತಿವೆ. ಪಾಕಿಸ್ಥಾನದವರು 261 ಸಾರಿ ಯುದ್ಧ ವಿರಾಮವನ್ನು ಮುರಿದಿದ್ದಾರೆ. ಆದ್ದರಿಂದ ಇದು ಯೂನಿಲ್ಯಾಟರಲ್ ಸೀಜ್‌ಫೈರ್ ಎಂದು ಅನೇಕರು ಹೇಳುತ್ತಾರೆ, ಇದು ನಮಗೆ ಸೀಜ್ ಅವರಿಗೆ ಫೈರ್ ಎಂಬುದಾಗಿ ಯಾರೋ ವ್ಯಾಖ್ಯಾನ ಮಾಡಿ ಹೇಳಿದ ಹಾಗೆ ಇವತ್ತು ಅವರು ಯುದ್ಧ ಮಾಡುತ್ತಿದ್ದಾರೆ. ಇದಕ್ಕಿಂತಲೂ ಹೆಚ್ಚಾಗಿ ಪಾಕಿಸ್ತಾನದ ವಿದೇಶಾಂಗ ಮಂತ್ರಿ ಭುಟ್ಟೋ ಅವರು ಪಾಕಿಸ್ತಾನಕ್ಕೋಸ್ಕರ ಯುದ್ಧೋಪಕರಣಗಳನ್ನು ಜಮಾಯಿಸಿಕೊಂಡು ಎಷ್ಟೋ ಏರೋಪ್ಲೇನುಗಳನ್ನು ಮತ್ತು ಟ್ಯಾಂಕುಗಳನ್ನು ಶೇಖರಣೆ ಮಾಡಿಕೊಡಲು ಸಹಕಾರಿಗಳಾಗಿದ್ದಾರೆ. ಆ ಯುದ್ಧೋಪಕರಣಗಳಿಂದ ಪಾಕಿಸ್ತಾನದವರು ಚೀಣೀಯರ ಜೊತೆ ಸೇರಿ ನಮ್ಮ ಮೇಲೆ ಆಕ್ರಮಣ ಮಾಡಬೇಕೆಂಬ ಪರಿಸ್ಥಿತಿಯನ್ನು ಇವತ್ತು ನಾವು ನೋಡುತ್ತಿದ್ದೇವೆ. ಒಂದು ವೇಳೆ ನಮ್ಮ ಸ್ನೇಹಿತರಾದ ಅಮೇರಿಕಾದವರೇ ನಮಗೆ ಆಹಾರ ಕೊಟ್ಟು ರಾಜಕೀಯ ಒತ್ತಾಯವನ್ನು ನಮ್ಮ ಮೇಲೆ ಹಾಕಬಹುದು. ಆದ್ದರಿಂದ ಇವತ್ತು ಪರದೇಶಗಳಿಂದ ಏನು ಆಹಾರವನ್ನು ನಾವು ನಿರೀಕ್ಷಣೆ ಮಾಡುತ್ತಿದ್ದೇವೋ ಅದು ದೊರಕದೆ ಇರಬಹುದು. ಇಂತಹ ಒಂದು ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ದೇಶಕ್ಕೆ ಒಂದು ರೀತಿಯ ಕಷ್ಟ ಬರುವುದಿಲ್ಲ, ನಾನಾ ರೀತಿಯ ಕಷ್ಟಗಳು ಬರುತ್ತವೆ. ಇವತ್ತು ನಮ್ಮ ಹಿಂದೂಸ್ಥಾನ ಕಳೆದ 18 ವರ್ಷಗಳಲ್ಲಿ ಒಂದನೇ, ಎರಡನೇ ಮತ್ತು ಮೂರನೆಯ ಯೋಜನೆಗಳನ್ನು ಯಶಸ್ವಿಯಾಗಿ ನಡೆಸಿ, ಜಗತ್ತಿಗೇ ನಮ್ಮ ದೇಶ ಒಂದು ದೊಡ್ಡ ರಾಷ್ಟ್ರವಾಗಿದೆ. ನಮಗೆ ಯಾರೂ ಮಿತ್ರರೂ ಇಲ್ಲ, ಶತ್ರುಗಳೂ ಇಲ್ಲವೆಂದು ನಾವು ಹೇಳುವ ಹಾಗಿಲ್ಲ. ಕೆಲವು ಸಂದರ್ಭಗಳಲ್ಲಿ ಶತ್ರುಗಳು ಬಹಿರಂಗವಾಗಿ ಬಂದರೂ ಮಿತ್ರರಂತೆ ನಟಿಸಿ ಅಂತರಂಗದಲ್ಲಿ ನಮ್ಮ ಮೇಲೆ ಶತ್ರುಗಳ ಹಾಗೆ ಯುದ್ಧ ಮಾಡುತ್ತಾರೆ. ಅಂತಹ ಸಂದರ್ಭಗಳಲ್ಲಿ ನಾವು ಎಷ್ಟರಮಟ್ಟಿಗೆ ಪರೋಕ್ಷವಾಗಿ ಹಾಗೂ ಪ್ರತ್ಯಕ್ಷವಾಗಿ ನಮ್ಮ ಸರ್ಕಾರಕ್ಕೆ ಸಹಾಯ ಮಾಡಬೇಕೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಕೋಟ್ಯಾಂತರ ರೂಪಾಯಿಗಳಷ್ಟು ಬೆಲೆ ಬಾಳತಕ್ಕ ಯುದ್ಧ ಸಾಮಗ್ರಿಗಳನ್ನು ಅಮೆರಿಕಾದವರು ಪಾಕಿಸ್ತಾನಕ್ಕೆ ಕೊಟ್ಟು ಅವನ್ನು ಕಮ್ಯೂನಿಸ್ಟ್ ರಾಷ್ಟ್ರಗಳ ಮೇಲೆ ಪ್ರಯೋಗಿಸಿ ಎಂದು ಹೇಳಿದ್ದರೂ, ಪಾಕಿಸ್ತಾನದವರು ಅವನ್ನು ಭರತಖಂಡದ ಮೇಲೆ ಏತಕ್ಕೆ ಉಪಯೋಗಿಸಿದರು ಎಂಬುದನ್ನು ಅಮೇರಿಕಾದವರು ಕೇಳಲೇ ಇಲ್ಲ. ಪಾಕಿಸ್ತಾನದವರನ್ನು ಆಕ್ರಮಣಕಾರರು ಎಂದು ಹೇಳುವುದಕ್ಕೆ ಅವರಿಗೆ ಎಷ್ಟೋ ಕಷ್ಟವಾಯಿತು. ಆದರೆ ಪಾಕಿಸ್ತಾನದವರೇ ಆಕ್ರಮಣಕಾರರು ಎಂದು ಪರರಾಷ್ಟ್ರಗಳವರು ಹೇಳಿದರು. ಅಂದಮೇಲೆ ಇಂತಹ ಸನ್ನಿವೇಶದಲ್ಲಿ ನಮಗೆ ನಾರ್ಮಲ್

ಪೀರಿಯಡ್ಡಿನಲ್ಲಿ ಪರರಾಷ್ಟ್ರಗಳಿಂದ ಏನು ಸಹಾಯವಾಗುತ್ತಿತ್ತೋ ಆ ರೀತಿಯಲ್ಲಿ ಸಹಾಯವಾಗುವುದು ಬಹಳಮಟ್ಟಿಗೆ ಅಸಂಭವ. ಇಂತಹ ಕಷ್ಟ ಪರಿಸ್ಥಿತಿಯಲ್ಲಿ ನಾವು ಹೆಚ್ಚು ಕಷ್ಟಪಟ್ಟು ಕೆಲಸಮಾಡಬೇಕಾಗಿದೆ. ನಮ್ಮ ಮಹಾ ಪ್ರಧಾನಿಯವರು ಹೇಳಿದ ಹಾಗೆ ನಾವು ಆಹಾರವನ್ನು ಮಿತಿಯಾಗಿ ಬಳಸಬೇಕು. ಹೆಚ್ಚಿಗೆ ವ್ಯಯ ಮಾಡಬಾರದು. ಶ್ರೀಮಂತರೂ ಕೂಡ ಬಹಳ ಉನ್ನತ ಮಟ್ಟದಲ್ಲಿ ಆಹಾರ ಸೇವನೆ ಮಾಡುತ್ತಿದ್ದರೂ ಈ ತುರ್ತು ಪರಿಸ್ಥಿತಿಯಲ್ಲಿ ಅದನ್ನು ಒಂದು ಮಟ್ಟಕ್ಕೆ ಇಳಿಸಿಕೊಳ್ಳಬೇಕು. ಯುದ್ಧ ವಿರಾಮವಾಗದೆ ಯುದ್ಧವೇನಾದರೂ ಮುಂದುವರೆದರೆ ಹೇಗೆ ದೇಶವನ್ನು ಸುಧಾರಿಸಬೇಕು ಎನ್ನುವ ದೃಷ್ಟಿಯಿಂದ ಮಹಾ ಪ್ರಧಾನಿಯವರು ಬಹಳ ಸವಿಸ್ತಾರವಾಗಿ ನಮಗೆ ಅಪ್ಪಣೆ ಮಾಡಿದ್ದಾರೆ. ಅದನ್ನು ಜಾರಿಗೆ ಇಟ್ಟ ತರತಕ್ಕದ್ದು ನಮ್ಮ ಕರ್ತವ್ಯ. ಆದ್ದರಿಂದ ನಿಜವಾಗಿ ನಮ್ಮ ದೇಶದಲ್ಲಿ ಯಾವ ರೀತಿಯಾದಂಥ ಹಾಹಾಕಾರವೂ ಬಾರದೆ ನಮ್ಮ ದೇಶ ಸ್ವಸಂಪೂರ್ಣತೆಯನ್ನು ಹೊಂದಿ ನಾವು ನಮ್ಮ ಕಾಲಿನಮೇಲೆಯೇ ನಿಲ್ಲುವ ಹಾಗೆ ವ್ಯವಸ್ಥೆ ಮಾಡಬೇಕು.

ಇನ್ನೊಂದು ವಿಷಯ. ಸರ್ಕಾರದವರು ಆಹಾರೋತ್ಪಾದನೆಯ ವಿಷಯದಲ್ಲಿ ಚೆನ್ನಾಗಿ ವ್ಯವಹರಿಸಬೇಕು. ರೈತನಿಗೆ ಬೇಕಾದಂಥ ಸಹಾಯ ಸಂಪತ್ತು, ಅವನಿಗೆ ಬೇಕಾದಂಥ ಗೊಬ್ಬರ ಮತ್ತು ಸೀಡ್ಲಿಂಗ್ಸನ್ನು ಕೊಡಬೇಕು. ಈ ಸಮಯದಲ್ಲಿ ಬುಲ್‌ಡೋಜರ್ಸ್ ಮತ್ತು ಟ್ರಾಕ್ಟರುಗಳ ಉಪಯೋಗವನ್ನು ಬಹಳ ಹೆಚ್ಚಿಗೆ ಮಾಡುವಂತೆ ಸರ್ಕಾರದವರು ರೈತರಿಗೆ ಸೂಚನೆ ಕೊಡಬೇಕು. ಅದಕ್ಕೋಸ್ಕರ ಹಣ ಸಹಾಯವನ್ನೂ ಸಹ ಮಾಡಬೇಕು. ಒಟ್ಟಿನಲ್ಲಿ ಇವತ್ತು ನಾವು ಬಹಳ ಸಂದಿಗ್ಧ ಪರಿಸ್ಥಿತಿಯಲ್ಲಿದ್ದೇವೆ. ಇಂತಹ ಸನ್ನಿವೇಶದಲ್ಲಿ ಆಹಾರೋತ್ಪಾದನೆಯನ್ನು ಹೆಚ್ಚಿಗೆ ಮಾಡದಿದ್ದರೆ ನಮಗೆ ಗತ್ಯಂತರವಿಲ್ಲ. ಅದಕ್ಕಾಗಿ ಇರ್ರಿಗೇಷನ್ ವೆಲ್‌ಗಳನ್ನು ಹೆಚ್ಚಿಗೆ ತೆಗೆಯಬೇಕು. ಫರ್ಟಿಲೈಜರ್ಸ್‌ನ್ನು ಕೊಡಬೇಕು. ಹಣವನ್ನು ಸಾಲದ ರೂಪವಾಗಿ ಕೊಡಬೇಕು. ಆ ರೀತಿ ಸಾಲ ಕೊಟ್ಟ ಮೇಲೆ ಮತ್ತೆ ಸಬ್ಸಿಡಿ ಬೇಕಿಲ್ಲ. ಒಂದೊಂದು ಬಾವಿ ತೆಗೆಸಲಿಕ್ಕೆ ಬ್ಯಾಂಕುಗಳಿಂದ ಐದು ಸಾವಿರ ರೂಪಾಯಿಗಳನ್ನು ಕಡಿಮೆ ಬಡ್ಡಿಯಲ್ಲಿ ಕೊಡಿಸಬೇಕು. ಗೊಬ್ಬರಗಳನ್ನು ತಯಾರು ಮಾಡಲು ಏನೇನು ಅನುಕೂಲತೆಗಳು ಬೇಕೋ ಅದೆಲ್ಲವನ್ನೂ ರೈತರಿಗೆ ಕೊಡಿಸಬೇಕು. ಅಲ್ಲದೆ ಈಗ ಪ್ರತಿಯೊಂದು ಪಂಚಾಯತಿಗೂ ಎರಡು ಸಾವಿರ ರೂಪಾಯಿಗಳನ್ನು ಇದಕ್ಕೋಸ್ಕರ ಕೊಡಬೇಕೆಂಬ ಯೋಚನೆ ಬೇರೆ ಇದೆ. ಕಾಂಪೋಸ್ಟ್ ಮೆನ್ಯೂರ್, ಗ್ರೀನ್ ಮೆನ್ಯೂರ್ ಮತ್ತು ನೈಟ್‌ಸಾಯಿಲ್—ಇವುಗಳನ್ನು ಯಾವ ರೀತಿಯಲ್ಲಿ ಪ್ರಿಜರ್ವ್ ಮಾಡಬೇಕೆಂಬ ಬಗ್ಗೆ ರೈತರಿಗೆ ಸರ್ಕಾರದವರು ತಕ್ಕ ಸೂಚನೆಯನ್ನು ಕೊಡಬೇಕು—ಹೀಗೆ ನಾನಾ ರೀತಿಯಲ್ಲಿ ಇಡೀ ಸರ್ಕಾರವೇ ರೈತರ ಜೊತೆಯಲ್ಲಿ ಬೆರೆತು ಕೆಲಸಮಾಡಬೇಕಾಗಿದೆ. ಅಧಿಕಾರಿಗಳೂ ಸಹ ತಮ್ಮ ಈಗಿನ ಒಂದು ಮನೋಭಾವನೆಯನ್ನು ಬಹಳಮಟ್ಟಿಗೆ ಬದಲಾವಣೆ ಮಾಡಿಕೊಂಡು ಸರ್ಕಾರದವರು ಏನೇನು ಯೋಜನೆಗಳನ್ನು ಆಹಾರೋತ್ಪಾದನೆಗೋಸ್ಕರ ಹಾಕಿದ್ದಾರೋ ಅದನ್ನೆಲ್ಲಾ ಕಾರ್ಯಗತಮಾಡಲು ಹೆಚ್ಚು ಸಹಕರಿಸಬೇಕು. ರೈತರಿಗೆ ಇದಕ್ಕಾಗಿ ಎಷ್ಟು ಹಣ ಸಹಾಯವನ್ನು ಕೊಟ್ಟಿದ್ದಾರೋ ಅದು ಅವರಿಗೆ ಸಕಾಲದಲ್ಲಿ ತಲುಪುವಂತೆ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ರೈತನಾದವನು ಸಕಲ ವಿಧವಾದಂಥ ಸಾಲಗಳನ್ನೆಲ್ಲಾ ಪಡೆಯಬೇಕಾಗಿ ಬರುತ್ತದೆ. ಅಂಥಾದ್ದಕ್ಕೆ ಖಂಡಿತ ಅಧಿಕಾರಿಗಳು ಅವಕಾಶವನ್ನು ಕೊಡಬಾರದು. ಸಣ್ಣ ಸಣ್ಣ ಪಿಕಪ್ಪುಗಳು, ನೀರಾವರಿ ಯೋಜನೆಗಳನ್ನು 5 ಅಥವಾ 10 ಎಕರೆ ಜಮೀನಿಗೆ ಅನುಕೂಲವಾಗುವಂತೆ ಕೇವಲ 5 ಅಥವಾ 10 ಸಾವಿರ ರೂಪಾಯಿಗಳಲ್ಲಿ ಕಾರ್ಯಗತವಾಗುವಂತೆ ಏರ್ಪಾಡು ಮಾಡಬೇಕು. ಈಗಾಗಲೇ ಕೆಲವು ಸಣ್ಣ ಯೋಜನೆಗಳ ಪ್ಲಾನು ಮತ್ತು ಅಂದಾಜುಗಳು ಆಗಿಯೇ ಇಲ್ಲ. ಅವನ್ನೆಲ್ಲಾ ಜಾಗ್ರತೆ ಮಾಡಿಸಿದರೆ ಈ ದೇಶದಲ್ಲಿ ಈಗಿನ ಒಂದು ಆಹಾರ ಸಮಸ್ಯೆಯನ್ನು ನಾವು ಕೂಡಲೇ ಪರಿಹರಿಸಬಹುದು. ನಾವು ಯಾವಾಗಲೂ ಪರದೇಶಗಳ ಅವಲಂಬಿಗಳಾಗಿ ಜೀವಿಸುವ ವಿಚಾರವನ್ನು ಬಿಟ್ಟು ಆತ್ಮಗೌರವದಿಂದ, ಮರ್ಯಾದೆಯಿಂದ ನಾವು ಜೀವಿಸಬೇಕು. ಇಂತಹ ಕಷ್ಟ ಪರಿಸ್ಥಿತಿಯಲ್ಲಿ ಆಕ್ರಮಣಕಾರರನ್ನು ಹೊಡೆದೋಡಿಸಬೇಕು. ಈಗಿನ ತುರ್ತು ಪರಿಸ್ಥಿತಿಯಲ್ಲಿ ದೇಶದಲ್ಲಿ ಇರತಕ್ಕ ಪ್ರತಿಯೊಬ್ಬನಿಗೂ ಅನ್ನವನ್ನು ಒದಗಿಸಿಕೊಟ್ಟು ಈ ತುರ್ತು ಪರಿಸ್ಥಿತಿಯಿಂದ ನಾವೆಲ್ಲರೂ ಪಾರಾಗಬೇಕಾದರೆ ನಾವುಗಳೆಲ್ಲ ಒಗ್ಗಟ್ಟಿನಿಂದ, ಪರಸ್ಪರ ವಿಶ್ವಾಸದಿಂದ, ಸಹಕಾರದಿಂದ ವರ್ತಿಸಿದ್ದೇ ಆದರೆ ನಿಜವಾಗಿ ಈ ಒಂದು ಆಹಾರದ ಸಮಸ್ಯೆಯ ಬಗ್ಗೆ ಸ್ವಸಂಪೂರ್ಣತೆಯನ್ನು ಪಡೆಯಬಹುದೆಂದು ನಾನು ಹೇಳುತ್ತೇನೆ. ಈ ಸಂದರ್ಭದಲ್ಲಿ ಆಹಾರ ಸೇವನೆ ಮಾಡುವುದರಲ್ಲಿಯೂ ಕೂಡ ಸ್ವಲ್ಪಮಟ್ಟಿಗೆ ಬದಲಾವಣೆ ಮಾಡಿಕೊಳ್ಳಬೇಕು.

SRI C. J. MUCKANNAPPA (Sira).—Can you suggest the economy to save food in using daily menu ?

ಶ್ರೀ ಡಿ. ಎಂ. ಸಿದ್ದಯ್ಯ.—ಈಗ ಯಾರು ಮಾಂಸಾಹಾರವನ್ನು ಉಪಯೋಗಿಸುತ್ತಾರೆಯೋ ಅವರು ಸಸ್ಯಾಹಾರವನ್ನು ಉಪಯೋಗಿಸುತ್ತಾರೆ. ಸಾಧ್ಯವಾದ ಮಟ್ಟಿಗೆ ಅವರು ಹೆಚ್ಚಿಗೆ ಮಾಂಸಾಹಾರವನ್ನು ಉಪಯೋಗಿಸುವುದರಿಂದಲೂ ಕೂಡ ನಾವು ಆಹಾರದ ವಿಷಯದಲ್ಲಿ ಸ್ವಪರಿಪೂರ್ಣತೆ ಹೊಂದಲು ಒಂದು ರೀತಿಯಲ್ಲಿ ಸಹಾಯ ಮಾಡಬಹುದು. ಜನಗಳು ಅಕ್ಕಿಯನ್ನೇ ತಿನ್ನಬೇಕು ಎನ್ನುವ ಮನೋಭಾವನೆಯನ್ನು ಬಿಡಬೇಕು. ರಾಗಿ, ಜೋಳ ಮತ್ತು ಗೋಧಿ ಇವುಗಳನ್ನು ಸಹ ಕಡಿಮೆ ರೀತಿಯಲ್ಲಿ ಉಪಯೋಗಿಸಬೇಕು. ಮದುವೆ, ಮುಂಜಿ ಮುಂತಾದ ಸಮಾರಂಭಗಳಲ್ಲಿಯೂ ಕೂಡ ಬೇಕಾದಷ್ಟು ಆಹಾರ ವೇಸ್ಟಾಗುತ್ತದೆ. ಅದನ್ನೂ ಸಹ ಕಡಿಮೆ ಮಾಡಬೇಕು. ಈಗ ನಾನೂ ಸಹ ರಾತ್ರಿ ಹೊತ್ತು ಊಟವನ್ನು ಬಿಟ್ಟಿದ್ದೇನೆ. ನಾನು ಈಗಾಗಲೇ 7-8 ಪೌಂಡ್ ರೆಡ್ಯೂಸ್ ಆಗಿದ್ದೇನೆ.

ಒಟ್ಟಿನಲ್ಲಿ ಈ ತುರ್ತು ಪರಿಸ್ಥಿತಿಯಲ್ಲಿ ನಮ್ಮ ದೇಶದರಲ್ಲಿತಕ್ಕ ಎಲ್ಲಾ ಜನಗಳೂ ಕೂಡ ಪರಸ್ಪರ ಹೊಂದಿಕೊಂಡು ದೇಶಕ್ಕೋಸ್ಕರ ಯಾವ ತ್ಯಾಗ ಮತ್ತು ಬಲಿದಾನವನ್ನು ಮಾಡುವುದಕ್ಕೂ ಸಿದ್ಧರಾಗಬೇಕು. ದೇಶಕ್ಕೋಸ್ಕರ ಪ್ರಾಣವನ್ನು ಕೊಡತಕ್ಕ ಯೋಧರಿಗಾಗಿ ನಾವು ನಾಲ್ಕು ರೂಪಾಯಿ ಹಣ ಸಹಾಯ ಮಾಡುತ್ತಿದ್ದರೆ, ನಾವು ಹೆಚ್ಚು ಆಹಾರವನ್ನು ಉತ್ಪಾದನೆ ಮಾಡಿದರೆ ಅದು ಒಂದು ತ್ಯಾಗವೆಂದು ತಾವು ಹೇಳುತ್ತಾರೆ ? ಇದು ಕನಿಷ್ಟ ದರ್ಜೆಯ ತ್ಯಾಗ ಎಂದು ನನಗೆ ಅನಿಸುತ್ತದೆ. ಇವೊತ್ತಿನ ಪರಿಸ್ಥಿತಿಯಲ್ಲಿ ನಾವು ಯಾವ ತ್ಯಾಗವನ್ನು ಮಾಡುವುದಕ್ಕೂ ಹಿಂಜರಿಯಬಾರದು. ಇವೊತ್ತಿನ ಪರಿಸ್ಥಿತಿಯಲ್ಲಿ ದೇಶದಲ್ಲಿ ಯಾವ ಯಾವ ರೀತಿಯಲ್ಲಿ ಆಹಾರದ ಉತ್ಪಾದನೆಯನ್ನು ಜಾಸ್ತಿ ಮಾಡಬೇಕು, ಯಾವ ಯಾವ ರೀತಿಯಲ್ಲಿ ಆಹಾರ ಅನ್ಯಾಯವಾಗಿ ಹಾಳಾಗುತ್ತದೆ ಎನ್ನುವುದನ್ನು ತಿಳಿದುಕೊಳ್ಳಬೇಕು. ನಾವೂ ಕೂಡ ನಮ್ಮ ಹೊಟ್ಟೆಯನ್ನು ಕಟ್ಟಿ ಆಹಾರವನ್ನು ಉಳಿಸಿ ಈಗ ನಮ್ಮ ದೇಶದಲ್ಲಿ ಏನೊಂದು ತುರ್ತು ಪರಿಸ್ಥಿತಿ ಬಂದಿದೆಯೋ ಅದರಿಂದ ನಾವು ಪಾರಾಗಬೇಕು. ಆಹಾರದ ಉತ್ಪಾದನೆಯಲ್ಲಿ ಎಲ್ಲರೂ ಸಹಕರಿಸಿ ನಮ್ಮ ಕಾಲಮೇಲೆ ನಾವು ನಿಂತುಕೊಂಡು ನಾವು ಆಹಾರದ ವಿಷಯದಲ್ಲಿ ಸ್ವಪರಿಪೂರ್ಣತೆಯನ್ನು ಪಡೆಯತಕ್ಕ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಂಡು ನಾವು ಕೆಲಸ ಮಾಡಬೇಕು. ಮತ್ತು ಸರ್ಕಾರದವರು ಈ ವಿಷಯದಲ್ಲಿ ಏನು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಾರೆಯೋ ಅದಕ್ಕೆ ನಾವುಗಳೆಲ್ಲರು ಸಂಪೂರ್ಣವಾದ ಬೆಂಬಲವನ್ನು ಮತ್ತು ನೆರವನ್ನೂ ನೀಡುತ್ತೇವೆಂಬ ಭರವಸೆಯನ್ನು ಸರ್ಕಾರಕ್ಕೆ ಕೊಟ್ಟು, ನಾನು ಈ ನಿರ್ಣಯವನ್ನು ಈ ಮಾನ್ಯ ಸಭೆಯ ಮುಂದೆ ಮಂಡಿಸುತ್ತೇನೆ.

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಯವರೇ, ಆಹಾರ ಉತ್ಪತ್ತಿಯ ಬಗ್ಗೆ ಮತ್ತು ಆಹಾರದ ಅಭಾವವನ್ನು ನಿವಾರಿಸುವ ಬಗ್ಗೆ ಶ್ರೀಮಾನ್ ಡಿ. ಎಂ. ಸಿದ್ದಯ್ಯನವರು ಈ ಸಭೆಯ ಮುಂದೆ ತಂದಿರತಕ್ಕ ನಿರ್ಣಯದ ಮೇಲೆ ನಾನು ಮಾತನಾಡುತ್ತಾ ಆಹಾರ ಸಮಸ್ಯೆ ನಮ್ಮ ದೇಶದಲ್ಲಿ ಎಷ್ಟು ಪ್ರಾಮುಖ್ಯವುಳ್ಳದ್ದಾಗಿದೆ ಎನ್ನುವ ವಿಚಾರದಲ್ಲಿ ನಾನು ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಇವೊತ್ತು ನಮ್ಮ ದೇಶದಲ್ಲಿ ಎರಡು ಮಹಾ ಸಮಸ್ಯೆಗಳು ನಮ್ಮ ಎದುರಿನಲ್ಲಿ ನಿಂತಿವೆ. ಅವು ಯಾವುವೆಂದರೆ, ಒಂದು ಆಹಾರದ ಸಮಸ್ಯೆ ಮತ್ತೊಂದು ರಾಷ್ಟ್ರದ ರಕ್ಷಣೆಯ ಸಮಸ್ಯೆ. ಈ ಎರಡು ಸಮಸ್ಯೆಗಳನ್ನೂ ಒಂದು ತಕ್ಕಡಿಯಲ್ಲಿ ತೂಕ ಹಾಕಿದರೆ ಆ ಎರಡು ಸಮಸ್ಯೆಗಳೂ ಒಂದೇ ತೂಕವಿರತಕ್ಕ ಸಮಸ್ಯೆಗಳಾಗಿವೆ. ಈ ಸಮಸ್ಯೆಗಳಲ್ಲಿ ಅತಿ ಪ್ರಾಮುಖ್ಯವಾದ ಸಮಸ್ಯೆಯನ್ನು ನಿವಾರಣೆ ಮಾಡತಕ್ಕ ಕಾರ್ಯಕ್ರಮದಲ್ಲಿ ನಾವು ಎಷ್ಟು ತೀವ್ರಾಸಕ್ತಿಯನ್ನು ಹೊಂದಿದ್ದೇವೆ ಎಂಬುದನ್ನು ಬಹಳ ಮುಖ್ಯವಾಗಿ ನಾವು ಇಲ್ಲಿ ಚರ್ಚೆ ಮಾಡಬೇಕಾಗಿದೆ. ಆಹಾರದ ಉತ್ಪತ್ತಿ ಮತ್ತು ಆಹಾರದ ಹಂಚಿಕೆಯ ವ್ಯವಸ್ಥೆಯನ್ನು ಚರ್ಚೆ ಮಾಡತಕ್ಕ ಕಾಲದಲ್ಲಿ ನಾವು ಕಳೆದ 18 ವರ್ಷಗಳಲ್ಲಿ ಹೆಚ್ಚು ಆಹಾರವನ್ನು ಉತ್ಪತ್ತಿ ಮಾಡಬೇಕೆಂದು ತೀವ್ರಾಸಕ್ತಿಯನ್ನು ಹೊಂದಿ ನಾವು ಎಷ್ಟರಮಟ್ಟಿಗೆ ಆಹಾರವನ್ನು ಉತ್ಪತ್ತಿ ಮಾಡಬೇಕೆಂದು ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೆವೋ ಆ ಉತ್ಪತ್ತಿಯ ಕಾರ್ಯಕ್ರಮಗಳಿಗೆ ಏನು ಖಾಯಿಲೆ ಬಂದಿದೆ ಎಂಬುದನ್ನು ಕಂಡುಹಿಡಿಯಬೇಕಾಗಿದೆ. ಆಹಾರದ ಉತ್ಪತ್ತಿಯನ್ನು ಯಾವ ರೀತಿ ಮಾಡುತ್ತಿದ್ದಾರೆ, ಮತ್ತು ಆಹಾರದ ಉತ್ಪತ್ತಿಯನ್ನು ಏತಕ್ಕೆ ಸಾಕಷ್ಟು ಮಾಡಲಿಲ್ಲ ಎನ್ನುವುದನ್ನು ಕಂಡುಹಿಡಿದು ಆ ವಿಚಾರದಲ್ಲಿ ಒಂದು ತೀರ್ಮಾನಕ್ಕೆ ಬರತಕ್ಕದ್ದು ಬಹಳ ಪ್ರಾಮುಖ್ಯವಾದ ವಿಚಾರ ಎಂದು ನಾನು ಭಾವನೆ ಮಾಡಿಕೊಂಡಿದ್ದೇನೆ. ಆಹಾರದ ಉತ್ಪಾದನೆಗಾಗಿ ಒಂದು, ಎರಡು ಮತ್ತು ಮೂರನೆಯ ಪಂಚವಾರ್ಷಿಕ ಯೋಜನೆಗಳಲ್ಲಿ ಅಪಾರವಾದ ಹಣವನ್ನೇನೋ ಸರ್ಕಾರದವರು ಖರ್ಚು ಮಾಡಿದ್ದಾರೆ. ಎರಡು ಪಂಚವಾರ್ಷಿಕ ಯೋಜನೆಗಳನ್ನು ಮುಗಿಸಿ ಮೂರನೆಯ ಪಂಚವಾರ್ಷಿಕ ಯೋಜನೆಯ ಕೊನೆಯಲ್ಲಿ ಸುಮಾರು 10 ಲಕ್ಷ ಟನ್ ಆಹಾರವನ್ನು ಉತ್ಪತ್ತಿ ಮಾಡಿ ಇನ್ನೂ ಜಾಸ್ತಿ ಆಹಾರವನ್ನು ಉತ್ಪತ್ತಿ ಮಾಡಬೇಕೆಂದು ಯೋಜನೆಯನ್ನು ಹಾಕಿಕೊಂಡದ್ದು ನಿಜ. ಆ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕಾಗಿ ಮೂರನೆಯ ಪಂಚವಾರ್ಷಿಕ ಯೋಜನೆಗೆ ಒದಗಿಸಿದ್ದ 250 ಕೋಟಿ ರೂಪಾಯಿ

ಗಳಲ್ಲಿ ಆಹಾರೋತ್ಪಾದನೆಗಾಗಿ ಸರ್ಕಾರದವರು ಖರ್ಚು ಮಾಡುತ್ತಿದ್ದಾರೆ. ಆಹಾರವನ್ನು ಉತ್ಪತ್ತಿ ಮಾಡುವುದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡು ಆ ಯೋಜನೆಯ ಪ್ರಕಾರ ನಮ್ಮ ದೇಶದಲ್ಲಿ ಸುಮಾರು ಮೂರು ಪಂಚವಾರ್ಷಿಕ ಯೋಜನೆಗಳಲ್ಲಿಯೂ ಆಹಾರವನ್ನು ಉತ್ಪಾದನೆ ಮಾಡುತ್ತಿದ್ದಾರೆ. ಈ ಯೋಜನೆಗಳಿಂದ ನಮ್ಮ ದೇಶದಲ್ಲಿ ಎಷ್ಟು ಆಹಾರ ಉತ್ಪತ್ತಿಯಾಗಿದೆ ಎಂಬುದನ್ನು ನೋಡುವುದಾದರೆ, ನಮ್ಮ ದೇಶದಲ್ಲಿ ಸುಮಾರು 37-38 ಲಕ್ಷ ಟನ್ ಆಹಾರ ಉತ್ಪತ್ತಿಯಾಗಿದೆ. ನಮ್ಮ ಯೋಜನೆಯ ಪ್ರಕಾರ ನಾವು 48 ಲಕ್ಷ ಟನ್ ಆಹಾರವನ್ನು ಉತ್ಪತ್ತಿ ಮಾಡಿದ್ದರೆ ನಮ್ಮ ದೇಶ ಆಹಾರದ ವಿಷಯದಲ್ಲಿ ಸ್ವಾವಲಂಬಿಯಾಗುತ್ತಿತ್ತು. ಅದನ್ನು ಉತ್ಪತ್ತಿ ಮಾಡಬೇಕೆಂದು ನಾವು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೆವು. 48 ಲಕ್ಷ ಟನ್ ಆಹಾರವನ್ನು ಉತ್ಪತ್ತಿ ಮಾಡಬೇಕೆಂದು ನಾವು ಏನೊಂದು ಯೋಜನೆಯನ್ನು ಹಾಕಿಕೊಂಡಿದ್ದೆವೋ ಅದು ಎಷ್ಟರಮಟ್ಟಿಗೆ ಕಾರ್ಯಗತವಾಗಿದೆ ಎಂಬುದನ್ನು ಮೂರನೇ ಪಂಚವಾರ್ಷಿಕ ಯೋಜನೆಯ ಮಧ್ಯವರ್ತಿಯ ಪುನರ್‌ವಿಮರ್ಶಾತ್ಮಕ ವರದಿಯು ತೋರಿಸುತ್ತದೆ. ಇದರಲ್ಲಿ ಹೇಳಿರತಕ್ಕ ರೀತಿಯಲ್ಲಿ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಬಾಬಿಗೆ ಎಷ್ಟು ಹಣವನ್ನು ಖರ್ಚು ಮಾಡಬೇಕೆಂದು ನಿಗದಿ ಮಾಡಿತ್ತೋ ಅಷ್ಟು ಹಣವನ್ನು ಖರ್ಚು ಮಾಡತಕ್ಕ ಕಾರ್ಯದಲ್ಲಿ ಮಾತ್ರ ಸರ್ಕಾರದವರು ಯಶಸ್ವಿಯಾಗಿದ್ದಾರೆ. ಆದರೆ ಹಣವನ್ನು ಯಶಸ್ವಿಯಾಗಿ ಖರ್ಚು ಮಾಡಿರತಕ್ಕ ಯೋಜನೆಗಳಿಂದ ಏನು ಫಲಿತಾಂಶ ದೊರೆಯಬೇಕಾಗಿತ್ತೋ ಆ ವಿಷಯದಲ್ಲಿ ವಿಫಲರಾಗಿದ್ದಾರೆ. ಇದು ಒಂದು ದೊಡ್ಡ ವಿಚಾರ. ಈ ಒಂದು ಯೋಜನೆಗೆ ಎಷ್ಟು ಹಣ ಖರ್ಚಾಗಿದೆಯೋ ಅದಕ್ಕೆ ಪ್ರತಿಫಲವಾಗಿ ಆಹಾರದ ಉತ್ಪತ್ತಿ ಆಗಲಿಲ್ಲ. ಈ ವಿಷಯ ಸರ್ಕಾರದವರು ಮೂರನೆಯ ಪಂಚವಾರ್ಷಿಕ ಯೋಜನೆಯ ಮಧ್ಯವರ್ತಿಯ ಪುನರ್ ವಿಮರ್ಶಾತ್ಮಕ ವರದಿಯಲ್ಲಿದೆ. ಇದು ಬಹಳ ಮುಖ್ಯವಾದ ಸಮಸ್ಯೆ. ನಮ್ಮ ಯೋಜನೆಯ ಪ್ರಕಾರ ಏತಕ್ಕೋಸ್ಕರ ಆಹಾರದ ಉತ್ಪತ್ತಿ ಆಗಲಿಲ್ಲ? ಇರಿಗೇಷನ್ ಪ್ರಾಜೆಕ್ಟ್ಸ್ ಮೇಜರ್ ಇರಿಗೇಷನ್ ಪ್ರಾಜೆಕ್ಟ್, ಮೀಡಿಯಂ ಇರಿಗೇಷನ್ ಪ್ರಾಜೆಕ್ಟ್ ಮತ್ತು ಮೈನರ್ ಇರಿಗೇಷನ್ ಪ್ರಾಜೆಕ್ಟ್‌ಗಳು ಏನಿವೆಯೋ ಅವುಗಳು ನೀರಾವರಿ ವ್ಯವಸಾಯಕ್ಕೆ ಎಷ್ಟು ನೀರನ್ನು ಕೊಡಬೇಕೋ ಅಷ್ಟು ನೀರನ್ನು ಕೊಡತಕ್ಕ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಮತ್ತು ಈಗಾಗಲೇ ಯಾವ ಪ್ರಾಜೆಕ್ಟ್‌ಗಳ ನಿರ್ಮಾಣ ಕಾರ್ಯ ಮುಗಿದಿದೆಯೋ ಆ ಪ್ರಾಜೆಕ್ಟ್‌ಗಳಿಂದ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡು ಅದರಿಂದ ಬೆಳೆಯನ್ನು ತೆಗೆಯತಕ್ಕ ಕಾರ್ಯ ಆಗಿಲ್ಲ. ಈ ಎರಡೂ ಕಾರ್ಯಗಳು ಬಹಳ ಪ್ರಾಮುಖ್ಯವಾದುವುಗಳು. ಮೈಸೂರು ದೇಶ ಇಡೀ ಇಂಡಿಯಾ ದೇಶದಲ್ಲಿ ನೀರಾವರಿಯಲ್ಲಿ ಕಡೆಯ ಸ್ಥಾನವನ್ನು ಹೊಂದಿದೆ. 100ಕ್ಕೆ 7 ಭಾಗ ಇರಿಗೇಷನ್ ಪೊಟೆನ್ಷಿಯಲ್ ಇದೆ. ನಮ್ಮ ಯೋಜನೆಗಳು ಕಾರ್ಯಗತವಾದರೂ ಕೂಡ ನಮ್ಮ ದೇಶದಲ್ಲಿ ನೀರಾವರಿ ಪ್ರದೇಶ ಶೇಕಡ 12 ಕ್ಕಿಂತ ಜಾಸ್ತಿ ಆಗುವುದಿಲ್ಲ. ಈ ಯೋಜನೆಗಳಲ್ಲಿ ನಮ್ಮ ಗುರಿಯನ್ನು ಸಾಧನೆ ಮಾಡುವುದಕ್ಕೆ ಆಗಿಲ್ಲ. ಆ ಗುರಿಯನ್ನು ಸಾಧನೆ ಮಾಡುವುದಕ್ಕೆ ಕಟ್ಟುನಿಟ್ಟಾಗಿ ಏತಕ್ಕೆ ಪ್ರಯತ್ನ ಮಾಡಲಿಲ್ಲ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ನಮ್ಮ ದೇಶದಲ್ಲಿ ಮೂರನೆಯ ಪಂಚವಾರ್ಷಿಕ ಯೋಜನೆಯ ಅಂತ್ಯದ ವೇಳೆಗೆ ಹೊಸದಾಗಿ 14 ಲಕ್ಷ ಎಕರೆ ನೀರಾವರಿ ಪ್ರದೇಶವನ್ನು ಮಾಡಬೇಕೆಂದು ಗುರಿಯನ್ನು ಇಟ್ಟುಕೊಂಡಿತ್ತು. ಆದರೆ ಆ ಗುರಿಯನ್ನು ಸಾಧನೆ ಮಾಡುವುದಕ್ಕೆ ಸಾಧ್ಯವಾಗಿಲ್ಲ. 14 ಲಕ್ಷ ಎಕರೆ ನೀರಾವರಿ ಪ್ರದೇಶವನ್ನು ಮಾಡಬೇಕೆಂದು ಇಟ್ಟುಕೊಂಡಿದ್ದಂತಹ ಗುರಿಯಲ್ಲಿ 4 ಲಕ್ಷ ಎಕರೆ ಪ್ರದೇಶವನ್ನು ಮಾತ್ರ ನೀರಾವರಿ ಮಾಡಿದ್ದಾರೆ. ಅದಕ್ಕಾಗಿ ಖರ್ಚು ಮಾಡಿರತಕ್ಕ ಹಣ ಎಷ್ಟು ಎಂದರೆ ಹಣ ಬಹಳ ಖರ್ಚಾಗಿದೆ. ಹೀಗಾಗಿ ನಮ್ಮ ಯೋಜನೆಗಳ ಬಗ್ಗೆ ಏನು ಒಂದು ಅಂದಾಜನ್ನು ಮಾಡಿದ್ದೇವೊ, ಆ ಅಂದಾಜಿಗಿಂತಲೂ ಮಿತಿ ಮೀರಿ ಹಣ ಖರ್ಚಾಗಿದೆ. ಈ ಒಂದು ಕಾರಣದಿಂದಲೂ ಮತ್ತು ನಮ್ಮ ಕಾರ್ಯಕ್ರಮದಲ್ಲಿ ಅನೇಕ ಲೋಪದೋಷಗಳಿರುವುದರಿಂದ ನಮ್ಮ ಉದ್ದೇಶ ಕಾರ್ಯಗತವಾಗಿಲ್ಲ.

ಇನ್ನು ವ್ಯವಸಾಯಕ್ಕೆ ಸಂಬಂಧಪಟ್ಟಂಥ ಪ್ರಶ್ನೆಗಳು ಬಂದರೆ, ನಾವು ವ್ಯವಸಾಯ ಉತ್ಪತ್ತಿಯನ್ನು ಇನ್ನೂ ಜಾಸ್ತಿ ಮಾಡಬೇಕು, ನಮ್ಮಲ್ಲಿದ್ದಂತಹ ಆಹಾರವನ್ನು ಹೆಚ್ಚು ಉತ್ಪತ್ತಿ ಮಾಡಿ— 10 ಲಕ್ಷ ಟನ್ ಉತ್ಪತ್ತಿ ಮಾಡಬೇಕೆಂದಾಗ, ವಾಸ್ತವವಾಗಿ ಏನಾಗಿದೆ ! ಮೇಜರ್, ಮತ್ತು ಮೀಡಿಯಮ್ ಇರಿಗೇಷನ್ ಪ್ರೋಜೆಕ್ಟಿನಿಂದ ಸುಮಾರು 93 ಸಹಸ್ರ ಟನ್ ಉತ್ಪತ್ತಿ ಮಾಡಬೇಕು; ಮೈನರ್ ಇರಿಗೇಷನ್‌ನಿಂದ 25 ಸಹಸ್ರ ಟನ್ ಉತ್ಪತ್ತಿ ಮಾಡಬೇಕು, ಲ್ಯಾಂಡ್ ರೆವೆನ್ಯೂ ರಿಕ್ಲಮೇಶನ್‌ನಿಂದ 31 ಸಾವಿರ ಟನ್ ಉತ್ಪತ್ತಿ ಮಾಡಬೇಕು, ಇನ್ನು ಬಹಳ ಪ್ರಾಜೆಕ್ಟಿಗಳಿಂದ 88 ಸಹಸ್ರ ಟನ್ ಉತ್ಪತ್ತಿ ಮಾಡಬೇಕು, ಇದ್ದಕ್ಕೆ ಬಹಳ ಮುಖ್ಯವಾದುದು ಒಳ್ಳೆ ಒಳ್ಳೆಯ ಗೊಬ್ಬರಗಳು —ಇದರಿಂದ 5 ಲಕ್ಷ ಟನ್ ಆಹಾರವನ್ನು ಜಾಸ್ತಿ ಮಾಡಬೇಕು ಎಂದು ಅಂದಾಜು ಹಾಕಿಕೊಂಡಿದ್ದೀರಿ. ಇದೆಲ್ಲವನ್ನೂ ನೋಡಿದರೆ, ಕೊನೆಯದಾಗಿ ನಿಮ್ಮ ಟಾರ್ಗೆಟ್ ಏನಿವೆ ? ಸಾಯಿಲ್

(ಶ್ರೀ ಎಸ್. ಶಿವಪ್ಪ)

ಕನ್‌ಸರವೇಷನ್ ತೆಗೆದುಕೊಂಡರೆ ಅದರಲ್ಲಿ ನೀವು ಎಷ್ಟು ಹಣ ಖರ್ಚು ಮಾಡಬೇಕೆಂದು ಮಾಡಿದ್ದಿರೋ, ಅದನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಕೃತಕ ಗೊಬ್ಬರಕ್ಕೆ (ನೈಟ್ರೋಜನಸ್ ಫೋಸ್ಪೇಟ್) ನೀವು ಏನು ಗುರಿ ಇಟ್ಟುಕೊಂಡಿದ್ದಿರೋ ಅದರಲ್ಲಿ 10 ಪರ್‌ಸೆಂಟ್ ಮಾಡುವುದಕ್ಕೆ ಆಗಿಲ್ಲ. ಹೀಗಾದರೆ ನಮ್ಮ ಅಂದಾಜು ಪ್ರಕಾರ ಎಷ್ಟು ಆಹಾರ ಉತ್ಪತ್ತಿ ಮಾಡಬೇಕಾಗಿತ್ತೊ ಅಷ್ಟನ್ನು ಮಾಡಿ ಗುರಿಯನ್ನು ಮುಟ್ಟುವುದಕ್ಕೆ ಆಗಿಲ್ಲ. ಇದು ನಾವು ಮಾಡಿರತಕ್ಕಂತಹ ದೊಡ್ಡ ತಪ್ಪು. ಇದನ್ನು ಆಗಿಂದಾಗ್ಗೆ ನಾನು ಹೇಳುತ್ತಿದ್ದೇನ.

ಇವತ್ತು ನಮ್ಮ ದೇಶದಲ್ಲಿ ಭೂಮಿಯನ್ನು ಅವಲಂಬನೆ ಮಾಡಿರತಕ್ಕಂಥ ರೈತ ತನ್ನ ಯುದ್ಧ ತನವನ್ನು ಭೂಮಿಯ ಜೊತೆ ತೋರಿಸುತ್ತಾನೆ. ಈ ಯುದ್ಧವನ್ನು ಅವನೇ ಮಾಡಿ ಉತ್ಪತ್ತಿ ಜಾಸ್ತಿ ಮಾಡುವುದಕ್ಕೆ ಆಗುವುದಿಲ್ಲ. ಅವನಿಗೆ ಬೇಕಾದ ಉಪಕರಣಗಳನ್ನು ಒದಗಿಸುವುದರಲ್ಲಿ ನಾವು ವಿಫಲರಾಗಿದ್ದೇವೆ. ಅವನು ಉತ್ಪತ್ತಿಯನ್ನು ಜಾಸ್ತಿ ಮಾಡಬೇಕಾಗಿದ್ದರೆ ಅವನಿಗೆ ಬೇಕಾದ ಉಪಕಾರಗಳು ಬಹಳವಿವೆ. ಅವನಿಗೆ ಒಳ್ಳೆಯ ನೇಗಿಲುಗಳು ಬೇಕು. ಒಳ್ಳೆಯ ಗೊಬ್ಬರಬೇಕು, ಬೀಜ ಬೇಕು, ಹೋರಿಗಳು ಬೇಕು. ಎಲ್ಲಕ್ಕಿಂತಲೂ ಹೆಚ್ಚಾಗಿ ನೀರು ಬೇಕು. ಇವತ್ತು ನಮ್ಮ ದೇಶದ ಬೆಳೆ ಬಹು ಭಾಗ ಮೋಡಗಳನ್ನು ಅವಲಂಬನೆ ಮಾಡಿದೆ. ನಾವು ಅದನ್ನು ಇಂಗ್ಲೀಷಿನಲ್ಲಿ vagaries of monsoons ಎಂದು ಹೇಳುತ್ತೇವೆ. ಅದು ಜೂಜಾಟದ ಪ್ರಶ್ನೆ. ಇವತ್ತಿನ ದಿವಸ ಮಳೆರಾಯ ನಮಗೇನಾದರೂ ಪ್ರಸಾದ ಕೊಟ್ಟರೆ ನಮ್ಮ ದೇಶದಲ್ಲಿ ಆಹಾರ ದೊರಕುತ್ತದೆ, ಇಲ್ಲವಾದರೆ, ಮಳೆಯ ಪ್ರಕೋಪಕ್ಕೆ ಗುರಿಯಾದರೆ ಕ್ಷಾಮದ ದವಡೆಗೆ ಒಳಗಾಗುತ್ತೇವೆ. ಇದು ಹೊಸದಾಗಿ ಮಾಡಿರತಕ್ಕ ವಿಚಾರವಲ್ಲ. ಇದು ಶತಮಾನಗಳಿಂದ ದೇಶದಲ್ಲಿರತಕ್ಕಂಥ ಪರಿಸ್ಥಿತಿ.

ದೇಶದಲ್ಲಿರತಕ್ಕಂಥ, ಈ ಒಂದು ಪರಿಸ್ಥಿತಿಯನ್ನು ಸುಧಾರಿಸುವುದಕ್ಕೋಸ್ಕರ ನಮ್ಮ ನೀರಾವರಿ ಯೋಜನೆಗಳನ್ನು ನಾವು ಹೆಚ್ಚಾಗಿ ಮಾಡಬೇಕು. ಈ ಕಾರ್ಯಕ್ರಮವನ್ನು ನಮ್ಮ ಒಂದು, ಎರಡು, ಮೂರು ಯೋಜನೆಗಳಲ್ಲಿ ಹಾಕಿಕೊಂಡು ಬಂದೆವು. ಮೂರನೆ ಯೋಜನೆಯಲ್ಲಿ ನಮ್ಮ ಸರ್ಕಾರದವರು ಏನು ಮಾಡಿದ್ದಾರೆ? ಆಹಾರೋತ್ಪತ್ತಿಗೆ ಯಾವ ಯೋಜನೆಗಳನ್ನು ಅಳವಡಿಸಿ ಕೊಂಡಿದ್ದೇವೋ ಅದಕ್ಕೆ ಉಪಯೋಗಿಸಬೇಕಾಗಿದ್ದ ಹಣವನ್ನು ಬೇರೆ ಕಡೆಗೆ ತಿರುಗಿಸಿದ್ದಾರೆ. ಮೈಸೂರಿನಲ್ಲಿ ಶರಾವತಿ ಪವರಿಗೋಸ್ಕರವಾಗಿ ಹೆಚ್ಚಿನ ಆದ್ಯತೆ ಕೊಡಬೇಕೆಂದು ನಮ್ಮ ಅನೇಕ ಯೋಜನೆಗಳ ಹಣವನ್ನು ಅದಕ್ಕೆ ತಿರುಗಿಸಿದೆ ಎಂದು ನಿಮ್ಮ ರಿಪೋರ್ಟ್‌ನಲ್ಲಿ ಹೇಳಿದ್ದೀರಿ. ಹೀಗಾಗಿ ನಮ್ಮ ದೇಶದಲ್ಲಿ ಆಹಾರ ಉತ್ಪತ್ತಿ ಕುಂಠಿತವಾಗಿದೆ. ಅದು ನಮ್ಮ ತಪ್ಪು. ಈ ಒಂದು ಪವರ್ ಜಾಗೃತೆ ಬರಬೇಕು ಎಂಬ ಉದ್ದೇಶದಿಂದ ಕೆಲವು ಹಣವನ್ನು—ಸೆಂಟ್ರಲ್ ಗವರ್ನ್‌ಮೆಂಟಿನಿಂದ ಬಂದ ಹಣವನ್ನು, ಆ ಕಡೆ ತಿರುಗಿಸಿದೆ—ಪವರ್ ಉತ್ಪನ್ನ ದೃಷ್ಟಿಯಿಂದ. ಹೆಚ್ಚಿನ ಆದ್ಯತೆಯನ್ನು ನಮ್ಮ ವ್ಯವಸಾಯ ಮತ್ತು ಆಹಾರ ಉತ್ಪತ್ತಿಗಿಂತ, ಪವರಿಗೆ ಕೊಟ್ಟಿದೆ; ಪವರ್ ಕಡೆ ತಿರುಗಿಸಿದೆ. ಈ ಒಂದು ಕಾರಣದಿಂದ ನಮ್ಮ ಮೈಸೂರು ದೇಶದಲ್ಲಿ ಆಹಾರ ಉತ್ಪತ್ತಿಗೆ ಕೇಂದ್ರವಾದಂತಹ ನೀರಾವರಿ ಇತ್ಯಾದಿ ಕಾರ್ಯಕ್ರಮಗಳಿಗೆ ಇಷ್ಟಾಗಿ ಒಂದು ಅಡಚಣೆಯಾಗಿದೆಯೆಂಬುದು ತಮ್ಮೆಲ್ಲರ ಗಮನಕ್ಕೆ ಬಂದಂಥ ವಿಷಯ.

ಇನ್ನು ಇವತ್ತು ನಮಗೆ ಏನು ಗುರಿ ಸಾಧನೆಯಾಗಬೇಕಾಗಿತ್ತೋ ಅದು ಸಾಧನೆಯಾಗದೆ ಇರುವುದರಿಂದ, ನಾನು ಮೊದಲು ಹೇಳಿದ ಹಾಗೆ ಈ ವಿಷಮ ಪರಿಸ್ಥಿತಿ ಬಂದಿರತಕ್ಕದ್ದು ನಿಜ. ಈ ಪರಿಸ್ಥಿತಿಯನ್ನು ಎದುರಿಸುವಂತಹ ವಿಚಾರದಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲ. ಈ ಪರಿಸ್ಥಿತಿಯನ್ನು ಎದುರಿಸತಕ್ಕಂಥ ಕಾಲದಲ್ಲಿ ನಾವು ಯಾವ ರೀತಿ ರಕ್ಷಣೆ ವ್ಯವಸ್ಥೆಗೆ ಇಡೀ ದೇಶ ತನ್ನ ಸರ್ವಸ್ವವನ್ನೂ ತ್ಯಾಗ ಮಾಡಿತೋ ಅದೇ ರೀತಿ ವ್ಯವಸಾಯಕ್ಕೂ ಆದ್ಯತೆ ಕೊಡಬೇಕು. ಹಾಗೆ ಮೈಸೂರು ದೇಶದಲ್ಲಿ ಕೂಡಾ ಆಹಾರ ಉತ್ಪನ್ನದ ಬಗ್ಗೆ ನಾವು ಅಷ್ಟೇ ಗಹನವಾದ ಮಾದರಿಯಲ್ಲಿ ನಮ್ಮ ತೀಕ್ಷ್ಣತೆಯನ್ನು ತೋರಿಸಬೇಕು. ಈಗ ಮುಖ್ಯ ಮಂತ್ರಿಗಳಿಗೆ ಒಂದು ಸಲಹೆ ಕೊಡುತ್ತೇನೆ. ಈಗ ಪ್ರತ್ಯೇಕವಾಗಿ ಆಹಾರದ ಇಲಾಖೆ ಇದೆ. ಈ ಶಾಖೆಯನ್ನು ಪ್ರತ್ಯೇಕವಾಗಿಡದೆ ಇದಕ್ಕೆ ಇರಿಗೇಷನ್, ಆಹಾರ, ಎಗ್ರಿಕಲ್ಚರಲ್, ಫುಡ್‌ಡಿಸ್ಟ್ರಿಬ್ಯೂಷನ್ ಇವೆಲ್ಲವನ್ನೂ ಸೇರಿಸಿ ಒಬ್ಬ ಮಂತ್ರಿಗೆ ವಹಿಸಿ. ಅದನ್ನು ಬೇಕಾದರೆ ಮುಖ್ಯಮಂತ್ರಿಗಳೇ ವಹಿಸಿಕೊಳ್ಳಲಿ. ಏಕೆಂದರೆ ಇದಕ್ಕೆ ಆದ್ಯತೆ ಕೊಡಬೇಕಾಗುತ್ತದೆ. ದೇಶವು ಇದ್ದಕ್ಕೆ ಒಂದು ಪ್ರಥಮವಾದ ಮತ್ತು ಪವಿತ್ರವಾದ ಸ್ಥಾನ ಕೊಡಬೇಕು. ಅದಕ್ಕೆ ಬೇರೆ ಮಂತ್ರಿಗಳನ್ನಾದರೂ ಮಾಡಲಿ, ಅದು ನಿಮಗೆ ಸಂಬಂದಪಟ್ಟದ್ದು. ಇದಕ್ಕೆ co-ordinate ministry ಆಗಬೇಕು. ಆಹಾರದ ಉತ್ಪತ್ತಿ ಮಾಡಬೇಕಾದರೆ ಇದ್ದಕ್ಕೆ ಪ್ರಾಮುಖ್ಯವಾಗಿ ಬೇಕಾಗಿರತಕ್ಕಂಥಾದ್ದು ಮೂರು ಇಲಾಖೆಗಳು. ಇದು ಚೆನ್ನಾಗಿ ಕೆಲಸ ಮಾಡಬೇಕು. ಎಲ್ಲಕ್ಕಿಂತಲೂ ಪ್ರಾಮುಖ್ಯವಾದುದು ಇದರಲ್ಲಿ ಆಹಾರದ ಇಲಾಖೆ, ಇರಿಗೇಷನ್ ಇಲಾಖೆ,

ಮತ್ತು ನೀರಾವರಿ. ಈ ಮೂರು ಇಲಾಖೆಗಳನ್ನು ಸೇರಿಸಿ ಒಬ್ಬ ಮಂತ್ರಿಯ ಕೈಕೆಳಗೆ ಕೆಲಸ ಮಾಡುವಂತಾದರೆ ಆಗ ನಿಜವಾಗಿಯೂ ಕೂಡಾ ದೇಶದಲ್ಲಿ ನಮ್ಮ ಆಹಾರದ ವಿಚಾರದಲ್ಲಿ ಏನೊಂದು ತೀವ್ರತೆ ಇದೆ, ಅದನ್ನು ಕಾರ್ಯಗತ ಮಾಡಿಕೊಂಡಂತಾಗುತ್ತದೆ. ಒಂದು ರೀತಿಯಲ್ಲಿ ಒಂದು ಹೆಜ್ಜೆಯನ್ನು ಇಟ್ಟಂತಾಗುತ್ತದೆ. ಈ ಕಾರ್ಯವನ್ನು ನೀವು ತ್ವರಿತವಾಗಿ ಮಾಡಬೇಕು, ಇಲ್ಲದಿದ್ದರೆ ಒಂದೊಂದು ಇಲಾಖೆಯಲ್ಲಿ ಎಷ್ಟೆಷ್ಟು ಕಾಲ ಬೇಕಾಗುತ್ತದೆಂದು ನಿಮಗೇ ಗೊತ್ತು. ಇದನ್ನು ತಾವು ಕೂಡಲೇ ಮಾಡುವ ಕ್ರಮ ಕೈಗೊಳ್ಳುವಿರೆಂದು ನಂಬಿದ್ದೇವೆ. ಇದರಿಂದಾಗಿ ಮುಂದೆ ಆಹಾರದ ಉತ್ಪಾದನೆಯಲ್ಲಿ ಹೆಚ್ಚಿನ ಸಹಾಯವನ್ನು ಮಾಡಿದಂತಾಗುತ್ತದೆಂದು ನನ್ನ ಭಾವನೆ. ಇವತ್ತು ಈ ಆಹಾರದ ಅಭಾವ ನಿವಾರಣೆಗೆ ಅನೇಕ ನಿಪುಣರು ಅನೇಕ ರೀತಿಯ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ.

ಇವತ್ತಿನ ದಿವಸ ನಮ್ಮ ದೇಶದಲ್ಲಿ ನಾವು ಎಂತಹ ಆಹಾರವನ್ನು ಉತ್ಪಾದನೆ ಮಾಡತಕ್ಕಂತಹದು ಎಂಬುದು ಮುಖ್ಯವಾದ ವಿಚಾರ. ಅನೇಕ ಪ್ರವೀಣರು ಹೇಳಿರತಕ್ಕ ರೀತಿಯಲ್ಲಿ ಇವತ್ತು ನಮ್ಮ ದೇಶದಲ್ಲಿರತಕ್ಕಂತಹ ಭೂಮಿಯ ವಿಸ್ತರಣೆ ಮತ್ತು ಅದರಿಂದ ಉತ್ಪತ್ತಿಯಾಗತಕ್ಕಂತಹ ಆಹಾರ ಮತ್ತು ನಾವು ಅನೂಚಾನವಾಗಿ ಏನು ಸೇವನೆ ಮಾಡುತ್ತಿದ್ದೇವೋ, ಆ ಆಹಾರ ಪದ್ಧತಿಯಲ್ಲಿ ಬಹಳ ಬದಲಾವಣೆಯಾಗಬೇಕು. ಶ್ರೀಮಾನ್ ಕೃಷ್ಣಪ್ಪನವರು ಪೌಷ್ಟಿಕ ಆಹಾರ ವಿಚಾರದಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. ಅವರಲ್ಲಿ ಬಹಳ ಅರ್ಥವಿದೆ. ನಮ್ಮ ಆಹಾರದ ಪದ್ಧತಿಯಲ್ಲಿ ಬದಲಾವಣೆ ಯಾಗದೆ ಹೋದರೆ ಇನ್ನು ಹತ್ತು ವರ್ಷ ಅಥವಾ 20 ವರ್ಷಗಳಾದರೂ ಕೂಡಾ ನಮ್ಮ ಆಹಾರ ಸಮಸ್ಯೆ ಖಂಡಿತವಾಗಿ ಪರಿಹಾರವಾಗುವುದಿಲ್ಲ. ನಮ್ಮ ಆಹಾರದ ಒಂದು ಬ್ಯಾಲೆನ್ಸ್ಡ್ ಡೈಯಟ್ ಏನಿದೆ, ಅದರಲ್ಲಿ ಒಂದು ತೀವ್ರ ಬದಲಾವಣೆಯಾಗಬೇಕು. ಇವತ್ತು ನಾವು ವ್ಯವಸಾಯಕ್ಕೆ ಎಷ್ಟು ಪ್ರಧಾನ್ಯತೆ ಕೊಡುತ್ತೇವೆಯೋ, ಅಷ್ಟೇ ಪ್ರಧಾನ್ಯತೆಯನ್ನು ಮೀನು ಸಾಕಾಣಿಕೆಗಾಗಲೀ ಕೋಳಿ ಸಾಕಾಣಿಕೆಗಾಗಲೀ ಅಥವಾ ಹಾಲಿನ ಕೇಂದ್ರಗಳಿಗಾಗಲೀ ಕೊಡುತ್ತಾ ಇಲ್ಲ. ಬೆಂಗಳೂರು ನಗರದಲ್ಲಿ ಒಂದು ದೊಡ್ಡ ಹಾಲಿನ ಕೇಂದ್ರವನ್ನು ತೆರವಿದ್ದೀರಿ. ಅದರ ಕಟ್ಟಡ ಬಂತೇ ಹೊರತು ಹಾಲು ಬರಲಿಲ್ಲ. ಪ್ರಧಾನ ಮಂತ್ರಿಯವರು ಉದ್ಘಾಟನೆ ಮಾಡುತ್ತಾ ಹೇಳಿದರೇನೆಂದರೆ ಆ ಕೇಂದ್ರ ದಲ್ಲಿ 50 ಸಾವಿರ ಅಥವಾ ಒಂದು ಲಕ್ಷ ಲೀಟರ್ ಹಾಲು ಹಂಚಲಾಗುತ್ತದೆ ಎಂದು. ಆದರೆ ಅಲ್ಲಿ ಏನೂ ಹಂಚಲಾಗುತ್ತಿಲ್ಲ. ಆದುದರಿಂದ ಹೊಸದಾಗಿ ಒಂದು ಹತ್ತು ಸಹಸ್ರಾರು ದನಗಳನ್ನು ತೆಗೆದು ತಮ್ಮದೇ ಆದ ಒಂದು ಹಾಲಿನ ಡೈರಿಯನ್ನು ಸ್ಥಾಪನೆ ಮಾಡಿದರೆ ಅದರಿಂದ ನಿಜವಾಗಿಯೂ ಎಲ್ಲಾ ಜನರಿಗೂ ಅನುಕೂಲವಾಗುತ್ತದೆ. ಹಾಗಿಲ್ಲದೆ ಬೇರೆಯವರಿಂದ ಹಾಲು ತೆಗೆದು ವಿತರಣೆ ಮಾಡಿದರೆ ಅದರಿಂದ ಏನೂ ಪ್ರಯೋಜನವಾಗಲಾರದು. ನಮಗೆ ಮುಖ್ಯವಾಗಿ ಬೇಕಾದುದು ಪುಷ್ಟಿಕರವಾದ ಮತ್ತು ಶುದ್ಧವಾದ ಹಾಲು. ಅದಕ್ಕೆ ಒಂದು ಹಾಲಿನ ಕ್ಷೇತ್ರವನ್ನೆ ಬೊಂಬಾಯಿ ಮಾದರಿಯಲ್ಲಿ ಮಾಡಬೇಕು. ಅದರಿಂದ ಹಾಲಿನ ಉತ್ಪತ್ತಿಯೂ ಕೂಡಾ ಜಾಸ್ತಿಯಾಗುತ್ತದೆ; ಮತ್ತು ಒಳ್ಳೆಯ ಹಾಲು ಕೂಡಾ ಅನೇಕ ಜನರಿಗೆ ಸಿಗುವ ಏರ್ಪಾಡಾಗುತ್ತದೆ ಎಂದು ನಾನು ಈ ವಿಚಾರದಲ್ಲಿ ಹೇಳಬಯಸುತ್ತೇನೆ.

MR. DEPUTY SPEAKER.—The House will now rise for half-an-hour.

The House adjourned for Recess at Three of the Clock and re-assembled at Thirty Minutes past Three of the Clock.

(MR. DEPUTY SPEAKER in the Chair.)

ಶ್ರೀ ಎಸ್. ಶಿವಪ್ಪ.—ಸ್ವಾಮೀ, ಆಹಾರದ ಉತ್ಪತ್ತಿಯ ವಿಚಾರವಾಗಿ ಮಾತನಾಡುವಾಗ ನಮ್ಮ ದೇಶದಲ್ಲಿರತಕ್ಕ ಅಭಾವವನ್ನು ನಿವಾರಣೆ ಮಾಡುವ ಉದ್ದೇಶದಿಂದ ಆದಷ್ಟು ಹೆಚ್ಚು ಆಹಾರ ಬೆಳೆಯುವುದು ಒಳ್ಳೆಯದು. ಇದರ ಬಗ್ಗೆ ವಿಚಾರ ಮಾಡುತ್ತಾ ನಾನು ಆಗಲೇ ಹಾಲನ್ನು ಹೆಚ್ಚು ಉತ್ಪತ್ತಿ ಮಾಡುವ ಬಗ್ಗೆ ಸರಕಾರದವರು ಇನ್ನೂ ಹೆಚ್ಚಿನ ಒಂದು ಕಾರ್ಯಕ್ರಮವನ್ನು ಹಾಕಿ ಕೊಂಡು ಇನ್ನೂ ತೀಕ್ಷ್ಣತೆಯಿಂದ ಕೆಲಸ ಮಾಡಿ ಬೆಂಗಳೂರು ನಗರದಲ್ಲಿ ಅಷ್ಟೇ ಅಲ್ಲ ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ, ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲೂ ಹಾಲಿನ ಉತ್ಪತ್ತಿಯನ್ನು ಜಾಸ್ತಿ ಮಾಡಲು

(ಶ್ರೀ ಎಸ್. ಶಿವಪ್ಪ)

ಅಲ್ಲಲ್ಲಿ ಒಳ್ಳೆಯ ತಳಿಗಳನ್ನು ಮತ್ತು ಒಳ್ಳೆಯ ಹಸುಗಳನ್ನು ಸಾಕಲಿಕ್ಕೆ ಸರಕಾರ ಜನರಿಗೆ ಉತ್ತೇಜನವನ್ನು ಕೊಟ್ಟು ಹೆಚ್ಚು ಹಾಲು ಉತ್ಪತ್ತಿಯಾಗುವಂತೆ ಮಾಡಬೇಕು. ಇದರಿಂದ ಅಲ್ಲಿರುವ ಜನಕ್ಕೆ ಪ್ರೋತ್ಸಾಹ ಸಿಕ್ಕಿ ಒಳ್ಳೆಯ ಹಸುಗಳನ್ನು ಸಾಕಲು ಒಂದು ಅವಕಾಶ ಸಿಗುತ್ತದೆ. ಆ ರೀತಿ ಸರಕಾರ ಮಾಡುವುದು ಒಳ್ಳೆಯದು. ಇದೇ ರೀತಿಯಾಗಿ ನಮ್ಮ ದೇಶದಲ್ಲಿ ಆಹಾರ ಸೇವನೆ ಮಾಡುವುದರ ವಿಚಾರದಲ್ಲಿ ಕೋಳಿ ಹಾಗೂ ಕೋಳಿ ಮೊಟ್ಟೆಗಳನ್ನು ಉಪಯೋಗಿಸುವ ಮಿಶ್ರಾಹಾರಗಳನ್ನು ಬಳಕೆಗೆ ತರುವ ಪ್ರಯತ್ನ ಮಾಡಬಹುದು. ಇದರಿಂದ ಆಹಾರ ಪದಾರ್ಥಗಳನ್ನು ಉಳಿಸಲು ಅನುಕೂಲವಾಗುತ್ತದೆ. ಅಲ್ಲದೆ ಆರೋಗ್ಯದ ದೃಷ್ಟಿಯಿಂದಲೂ ಮತ್ತು ಆಹಾರವನ್ನುಳಿಸುವ ದೃಷ್ಟಿಯಿಂದಲೂ ಇವೆರಡು ದೃಷ್ಟಿಯಿಂದಲೂ ಮಿಶ್ರಾಹಾರ ಸೇವನೆ ಬಹಳ ಒಳ್ಳೆಯದು, ಇದಕ್ಕಾಗಿ ಸಾಕಷ್ಟು ಪ್ರೋತ್ಸಾಹ ಕೊಡುವುದು ಅವಶ್ಯಕ. ಇದರಂತೆಯೇ ಮೀನಿನ ಸಾಕಾಣಿಕೆಗೆ ಸಾಕಷ್ಟು ಪ್ರೋತ್ಸಾಹ ಕೊಟ್ಟಿಲ್ಲ. ನಮ್ಮ ಮೈಸೂರು ದೇಶದಲ್ಲೇ ಸುಮಾರು ನೂರಾರು ಮೈಲಿಗಳಷ್ಟು ಉದ್ದದ ಕೋಸ್ಟ್ ಲೈನು ಇದೆ. ಇದರಿಂದ ಹೆಚ್ಚು ಮೀನಿನ ಸಾಕಾಣಿಕೆಗೆ ಅವಕಾಶ ಕೊಟ್ಟರೆ ಇದರಿಂದ ಈಗ ಆಗುವ ಉತ್ಪತ್ತಿಗಿಂತ ನಾಲ್ಕರಷ್ಟು ಅಥವಾ ಐದರಷ್ಟು ಉತ್ಪತ್ತಿ ಜಾಸ್ತಿ ಮಾಡುವುದಕ್ಕೆ ಅವಕಾಶ ಇದೆ. ಅಲ್ಲದೆ ಈಗ ಎಲ್ಲ ವರ್ಗದವರೂ ಮೀನನ್ನು ತಿನ್ನುತ್ತಾರೆ. ಮೀನನ್ನು ತಿನ್ನತಕ್ಕ ಜನರೂ ಜಾಸ್ತಿಯಾಗಿದ್ದಾರೆ. ಇದರಿಂದ ಹೆಚ್ಚು ಆಹಾರ ಉಪಯೋಗಿಸುವುದೂ ಕಡಿಮೆಯಾಗುತ್ತದೆ. ಇದರ ಬಗ್ಗೆ ಪರಿಶೀಲನೆ ಮಾಡಿ ಎಷ್ಟು ಮಟ್ಟಿನ ಆಹಾರದಲ್ಲಿ ಮಿತವ್ಯಯ ಸಾಧಿಸಬಹುದು ಎನ್ನುವುದನ್ನು ಯೋಚನೆ ಮಾಡಬೇಕು. ಅಲ್ಲದೆ ಈಗ ದೇಶದಲ್ಲಿ ಆಹಾರದ ಪದಾರ್ಥಗಳ ಉಪಯೋಗದಲ್ಲಿ ಅನೇಕ ರೀತಿಯಲ್ಲಿ ಪೋಲು ಕೂಡ ಆಗುತ್ತಿದೆ. ಈಗಿರುವ ನಮ್ಮ ಸ್ಟೋರೇಜು ಪದ್ಧತಿಯಿಂದಾಗಿ ಇದರಲ್ಲಿ ಶೇಕಡಾ ಆರೇಳರಷ್ಟು ನಷ್ಟವಾಗುತ್ತಿದೆ. ಅಲ್ಲದೆ ಕ್ರಿಮಿ ಕೀಟಗಳ ಹಾವಳಿಯಿಂದಾಗಿ ಶೇಕಡಾ ಹತ್ತರಷ್ಟು ನಷ್ಟವಾಗುತ್ತಿದೆ. ಸ್ಟೋರೇಜು ಮತ್ತು ಕ್ರಿಮಿಕೀಟಗಳ ಹಾವಳಿಯೇ ಅಲ್ಲದೆ ಸಾಗಣಿಕೆಯಿಂದಲೂ ಕೂಡ ಸ್ವಲ್ಪ ಮಟ್ಟಿನ ನಷ್ಟವಾಗುತ್ತಿದೆ. ಇವು ಮೂರು ಬಗೆಗಳಿಂದಲೂ ಸುಮಾರು ಶೇಕಡಾ ಇಪ್ಪತ್ತೈದರಷ್ಟು ನಷ್ಟವಾಗುತ್ತದೆ. ಇಂತಹ ಆಹಾರದ ಅಪವ್ಯಯಗಳನ್ನು ತಪ್ಪಿಸುವುದಕ್ಕಾಗಿ ಶಾಸ್ತ್ರೋಕ್ತವಾದ ಕಾರ್ಯಕ್ರಮಗಳನ್ನು ಕಂಡು ಹಿಡಿಯಬೇಕು. ಇದಕ್ಕೆ ಸರಿಯಾದ ರಕ್ಷಣೆಯನ್ನು ರೈತರಿಗೆ ಕೊಟ್ಟು ಹೆಚ್ಚು ಆಹಾರ ವ್ಯಯವಾಗುವುದನ್ನು ತಪ್ಪಿಸಲು ಅವಕಾಶವಿದೆ. ಅಲ್ಲದೆ ಈಗ 'ವೇಗರೀಸ್ ಆಫ್ ನೇಚರ್' ಎಂದು ಹೇಳುವಂತೆ ಮಳೆಯೇ ನಾಲ್ಕಾರು ತಿಂಗಳಿಂದ ಬಾರದೆ ಇರುವಂತಹ ಅನಿಶ್ಚಿತ ಪರಿಸ್ಥಿತಿಯಲ್ಲಿ ಎಷ್ಟೋ ಕಡೆಗಳಲ್ಲಿ ಇರುವ ಕೆರೆಗಳಲ್ಲಿ, ಕಟ್ಟೆಗಳಲ್ಲಿ ನೀರೇ ಇಲ್ಲ. ಕುಡಿಯುವುದಕ್ಕೆ ನೀರಿಲ್ಲ, ಕೈ ತೊಳೆಯುವುದಕ್ಕೆ ನೀರಿಲ್ಲ. ಇಂತಹ ಕಡೆಗಳಲ್ಲಿ ಸರಕಾರದವರು ನಾಲ್ಕಾರು ಟ್ಯೂಬ್ ವೆಲ್ಸ್‌ಗಳನ್ನು ತೋಡಿಸಿ ಕೊಟ್ಟರೆ ಇಲ್ಲಿನ ಜನಗಳಿಗೆ ಬಹಳ ಸಹಾಯ ಮಾಡಿದಂತಾಗುತ್ತದೆ. ಇಂತಹ ಟ್ಯೂಬ್ ವೆಲ್ಸ್‌ಗಳಿಂದ ಬಹಳ ಪ್ರಯೋಜನವಾಗುತ್ತದೆ. ಕೆಲವು ಕಡೆಗಳಲ್ಲಿ ಈಗ ಇರಿಗೇಷನ್ ವೆಲ್ಸ್‌ಗಳೆಂದು ತೆಗೆಯುತ್ತಿದ್ದಾರೆ. ಕೆಲವು ಭಾಗದಲ್ಲಿ 30—40 ಅಡಿಗಳಲ್ಲೇ ನೀರು ಬರುತ್ತೆ. ಇನ್ನೂ ಕೆಲವು ಭಾಗದಲ್ಲಿ ಬರುವುದಿಲ್ಲ. ಇಂತಹ ಕಡೆಗಳಲ್ಲಿ ಕೆಲವು ಟ್ಯೂಬ್ ವೆಲ್ಸ್‌ಗಳನ್ನು ಸರಕಾರದವರೇ ತೆಗಿಸಿಕೊಟ್ಟರೆ ಅಲ್ಲಿನ ಜನಕ್ಕೆ ಬಹಳ ಅನುಕೂಲವಾಗುತ್ತದೆ. ಇದೂ ಅಲ್ಲದೆ ಎಲ್ಲಕ್ಕಿಂತಲೂ ಹೆಚ್ಚಾಗಿ ಮೈನರು ಇರಿಗೇಷನ್ ಪ್ರಾಜೆಕ್ಟುಗಳಿಗೆ ಇನ್ನೂ ಹೆಚ್ಚು ಗೌರವ ಹಾಗೂ ಆದ್ಯತೆಯನ್ನು ಕೊಡುವುದು ಅಗತ್ಯವಾಗಿದೆ. ನಮ್ಮ ಮೈನರು ಇರಿಗೇಷನ್ ಶಾಖೆಯಲ್ಲಿರುವ ಉಪಸಚಿವರು ಬಹಳ ಉತ್ಸಾಹದಿಂದ ಇದಕ್ಕಾಗಿ ಒಂದು ದೊಡ್ಡ ಯೋಜನೆಯನ್ನೇ ತಯಾರು ಮಾಡಿದ್ದಾರೆ. ಅವರೇ ಹೇಳಿವಂತೆ ಒಂದು ಸಾರಿ 60 ಕೋಟಿಯಷ್ಟು ಎಂದು ಹೇಳಿದರು. ಅನಂತರ 80 ಕೋಟಿಯಷ್ಟು ಎಂದು ಹೇಳಿದರು. ಹೀಗೆ 80 ರಿಂದ 100 ಕೋಟಿಯಷ್ಟು ಒಂದು ದೊಡ್ಡ ಯೋಜನೆಯನ್ನು ಅವರು ತಯಾರು ಮಾಡುವುದಕ್ಕಾಗಿ ಎಷ್ಟೋ ದುಡ್ಡನ್ನು ಖರ್ಚು ಮಾಡಬೇಕಾಗಿ ಬಂದಿರಬಹುದು. ಆದರೆ ಈಗ ಈ ಮೈನರು ಇರಿಗೇಷನ್ ಯೋಜನೆಗಳಲ್ಲಿ ಪ್ರಾರಂಭಿಸಿರುವ ಕೆಲಸಗಳನ್ನು ಆದಷ್ಟು ಕಾರ್ಯಗತವಾಗುವಂತೆ ಮಾಡಿ. ಹೊಸದಾಗಿ ಯಾವ ಮೈನರು ಇರಿಗೇಷನ್ ಯೋಜನೆಯ ಕೆಲಸಗಳನ್ನೂ ತೆಗೆದು ಕೊಳ್ಳಬೇಡಿ. ಅಲ್ಲದೆ ಈಗ ಈ ಇಲಾಖೆಯಲ್ಲಿ ಸರಕಾರದವರು ಒಂದು ಸಣ್ಣ ಕುಂಟೆಯ ಕೆಲಸವನ್ನು ತೆಗೆದುಕೊಳ್ಳಕೂಡದು ಅದನ್ನು ಹಾಗೆ ನಿಲ್ಲಿಸಬೇಕೆಂದೂ ಒಂದು ಆದೇಶವನ್ನು ಕಳುಹಿಸಿದ್ದಾರೆ. ಇದರಿಂದ ಹೆಚ್ಚು ಆಹಾರ ಉತ್ಪತ್ತಿ ಮಾಡುವುದಕ್ಕೆ ಸಹಾಯವಾಗುವದಿಲ್ಲ. ಈ ರೀತಿಯಾಗಿ ಸರಕಾರ ಹೊಸದಾಗಿ ಯಾವ ಒಂದು ಕೆರೆ ಅಥವಾ ಕುಂಟೆಯನ್ನು ಕಟ್ಟಕೂಡದೆಂದು ಹೇಳಿದರೆ ಮೈನರು ಇರಿಗೇಷನ್ ಯೋಜನೆ ಮಾಡಬೇಕೆಂದು ತಂದ ಅವರ ಉದ್ದೇಶಕ್ಕೆ ತದ್ವಿರುದ್ಧವಾಗುವಾಗುತ್ತದೆ ಹಾಗೂ ನಿಷ್ಫಲವಾಗುತ್ತದೆ. ಹೊಸದಾಗಿ ಯೋಜನೆಗಳನ್ನು ಮಾಡುವುದಕ್ಕೆ ಬದಲಾಗಿ

ಇರುವ ಕೆರೆ, ಕಟ್ಟೆ ಹಾಗೂ ಹಳ್ಳಗಳನ್ನು ದುರಸ್ತು ಮಾಡಿ ಅದರಿಂದ ಹೆಚ್ಚು ನೀರು ಬರುವಂತೆ ಮಾಡಲು ತಕ್ಕ ಪ್ರೋತ್ಸಾಹಗಳನ್ನು ಕೊಟ್ಟು ರೈತರ ಜಮೀನಿಗೆ ನೀರನ್ನು ಒದಗಿಸಿ ಕೊಟ್ಟರೆ ಅದರಿಂದ ಹೆಚ್ಚು ಆಹಾರ ಬೆಳೆಯಲು ಅನುಕೂಲವಾಗುತ್ತದೆ. ಇದಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಇದರ ಬಗ್ಗೆ ಆದಷ್ಟು ಶೀಘ್ರವಾದ ಮತ್ತು ತ್ವರಿತವಾದ ಕಾರ್ಯಕ್ರಮಗಳನ್ನು ತೆಗೆದುಕೊಂಡು ನಮ್ಮ ದೇಶವಲ್ಲಿ ಹೆಚ್ಚು ಆಹಾರ ಉತ್ಪತ್ತಿಯಾಗಲು ಸಹಾಯ ಮಾಡಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದಕ್ಕೆಲ್ಲಾ ಹಣವೆಲ್ಲದೆ !

ಶ್ರೀ ಎಸ್. ಶಿವಪ್ಪ.—ಹಣ ಇಲ್ಲದೆ ಇಲ್ಲ, ಹಣ ಇದೆ. ಇರುವ ಹಣವನ್ನು ಸರಿಯಾದ ರೀತಿಯಲ್ಲಿ, ಪೋಲಾಗದ ರೀತಿಯಲ್ಲಿ ಖರ್ಚು ಮಾಡಿದರೆ ಅದರಿಂದ ತಕ್ಕ ಪ್ರತಿಫಲ ದೊರಕುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಯಾವ ಯಾವ ಯೋಜನೆಗಳಿಗೆ ಹಣವನ್ನು ಖರ್ಚು ಮಾಡಬೇಕು ಎನ್ನುವುದೇ ಬಹಳ ಪ್ರಾಮುಖ್ಯವಾದ ಪ್ರಶ್ನೆ. ನಮ್ಮ ದೇಶದಲ್ಲಿ ಹಣಕಾಸಿಗೇನೂ ಕೊರತೆ ಇಲ್ಲ. ಆದರೆ ಎಲ್ಲವೂ ಕೂಡ ಡಿಫೆನ್ಸ್ ಓರಿಯಂಟೇಟೆಡ್ ಎಂದು ಹೇಳುವಂತೆ ವ್ಯವಸಾಯದ ಬಾಬಿಗೂ ಹೆಚ್ಚು ಹೆಚ್ಚು ಖರ್ಚು ಮಾಡಿ ಆಹಾರವನ್ನು ಬೆಳೆಯಬೇಕಾದುದು ಅತಿ ಮುಖ್ಯವಾದ ಪ್ರಶ್ನೆ. ಆಹಾರದ ಉತ್ಪತ್ತಿಗೆ ಮೈನರು ಇರಿಗೇಷನ್ ಪ್ರಾಜೆಕ್ಟುಗಳು ಅತ್ಯಂತ ಉಪಯುಕ್ತವಾದಂತಹವುಗಳು. ಇದಕ್ಕಾಗಿ ಸರಕಾರ ಹಣವನ್ನು ಉತ್ಪತ್ತಿ ಮಾಡುವುದು ಅವರ ಆದ್ಯ ಕರ್ತವ್ಯ. ಇದಕ್ಕೆ ಯಾರ ಆಕ್ಷೇಪಣೆಯೂ ಬರುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದುವರೆಗೆ ಸರಕಾರದವರು ಎಷ್ಟು ಎಕರೆಗಳಷ್ಟು ಸಾಗುವಳಿಯಾಗಲು ಅವಕಾಶ ಮಾಡಿದ್ದಾರೆ ?

ಶ್ರೀ ಆಲೂರು ಹನುಮಂತಪ್ಪ (ಸಣ್ಣ ನೀರಾವರಿ ಶಾಖೆಯ ಉಪಸಚಿವರು).—ನನಗೆ ತಿಳಿದಂತೆ ಮೊದಲು 16 ಕೋಟಿಯಷ್ಟು ಹಣ ಸಣ್ಣ ನೀರಾವರಿ ಯೋಜನೆಗಳಿಗಾಗಿ ಕೊಡಲಾಯಿತು. ಈಚೆಗೆ ಕೇಂದ್ರದವರ ಸಹಾಯ ಗ್ರಾಂಟು ರೂಪದಲ್ಲಿ ಬಂದಾಗ ಮತ್ತೆ 10 ಕೋಟಿಯಷ್ಟು ಎಂದರೆ ಒಟ್ಟು 26 ಕೋಟಿಯಷ್ಟು ಈಗಾಗಲೇ ಖರ್ಚು ಮಾಡಲಾಗಿವೆ.

ಶ್ರೀ ಕೆ. ಲಕ್ಕಪ್ಪ.—ನಮ್ಮ ಕಡೆಯಲ್ಲಿ ಒಂದು ಕಟ್ಟೆಯನ್ನಾದರೂ ಕಟ್ಟಿಸಿದ್ದೀರಾ !

ಶ್ರೀ ಆಲೂರು ಹನುಮಂತಪ್ಪ.—ಈಗಾಗಲೇ ಎಂಟೂವರೆ ಕೋಟಿಯಷ್ಟು ಮಂಜೂರು ಮಾಡಲಾಗಿದೆ.

[MR. SPEAKER in the Chair]

MR. SPEAKER.—Now, I would like to co-ordinate the work a little. I think, the Hon'ble Leader of the opposition has taken 25 minutes.

Sri S. SIVAPPA.—I will take 15 or 20 minutes more.

Sri S. GOPALA GOWDA (Thirthahalli).—Two days may be given.

MR. SPEAKER.—Two days means, after all, seven hours and nothing more, unless we try to arrange it in some other fashion. After the Hon'ble the Leader of the Opposition has finished, I suggest, whatever steps that the Government propose to take if they indicate, then it will be easy for me to see that there is no repetition. This is a Resolution by a private Member. If the Government indicate the steps that they proposes to take, then the Members will add something more. Otherwise, every Member will go on suggesting.

Sri B. D. JATTI (Minister for Food).—So far, there does not seem to be any repetition. Secondly, it is better to hear what the Hon'ble Members say on the floor of the House. Tomorrow at the opening of the meeting, either the Minister in charge of the agriculture or myself will give some views so that further discussion will be on proper lines.

Sri SIDDAIAH KASIMATH (Shirahatti).—The Minister can reply afterwards.

Sri C. J. MUCKANNAPPA.—Let the Government put forward all their proposals. If there are any new things they can be added on.

Mr. SPEAKER.—What is the field that is thrown open ? Among the primary and subsidiary, there is animal husbandry, poultry farming, processing, etc., etc.

ಶ್ರೀ ಎಸ್. ಗೋಪಾಲ ಗೌಡ.—ಅಧ್ಯಕ್ಷರು ಅಪ್ಪಣೆ ಕೊಡಿಸಿದ ಹಾಗೆ ಸರ್ಕಾರದವರು ಒಂದು ಹೇಳಿಕೆಯನ್ನು ಕೊಟ್ಟರೆ ಇಲ್ಲಿ ನಡೆಯುತಕ್ಕ ಚರ್ಚೆಗೆ ಬಹಳ ಉಪಕಾರವಾಗುತ್ತದೆ ಇದುವರೆಗೂ ಸರ್ಕಾರದವರು ಏನು ಮಾಡಿದ್ದಾರೆ, ಮುಂದೇನು ಮಾಡಬೇಕೆಂದಿದ್ದಾರೆ ಎಂಬುದನ್ನು ತಿಳಿಸಿದರೆ ನಾವು ಅನಂತರ ನಮ್ಮ ಸಲಹೆಗಳನ್ನು ಮುಂದಿಸುವುದಕ್ಕೆ ಅನುಕೂಲವಾಗುತ್ತದೆ.

Mr. SPEAKER.—I find a large number of members are desirous of participating in the Debate and the time allocated for every member is about 30 minutes. Independent members have not said anything so far. Unless there is better co-ordination among the Whips, it may be extremely difficult for me. I am willing and I am prepared to sit one hour more to-day, I am prepared to drop the Question Hour tomorrow, and I am prepared to sit in the morning tomorrow and give two hours more. On the Government side, if there are no commitments to which they already stand committed, then we can sit in the morning. This is a very important subject. Personally I feel, two days are not adequate. This is something which has been taken in at the request of the members. Therefore, we must co-ordinate. Are all the members prepared to sit in the morning tomorrow ?

HON'BLE MEMBERS.—Yes, Sir.

Mr. SPEAKER.—Tomorrow morning, we will meet at 9 A.M. and close at Eleven.

Sri SIDDIAH KASIMATH.—We do not want to take one hour more to-day.

Mr. SPEAKER.—We will sit tomorrow, in the morning and in the afternoon, Question Hour to be dropped, no Tea Break, and if necessary, we will sit for one hour extra also in the afternoon. I am prepared to accommodate.

Sri G. V. GOWDA (Palya).—Will the Government furnish the relevant statistics tomorrow morning ?

Mr. SPEAKER.—The Hon'ble Member may meet me, and I will give the statistics.

ಶ್ರೀ ಎಸ್. ಶಿವಪ್ಪ.—ಮಾನ್ಯ ಸಭಾಪತಿಯವರೇ, ದೇಶದಲ್ಲಿ ಇಂದು ಉದ್ಭವಿಸಿರತಕ್ಕ ಪರಿಸ್ಥಿತಿಯಲ್ಲಿ ಆಹಾರೋತ್ಪತ್ತಿಯನ್ನು ಹೆಚ್ಚುಮಾಡತಕ್ಕ ಬಗ್ಗೆ ನಾವೀಗ ಸಲಹೆಗಳನ್ನು ಮಾಡುತ್ತಿದ್ದೇವೆ. ಆಹಾರದ ಹಂಚಿಕೆಯ ವಿಚಾರದಲ್ಲಿ ಹಾಗೂ ಆಹಾರ ಧಾನ್ಯಗಳ ಶೇಖರಣೆಯ ವಿಚಾರದಲ್ಲಿ ನಾನೀಗ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಈ ವಿಚಾರದಲ್ಲಿ ಈಗಾಗಲೇ ಸರ್ಕಾರದವರು ಅನೇಕ ಹುಕುಂಗಳನ್ನು ಹೊರಡಿಸಿದ್ದಾರೆ. ಧಾನ್ಯಗಳ ಧಾರಣೆಗಳನ್ನು ನಿಗದಿ ಮಾಡಿ, ಧಾನ್ಯ ಸಂಗ್ರಹಣೆಯ ಬಗ್ಗೆ ಕೆಲವು ಹುಕುಂಗಳನ್ನು ಮಾಡಿದ್ದಾರೆ. ಆದರೆ ಇನ್ನು ಮುಂದೆ ಸರ್ಕಾರದವರು ಜನರಿಂದ ವಸೂಲ್ಮಾಡತಕ್ಕ ಧಾನ್ಯವನ್ನು ಏಕರೇಜ್ ಆಧಾರದಮೇಲೆ ಮಾಡಬೇಕೆಂದು ಅಜ್ಞೆ ಮಾಡಿದ್ದಾರೆ.

Mr. SPEAKER.—It does not come under this Resolution.

Sri S. SIVAPPA.—I am not going to the details of the levy system.

Mr. SPEAKER.—The Resolution is with regard to the measures to step up food production, to prevent any scarcity.

ಶ್ರೀ ಎಸ್. ಶಿವಪ್ಪ.—ಇಂದು ಉದ್ಭವವಾಗಿರತಕ್ಕ ಪರಿಸ್ಥಿತಿಯನ್ನು ನಾವು ಗಮನಕ್ಕೆ ತೆಗೆದುಕೊಳ್ಳುವುದು ಬಹಳ ಮುಖ್ಯವಾದ ವಿಚಾರ. ಈ ದಿವಸ ನಮ್ಮ ಮೈಸೂರು ರಾಜ್ಯದ ಅನೇಕ ಜಿಲ್ಲೆಗಳಲ್ಲೂ ಮತ್ತು ತಾಲ್ಲೂಕುಗಳಲ್ಲೂ ಆಹಾರಾಭಾವದ ಪರಿಸ್ಥಿತಿ ಎಷ್ಟರಮಟ್ಟಿಗಿದೆ ಎಂಬುದನ್ನು ಹೇಳಲಸದಳವಾಗಿದೆ. ಕಳೆದ 10 ತಿಂಗಳಿಂದ ಅನೇಕ ಕಡೆಗಳಲ್ಲಿ ಒಂದು ಹನಿ ಮಳೆ ಸಹಾ ಆಗದೆ ಕೆಲವು ಕಡೆ ಭೂಮಿಯನ್ನು ಉಳುವುದಕ್ಕೇ ಸಾಧ್ಯವಾಗಿಲ್ಲ, ಇನ್ನು ಕೆಲವು ಕಡೆ ಅಷ್ಟಿಷ್ಟು ಮಳೆಯಾಗಿದ್ದ ಕಡೆ ಬಿತ್ತಿದ ಪೈರುಗಳು ಇತ್ತೀಚೆಗೆ ಮಳೆಯಿಲ್ಲದೆ ಒಣಗುತ್ತಿವೆ. ಒಂದು ಕಡೆ ಬೆಳೆಗಳಿಗೆ ಇಂಥ ಒಂದು ವಿಪತ್ತೊದಗಿರುವಾಗ ಮತ್ತೊಂದು ಕಡೆ ದನಕರುಗಳಿಗೆ ಕುಡಿಯುವುದಕ್ಕೆ ನೀರಿಲ್ಲದಂತಾಗಿದೆ. ಇನ್ನು ಕೆಲವೇ ದಿನಗಳಲ್ಲಿ ಬಾವಿಗಳಲ್ಲಿರತಕ್ಕ ಅಷ್ಟಿಷ್ಟು ನೀರೂ ಕೂಡ ಬತ್ತಿಹೋಗಿ ಜನರಿಗೂ ಸಹ ನೀರಿಲ್ಲದಂಥ ಪರಿಸ್ಥಿತಿ ಉಂಟಾಗಬಹುದು. ನಮ್ಮ ಹಾಸನ ಜಿಲ್ಲೆಯ ಒಂದು ಭಾಗ ಮಲೆನಾಡಿಗೆ ಸೇರಿದ್ದರೂ ಕೂಡ ಅಲ್ಲಿಯೂ ಕೂಡ ಮಳೆಯಿಲ್ಲದೆ ಬತ್ತದ ಬೆಳೆಯಲ್ಲಾ ಒಣಗುತ್ತಿದೆ. ಇನ್ನು ಮೈದಾನ ಭಾಗಕ್ಕೆ ಸೇರಿದ ಭಾಗದಲ್ಲಿ ಇರತಕ್ಕ ರಾಗಿಯ ಪೈರೂ ಸಹಾ ಪೂರ ಬತ್ತಿಹೋಗಿವೆ. ನಮ್ಮ ಕಡೆ ಸಾಮಾನ್ಯವಾಗಿ ಯಾವಾಗಲೂ ದಸರಾ ಮಳೆ ತಪ್ಪದಂತೆ ಬರುತ್ತಿದ್ದುದೂ ಸಹ ಈ ವರ್ಷ ಬರಲಿಲ್ಲ. ರೈತನಿಗೆ ಭಾಷೆ ಕೊಟ್ಟಂಥ ಹಸ್ತದ ಮಳೆ ಕೂಡ ಈ ಸಾರಿ ಬರಲಿಲ್ಲ. ಹೀಗಾಗಿ ದೇಶದಲ್ಲಿ ಇಂದು ಒಂದು ಭೀಕರ ಪರಿಸ್ಥಿತಿಯುಂಟಾಗಿದೆ. ಸರ್ಕಾರದವರು ಇಂದಿನ ಸಂದರ್ಭದಲ್ಲಿ ಏನಾದರೂ ವಿಶೇಷ ಪ್ರಯತ್ನಮಾಡಿ ಜನರನ್ನು ಈ ತೊಂದರೆಯಿಂದ ಪಾರುಮಾಡದಿದ್ದರೆ ಬಹಳ ತೊಂದರೆಯಾಗುತ್ತದೆ. ಈ ದಿವಸ ಜನರಿಗೆ ದನಗಳ ಮೇವನ್ನೊದಗಿಸುವುದಕ್ಕೂ ಕೂಡ ಸಾಧ್ಯವಿಲ್ಲದಂತಾಗಿದೆ. ರೈತನಿಗೆ ಯಾವತ್ತೂ ದನಕರುಗಳು ಎಂದರೆ ಅವು ಅವನಿಗೆ ಬಹಳ ಪ್ರಿಯವಾದ ವಸ್ತುಗಳು. ಆದಾಗ್ಯೂ ಈ ದಿವಸ ಅವುಗಳಿಗೆ ಆಹಾರವನ್ನು ಹಾಕುವುದಕ್ಕೆ ಆತನಿಗೆ ಸಾಧ್ಯವಾಗದೆ ಅವುಗಳನ್ನು ಸಂತೆಗಳಿಗೆ ಸಾಗಿಸಿ ಮಾರಾಟ ಮಾಡುತ್ತಿದ್ದಾನೆ. ಅವುಗಳು ಉಪವಾಸವಿರುವುದನ್ನು ರೈತನು ಕಣ್ಣಿಂದ ನೋಡಿ ಆ ದುಃಖವನ್ನು ತಾಳಲಾರದೆ ಅವುಗಳನ್ನು ಮಾರಾಟ ಮಾಡುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ಏನಾದರೂ ಪ್ರಯತ್ನ ಮಾಡಿ ಮೊದಲು ಬತ್ತಿಹೋಗಿರತಕ್ಕ ಕೆರೆಯ ಅಂಗಳದ ಮಧ್ಯದಲ್ಲಿ ಬಾವಿಗಳನ್ನು ತೆಗೆಸಿ ಅವುಗಳಿಗೆ ನೀರನ್ನೊದಗಿಸುವ ಪ್ರಯತ್ನವನ್ನು ಮಾಡಬೇಕೆಂದು ಹೇಳುತ್ತೇನೆ. ಹಾಗೆ ಇನ್ನು ದನಗಳ ಮೇವಿನ ಬಗ್ಗೆ ಹೇಳುವುದಾದರೆ, ಸರ್ಕಾರದವರೇ ಎಲ್ಲಿಂದಲಾದರೂ ದನಗಳ ಮೇವನ್ನು ಅಂದರೆ ಹುಲ್ಲನ್ನಾಗಲೀ ಅಥವಾ ಹಿಂಡಿಯನ್ನಾಗಲೀ ಅಥವಾ ಯಾವುದಾದರೂ ಬೀಜಗಳನ್ನಾಗಲೀ ಒದಗಿಸಲೇಬೇಕೆಂದು ಒತ್ತಾಯ ಮಾಡಿ ಹೇಳುತ್ತೇನೆ. ಇದಕ್ಕಾಗಿ ಎಷ್ಟೇ ಹಣ ಖರ್ಚಾದರೂ ಚಿಂತೆಯಿಲ್ಲ. ಇರತಕ್ಕ ಪಶು ಸಂಪತ್ತನ್ನು ನಾವೀದಿವಸ ಕಳೆದುಕೊಂಡರೆ ಪುನಃ ಅವುಗಳನ್ನು ಪಡೆಯಲು ಸಾಧ್ಯವಿಲ್ಲ. ನಮ್ಮ ಬಡ ರೈತರಿಗೆ ಮತ್ತೆ ಕೊಳ್ಳಲು ಸಾಧ್ಯವಿಲ್ಲ. ಲಕ್ಷಾಂತರ ರೂಪಾಯಿಗಳ ಬೆಲೆಬಾಳತಕ್ಕ ಪಶು ಸಂಪತ್ತನ್ನು ಉಳಿಸಲು ಸರ್ಕಾರದವರು ತೀವ್ರ ಕಾರ್ಯಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ.

ಎರಡನೆಯದಾಗಿ ಜನಗಳು ಭೀಕರ ಪರಿಸ್ಥಿತಿಯಿಂದಾಗಿ ದಿಕ್ಕೆಟ್ಟಿದ್ದಾರೆ, ಮಳೆ ಇಲ್ಲದೇ ಹೋಯಿತು, ಮುಂದಿನ ಪರಿಸ್ಥಿತಿ ಏನು ಎಂದು ಜನ ಪರಿತಪಿಸುತ್ತಿದ್ದಾರೆ. ಸರ್ಕಾರದವರು ಪ್ರತಿಯೊಂದು ಹಳ್ಳಿಯಲ್ಲೂ ಫೇರ್ ಪ್ರೈಸ್ ಡಿಪೋ ಮುಖಾಂತರ, ಕಂಟ್ರೋಲ್ ರೇಟ್‌ನಲ್ಲಿ ರಾಗಿ, ಜೋಳ, ಅಕ್ಕಿಯನ್ನು ಸರ್ಕಾರದವರೇ ನೇರವಾಗಿ ಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಇದನ್ನು ಮಾಡಲೇಬೇಕು ಇಲ್ಲದೇ ಹೋದರೆ ಬಹಳ ಕಷ್ಟವಾಗುತ್ತದೆ. ತಾವು ತಾಲ್ಲೂಕು ಸೊಸೈಟಿಗಳ ಮುಖಾಂತರ ಕೊಡುತ್ತಾ ಇರತಕ್ಕದ್ದು ಏನೇನೂ ಸಾಲದು, ತಾವು ಕೊಡುತ್ತಾ ಇರುವುದೂ ಕೂಡ ಖಂಡಿತವಾಗಿಯೂ ಬ್ಲಾಕ್‌ಮಾರ್ಕೆಟ್ ಆಗುತ್ತಾ ಇದೆ. ಆದ್ದರಿಂದ ಪ್ರತಿಯೊಂದು ಪಂಚಾಯ್ತಿ ಕ್ಷೇತ್ರದಲ್ಲೂ ಕೂಡ ನಿಮ್ಮದೇ ಆದ ಅಂಗಡಿಗಳನ್ನು ಇಡಬೇಕಾಗುತ್ತದೆ. ಮತ್ತು ಈ ದುಸ್ಥಿತಿ ಹೆಚ್ಚಾಗುವುದರಿಂದ ಅನೇಕ ಕಡೆ ಇವತ್ತು ಜನಗಳಿಗೆ ಆಹಾರ ಇಲ್ಲದೇ ಇರತಕ್ಕ ಕಾಲದಲ್ಲಿ ಸರ್ಕಾರದವರಿಗೆ ನಾನು ಈಗಲೇ ಸೂಚನೆ ಕೊಡುತ್ತಾ ಇದ್ದೇನೆ. ದೊಡ್ಡ ದೊಡ್ಡ ಕೇಂದ್ರಗಳಲ್ಲಿ ಗಂಜೀ ಕೇಂದ್ರಗಳನ್ನು ಏರ್ಪಾಡು ಮಾಡುವುದಕ್ಕೆ ಇವತ್ತಿನಿಂದಲೇ ಸಿದ್ಧತೆ ಮಾಡಬೇಕಾಗುತ್ತದೆ. ಪರಿಸ್ಥಿತಿ ಬಹಳ ಹದಗೆಡುತ್ತಾ ಇದೆ. ಇನ್ನು ಒಂದು ತಿಂಗಳಿನಲ್ಲಿ ಯಾವ ರೀತಿಯಾಗುತ್ತದೆಯೋ ಎಂಬುದನ್ನು ಹೇಳುವುದು ಕಷ್ಟ, ಆದ್ದರಿಂದ ಅದನ್ನು ಮಾಡಲೇಬೇಕಾಗಿದೆ. ಎಲ್ಲಕ್ಕಿಂತಲೂ ಹೆಚ್ಚಾಗಿ ರೈತನಿಗೆ ಇವತ್ತು ನಂಬಿಕೆ ಬರಬೇಕಾದರೆ, ಧೈರ್ಯ ಬರಬೇಕಾದರೆ—ಇವತ್ತು ಅವರು ಮಳೆ ಬರದೆ ಪರಿತಪಿಸುತ್ತಾ ಇದ್ದಾರೆ—ಅವನಿಗೆ ಸರ್ಕಾರದವರು ಹೇಳಬೇಕು, ಈ ವರ್ಷ ಕಂದಾಯವನ್ನು ಮನ್ನಾ ಮಾಡಿದ್ದೇವೆ, ಈ ಒಂದು ಪ್ರದೇಶದಲ್ಲಿ ಕಂದಾಯವನ್ನು ವಸೂಲು ಮಾಡುವುದಿಲ್ಲ ಎಂದು ಹೇಳಿ ಕೂಡಲೇ ಒಂದು ಪ್ರಕಟಣೆಯನ್ನು ಕೊಟ್ಟು ಅವನಲ್ಲಿ ನಂಬಿಕೆ ಬರುವಂತೆ

(ಶ್ರೀ ಎಸ್. ಶಿವಪ್ಪ)

ಮಾಡಬೇಕು. ಹಾಗೆ ಮಾಡಿದರೆ ಅವನಿಗೆ ಧೈರ್ಯ ಬರುತ್ತದೆ. ನನ್ನ ಆರ್ಥಿಕ ಪರಿಸ್ಥಿತಿಯಲ್ಲಿ ಸಹಾನುಭೂತಿಯಿಂದ ಸರ್ಕಾರ ನೆರವಿಗೆ ಬಂದಿದೆ ಎಂದು ಹೇಳಿ ಧೈರ್ಯವನ್ನು ಬಹುಶಃ ರೈತ ಹೊಂದಿಕೊಳ್ಳತಕ್ಕ ಪರಿಸ್ಥಿತಿಯಲ್ಲಿರುತ್ತಾನೆ. ಆದ್ದರಿಂದ ಸರ್ಕಾರದವರು ಈ ಕೂಡಲೇ ಇದನ್ನು ಮಾಡಬೇಕೆಂದು ಹೇಳಿ ಇವತ್ತು ನಾನು ಸರ್ಕಾರದವರಿಗೆ ಸೂಚನೆ ಕೊಡುತ್ತಾ ಇದ್ದೇನೆ. ಮತ್ತು ದೇಶದಲ್ಲಿ ಈ ಆಹಾರಕ್ಕೆ ಶಾಶ್ವತವಾದ ಫ್ಯಾಮಿನ್ ಕಮೀಷನ್ ಇರಲೇಬೇಕು, ಏಕೆಂದರೆ ಕ್ಷಾಮ ಒಂದಲ್ಲ ಒಂದು ರೀತಿಯಲ್ಲಿ ನಮ್ಮ ದೇಶದಲ್ಲಿ ಪದೇ ಪದೇ ಬರುತ್ತಾ ಇದೆ. ಆದ್ದರಿಂದ ಪರ್ಮನೆಂಟ್ ಫ್ಯಾಮಿನ್ ಕಮೀಷನನ್ನು ಇಟ್ಟು ಯಾವ ಪ್ರದೇಶದಲ್ಲಾಗಲಿ ಯಾವ ಕಾಲದಲ್ಲಾಗಲಿ ಕ್ಷಾಮ ಬಂದರೆ ಅದನ್ನು ತೀವ್ರತೆಯಿಂದ ಹೋಗಲಾಡಿಸಲು ಪರಿಹಾರಗಳನ್ನು ಕಂಡುಹಿಡಿಯತಕ್ಕ ವ್ಯವಸ್ಥೆಯನ್ನು ಮಾಡಿದರೆ ಬಹಳ ದೊಡ್ಡ ಪ್ರಯೋಜನವಾಗುತ್ತದೆ ಎಂಬುದನ್ನು ತಾವು ತಿಳಿದುಕೊಳ್ಳಬೇಕು. ಇವತ್ತು ಆಹಾರ ಸಚಿವರಿಗೆ ಹೇಳುತ್ತಾ ಇದ್ದೇನೆ ತಾವು ಇವತ್ತು ಶೇಖರಣೆ ಮಾಡಿದಂತಹ ಆಹಾರದಲ್ಲಿ ಅನೇಕ ಲೋಪದೋಷಗಳು ಇವೆ. ಇವತ್ತು ಆಹಾರವನ್ನು ಯಾವ ಏಜೆನ್ಸಿಯಿಂದ ಶೇಖರಣೆ ಮಾಡುತ್ತಾ ಇದ್ದೀರೋ ಅದರ ಬಗ್ಗೆ ಕಟ್ಟುನಿಟ್ಟಾಗಿ ಕ್ರಮ ಕೈಕೊಳ್ಳಲೇಬೇಕಾಗಿದೆ. ನಾನು ಕೇಳಿದ್ದೇನೆ, ತಾವು ಅನೇಕ ಕೋ-ಆಪರೇಟೀವ್ ಸೊಸೈಟಿಗಳಿಗೆ ಏನು ಹಣವನ್ನು ಕೊಟ್ಟಿದ್ದೀರಿ ಆ ಹಣದ ಮುಖಾಂತರ ಶೇಖರಣೆ ಮಾಡಿದ ಬತ್ತವನ್ನು ಅವರು ಮಾರಾಟಮಾಡಿ ಆ ದುಡ್ಡನ್ನೇ ಪುನಃ ನಿಮಗೆ ಕೊಟ್ಟಿದ್ದಾರೆ, ನಿಮ್ಮ ದುಡ್ಡಿನಲ್ಲೇ ವ್ಯಾಪಾರಮಾಡಿ, ನಿಮ್ಮ ದುಡ್ಡಿನಲ್ಲೇ ವಹಿವಾಟು ಮಾಡಿ, ನಿಮ್ಮ ಬತ್ತವನ್ನೇ ಮಾರಿ ನಿಮ್ಮ ಹಣವನ್ನು ನಿಮಗೆ ಕೊಟ್ಟಿದ್ದಾರೆ ಇದು ಎಂತಹ ವ್ಯವಹಾರ ! ಇದನ್ನು ಸರ್ಕಾರ ಸರಿಪಡಿಸಲೇಬೇಕು. ಇಂತಹ ವ್ಯವಹಾರಕ್ಕೆ ಕೈ ಹಾಕಬೇಕಾದರೆ ಅವರಿಗೆ ಏನು ಧೈರ್ಯ ಇರಬೇಕೆಂಬುದನ್ನು ತಾವು ಯೋಚನೆಮಾಡಬೇಕಾಗಿದೆ. ಸೊಸೈಟಿಯಲ್ಲಿ ಯಾರೇ ಆದರೂ ಇರಲಿ ಮಾನ್ಯ ಆಹಾರ ಸಚಿವರು ತಮ್ಮ ಬಿಗಿಯಾದ ಆಡಳಿತದ ರುಚಿಯನ್ನು ಅವರಿಗೆ ತೋರಿಸಲೇಬೇಕು. ಇದರಿಂದಾಗಿ ಆಹಾರದ ಬೆಲೆಗಳು ಗಗನಕ್ಕೆ ಏರುತ್ತಾ ಇದೆ. ಆಹಾರದ ಹಂಚಿಕೆ ವ್ಯವಸ್ಥಿತವಾಗಿ ಆಗುತ್ತಾ ಇಲ್ಲ. ಸೊಸೈಟಿಗಳಿಗೆ ಬಂದಂತಹ ಆಹಾರ ಸೊಸೈಟಿಗಳಲ್ಲಿ ಮಾಯವಾಗುತ್ತಾ ಇದೆ. ಆದ್ದರಿಂದ ಆಹಾರದ ಹಂಚಿಕೆ ವ್ಯವಸ್ಥಿತವಾಗಿ ಆಗುತ್ತಾ ಇಲ್ಲ. ಇವತ್ತು ಧಾರಣೆವಾಸಿಗಳು ಇನ್ನೂ ಹೆಚ್ಚಿ, ಲಾಭಕೋರರ ದಂಡಿಗೆ ಸಿಕ್ಕಿ ದೇಶ ಬಹಳ ಕಷ್ಟಕ್ಕೆ ಗುರಿಯಾಗಬೇಕಾದ ಸಂದರ್ಭ ಬರುತ್ತದೆ. ಇದನ್ನು ಸರ್ಕಾರ ಬಹಳ ಎಚ್ಚರಿಕೆಯಿಂದ ಯಾರೇ ಆಗಿರಲಿ ಕಾನೂನಿಗೆ ಎದುರಾಗಿ ಬರತಕ್ಕವರಿಗೆ ರಕ್ಷಣೆ ಕೊಡದೆ ಅವರ ಮೇಲೆ ಉಗ್ರಕ್ರಮವನ್ನು ಕೈಕೊಳ್ಳಲೇ ಬೇಕು. ಅದನ್ನು ಬಿಟ್ಟು ರೈತರ ವಿಚಾರದಲ್ಲಿ ಸಹಾನುಭೂತಿ ತೋರಿಸದೇ ಈ ಒಂದು ಕಷ್ಟಕಾಲದಲ್ಲಿ ಅವರ ಮೇಲೆ ಲೆವಿಹಾಕಿ ವಸೂಲುಮಾಡುತ್ತೇವೆ ಎಂದು ಹೇಳುವುದರಿಂದ ಪ್ರಯೋಜನವಾಗುವುದಿಲ್ಲ. ಸ್ವಲ್ಪ ಸಮಾಧಾನಕರವಾಗಿ ಯೋಚನೆಮಾಡಿ ನೀವು ಆಹಾರವನ್ನು ಮಾರ್ಕೆಟ್ ರೇಟ್‌ನಲ್ಲಿ ಕೊಳ್ಳತಕ್ಕ ವ್ಯವಸ್ಥೆಯನ್ನು ಮಾಡಿ. ಯಾವ ರೈತ ಎಷ್ಟು ಬೆಳೆದಿರಲಿ—

Mr. SPEAKER.—I am dropping the Question Hour tomorrow. I want that full one hour to be utilised for discussion. I have so many members coming and asking me to permit them to participate in the Debate. So, there will be no Question Hour tomorrow.

ಶ್ರೀ ಎಸ್. ಶಿವಪ್ಪ.—ಆಹಾರದ ಹಂಚಿಕೆ, ಆಹಾರದ ಮಾರಾಟ ಮತ್ತು ಆಹಾರವನ್ನು ಶೇಖರಣೆಮಾಡುವ ವಿಚಾರದಲ್ಲಿ ಆಹಾರದ ಮಂತ್ರಿಗಳು ಒಂದು ಕ್ರಾಂತಿಕಾರಕವಾದ ಬದಲಾವಣೆಯನ್ನು ಮಾಡಿ ದೇಶಕ್ಕೆ ತೋರಿಸಲೇಬೇಕು. ಇದು ಬಹಳ ಪ್ರಾಮುಖ್ಯವಾದ ವಿಚಾರ ಆಹಾರದ ಇಲಾಖೆಯಲ್ಲಿ ಜನಗಳಿಗೆ ನಂಬಿಕೆ ಬರಬೇಕು. ಇಂತಹ ಕಷ್ಟಕಾಲದಲ್ಲಿ ಪ್ರತಿಯೊಂದು ಕಾಳೂ ಕೂಡ ಬಹಳ ಪ್ರಾಮುಖ್ಯವಾಗಿರತಕ್ಕ ಅಂಶವಾಗಿದೆ. ನಮ್ಮ ದೇಶದಲ್ಲಿ ಅನೇಕ ಜನ ಮಧ್ಯವರ್ತಿಗಾರರು ಇದೇ ಸಮಯದಲ್ಲಿ ಲಾಭ ಸಂಪಾದನೆ ಮಾಡತಕ್ಕ ಲಾಭಕೋರರು—ಎಲ್ಲಾ ವರ್ಗದಲ್ಲೂ ಕೂಡ ಇದೆ, ಇದನ್ನು ಬಿಗಿ ಮುಷ್ಠಿಯಿಂದ ತಾವು ನಿಲ್ಲಿಸಲೇಬೇಕಾಗುತ್ತದೆ ಇಲ್ಲದೇ ಹೋದರೆ ಸರ್ಕಾರವನ್ನು ಈ ಒಂದು ಗುಂಪು ನುಂಗಿಬಿಡುತ್ತದೆ. ನನಗಂತೂ ನಿಮ್ಮ ಕೋ–ಆಪರೇಟಿವ್ ಮೂವ್‌ಮೆಂಟ್ ಆಗಲಿ, ಫುಡ್ ಕಾರ್ಪೊರೇಷನ್ ಆಗಲಿ ಯಾರಿಗೆ ಸಹಕಾರ ತತ್ವದಲ್ಲಿ ನಂಬಿಕೆ ಇಲ್ಲವೋ ರಾಷ್ಟ್ರೀಕರಣದ ಒಂದು ವಾದದ ಮೇಲೆ ನಂಬಿಕೆ ಇಲ್ಲವೋ ಅಂತಹ ವ್ಯಕ್ತಿಗಳು ಸಹಕಾರ ಸಂಘದ ಕಾರ್ಯದರ್ಶಿಯಾಗಿರಲಿ, ಅಥವಾ ಫುಡ್ ಕಾರ್ಪೊರೇಷನ್ ಕಾರ್ಯದರ್ಶಿಯಾಗಿರಲಿ ಅವರ ಕೈಯಲ್ಲಿ ಈ ಆಡಳಿತ ಇದ್ದರೆ ಎಷ್ಟುಮಟ್ಟಿಗೆ ಫುಡ್ ಕಾರ್ಪೊರೇಷನ್ ಆಗಲಿ ಕೋ-ಆಪರೇಟೀವ್ ಸೊಸೈಟಿಯಾಗಲಿ ಕಾರ್ಯಾಚರಣೆ ಮಾಡುತ್ತವೆ ಎಂಬುದನ್ನು ತಾವು ದೀರ್ಘವಾಗಿ ಯೋಚನೆ ಮಾಡಬೇಕಾಗಿದೆ. ಆದ್ದರಿಂದ ಕೇವಲ ಫುಡ್ ಕಾರ್ಪೊರೇಷನ್ ಆಗಲಿ, ಕೋ-ಆಪರೇಟೀವ್ ಸೊಸೈಟಿ

ಯಾಗಲಿ ತಮ್ಮ ಹಿತಚಿಂತಕರನ್ನು ಅಂತಹ ಸ್ಥಾನಗಳಿಗೆ ಅವರಿಗೆ ಒಂದು ಗೌರವ ಸ್ಥಾನವನ್ನು ಕೊಡುವುದಕ್ಕೋಸ್ಕರ ನೇಮಕಮಾಡಿದರೆ ಅಥವಾ ಅಂತಹ ಒಂದು ಸ್ಥಾನಗಳನ್ನು ನಿರ್ಮಾಣ ಮಾಡಿದರೆ ಅದರಿಂದ ಈ ಕಾರ್ಯ ಸಾಧನೆಯಾಗುವುದಿಲ್ಲ. ಸಹಕಾರ ತತ್ತ್ವ ಪೂರ್ಣ ಯಶಸ್ವಿಯಾಗಬೇಕಾದರೆ ಅದು ಸಂಪೂರ್ಣವಾಗಿ ವ್ಯಕ್ತಿಗಳ ಮೇಲೆ ಅವಲಂಬಿಸಿರುತ್ತದೆ ಎಂದು ಹೇಳಿ, ನಾನು ಒತ್ತಿ ಒತ್ತಿ ಹೇಳಬೇಕಾಗಿದೆ. ಇವತ್ತು ನಮ್ಮ ದೇಶದಲ್ಲಿ ಈ ಆಹಾರ ಪರಿಸ್ಥಿತಿಯಿಂದಾಗಿ ನಮ್ಮ ದೇಶದ ರಾಜಕೀಯ ಏನಿದೆ ಇದು ಆಹಾರದ ಮೇಲೆ ನಿಂತಿದೆ. ಇವತ್ತು ಆಹಾರದ ಅಭಾವ ಇರುವುದರಿಂದ ನಮ್ಮ ದೇಶದ ಜನಕ್ಕೆ ಸಾಕಾಗುವಷ್ಟು ಗೋಧಿಯನ್ನು ಹೊರಗಡೆ ಎಲ್ಲಾದರೂ ಹೋಗಿ ಬಿಕ್ಷೆಯಾದರೂ ಬೇಡಿ ತಂದು ನಮ್ಮ ಜನರನ್ನು ಸಾಕಬೇಕೆಂಬ ನೀತಿ ಇವತ್ತು ಬೆಳೆದುಬಂದಿದೆ. ಈ ನೀತಿಯನ್ನು ಎಲ್ಲಿಯವರೆಗೆ ಮುಂದುವರಿಸಿಕೊಂಡು ಹೋಗುತ್ತೇವೆ ಅಲ್ಲಿಯವರೆಗೆ ಬಹಳ ಕಷ್ಟ ಪರಿಸ್ಥಿತಿಯನ್ನು ಎದುರಿಸಲೇಬೇಕಾಗುತ್ತದೆ. ಇಲ್ಲದೇ ಹೋದರೆ ನಾವು ಸ್ವತಂತ್ರರಾಗಿ, ಸ್ವಶಕ್ತಿಯ ಮೇಲೆ ನಮ್ಮದೇ ಆದ ಒಂದು ರಾಜಕೀಯ ನೀತಿಯನ್ನು ಪ್ರಪಂಚದ ಸಂಸ್ಥೆಗಳಲ್ಲಿ ಮತ್ತು ಪ್ರಪಂಚದಲ್ಲಿ ನಮ್ಮ ಧೋರಣೆಯನ್ನು ಮುಂಮುವರಿಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬ ಮಾತನ್ನು ಹೇಳುವುದು ಏನಿದೆ ಅದು ಶತಸ್ಸಿದ್ಧವಾದುದು. ಯಾವ ದೇಶವೇ ಆಗಿರಲಿ ನಮಗೆ ಇವತ್ತು ಆಹಾರವನ್ನು ಕೊಡಬೇಕಾದರೆ ಅವರು ನಮಗೆ ಧಾನ್ಯವನ್ನು ಕೊಡುತ್ತಾ ಇದ್ದಾರೆ ಎಂಬ ದೃಷ್ಟಿಯಿಂದ ನಮ್ಮ ರಾಜಕೀಯದ ಸ್ವರೂಪವನ್ನೇ ಬದಲಾಯಿಸಬೇಕಾಗಿದೆ. ಆ ಆಹಾರವನ್ನು ಕೊಡತಕ್ಕ ಹಿನ್ನೆಲೆಯಲ್ಲಿ ಈ ದೇಶದ ರಾಜಕೀಯ ನೀತಿಯನ್ನು ಬದಲಾಯಿಸತಕ್ಕ ದೃಷ್ಟಿಕೋಣ ಬೆಳೆಯುವುದು ಸ್ವಾಭಾವಿಕ. ಆದ್ದರಿಂದ ಇವತ್ತು ಸರ್ಕಾರದವರು ಈ ಒಂದು ಆಹಾರದ ಸಮಸ್ಯೆಯನ್ನು ಬಗೆಹರಿಸತಕ್ಕ ಕಾಲದಲ್ಲಿ ಯುದ್ಧ ಕ್ಷೇತ್ರದಲ್ಲಿರತಕ್ಕ ಯೋಧನಿಗೆ ಯಾವ ರೀತಿ ಮದ್ದು ಗುಂಡುಗಳನ್ನು ಕೊಟ್ಟು ಅವರಿಂದ ದೇಶವನ್ನು ರಕ್ಷಣೆ ಮಾಡಿಸುತ್ತಾ ಇದ್ದೇವೆಯೋ ಅದೇ ರೀತಿ ಭೂಮಿಯನ್ನು ಅವಲಂಬಿಸಿರತಕ್ಕ ರೈತನಿಗೆ ನೇಗಿಲನ್ನು ಕೊಟ್ಟು ರೈತ ಅದೇ ತನ್ನ ಆಯುಧ ಅನ್ನತಕ್ಕ ರೀತಿಯಲ್ಲಿ ಅವನು ವ್ಯವಸಾಯದಲ್ಲಿ ತೊಡಗಿ ಹೆಚ್ಚು ಆಹಾರವನ್ನು ಉತ್ಪನ್ನ ಮಾಡಿ ದೇಶದಲ್ಲಿ ಅನ್ನ ಸಾಕ್ಷಾತ್ಕಾರ ಮಾಡತಕ್ಕ ಬುದ್ಧಿಯನ್ನು ಎಲ್ಲರಲ್ಲೂ ತುಂಬಬೇಕಾಗಿದೆ. ಇವತ್ತಿನ ದಿವಸ ಆಹಾರವನ್ನು ಬೆಳೆಯತಕ್ಕ ರೈತನ ವಿಷಯದಲ್ಲಿ ಗೌರವ ಇಲ್ಲ. ಸಮಾಜದಲ್ಲಿ ಅಂತಹ ಒಂದು ಗೌರವವನ್ನು ರೈತನ ವಿಷಯದಲ್ಲಿ ಉಂಟುಮಾಡದೇ ಹೋದರೆ ನಮ್ಮ ಆಹಾರದ ಒಂದು ವ್ಯವಸ್ಥೆ ಏನಿದೆ, ಆಹಾರದ ಮೇಲೆ ಇರತಕ್ಕ ದೃಷ್ಟಿಕೋಣ ಏನಿದೆ ಅದನ್ನು ವ್ಯವಸ್ಥಿತವಾದ ರೀತಿಯಲ್ಲಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನಮ್ಮ ಸರ್ಕಾರದವರು ಎಲ್ಲಾ ದೃಷ್ಟಿಯಿಂದಲೂ ಯೋಚನೆ ಮಾಡಿ, ಎಲ್ಲಾ ಕಾರ್ಯಕ್ಷೇತ್ರದಲ್ಲೂ ಕೂಡ ದೇಶ ರಕ್ಷಣೆಮಾಡತಕ್ಕ ಯೋಧನಿಗೆ ಯಾವ ಒಂದು ಗೌರವವನ್ನು ಕೊಡುತ್ತೇವೆಯೋ ಅದೇ ರೀತಿಯ ಗೌರವ, ಅನ್ನವನ್ನು ಬೆಳೆದು ಕೊಡತಕ್ಕ ರೈತನಲ್ಲೂ ಉಂಟಾಗುವಂತೆ ಮಾಡತಕ್ಕದ್ದು ಬಹಳ ಪ್ರಾಮುಖ್ಯವಾಗಿದೆ. ಹಾಗೆ ಮಾಡಿದರೆ ಮಾತ್ರ ನಮ್ಮ ಅನ್ನ ಸಾಕ್ಷಾತ್ಕಾರವಾಗುತ್ತದೆ. ಈ ದೇಶದ ಆಹಾರ ಸಮಸ್ಯೆಯನ್ನು ಬಗೆಹರಿಸಿ ಪರದೇಶದವರಲ್ಲಿ ಭಿಕ್ಷೆಬೇಡುವುದನ್ನು ಕೊನೆಗಾಣಿಸಲು ಸಾಧ್ಯವಾದೀತು. ಈಗ ಅಮೆರಿಕಾ ಅಥವಾ ಬೇರೆ ಯಾವುದಾದರೂ ದೇಶದವರು ನಮಗೆ ಅನ್ನ ಕೊಟ್ಟರೆ ಉಂಟು. ಅವರಿಂದ ಆಹಾರವನ್ನು ತಂದು ನಮ್ಮ ಬಿಕ್ಷಾಪಾತ್ರೆಯನ್ನು ತುಂಬಿಕೊಳ್ಳುವುದರಲ್ಲಿ ಯಾವ ಅರ್ಥವೂ ಇಲ್ಲ. ನಾವು ಆಹಾರದ ವಿಷಯದಲ್ಲಿ ಸ್ವಾವಲಂಬಿಗಳಾಗಿ ನಮ್ಮ ದೇಶದ ಶಕ್ತಿಯನ್ನು ಬೆಳೆಸಿಕೊಳ್ಳಬೇಕಾದರೆ ಆಹಾರದ ಉತ್ಪಾದನೆಯನ್ನು ಜಾಸ್ತಿ ಮಾಡಿಕೊಳ್ಳಬೇಕಾದುದು ಬಹಳ ಪ್ರಾಮುಖ್ಯವಾದದ್ದು, ಆದ್ದರಿಂದ ಸರ್ಕಾರದವರು, ನಾನು ಮೊದಲೇ ಹೇಳಿದ ಹಾಗೆ ಇದನ್ನು ವಾರ್ ಫುಟಿಂಗ್ ಎಂದರೆ ಯುದ್ಧಕಾಲದ ಪರಿಸ್ಥಿತಿಯ ಮೇಲೆ ಅಳವಡಿಸತಕ್ಕ ಒಂದು ನೀತಿಯನ್ನು ದೃಷ್ಟಿಕೋಣದಲ್ಲಿಟ್ಟುಕೊಂಡು ಆಹಾರದ ಸಮಸ್ಯೆಯನ್ನು ಬಗೆಹರಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

4.00 P.M.

†ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮಿ, ನಮಗೆ ಸ್ವರಾಜ್ಯ ಬಂದು 18 ವರ್ಷವಾದುವು. ಈ 18 ವರ್ಷಗಳಿಂದಲೂ ಕೂಡ ನಾವು ಆಹಾರದ ವಿಷಯದಲ್ಲಿ ಸ್ವಯಂಪೂರ್ಣತೆಯನ್ನು ಸಾಧಿಸಬೇಕಾಗಿತ್ತು. ಇದು ಎಲ್ಲಕ್ಕಿಂತಲೂ ಮುಖ್ಯವಾದ ಕೆಲಸ. ಇದಕ್ಕಾಗಿ ನಾನಾ ಯೋಜನೆಗಳನ್ನು ಮಾಡಿದರು. ಪ್ಲಾನಿಂಗ್ ಕಮಿಷನ್‌ನಿಂದ ಹಿಡಿದು ಎಲ್ಲಾ ಮಟ್ಟದಲ್ಲೂ ಕೂಡ ಬೇಕಾದಷ್ಟು ಚರ್ಚೆ ನಡೆದು ಅದರ ಬಗ್ಗೆ ಹತ್ತಾರು ಯೋಜನೆಗಳು ದೇಶದ ಮುಂದೆ ಇವೆ. ಆದರೆ ಈ ಸಮಸ್ಯೆ ಯಾವುದೇ ರೀತಿಯಲ್ಲಿ ಕೂಡ ಪರಿಹಾರವಾಗದೇ ಹಾಗೆಯೇ ಉಳಿದಿದೆ. ನಾವು ಪರದೇಶಗಳಿಂದ ಒಂದು ವರ್ಷಕ್ಕೆ ಸುಮಾರು 600-700 ಕೋಟಿ ರೂಪಾಯಿಗಳ ಆಹಾರವನ್ನು ತರಿಸತಕ್ಕ ಪರಿಸ್ಥಿತಿಯಲ್ಲಿ ಏನೊಂದು ಬದಲಾವಣೆಯೂ ಕೂಡ ಆಗಿಲ್ಲ.

ಶ್ರೀ ಎಮ್. ವಿ. ಕೃಷ್ಣಪ್ಪ (ಕಂದಾಯ ಶಾಖೆಯ ಮಂತ್ರಿಗಳು).—ಮೊದಲು 200 ಕೋಟಿ ರೂಪಾಯಿಗಳ ಆಹಾರವನ್ನು ತರಿಸುತ್ತಾ ಇದ್ದೆವು. ಹೋದವರ್ಷ 250-300 ಕೋಟಿ ರೂಪಾಯಿಗಳ ಆಹಾರವನ್ನು ತರಿಸಿದೆವು. ಅಮೇರಿಕನ್ ಅಗ್ರಿಮೆಂಟಿನಂತೆ ಹಣ ಕೊಡುವುದಿಲ್ಲ. ಪಿ. ಎಲ್. 480 ಕಂಡಿಷನ್ ಪ್ರಕಾರ ಅರ್ಧ ಹಣ ಡೆವಲಪ್‌ಮೆಂಟ್‌ಗೆ ಉಪಯೋಗಿಸುತ್ತೇವೆ. ಇನ್ನು ಅರ್ಧ ಹಣ ರುಪೀ ಪೇಮೆಂಟ್‌ಗೆ ಉಪಯೋಗಿಸುತ್ತಾರೆ. ಒಟ್ಟಿನಲ್ಲಿ ತಕ್ಷಣ ಕೊಡುವುದಿಲ್ಲ.

ಶ್ರೀ ಪಿ. ವೆಂಕಟಗಿರಿಯಪ್ಪ.—ಸರ್ಕಾರದವರು ಆಹಾರ ಸ್ವಯಂ ಪರಿಪೂರ್ಣತೆಯನ್ನು ಸಾಧಿಸಲು ಭೂಸುಧಾರಣೆಯನ್ನೂ ಮುಖ್ಯವಾಗಿ ದೇಶದಲ್ಲಿ ಜಾರಿಗೆ ತರಬೇಕು. ಉಳುವ ರೈತ ಜಮೀನಿನ ಒಡೆಯನಾಗಬೇಕು ಎಂದು ಎಲ್ಲರೂ ಬಾಯಿಮಾತಿನಲ್ಲಿ ಒಪ್ಪಿಕೊಂಡರೂ ಕೂಡ ಈ ಬಗ್ಗೆ ಟೆನೆನ್ಸಿ ಕಾನೂನು, ಇನಾಂತಿ ರದ್ದು ಶಾಸನ ಮತ್ತು ಭೂಸುಧಾರಣಾ ಶಾಸನ ಜಾರಿಯಲ್ಲಿ ಬರುವುದಾಗಿ ಇದ್ದರೂ ಕೂಡ ಅದರ ಉದ್ದೇಶದಲ್ಲಿ ನಂಬಿಕೆ ಇಲ್ಲದಿರತಕ್ಕ ಅಧಿಕಾರಿಗಳ ಕೈಯಲ್ಲಿ ಏನೊಂದು ಪ್ರಗತಿ ಸಾಧ್ಯ ಆಗದೆ ನಿಜವಾಗಿ ಕಷ್ಟ ಪಡತಕ್ಕ ರೈತರಿಗೆ ಜಮೀನಿನ ಒಡೆತನ ಬರುವ ಕಾಲ ಇನ್ನೂ ಹತ್ತಿರ ಬಂದಿಲ್ಲ. ಒಂದು ಉದಾಹರಣೆ ಹೇಳುವುದಾದರೆ ಈ ದಿವಸ ಎಷ್ಟೋ ಜನ ಶ್ರೀಮಂತರಿಗೆ ದೇಶದಲ್ಲಿ 200-300-500 ಎಕರೆ ಜಮೀನು ಇದೆ. ಅದನ್ನು ಬೀಡುಬಿಟ್ಟಿರುತ್ತಾರೆ. ಇದು ಕಷ್ಟಪಡತಕ್ಕ ರೈತರ ಕೈಯಲ್ಲಿ ಇದ್ದರೆ ಸಾವಿರಾರು ಎಕರೆ ಸಾಗುವಳಿ ಮಾಡುವುದಕ್ಕೆ ಅವಕಾಶ ಇದೆ. ಹೀಗೆ ಸಾವಿರಾರು ಎಕರೆ ಶ್ರೀಮಂತರ ಕೈಯಲ್ಲಿ ಇದ್ದು, ಇಂತಹ ಜಮೀನು ಬೀಡು ಬಿಡುವುದಕ್ಕೆ ಸರ್ಕಾರ ಅವಕಾಶ ಕೊಟ್ಟಿದೆ. ಅಂತಹ ಜಮೀನನ್ನು ವಶಪಡಿಸಿಕೊಂಡು ಕಷ್ಟಪಟ್ಟು ಕೆಲಸ ಮಾಡತಕ್ಕ ಮತ್ತು ಬೆಳೆ ಬೆಳೆಯಲಿಕ್ಕೆ ತಯಾರಾಗಿರತಕ್ಕ ರೈತರಿಗೆ ಕೊಡಲಿಕ್ಕೆ ಇದುವರೆಗೂ ಕೂಡ ಏನೊಂದು ಕಾರ್ಯಕ್ರಮವನ್ನೂ ತೆಗೆದುಕೊಳ್ಳದೇ ಇರುವುದು ಬಹಳ ದುರದೃಷ್ಟಕರ ಎಂದು ತಿಳಿಸಬೇಕಾಗಿದೆ. ಈ ದಿವಸ ಶ್ರೀ ಎಸ್. ಶಿವಪ್ಪನವರು ತಿಳಿಸಿದ ಹಾಗೆ ಭಾರಿ ಜಲಾಶಯಗಳನ್ನು ಕಟ್ಟುವುದಕ್ಕೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದ್ದಾರೆ. ತುಂಗಭದ್ರಾ ಜಲಾಶಯದ ವಿಷಯವಾಗಿ ಸಭೆಯ ಮುಂದೆ ಅನೇಕ ಸಾರಿ ಪ್ರಸ್ತಾಪ ಬಂದಿದೆ. ಭಾರಿ ಜಲಾಶಯಗಳಿಗೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದ್ದರೂ ಕೂಡ ಅದರಿಂದ ಎಷ್ಟು ನೀರನ್ನು ಉಪಯೋಗಿಸಿಕೊಳ್ಳಬಹುದೋ ಅಷ್ಟು ಜಮೀನಿಗೂ ಕೂಡ ನೀರು ಉಪಯೋಗಿಸಿಕೊಳ್ಳುವ ಕೆಲಸ ಇನ್ನೂ ಕೂಡ ಪೂರ್ಣವಾಗಿಲ್ಲದೆ ಹಣ ಖರ್ಚುಮಾಡಿದ್ದಕ್ಕೆ ಸರಿಯಾದ ಪ್ರತಿಫಲ ಪಡೆಯುವುದಕ್ಕೆ ಸಾಧ್ಯವಾಗಿಲ್ಲ. ಅಷ್ಟೇ ಅಲ್ಲದೆ ಆಡಳಿತದಲ್ಲಿ ಒಂದೂ ಬಿಗಿ ಇಲ್ಲದೆ ಮತ್ತು ಒಂದು ಖಚಿತವಾದ ಧೋರಣೆ ಇಲ್ಲದೆ ಒಂದು ಕೆರೆ ಅಚ್ಚುಕಟ್ಟಿನಲ್ಲಿ 100 ಎಕರೆ ಜಮೀನು ಇದ್ದರೆ, ಬರೀ 50 ಎಕರೆಗೆ ಆಗುವಷ್ಟು ನೀರು ಇದ್ದರೂ ರೈತರು 100 ಎಕರೆಯಲ್ಲೂ ಬೆಳೆ ಬೆಳೆಯುವುದಕ್ಕೆ ಅವಕಾಶ ಕೊಟ್ಟು 100 ಎಕರೆಯೂ ಕೂಡ ನಾಶ ಆಗುವ ಪರಿಸ್ಥಿತಿ ಇದೆ. ಎಷ್ಟು ನೀರು ಇರುತ್ತದೆ ಅದಕ್ಕೆ ತಕ್ಕಷ್ಟು ಮಾತ್ರ ಸಾಗುವಳಿ ಮಾಡಬೇಕು ಎಂದು ಕಡ್ಡಾಯ ಮಾಡುವುದರಲ್ಲಿ ತಪ್ಪಾಗುವುದಿಲ್ಲ. ಅದನ್ನು ಕಾರ್ಯಗತ ಮಾಡುವುದಕ್ಕೂ ಕೂಡ ಸರ್ಕಾರ ಪ್ರಯತ್ನ ಮಾಡಿಲ್ಲ. ಅದನ್ನು ಕಡ್ಡಾಯವಾದ ರೀತಿ ಜಾರಿಗೆ ತರಲು ಪ್ರಯತ್ನ ಮಾಡಬೇಕು. 100 ಎಕರೆ ಬೆಳೆ ಹಾಳಾಗುವುದಕ್ಕೆ ಬದಲು ಎಷ್ಟು ನೀರು ಇದೆಯೋ ಎಷ್ಟು ಎಕರೆಯಲ್ಲಿ ಬೆಳೆ ಬೆಳೆಯುವುದಕ್ಕೆ ಸಾಧ್ಯವೋ ಅಷ್ಟು ಎಕರೆಯಲ್ಲಿ ಬೆಳೆ ಮಾಡುವುದಕ್ಕೆ ಸರ್ಕಾರ ಕಡ್ಡಾಯವಾದ ಶಾಸನ ಜಾರಿಗೆ ತರಬೇಕು ಎಂದು ನಾನಾದರೂ ತಿಳಿಯಪಡಿಸುತ್ತೇನೆ.

ಈ ದಿನ ವ್ಯವಸಾಯಾಭಿವೃದ್ಧಿಗಾಗಿ ನಾನಾ ಯೋಜನೆಗಳನ್ನು ಮಾಡಿ ಬೈಲು ಸೀಮೆಯಲ್ಲಿ ಬಾವಿಗಳಿಗಾಗಿ ಹಣ ಕೊಟ್ಟಿದ್ದಾರೆ. ಆದರೆ ಕೊಟ್ಟಿರುವ ಹಣ ನ್ಯಾಯವಾಗಿ ಖರ್ಚಾಗುತ್ತಿದೆಯೇ ಎಂಬುದನ್ನು ಯೋಚನೆಮಾಡಬೇಕು. ಅನೇಕರು ಹಣ ತೆಗೆದುಕೊಂಡು 3-4 ವರ್ಷಗಳಾದರೂ ಬಾವಿಯನ್ನು ತೆಗೆಯದಿರುವ ಉದಾಹರಣೆಗಳಿವೆ. ಅವರ ಮೇಲೆ ಶಿಕ್ಷೆ ರೂಪದಲ್ಲಿ ಕಡ್ಡಾಯವಾಗಿ ಕ್ರಮ ತೆಗೆದುಕೊಳ್ಳಬೇಕು. ನ್ಯಾಯವಾಗಿ ಬಾವಿ ತೆಗೆಯುವವರು ಎಷ್ಟು ಕೇಳಿದರೂ ಅವರಿಗೆ ಸಹಾಯ ದೊರೆಯುವುದಿಲ್ಲ. ನಿಜವಾಗಿಯೂ ಹಣ ದುರುಪಯೋಗ ಮಾಡಿರುವವರನ್ನು ಸುಮ್ಮನೆ ಬಿಡುವುದು ದೇಶದ್ರೋಹವಾದಂತಾಗುತ್ತದೆ.

ಸರಕಾರದವರು ಪಶುಪಾಲನೆ, ಪೌಲ್ಟ್ರಿ ಫಾರ್ಮಿಂಗ್, ಡೈರಿ ಪ್ರಾಜೆಕ್ಟ್ ಮುಂತಾದುವುಗಳಿಗೆ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಆದರೆ ಹಾಲಿನ ಸೊಸೈಟಿ ಮುಂತಾದುವುಗಳಿಗೆ ಕೊಟ್ಟಿರುವ ಹಣದಲ್ಲಿ ಎಷ್ಟು ದುರುಪಯೋಗವಾಗಿದೆ, ಎಷ್ಟು ಜನರು ಹಸು ಕೊಂಡರು, ಹಾಲು ಎಷ್ಟು ಒದಗುತ್ತಿದೆ, ಎಷ್ಟು ದುರುಪಯೋಗ ಮಾಡಿದರು, ಅವರಮೇಲೆ ಕ್ರಮ ಕೈಕೊಂಡಿರುವುದೇನು ಎಂಬುದನ್ನು ತಿಳಿಸಬೇಕು. ನನಗೆ ಗೊತ್ತಿರುವ ಹಾಗೆ ಈ ಯೋಜನೆಗೆ ಎಷ್ಟು ಹಣ ಸೊಸೈಟಿಗಳಿಗೆ ಕೊಟ್ಟಿತ್ತೊ ಅದರಲ್ಲಿ ಸೇಕಡ ಹತ್ತು ಭಾಗ ಕೂಡ ನ್ಯಾಯವಾಗಿ ಯಾವ ಉದ್ದೇಶಕ್ಕಾಗಿ ಕೊಡಲ್ಪಟ್ಟಿತ್ತೋ ಅದಕ್ಕೆ ಉಪಯೋಗವಾಗಿಲ್ಲ, ದುರುಪಯೋಗವಾಗಿದೆ, ಕೆಲವು ಸೊಸೈಟಿ ಮುಖಂಡರು ಮತ್ತು ಸದಸ್ಯರು ಹಣ ತೆಗೆದುಕೊಂಡು ಬೇರೆ ಉದ್ದೇಶಗಳಿಗೆ ಖರ್ಚುಮಾಡಿ ಹಾಳುಮಾಡಿದ್ದಾರೆ.

[MR. DEPUTY SPEAKER in the Chair]

ಸರಕಾರದವರು ಈಗ ಹೊಸ ಹೊಸ ಯೋಜನೆಗಳನ್ನು ಮಾಡುತ್ತಿದ್ದಾರೆ. ಕೆರೆ ಅಂಗಳದಲ್ಲಿ ಕೆಲವು ಭಾಗದಲ್ಲಿ ನೀರು ನಿಲ್ಲುವುದಿಲ್ಲ, ಅದು ಅನಾವಶ್ಯಕವಾಗಿ ಉಪಯೋಗವಾಗದೆ ಇದೆ, ಕೆಲವು ಕಡೆ 20 ಎಕರೆ ಜಮೀನನ್ನು ಅದರಲ್ಲಿ ಸಾಗುವಳಿಗೆ ಕೊಡಲು ಸಾಧ್ಯ ಎಂದು ಹಿಂದೆ ಮಂತ್ರಿಗಳು ಹೇಳಿದರು. ಆದರೆ ಹಾಗೆ ಮಾಡಿಲ್ಲ. ಕೆರೆಗಳಲ್ಲಿ ಹೂಳಿದ್ದರೆ ಅದನ್ನು ಜಮೀನಿಗೆ ಹಾಕಿದರೆ ಫಲವತ್ತಾಗಿ ಹೆಚ್ಚು ಬೆಳೆ ತೆಗೆಯಲು ಸಾಧ್ಯವಾಗುತ್ತದೆ. ಆದರೆ ಈ ಯೋಜನೆ ಮುಂದುವರಿಸದಿರಲು, ಕಾರಣ ತಿಳಿಯದು.

ಕಮ್ಯೂನಿಟಿ ಇರಿಗೇಷನ್ ವೆಲ್ಸ್ ಎಂದು ನೀರು ಸಿಕ್ಕುವ ಕಡೆ ತೆಗೆಸಿ ಹತ್ತಾರು ರೈತರಿಗೆ ನೀರಾವರಿ ಮಾಡಲು ಪಂಪು ಹಾಕಿಸಿ ಕೊಡುವುದಾಗಿ ಹೇಳಿದ್ದರು. ಅದನ್ನು ಕೈಬಿಟ್ಟಂತೆ ತೋರುತ್ತದೆ. ಈ ದಿವಸ ಯಾವುದು ಬಹಳ ಮುಖ್ಯವೋ ಯಾವುದಕ್ಕೆ ಹೆಚ್ಚು ಗಮನ ಕೊಡಬೇಕೋ ಅದಕ್ಕೆ ನಿಜವಾಗಿಯೂ ಸಾಕಷ್ಟು ಗಮನ ಕೊಡುತ್ತಿಲ್ಲ.

ಸಾಯಿಲ್ ಕನ್‌ಸರ್ವೇಷನ್ ಬಹಳ ಮುಖ್ಯವಾದುದು ಅದಕ್ಕೆ ಸಂಬಂಧಪಟ್ಟ ಯೋಜನೆಯನ್ನು ಜಾರಿಗೆ ಕೊಡಬೇಕು ಎಂದು ಕೆಲವು ಸದಸ್ಯರು ಹೇಳಿದರು. ಆದರೆ ಅದರ ಪ್ರೊಸೀಜರಿಗೇ ಒಂದು ವರ್ಷ ಬೇಕು, ಎರಡು ಸಾರಿ ಗೆಜೆಟ್ಟಿನಲ್ಲಿ ಪ್ರಕಟವಾಗಬೇಕು. ಅವೇ ಪಬ್ಲಿಕ್ ವರ್ಕ್ಸ್ ಇಲಾಖೆ ಕೆಲಸವಾದರೆ 4 ಸಾವಿರ ರೂಪಾಯಿ ಕೆಲಸವಾದರೂ ಕೂಡ ಬೇಗ ಆಗುತ್ತದೆ. ಆದರೆ 2 ಸಾವಿರ ರೂಪಾಯಿಗಳ ಸಾಯಿಲ್ ಕನ್‌ಸರ್ವೇಷನ್ ಕೆಲಸ ಆಗಬೇಕಾದರೆ ಒಂದು ವರ್ಷ ಬೇಕು. ಸರ್ಕಾರ ಸರಿಯಾದ ವ್ಯವಸ್ಥೆ ಮಾಡದೆ ಇರುವುದರಿಂದ ಅದಕ್ಕಾಗಿ ಇರುವ ಹಣ ಸಹ ಖರ್ಚಾಗದಂಥ ಪರಿಸ್ಥಿತಿ ದೇಶದಲ್ಲಿವೆ. ಇಂಥ ಸಣ್ಣ ನ್ಯೂನತೆಗಳನ್ನು ಪರಿಹಾರ ಮಾಡುವುದಕ್ಕೆ ಸಹ ಸರ್ಕಾರ ವಿಫಲವಾಗಿದೆ. ಸರ್ಕಾರ ಕಾರ್ಯತಃ ಮಾಡುವುದಕ್ಕೆ, ಉತ್ಸುಕರಾಗಿದ್ದಾರೆಯೇ ಎಂದು ಕೇಳ ಬಯಸುತ್ತೇನೆ.

ಈ ವರ್ಷ ಮಳೆ ಬಾರದೆ ಇರುವುದನ್ನು ನೋಡಿದರೆ ಆಹಾರದ ಪರಿಸ್ಥಿತಿ ಇನ್ನೂ ವಿಕೋಪಕ್ಕೆ ಹೋಗಬಹುದು ಎನ್ನಿಸುತ್ತದೆ. ಹಿಂದೆ ಇದೇ ಸಭೆಯಲ್ಲಿ ಆಹಾರದ ಮಂತ್ರಿಗಳು ಅನೇಕ ಸಲ ಹೇಳಿಕೆ ಕೊಟ್ಟು 'ಲೀನ್ ಮಂತ್ಸ್' ನಲ್ಲಿ ಬೇಕಾದ ಆಹಾರವನ್ನು ಒದಗಿಸಲು ಬೇಕಾದ ವ್ಯವಸ್ಥೆ ಮಾಡಿದ್ದೇವೆ, ಅದಕ್ಕಾಗಿ ಸಾವಿರಾರು ಟನ್ ಧಾನ್ಯವನ್ನು ಬೇಕಾದಷ್ಟು ಕಡೆ ಶೇಖರಣೆ ಮಾಡಿದ್ದೇವೆ ಎಂದು ತಿಳಿಸುತ್ತಿದ್ದರು. ಆದರೆ ಈ ದಿವಸ ಹಳ್ಳಿಗಳಲ್ಲಿ ಮತ್ತು ಸಣ್ಣ ಸಣ್ಣ ಪಟ್ಟಣಗಳಲ್ಲಿರುವವರಿಗೆ ಮತ್ತು ವ್ಯವಸಾಯ ಕೂಲಿಕಾರರಿಗೆ, ಬಡವರಿಗೆ ಉಂಟಾಗಿರುವ ಕಷ್ಟವನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಬೆಂಗಳೂರು ಮುಂತಾದ ದೊಡ್ಡ ಪಟ್ಟಣಗಳಲ್ಲಿ ಅಲ್ಲಿಯವರು ಗಲಾಟೆ ಮಾಡುತ್ತಾರೆಂದು ಸ್ವಲ್ಪಮಟ್ಟಿಗೆ ಆಹಾರವನ್ನು ಸರಬರಾಜು ಮಾಡುತ್ತಿದ್ದಾರೆ. ಆದರೆ ಸಣ್ಣ ಪಟ್ಟಣಗಳ ಮತ್ತು ಹಳ್ಳಿಗಳ ಕಡೆ ಗಮನ ಕೊಡುತ್ತಿಲ್ಲ. ಈ ದಿವಸ ರಾಗಿ 170 ರಿಂದ 190 ರೂಪಾಯಿವರೆಗೆ ಇದೆ, ಅಕ್ಕಿಯ ಬೆಲೆ 120—140 ರೂಪಾಯಿ ಇದೆ. ಇಷ್ಟು ಬೆಲೆ ಕೊಟ್ಟು ಬಡ ಜನರು ಆಹಾರ ಪದಾರ್ಥಗಳನ್ನು ಕೊಂಡು ಬದುಕುವುದಕ್ಕೆ ಸಾಧ್ಯವೇ ಎನ್ನುವುದನ್ನು ಸರ್ಕಾರ ಯೋಚನೆ ಮಾಡಬೇಕು. ಸರ್ಕಾರ ಕೊಟ್ಟ ಹಿಂದಿನ ಆಶ್ವಾಸನೆಗಳೆಲ್ಲ ಏನಾದುವು. ಆಹಾರದ ಶೇಖರಣೆ ಏನಾಯಿತು ? ದೇಶದಲ್ಲಿ ಇಂಥ ಪರಿಸ್ಥಿತಿ ಇರಬೇಕಾದರೆ ಎರಡು ಎಕರೆಗಿಂತ ಹೆಚ್ಚು ಭೂಮಿ ಇರುವವರು ಇಷ್ಟು ಧಾನ್ಯವನ್ನು ಸರ್ಕಾರಕ್ಕೆ ಕೊಡಲೇಬೇಕು ಎಂದು ಕಡ್ಡಾಯವಾಗಿ ವಸೂಲಿ ಮಾಡಿದರೆ ಅದರಲ್ಲಿ ತಪ್ಪೇನೂ ಇಲ್ಲ. ಹೀಗೆ ಕಟ್ಟುನಿಟ್ಟಾದ ಒಂದು ನೀತಿಯನ್ನು ಅನುಸರಿಸದೆ ಇದ್ದರೆ ದೇಶದ ಆಹಾರ ಪರಿಸ್ಥಿತಿ ಇನ್ನೂ ಕೆಡುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ಸ್ವಾತಂತ್ರ್ಯವನ್ನು ಕಾಪಾಡಲು ನಾವು ಪರಕೀಯರ ಧಾಳಿಯನ್ನು ಹೇಗೆ ಎದುರಿಸಿದೆವೋ ಹಾಗೆಯೇ ಈ ಆಹಾರ ಸಮಸ್ಯೆಯನ್ನೂ ಎದುರಿಸಬೇಕಾಗಿದೆ. ಅದುದರಿಂದ ಈ ಸಭೆಯಲ್ಲಿ ಆಹಾರ ಸಮಸ್ಯೆಯನ್ನು ಬಗೆಹರಿಸಲು ಏನೊಂದು ಸಲಹೆಗಳನ್ನು ಸರ್ಕಾರದ ಮುಂದೆ ಇಡುತ್ತಾರೆಯೋ ಅವುಗಳನ್ನೆಲ್ಲ ಕೂಡಲೇ ಕಾರ್ಯಗತ ಮಾಡಲು ಎಲ್ಲ ಕ್ರಮಗಳನ್ನೂ ಕೂಡ ಸರ್ಕಾರ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯಪಡಿಸುತ್ತೇನೆ.

†SRI D. VENKATARAMAIYA (Kolar).—Mr. Speaker, Sir, a subject of very great importance has been mooted by my Hon'ble and learned friend Sri D. M. Siddaiya. The scarcity of food and food production in general and particularly failure of rains almost in every part of Mysore, specially old Mysore, has been brought into prominence. That is the situation.

Interruptions

(SRI D. VENKATARAMAIYA)

I was just bringing to the notice of this Hon'ble House the very grave situation prevailing in our State and particularly in Kolar District. In Kolar District, in Sreenivasapura, parts of Sreenivasapur taluk, Rayalpad, Bagepalli, Gudibande and in general, Kolar District, on account of failure of rains, crops have almost completely failed and if it does not rain within two or three days even the latest sowings will also meet with the same fate. Firstly, the entire crop condition of the district is bad and as was brought to the notice of the House by the previous speakers, the condition in the entire State is also bad. Why I say this is, this has lime-lighted the food problem. It is there. The solution has got to be found. The Government is doing its best. What more has to be done; not merely the entire policy has got to be defence oriented. This policy of food also should be oriented towards the defence itself. Sir, the deficit in normal times in Kolar district is 33,000 tons of rice and 34,000 tons of ragi and when crops have completely failed, what would be the fate of the people? On the one side, Government is not supplying the necessary rice and ragi to the people. On the other side, on account of Inter-State bar, we cannot get rice from Andhra area. What has happened is, rice and ragi do not come from Andhra and there is no sale of ragi by Government depots. A seer of rice is being sold at nearly at Rs. 1-60 and ragi at about Re. 1-00. If this problem has to be solved, what are the measures that Government has got to take? My submission to this Hon'ble House is, the entire Government on the one side has realised the gravity of the food situation and every member of the House is giving expression to the same sentiment. But why is it that this food problem is not solved? It is a very grave problem facing the entire country. What is needed is a revolutionary mentality to implement what is said. Various suggestions are there. Various measures are put forward by the Government. But are they being implemented? My humble suggestion to this House is, the Prime Minister of India said that the Deputy Commissioner who is the Head of the District should take responsibility and he has to implement the various policies. I may go a step forther. We have got 27 Ministers. One district should be allotted to each Minister. There are only 19 or 20 districts. One District to be allotted for each Minister and we should take the entire responsibility for the food problem and agricultural improvement, how to distribute the food. It must be entirely given to the responsibility of that Minister. I think, if that is done, much of this problem can be solved.

One other thing is, in Kolar District particularly, there are nearly 5,000 tanks. Many of them are dilapidated. Many have breached and many have to be desilted. All this programme must be taken up immediately. Otherwise, things may grow worse. So far as money is concerned, the question was, where this money should come from. My submission to the House is that even the very proposal that has been put forward by the Government, and the money that has been allotted

to them and particully the wa[lers that have been given to the raiyats in Kolar district—I am really grateful to the Government that more than 5,000 wells have been given in Kolar District—my thanks particularly go to the Hon'ble Revenue Minister and Agriculture Minister. But still many of them think that nothing is being done to help the raiyats. But I can say that if there is anything which can sustain our raiyats in Kolar, it is these wells. The same thing may be continued. We have got the Palar River flowing in Kolar district. It will be dry for practically 8 months in the year. Only for four months, there will be water. On either side of the Palar River, a number of wells may be sunk by the Government itself. Under each well, 10-12 acres of land can be easily irrigated. This proposal had been taken up some time back. I do not know why it has been given up. Probably on account of the Inter-State agreement regarding rivers. This is a very solution that can be adopted, by the P. W. D. itself and PWD can spend as much many as possible on this proposal. Of course, the P. W. Deputy Minister says that a lot of money has been spent. It is not enough. Much of the money that is given is not being utilised properly. This problem has to be viewed on a very important scale. Of course, as I have already stated, the Government has realised the importance of it. The necessary approach should be —how best it should be implemented. That is really the only solution to be found and I hope that Government will take the very many suggestions made by Hon'ble Members on either side of this House.

In this connection, I would like to say that we have to take into consideration the international situation, particularly under the P. L. 420 plan—I do not want to go into details. But when the foreign countries are coming forward saying—unless you come to our way we do not want to give any help by way of food or otherwise and thus applying economic sanctions—we have got to take note of the same. If that is the kind of attitude that is shown by the International States, what should be the approach that we should have. It should be a kind of self-sufficiency—self-sufficiency as Gandhiji put it even 25 years ago. That is the policy we have to approach to have our own way of approach. If we go on approaching other countries, naturally, they may wrong our necks. My submission to this House is whatever policy that is going to be taken, it should be implemented fearlessly. Blackmarketeers should be put down and put down fearlessly. With these few remarks, I close.

†ಶ್ರೀ ಸಿದ್ದಯ್ಯ ಕಾಶಿಮಠ್.—ಅಧ್ಯಕ್ಷರೇ, ಆಹಾರದ ಅಭಾವ ಪ್ರತಿವರ್ಷವೂ ಹೆಚ್ಚುತ್ತಾ ಇರುವುದರಿಂದ ರಾಜ್ಯದಲ್ಲಿ ಆಹಾರೋತ್ಪತ್ತಿಯನ್ನು ಹೆಚ್ಚಿಸಲು ಹಾಗೂ ಆಹಾರದ ಅಭಾವ ಪರಿಸ್ಥಿತಿಯನ್ನು ತಡೆಗಟ್ಟುವುದಕ್ಕೆ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕೆಂದು ತಂದಿರತಕ್ಕ ಠರಾವನ್ನು ನಾನು ಅನುಮೋದಿಸುತ್ತೇನೆ. ಈ ಆಹಾರದ ಅಭಾವವನ್ನು ನೀಗಿಸುವುದಕ್ಕೆ ಸರ್ಕಾರ ಸತತವಾಗಿ ಪ್ರಯತ್ನಗಳನ್ನು ಮಾಡುತ್ತಾ ಬಂದಿರುವುದೇನೊ ಸರಿ, ಆದರೆ ನಿಷ್ಫಲತೆಯನ್ನು ಇವರು ಹೊಂದುವುದಕ್ಕೆ ಕೆಲವು ಕಾರಣಗಳು ಮುಂದೆ ಬಂದಿವೆ. ಮೈಸೂರು ರಾಜ್ಯದಲ್ಲಿ ನೈಸರ್ಗಿಕವಾಗಿ ಸಾಕಷ್ಟು ಹೊಳೆಗಳು, ನದಿಗಳು ಹರಿಯುತ್ತಿದ್ದರೂ ಕೂಡ ಇವತ್ತು ಹೊಳೆಗಳು, ನದಿಗಳ ದಂಡೆ ಮೇಲೆ ಇರತಕ್ಕ ಪೀಕ್ ಒಣಗುವ ಪರಿಸ್ಥಿತಿ ನಮ್ಮ ಕಣ್ಣು ಮುಂದಿದೆ. ಇದು ರೈತರ ದುರ್ದೈವವೆಂದು ನಾನು ಹೇಳುತ್ತೇನೆ. ಸರ್ಕಾರದವರು ಯೋಜನೆಗಳನ್ನು ಪತ್ರಿಕೆಗಳಲ್ಲಿ ಪ್ಯಾಂಪ್ಲೇಟ್ ಮುಖಾಂತರ ಹಾಗೂ ವಾಲ್‌ಪೋಸ್ಟರ್ಸ್ ಮುಖಾಂತರ ಸಾಕಷ್ಟು ರೀತಿಯಲ್ಲಿ ಪ್ರಚಾರಮಾಡುತ್ತಿದ್ದಾರೆ. ಅದರೆ

(ಶ್ರೀ ಸಿದ್ದಯ್ಯ ಕಾಶೀಮಠ್)

ಇವತ್ತು ಗ್ರಾಮದಲ್ಲಿ ವಿಫಲತೆಯನ್ನು ಹೊಂದುವುದಕ್ಕೆ ಕಾರಣ ಏನೆಂದರೆ, ಈ ವ್ಯವಸಾಯ ಖಾತೆಯಲ್ಲಿರತಕ್ಕ ಅದ್ವಾನವೆಂದು ನಾನು ಹೇಳುತ್ತೇನೆ. ಏಕೆಂದರೆ ರೈತರ ಉಪಯೋಗಕ್ಕಾಗಿ ಹೊಲಗಳನ್ನು ಉಳುವುದಕ್ಕೆ ಟ್ರಾಕ್ಟರುಗಳನ್ನು ಕೊಂಡಿದ್ದಾರೆ. ಆದರೆ ಅವುಗಳಿಂದ ಏನೂ ಇದುವರೆಗೆ ಕಾರ್ಯಗತವಾಗದೆ ಅವು ಯಾವ ಕೆಲಸವೂ ಮಾಡದೆ ಇವತ್ತು ಸಿಕ್ಕಾಗಿ ಇರತಕ್ಕ ಪರಿಸ್ಥಿತಿ ನಮ್ಮ ಕಣ್ಣು ಮುಂದಿದೆ. ಅಷ್ಟೇ ಅಲ್ಲದೆ ಅನೇಕ ರೀತಿಯ ಬೋರಿಂಗ್ ಮೆಷಿನ್‌ಗಳನ್ನು ಸರಬರಾಜು ಮಾಡುವಂತೆಯೂ ಅವುಗಳ ಮೂಲಕ ಸುಲಭ ರೀತಿಯಲ್ಲಿ ನೀರನ್ನು ಎತ್ತುವಂತೆಯೂ ಹಿಂದೆ ಕೆಲವು ಸಲಹೆಗಳನ್ನು ನಾವು ಮಾಡಿದ್ದೆವು. ಆದರೆ ಅವು ಸರಿಯಾಗಿ ಕೆಲಸ ಮಾಡದೇ ಇರುವುದರಿಂದ ಈ ರೀತಿಯ ಉಪಕರಣಗಳ ಅಭಾವದಿಂದ ಆಹಾರೋತ್ಪಾದನೆಯನ್ನು ಹೆಚ್ಚುಮಾಡಲು ಕುಂಠಿತವಾಗುತ್ತಿದೆ. ಉತ್ತಮ ಬೀಜಗಳನ್ನು ಸೀಡ್ ಫಾರಂ ಮುಖಾಂತರ ಇವರು ಒದಗಿಸಿದ್ದಾರೆಯೇ ಎಂದರೆ ಅದೇನೂ ಇಲ್ಲ. ಅದಕ್ಕೆ ಮೊದಲೇ ಸರ್ಕಾರದವರು ರೈತರಿಗೆ ಹೆಚ್ಚು ಉತ್ತಮವಾದ ಒಳ್ಳೆಯ ಬೀಜಗಳನ್ನು ಮತ್ತು ಅದಕ್ಕೆ ಬೇಕಾದ ಸಾಮಗ್ರಿಗಳನ್ನು ಒದಗಿಸಿದ್ದಿದ್ದರೆ ಆಹಾರ ಪದಾರ್ಥಗಳ ಬೆಳೆ ಸಾಕಷ್ಟು ಉತ್ತಮ ರೀತಿಯಲ್ಲಿ ಆಗುತ್ತಿತ್ತು. ಆದರೆ ಇವರಿಗೆ ರಾಸಾಯನಿಕ ಗೊಬ್ಬರ ಹಾಗೂ ನೈಸರ್ಗಿಕ ಗೊಬ್ಬರವನ್ನು ರೈತರಿಗೆ ಬೇಕಾದಷ್ಟು ಒದಗಿಸಲಿಕ್ಕೆ ಸಾಧ್ಯತೆಯಾಗಲಿಲ್ಲ. ಇದಕ್ಕೆ ಕಾರಣ ಕೇಳಿದರೆ ಇವತ್ತು ಪರದೇಶಗಳಿಂದ ನಮಗೆ ರಸಾಯನಿಕ ಗೊಬ್ಬರ ಸಾಕಷ್ಟು ಬರಲಿಲ್ಲ, ನಮ್ಮಲ್ಲಿ ಸ್ಟಾಕ್ ಇಲ್ಲವೆಂದು ಉತ್ತರ ಬಂತು. ಈ ರೀತಿಯಾಗಿ ರೈತನಿಗೆ ಒದಗಿಸುವ ಸಾಮಗ್ರಿಗಳು ಕುಂಠಿತ ಅವಸ್ಥೆಯಲ್ಲಿದ್ದರೆ ಹೇಗೆ ಹೆಚ್ಚಿಗೆ ಆಹಾರೋತ್ಪಾದನೆ ಮಾಡಬೇಕು? ಅದಕ್ಕಾಗಿ ಸರ್ಕಾರದವರು ವ್ಯವಸಾಯ ಇಲಾಖೆಯಲ್ಲಿ ಹೆಚ್ಚಿನ ಜಾಗೃತಿಯನ್ನುಂಟು ಮಾಡಿದರೆ ಸರ್ಕಾರದಿಂದ ಹೆಚ್ಚಿಗೆ ಹಣ ಖರ್ಚುಮಾಡಿ ಸರಿಯಾದ ರೀತಿಯಲ್ಲಿ ಅಧಿಕಾರಿಗಳು ಕೆಲಸಮಾಡುವಂತೆ ಸರ್ಕಾರದವರು ನೋಡಿಕೊಳ್ಳಬೇಕೆಂದು ಈ ಸಮಯದಲ್ಲಿ ಒತ್ತಿ ಹೇಳುತ್ತೇನೆ.

ಇನ್ನು ಧಾರವಾಡ ಜಿಲ್ಲೆಯ ವಿಷಯ. ಈ ಜಿಲ್ಲೆಯ ಹಾವೇರಿ, ಶಿರಹಟ್ಟಿ, ಕುಂದಗೋಲ್, ಗದಗ್ ಮತ್ತು ರೋನ್ ತಾಲ್ಲೂಕುಗಳು ಮೇಲಿಂದ ಮೇಲೆ ಆಹಾರದ ಅಭಾವ ಪರಿಸ್ಥಿತಿಗೆ ಒಳಗಾಗಿರುತ್ತವೆ. ಅಂತಹ ಒಂದು ಪರಿಸ್ಥಿತಿ ಆಗಾಗ್ಗೆ ಅಲ್ಲಲ್ಲಿ ತಲೆದೋರುತ್ತಿರುತ್ತದೆ. ಈ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಮಲಪ್ರಭಾ ಯೋಜನೆ ಮಾಡಿ ಕೇವಲ ಒಂದೆರಡು ತಾಲ್ಲೂಕುಗಳಿಗೆ ಮಾತ್ರ ನೀರನ್ನು ಒದಗಿಸಿದ್ದಾರೆಯೇ ಹೊರತು ನಮ್ಮ ಜಿಲ್ಲೆಯ ಅನೇಕ ತಾಲ್ಲೂಕುಗಳಿಗೆ ಈ ಯೋಜನೆಯಿಂದ ಸಾಕಷ್ಟು ನೀರಿನ ಸೌಕರ್ಯವುಂಟಾಗಲಿಲ್ಲ. ಕೇವಲ ಗದಗ್, ಮುಂಡರಗಿ ಮತ್ತು ರೋನ್ ತಾಲ್ಲೂಕುಗಳಿಗೆ ಮಾತ್ರ ನೀರಿನ ಸೌಕರ್ಯ ಸ್ವಲ್ಪ ಮಟ್ಟಿಗೆ ಈಗ ಒದಗಬಹುದು. ಈ ಬಗ್ಗೆ ಸರ್ಕಾರದವರು ಹೆಚ್ಚಿಗೆ ನಿಗಾ ಕೊಟ್ಟರೆ ಈಗಿನ ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸಬಹುದು. ಇನ್ನು ನೀರಾವರಿ ಯೋಜನೆಗಳ ಬಗ್ಗೆ ಸರ್ಕಾರದವರು ಸಾಕಷ್ಟು ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಅವನ್ನು ಕಾರ್ಯಗತ ಮಾಡುವುದಕ್ಕಾಗಿ ಸರ್ಕಾರದವರು ಆಫೀಸರುಗಳೊಂದಿಗೆ ವಿಚಾರ ವಿನಿಮಯಮಾಡಿಕೊಂಡು ಸಾಕಾದಷ್ಟು ಬಾವಿಗಳನ್ನು ತೆಗೆಸಲು ಹಣವನ್ನು ಒದಗಿಸುವುದು, ಉಳುವುದಕ್ಕೆ ಉಪಕರಣಗಳನ್ನು ಸಹಾಯಮಾಡುವುದು ಈ ಕೆಲಸಗಳನ್ನು ಜಾಗ್ರತೆಯಾಗಿ ಮಾಡಿದ್ದೇ ಆದರೆ ಖಂಡಿತವಾಗಿ ನಾವು ಹೆಚ್ಚಿಗೆ ಅಭಿವೃದ್ಧಿ ಮಾಡಬಹುದು. ರೈತರಿಗೆ ತಾವು ಬೆಳೆದಂತ ಪೀಕುಗಳನ್ನು ಮನೆಗೆ ತರುವುವಷ್ಟರೊಳಗೇ ಆ ಬೆಳೆಗೆ ಕ್ರಿಮಿಕೀಟಾದಿಗಳ ಹಾವಳಿ ಹೆಚ್ಚಾಗಿ ರೈತ ಬೆಳೆದ ಬೆಳೆಯ ಸ್ವಲ್ಪ ಭಾಗ ನಾಶವಾಗುತ್ತದೆ. ಆದ್ದರಿಂದ ಮೊದಲನೆಯ ವರ್ಷ ಸರ್ಕಾರದವರೇ ಆಹಾರ ಪದಾರ್ಥಗಳನ್ನು ಬೆಳೆಯುವ ಒಂದು ಜವಾಬ್ದಾರಿಯನ್ನು ವಹಿಸಿ ಎರಡನೆಯ ವರ್ಷ ಆ ಒಂದು ಜವಾಬ್ದಾರಿಯನ್ನು ರೈತರಿಗೆ ಕೊಟ್ಟರೆ ಅವರು ಆಮೇಲೆ ತಮ್ಮ ಜಮೀನುಗಳಲ್ಲಿ ಬೀಜಗಳನ್ನು ಬಿತ್ತಿದರೆ ಆಗ ಹೆಚ್ಚಿನ ರೀತಿಯಲ್ಲಿ ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಈಗಾಗಲೇ ಹಾವೇರಿ ಮುಂತಾದ ಭಾಗಗಳಲ್ಲಿ ಇಂತಹ ಪ್ರಯೋಗಗಳನ್ನು ಸರ್ಕಾರದವರೇ ತೆಗೆದುಕೊಂಡಿದ್ದಾರೆ. ಆ ರೀತಿ ಎಲ್ಲಾ ತಾಲ್ಲೂಕುಗಳಲ್ಲಿಯೂ ವ್ಯವಸ್ಥೆ ಮಾಡಬೇಕು. ಪೀಕ್‌ಗಳನ್ನು ನಾಶಮಾಡತಕ್ಕ ಕ್ರಿಮಿಕೀಟಾದಿಗಳನ್ನು ಕ್ರಿಮಿನಾಶಕವಸ್ತುಗಳಿಂದ ನಾಶಮಾಡುವ ರೀತಿಯಲ್ಲಿ ಎರಾಡಿಕೇಷನ್ ಸ್ಕೀಮುಗಳನ್ನು ಹಾಕಬೇಕು. ಆಗ ಪೀಕುಗಳು ನಷ್ಟವಾಗದೆ ಸರಿಯಾದ ರೀತಿಯಲ್ಲಿ ರೈತರ ಮನೆಗೆ ಬರುತ್ತದೆಂದು ನಾನು ಹೇಳುತ್ತೇನೆ. ಆದ್ದರಿಂದ ಈಗ ಸರ್ಕಾರದವರು ಹೆಚ್ಚಿಗೆ ಆಹಾರೋತ್ಪಾದನೆಯ ಬಗ್ಗೆ ಏನೇನು ಯೋಜನೆಗಳನ್ನು ಹಾಕಿಕೊಂಡಿದ್ದಾರೋ ಅವನ್ನು ಸರಿಯಾದ ರೀತಿಯಲ್ಲಿ ಕಾರ್ಯಗತ ಮಾಡಿ ಅದಕ್ಕೆ ಸಂಬಂಧಪಟ್ಟ ಹಣ ಸರಿಯಾದ ರೀತಿಯಲ್ಲಿ ರೈತರಿಗೆ ಮುಟ್ಟುವಂತೆ ಏರ್ಪಾಡು ಮಾಡಬೇಕೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

SRI V. S. PATIL (Belgaum).—Sir, the Resolution moved by Hon'ble Sri Siddiah is really very important and it is quite essential in the present circumstances of our country. Practically all persons who read newspapers know that the food shortage is one of the greatest meances to our country for the peresent. We were relying upon supplies from other countries. Some of our peoples were under the impression that this sort of supply from foreign countries will go on for ever. That is one of the biggest mistakes committed by some of our big leaders. But, now everyone has realised that unless we stand on our own legs, it is difficult to maintain the population of this vast country. This realisation is really beneficial to us. That is why, from top to bottom, every person is now very keen to see that we become independent at least as far as the supply of foods are concerned.

4-30 P.M.

Sir, we must realise what are the mistakes that have been committed by us during the last so many years. Then alone, it would be possible to overcome the difficulties. If we shut our eyes to our past working, then, I do not think, we will be able to find out ways and means to over come the present food crisis.

Sir, we all know that since independence, both the Centre and the State Governments have spent huge amounts in the name of Grow More Food. Even this States is spending about 2 crores of rupees every year on this item. But, has there been any remarkable increase in the food grains ? That is the point. The statistics prepared by our officers are always misleading. That is one of the reasons why we have failed in our sincere attempts. The huge amounts made available by Government for Grow More Food 80 to 90 per cent of it have never reached the actual cultivator, They have dried up from the Secretariat level to the Taluka level. That is one of the greatest reasons why our Grow More Food Campaigns have failed.

Sir, our Government have spent huge amounts on the major and medium irrigation projects. We have raised loans and we are paying interest on those huge loans. But, so far as the utilisation of the waters are concerned, we are still too backward. Every major or medium irrigation project clearly shows, as could be seen from the returns, that the water is not properly used and the water that is used is not used by persons who are entitled to it. Thirdly, the cultivators in those areas do no tknow how to use the water and what crops are to be raised. These are the difficulties so far as the major and medium irrigation projects are concerned. One of my friends told me and his lands are in the area of a major irrigation project, that the canals bring water up to a particular point and at that point a reservoir is constructed and outlets are made in the several directions. These outlets are of the same size even though the water to be supplied to the extent of 50 acres or 5 acres. The person who gets a licence or permit for getting water for 5 or 10 acres, sells water to his neighbours and gets the benefit and Government is deprived of it. Several complaints have been made from the small

(SRI V. S. PATIL)

to the big officer—from the Sub-Overseer to the Chief Engineer, but nobody took heed at all. This mal-administration in the distribution of water has discouraged the honest workers on the field and upon those who are keen in using these waters. Similarly, this officialdom in P. W. D. are terribly negligent about their duties regarding the distribution of water and there is no co-ordination between these irrigation officers and the Agriculture Department about the pattern of crops that are to be raised on those areas.

The next point about the minor irrigation projects. These projects are very useful and can give immediate returns. Though their capacity is small, they are very important because from the next year of their construction, water would be made available. Sir, to-day, a question was asked by my friend Sri N. O. Samji about minor irrigation in Belgaum taluka and the answer is very discouraging. Even though people are earnestly requesting for using water, still the Government are not coming to their help. Unless some big congressman enters the field and persuades these officers nothing is being done. Unless a congress minded person or the congress worker who is interested in the village concerned gets or his hirelinges get the contract for these minor projects, these minor projects are not taken up at all. That is one of the reasons why this Grow More Food Campaigns are failing. This is so far as supply of water is concerned.

The next item concerned with this Grow More Food Campaign is supply of manure and fertilisers. The first item in this category is the manure that is prepared in the villages. Yesterday only we have passed the Cattle Trespass law in which we have put a provision by which the number of cattle that could be possessed by a cultivator is restricted. If the number of cattle is reduced, how can the cultivator prepare manure for his lands? Nobody seem to consider this aspect. The Police Department considered only law and order; the Irrigation Department considers only the construction of supply of water and the Agriculture Department becomes so helpless and hopless. So, there is absolutely no co-ordination between these various departments of the Government and that is one of the reasons why our Grow More Food policies are failing.

Then, Sir, about the compost manure, there is a new method enudciated in our country. According to Government statistics, you find that lakhs of these manure pits were prepared and compost was prepared and distributed. But, in fact, there is not even a single pit at all. All these pits are only on paper because Government give them some subsidy and some amount for filling those pits. If any independent person, a person with some commonsence and honesty goes and sees into these villages, he will find that there is not a single pit at all. But every year huge amounts have been paid to these so called congress people just to show on the paper that those manure pits were filled up and they are distributed.

To meet that shortage of cowdung manure and compost, fertilisers were recommended from the beginning there is a huge cry for the shortage of fertilisers. These are restricted articles. The Government have fixed its price and they have decided channels through which they are to be distributed. But can any agriculturist or real cultivator get any of these fertilisers in time and within in the price fixed by the Government? Not even one per cent of the cultivator get them at the proper time. That is the reason why our policy of Growing More Food or agriculture produce has become an utter failure. So far as distribution of the fertilisers is concerned, we have consistently brought this fact of blackmarketing to the notice of local officials. But the officials say that they are helpless in the matter and that is because they themselves have got to deal in blackmarkets and that is why they ignore these facts. That is one of the reasons why our policy has failed.

Then, there is another thing and that is preparing the organic manure. In the big cities like Bangalore and Belgaum the human refuse is practically wasted. It is one of the best fertilisers that the soil requires. When we take something out of the soil, we have to give it in some other way. That is the natural course. Our big planners and officers have neglected this and all this human refuse is wasted. That is one of the reasons why our soil has become poor and the growth of crop is reduced day by day.

The next item which require to be considered is the price structure of the foodgrains. During these last few years there is tussle in the fixation of prices. There are the fair price, minimum price, maximum price, incentive price and lastly our Government have decided to change the name to purchase price. The purchase price does not mean minimum nor maximum and has nothing to do with incentive price.

SRI B. D. JATTI.—If the hon'ble member yields. In our State, there are only two prices, one is the support price and another is the purchase price. Their is no other price at all.

SRI V. S. PATIL.—The Central Government have appointed one commission—Agriculture Price Fixation Commission. That commission has recommended the support price. Support price means if the price of agriculture produce goes down below that price, the Government is bound to purchase the whole lot from the cultivator. The intention is that the cultivators should not be deprived of their rightful gains. My submission is, the first and basic principle must be the incentive price. The cultivators must be pursuaded they must be given a picture that if they grow a particular kind of foodgrain, they will be able to make good profit out of their yield. Unless we give that incentive it is very difficult to pursuade the people to resort to a particular variety of agriculture produce. Supposing a person can get Rs. 2,000 per acre by growing sugarcane and only Rs. 500 by growing paddy, it is natural that he will try to get more profit by raising cash crops. That is why the incentive price must be there. The price must be such that the cultivator will get some incentive. In these days when prices of every item which are required by a cultivator have gone double or

(SRI V. S. PATIL)

treble or even five times, his produce will have to be priced in such a way that he will get some more profit out of his produce. So, the incentive price is very essential. Secondly, while we fix the price we have placed restriction upon movement of these foodgrains from one State to another. If the price in the neighbouring State is higher than the price we fix here, it is natural that the foodgrains from this State will flow into another State. Whatever may be the boundaries, whatever may be checkposts and whoever may be appointed to obstruct this flow it is bound to end in a failure. For the last two years this State ban is there. In my place in Belgaum there is one road which is called Vengurla Road which passes to Maharashtra. Every day not less than 8 to 10 truck loads of rice used to pass by that road in spite of ban on the movement of both rice and jowar. We could see it. There is another road bordering Goa-Khanapur. We could see trucks plying carrying these foodgrains in spite of the orders of Government banning the movement. How is it that this could be done ? There are two ways. One is, these foodgrains dealers are very intimate with the congressmen and no police officer can stop them. The other reason is the police take at least Rs. 200 per truck and then allow them to go. So, we must find out some effective means to check this. Unless we do it, it is difficult to make our State self-sufficient. I can say definitely so far as our part is concerned, that we do not require any outside foodgrains provided the foodgrains which grow are kept there. It is a self-sufficient territory but due to these big people — we have to call them big because they wear khadi and khadi caps—it is not self-sufficient. My friend Sri B. D. Jatti knows those people but he cannot do anything against them.

SRI B. D. JATTI.—With due respect to my friend, it is not correct. Let them be anybody ; we are prepared to take action against them. If he wants to test, let him give the information confidentially, and I am prepared to take action, no matter howsoever big those people may be.

SRI V. S. PATIL.—Today, on the floor of this House, I invite the Hon'ble Minister in charge of this particular portfolio which is thrust upon him to come with me and I shall point out those trucks to him and show where they go.

SRI B. D. JATTI.—I agree to that.

SRI V. S. PATIL.—I told our Deputy Commissioner about that. He said he as placed so many Police Officers and asked me how was that in spite of that the trucks were going. I made a request to him to select some people from the road-side villages to have a check on the road so far as foodgrains are concerned, but he is not agreeable to it because everybody knows the reason. If the villagers are there to check, I do not think such a thing would continue indefinitely.

We are all shouting from the house tops that the foodgrains are being sold at blackmarket prices. Now, the Government have found out a way. As a result of that, there will be no blackmarket prices because Government has fixed only the purchase price or in the alternative the

support price. They can sell the remaining foodgrains at any price; it does not become blackmarket. So, the stigma which was attached to those big people is being removed by Government in this ingenious way of fixing neither the minimum nor the maximum price but by fixing the purchase price. This is a very good idea! it must have come from a fertile brain!!

So far as the price structure is concerned, we must see that the producer gets an incentive price and the consumer gets it at a reasonable price. This must be the basic principle of fixation of price.

The levy system which has been published recently is clearly very dangerous. Under this system, levy is based on acreage. On an average they get about 10 quintals of paddy which comes to 12 or 13 bags on our side. In the case of persons owning 2 or 3 acres of paddy, the whole of that paddy is required by them for their family and for the next year's cultivation. In respect of paddy lands we have to pay wages in kind to the labourers; they do not work on cash wages. They have to be given one-time meal and in addition they have to be paid in kind. So, if a small cultivator as defined in the Land Reforms Act is asked to give anything, it will definitely prove harmful to his future cultivation. Further, when there was the levy system in the past *i.e.*, in 1948 or 1949, the Government used to take into consideration the number of people depending upon the cultivator, their requirements of foodgrains for their consumption and also the requirements of foodgrains for the next season and only the remainder was purchased by the Government. That was really a good system. Now, because the Government officers do not want to have more work and want to have an easy way, they have invented this system to purchase foodgrains on acreage basis. Paddy land does not mean land where paddy is grown; paddy land is a different thing. Now, even on waste lands where there is is sown or irrigation, they are sowing paddy and depending upon rainfall they get 5 or 6 bags per acre. That is not really paddy land; the real paddy land is the land classified as such by the Survey Department. The Government officers say that paddy land means land where paddy is sown or grown; they do not consider whether the yield is 25 bags or 5 bags. This is not good and will be harmful for the future growth of paddy in our tract. So, this levy system will have to be changed in order to give incentive to our cultivators. The levy must be on surplus foodgrains and not on acreage.

Recently, our Prime Minister, Sri Lal Bahadur Sastry, has declared that fertile lands will not be acquired for non-agricultural purposes. Recently, in the Belgaum area, one private company is about to start a factory. They want to invest about a hundred crores of rupees in the Aluminium Industry and for that reason they want to acquire about 1,000 acres of paddy-growing land near Belgaum. In those 1,000 acres, there is a big irrigation tank capable of irrigating 1,100 acres of other paddy land.

(SRI V. S. PATIL)

5-00 P.M.

If this land which is now demanded by the Company is given to them, 2,000 acres of best paddy growing land will be rendered useless so far as foodgrains are concerned. In this land the average yield is from 15 to 20 bags per acre. Besides that we grow a second crop in these lands. Such fertile lands are to be handed over to a factory is really wonderful. I do not understand what is the meaning of the assurance given by the Prime Minister of India and what value is being given to his words by our local leaders. The only question is shifting this factory a mile or two away from this land and that will give sufficient land for the factory. The only extra expenditure that the factory or Government will have to incur is to extend the electric wires for about a couple of miles and the road and the water supply pipe. Are these three items more important than to lose about 25,000 to 30,000 bags of foodgrains per year ? These things must be seriously considered by the Government and they should see that nothing of this sort is taken up.

Then there is another thing. All round our cities and towns there are fertile lands. Whenever the Government want to extend the area of residential premises, they choose these fertile lands. That also must be stopped completely.

In Khanapur taluk Government are going to construct one nalla called Tathi Nala. Here about 10,000 acres of land are to be submerged. Out of these nearly 3,000 acres of best paddy growing lands in Khanapur taluk are going to be submerged. They are yielding at present not less than 1 lakh bags of paddy per year. The reason given is that some people lower down want to start a sugar factory and for that sugar factory they want water. The Government are acceding to these requests today. May I say that these are foolish proposals on wnich good lands are being wasted and unnecessary fads are being helped. Unless we change our outlook in this matter, it is very difficult to overcome the present crisis.

So my request to the Hon'ble Minister and the Government is that we must make full utilization of the available water supply and honest and really experienced people must be appointed on all these projects. Secondly, top priority must be given to minor irrigation projects and they must be constructed irrespective of party feelings and linguistic affiliations. Then we must have a very strict watch on the actual growth of foodgrains. At present in my field if I am unable to work, the field goes to dogs. So we must have service societies in every village to see that nobody's fields suffer for want of labour or want of fertiliser. If we create such a sort of feeling amongst the people, I feel that we will be self-sufficient within a year and there will be no necessity to beg of other countries for any foodgrains.

Thank you.

ಶ್ರೀ ಸುಬ್ಬಯ್ಯ ನಾಯಕ್ (ಸೂಳ್ಯ).—ಮಾನ್ಯ ಉಪಾಧ್ಯಕ್ಷರೇ, ಇವತ್ತು ಶ್ರೀ ಮಾನ್ ಡಿ. ಎಂ. ಸಿದ್ದಯ್ಯನವರು ತಂದಿರತಕ್ಕ ಪ್ರಸ್ತಾಪವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತ ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ನಮಗೆ ಸ್ವರಾಜ್ಯ ಬಂದು ಈಗಾಗಲೇ ಅನೇಕ ವರ್ಷಗಳಾಗಿವೆ. ಆದಿನಿಂದಲೂ ಈ ಆಹಾರ ಸ್ವಪರಿಪೂರ್ಣತೆಯ ವಿಚಾರದಲ್ಲಿ ಅನೇಕ ಭರವಸೆಗಳೂ, ಸಲಹೆಗಳೂ, ಸೂಚನೆಗಳೂ ಮತ್ತು ಆಶ್ವಾಸನೆಗಳೂ ಮುಖಂಡರುಗಳಿಂದ ಬಂದಿದ್ದಾಗ್ಯೂ ನಮಗೆ ಇಲ್ಲಿಯ ತನಕ ಸ್ವಪರಿಪೂರ್ಣತೆಯನ್ನು ಪಡೆಯಲಿಕ್ಕಾಗಲಿಲ್ಲ. ನಾವು ಈ ವಿಚಾರದಲ್ಲಿ ನಿರೀಕ್ಷಿಸಿದ್ದ ಮಟ್ಟವನ್ನು ಅನಿರೀಕ್ಷಿತ ಕಾರಣಗಳಿಂದ ಕೈಬಿಡಬೇಕಾಗಿ ಬಂದುದರಿಂದ ಇದು ವಿಫಲವಾಯಿತು. ಇದಕ್ಕೆ ಕಾರಣ ಸ್ವಲ್ಪಮಟ್ಟಿಗೆ ಪ್ರಕೃತಿ ಪ್ರಕೋಪವೂ ಸೇರಿದೆ. ಅಂತೂ ನಾನಾ ಕಾರಣಗಳಿಂದ ನಮಗೆ ನಿರೀಕ್ಷಿಸಿದ್ದ ಫಲ ಸಿಕ್ಕಲಿಲ್ಲ. ಇದೂ ಅಲ್ಲದೆ ನಮ್ಮ ರಾಜ್ಯದ ಮಟ್ಟದಲ್ಲಿ ತರೀ ವ್ಯವಸಾಯದ ಅಭಿವೃದ್ಧಿಯನ್ನು ನೋಡುವುದಾದರೆ ನಮ್ಮ ನೆರೆ ರಾಜ್ಯಗಳಾದ ಆಂಧ್ರನಾಡಿನಲ್ಲಿ ಇಂದು ಶೇಕಡ 40 ರಷ್ಟು ತರೀ ವ್ಯವಸಾಯವಾಗುತ್ತಿದ್ದು, ಮದ್ರಾಸ್ ರಾಜ್ಯದಲ್ಲಿ ಸುಮಾರು 36 ಪರ್ಸೆಂಟೂ ಇದ್ದರೆ ನಮ್ಮ ಮೈಸೂರು ರಾಜ್ಯದಲ್ಲಿ ಇದು ಕೇವಲ 7 ಪರ್ಸೆಂಟ್ ಮಾತ್ರ ಇದೆ. ನಮ್ಮ ಜಿಲ್ಲೆಯ ಮಟ್ಟಿಗೆ ನಾನು ಹೇಳುವುದಾದರೆ ಅಲ್ಲಿ ತರೀ ಯೋಜನೆ ಒಂದು ಪರ್ಸೆಂಟ್ ಕೂಡ ಆಗಿಲ್ಲ. ಮೈಸೂರು ರಾಜ್ಯದಲ್ಲಿ ಅತಿ ಹೆಚ್ಚು ಭತ್ತ ಬೆಳೆಯತಕ್ಕ ಜಿಲ್ಲೆಗಳಲ್ಲಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯೂ ಸಹ ಒಂದಾಗಿದೆ. ಅಲ್ಲಿ ಭತ್ತ ಬೆಳೆಯತಕ್ಕ ಜಮೀನು 5 ಲಕ್ಷ 70 ಸಾವಿರ ಎಕರೆ ಇದೆ. ಶಿವಮೊಗ್ಗಾದಲ್ಲಿ ಭತ್ತ ಬೆಳೆಯತಕ್ಕ ಜಮೀನು 3 ಲಕ್ಷ 28 ಸಾವಿರದ 600 ಎಕರೆಯಿದೆ. ನಮ್ಮಲ್ಲಿ ಅಂದರೆ ಜಿಲ್ಲೆ ಅಥವಾ ರಾಜ್ಯದಲ್ಲಿ ಆಹಾರ ಧಾನ್ಯಕ್ಕಾಗಿ ಬಳೆಸತಕ್ಕ ಧಾನ್ಯಗಳಲ್ಲಿ ಬಹು ಮುಖ್ಯವಾದದ್ದು ಈ ಭತ್ತ. ಜನರು ನಮ್ಮಲ್ಲಿ ಹೆಚ್ಚಿಗೆ ಬೆಳೆಯುತ್ತಿರುವುದೂ ಸಹಾ ಭತ್ತವೆ. ಇದೇ ರೀತಿ ಉತ್ತರ ಕನ್ನಡ ಜಿಲ್ಲೆಯಲ್ಲೂ ಭತ್ತ ಬೆಳೆಯತಕ್ಕ ಜಮೀನು 2 ಲಕ್ಷ 12 ಸಾವಿರದ 565 ಎಕರೆ ಇದೆ. ಮೈಸೂರಿನಲ್ಲಿ ಭತ್ತ ಬೆಳೆಯತಕ್ಕ ಜಮೀನು 1 ಲಕ್ಷ 41 ಸಾವಿರದ 875 ಎಕರೆ ಇದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಭತ್ತ ಬೆಳೆಯತಕ್ಕ ಜಮೀನು 1 ಲಕ್ಷ 18 ಸಾವಿರದ 859 ಎಕರೆ ಇವೆ. ಇದೇ ರೀತಿ ಉತ್ತರೋತ್ತರ ಈ ಬೆಳೆಯು ಇನ್ನುಳಿದ ಜಿಲ್ಲೆಗಳಲ್ಲಿ ಕಡಮೆಯಾಗುತ್ತಿದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭತ್ತ ಬೆಳೆಯತಕ್ಕ ಜಮೀನು ಜಾಸ್ತಿ ಇದೆ. ಅಲ್ಲಿಗೆ ಸಣ್ಣ ನೀರಾವರಿ ಅನುಕೂಲಗಳನ್ನೊದಗಿಸಿದರೆ ವರ್ಷಕ್ಕೆ 2 ಯಾ 3 ಬೆಳೆಗಳನ್ನು ತೆಗೆಯಬಹುದು; ಅಲ್ಲಿ ಅಂಥ ಕಡಲುಗಾಳಿಯ ಅನುಕೂಲವಿದೆ. 90 ದಿನಕ್ಕೆ ಯಾ 120 ದಿನಕ್ಕೆ ಒಂದು ಬೆಳೆ ಬರುತ್ತದೆ. ಹೀಗೆ ಮೂರು ಬೆಳೆ ತೆಗೆಯುವ ಸಾಧ್ಯತೆ ಅಲ್ಲಿರುತ್ತೆ. ಇಂಥ ಕಷ್ಟ ಕಾಲದಲ್ಲಿ ಅತಿ ಶೀಘ್ರದಲ್ಲೇ ಹೆಚ್ಚು ಬೆಳೆಯುವುದಕ್ಕೆ ನಮ್ಮ ಜಿಲ್ಲೆ ಬಹಳ ಅನುಕೂಲವಾಗಿದೆ. ಈ ದಿವಸ ನಮ್ಮ ರಾಜ್ಯಕ್ಕೆ ಆಹಾರಧಾನ್ಯದಲ್ಲಿ ಇರತಕ್ಕ ಕೊರತೆಯೆಲ್ಲಾ 8-10 ಪರ್ಸೆಂಟ್. ಇದನ್ನು ನಿವಾರಿಸಲು ಸಾಧ್ಯವಿದೆ. ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಮಾಡಿದರೆ ಅವುಗಳಿಂದ ಫಲ ಸಿಕ್ಕಬೇಕಾದರೆ ಹೆಚ್ಚು ಹಣಬೇಕು, ಹೆಚ್ಚಿನ ಕಾಲಾವಕಾಶವು ಬೇಕು ಹೆಚ್ಚಿನ ಶ್ರಮಪಡಬೇಕು. ಹೇಗಿದ್ದರೂ ಇದು ನಮ್ಮಲ್ಲಿಗೆ ಅನುಕೂಲವಲ್ಲ. ಅದಕ್ಕೆ ಬದಲಾಗಿ ಸಣ್ಣ ನೀರಾವರಿಗೆ ಮನಸ್ಸು ಮಾಡಿದರೆ ಅಲ್ಲಿ ವರ್ಷಕ್ಕೆ 2 ಬೆಳೆಯನ್ನು ತೆಗೆಯುವ ಸಾಧ್ಯತೆಯಿದೆ. ಆಗ ಆಹಾರದ ಸ್ಥಿತಿಯನ್ನು ಬೇಗ ಪರಿಹರಿಸಲು ಸಾಧ್ಯವಾಗುತ್ತದೆ. ನಮ್ಮಲ್ಲಿ ಭತ್ತ ಬೆಳೆಯತಕ್ಕ ಜಮೀನೇ 5 ಲಕ್ಷ ಎಕರೆಗಳಿಗಿಂತಲೂ ಜಾಸ್ತಿ ಇದೆಯೆಂತ ಹೇಳಿದೆ ತಾನೆ. 3,19,709 ಎಕರೆಯಲ್ಲಿ ಒಂದನೆ ಬೆಳೆ, 1,20,728 ಎಕರೆಯಲ್ಲಿ ಎರಡನೆಯ ಬೆಳೆ, 17,413 ಎಕರೆಯಲ್ಲಿ ಮೂರನೆಯ ಬೆಳೆ ಬೆಳೆಯುತ್ತಾರೆ. ಮೂರನೆಯ ಬೆಳೆ ಬಹಳ ಕಡಿಮೆಯಾಗುತ್ತದೆ, ಒಂದನೆಯ ಭಾಗ ಬಹಳ ಹೆಚ್ಚು. ನೀರಾವರಿ ಒದಗಿಸಿದರೆ 2ನೇ ಮತ್ತು 3ನೇ ಬೆಳೆಯನ್ನು ಇನ್ನೂ ಹೆಚ್ಚು ಬೆಳೆಯಲಿಕ್ಕೆ ಸಾಧ್ಯವಾಗುತ್ತದೆ. ನೀರಾವರಿ ಎಂದರೆ ನಮ್ಮಲ್ಲಿ ದೊಡ್ಡ ನೀರಾವರಿ ಅಗತ್ಯ ಇಲ್ಲ, ಅದು ಮಾಡುವುದಕ್ಕೆ ಸಾಧ್ಯವೂ ಇಲ್ಲ. ನಮ್ಮಲ್ಲಿ 21 ದೊಡ್ಡ ದೊಡ್ಡ ನದಿಗಳು ಇವೆ, ನೂರಾರು ಹಳ್ಳಕೊಳ್ಳಗಳು ಇವೆ. ವರ್ಷದಲ್ಲಿ ಹನ್ನೆರಡು ತಿಂಗಳೂ ಕೂಡ ನೀರು ಹರಿಯುವಂತಹ ದೊಡ್ಡ ನದಿಗಳು ಇವೆ. ಹಿಗಿದ್ದೂ ಅವುಗಳ ನೀರನ್ನು ಉಪಯೋಗಿಸುವುದಕ್ಕೆ ಸಾಧ್ಯ ಮಾಡಿಲ್ಲ. ಇದಕ್ಕೆ ಒಂದೇ ಒಂದು ಉಪಾಯ ಎಂದರೆ ಸಣ್ಣ ನೀರಾವರಿ. ನದಿಗಳಿಗೆ ಡ್ಯಾಂ ಕಟ್ಟುವುದರಿಂದ ನಮ್ಮಲ್ಲಿ ಪ್ರಯೋಜನವಿಲ್ಲ. ಏಕೆಂದರೆ 150-200 ಇಂಚು ಮಳೆಯಾಗುತ್ತದೆ, ಅಂತ ಕಡೆ ಡ್ಯಾಂ ನಿಲ್ಲುವುದಿಲ್ಲ. ಕೆಲವು ಕಡೆ ಅವುಗಳನ್ನು ಹಾಕಿ ಅವು ಕಿತ್ತುಹೋಗಿವೆ. ಆದ್ದರಿಂದ ಲಿಫ್ಟ್ ಇರಿಗೇಷನ್ ಮಾಡಿದರೆ ಆದರಿಂದ ಬಹಳ ತೀವ್ರವಾಗಿ ಬೆಳೆಯನ್ನು ಪಡೆಯಬಹುದು. ಹೀಗೆ ಮಾಡಿದರೆ ಈಗಿರುವ 5 ಲಕ್ಷ ಎಕರೆಯನ್ನು ಸುಮಾರು 8-8½ ಲಕ್ಷ ಎಕರೆಯಷ್ಟು ಬತ್ತ ಬೆಳೆಯತಕ್ಕ ಪ್ರದೇಶವನ್ನಾಗಿ ಮಾಡಬಹುದು. ಹಲವಾರು ಕಡೆಗಳಿಗೆ ವಿದ್ಯುತ್ ಲೈನ್ ಹೋಗುತ್ತದೆ, ಪಂಪ್‌ಸೆಟ್ಟ್‌ಗಳಿಗೆ ನಮ್ಮಲ್ಲಿ ಕೆಲವಕ್ಕೆ ಎಸ್ಟಿಮೇಟ್ ಆಗಿ ಹಾಗೆಯೇ ನಿಂತು ಹೋಗಿದೆ. ಅದಕ್ಕೆ ಕಾರಣ ಉಪಕರಣ ಇಲ್ಲ ಎಂದು ಹೇಳುತ್ತಾರೆ. 12 ಸಾವಿರ ಕಂಬಗಳು ಬೇಕು ಎಂದು ಹೇಳುವಾಗ 150 ಕಂಬಗಳು ಇವೆ ಎಂದು ಎಂ. ಎಸ್. ಇ. ಬಿ.

(ಶ್ರೀ ಸುಬ್ಬಯ್ಯನಾಯಕ್)

ಯ ಸಿಬ್ಬಂದಿಯವರು ಡಿ. ಡಿ. ಸಿ. ಮೀಟಿಂಗಿನಲ್ಲಿ ಹೇಳಿದರು. ಈಗ ಮಳೆಯ ಅಭಾವ ಇದೆ. ಎರಡನೆಯ ಬೆಳೆ ಬೆಳೆಯಬೇಕಾದರೆ ಮಳೆ ಬೀಳಲೇ ಬೇಕಾಗುತ್ತದೆ. ಅದು ಬಂದಿಲ್ಲ. ಆದರೆ ಮಳೆ ಬರದಿದ್ದರೂ ಕೂಡ ಸರ್ಕಾರದವರು ಮನಸ್ಸು ಮಾಡಿದರೆ ಲಿಫ್ಟ್ ಇರಿಗೇಶನ್ನಿನ ಮೂಲಕ ನಮ್ಮ ಕಡೆ ಹೆಚ್ಚು ಬೆಳೆ ಬೆಳೆಯಬಹುದು. ಯುದ್ಧರಂಗದಲ್ಲಿ ಯೋಧರು ಯಾವ ರೀತಿ ಹೋರಾಡುತ್ತಾ ಇದ್ದಾರೋ ಅದೇ ರೀತಿ ಭೂಮಿಯಲ್ಲಿ ಹೆಚ್ಚು ಆಹಾರ ಉತ್ಪನ್ನ ಮಾಡಬೇಕೆಂದು ಸರ್ಕಾರದವರು ಮನಸ್ಸು ಮಾಡಿದರೆ, ಜನತೆ ಗಮನಕೊಟ್ಟರೆ ಖಂಡಿತವಾಗಿಯೂ ಇನ್ನು ಆರು ತಿಂಗಳಿನಲ್ಲಿ ಹೆಚ್ಚು ಆಹಾರವನ್ನು ಬೆಳೆಯುವಂತೆ ಮಾಡಬಹುದು. ಪಂಪ್‌ಸೆಟ್‌ಗಳನ್ನು ಹಾಕಲಿಕ್ಕೆ ಒಂದು ಅಶ್ವಶಕ್ತಿಗೆ ಸುಮಾರು ಎರಡು ಸಾವಿರದಿಂದ 4 ಸಾವಿರ ರೂಪಾಯಿಗಳವರೆಗೂ ಖರ್ಚಾಗುತ್ತದೆ. ಸಾಮಾನ್ಯವಾದ ಲೆಕ್ಕ ಹೇಳುವುದಾದರೆ ಅದರಿಂದ ಒಂದೂವರೆ ಎಕರೆ ಒಂದು ಪಂಪ್‌ಸೆಟ್ಟಿನಿಂದ ಕೃಷಿ ಮಾಡಲಿಕ್ಕೆ ಅನುಕೂಲವಾಗುತ್ತದೆ. ಅದರಲ್ಲಿ ಮೂರು ಬೆಳೆ ಮಾಡುವುದಾದರೆ ನಾಲ್ಕೂವರೆ ಎಕರೆಯಲ್ಲಿ ಬೆಳೆಯುವಷ್ಟು ಬೆಳೆ ಬೆಳೆಯಲಿಕ್ಕೆ ಆಗುತ್ತದೆ. ನಮ್ಮ ಜಿಲ್ಲೆಗೆ 41,600 ಪಂಪ್‌ಸೆಟ್‌ಗಳು ಬೇಕಾಗುತ್ತವೆ ಎಂದು ಒಂದು ಲೆಕ್ಕ ಇದೆ. ಈಗ 5 ಸಾವಿರ ಪಂಪ್ ಸೆಟ್ಟುಗಳು ಮಾತ್ರ ಇವೆ, ಮಿಕ್ಕವುಗಳನ್ನೂ ಸಹ ಕೊಟ್ಟರೆ ತೀವ್ರವಾಗಿ ಭತ್ತ ಹೆಚ್ಚು ಬೆಳೆಯಲಿಕ್ಕೆ ಸಾಧ್ಯವಾಗುತ್ತದೆ. ಈಗ ಅನಾನುಕೂಲ ಏನಾಗಿದೆ ಎಂದರೆ ಎಂ. ಎಸ್. ಇ. ಬಿ. ಅವರು ಒಂದು ಅಶ್ವ ಶಕ್ತಿಗೆ 1,200 ರೂಪಾಯಿಗಳವರೆಗೂ ಖರ್ಚು ಮಾಡಬಹುದು ಎಂದು ಇದ್ದುದನ್ನು 600 ರೂಪಾಯಿ ಮಾತ್ರ ಖರ್ಚುಮಾಡಬಹುದು ಎಂದು ತಿದ್ದುಪಡಿಮಾಡಿರುವುದರಿಂದ ಬಹಳ ಅನಾನುಕೂಲವಾಗಿದೆ. ಮಲೆನಾಡಿನಲ್ಲಿ ಹೀಗೆ ಮಾಡಲಿಕ್ಕೆ ಸಾಧ್ಯವಿಲ್ಲ.

[Mr. Speaker in the Chair]

ಒಂದು ಅಶ್ವ ಶಕ್ತಿಗೆ 600 ರೂಪಾಯಿಗಳಂತೆ ಖರ್ಚು ಮಾಡಬಹುದು ಎಂದು ಮಾಡಿರತಕ್ಕದ್ದು ಎಷ್ಟಕ್ಕೂ ಸಾಕಾಗುವುದಿಲ್ಲ. ಉಪಕರಣಗಳನ್ನು ತೆಗೆದುಕೊಂಡು ಹೋಗಬೇಕು. ಲೈನ್ ಹಾಕಬೇಕು ಇದು ಯಾವುದಕ್ಕೂ ಸಾಕಾಗುವುದಿಲ್ಲ, ಬಹುಶಃ ಕೃಷಿ ಮಾಡಬಾರದು ಎಂದು ಹೇಳಿ ಈ ರೀತಿ ಮಾಡಿರುವ ಹಾಗೆ ಕಾಣುತ್ತದೆ. ಅಧಿಕಾರಿಗಳು ಇದಕ್ಕೆ ವಿಶೇಷ ಗಮನ ಕೊಟ್ಟಿಲ್ಲ ಎಂದು ಕಾಣುತ್ತದೆ.

Mr. SPEAKER.—The Hon'ble Member should not go in wrong direction. Nobody has stated that more than Rs. 600 should not be spent. The Central Government has singled out certain items and said that Rs. 600 is sufficient.

Sri B. D. JATTI.—If it is possible for us to bring to the notice of the Government and if we can decrease it to Rs. 600 we can get all the money required for the purpose.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಸೆಂಟ್ರಲ್ ಗವರ್ನಮೆಂಟಿನವರು ಏನೇ ಹೇಳಲಿ ರಾಜ್ಯ ಸರ್ಕಾರದವರು ಆಯಾ ಪರಿಸ್ಥಿತಿಯ ಸಂದರ್ಭವನ್ನು ನೋಡಿ ಹೆಚ್ಚು ಖರ್ಚಾಗುತ್ತದೆ ಎಂದರೆ ಹೆಚ್ಚು ಖರ್ಚು ಮಾಡಲಿಕ್ಕೆ ಅನುಮತಿಯನ್ನು ಕೊಟ್ಟು ಹೆಚ್ಚು ಬೆಳೆ ಬೆಳೆಸಲು ಪ್ರಾಮುಖ್ಯತೆಯನ್ನು ಕೊಡಬೇಕಾದ್ದು ಸರ್ಕಾರದವರ ಮತ್ತು ನಮ್ಮೆಲ್ಲರ ಕರ್ತವ್ಯ. ಹೆಚ್ಚು ಬೆಳೆ ಬೆಳೆಯಬೇಕಾದರೆ ಒಳ್ಳೆಯ ಗೊಬ್ಬರವನ್ನು ಹಾಕಬೇಕು. ಸರ್ಕಾರದವರ ಆಹಾರ ಬೆಳೆಯ ಕಡೆಗೆ ಆದ್ಯತೆ ಕೊಡಬೇಕೆಂದು ಹೇಳುತ್ತಾ ಇದ್ದಾರೆಯೇ ಹೊರತು ನಿಜವಾಗಿಯೂ ಕೊಟ್ಟಿಲ್ಲ ಎಂದು ವ್ಯಸನದಿಂದ ಹೇಳಬೇಕಾಗಿದೆ. ಮಲೆನಾಡಿನಲ್ಲಿ ಪುತ್ತೂರು, ಬೆಳತಂಗಡಿ, ತಾಲ್ಲೂಕುಗಳಲ್ಲಿ ಅನೇಕ ಪ್ರದೇಶಗಳು ಯಾವ ಬೆಳೆಯೂ ಬೆಳೆಯದೆ ಹಾಗೇಯೇ ಇದೆ. ನಾನು ಅಂಚಾವರ ಎಂಬ ಒಂದು ಹಳ್ಳಿಯನ್ನು ಸಂಬಂಧಪಟ್ಟ ಕೃಷಿ ಸಚಿವರಾದಿಗಳಿಗೆ ತೋರಿಸಿದೆ. ಇದರಲ್ಲಿ ಕ್ಯಾಷ್ಯೂನಟ್ ಬೆಳೆಸುತ್ತಾರೆ, ಇದನ್ನು ಬತ್ತ ಬೆಳೆಯುವ ಪ್ರದೇಶವಾಗಿ ಮಾರ್ಪಡಿಸಬೇಕು. ಹಾಗಲ್ಲದೇ ಗೇರು ಬೀಜ ಬೆಳೆಯುತ್ತೇವೆ ಎಂದರೆ ಇದು ದೇಶಕ್ಕೆ ಆಗುವ ನಷ್ಟ ಅಥವಾ ಅನ್ಯಾಯ ಎಂದು ಹೇಳಬೇಕಾಗುತ್ತದೆ. ಈಗಲಾದರೂ ಸರ್ಕಾರದವರು ಮನಸ್ಸು ಮಾಡಿದರೆ ಆ ಜಾಗದಲ್ಲಿ ಬರುವ ವರ್ಷದ ಹೊತ್ತಿಗೆ ನೂರಾರು ಎಕರೆಯಲ್ಲಿ ಬತ್ತ ಬೆಳೆದು ಜನಗಳಿಗೆ ಸಹಾಯ ಮಾಡಬಹುದು.

ಇನ್ನೊಂದು ವಿಷಯವೇನೆಂದರೆ ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಕ್ಕುವುದಿಲ್ಲ ಎಂದು ಹೇಳಿ ರೈತರ ಪರವಾಗಿ ಹೇಳಬೇಕಾಗಿದೆ. ಸಾಮಾನ್ಯವಾಗಿ ಜನರ ಮನಸ್ಸು ಏನಿದೆ ಎಂದರೆ ಹೊರಗಡೆ ಮಾರ್ಕೆಟ್‌ನಲ್ಲಿ ಒಂದು ಮುಡಿ ಬತ್ತಕ್ಕೆ 20—25 ರೂಪಾಯಿ ಸಿಕ್ಕಿದರೆ ಸರ್ಕಾರದವರು 13—14 ರೂಪಾಯಿಗೆ ಲೆವಿ ಮಾಡುತ್ತಾರೆ, ಕಮ್ಮಿಗೆ ಏಕೆ ಕೊಡಬೇಕು ಎಂಬುದು ಬಂದೇ ಬರುತ್ತದೆ. ಸರ್ಕಾರದವರಿಗೆ ಕೊಡುವುದು ಎಂದರೆ ಕಾಯಬೇಕು, ಅದಕ್ಕೆ ರಶೀದಿ ಪಡೆಯಬೇಕು, ಹಿಂದು ಮುಂದು ನೋಡಬೇಕು, ಲಾರಿ ಸಿಕ್ಕುವುದಿಲ್ಲ, ಸೊಸೈಟಿಯ ಬಾಗಿಲು ತೆಗೆದಿರುವುದಿಲ್ಲ, ದಿನಗಟ್ಟಲೆ ಅಲ್ಲಿ ಕಾದಿರಬೇಕು. ಇಷ್ಟೆಲ್ಲಾ ಕಷ್ಟ ಏಕೆ, ಮನೆ ಬಾಗಿಲು ಮುಂದೆ ಚೀಲ ತಂದು 25 ರೂಪಾಯಿಯಂತೆ ಕೊಂಡು ಕೊಳ್ಳುವವರಿಗೆ ಕೊಡುವುದು ಅನುಕೂಲವೆಂದು ತಿಳಿಯುತ್ತಾರೆ. ಹೆಚ್ಚು ಬೆಲೆ ಕೊಡಲು ಅನಾನುಕೂಲವಾದರೆ ಸರ್ಕಾರದವರು ರಿಬೇಟ್ ಅಥವಾ ಸಬ್ಸಿಡಿ ಕೊಡಲಿಕ್ಕೆ ವ್ಯವಸ್ಥೆ ಮಾಡಬೇಕು. ಆಗ ರೈತರಿಗೆ ಅನುಕೂಲವಾಗುತ್ತದೆ ಮತ್ತು ರೈತರು ಹೆಚ್ಚು ಬೆಳೆಯನ್ನು ಬೆಳೆಯುತ್ತಾರೆ. ಈಗ ಅಡಿಕೆ ಹೆಚ್ಚಾಗಿ ಬೆಳೆಯಿರಿ ಎಂದು ಯಾರೂ ಪ್ರಚಾರಮಾಡಬೇಕಾಗಿಲ್ಲ. ಏಕೆಂದರೆ ಅ ಕ್ಕೆ ಒಳ್ಳೆಯ ಬೆಲೆ ಇದೆ. ಅದೇ ರೀತಿಯಲ್ಲಿ ಬತ್ತಕ್ಕೂ ಹೆಚ್ಚು ಬೆಲೆ ಕೊಟ್ಟರೆ ರೈತರಿಗೆ ಹುಮ್ಮಸ್ಸು ಬಂದು ಹೆಚ್ಚು ಬೆಳೆಯುತ್ತಾರೆ.

ಇನ್ನು ಸಾಂದ್ರ ಬೇಸಾಯದಲ್ಲಿ ತೊಡಗಿದ್ದಾರೆ. ಅದಕ್ಕಾಗಿ ಜಿಲ್ಲೆಯಲ್ಲಿ ಒಬ್ಬರು ವ್ಯವಸಾಯದ ಇಲಾಖೆ ಡೆಪ್ಯೂಟಿ ಡೈರೆಕ್ಟರಿದ್ದಾರೆ; ಅವರು ತಮಗೆ ಸಾಕಾದಷ್ಟು ಸಿಬ್ಬಂದಿ ಕೊಟ್ಟಿಲ್ಲವೆಂದು ಹೇಳುತ್ತಾರೆ. ಪಾಲದ್ದಕ್ಕೆ ವ್ಯವಸಾಯ ಇಲಾಖೆಯವರ ಸೀನಿಯಾರಿಟಿ ಪಟ್ಟಿ ಇನ್ನೂ ತಯಾರಾಗಿಲ್ಲದೆ ನೌಕರರಲ್ಲಿ ಅತೃಪ್ತಿ ಇದೆ, ಈಗ ತಯಾರಾಗಿದೆ ಎಂದು ಕೇಳಿದೆ, ಸಂತೋಷ. ಅದಾಗಿ ಅವರು ತೃಪ್ತಿಯಿಂದಿದ್ದರೆ ಒಳ್ಳೆಯ ರೀತಿಯಲ್ಲಿ ಕೆಲಸವಾಗುತ್ತದೆ. ಇಲ್ಲದಿದ್ದರೆ ಉಪಯೋಗವಾಗುವುದಿಲ್ಲ. ಸಾಂದ್ರ ಬೇಸಾಯ ಈಗ ಸೇಕಡ 5 ರಷ್ಟು ಕೂಡ ಆಗಿಲ್ಲ, ಅಧಿಕಾರಿ ಒಂದು ಕಡೆ, ರೈತ ಒಂದು ಕಡೆ, ರೈತನ ಭಾಷೆ ಬೇರೆ, ಅಧಿಕಾರಿಗಳ ಭಾಷೆ ಬೇರೆ, ರೈತ ಉಪಯೋಗಿಸುವ ಉಪಕರಣ ಬೇರೆ, ಇಲಾಖೆ ಹೇಳುವುದು ಬೇರೆ. ನಮ್ಮಲ್ಲಿ 10 ಮುಡಿ ಬೆಳೆದೆವು ಎಂದು ಹೇಳಿದರೆ ಅಧಿಕಾರಿಗಳು ಕ್ವಿಂಟಾಲ್ ಲೆಕ್ಕ ಹೇಳುತ್ತಾರೆ. ಅಧಿಕಾರಿಗಳು ನಮ್ಮ ಸ್ಥಳೀಯ ಭಾಷೆ ಕಲಿತು ರೈತರಿಗೆ ಬೇಕಾದ ಅನುಕೂಲತೆ ಮಾಡಬೇಕೇ ಹೊರತು ಮೊದಲಿನ ವಿದೇಶಿ ಧೋರಣೆ ಅನುಸರಿಸಬಾರದು.

ಮತ್ತೊಂದು ವಿಚಾರ ಹೇಳುವುದಾದರೆ ನಮ್ಮಲ್ಲಿ ಈಗಾಗಲೇ ಸುಮಾರು 38 ಜಾತಿಯ ಬತ್ತಗಳಿವೆ, ಅವುಗಳಲ್ಲಿ ಸರ್ವೇಸಾಮಾನ್ಯವಾಗಿ ಬೆಳೆಯತಕ್ಕವು 3-4 ಜಾತಿಯವು. ಬೆಳೆಗೆ ರೋಗ ಬಂದರೆ ಅನುಸರಿಸಬೇಕಾದ ವಿಧಾನ, ಬೀಜ ಮತ್ತು ಗೊಬ್ಬರ, ಉಪಕರಣಗಳು ಮುಂತಾದುವುಗಳ ವಿಚಾರವನ್ನು ರೈತ ಸರಿಯಾಗಿ ತಿಳುವಳಿಕೆ ಹೊಂದುವಂತೆ ಮಾಡಿದರೆ ಬೆಳೆ ಹೆಚ್ಚಾಗುತ್ತದೆ.

Mr. SPEAKER.—It appears that for every District, Soil Testing Laboratory is required. Is that so ?

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಆ ಮಾತನ್ನೂ ಹೇಳಬೇಕಾಗಿದೆ. ಸಾಯಿಲ್ ಟೆಸ್ಟಿಂಗ್ ವಿಚಾರದಲ್ಲಿ ಏನನ್ನು ಹೇಳಲಿ ! ಹೆಬ್ಬಾಳಿಗೆ ಸಾಯಿಲ್ ಟೆಸ್ಟಿಂಗಿಗೆ ಕಳುಹಿಸಲಾಗುತ್ತಿದೆ, 2 ವರ್ಷವಾದರೂ ಕೂಡ ಅಲ್ಲಿಂದ ಫಲಿತಾಂಶ ತಿಳಿಸಿಲ್ಲ ಎಂಬ ದೂರಿದೆ. ಕೇಳಿದರೆ ಬೇಕಾದ ಉಪಕರಣಗಳಿಲ್ಲ, ಅಧಿಕಾರಿಗಳಿಲ್ಲ ಎಂದು ಹೇಳುತ್ತಾರೆ. ಕಂಕನಾಡಿಯಲ್ಲಿ ಮಣ್ಣು ಪರೀಕ್ಷೆ ಮಾಡಿದರೆ ಅನುಕೂಲವಾಗಬಹುದು. ಪಶ್ಚಿಮ ಕರಾವಳಿ ಪ್ರದೇಶ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡಗಳ ಸನ್ನಿವೇಶವೇ ಬೇರೆ. ಅಲ್ಲಿಗೆ ಪ್ರತ್ಯೇಕ ಮಣ್ಣು ಪರೀಕ್ಷೆಗೆ ವಿಶೇಷ ನಿಗಾ ಕೊಟ್ಟು ಪ್ರೋತ್ಸಾಹ ಕೊಟ್ಟರೆ ಹೆಚ್ಚು ಬೆಳೆ ತೆಗೆಯಲು ಸಾಧಕವಾಗುವುದು. ಈಗ ಯುದ್ಧ ಸಮಯದಲ್ಲಿ ಯೋಧರು ಆತ್ಮ ಸಂತೋಷದಿಂದ ಹೇಗೆ ಹೋರಾಡುತ್ತಾರೋ ಹಾಗೆಯೇ ನಮ್ಮ ರೈತರೂ ಕೂಡ ಸರಕಾರದೊಡನೆ ಸಹಕರಿಸಿ ಕೊಡುವ ಸೌಲಭ್ಯಗಳ ಸದುಪಯೋಗ ಪಡೆದು ಹೆಚ್ಚು ಬೆಳೆಯುವುದಕ್ಕೆ ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡಿಕೊಂಡು ನನ್ನ ಮಾತನ್ನು ನಿಲ್ಲಿಸುತ್ತೇನೆ.

† ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಅಧ್ಯಕ್ಷರೇ, ಈಗಿನ ಪರಿಸ್ಥಿತಿಯಲ್ಲಿ ತಮಗೆ ಗೊತ್ತಿದ್ದ ಹಾಗೆ ಮಳೆಯ ಅಭಾವದಿಂದ ಮತ್ತು ಇನ್ನೂ ಅನೇಕ ಕಾರಣಗಳಿಂದ ಆಹಾರದ ಅಭಾವ ಬಹಳ ಜಾಸ್ತಿಯಾಗಿದೆ. ವಾಸ್ತವಿಕ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಅದಕ್ಕೇನು ಮಾಡಬೇಕೆಂಬುದನ್ನು ಯೋಚನೆ ಮಾಡುವುದು ಸೂಕ್ತ. ಗಡಿ ಪ್ರದೇಶದಲ್ಲಿ ಫೈರಿಂಗ್ ಪ್ರಾರಂಭವಾದ ಮೇಲೆ ಜನರು ಗಾಬರಿಯಾಗಿ ಶೇಖರಣೆ ಮಾಡಿದ್ದ ಆಹಾರ ಧಾನ್ಯವನ್ನು ಮಾರಾಟ ಮಾಡಿದರು. ಅದರ ಪ್ರಭಾವ ದೆಹಲಿ ಮತ್ತು ಕಲ್ಕತ್ತಾಗಳಿಗೆ ಹರಡಿ ಅಲ್ಲಿ ಹತ್ತು ರೂಪಾಯಿಗೆ ಒಂದು ಮಣದ ಪ್ರಕಾರ ಮಾರಾಟವಾಯಿತು. ಇದನ್ನು ಅನೇಕರು ಕೇಳಿರಬಹುದು. ಆಹಾರ ಇದೆ, ವಿತರಣೆಯಲ್ಲಿ

(ಶ್ರೀ ಪಿ. ಎಂ. ದೇವ್)

ವ್ಯತ್ಯಾಸವಿದೆ ಎಂದು ನಮ್ಮ ಪ್ರಧಾನಿಗಳು ಹೇಳುತ್ತಿದ್ದರು ; ಅದಕ್ಕೆ ನಿದರ್ಶನವಿದೆ. ಇನ್ನೊಂದು, ಕಲ್ಕತ್ತಾಕ್ಕೆ ಮುಖ್ಯ ಮಂತ್ರಿಗಳು ಹೋಗಿದ್ದಾಗ ಪಾಕೀಸ್ತಾನಕ್ಕೆ ಸ್ಮಗಲ್ ಆಗುತ್ತಿದ್ದುದನ್ನು ಕಣ್ಣಾರೆ ನೋಡಿರಬಹುದು, ಈ ವಿಚಾರ ಪತ್ರಿಕೆಗಳಲ್ಲಿ ಬಂದಿದೆ. ಹೀಗಾಗಿ ಆಹಾರದ ಪರಿಸ್ಥಿತಿ ಕೆಟ್ಟಿದೆ. ಸೀಜ್‌ಫೈರ್ ವಯೋಲೇಷನ್ ಒಂದು ಕಡೆ, ಇನ್ನೊಂದು ಕಡೆ ಚೈನಾ ಬಲ ಸಿದ್ಧವಾಗಿ ನಿಂತಿದೆ ; ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿದೆ. ಇಲ್ಲಿ ಸುತ್ತಮುತ್ತ ಕಳ್ಳತನಗಳು ಬೇರೆ ಆಗುತ್ತಿವೆ, ಕಿಟಕಿ ಮುರಿದು 50 ಸೇರು, ಒಂದು ಕ್ವಿಂಟಾಲ್ ತೆಗೆದುಕೊಂಡು ಹೋಗುತ್ತಿದ್ದಾರೆ, ಇದು ಪ್ರೈಮರಿ ಸ್ಟೇಜು. ಮುಂದೆ ದುರ್ದಿನ ತಲೆದೋರುವ ಸೂಚನೆಗಳಿವೆ. ಇದನ್ನು ಒಪ್ಪೋಣ. ಇದುವರೆಗೆ ಅಮೇರಿಕಾದಿಂದ ಆಹಾರ ಪದಾರ್ಥಗಳನ್ನು ತರಿಸುತ್ತಿದ್ದೇವೆ. ಆದರೆ ಅವರು ರಾಜಕೀಯ ಮಾಡುವುದಕ್ಕೆ ಹೊರಟಿದ್ದಾರೆ ಎಂದು ಹೇಳುತ್ತಿದ್ದಾರೆ. ಆ ದೃಷ್ಟಿಯಿಂದ ಜವಾಬ್ದಾರಿ ಹೊತ್ತಿರುವವರು ಸರಿಯಾದ ಬಂದೋಬಸ್ತು ಮಾಡಲು ಯೋಚನೆ ಮಾಡಬೇಕಾಗಿದೆ. ಆ ದೃಷ್ಟಿಯಿಂದ ಸಲಹೆಯನ್ನು ಇಲ್ಲಿ ಕೊಡಬೇಕಾಗಿದೆ. ಈ ತಕ್ಷಣ ಏನು ಮಾಡಲು ಸಾಧ್ಯವೆಂದರೆ ಎರಡು ವಿಚಾರ ಹೇಳಬಹುದು. ಎಷ್ಟೋ ಕಡೆ ಅಡಿಕೆ ಮತ್ತು ತೆಂಗು ಮಾತ್ರ ಬೆಳೆಯುತ್ತಾರೆ, ಅಲ್ಲಿ ನೀರಾವರಿ ಇರುತ್ತದೆ. ಅಡಿಕೆ ಮತ್ತು ತೆಂಗಿನ ತೋಟಗಳಲ್ಲಿ ಮಧ್ಯೆ ಜಾಗವಿರುವ ಕಡೆ ಆಹಾರಧಾನ್ಯ ಬೆಳೆಯಬಹುದು. ಮೈಜ್ (Maize) ಎಂಬ ಒರಟು ಪದಾರ್ಥವಿದೆ, ಅದನ್ನು ತಿಂದರೆ ಒಳ್ಳೆಯದು, ಹಳ್ಳಿಗಳಲ್ಲಿ ತಿನ್ನುವ ರೂಢಿ ಇದೆ. ನಮ್ಮ ಹಳ್ಳಿಗಳಲ್ಲಿ ಕೊರಲೆ ಹಾಕಿ ಎಂದು ಹೇಳುತ್ತಾರೆ, ಅದೂ ಒಂದು ರೀತಿಯ ಮೈಜ್. ತೋಟದಲ್ಲಿ ಅದನ್ನು ಹಾಕಬಹುದು.

ಇನ್ನೊಂದು ಪಂಪ್‌ಸೆಟ್ಸ್ ವಿಚಾರ. ಬಾವಿಗಳಿಗೆ ಈಗ ಪಂಪ್‌ಸೆಟ್ಟುಗಳನ್ನು ಉಪಯೋಗಿಸುತ್ತಿದ್ದಾರೆ.

Mr. SPEAKER.—With regard to the pumpsets, demand is so heavy, Would not the Hon'ble Member recommend for diesel pumps ?

ಶ್ರೀ ಪಿ. ಎಂ. ದೇವ್.—ಅದರಿಂದ ಖರ್ಚು ತಲೆಯಮೇಲೆ ಬೀಳುತ್ತದೆ. ಇದನು ಅನುಭವದಿಂದ ಹೇಳುತ್ತಿದ್ದೇನೆ. ನನ್ನ ಹತ್ತಿರವಿರುವುದು ಡೀಸಲ್ ಸೆಟ್. ವಿದ್ಯುಚ್ಛಕ್ತಿ ಬಂದಿದ್ದರೂ ಕೂಡ ಅದನ್ನು ತೆಗೆದುಕೊಂಡಿಲ್ಲ. ಈಗ ಡೀಸಲ್ ಸೆಟ್ ಉಪಯೋಗಿಸಿದರೆ ಬಹಳ ಹೆಚ್ಚು ಬೆಲೆ ತೆರಬೇಕಾಗುತ್ತದೆ, ಗಿಟ್ಟುವುದಿಲ್ಲ.

5-30 P.M.

ನನ್ನ ಸ್ವಂತ ಅನುಭವದಿಂದ ಹೇಳುತ್ತಿದ್ದೇನೆ. ಡೀಸೆಲ್ ಪಂಪ್‌ಸೆಟ್ ಒಂದು ಗ್ಯಾಲನ್ ಎಣ್ಣೆಗೆ ಮೂರು ಗಂಟೆಗಳ ಕಾಲ ಕೆಲಸ ಮಾಡುತ್ತದೆ. ಮೂರು ಗಂಟೆಗಳ ಕಾಲದಲ್ಲಿ ಒಂದು ಎಕರೆ ಜಮೀನಿಗೆ ಪೂರ್ತಿಯಾಗಿ ನೀರನ್ನು ಕೊಡುವುದಕ್ಕಾಗುವುದಿಲ್ಲ ; ಮೊದಲನೆಯ ಸಲ ನೀರು ಕೊಡಬೇಕಾದರೆ ಬೆಳಗ್ಗೆಯಿಂದ ಸಾಯಂಕಾಲದವರೆಗೂ 8-9 ಗಂಟೆ ಕಾಲ ಕೆಲಸ ಮಾಡಬೇಕು. ಈಗ ಡೀಸೆಲ್ ಎಣ್ಣೆಯ ಬೆಲೆ ಸಹ ಬಹಳ ಜಾಸ್ತಿಯಾಗಿದೆ. ಆದ್ದರಿಂದ ಡೀಸಲ್ ಪಂಪ್‌ಸೆಟ್‌ನಿಂದ ನೀರನ್ನು ಒದಗಿಸಲು ತಗಲುವ ಖರ್ಚನ್ನು ಲೆಕ್ಕ ಹಾಕಿದರೆ ಬೆಳೆ ಇಡುವವನಿಗೆ ಏನೂ ಗಿಟ್ಟುವುದಿಲ್ಲ. ಆದುದರಿಂದಲೇ ಆದಷ್ಟು ವಿದ್ಯುಚ್ಚಾಲಿತ ಪಂಪ್‌ಸೆಟ್‌ಗಳಿಗೆ ಆದ್ಯತೆ ಕೊಡಬೇಕು, ಅದರಿಂದ ಆಗುವ ಖರ್ಚು ಅತ್ಯಲ್ಪ. ಒಂದೊಂದು ಬಾವಿಗೆ 2,400 ರೂಪಾಯಿ ಖರ್ಚು ಬೀಳುತ್ತದೆ, ಅದನ್ನು ಏಕೆ ಕೊಡಬೇಕು ? ಬಾವಿ ಒಂದು ಫರ್ಲಾಂಗ್ ದೂರದಲ್ಲಿದ್ದರೆ 600 ರೂಪಾಯಿಗಳ ಒಳಗೆ ಖರ್ಚು ಆಗುವುದರಿಂದ ವಿದ್ಯುತ್ತನ್ನು ಕೊಡುತ್ತೇವೆ. ಇಲ್ಲದೆ ಇದ್ದರೆ ಕೊಡುವುದಿಲ್ಲ ಎಂದು ಹೇಳುತ್ತಾರೆ. ನಾನು ಎಲ್ಲ ಕಡೆಯೂ ಪ್ರಯತ್ನ ಮಾಡಿ ಕೈ ಬಿಟ್ಟಿದ್ದೇನೆ. 600 ರೂಪಾಯಿ ಒಳಗೆ ಖರ್ಚಾಗುವಂತೆ ವಿದ್ಯುತ್ತನ್ನು ಕೊಡಬೇಕು ಎಂದರೆ, ನಮ್ಮ ಕಡೆ ಸರ್ವೆ ಮರಗಳನ್ನು ಬೆಳೆಯುತ್ತಾರೆ, ಅದಕ್ಕೆ ಟಾರು ಬಳಿದು ಉಪಯೋಗಿಸಿದರೆ ಕೊನೆ ಪಕ್ಷ 10 ವರ್ಷವಾದರೂ ಬರುತ್ತದೆ. ಅಷ್ಟರೊಳಗೆ ಸುಧಾರಣೆ ಮಾಡಿಕೊಂಡು ನಾವು ಮುಂದಕ್ಕೆ ಹೋಗಬಹುದು. ಆಹಾರ ಪರಿಸ್ಥಿತಿ ಇಷ್ಟು ಕ್ಲಿಷ್ಟವಾಗಿರುವುದರಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ.

ವಿದ್ಯುಚ್ಛಕ್ತಿ ಇಲಾಖೆಗೆ ಸಾವಿರ ಕಿಲೋ ಮೀಟರ್ ತಂತಿ ಬರಬೇಕಾಗಿತ್ತು. ಆದರೆ ಬರಲಿಲ್ಲ. ನಮ್ಮಲ್ಲಿರುವ ಕ್ಲಿಷ್ಟ ಪರಿಸ್ಥಿತಿಯ ದೆಸೆಯಿಂದ ಇದಕ್ಕೆ ಆದ್ಯತೆ ಕೊಡಲು ರಾಜ್ಯ ಸರ್ಕಾರದವರು ಒಂದು ಕಾರ್ಯಕ್ರಮವನ್ನಿಟ್ಟುಕೊಂಡು ಡೆಲ್ಲಿಗಾದರೂ ಹೋಗಿ ಅಲ್ಲಿ ವಿಚಾರಮಾಡಿ ತಂತಿ ತೆಗೆದುಕೊಂಡು ಬಂದು ವ್ಯವಸಾಯಕ್ಕೆ ಅನುಕೂಲ ಮಾಡಿ ಎಂದು ಕೇಳುತ್ತಿದ್ದೇನೆ.

ಈಗ ಮಳೆ ಹೋಗಿದೆ. ತೆನೆ ಉದುರಿ ಹೋಗುತ್ತಿದೆ. ಇವತ್ತು ಮಳೆ ಬಂದರೂ ಮೂರಾಣೆ ಬೆಳೆಯಾಗುವುದಿಲ್ಲ ನಮ್ಮ ಕಡೆ. ಕೆರೆ ಅಂಗಳದಲ್ಲಿ ಮಧ್ಯೆ ತಾತ್ಕಾಲಿಕವಾಗಿ ಒಂದು ಕಾಲುವೆಯನ್ನು ತೋಡಿ ಇಟ್ಟಿಗೆ ಇಟ್ಟು ನೀರು ಹೊಡೆದರೆ ಸ್ವಲ್ಪ ದೂರವಾದರೂ ನೀರು ಹರಿಯುತ್ತದೆ.

Mr. SPEAKER.—Why only tap surface water ? When surface water goes down, why not tap shallow underground water ?

ಶ್ರೀ ವಿ. ಎಂ. ದೇವ್.—ತಾವು ಹೇಳುವುದು ಬಹಳ ಉಪಯುಕ್ತವಾದುದು. ಏನೂ ಇಲ್ಲದೆ ಇದ್ದರೆ ಅಷ್ಟಾದರೂ ಆಗಲಿ ಎಂದು ಹೇಳುತ್ತಿದ್ದೇನೆ. ಇದರಲ್ಲಿ ಒಂದು ಪ್ರಶ್ನೆ ಬರುತ್ತದೆ, ಹಣ ಎಲ್ಲಿಂದ ಬರಬೇಕು ಎಂದು ಸರ್ಕಾರದವರು ಕೇಳುತ್ತಾರೆ ?

Mr. SPEAKER.—Is the Member aware that Gujarath has solved in a particular manner the installing of pumpsets ? Everyone who pays Rs. 2,800 loan and purchases a bond gets preference.

ಶ್ರೀ ವಿ. ಎಂ. ದೇವ್.—ಪಂಪ್‌ಸೆಟ್‌ಗಳಿಗೆ ಅಷ್ಟೊಂದು ಕಷ್ಟವಾಗಿಲ್ಲ. ಅವುಗಳಿಗೆ ಸರ್ವಿಸ್ ಕೊಟ್ಟಿಲ್ಲ. ಪಂಪ್‌ಸೆಟ್‌ಗಳನ್ನು ಉಪಯೋಗಿಸುವುದಕ್ಕೆ ತಂತಿ ಬೇಕಾಗಿದೆ. ಅದನ್ನು ತರಿಸಬೇಕು. ಪೈರು ಒಣಗಿ ಹೋಗದೆ ಇರುವುದಕ್ಕೆ ಏನು ಮಾಡಬೇಕು ಎನ್ನುವುದು ಮುಖ್ಯವಾದ ವಿಷಯ. ಈ ಕೆಲಸಕ್ಕೆ ದುಡ್ಡು ಜಾಸ್ತಿ ಖರ್ಚಾಗಬಾರದು. ಎಷ್ಟೋ ಜನಗಳಿಗೆ ಮೂರು ತಿಂಗಳಿಗೆ ಒಂದು ಜೊತೆ ಬಟ್ಟೆ ಕೊಡುತ್ತಾರೆ, ಬೆಳಗ್ಗೆ, ಮಧ್ಯಾಹ್ನ ಮತ್ತು ರಾತ್ರಿ ಊಟ ಹಾಕುತ್ತಾರೆ. ಆ ರೀತಿ ನಾವೂ ಕೊಡುತ್ತೇವೆ, ಒಂದು ಕೆಲಸ ಮಾಡಿ ಎಂದರೆ ಸುಖವಾಗಿ ಒಪ್ಪಿಕೊಳ್ಳುತ್ತಾರೆ. ಇದರಿಂದ ಮೈಸೂರು ದೇಶದಲ್ಲಿ ಕೆರೆಗಳನ್ನು ಎಲ್ಲೆಲ್ಲಿ ಕಟ್ಟಬೇಕೋ ಅಲ್ಲಲ್ಲಿ ಕೆರೆಗಳನ್ನು ಮತ್ತು ಇತರ ಕೆಲಸಗಳನ್ನು ಮಾಡಲು ಸುಲಭವಾಗಿ ಆಗುತ್ತದೆ. ಈಗಿನ ಸನ್ನಿವೇಶದಲ್ಲಿ ಸರ್ಕಾರ ಇದಕ್ಕೆ ತಯಾರಾಗಿದೆಯೇ ಎನ್ನುವುದನ್ನು ನೋಡಬೇಕು. ಈ ರೀತಿ ಮಾಡುವುದರಿಂದ ಹಣದ ಪ್ರಶ್ನೆ ಬಗೆಹರಿಯುತ್ತದೆ, ನೀರಿನ ಪ್ರಶ್ನೆಯೂ ಬಗೆಹರಿಯುತ್ತದೆ. ಇಲ್ಲದೆ ಇದ್ದರೆ ಈ ವರ್ಷ ಬಹಳ ಹಾಹಾಕಾರ ಏಳುತ್ತದೆ.

ಇನ್ನೊಂದು ವಿಷಯವೇನೆಂದರೆ, ಆಹಾರಧಾನ್ಯಗಳ ಮಾರಾಟದ ಸ್ವಾಮ್ಯ ಸರ್ಕಾರದಲ್ಲಿರಬೇಕು ಎನ್ನುವುದು. ಇದನ್ನು ಎಲ್ಲ ಪಕ್ಷಗಳವರೂ ಹೇಳುತ್ತಿದ್ದಾರೆ. ಬೆಂಗಳೂರಿನಲ್ಲಿ ಒಂದು ಸಾವಿರ ಅಂಗಡಿಗಳಿದ್ದರೆ ಅದರ ಮೇಲ್ವಿಚಾರಣೆಗೆ ಬೇಕಾದ ಅಧಿಕಾರಿಗಳನ್ನು ನೇಮಕ ಮಾಡಿ ಸರಿಯಾದ ಬೆಲೆಗೆ ಮಾರಿಸಬೇಕು. ಈಗ 36 ರೂಪಾಯಿಗಳ ಬೆಲೆಯನ್ನು ಇಟ್ಟಿದ್ದಾರೆ. ಇದರಿಂದ ಏನಾಗುತ್ತದೆ ಎಂದರೆ ಒಳ್ಳೆಯ ಜನರನ್ನು, ಪ್ರಾಮಾಣಿಕರಾಗಿದ್ದವರನ್ನೂ ಕೂಡ ಕೆಟ್ಟವರನ್ನಾಗಿ ಮಾಡುತ್ತಿದೆ. ಅದಕ್ಕೋಸ್ಕರವಾಗಿ 36 ರೂಪಾಯಿ ಬೆಲೆ ಎಂದು ಏನು ಇಟ್ಟಿದ್ದಾರೆಯೋ ಅದರ 'ಅಪ್‌ವರ್ಡ್ ರಿವಿಷನ್' ಮಾಡಲು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ, ಆಹಾರ ಧಾನ್ಯಗಳನ್ನು ಜಾಸ್ತಿ ಮಾಡಬೇಕಾದರೆ ಅವಕ್ಕೆ ಬೇಕಾಗಿರುವುದು ಇರಿಗೇಷನ್ ಟ್ರಾಕ್ಟರ್, ರಸಾಯನಿಕ ಗೊಬ್ಬರ ಮುಂತಾದವು. ನಾನು ತಾತ್ಕಾಲಕ್ಕೆ ಕೇಳಿಕೊಳ್ಳುವುದು ಇಷ್ಟು, ಗಂಧಕ ನಮಗೆ ಮುಖ್ಯವಾಗಿ ಬೇಕು. ಕೆಲವು ಕಡೆ ಕೊಳೆ ರೋಗ ಬಂದಿರುತ್ತದೆ. ತೆಂಗು, ಅಡಕೆ, ಬತ್ತ, ಇವು ಮೂರಕ್ಕೂ ಈ ಕೊಳೆ ರೋಗ ಬರುತ್ತದೆ. ವ್ಯವಸಾಯ ಇಲಾಖೆಯಿಂದ ನಾಲ್ಕಾಣೆಗೆ ಒಂದು ಪೌಂಡ್ ಗಂಧಕವನ್ನು ಕೊಡುತ್ತಿದ್ದರು. ಈಗ ಅವರು ಕೊಡುತ್ತಿಲ್ಲ. ವ್ಯಾಪಾರಸ್ಥರ ಹತ್ತಿರ ಹೋಗಿ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಅಲ್ಲಿ ಒಂದು ಪೌಂಡ್ ಗಂಧಕಕ್ಕೆ ಎರಡು ಮೂರು ರೂಪಾಯಿ ಕೊಡಬೇಕಾಗುತ್ತದೆ. ಇದನ್ನು ತಪ್ಪಿಸಬೇಕು.

ಆ ಮೇಲೆ ಕಾಪರ್ ಸಲ್‌ಫೇಟ್ ಎಂದರೆ ಮೈಲುತುತ್ತವನ್ನು ಕರಿ ನೆಲ, ಜೇಡಿ ಅಥವಾ ಎರೆ ಭೂಮಿ ಇವೆರಡಕ್ಕೂ ಎಕರೆಗೆ ಒಂದು ಪೌಂಡ್ ಪುಡಿಯನ್ನು ನೀರು ಬಿಟ್ಟಾಗ ಹಾಕಿದರೆ ಇಳವರಿ ಜಾಸ್ತಿ ಬರುತ್ತದೆ, ಜಳ್ಳು ಆಗುವುದಿಲ್ಲ. ಸಂಶೋಧನೆಯಲ್ಲಿ ಕೂಡ ಹೀಗೆ ಏಕೆ ಆಗುತ್ತದೆ ಎನ್ನುವುದು ಗೊತ್ತಿಲ್ಲ. ಈಗ ಮೈಲುತುತ್ತ ಸಿಕ್ಕುವುದಿಲ್ಲ. ಇಲಾಖೆಯಿಂದ ಸಬ್ಸಿಡೈಸ್ ರೇಟಿನಲ್ಲಿ ಕೊಟ್ಟರೆ ಅದರಿಂದ ಆಹಾರದ ಬೆಳೆ ಜಾಸ್ತಿಯಾಗುವುದಕ್ಕೆ ಸಹಾಯವಾಗುತ್ತದೆ.

ಜಿಂಕ್ ಸಲ್‌ಫೇಟ್ ವಿಚಾರವಾಗಿ ನಾನು ಇವತ್ತು ಹೇಳುತ್ತಿಲ್ಲ. ಹಿಂದಿನಿಂದಲೂ ಹೇಳುತ್ತಿದ್ದೇನೆ. ಅದನ್ನು ತೆಗೆದುಕೊಂಡು ಹೋಗಿ ಎರಚಿದರೆ ರಾಗಿ ಮತ್ತು ಅಡಕೆ ಫಸಲು ಚೆನ್ನಾಗಿ ಆಗುತ್ತದೆ. ಅಡಕೆ ಗಿಡಕ್ಕೆ 'ಹಿಡಚುಂಡಿಗೆ' ರೋಗ ಎಂದು ಬರುತ್ತದೆ. ಒಂದು ಗಿಡಕ್ಕೆ ಹತ್ತು ಗ್ರಾಂ ಪ್ರಕಾರ ಎರಚಿದರೆ ಅದಕ್ಕೆ ರೋಗ ಇರಲಿಲ್ಲವೋ ಏನೋ ಎನ್ನುವಂತೆ 30-40 ವರ್ಷವಾದರೂ ಆ ಗಿಡ ಚೆನ್ನಾಗಿ ಇರುತ್ತದೆ. ಜಿಂಕ್ ಸಲ್‌ಫೇಟನ್ನು ರಾಗಿ ಬೆಳೆಯ ಮೇಲೆ ಎರಚಿದರೆ ಅದರ ಬೆಳೆ ಜಾಸ್ತಿಯಾಗುತ್ತದೆ.

(ಶ್ರೀ ವಿ. ಎಂ. ದೇವ್)

ಇದುವರೆಗೂ ಮಾಡಿರುವ ಹಾಗೆ ರಾಜ್ಯಭಾರ ಮಾಡಿದರೆ ಏನು ಮಾಡುವುದಕ್ಕೂ ಆಗುವುದಿಲ್ಲ. ನಾನು ಕೇಳುವುದು ಇಷ್ಟು : ಇವತ್ತು ಆಹಾರ ಬೆಳೆಯುವುದು ಪೂರ್ತಿ ಮಳೆಯ ಆಧಾರದ ಮೇಲೆ ನಿಂತಿದೆ. ಆಹಾರ ಪದಾರ್ಥಗಳ ಬೆಳೆಯೂ ಸಹ ಮಳೆ ಬಂದಿದ್ದರೆ ಪೂರ್ತಿ ಇಳುವರಿಯಾಗಿ ಕಡಿಮೆಯಾಗುತ್ತಿತ್ತು. ಇದಕ್ಕಾಗಿ ಸರ್ಕಾರದವರು ರೈತರಿಗೆ nitrogenous manure like Uria, Zinc ammonium sulphate nitro-phosphates--ಇವನ್ನೆಲ್ಲಾ ಕ್ರೆಡಿಟ್‌ನಲ್ಲಿ ಕಡಿಮೆ ಬೆಲೆಗೆ ದೊರಕಿಸಿಕೊಡಬೇಕು. ಸಿಂದ್ರಿ ಫ್ಯಾಕ್ಟರಿಯಲ್ಲಿ ಇವೆಲ್ಲಾ ಹೆಚ್ಚು ಸಿಗುತ್ತವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ Zinc ಫಾಸ್ಫೇಟ್ ಸ್ಪ್ರೇ ಮಾಡಿ ಅದನ್ನು ಬೆಳೆಗಳಿಗೆ ಬ್ರಾಡ್‌ಕ್ಯಾಸ್ಟ್ ಮಾಡಿಸಿದರೆ ಬೆಳೆಗೆ ಬೀಳತಕ್ಕ ರೋಗ ಕ್ಯೂರಾಗಿ ಈಲ್ಡ್ ಜಾಸ್ತಿಯಾಗುತ್ತದೆಯೆ ? I am doubtful about it. How can the yield be more ?

Mr. SPEAKER.—Tha Hon'ble Member is making some suggestions and Government are noting them.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನನಗೆ ಅನುಮಾನ ಬಂದಿದ್ದಕ್ಕಾಗಿ ಮಾನ್ಯ ಸದಸ್ಯರನ್ನು ಕೇಳಿದೆ.

Mr. SPEAKER.—The Hon'ble Member was developing a fine point. The whole trend of the idea is disturbed.

Sri V. M. DEO.—Zinc phosphate being a trace element, it is not required in large quantity. 20 grams will be sufficient for something like 100 years. ಅದರಲ್ಲಿ ಸಲ್ಫೇಟ್ ಇರುವುದರಿಂದ ಬೆಳೆಗೆ ಬರತಕ್ಕ ರೋಗವನ್ನು ತಡೆಗಟ್ಟಬಹುದು. ಕೆಲವು ಕಡೆ net result ಜಾಸ್ತಿ ಬರುತ್ತದೆ. ಆದರೆ ಸಂಶೋಧನೆಯಲ್ಲಿ ಕರೆಕ್ಟ್ ಅನಾಲಿಸಿಸ್ ಬರುವುದಿಲ್ಲ.

Mr. SPEAKER.—All the speeches made beyond the time allowed, should be suggestive. I am going to give the member more time. All the points will be examined by the Government. Let him suggest new points.

Sri V. M. DEO.—Thank you for the suggestion, Sir.

ಇನ್ನು ಕೆಮಿಕಲ್ ಮೆನ್ಯೂರ್ಸ್ ವಿಷಯ ಹೇಳುತ್ತೇನೆ. ಈ ವರ್ಷ ಮಳೆ ಬೆಳೆ ಚೆನ್ನಾಗಿ ಆಗಿದ್ದರೆ ಒಟ್ಟು ಮೈಸೂರು ದೇಶದಲ್ಲಿ ಆಹಾರ ಬೆಳೆಯು ಈರ್ಡ್ ಬಹಳ ಜನಗಳಿಗೆ ಎಫೆಕ್ಟಿವ್ ಆಗುವ ಹಾಗೆ ಆಗುತ್ತಿತ್ತು. ಆದರೆ ಈ ನೈಟ್ರೋಜನಸ್ ಮೆನ್ಯೂರನ್ನು ಉಪಯೋಗಿಸಿದರೆ ಏನಾಗುತ್ತದೆಂದರೆ, ಒಂದು ಬೀಜ ಹಾಕಿ ಅದಕ್ಕೆ 58 ಸಾರಿ ಷೂಟ್ಸ್ ಮಾಡಿದರೆ ಹೆಚ್ಚುಕಡಿಮೆ ಕಾಳು ಚೆನ್ನಾಗಿ ಕೊಡುವುದಿಲ್ಲ. ಕಾಳು ಜೊಳ್ಳು ಬೀಳುತ್ತದೆ. ಅದನ್ನು ಸರಿಮಾಡಬೇಕಾದರೆ ಸೂಪರ್ ಫಾಸ್ಫೇಟ್ ಬೇಕು. ಬರೀ ಅಮೋನಿಯಂ ಸಲ್ಫೇಟ್ ಹಾಕಿದರೆ ತೆನೆ ಜೊಳ್ಳು ಆಗುತ್ತದೆ. ಇದಕ್ಕೆ ಉತ್ತರ ಕರ್ಣಾಟಕದವರು ಏನು ಹೇಳುತ್ತಾರೆಂಬುದು ನನಗೆ ಗೊತ್ತಾಗಲಿಲ್ಲ. ಮಂಗಳೂರಿನಲ್ಲಿ ದೊರೆಯುತಕ್ಕಂಥ ಕೆಲವು bones ನಲ್ಲಿ ಸೂಪರ್ ಫಾಸ್ಫೇಟ್ ಶೇಕಡ 5 ರಷ್ಟು ಇರುತ್ತದೆ ; ಏಕೆಂದರೆ ಅಲ್ಲಿ fish meals ಜಾಸ್ತಿ. Whereas in the chemical manure it is 16 to 18 per-cent. ಅಷ್ಟೋ ಇಷ್ಟೋ ಇವು mix ಆಗಿರುತ್ತದೆ. Local consumers' society ಮೂಲಕ ಇದನ್ನು ಮಾಡಿಸಿ ಈತರಹ ಕಾರ್ಯಕ್ರಮವನ್ನು ದೇಶಾದ್ಯಂತ ಇವರು ತೆಗೆದುಕೊಂಡಿಲ್ಲ. ಆದ್ದರಿಂದ ಇದರ ಇಳುವರಿ ಬಹಳ ಕಡಿಮೆಯಾಗುತ್ತಿದೆ. ಈಗ ಒಂದು ಸಂಧಿ ಬಂದಿದೆ. ಬೃಹತ್ ಪ್ರಮಾಣದಲ್ಲಿ ಸೂಪರ್ ಫಾಸ್ಫೇಟ್ ತೆಗೆದುಕೊಂಡು ವ್ಯವಸಾಯ ಮಾಡುವುದು ಒಳ್ಳೆಯದು. ಅದರ ಜೊತೆಗೆ ಸಲ್‌ಫ್ಯೂರಿಕ್ ಆಸಿಡ್ ಸೇರಿಸಿದರೆ ಹೆಚ್ಚು ಲಾಭ ಬರುತ್ತದೆ. Now from what I have heard they are selling it at the rate of Rs. 380. ಅದು Negligeble number of people ಗೆ ಮಾತ್ರ ಸಿಕ್ಕುತ್ತದೆ. ಈ ದೃಷ್ಟಿಯಿಂದ ನಮ್ಮ ರಾಷ್ಟ್ರಕ್ಕೇ ತೊಂದರೆ ಮತ್ತು ನಷ್ಟವಾಗುತ್ತಿದೆ. ಮುಖ್ಯವಾಗಿ ಪ್ಲಾಂಟೇಷನ್ನುಗಳನ್ನು ಹೆಚ್ಚು ಹೆಚ್ಚಾಗಿ ಮಾಡಿ. ಹೆಚ್ಚು ಟ್ರಾಕ್ಟರುಗಳನ್ನು ಉಪಯೋಗಿಸಿ ಆಹಾರ ಪದಾರ್ಥಗಳನ್ನು ಬೆಳೆಯಿರಿ. ತಾತ್ಕಾಲಿಕವಾಗಿ

ಕೆಮಿಕಲ್ ಇಂಡಸ್ಟ್ರಿ ಮೂಲಕ ಸೂಪರ್ ಫಾಸ್ಫೇಟ್‌ಗಳನ್ನು ನೀವೇ ತಯಾರು ಮಾಡಿ ರೈತರಿಗೆ ಸರಬರಾಜು ಮಾಡಿ. ಗಂಧಕ, ಮೈಲತುತ್ತ, ಜಿಂಕ್ ಸಲ್ಫೇಟ್‌ಗಳನ್ನು ಅಗ್ರಿಕಲ್‌ಚರಲ್ ಡಿಪೋಗಳ ಮೂಲಕ ರೈತರಿಗೆ ಕೊಡಿಸಿ. ಮುಖ್ಯವಾಗಿ ತೋಟಗಳನ್ನು ತೆಗೆದುಹಾಕಿ ಅಲ್ಲಿ ಏನಾದರೂ ಆಹಾರಧಾನ್ಯಗಳನ್ನು ಬೆಳೆಯಬೇಕು. ಇಲ್ಲವಿದ್ದರೆ ಆಹಾರಧಾನ್ಯಗಳ ಕೊರತೆ ಹೆಚ್ಚಾಗುತ್ತದೆ.

ಇಷ್ಟು ಹೊತ್ತು ಸಾವಧಾನವಾಗಿ ಕೇಳಿ ನನಗೆ ಸರಿಯಾಗಿ ಗೈಡ್ ಮಾಡಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಲಕ್ಕಪ್ಪ.—ಅಧ್ಯಕ್ಷರೇ, ಹಿಂದೆ 1962ನೇ ಅಕ್ಟೋಬರ್ ತಿಂಗಳಲ್ಲಿ ನಮ್ಮ ಭಾರತ ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಣೆ ಮಾಡಿದರು. ಆ ರೀತಿ ತುರ್ತು ಪರಿಸ್ಥಿತಿ ಘೋಷಣೆ ಯಾದಮೇಲೆ ಬಹುಶಃ ನಮ್ಮ ದೇಶದಲ್ಲಿ ಇನ್ನೊಂದು ಯುದ್ಧ ಭೀತಿ ಬಂತು. ಆಗ ಪ್ರತಿಯೊಬ್ಬ ರಿಗೂ ಇಂತಹ ತುರ್ತು ಪರಿಸ್ಥಿತಿಯ ಕಾಲದಲ್ಲಿ ತಮ್ಮ ಜವಾಬ್ದಾರಿ ಏನು, ಎಷ್ಟು ಜವಾಬ್ದಾರಿಯುತ ವಾದ ಕೆಲಸಗಳನ್ನು ಮತ್ತು ದೇಶವನ್ನು ರಕ್ಷಣೆ ಮಾಡತಕ್ಕ ಕಾರ್ಯಗಳನ್ನು ಮಾಡಬೇಕು ಎಂಬ ಬಗ್ಗೆ ಯೋಚನೆ ಬಂತು. ಹಾಗೆಯೇ ಚೀಣಾದವರ ಧಾಳಿಯಿಂದ ನಮ್ಮನ್ನು ಬಹುಶಃ ಒಂದು ರೀತಿ ಯಲ್ಲಿ ನಮ್ಮ ದೇಶವನ್ನು ರಕ್ಷಣೆ ಮಾಡತಕ್ಕಂಥ ಜವಾಬ್ದಾರಿ ಮತ್ತು ಬೇರೆ ದೇಶಗಳ ಆಶ್ರಯ ಇಲ್ಲದೆ ಸ್ವಯಂಪರಿಪೂರ್ಣತೆಯನ್ನು ನಾವು ಪಡೆದು ದೇಶವನ್ನು ರಕ್ಷಣೆ ಮಾಡತಕ್ಕ ಒಂದು ತಿಳುವಳಿಕೆ ಅಥವಾ ಅರಿವು ನಮಗೆ ಆಗಲೇ ಉಂಟಾಗಿತ್ತು. ಪಾಕೀಸ್ಥಾನದವರ ಧಾಳಿ ನಮ್ಮ ಮೇಲೆ ಉಂಟಾದಾಗ ಈಗ ಅದರಲ್ಲೂ ಚೈನಾದೇಶದವರು ನಮ್ಮ ಭಾರತದ ಗಡಿಯಮೇಲೆ ಆಕ್ರಮಣ ಮಾಡಿಕೊಂಡು ಬರತಕ್ಕ ಕಾಲದಲ್ಲಿ ನಾವು ಯುದ್ಧ ಭೀತಿಯನ್ನು ನೋಡುವ ಒಂದು ಸಂದರ್ಭದಲ್ಲಿ ದ್ದೇವೆ. ಅದರಲ್ಲೂ ಈ ವರ್ಷ ನಮ್ಮ ದೇಶದಲ್ಲಿ ನೂರಾರು ವರ್ಷಗಳಿಂದಲೂ ಇಲ್ಲದೇ ಇರತಕ್ಕ ಒಂದು ದೊಡ್ಡ ಕ್ಷಾಮ ಪರಿಸ್ಥಿತಿಯನ್ನು ಈಗ ನಾವು ಕಾಣುತ್ತಿದ್ದೇವೆ. ಇಂತಹ ಒಂದು ತುರ್ತು ಪರಿಸ್ಥಿತಿ, ಹಾಗೂ ಯುದ್ಧದ ಭೀತಿ ಈಗ ಇರುವಾಗ ದೇಶದಲ್ಲಿ ನಾವೆಲ್ಲರೂ ಕೂಡ ದೇಶ ರಕ್ಷಣೆ ಗೋಸ್ಕರ ಮತ್ತು ತುರ್ತು ಪರಿಸ್ಥಿತಿಯ ಆಧಾರದ ಮೇಲೆ ಬೇಕಾದಷ್ಟು ತ್ಯಾಗ ಮಾಡಲು ಸಿದ್ಧ ರಾಗಿರಬೇಕು. ಅದಕ್ಕಾಗಿ ಈ ದಿವಸ ಯೋಜನೆಗಳನ್ನು ರೂಪಿಸುವ ಒಂದು ಜವಾಬ್ದಾರಿ ನಮ್ಮ ಮೇಲೆ ಬಿದ್ದಿದೆ. ಅದನ್ನೇ ಬಹುಶಃ ಯೋಜನಾ ಉಪಾಧ್ಯಕ್ಷರು, ನಮ್ಮ ಕೇಂದ್ರ ಸರ್ಕಾರದವರು ಯೋಜನೆಗಳನ್ನು ಮಾಡತಕ್ಕ ಕಾಲದಲ್ಲಿ ಈ ತುರ್ತು ಪರಿಸ್ಥಿತಿಯ ಅರಿವನ್ನು ತಿಳಿದು ಈ ಯೋಜನೆ ಯಲ್ಲೂ ಕೂಡ ನಮ್ಮ ದೇಶದ ರಕ್ಷಣೆಯ ಬಗ್ಗೆ ಒಂದು ಜವಾಬ್ದಾರಿಯುತವಾದ ರೀತಿಯಲ್ಲಿ ಯೋಚನೆ ಮಾಡಬೇಕು ಎಂದು ಸೂಚನೆಯನ್ನೂ ಕೂಡ ಕೊಟ್ಟಿದ್ದಾರೆ. ಅದನ್ನು ಅರಿತುಕೊಂಡು ನಾವು ನಮ್ಮ ದೇಶದಲ್ಲಿ ಈ ಆಹಾರ ಪರಿಸ್ಥಿತಿ ಉಲ್ಬಣಾವಸ್ಥೆಯಲ್ಲಿರತಕ್ಕ ಕಾಲದಲ್ಲಿ ಯಾವ ರೀತಿ ಆಹಾರ ಪರಿಸ್ಥಿತಿಯನ್ನು ಸುಧಾರಿಸಬೇಕು, ಅದಕ್ಕಾಗಿ ಇಂತಹ ತುರ್ತು ಪರಿಸ್ಥಿತಿಯ ಆಧಾರದ ಮೇಲೆ ನಾವು ಯಾವ್ಯಾವ ಜವಾಬ್ದಾರಿಯುತವಾದ ಯೋಜನೆಗಳನ್ನು ಈಗ ಅತಿ ಜಾಗ್ರತೆಯಾಗಿ, ತ್ವರಿತವಾಗಿ ಮಾಡಬೇಕೆಂಬ ಉದ್ದೇಶದಿಂದ ಇವತ್ತು ಈ ಸಭೆಯಲ್ಲಿ ಈ ನಿರ್ಣಯವನ್ನು ಮಂಡಿ ಸಿದ್ದಾರೆ.

ಸರ್ಕಾರಕ್ಕೆ ಈಗಾಗಲೇ ಮಾನ್ಯ ಸದಸ್ಯರನೇಕರು ಅನೇಕ ಸೂಚನೆಗಳನ್ನು ಮಾಡಿದ್ದಾರೆ. ಈ ವಿಷಯವನ್ನು ನಾನು ಈ ಸಭೆಯಲ್ಲಿ ಅನೇಕ ಸಾರಿ ಹೇಳಿದ್ದೇನೆ. ಶ್ರೀಮಾನ್ ಎಸ್. ಕೆ. ಡೇ ಅವರು ಹಾಕಿರುವ ಎನ್. ಇ. ಎಸ್. ಯೋಜನೆ ಏನಿದೆ ಅದು ಯಾವ ರೀತಿಯಿಂದಲೂ ಕೂಡ ನಮ್ಮ ದೇಶದಲ್ಲಿ ಪರಿಣಾಮಕಾರಿಯಾದ ಪಾತ್ರವನ್ನು ವಹಿಸಿಲ್ಲ. ಈ ಯೋಜನೆಯು ಯಶಸ್ವಿಯಾಗಿಲ್ಲ. ಈ ಯೋಜನೆಗೆ ಹಾಕಿದಂತಹ ಹಣ ಯಾವ ಪರಿಣಾಮವನ್ನೂ ದೇಶದಲ್ಲಿ ಮಾಡಿಲ್ಲ, ಎನ್ನುವುದನ್ನು ಲೋಕಸಭೆಯಲ್ಲಿ ಅನೇಕರು ಒತ್ತಿ ಒತ್ತಿ ಹೇಳಿದ್ದಾರೆ. ಈ ಸಭೆಯಲ್ಲಿ ಕೂಡ ನನ್ನ ಅನೇಕ ಸ್ನೇಹಿತರು ಹೇಳಿದ್ದಾರೆ. ಈ ವಿಚಾರವನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದು ಬಹುಶಃ ಮಾನ್ಯ ಆಹಾರ ಮಂತ್ರಿಗಳು ಕೇಳ ಬಹುದು. ಈ ತುರ್ತು ಪರಿಸ್ಥಿತಿಯಲ್ಲಿ ಜನತೆಗೆ ಎಷ್ಟು ಆಹಾರ ಬೇಕಾಗಿದೆಯೋ ಅದನ್ನು ಒದಗಿಸು ವುದಕ್ಕೆ ಹೆಚ್ಚು ಹಣ ಬೇಕಾಗುತ್ತದೆ. ತುರ್ತು ಪರಿಸ್ಥಿತಿಯನ್ನು ಅನುಸರಿಸಿ ಯೋಜನೆಗಳನ್ನು ಮಾಡ ಬೇಕಾದರೆ ಅಪಾರ ಹಣ ಬೇಕಾಗುತ್ತದೆ. ಎರಡು ಕಾರ್ಯಗಳಿಗೆ ಹಣವನ್ನು ಒದಗಿಸತಕ್ಕ ಕಠಿಣ ಪ್ರಸಂಗ ಬಂದಿದೆ. ಗಡಿ ರಕ್ಷಣೆಯನ್ನು ಮಾಡತಕ್ಕ ತುರ್ತು ಪರಿಸ್ಥಿತಿಯಲ್ಲಿ ನಾವು ರಕ್ಷಣಾ ಕಾರ್ಯಕ್ಕೆ ಹಣವನ್ನು ಒದಗಿಸಬೇಕು. ಅದೇ ರೀತಿ ರಕ್ಷಣಾಕಾರ್ಯವನ್ನು ಮಾಡತಕ್ಕ ದಿಶೆಯಲ್ಲಿ ದೇಶದಲ್ಲಿರತಕ್ಕ ಜನತೆ ಹೇರಳವಾಗಿ ಆಹಾರವನ್ನು ಬೆಳೆದು ಗಡಿ ರಕ್ಷಣೆಯನ್ನು ಮಾಡತಕ್ಕ ಯೋಧರಿಗೆ ಶಕ್ತಿಯನ್ನು ಕೊಡತಕ್ಕ ಕಾರ್ಯವನ್ನು ಮಾಡಬೇಕು. ಈಗ ಸರ್ಕಾರದವರು ಅನೇಕ ಯೋಜನೆಗಳನ್ನು ಹಾಕಿ ದ್ದಾರೆ. ಅನೇಕ ಇಲಾಖೆಗಳಲ್ಲಿ ಅನೇಕ ಕಾನೂನುಗಳನ್ನು ತಂದಿದ್ದಾರೆ. ತುರ್ತು ಪರಿಸ್ಥಿತಿಯ ಆಧಾರವನ್ನು ಇಟ್ಟುಕೊಂಡು ಹೆಚ್ಚು ಹಣವನ್ನು ಜಾಸ್ತಿ ಆಹಾರವನ್ನು ಬೆಳೆಯುವುದಕ್ಕೆ ಉಪ

(ಶ್ರೀ ಕೆ. ಲಕ್ಕಪ್ಪ)

ಯೋಗಿಸಬೇಕು. ನಾವು ಜಾಸ್ತಿ ಆಹಾರವನ್ನು ಉತ್ಪಾದನೆ ಮಾಡಿದರೆ ನಮ್ಮ ದೇಶದ ರಕ್ಷಣಾ ಕಾರ್ಯವನ್ನು ಮಾಡತಕ್ಕ ಪ್ರಥಮ ಕರ್ತವ್ಯವನ್ನು ಮಾಡಿದಂತಾಗುತ್ತದೆ ಎಂದು ನಾನು ಹೇಳ ಬಯಸುತ್ತೇನೆ. ಸೋಷಿಯಲ್ ವೆಲ್‌ಫೇರ್ ಬೋರ್ಡ್, ಖಾದಿ ಬೋರ್ಡ್ ಮುಂತಾದ ಕೆಲಸಕ್ಕೆ ಬಾರದ, ಪ್ರಯೋಜನವಿಲ್ಲದೆ ಇರುವ ಇಲಾಖೆಗಳಿಗೆ ಹೇರಳವಾಗಿ ಖರ್ಚು ಮಾಡತಕ್ಕ ಹಣವನ್ನು ದೇಶದ ಗಡಿ ರಕ್ಷಣಾ ಕಾರ್ಯವನ್ನು ಮಾಡತಕ್ಕ ಕೆಲಸಗಳಿಗೆ ಉಪಯೋಗಿಸಬೇಕು. ಅನುಪಯುಕ್ತವಾದ ಬೋರ್ಡುಗಳಿಗೆ ಖಾಸಗೀ ಸಿಬ್ಬಂದಿಯನ್ನು ನೇಮಕ ಮಾಡುವುದನ್ನು ಕಡಿಮೆ ಮಾಡಬೇಕು. ಅದನ್ನು ಕಡಿಮೆಮಾಡಿ ಆ ಹಣವನ್ನು ಬಹು ಮುಖ್ಯ ಸಮಸ್ಯೆಯಾದ ಆಹಾರದ ಉತ್ಪಾದನೆಗೆ ಉಪಯೋಗಿಸ ಬೇಕು. ಆಹಾರ ಮಂತ್ರಿಗಳು ಮತ್ತು ವ್ಯವಸಾಯ ಮಂತ್ರಿಗಳು ಹೇಳುತ್ತಾರೆ, ನಮ್ಮಲ್ಲಿ ಹಣವಿಲ್ಲ ಎಂದು. ಸರ್ಕಾರದವರು ಏನಾದರೂ ಮಾಡಿ ವ್ಯವಸಾಯದ ಕೆಲಸಗಳಿಗೋಸ್ಕರ ರೈತರಿಗೆ ಹಣ ಸಹಾಯವನ್ನು ಮಾಡಿ ಅವರು ಹೆಚ್ಚು ಆಹಾರವನ್ನು ಬೆಳೆಯುವುದಕ್ಕೆ ಪ್ರೋತ್ಸಾಹವನ್ನು ಮಾಡಬೇಕು. ಈರೀತಿ ಆಹಾರವನ್ನು ಬೆಳೆಯುವುದಕ್ಕೆ ಪ್ರೋತ್ಸಾಹವನ್ನು ಮಾಡಬೇಕು ಎನ್ನತಕ್ಕ ಕಾಲದಲ್ಲಿ ಮಂತ್ರಿ ಗಳು ರೈತರಿಗೆ ನಮ್ಮಲ್ಲಿ ಹಣವಿಲ್ಲ. ನಮಗೆ ಸ್ವಲ್ಪ ಹಣ ಬಂದಿದೆ, ನಮಗೆ ತುರ್ತು ಪರಿಸ್ಥಿತಿ ಬಂದಿದೆ ಎಂದು ಹೇಳುತ್ತಾರೆ. ಈ ತುರ್ತು ಪರಿಸ್ಥಿತಿಯಲ್ಲಿ ಯೋಜನೆಗಳನ್ನು ಏತಕ್ಕೆ ಕಡಿಮೆ ಮಾಡಬಾರದು! ಎನ್. ಇ. ಎಸ್ ಯೋಜನೆಯನ್ನು ಏತಕ್ಕೆ ತೆಗೆಯಬಾರದು ಎಂದು ನಾನು ಸಲಹೆ ಮಾಡುತ್ತೇನೆ. ತುರ್ತು ಪರಿಸ್ಥಿತಿ ಇದ್ದರೂ ಕೂಡ ಮಂತ್ರಿ ಮಂಡಲದವರು ಮನಸ್ಸು ಮಾಡಿ ಎನ್. ಇ. ಎಸ್. ತೆಗೆಯ ಬೇಕೆಂದು ನಾನು ಹೇಳುತ್ತೇನೆ. ಈ ತುರ್ತು ಪರಿಸ್ಥಿತಿಯನ್ನು ಅರಿತುಕೊಂಡಿರತಕ್ಕ ಸರ್ಕಾರದವರು ಪಾನ ನಿರೋಧವನ್ನು ತೆಗೆದು ಹಾಕಿ ಅದರಿಂದ ಬರತಕ್ಕ ಹಣವನ್ನು ಆಹಾರದ ಉತ್ಪಾದನೆಗೆ ಏತಕ್ಕೆ ಖರ್ಚು ಮಾಡಬಾರದು ಎನ್ನತಕ್ಕದ್ದನ್ನು ನಾನು ಈ ದಿವಸ ಸರ್ಕಾರಕ್ಕೆ ಸೂಚಿಸ ಬಯಸುತ್ತೇನೆ. ಇನ್ನೊಂದು ಹೊಸವಿಚಾರ, ಒಂದು ಹೊಸರೀತಿಯ ಯೋಜನೆಯ ಮಾರ್ಗದರ್ಶನ ಮಾಡಬೇಕೆಂಬ ಬಗ್ಗೆ ನಾನು ಒಂದು ಹೊಸ ಸೂಚನೆಯನ್ನು ಮಾಡುತ್ತೇನೆ. ಅದೇನೆಂದರೆ, ಈಗ ನಮ್ಮ ಮೈಸೂರು ದೇಶದಲ್ಲಿ ಸಣ್ಣಸಣ್ಣ ಗೇಣಿದಾರರು 3—4 ಎಕರೆ ಹಿಡುವಳಿಯನ್ನು ಇಟ್ಟುಕೊಂಡು ವ್ಯವಸಾಯ ಮಾಡತಕ್ಕವರು ಬಹಳ ಜನ ಇದ್ದಾರೆ. ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಇನ್ನೂ ಅನೇಕ ಜಿಲ್ಲೆ ಗಳಲ್ಲಿ ಕೆಲವರು ನೂರಾರು ಎಕರೆ ಜಮೀನನ್ನು ಇಟ್ಟುಕೊಂಡಿದ್ದಾರೆ. ಅವರು ಸ್ವಂತವಾಗಿ ಜಮೀ ನನ್ನು ವ್ಯವಸಾಯ ಮಾಡುತ್ತಿಲ್ಲ. ಅವರು ಅಧಿಕಾರದಲ್ಲೋ ಅಥವಾ ಮತ್ತೆ ಯಾವುದೋ ಕೆಲಸದಲ್ಲಿ ನಿರತರಾಗಿದ್ದಾರೆ. ಅವರು ತಮ್ಮ ಜಮೀನುಗಳಲ್ಲಿ ಆಹಾರವನ್ನು ಉತ್ಪತ್ತಿಮಾಡತಕ್ಕ ಬೆಳೆಗಳನ್ನು ಇಡದೆ ಕೇವಲ ಹಣ ಸಂಪಾದನೆಯನ್ನು ಮಾಡತಕ್ಕ ಬೆಳೆಗಳನ್ನು ಇಡುತ್ತಿದ್ದಾರೆ. ಈ ಬಗ್ಗೆ ದೇಶದಲ್ಲಿ ಯಾವ ಸರ್ವೆ ಕೂಡ ಆಗಿಲ್ಲ. ನೂರಾರು ಎಕರೆಗಳಲ್ಲಿ ಅಡಿಕೆ ಗಿಡಗಳನ್ನು ಮತ್ತು ಸರ್ವೆ ಗಿಡಗಳನ್ನು ಕಟ್ಟಿದ್ದಾರೆ. ದೇಶಕ್ಕೆ ಆಹಾರವನ್ನು ಒದಗಿಸದೇ ಇರತಕ್ಕ ಮತ್ತು ಕೇವಲ ಹಣವನ್ನು ಗಳಿಸುವಂತಹ ಬೆಳೆಯನ್ನು ಇಡತಕ್ಕ ಹಿಡುವಳಿಗಳ ಮೇಲೆ ಒಂದು ಹಿಡಿತವನ್ನು ಇಟ್ಟುಕೊಳ್ಳುವಂತಹ ಯಾವುದಾದರೂ ಒಂದು ಕಾನೂನನ್ನು ಮಾಡಿದರೆ ಒಳ್ಳೆಯದು ಮತ್ತು ಸೂಕ್ತವಾಗಿರುತ್ತದೆ. ಎಂದು ನಾನು ಸರ್ಕಾ ರಕ್ಕೆ ಸೂಚನೆ ಮಾಡುತ್ತೇನೆ.

Sri B. D. JATTI.—For the entire country ಮಾಡಬೇಕು.

Sri SANJEEVANATHA AIKALA (Surathkal).—For the information of the Hon'ble Member, I can say that some of them have been earning dollars.

ಶ್ರೀ ಕೆ. ಲಕ್ಕಪ್ಪ.—ನಮಗೆ ಡಾಲರ್ ಬೇಕಾಗಿಲ್ಲ. ನಮಗೆ ಆಹಾರ ಬೇಕಾಗಿದೆ. ನಮಗೆ ಬಂದೂಕುಗಳು ಬೇಕಾಗಿದೆ. ಈ ರೀತಿ ಇರತಕ್ಕ ಪರಿಸ್ಥಿತಿಯಲ್ಲಿ ಬಹಳ ಜನ ವ್ಯವಸಾಯವನ್ನು ಅವಲಂಬನೆ ಮಾಡಿಕೊಂಡಿಲ್ಲ. ಆದರೆ ಅವರು ಬೆಂಗಳೂರು ಮುಂತಾದ ಸ್ಥಳಗಳಲ್ಲಿ ಇದ್ದುಕೊಂಡು ನಾವು ವ್ಯವಸಾಯವನ್ನೇ ಅವಲಂಬನೆ ಮಾಡಿಕೊಂಡಿದ್ದೇವೆ ಎಂದು ಹೇಳುತ್ತಾರೆ. ಆದರೆ ಅವರು ತಮ್ಮ ಜಮೀನಿನಲ್ಲಿ ಬೆಳೆಸತಕ್ಕ ಬೆಳೆ ಆಹಾರವನ್ನು ಉತ್ಪತ್ತಿ ಮಾಡತಕ್ಕ ಬೆಳೆಯಲ್ಲ. ಅದು ಹಣವನ್ನ ಗಳಿಸತಕ್ಕ ಬೆಳೆ. ಈಗ ನಮ್ಮ ದೇಶದಲ್ಲಿ ಆಹಾರವನ್ನು ಜಾಸ್ತಿ ಉತ್ಪತ್ತಿ ಮಾಡಬೇಕು ಎನ್ನುವ ದೆಶೆಯಲ್ಲಿ ಕಮರ್ಷಿಯಲ್ ಕ್ರಾಪ್ಸ್ ಏನಿದೆಯೋ ಅದನ್ನು ಕಡಿಮೆ ಮಾಡಿ ಆಹಾರವನ್ನು ಉತ್ಪತ್ತಿ ಮಾಡತಕ್ಕ ಬೆಳೆಯನ್ನು ಬೆಳೆಯಬೇಕು.

Sri C. J. MUCKANNAPPA.—Is it the opinion of the Hon'ble Member that no commercial crops should be grown ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಹೇಳುವ ಅಭಿಪ್ರಾಯ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಆಹಾರ ಧಾನ್ಯವನ್ನು ಬೆಳೆಯಬೇಕು. ಕಮರ್ಷಿಯಲ್ ಕ್ರಾಪ್ಸ್ ಬೆಳೆಯುವುದನ್ನು ಕಡಿಮೆ ಮಾಡಬೇಕು ಎಂದು.

Sri C. J. MUCKANNAPPA.—That is possible.

Mr. SPEAKER.—Casurina trees are grown in an area where paddy can never be grown.

ಶ್ರೀ ಕೆ. ಲಕ್ಕಪ್ಪ.—ನಾನು ಮಾನ್ಯ ಅಧ್ಯಕ್ಷರಿಗೆ ಹೇಳುತ್ತೇನೆ. ಬಹಳ ಕಡೆಗಳಲ್ಲಿ ಜಮೀನಿನಲ್ಲಿ ಸರ್ವೆ ಗಿಡಗಳನ್ನು ಹಾಕಿದ್ದಾರೆ. ಆ ಪ್ರದೇಶದಲ್ಲಿ ಬಾವಿಯನ್ನು ತೆಗೆದರೆ ಹೇರಳವಾಗಿ ನೀರು ಬರುತ್ತದೆ. ಅದರ ಆಶ್ರಯದಿಂದ ಅಲ್ಲಿ ಬತ್ತವನ್ನು ಬೆಳೆಯುವುದಕ್ಕೆ ಅವಕಾಶವಿದೆ.

Mr. SPEAKER.—Which district?

Sri K. LAKKAPPA.—Bangalore District.

Mr. SPEAKER.—I blame his district. Sri Sanjeevanatha Aikala was taken aback as the Hon'ble Member was saying in South Kanara District.

ಶ್ರೀ ಕೆ. ಲಕ್ಕಪ್ಪ.—ಸೌತ್ ಕೆನರಾ ವಿಷಯವನ್ನು ಬಹಳ ಜವಾಬ್ದಾರಿ ಸ್ಥಾನದಲ್ಲಿರತಕ್ಕ ಮನುಷ್ಯರನ್ನು ತಾವು ವಿಚಾರ ಮಾಡಿ ಅವರು ಏನು ಹೇಳುತ್ತಾರೆಂದರೆ, ನಾವು ಬೆಂಗಳೂರನ್ನು ಸೇರಿದ್ದೇವೆ. ನಾವು ನೂರಾರು ಎಕರೆ ಜಮೀನನ್ನು ಸೌತ್ ಕೆನರಾದಲ್ಲಿ ಇಟ್ಟುಕೊಂಡು ನಾವು ಆಹಾರವನ್ನು ಬೆಳೆಯುತ್ತೇವೆಯೇ, ನಾವು ಹಣವನ್ನು ಬೆಳೆಯುತ್ತೇವೆ ಎಂದು ಹೇಳುತ್ತಾರೆ. ಈ ವಿಷಯದಲ್ಲಿ ನಾನು ತಮಗೆ, ಎಂದರೆ, ಸರ್ಕಾರದವರಿಗೆ ಹೇಳುತ್ತೇನೆ, ಎಲ್ಲೆಲ್ಲಿ ಈ ರೀತಿಯಾಗಿ ಆಹಾರವನ್ನು ಬೆಳೆಯತಕ್ಕ ಪ್ರದೇಶದಲ್ಲಿ ಕಮರ್ಷಿಯಲ್ ಕ್ರಾಪ್ಸ್ ಬೆಳೆಯುತ್ತಾರೆಯೋ ಅಲ್ಲೆಲ್ಲಾ ಆಹಾರ ಧಾನ್ಯಗಳನ್ನು ಬೆಳೆಯುವಂತೆ ಆ ಜಮೀನಿನ ಮಾಲೀಕರಿಗೆ ಸೂಚನೆಯನ್ನು ಕೊಡುವಂತೆ ವ್ಯವಸ್ಥೆ ಮಾಡಬೇಕು.

ಈಗಾಗಲೇ ಅನೇಕ ಮಾನ್ಯ ಸದಸ್ಯರು ಹೇಳಿದಂತೆ ಆಹಾರವನ್ನು ಬೆಳೆಯಬೇಕಾದರೆ ನೀರು ಬೇಕು. ನೀರನ್ನು ಪಡೆಯಬೇಕಾದರೆ ಬಾವಿಗಳನ್ನು ತೆಗೆಸಬೇಕು. ಕೆರೆಗಳನ್ನು ಕಟ್ಟಿಸಬೇಕು. ಈಗ ಹಾಲಿ ಇರತಕ್ಕ ಕೆರೆಗಳಲ್ಲಿ ಹೂಳು ತುಂಬಿರುವುದನ್ನು ತೆಗೆಸಬೇಕು. ಇದಕ್ಕಾಗಿ ಹೇರಳವಾದ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ನೀರಿನ ಸೌಕರ್ಯ ಇಲ್ಲದೇ ಇರುವ ಸ್ಥಳಗಳಲ್ಲಿ ಸರ್ಕಾರದವರು ಬೋರ್‌ವೆಲ್‌ಗಳನ್ನು ತೆಗೆಸಿ ರೈತರಿಗೆ ನೀರಿನ ಸೌಕರ್ಯವನ್ನು ಒದಗಿಸುವ ವ್ಯವಸ್ಥೆಯನ್ನು ಮಾಡಬೇಕು. ಮತ್ತು ಸಣ್ಣ ಸಣ್ಣ ಹಿಡುವಳಿದಾರರಿಗೆ ನೀರಿನ ಸೌಕರ್ಯವನ್ನು ಒದಗಿಸುವುದಕ್ಕೋಸ್ಕರ ಬೋರ್‌ವೆಲ್‌ಗಳನ್ನು ತೆಗೆಸಲು ಬೇಕಾಗಿರತಕ್ಕ ಯಂತ್ರೋಪಕರಣಗಳನ್ನು ಹೆಚ್ಚು ಹೆಚ್ಚಾಗಿ ತೆಗೆದುಕೊಳ್ಳಬೇಕು. ಈಗ ತುರ್ತು ಪರಿಸ್ಥಿತಿ ಇದೆ. ಅದನ್ನು ಅನುಸರಿಸಬೇಕು. ಯೋಜನೆಗಳಲ್ಲಿ ಹೇರಳವಾಗಿ ಹಣವನ್ನು ಒದಗಿಸಿರತಕ್ಕ ಯಾವ ರಸ್ತೆಯನ್ನೂ ಮಾಡುವುದು ಬೇಡ. ತುರ್ತು ಪರಿಸ್ಥಿತಿಯಲ್ಲಿ ಬಾವಿ ಕೆರೆ, ಲಿಫ್ಟ್ ಇರಿಗೇಷನ್ ಈ ಕೆಲಸಗಳನ್ನು ಮಾಡುವುದಕ್ಕೋಸ್ಕರ ಮಾತ್ರ ಹಣ ಉಪಯೋಗಿಸಬೇಕು.

6-00 P. M.

ಸ್ವಾಮಿ, ಇನ್ನೊಂದು ವಿಷಯ. ರೈತರನ್ನು ಆರ್ಥಿಕ ದೃಷ್ಟಿಯಿಂದ ಈಗ 5 ವರ್ಷಗಳಿಂದ ನಾವು ನೋಡುವುದಾದರೂ ಕೂಡ ಯಾವ ತಾಲ್ಲೂಕಿನಲ್ಲಾಗಲೀ ಅಥವಾ ಯಾವ ಜಿಲ್ಲಾಮಟ್ಟದಲ್ಲಾಗಲೀ, ಪರಿಸ್ಥಿತಿ ಬಹಳ ಹದಗೆಡುತ್ತಾ ಇದೆ. ಅವರನ್ನು ಸರ್ಕಾರದವರು ಉತ್ತಮ ಸ್ಥಿತಿಗೆ ತರಬೇಕೆಂದು ಯಾವ ಸಹಕಾರ ಸಂಘಗಳನ್ನು ಮತ್ತು ಲ್ಯಾಂಡ್ ಮಾರ್ಟ್‌ಗೇಜು ಬ್ಯಾಂಕುಗಳನ್ನು ಮಾಡಿದ್ದಾರೋ ಅಲ್ಲಿ ಸರಿಯಾಗಿ ಕಾಲ ಕಾಲಕ್ಕೆ ಅವರಿಗೆ ಹಣ ದೊರಕುತ್ತಾ ಇಲ್ಲ. ಹಣ ದೊರಕಿದರೂ ಸರ್ಕಾರ ಇವೊತ್ತು ಏನು ಮಾಡಿದೆ ಎಂದರೆ ಕೈಗಾರಿಕೆಗಳನ್ನು ಮಾಡಿ ಲಕ್ಷಾಂತರ ರೂಪಾಯಿಗಳನ್ನು ಕೈಗಾರಿಕೋದ್ಯಮಿಗಳಿಗೆ ಮೂರು ಪರ್ಸೆಂಟ್ ಬಡ್ಡಿಗೆ ಕೊಡುತ್ತಾರೆ. ದೇಶವನ್ನು

(ಶ್ರೀ ಕೆ. ಲಕ್ಕಪ್ಪ)

ರಕ್ಷಣೆ ಮಾಪತಕ್ಕಂಥ ರೈತನಿಗೆ ಕೊಡತಕ್ಕ ಬಡ್ಡಿ ದರ ಮಾತ್ರ ನೂರಕ್ಕೆ ಒಂಭತ್ತೂ ಮುಕ್ಕಾಲು ಆಗಿದೆ. ಈ ಒಂದು ಪರಿಸ್ಥಿತಿಯನ್ನು ಅನೇಕ ಸಾರಿ ಬಹುಶಃ ಮಾನ್ಯ ಸದಸ್ಯರೆಲ್ಲಾ ಇಲ್ಲಿ ತಿಳಿಸಿರ ಬಹುದು, ಆದರೆ ಈ ಬಗ್ಗೆ ಯಾವ ಕಾರ್ಯಕ್ರಮವನ್ನೂ ಇನ್ನೂ ಸರ್ಕಾರದವರು ತೆಗೆದುಕೊಂಡಿಲ್ಲ. ಸಾಲವನ್ನು ಕೊಡತಕ್ಕಂಥ ಯೋಜನೆ ಮಾತ್ರ ಮಾಡಿದೆ. ಈ ಒಂದು ಪರಿಸ್ಥಿತಿಯನ್ನು ಆದಷ್ಟು ಜಾಗ್ರತೆಯಾಗಿ ಸರ್ಕಾರದವರು ಸರಿ ಮಾಡಬೇಕಾಗಿದೆ. ಈಗ ಬೆಳೆಯನ್ನು ಬೆಳೆಯುವ ರೈತನಿಗೆ ಸರಿಯಾದ ಬೆಲೆ ಸಿಕ್ಕುವ ಪರಿಸ್ಥಿತಿ ಮೈಸೂರಿನಲ್ಲಿಲ್ಲ. ಅದರಲ್ಲೂ ನಮ್ಮ ರಾಜ್ಯದಲ್ಲಿರುವ ತುಮಕೂರು ಜಿಲ್ಲೆ, ಕೋಲಾರ ಜಿಲ್ಲೆ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಪದೇ ಪದೇ ಪ್ರತಿವರ್ಷವೂ ಕ್ಷಾಮ ಪರಿಸ್ಥಿತಿಯನ್ನು ಎದುರಿಸತಕ್ಕಂಥ ಸ್ಥಿತಿ ಇದ್ದಾಗ್ಯೂ ಈ ವಿಚಾರವನ್ನು ಅನೇಕ ಸಾರಿ ಈ ಸಭೆಯಲ್ಲಿ ಚರ್ಚೆ ಮಾಡಿದ್ದಾಗ್ಯೂ, ಇದಕ್ಕೆ ಶಾಶ್ವತವಾದ ಒಂದು ಪರಿಹಾರವನ್ನು ಸರ್ಕಾರದವರು ಮಾಡಲಿಲ್ಲ ಎಂದು ನಾನು ಇಲ್ಲಿ ಹೇಳಬೇಕಾಗಿದೆ. ಈ ತುರ್ತು ಪರಿಸ್ಥಿತಿಯಲ್ಲೂ ಕೂಡ ನಾವು ಏನೇನು ಸಲಹೆಗಳನ್ನು ಈ ಸಭೆಯಲ್ಲಿ ಕೊಡುತ್ತಿದ್ದೇವೆಯೋ ಆ ಉತ್ತಮವಾದ ಸಲಹೆಗಳನ್ನು ಸರ್ಕಾರದವರು ಕಾರ್ಯರೂಪಕ್ಕೆ ತರದೇ ಹೋದರೆ, ಬಹುಶಃ ಮುಂದೆ ಬಹಳ ಕಠಿಣ ಪರಿಸ್ಥಿತಿಯನ್ನು ನಾವು ಎದುರಿಸಬೇಕಾಗುತ್ತದೆ. ಈ ಕಠಿಣ ಪರಿಸ್ಥಿತಿಯಿಂದ ದೇಶದಲ್ಲಿ ನಾವು ಹೆಚ್ಚು ಕ್ಷಾಮವನ್ನು ನೋಡಬೇಕಾಗುತ್ತದೆ. ಈಗಲಾದರೂ ಕೂಡಾ ನಮ್ಮ ತುಮಕೂರು, ಕೋಲಾರ,...

Mr. SPEAKER.—Now, the member has come to famine. How does famine come here ?

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ನನಗೆ ಇನ್ನೂ ಸ್ವಲ್ಪ ಕಾಲ ಮಾತನಾಡಲು ಅವಕಾಶ ಕೊಡಬೇಕು.

Mr. SPEAKER.—The Hon'ble member has taken 16 minutes. He may conclude new ; his time is up.

ಶ್ರೀ ಕೆ. ಲಕ್ಕಪ್ಪ.—ನನಗೆ ಇನ್ನೂ ಸಾಧಾರಣ 15 ನಿಮಿಷಗಳ ಕಾಲ ಕೊಡಬೇಕು, ನಾಳೆ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—If he interprets in his own way the time allowed to his party will be taken into consideration ; the time taken by him will be counted against that.

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ಈ ಒಂದು ಸಣ್ಣ ನೀರಾವರಿ ಯೋಜನೆ ಏನಿದೆ, ಸರ್ಕಾರ ಅದಕ್ಕೆ ಒಂದು ಖಾತೆಯನ್ನು ಮಾಡಿದ್ದಾರೆ. ಸಣ್ಣ ನೀರಾವರಿ ಯೋಜನೆಯ ಮಂತ್ರಿಗಳು ಬಹುಶಃ ಈ ಸಭೆಯಲ್ಲಿ ಅನೇಕಸಾರಿ ಉತ್ತರ ಕೊಡತಕ್ಕ ರೀತಿ ನೀತಿಗಳನ್ನೂ, ಅವರು ಕಾರ್ಯಗತ ಮಾಡತಕ್ಕ ರೀತಿ ನೀತಿಗಳನ್ನೂ ನೋಡಿದರೆ, ಬಹುಶಃ ತುರ್ತುಪರಿಸ್ಥಿತಿಯಲ್ಲೂ ಕೂಡಾ ಹಿಂದೆ ಯಾವ ರೀತಿ ನಡೆಯುತ್ತಿತ್ತೋ, ಆ ರೀತಿ ನಡೆದುದೇ ಆದರೆ ನಾವು ಬಹಳ ಕಷ್ಟ ಪರಿಸ್ಥಿತಿಯನ್ನು ಕಾಣಬೇಕಾಗುತ್ತದೆ. ಆದ್ದರಿಂದ ಸಣ್ಣ ನೀರಾವರಿ ಯೋಜನೆಗಳನ್ನು ಅತಿ ಜಾಗ್ರತೆಯಾಗಿ ಕಾರ್ಯಗತಗೊಳಿಸಬೇಕು. ಈ ಬಗ್ಗೆ ಶಾಶ್ವತವಾಗಿ ಮಾಡತಕ್ಕ ಕೆಲಸಗಳನ್ನು ನಾಳೆಯಿಂದಲೇ ತ್ವರಿತಗೊಳಿಸಬೇಕೆಂಬ ಸೂಚನೆಗಳನ್ನು ಸರ್ಕಾರದವರು ಅಧಿಕಾರಿಗಳಿಗೆ ಕೊಡಬೇಕು. ಹಿಂದೆ ಇದ್ದಂತ ಪೆಂಡಿಂಗ್ ಕೆಲಸಗಳನ್ನು ಮುಗಿಸದೆ ಯಾರೂ ಹೊಸ ಕೆಲಸಗಳನ್ನು ಮಾಡಬಾರದು ಎಂದು ಮರಾಮತ್ ಇಲಾಖೆಗೆ ಸೂಚನೆ ಕೊಡಬೇಕು. ಈ ಯೋಜನೆಗಳನ್ನು ಕಾರ್ಯಗತ ಮಾಡದಿದ್ದರೆ ಮುಂದೆ ಬಹಳ ಕಷ್ಟವಾಗುವುದು. ಆದುದರಿಂದ ಸಣ್ಣ ನೀರಾವರಿ ಯೋಜನೆಗಳನ್ನು ಎಲ್ಲಿ ಕ್ಷಾಮ ಪರಿಸ್ಥಿತಿ ಇದೆಯೋ ಅಲ್ಲಿ ಕಾರ್ಯಗತ ಮಾಡಿ ಶಾಶ್ವತವಾದ ಪರಿಹಾರವನ್ನು ಕೊಡಬೇಕು.

ಇನ್ನೊಂದು ವಿಷಯವೇನೆಂದರೆ, ಈಗ ಯಾವ ಯಾವ ಜಿಲ್ಲೆಗಳಲ್ಲಿ ಪರಿಹಾರವನ್ನು ಕೊಡಬೇಕೆಂದು ಪರಿಗಣಿಸುತ್ತೀರೋ ಆಯಾ ಜಿಲ್ಲೆಗಳಲ್ಲಿ ನಾಳೆಯೇ ಅತಿ ಜಾಗ್ರತೆಯಾಗಿ ಕೆಲಸವನ್ನು ಪ್ರಾರಂಭ ಮಾಡುವ ಕಾರ್ಯವನ್ನು ಸಿದ್ಧಗೊಳಿಸಬೇಕು ಮತ್ತು ಈ ಯೋಜನೆಗಳನ್ನು ಸರ್ಕಾರದವರು ಶಾಶ್ವತವಾಗಿ ಮಾಡಬೇಕು. ಈ ಕಾರ್ಯವನ್ನು ಬಹಳ ತುರ್ತಾಗಿ ಮಾಡಬೇಕೆಂದು ಸರ್ಕಾರದವರಿಗೆ ಹೇಳಬಯಸುತ್ತೇನೆ.

ಇನ್ನು ಆಹಾರೋತ್ಪಾದನೆಯ ವಿಷಯದಲ್ಲಿ ಸರ್ಕಾರ ಹಾಕಿಗತಕ್ಕ ಯೋಜನೆಗಳ ಪೈಕಿ ಹಣ್ಣು, ತರಕಾರಿ, ಮೀನು, ಮೊಟ್ಟೆ.........

Mr. SPEAKER.—The Hon'ble Member is developing a new point. I wil give him five minutes tomorrow.

Now, the House will adjourn and meet tomorrow at 9 A.M.

The House adjourned at Seven Minutes past Six of the Clock to meet again at Nine of the Clock on Friday the 15th October, 1965.

WD 5571—GPB—500—18-12-1965

MYSORE LEGISLATIVE ASSEMBLY

Friday, 15th October 1965

The House met in the Assembly Chamber, Vidhana Soudha, Bangalore-1, at Nine of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

PAPERS LAID ON THE TABLE.

Sri M. V. KRISHNAPPA (Minister for Revenue).—Sir, I beg to lay on the Table.—

(i) Order No. RD 103 EST 65, dated 30th September 1965 (Remission of stamp duty chargeable) ;

(ii) Order No. RD 135 EST 65, dated 30th September 1965 (Remission of stamp duty chargeable)

as required under sub-section (2) of Section 9 of the Mysore Stamp Act, 1957.

Eleventh Report of the Committee on Private Member's Bills and Resolutions

Sri A. R. PANCHAGAVI (Deputy Speaker).—Sir, I beg to present the Eleventh Report of the Committee on Private Member's Bills and Resolutions.

Mr. SPEAKER.—The Eleventh Report of the Committee on Private Member's Bills and Resolutions is presented.

Sri A. R. PANCHAGAVI.—Sir, I beg to move:

"that this Assembly agrees with the Eleventh report of the Committee on Private Member's Bills and Resolutions."

Mr. SPEAKER.—The question is;

"That the Assembly agrees with the Eleventh Report of the Committee on Private Member's Bills and Resolutions."

The motion was adopted.

Introduction of Bills

Sri R. M. PATIL (Minister for Development, Panchayat Raj and Municipal Administration).—Sir, I beg to introduce the Mysore Local Authorities (Postponement of Elections and Continuance of Administrators) Bill, 1965.

Mr. SPEAKER.—The Mysore Local Authorities (Postponement of Elections and Continuance of Administrators) Bill, 1965, is introduced.

MOTION re: MEASURES TO STEP UP FOOD PRODUCTION AND TO PREVENT ANY SCARCITY IN THE STATE—discussion continued.

†ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಸ್ವಾಮಿ, ನೆನ್ನೆ ದಿವಸ ಈ ಒಂದು ತುರ್ತು ಪರಿಸ್ಥಿತಿಯ ಆಧಾರದ ಮೇಲೆ ಆಹಾರೋತ್ಪಾದನೆಯನ್ನು ದೇಶದಲ್ಲಿ ಜಾಸ್ತಿ ಮಾಡತಕ್ಕಂಥ ಬಗ್ಗೆ ಸೂಚನೆಗಳನ್ನು ಹೇಳುತ್ತಾ ಮುಖ್ಯವಾದಂಥ ಆಹಾರ ಪದಾರ್ಥಗಳಾದ ಬತ್ತ ಮತ್ತು ರಾಗಿ ಅದರ ಜೊತೆಗೆ ಉತ್ತಮವಾದಂಥ ಹಣ್ಣು, ಹಾಲು, ತರಕಾರಿಗಳನ್ನು ಬೆಳೆಯುತಕ್ಕ ಯೋಜನೆ ಬಹುಶಃ ಹಳ್ಳಿಗಳಲ್ಲಿಯೂ ಕೂಡ ಏನೂ ಪ್ರಯೋಜನವಾಗಲಿಲ್ಲ. ನಮ್ಮ ಮಾನ್ಯ ರೆವಿನ್ಯೂ ಸಚಿವರು ಬೆಂಗಳೂರಿನಲ್ಲಿ ಹಾಲಿನ ಕೇಂದ್ರವನ್ನು ತೆಗೆದು ಹಾಲನ್ನು ಎಲ್ಲಾ ಕಡೆಗಳಲ್ಲಿಯೂ ಸರಬರಾಜು ಮಾಡಬೇಕೆಂದು ಬಹಳ ಉತ್ಸಾಹದಿಂದ ಹೊರಟರು. ಆದರೆ ಆ ಉತ್ಸಾಹ ಅನೇಕ ಕಾರಣಗಳಿಂದ ಏನು ಪ್ರಯೋಜನವನ್ನು ಕೊಡಬೇಕಾಗಿತ್ತೋ ಮತ್ತು ಏನು ಅದರಿಂದ ಪರಿಣಾಮವಾಗಬೇಕಾಗಿತ್ತೋ ಅದು ಅಷ್ಟು ಉತ್ತಮ ಪರಿಣಾಮವಾಗಲಿಕ್ಕಾಗಲಿಲ್ಲ. ಅಷ್ಟು ತೃಪ್ತಿಯಾಗಿ ಈ ಯೋಜನೆ ಸಾಗಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ಹಾಲು ಯೋಜನೆ ಈಗಾಗಲೇ ಕೆಲವು ಕಡೆ ಜಾರಿಗೆ ಕೊಟ್ಟಿದೆ. ಇನ್ನು ಕೊಡುತ್ತೇವೆ. ಮೊದಲನೆಯ ವರ್ಷದಲ್ಲಿಯೇ ಎಲ್ಲಾ ಕಡೆಯೂ ಈ ಯೋಜನೆಯನ್ನು ತರಲಿಕ್ಕಾಗುವುದಿಲ್ಲ. ಇದು ಬಹಳ ದೊಡ್ಡ ಪ್ರಾಜೆಕ್ಟ್. ಬಹುಶ: ಮೊದಲನೇಯ ವರ್ಷ ಬೆಂಗಳೂರು ಡೈರಿ ಈಗ 25 ಸಾವಿರ ಪೌಂಡು ಪೂರೈಕೆ ಮಾಡುತ್ತಿದ್ದು ವರ್ಷಾಂತ್ಯದಲ್ಲಿ ಅದು 50 ಸಾವಿರ ಪೌಂಡುಗಳಿಗೇರಬಹುದೆಂದು ನಾನು ಹೇಳುತ್ತೇನೆ. ಇದು ಹೀಗೆಯೇ ಇನ್ನು ಮುಂದೆ ಎರಡನೇವರ್ಷ ಎರಡುಲಕ್ಷ, 3ನೇ ವರ್ಷ 3ಲಕ್ಷ ಪೌಂಡು 5ನೇ ವರ್ಷದಲ್ಲಿ ಹಾಲು ವಿತರಣೆಯು 5 ಲಕ್ಷ ಪೌಂಡುಗಳಿಗೇರಬಹುದೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ಈಗ ಏನು ಹಾಲು ಯೋಜನೆಗಳನ್ನು ಹಾಕಿದ್ದಾರೋ ಅವು ಯಶಸ್ವಿಯಾಗಬೇಕಾದರೆ ಅವನ್ನು ಎಲ್ಲಾ ಹಳ್ಳಿಗಳಿಗೂ ಕೂಡ ಹಾಕಬೇಕೆಂದು ಹೇಳುತ್ತೇನೆ. ಎಲ್ಲಾ ಹಳ್ಳಿಗಳಲ್ಲಿಯೂ ಸಾಮಾನ್ಯವಾಗಿ ಬಡವರೇ ಹೆಚ್ಚು. ಈಗ ಏನು ಸಹಕಾರ ಸಂಘಗಳ ಮೂಲಕ ಹಾಲಿನ ಕೇಂದ್ರಗಳನ್ನು ತೆರೆಯಬೇಕೆಂದು ಮಾಡಿದ್ದಾರೋ ಅದೇ ರೀತಿ ಪ್ರತಿಯೊಂದು ಸಹಕಾರ ಸಂಘದ ಮೂಲಕವಾಗಲೀ ಅಥವಾ ಪಂಚಾಯತಿ ಮೂಲಕವಾಗಲೀ ಹಾಲು ಕರೆಯುತಕ್ಕ ಉತ್ತಮ ತಳಿ ಸಾಕಾಣಿಕೆ ಕಾರ್ಯವನ್ನು ತ್ವರಿತವಾಗಿ ಮಾಡಬೇಕಾಗಿದೆ. ಈಗಿನ ತುರ್ತು ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಅತಿ ಜಾಗ್ರತೆಯಾಗಿ ನಾವು ಇಲ್ಲಿ ಏನೇನು ಸೂಚನೆಗಳನ್ನು ಮಾಡುತ್ತೇವೋ ಆ ಪ್ರಕಾರ ಸರ್ಕಾರದವರು ಆ ಬಗ್ಗೆ ತಕ್ಕ ಕ್ರಮ ತೆಗೆದುಕೊಂಡು ನಾಳೆಯೇ ಅದು ಹಳ್ಳಿಯವರೆಲ್ಲರಿಗೂ ಮುಟ್ಟುವ ಹಾಗೆ ಸರ್ಕಾರದವರು ವ್ಯವಸ್ಥೆ ಮಾಡಬೇಕು. ಈಗ ಬೆಳೆಯೇನೋ ಹೋಗಿದೆ. ರಾಗಿ ಅಥವಾ ಭತ್ತ ಇತರ ಯಾವ ಬೆಳೆಯೂ ಈ ವರ್ಷ ಚೆನ್ನಾಗಿ ಆಗುವುದೇನೋ ಸಂದೇಹಾಸ್ಪದವಾಗಿದೆ. ಆದ್ದರಿಂದ ಅತಿ ಜಾಗ್ರತೆಯಾಗಿ ತರಕಾರಿ ಅಥವಾ ಹಣ್ಣುಗಳನ್ನು ಯಥೇಚ್ಛವಾಗಿ ಬೆಳೆಯಬೇಕು. ಈಗಾಗಲೇ ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ಶಿವಪ್ಪನವರು ಹೇಳಿದಹಾಗೆ ಬರೀ ಗಂಜಿ ಕೇಂದ್ರಗಳನ್ನಾದರೂ ಜಾಗ್ರತೆಯಾಗಿ ತೆರೆದರೆ ಬಹಳ ಒಳ್ಳೆಯದು. ಅವರು ಬಹಳ ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ. ಅದರ ಜೊತೆಗೆ ಒಂದೆರಡು ತಿಂಗಳಲ್ಲಿ ಚೆನ್ನಾಗಿ ಬೆಳೆಯಾಗಿ ಬರತಕ್ಕ ತರಕಾರಿಗಳನ್ನು ಬೆಳೆಯಬೇಕು. ಈ ಯೋಜನೆ ಯಶಸ್ವಿಯಾಗಿ ನಡೆಯಬೇಕು. ಈ ಪ್ರಯೋಗ

---

†Indicates that the speeches or remarks have not been revised by the member concerned.

ಗಳು ಇನ್ನು 3-4 ವರ್ಷಗಳಲ್ಲಿ ಎಲ್ಲಾ ಗ್ರಾಮಗಳಲ್ಲಿ ನಡೆದರೆ ಬಹಳ ಒಳ್ಳೆಯದು ಎಂಬುದಾಗಿ ನಾನು ಶ್ರೀಮಾನ್ ಜತ್ತಿಯವರಿಗೆ ಹೇಳುತ್ತೇನೆ. ಏಕೆಂದರೆ ಈಗ ಯಾವ ರೈತನಲ್ಲೂ ಕೂಡ ಒಂದು ಕಾಳು ದವಸವಿಲ್ಲ ದನಕರುಗಳಿಗೆ ಹುಲ್ಲು ಇಲ್ಲ, ನೀರಿಲ್ಲ. ಆದ್ದರಿಂದ ಸಾಕಷ್ಟು ಕುಡಿಯುವ ನೀರಿನ ಬಾವಿಗಳನ್ನು ಕೂಡಲೇ ಹೆಚ್ಚಿಗೆ ತೆಗೆಸಬೇಕು. ಅದಕ್ಕಾಗಿ ಹಣ ಕ್ಷಿಪ್ರವಾಗಿ ರೈತರಿಗೆ ಮುಟ್ಟುವಂತೆ ವ್ಯವಸ್ಥೆ ಮಾಡಬೇಕು. ಈ ಬಗ್ಗೆ ಸರ್ಕಾರದ ಸಂದೇಶವೇನಿದೆ ಅದನ್ನು ಎಲ್ಲಾ ತಾಲ್ಲೂಕುಗಳ ಮಟ್ಟಕ್ಕೂ ಜಿಲ್ಲೆಗಳ ಮಟ್ಟಕ್ಕೂ ತಿಳಿಸಿ ಕೂಡಲೇ ಕಾರ್ಯಾರಂಭವಾಗಬೇಕು. ಜಪಾನಿನಲ್ಲಿ ನೆಲ ಪೂರ್ತಿ ಫಲವತ್ತಾಗಿಲ್ಲ. ನಾನೇನೋ ಜಪಾನಿಗೆ ಹೋಗಿಲ್ಲ. ಈ ವಿಷಯವನ್ನು ನಾನು ಚೆನ್ನಾಗಿ ತಿಳಿದಿದ್ದೇನೆ. ಅಲ್ಲಿ ಅಣುಬಾಂಬುಗಳು ಬಿದ್ದು ಅಲ್ಲಿನವರು ಅನೇಕ ತೊಂದರೆಗಳಿಗೀಡಾಗಿದ್ದಾರೆ. ಅಂಥಾದ್ದರಲ್ಲಿ ಅಲ್ಲಿನವರು ಬಹಳ ಕಷ್ಟಪಟ್ಟು ಜಮೀನುಗಳಲ್ಲಿ ಕೆಲಸ ಮಾಡಿ ಫಲವತ್ತಾಗಿಲ್ಲದೇ ಇರತಕ್ಕ ಭೂಮಿಯಲ್ಲಿಯೂ ಒಳ್ಳೆಯ ಬೆಳೆಯನ್ನು ಬೆಳೆಯತಕ್ಕ ಕ್ರಮವನ್ನು ಅನುಸರಿಸುತ್ತಿದ್ದಾರೆ. ಈ ಕ್ರಮವನ್ನು ಮೈಸೂರು ಸರ್ಕಾರದವರು ಮೊಟ್ಟಮೊದಲು ಅನುಸರಿಸಬೇಕು. ಎಲ್ಲಿ ಸ್ವಲ್ಪ ಭೂಮಿ ಇರುತ್ತದೋ ಅಲ್ಲಿ ನೀರು ಸಿಕ್ಕುವಂತೆ ಮಾಡಬೇಕು ಈ ರೀತಿಯಾಗಿ ರೈತರಿಗೆ ಎಲ್ಲಾ ಅನುಕೂಲತೆಗಳನ್ನು ದೊರಕಿಸುವ ಯೋಜನೆಗಳನ್ನು ಸರ್ಕಾರದವರು ಮಾಡಬೇಕು.

ಇನ್ನು ಸಣ್ಣ ನೀರಾವರಿ ಯೋಜನೆಗಳ ಬಗ್ಗೆ ನಾನು ಒಂದು ಮಾತನ್ನು ಹೇಳಬೇಕಾಗಿದೆ. ಪ್ರತಿಯೊಂದು ಹಳ್ಳಿಗೂ ಒಂದು ಕೆರೆ ಕಡ್ಡಾಯವಾಗಿ ಇರಬೇಕೆಂಬ ವಿಚಾರದ ಕಡೆ ನಮ್ಮ ಸರ್ಕಾರದ ಗಮನ ಹೋಗಿಲ್ಲವೆಂದು ಕಾಣುತ್ತದೆ. ಯಾವ್ಯಾವ ಹಳ್ಳಿಗಳಲ್ಲಿ ನೀರಾವರಿ ಸೌಲಭ್ಯಗಳಾಗಬೇಕೆಂದು ಏನೇನು ಯೋಜನೆಗಳನ್ನು ಹಾಕಿಕೊಂಡಿದ್ದರೋ ಆ ಯೋಜನೆಗಳನ್ನೆಲ್ಲಾ ಇನ್ನು ಸರಿಯಾಗಿ ಕಾರ್ಯಗತವಾಗುತ್ತಿಲ್ಲ ಇಂತಹ ಯೋಜನೆಗಳು ಈಗಾಗಲೇ ಕಾರ್ಯಗತವಾಗಿದ್ದರೆ ಬಹುಶಃ ಈ ದಿವಸ ಇರತಕ್ಕಂಥ ಒಂದು ಆಹಾರದ ಅಭಾವವನ್ನೇ ನಾವು ಕಾಣುತ್ತಿರಲಿಲ್ಲ. ಚಿತ್ರದುರ್ಗ ಮತ್ತು ಕೋಲಾರ ಜಿಲ್ಲೆಗಳಲ್ಲಿ ಪುನಃ ಪುನಃ ಕ್ಷಾಮ ಪರಿಸ್ಥಿತಿ ಉಂಟಾಗುತ್ತಲೇ ಇರುತ್ತದೆ. ಅದಕ್ಕಾಗಿ ಶಾಶ್ವತವಾಗಿ ಪರಿಹಾರ ಕ್ರಮಗಳನ್ನು ಕೈಗೊಳ್ಳುತ್ತೇವೆಂಬ ಭರವಸೆಯನ್ನು ಈ ಸಭೆಯಲ್ಲಿ ಅನೇಕ ಸಾರಿ ಈ ಸರ್ಕಾರದವರೇ ಕೊಟ್ಟಿದ್ದಾರೆ. ಆ ಶಾಶ್ವತ ಪರಿಹಾರ ಕ್ರಮವೆಲ್ಲ, ಅದೇನಾಯಿತು ಎಂಬುದಾಗಿ ನಾನು ಈ ಸಂದರ್ಭದಲ್ಲಿ ಸರ್ಕಾರದವರನ್ನು ಪ್ರಶ್ನೆ ಮಾಡುತ್ತೇನೆ.

ಇನ್ನು ವ್ಯವಸಾಯ ಇಲಾಖೆಯ ವಿಷಯ. ಇದರಲ್ಲಿ ಅಧಿಕಾರಿಗಳ ಗುಂಪು ಇದೆಯೋ ಹೊರ್ತು ಈ ಇಲಾಖೆ ನಿಜವಾಗಿ ಸರಿಯಾದ ರೀತಿಯಲ್ಲಿ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲವೆಂಬುದಾಗಿ ಎಷ್ಟೋ ವೇಳೆ ಜನರು ಪತ್ರಿಕೆಗಳಲ್ಲಿ ಟೀಕೆಗಳನ್ನು ಮಾಡಿದ್ದಾರೆ. ನಾವೂ ಸಹ ಈ ಮಾನ್ಯ ಸಭೆಯಲ್ಲಿ ಅನೇಕ ಸಾರಿ ಹಿಂದೆ ಈ ಮಾತನ್ನು ಹೇಳಿದ್ದೇವೆ. ಇತ್ತೀಚೆಗೆ ಸರ್ಕಾರದವರು ಅಧಿಕವಾಗಿ ಆಹಾರೋತ್ಪಾದನೆ ಮಾಡಬೇಕೆಂದು ಎಷ್ಟೋ ಪ್ರಕಟಣೆಗಳನ್ನೂ ಸಹ ಹೊರಡಿಸುತ್ತಿದ್ದಾರೆ. ಯಾವಾಗ ತುರ್ತು ಪರಿಸ್ಥಿತಿ ಇದೆಯೋ ಅಂತಹ ಕಾಲದಲ್ಲಿ ಆಹಾರ ಇಲಾಖೆಯಲ್ಲಿ ಈ ರೀತಿಯಾಗಿ ಕೆಲಸ ಮಾಡಬೇಕೆಂದು ಹೇಳುತ್ತಾರೆ, ಆದರೆ 1965ನೇ ಇಸವಿಯಲ್ಲಿ ಸೀನಿಯಾರಿಟಿ ಪಟ್ಟಿಯೊಂದನ್ನು ತಯಾರು ಮಾಡುತ್ತಿದ್ದಾರೆ. ಇದರೊಳಗೆ ತುಂಬಾ ಅನ್ಯಾಯವಾಗಿರುವುದರಿಂದ ಬಹುಭಾಗ ಹೈದರಾಬಾದ್ ಕರ್ಣಾಟಕದೊಳಗೆ, ಕೊಡಗು ಪ್ರಾಂತದೊಳಗೆ ಹಳೆಯ ಮೈಸೂರಿನ ಕೆಲವು ಭಾಗಗಳಲ್ಲಿ ಕೆಲಸ ಮಾಡತಕ್ಕವರಿಗೆ ಜಿಗುಪ್ಸೆ ಉಂಟಾಗುತ್ತಿದೆ. ಆದ್ದರಿಂದ ವ್ಯವಸಾಯ ಇಲಾಖೆಯಲ್ಲಿ ಕೆಲಸಮಾಡತಕ್ಕ ಅಧಿಕಾರಿಗಳಲ್ಲಿ ಒಂದು ರೀತಿಯ ಆಲಸ್ಯ ಮನೋಭಾವ ಬೆಳೆದರೆ ಅದರಿಂದ ತುಂಬಾ ಕಷ್ಟವಾಗುತ್ತದೆ. ಆದ್ದರಿಂದ ಮುಖ್ಯವಾಗಿ ಈ ಆಹಾರ ಇಲಾಖೆ ಹಾಗೂ ವ್ಯವಸಾಯ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳಲ್ಲಿ ಜಿಗುಪ್ಸೆವುಂಟಾಗಿ ಅವರು ಮಾಡತಕ್ಕ ಕಾರ್ಯದಕ್ಷತೆ ಕಡಿಮೆಯಾದರೆ ಸರ್ಕಾರ ಏನು ಇಂತಹ ತುರ್ತು ಪರಿಸ್ಥಿತಿಯಲ್ಲಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರಬೇಕೆಂದು ಕ್ರಮ ತೆಗೆದುಕೊಂಡರೂ ಅವೆಲ್ಲವೂ ಸಫಲವಾಗದೇ ಇರುವ ಸಂದರ್ಭಗಳು ಇರುತ್ತವೆ. ಆದ್ದರಿಂದ, ಈಗಲಾದರೂ ಸರ್ಕಾರದವರು ಹಿಂದೆ 1962ರಲ್ಲಿ ಮಾಡಿದ್ದಂತಹ ಸೀನಿಯಾರಿಟಿ ಪಟ್ಟಿಯನ್ನು ವಿಮರ್ಶೆ ಮಾಡಿ ಸೂಕ್ತವಾಗಿ ಯಾವ್ಯಾವ ಅಧಿಕಾರಿಗಳಿಗೆ ಯಾವ್ಯಾವ ರೀತಿಯಲ್ಲಿ ಬಡ್ತಿಯನ್ನು ಕೊಡಬೇಕೆಂಬುದನ್ನು ಪುನರ್ಪರಿಶೀಲನೆ ಮಾಡುವುದು ಯೋಗ್ಯ, ಅದು ಈಗ ಅವಶ್ಯಕವಿದೆ. ಈ ವಿಚಾರವನ್ನು ಮಂತ್ರಿಮಂಡಲ ಬಹಳ ತುರ್ತಾಗಿ ಯೋಚನೆ ಮಾಡಬೇಕಾಗಿದೆ. ಈ ದಿವಸ ಸರ್ಕಾರದ ಕೆಲವು ಯೋಜನೆಗಳು ವ್ಯವಸಾಯ ಇಲಾಖೆಯಲ್ಲಿ ಪ್ರಾರಂಭವಾಗಿದ್ದರೂ ಅವು ಇನ್ನೂ ಕಾರ್ಯಗತವಾಗದೇ ಇರುವುದಕ್ಕೆ ಅಧಿಕಾರಿಗಳಲ್ಲಿರತಕ್ಕ ಒಂದು ರೀತಿಯ ಆಲಸ್ಯ ಮನೋಭಾವ ಹಾಗೂ ಜಿಗುಪ್ಸೆಯೇ ಕಾರಣವೆಂದು ನಾನು ಈಗ ಹೇಳಬೇಕಾಗಿದೆ. ಅವರು ಈ ಒಂದು ಅಂತರ ರಾಜ್ಯ ಸೀನಿಯಾರಿಟಿ ಪಟ್ಟಿ ಇನ್ನು ತೀರ್ಮಾನವಾಗದೆ ಇರುವುದರಿಂದಲೇ ಯಾವ ಕೆಲಸಗಳೂ ಆಗುತ್ತಿಲ್ಲ. ಕಾಲವಿಳಂಬವಾಗುತ್ತಿದೆ. ಈ ವಿಚಾರವನ್ನು ಸರ್ಕಾರದವರು ಕೂಡಲೆ ಪರಿಶೀಲಿಸಬೇಕೆಂದು ನಾನು ಒತ್ತಾಯವಾಗಿ ಸರ್ಕಾರಕ್ಕೆ ಹೇಳಬಯಸುತ್ತೇನೆ.

(ಶ್ರೀ ಕೆ. ಲಕ್ಕಪ್ಪ)

ಪ್ರತಿ ಜಿಲ್ಲೆಯಲ್ಲಿಯೂ ಕೂಡ ತುರ್ತು ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ನಮ್ಮ ಶಾಸನ ಸಭಾ ಸದಸ್ಯರುಗಳನ್ನೂ, ಹಳ್ಳಿಯ ಖಾಸಗೀ ಜನಗಳನ್ನೂ ಮತ್ತು ರೈತರುಗಳನ್ನೂ ಒಳಗೊಂಡಂತಹ ಒಂದು ಕಮಿಟಿಯನ್ನು ಪ್ರತಿಯೊಂದು ಜಿಲ್ಲೆಯಲ್ಲಿಯೂ ಮಾಡಿ ಆ ಕಮಿಟಿಯವರು ಕೊಡತಕ್ಕ ಸೂಚನೆಗಳನ್ನು ತೆಗೆದುಕೊಂಡು ಆಯಾಯ ತಾಲ್ಲೂಕುಗಳಲ್ಲಿ, ಆಯಾಯ ಜಿಲ್ಲೆಗಳಲ್ಲಿ ಇರತಕ್ಕ ಪರಿಸ್ಥಿತಿಗನುಗುಣವಾಗಿ ಜಾಗ್ರತೆಯಾಗಿ ಕೆಲಸಗಳನ್ನು ಮಾಡಬೇಕೆಂದು ನಾನು ಒತ್ತಾಯದಿಂದ ಹೇಳುತ್ತೇನೆ. ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು).— ಸ್ವಾಮಿ, ಈಗ ನಮ್ಮ ಮುಂದೆ ಇಟ್ಟಿರತಕ್ಕ ನಿರ್ಣಯ ಬಹಳ ಪ್ರಾಮುಖ್ಯವಾದದ್ದು. ನಮ್ಮ ಮೈಸೂರು ದೇಶವೇ ಅಲ್ಲ, ಇಡೀ ಹಿಂದೂಸ್ಥಾನದ ಜನತೆಯ ಸ್ವಾತಂತ್ರ್ಯ ಮತ್ತು ಅಭಿವೃದ್ಧಿಯ ವಿಷಯದಲ್ಲಿ ಬಹಳ ಪ್ರಾಮುಖ್ಯವಾದ ಈ ನಿರ್ಣಯದ ಬಗ್ಗೆ ಕೆಲವು ಮಾತುಗಳನ್ನು ಆಡಲು ನಾನು ಇಷ್ಟಪಡುತ್ತೇನೆ. ದೇಶದಲ್ಲಿ ಇವತ್ತಿನ ಪರಿಸ್ಥಿತಿಯನ್ನು ನೋಡಿದರೆ ಹಿಂದೂಸ್ಥಾನದಲ್ಲಿ ಅನೇಕ ವಿಧವಾದ ಕಷ್ಟಗಳನ್ನು ನಾವು ಎದುರಿಸತಕ್ಕ ಕಾಲ ನಮಗೆ ಸನ್ನಿಹಿತವಾಗಿದೆ. ನಮ್ಮ ದೇಶಕ್ಕೆ ಶತೃಗಳ ತೊಂದರೆ ಎಷ್ಟಿದೆಯೋ ಅದೇ ರೀತಿಯಲ್ಲಿ ನಮ್ಮ ದೇಶದಲ್ಲಿ ಆಹಾರದ ಕೊರತೆ ಇದೆ. ಈ ದೇಶದ ಪ್ರಜೆಗಳಾಗಿರತಕ್ಕ ನಮಗೆ ಇದು ತುಂಬಾ ವ್ಯಸನವನ್ನುಂಟು ಮಾಡತಕ್ಕ ವಿಷಯವಾಗಿದೆ. ಇದನ್ನು ಹೇಗೆ ಪರಿಹರಿಸಬೇಕೆಂಬುದನ್ನು ಪರಿಶೀಲನೆ ಮಾಡಬೇಕು. ನಮ್ಮ ದೇಶದಲ್ಲಿ ಹೆಚ್ಚಿಗೆ ಆಹಾರ ಪದಾರ್ಥಗಳನ್ನು ಬೆಳೆಯುವುದಕ್ಕೆ ಪ್ರೋತ್ಸಾಹ ಕೊಡತಕ್ಕದ್ದು ಪ್ರಾಮುಖ್ಯವಾದ ವಿಷಯ. ಹಾಗೆಯೇ ನಮ್ಮ ದೇಶದಲ್ಲಿ ಆಹಾರದ ವಿತರಣೆಯನ್ನು ಹೇಗೆ ಮಾಡಬೇಕು ಎನ್ನತಕ್ಕ ವಿಷಯವನ್ನೂ ಕೂಡ ಕೂಲಂಕಷವಾಗಿ ವಿಮರ್ಶೆ ಮಾಡಿ ಅದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಬೇಕು. ನಮ್ಮ ದೇಶದಲ್ಲಿ ಮುಂದೆ ಎಂದೂ ಆಹಾರದ ಕೊರತೆ, ಆಹಾರದ ಕುಂದು ಬಾರದ ಹಾಗೆ ಆಹಾರೋತ್ಪಾದನೆಯನ್ನು ಮಾಡಲು ವ್ಯವಸಾಯಕ್ಕೆ ಬೇಕಾದ ಸೌಲಭ್ಯಗಳನ್ನು ಒದಗಿಸುವುದು ಬಹಳ ಪ್ರಾಮುಖ್ಯವಾದ ವಿಷಯ. ಈ ವರ್ಷ ದೇಶದಲ್ಲಿ ಮಳೆಯ ಅಭಾವದಿಂದ ಉಂಟಾಗಿರತಕ್ಕ ಆಹಾರದ ಪರಿಸ್ಥಿತಿಯನ್ನು ನೋಡಿದರೆ ಹಳ್ಳಿಗಾಡಿನಲ್ಲಿ ಜನತೆಯ ಪರಿಸ್ಥಿತಿ ತುಂಬಾ ಚಿಂತಾಜನಕವಾಗಿದೆ. ಇದನ್ನು ನಾವೆಲ್ಲರೂ ಅರಿತುಕೊಂಡಿದ್ದೇವೆ. ವರ್ಷಕ್ಕೆ 200 ಇಂಚು ಮಳೆ ಬೀಳತಕ್ಕ ಮಲೆನಾಡಿನಲ್ಲಿ ಅನೇಕ ದಿವಸಗಳಿಂದ ಮಳೆಯೇ ಬಿದ್ದಿಲ್ಲ. ಬರೀ ಮಳೆಯ ನೀರಿನಿಂದಲೇ ಬತ್ತವನ್ನು ಬೆಳೆಯತಕ್ಕ ಗದ್ದೆಗಳಲ್ಲೆಲ್ಲಾ ಪೈರು ನಾಟಿ ಹಾಕಿದ್ದೆಲ್ಲವೂ ಒಣಗಿ ಹೋಗಿ ಗದ್ದೆಗಳಲ್ಲಿ ಬಿರುಕು ಬಿಟ್ಟಿರತಕ್ಕಂಥ ಕಠಿಣ ಪರಿಸ್ಥಿತಿಯನ್ನು ನೋಡಲು ತುಂಬಾ ವ್ಯಸನಕರವಾಗಿದೆ. ಅತಿ ಕಡಿಮೆ ಮಳೆ ಬೀಳತಕ್ಕ ದೇಶಗಳಲ್ಲಿ ಅವರು ಹೆಚ್ಚು ಬೆಳೆಯನ್ನು ಬೆಳೆದು ದೇಶಕ್ಕೆ ಹೆಚ್ಚು ಆಹಾರವನ್ನು ಒದಗಿಸುತ್ತಿದ್ದಾರೆ. ಅಂದ ಮೇಲೆ ವರ್ಷವೆಲ್ಲಾ ಮಳೆಬೀಳತಕ್ಕ ವಾತಾವರಣವಿರತಕ್ಕ ನಮ್ಮ ದೇಶದಲ್ಲಿ ಏತಕ್ಕೋಸ್ಕರ ಈ ರೀತಿ ಆಹಾರದ ಅಭಾವವುಂಟಾಗುತ್ತಿದೆ, ಹೇಗೆ ಇದನ್ನು ನಿವಾರಣೆ ಮಾಡಬೇಕು ಎನ್ನುವುದೂ ಕೂಡ ಬಹಳ ಪ್ರಾಮುಖ್ಯವಾದ ವಿಷಯ. ಮಲೆನಾಡಿನಲ್ಲಿ ಸರಿಯಾಗಿ ಮಳೆ ಬಂದರೆ ವ್ಯವಸಾಯ ಚೆನ್ನಾಗಿ ನಡೆಯುತ್ತದೆ. ಆದ್ದರಿಂದ ಅಲ್ಲಿ ಸರಿಯಾಗಿ ಮಳೆ ಬಿದ್ದಿದ್ದರೆ ಅಲ್ಲಿನ ರೈತರು ಸರ್ಕಾರದಿಂದ ಯಾವ ರೀತಿಯ ಸಹಾಯವನ್ನೂ ಕೇಳತಕ್ಕ ಮನಸ್ಸನ್ನು ಅವರು ಮಾಡುತ್ತಾ ಇರಲಿಲ್ಲ. ಈಗ ಅಲ್ಲಿ ಮಳೆ ಬಾರದೆ ಇರುವುದರಿಂದ ಆ ಪ್ರದೇಶಕ್ಕೆ ಸರ್ಕಾರದವರು ತೀವ್ರವಾದ ಗಮನವನ್ನು ಕೊಡಬೇಕಾಗಿದೆ. ಸಣ್ಣ ನೀರಾವರಿ ವಿಷಯದಲ್ಲಿ ಸರ್ಕಾರದವರು ಹೆಚ್ಚು ಗಮನವನ್ನು ಕೊಡುವುದು ಪ್ರಾಮುಖ್ಯವಾದ ವಿಷಯ. ಬಹಳ ಹಿಂದಿನ ಕಾಲದಲ್ಲಿ ಕಟ್ಟಿರತಕ್ಕ ಕೆರೆಗಳಲ್ಲಿ ಹೂಳು ತುಂಬಿಕೊಂಡಿರತಕ್ಕದ್ದನ್ನು ತೆಗೆಸುವುದು ಮತ್ತು ಕೆರೆಗಳ ಜೀರ್ಣೋದ್ಧಾರವನ್ನು ಮಾಡತಕ್ಕದ್ದೂ ಪ್ರಾಮುಖ್ಯವಾದ ವಿಷಯ. ಆ ಕೆಲಸಗಳನ್ನೆಲ್ಲಾ ಮಾಡುವುದಕ್ಕಾಗಿ ಸರ್ಕಾರದವರು ಅಧಿಕಾರಿಗಳನ್ನ ನೇಮಿಸಿ ಅದರ ಬಗ್ಗೆ ಒಂದು ವರದಿಯನ್ನು ತರಿಸಿಕೊಂಡಿದ್ದಾರೆ. ಆದರೆ ಅದನ್ನು ಕಾರ್ಯಗತ ಮಾಡಿಲ್ಲ. ಆದ್ದರಿಂದ ಆ ವಿಷಯದಲ್ಲಿ ಸರ್ಕಾರದವರು ಆದಷ್ಟು ಜಾಗ್ರತೆ ನಿಗಾ ಕೊಡದೇ ಹೋದರೆ ಸರ್ಕಾರದವರು ಇದುವರೆಗೂ ಮಾಡಿರತಕ್ಕ ಯೋಜನೆಗಳು ಮತ್ತು ಸಲಹೆಗಳೆಲ್ಲವೂ ಬರೀ ಮಾತಿನ ರೂಪದಲ್ಲಿ ಉಳಿದುಕೊಳ್ಳುತ್ತವೆಯೇ ಹೊರತು ಅವು ಕೃತಿಯಲ್ಲಿ ಬರುವುದಿಲ್ಲ ಎಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು. ದೇಶದಲ್ಲಿ ಆಹಾರದ ಪರಿಸ್ಥಿತಿ ಉತ್ತಮವಾಗಬೇಕು ಎನ್ನುವ ದೃಷ್ಟಿಯಿಂದ ಸರ್ಕಾರದವರು ಅನೇಕ ದೊಡ್ಡ ದೊಡ್ಡ ನೀರಾವರಿ ಕಾಮಗಾರಿಗಳನ್ನು ಪ್ರಾರಂಭ ಮಾಡಿದ್ದಾರೆ. ಅದು ಉಪಯುಕ್ತವಾದ ವಿಷಯವಾಗಿದ್ದರೂ ಸಹ ಅವುಗಳಿಂದ ಪ್ರತಿಫಲ ಬರಬೇಕಾದರೆ ಅನೇಕ ವರ್ಷಗಳು ಹಿಡಿಯುತ್ತದೆ. ಆದ್ದರಿಂದ ಈಗ ದೇಶದ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ದೊಡ್ಡ ದೊಡ್ಡ ಕೆರೆಗಳನ್ನು ಮತ್ತು

ಜಲಾಶಯುಗಳನ್ನೂ ಕಟ್ಟುವುದರಿಂದ ಅಷ್ಟಾಗಿ ಪ್ರಯೋಜವಾಗಿಲ್ಲ ಎಂಬುದನ್ನು ಜನ ಅರ್ಥಮಾಡಿಕೊಂಡಿದ್ದಾರೆ. ಅದರ ದೆಶೆಯಿಂದ ಆ ಕೆಲಸಗಳನ್ನು ಸ್ವಲ್ಪ ನಿಧಾನವಾಗಿ ತೆಗೆದುಕೊಳ್ಳಲು ಯೋಚನೆ ಮಾಡಿಕೊಂಡು ಸಣ್ಣ ನೀರಾವರಿ ಕಾಮಗಾರಿಗಳಿಗೆ ಹೆಚ್ಚಿನ ನಿಗಾವನ್ನು ಕೊಡಬೇಕೆಂದು ನಾನು ಸರ್ಕಾರದವರಿಗೆ ತಿಳಿಸುತ್ತೇನೆ. ಸರ್ಕಾರದವರು ಬಾವಿಗಳನ್ನು ತೋಡಿಸಿ ಇರಿಗೇಷನ್ ಪಂಪುಸೆಟ್ಟುಗಳನ್ನ ಹಾಕಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಒಂದು ಉದ್ದೇಶವನ್ನು ಇಟ್ಟುಕೊಂಡಿದ್ದಾರೆ. ಅದರೆ ಇದುವರೆವಿಗೂ ಸಹ ನಮ್ಮ ಜಿಲ್ಲೆಯಲ್ಲಿ ಹೆಚ್ಚಿನ ಬಾವಿಗಳನ್ನು ತೋಡತಕ್ಕ ಅನುಕೂಲಗಳು ಕಡಿಮೆ ಇದ್ದರೂ ಸಹ ಈಗಾಗಲೇ ತೋಡಿರತಕ್ಕ ಕೆಲವು ಬಾವಿಗಳಿಗೆ ಪಂಪುಸೆಟ್ಟುಗಳನ್ನು ಒದಗಿಸಿ ಅವುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸತಕ್ಕ ಕಾರ್ಯವನ್ನು ಮಾಡಿಲ್ಲ. 3-4 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಅದರಿಂದ ಪ್ರತಿಫಲವನ್ನು ಹೊಂದಲು ಅನುಕೂಲವಿಲ್ಲದೆ ಅವರು ತೊಂದರೆ ಪಡುತ್ತಿದ್ದಾರೆ. ಆ ವಿಷಯದಲ್ಲಿ ಸರ್ಕಾರದವರು ನಿಗಾ ಕೊಟ್ಟು ಅವರಿಗೆ ಸಹಾಯ ಮಾಡಬೇಕು. ಸಣ್ಣ ನೀರಾವರಿ ವಿಷಯದಲ್ಲಿ ಸರ್ಕಾರದವರು ಹೆಚ್ಚಿನ ಆಸಕ್ತಿಯನ್ನು ವಹಿಸಿ ರೈತರಿಗೆ ನೀರಾವರಿ ಸೌಕರ್ಯವನ್ನು ಒದಗಿಸಿ ಅವರು ಹೆಚ್ಚು ಆಹಾರ ಪದಾರ್ಥಗಳನ್ನು ಬೆಳೆಯುವುದಕ್ಕೆ ಅನುಕೂಲ ಮಾಡಲು ನಿಗಾ ಕೊಡಬೇಕೆಂದು ನಾನು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ರೈತರಿಗೆ ರಸಾಯನಿಕ ಗೊಬ್ಬರವನ್ನು ಒದಗಿಸುವ ವಿಷಯದಲ್ಲಿ ಸರ್ಕಾರದವರು ನಿಗಾ ಕೊಡಬೇಕು. ರೈತರಿಗೆ ಗೊಬ್ಬರವನ್ನು ಸಹಕಾರ ಸಂಘಗಳ ಮುಖಾಂತರ ಒದಗಿಸಿದರೆ ಅನುಕೂಲವಾಗುತ್ತದೆ ಎಂದು ಘನ ಉದ್ದೇಶವನ್ನು ಇಟ್ಟುಕೊಂಡು ಆ ರೀತಿ ಮಾಡುತ್ತಿದ್ದಾರೆ. ಆದರೆ ಆ ಗೊಬ್ಬರ ರೈತರ ಹೊಲಗದ್ದೆಗಳಿಗೆ ಹೋಗುತ್ತದೆಯೇ ಎಂದು ನೋಡುವುದಾದರೆ ಅದು ರೈತರಿಗೆ ಸಿಕ್ಕದೆ ಅದು ಕಾಳಸಂತೆ ನಡೆಸುವವರಿಗೆ ಸಿಕ್ಕುತ್ತದೆ. ಅವರು ಅದರಿಂದ ದುಡ್ಡನ್ನು ಸಂಪಾದನೆ ಮಾಡಿಕೊಳ್ಳುತ್ತಿದ್ದಾರೆ. ಈ ವಿಷಯದಲ್ಲಿ ಸರ್ಕಾರದವರು ನಿಗಾ ತೆಗೆದುಕೊಳ್ಳಬೇಕೆಂದು ನಾನು ಸೂಚಿಸಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ರಸಾಯನಿಕ ಗೊಬ್ಬರದ ಕಾರ್ಖಾನೆಯನ್ನು ಸ್ಥಾಪನೆ ಮಾಡಿ ರೈತರಿಗೆ ಗೊಬ್ಬರವನ್ನು ಒದಗಿಸುವುದಕ್ಕೆ ಅನುಕೂಲ ಮಾಡಬೇಕು. ಇಲ್ಲದೇ ಹೋದರೆ ಸರ್ಕಾರದ ಉದ್ದೇಶ ಸಾಧನೆಯಾಗುವುದಿಲ್ಲ, ಎಂದು ನಾನು ಹೇಳುತ್ತೇನೆ.

ಇನ್ನು ಇಂಥಾ ಒಂದು ಕಷ್ಟಕರವಾದ ಕಾಲದಲ್ಲಿ ಕೆಲವರು ಜಮೀನು ಇಲ್ಲದೆ ಇರುವವರು ನಾವು ವ್ಯವಸಾಯ ಮಾಡುತ್ತೇವೆಂದು ಹೇಳಿ ಸರ್ಕಾರದಿಂದ ಜಮೀನು ತೆಗೆದುಕೊಳ್ಳುತ್ತಾರೆ. ಆದರೆ, ಅವರು ಅದರಲ್ಲಿ ವ್ಯವಸಾಯ ಮಾಡದೆ ಅದನ್ನು ಪಾಳು ಬಿಟ್ಟಿರುತ್ತಾರೆ. ಅದರಿಂದ ಯಾವ ಆಹಾರ ಧಾನ್ಯ ಉತ್ಪತ್ತಿಯಾಗುತ್ತದೆ? ವ್ಯವಸಾಯವನ್ನು ಮಾಡತಕ್ಕ ಜನಗಳಿಗಾದರೂ ಜಮೀನನ್ನು ಕೊಟ್ಟರೆ ಅವರು ಅದನ್ನು ಸದ್ವಿನಿಯೋಗ ಮಾಡುತ್ತಾರೆ. ಯಾರು ವ್ಯವಸಾಯವನ್ನು ಮಾಡುತ್ತೇವೆಂದು ಸರ್ಕಾರದಿಂದ ಜಮೀನು ಪಡೆಯುತ್ತಾರೆಯೋ ಅವರು ಆ ಜಮೀನಿನಲ್ಲಿ ವ್ಯವಸಾಯ ಮಾಡದೆ ಪಾಳು ಬಿಟ್ಟಿದ್ದರೆ ಆ ಜಮೀನನ್ನು ಅದರ ಅವಶ್ಯಕತೆ ಇರತಕ್ಕ ಬೇರೆಯವರಿಗೆ ಕೊಡತಕ್ಕಂಥ ಒಂದು ಕಾನೂನನ್ನು ಮಾಡಬೇಕು. ಈ ವಿಷಯವನ್ನು ಸರ್ಕಾರದವರು ತೀವ್ರವಾಗಿ ಪರಿಶೀಲನೆ ಮಾಡಬೇಕು ಎಂದು ನಾನು ಹೇಳಬಯಸುತ್ತೇನೆ.

ಇನ್ನೊಂದು ವಿಷಯವನ್ನು ಈ ಸಮಯದಲ್ಲಿ ನಾನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ದೇಶದಲ್ಲಿ ಕಮರ್ಷಿಯಲ್ ಕ್ರಾಪ್ಸ್‌ಗಳನ್ನು ಬೆಳೆಯುವುದಕ್ಕೆ ಉತ್ತೇಜನವನ್ನು ಕೊಡುವುದು ಅಗತ್ಯ ಮತ್ತು ಬಹಳ ಪ್ರಾಮುಖ್ಯವಾದದ್ದು. ಆದರೆ ಇವೊತ್ತಿನ ಪರಿಸ್ಥಿತಿಯಲ್ಲಿ ದೇಶದಲ್ಲಿರತಕ್ಕ ನೀರಾವರಿ ಪ್ರದೇಶದಲ್ಲಿ ಲಕ್ಷಾಂತರ ಎಕರೆಗಳಲ್ಲಿ ಕಬ್ಬನ್ನು ಬೆಳೆಯುತ್ತಿದ್ದಾರೆ. ನೀರಾವರಿ ಜಮೀನಿನಲ್ಲಿ ಕಮರ್ಷಿಯಲ್ ಕ್ರಾಪ್ಸಿಗೆ ಹೆಚ್ಚಿಗೆ ಪ್ರೋತ್ಸಾಹ ಸಿಕ್ಕುತ್ತಿದೆ. ಅದರಿಂದ ರೈತರಿಗೆ ಹೆಚ್ಚಿಗೆ ಹಣವೂ ಸಿಕ್ಕುತ್ತದೆ. ಆ ವಿಷಯದಲ್ಲಿ ರೈತರ ದೃಷ್ಟಿಯಿಂದ ಹೇಳುವುದಾದರೆ ಅದರಿಂದ ಅವರಿಗೆ ಬಹಳ ಅನುಕೂಲವಿದೆ. ಆದರೆ ಇವೊತ್ತಿನ ದಿವಸ ನಮ್ಮ ದೇಶದಲ್ಲಿ ಎಷ್ಟೋ ಕಡೆ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಸರ್ಕಾರದವರು ಅವಕಾಶವನ್ನು ಕೊಡುತ್ತಿದ್ದಾರೆ. ಎಲ್ಲಿ ಹೊಸದಾಗಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡಿದೆ ಆ ಪ್ರದೇಶದಲ್ಲಿ ರೈತರು ತಮ್ಮ ಜಮೀನಿನಲ್ಲಿ ಕಬ್ಬನ್ನು ಬೆಳೆಯುವುದನ್ನು ಬಿಟ್ಟು ಬತ್ತವನ್ನು ಬೆಳೆಯುತ್ತಾರೆಯೇ ಎಂಬುದನ್ನು ಯೋಚನೆ ಮಾಡಬೇಕು ಇಂಥಾ ಬೆಳೆಗಳನ್ನು ಬೆಳೆಯುವುದಕ್ಕೆ ಅವಕಾಶವನ್ನು ಕೊಡುವುದಾದರೆ ಮುಂದೆ ಆಹಾರ ಧಾನ್ಯವನ್ನು ಬೆಳೆಯತಕ್ಕ ಭೂಮಿ ಇಲ್ಲದ ಹಾಗಾಗುತ್ತದೆ ಎಂಬುದನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕು.

ಆ ಮೇಲೆ ಆಹಾರ ಧಾನ್ಯವನ್ನು ಉತ್ಪತ್ತಿ ಮಾಡುವ ವಿಷಯದಲ್ಲಿ ಸರ್ಕಾರದವರು ನಿಗಾ ಕೊಡುವುದರ ಜೊತೆಗೆ ಆಹಾರವನ್ನು ಶೇಖರಣೆ ಮಾಡುವ ವಿಷಯದಲ್ಲಿಯೂ ನಿಗಾ ಕೊಡಬೇಕಾಗುತ್ತದೆ. ಸುಗ್ಗಿಯ ಕಾಲದಲ್ಲಿ ರೈತರು ತಾವು ಬೆಳೆದಂತಹ ಆಹಾರ ಪದಾರ್ಥಗಳನ್ನು ಅವರು

(ಶ್ರೀ ಬಿ. ಎಲ್. ಸುಬ್ಬಮ್ಮ)

ಸಹಕಾರ ಸಂಘಗಳಲ್ಲಿ ತೆಗೆದುಕೊಂಡಿರತಕ್ಕ ಸಾಲವನ್ನು ಮತ್ತು ಇತರೇ ಸಾಲಗಳನ್ನೂ ತೀರಿಸುವುದಕ್ಕಾಗಿ ಬಹಳ ಕಡಿಮೆ ದರದಲ್ಲಿ ಆಹಾರ ಪದಾರ್ಥಗಳನ್ನು ಮಾರಾಟ ಮಾಡುತ್ತಾರೆ. ಆದ್ದರಿಂದ ಸರ್ಕಾರದವರು ಈಗ ಕಾಫೀ ಬೋರ್ಡಿನವರು ಕಾಫೀ ಬೀಜವನ್ನು ಯಾವ ರೀತಿ ಶೇಖರಣೆ ಮಾಡಿಟ್ಟು ಅದನ್ನ ಪರದೇಶಕ್ಕೆ ಕಳುಹಿಸಿ ಅದರಿಂದ ಬಂದಂತಹ ಡಿವಿಡೆಂಡನ್ನು, ಲಾಭವನ್ನು ಕಾಫಿ ಬೆಳೆಗಾರರಿಗೆ ಹಂಚುತ್ತಾರೆಯೋ ಅದೇ ರೀತಿ ರೈತರು ಬೆಳೆದಿರತಕ್ಕಂಥ ಆಹಾರ ಧಾನ್ಯಗಳನ್ನು ಸರ್ಕಾರದವರು ಕಟ್ಟಿಸಿರತಕ್ಕಂಥ ಗೋಡೌನ್‌ಗಳಲ್ಲಿ ಶೇಖರಿಸಿಟ್ಟು ರೈತರಿಗೆ ಸಹಾಯ ಮಾಡಬೇಕೆಂದು ನಾನು ಹೇಳುತ್ತೇನೆ. ರೈತನಿಗೆ ಸಾಲದ ತೊಂದರೆ ಇರುತ್ತದೆ, ಆಗ ಅವನು ತನ್ನಲ್ಲಿರತಕ್ಕ ದವಸವನ್ನು ಕಡಿಮೆ ಬೆಲೆಗೆ ಮಾರಬೇಕಾಗುತ್ತದೆ. ಅಂಥಾ ಸಂದರ್ಭದಲ್ಲಿ ದುಡ್ಡು ಇದ್ದವರು ಒಂದು ಪಲ್ಲಕ್ಕೆ 15 ರೂಪಾಯಿಗಳನ್ನೋ ಅಥವಾ 25 ರೂಪಾಯಿಗಳನ್ನೋ ಕೊಟ್ಟು ಆ ದವಸವನ್ನು ಅಳಿಸಿಕೊಳ್ಳುತ್ತಾರೆ. ಮುಂದೆ ಒಂದು ಪಲ್ಲ ದವಸಕ್ಕೆ 100 ರೂಪಾಯಿ ಬೆಲೆ ಆದರೂ ಕೂಡ ಅದು ರೈತನಿಗೆ ಪಾಯಿದೆಯಾಗದೆ ಮಧ್ಯಸ್ಥಗಾರನು ದೊಡ್ಡ ಮನುಷ್ಯನಾಗುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಆ ವಿಚಾರದಲ್ಲಿ ಸರ್ಕಾರದವರು ರೈತನಿಗೆ ನೆರವು ನೀಡಲು ಯೋಚನೆ ಮಾಡಬೇಕೆಂದು ನಾನು ಹೇಳುತ್ತೇನೆ. ಮತ್ತು ರೈತನಿಗೆ ಬೆಳೆಯ ಸಬ್ಸಿಡಿ ಎಂದು ಕೊಟ್ಟು ಅವನಿಗೆ ಪ್ರೋತ್ಸಾಹವನ್ನು ಕೊಡುವುದು ಅಗತ್ಯ ಎಂದು ನಾನು ಸರ್ಕಾರಕ್ಕೆ ತಿಳಿಸುತ್ತೇನೆ. ರೈತ ಗೊಬ್ಬರಕ್ಕಾಗಿ ಮತ್ತು ಸಾಲಕ್ಕಾಗಿ ತಾಲ್ಲೂಕು ಆಫೀಸಿಗೆ ತಿರುಗಾಡುತ್ತ ಅವನು ಪಡುತ್ತಿರುವ ಕಷ್ಟವನ್ನು ನೋಡಿದರೆ ಹೇಳುವುದಕ್ಕೆ ಅಸಾಧ್ಯವಾಗಿದೆ.

ರೈತರಾದವರು ಹೆಚ್ಚಿಗೆ ಆಹಾರವನ್ನು ಬೆಳೆಯಲು ಸಕಲ ಸೌಲಭ್ಯಗಳನ್ನೂ ಸರ್ಕಾರದವರು ಕಲ್ಪಿಸಬೇಕು. ಅವರೂ ಸಹ ಉತ್ತಮ ಪ್ರಜೆಗಳಾಗಿ ದೇಶಕ್ಕೆ ಹೆಚ್ಚಿನ ರೀತಿಯಲ್ಲಿ ಆಹಾರ ಸೌಕರ್ಯವನ್ನು ಒದಗಿಸಲು ತಕ್ಕ ಪ್ರೋತ್ಸಾಹವನ್ನು ಕೊಡಬೇಕು. ಆದ್ದರಿಂದ ದೇಶದಲ್ಲಿರತಕ್ಕ ರೈತರು, ಕೂಲಿಗಾರರು, ಸರ್ಕಾರಿ ಆಫೀಸುಗಳಲ್ಲಿ ಕೆಲಸ ಮಾಡತಕ್ಕ ನೌಕರರು—ಇವರೆಲ್ಲರ ಸಂಘಟಣೆಯಾಗುವುದು ಮುಖ್ಯ. ದೇಶದಲ್ಲಿರತಕ್ಕ ರೈತರ ವಿಷಯದಲ್ಲಿ ಸರ್ಕಾರ ತೀವ್ರವಾಗಿ ಆಸಕ್ತಿವಹಿಸಿ ಅವರಿಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟು ಇಂತಹ ತುರ್ತು ಪರಿಸ್ಥಿತಿಯಲ್ಲಿ ದೇಶಕ್ಕೆ ಒದಗಿರತಕ್ಕ ಕಷ್ಟವನ್ನು ಪರಿಹಾರ ಮಾಡಬೇಕು. ರೈತರು ಬೆಳೆದ ಆಹಾರ ಪದಾರ್ಥಗಳಲ್ಲಿ ಅವರ ಒಂದು ಕೂಲಿಗೆ ಅಥವಾ ಜೀವನಕ್ಕೆ ಬೇಕಾದಷ್ಟನ್ನು ಅವರಿಗೆ ಬಿಟ್ಟು ಉಳಿದ ಪದಾರ್ಥವನ್ನು ಸರ್ಕಾರ ತೆಗೆದುಕೊಳ್ಳಲಿ. ಕಷ್ಟಬಂದಾಗ ರೈತರು ಯಾರೂ ಹಿಂಜರಿಯುವುದಿಲ್ಲ. ಇಡೀ ಹಿಂದೂಸ್ಥಾನದ 45 ಕೋಟಿ ಜನರೂ ಒಬ್ಬ ವ್ಯಕ್ತಿಯ ರೂಪದಲ್ಲಿ ನಿಂತು ಕೆಲಸ ಮಾಡಿ ಎಲ್ಲರೂ ಒಗ್ಗಟಿನಿಂದ ಇಡೀ ಹಿಂದೂಸ್ಥಾನದ ಗೌರವವನ್ನು ಕಾಪಾಡುತ್ತಾರೆಂಬ ನಂಬಿಕೆ ನನಗಿದೆ. ಎಲ್ಲ ಕೆಲಸಗಳಲ್ಲೂ ನಮ್ಮ ರೈತರು ಮುಂದಿದ್ದಾರೆಂದು ನಾನು ಈ ಸಮಯದಲ್ಲಿ ಸರ್ಕಾರಕ್ಕೆ ತಿಳಿಸಬಯಸುತ್ತೇನೆ. ಈಗ ಸರ್ಕಾರದವರು ಈ ಒಂದು ನಿರ್ಣಯವನ್ನು ಇಲ್ಲಿ ತಂದು ಈ ಸಭೆಯ ಮುಂದೆ ಚರ್ಚೆಮಾಡುವ ಕಾಲದಲ್ಲಿ ದೇಶದಲ್ಲಿ ಆಹಾರ ಪದಾರ್ಥಗಳನ್ನು ಬೆಳೆಯುವ ರೈತರಿಗೆ ಸರಿಯಾದ ಬೆಲೆಯನ್ನು ಕೊಡಬೇಕು. ಈ ದಿವಸ ಈ ನಿರ್ಣಯವನ್ನು ತಂದಿರತಕ್ಕದ್ದೇನೋ ಬಹಳ ಸಂತೋಷವಾಗಿದೆ. ಆ ನಿರ್ಣಯದಬಗ್ಗೆ ಸರ್ಕಾರದ ಅಭಿಪ್ರಾಯ ಏನಾಗಿದೆಯೆಂಬುದನ್ನು ತಿಳಿಯುವುದು ಮುಖ್ಯ. ರೈತರು ಬೆಳೆದಂತಹ ಆಹಾರಪದಾರ್ಥಗಳನ್ನು ಹಂಚುವಾಗ ಸರ್ಕಾರದವರು ಒಂದು ದೊಡ್ಡ ಉದ್ದೇಶದಿಂದ ಸಹಕಾರ ಸಂಘಗಳ ಮುಖಾಂತರ ಹಂಚಿದರೆ ದೇಶಕ್ಕೆ ಒಳ್ಳೆಯದಾಗುತ್ತದೆ. ಆದರೆ ಕೆಲವು ಸಹಕಾರ ಸಂಘಗಳನ್ನು ನೋಡಿದರೆ ಈ ಕಾರ್ಯ ಅವರ ಮೂಲಕ ಸರಿಯಾಗಿ ಆಗುತ್ತಿಲ್ಲ. ಕೆಲವು ಕಡೆಗಳಲ್ಲಿ ಕನ್ಸ್ಯೂಮರ್ಸ್ ಕೊ-ಆಪರೇಟೀವ್ ಸೊಸೈಟಿ ಮಾಡಿದ್ದಾರೆ. ಆ ಸೊಸೈಟಿಗಳ ಅನ್ಯಾಯ ಹೇಳುವುದಕ್ಕಾಗುವುದಿಲ್ಲ. ಅವುಗಳ ಲೆಕ್ಕಪತ್ರಗಳನ್ನು ತನಿಖೆಮಾಡುವವರೇ ಇಲ್ಲವಾಗಿದೆ. ಇದರಿಂದ ಬಡವರಿಗೆ ತುಂಬಾ ಅನ್ಯಾಯವಾಗುತ್ತಿದೆ. ಸಹಕಾರ ಸಂಸ್ಥೆಗಳಲ್ಲಿಯೇ ಈ ರೀತಿ ಅನ್ಯಾಯವಾದರೆ ಹೇಗೆ ? ದೊಡ್ಡ ದೊಡ್ಡ ಅಧಿಕಾರಿಗಳಾಗಲೀ ಅಥವಾ ಇಂತಹ ಸಂಸ್ಥೆಗಳಲ್ಲಿ ಅನ್ಯಾಯಮಾಡತಕ್ಕ, ಮೋಸ ಮಾಡತಕ್ಕವರು ಯಾರೇ ಆಗಿರಲಿ ನಿಷ್ಪಕ್ಷಪಾತದಿಂದ ಸರ್ಕಾರದವರು ಅಂತವರಿಗೆ ಕಠಿಣಶಿಕ್ಷೆ ಮಾಡಬೇಕು, ಅವರು ರೈತರೇ ಆಗಿರಲಿ ಅಂತಹವರಿಗೂ ಶಿಕ್ಷೆ ವಿಧಿಸಬೇಕು. ಈಗ ದೇಶದಲ್ಲಿ ಎಲ್ಲರೂ ಹೆದರಿ ಸರ್ಕಾರ ಮತ್ತು ದೇಶದ ಕೆಲಸಗಳನ್ನು ಮಾಡುತ್ತಾರೆ. ರೈತರು ಬೆಳೆದಂತಹ ಪದಾರ್ಥಗಳಿಗೆ ಸರಿಯಾದ ಬೆಲೆಯನ್ನು ಸರ್ಕಾರ ನಿಗದಿ ಮಾಡದೇ ಇರುವುದರಿಂದ ಅನೇಕ ರೈತರು ತಮ್ಮ ಕಸುಬನ್ನೇ ಬಿಟ್ಟು ಪಟ್ಟಣಗಳಿಗೆ ಬಂದು ಯಾವುದಾದರೂ ಒಂದು ಸರ್ಕಾರೀ ನೌಕರಿಯನ್ನು ಮಾಡೋಣವೆಂದು ಹೇಳುತ್ತಿದ್ದಾರೆ. ಅಂತಹ ಒಂದು ಮನೋಭಾವನೆ ಈಗ ರೈತರಿಗೆ ಉಂಟಾಗುತ್ತಿದೆ. ರೈತನಾಗಿ ಹಳ್ಳಿಯಲ್ಲಿದ್ದುಕೊಂಡು ಕೆಲಸ ಮಾಡುವುದಕ್ಕೆ

ಬದಲಾಗಿ ಪಟ್ಟಣದಲ್ಲಿ ಯಾವುದಾದರೂ ಒಂದು ಜವಾನನ ಕೆಲಸ ಮಾಡುವುದು ಮೇಲು ಎಂದು ಹೇಳುತ್ತಿದ್ದಾರೆ. ಅನೇಕ ಜನ ವಿದ್ಯಾವಂತರು ಇತ್ತೀಚಗೆ ಹಳ್ಳಿಗಳನ್ನು ಬಿಟ್ಟು ಪಟ್ಟಣಗಳಿಗೆ ಬಂದು ನೆಲೆಸುತ್ತಿದ್ದಾರೆ. ಅದು ಈ ಸಭೆಯನಾಯಕರಿಗೆ ಚೆನ್ನಾಗಿ ಗೊತ್ತಿದೆ. ರೈತ ಕೆಲಸಕ್ಕಿಂತಲೂ ಸರ್ಕಾರಿ ಕೆಲಸ ಮೇಲು ಎಂಬ ಭಾವನೆ ಬಂದು ಅನೇಕರು ಗಟ್ಟಿಮುಟ್ಟಾಗಿರುವವರೆಲ್ಲರೂ ಸರ್ಕಾರಿ ಕೆಲಸಕ್ಕೆ ಬರುತ್ತಿದ್ದಾರೆ. ಅಂತಹವರನ್ನು ದೇಶರಕ್ಷಣೆಗಾಗಿ ಸೇರಿಸಬೇಕು. ದೇಶದಲ್ಲಿ ಯುದ್ಧ ಪರಿಸ್ಥಿತಿ ಬಂದಿರುವಾಗ ದೇಶಾಭಿಮಾನವಿರತಕ್ಕ ಜನಗಳನ್ನು ಹೆಚ್ಚಿಗೆ ದೇಶರಕ್ಷಣಾಕಾರ್ಯಗಳಿಗೆ ನೇಮಿಸಬೇಕು. ಈಗ ಅಂತಹವರಿಗೆ ಹೆಚ್ಚಿಗೆ ಪ್ರೋತ್ಸಾಹ ಕೊಡಬೇಕು. ಆದರೆ ದೇಶದಲ್ಲಿ ಹುಳುಗಳ ಹಾಗೆ ಬೆಳೆದು, ಮೋಸ ಅನ್ಯಾಯಗಳನ್ನು ಮಾಡತಕ್ಕ ಜನರನ್ನು ಪ್ರೋತ್ಸಾಹಿಸುವುದು ಈಗಿನ ಸನ್ನಿವೇಶದಲ್ಲಿ ಖಂಡಿತವಾಗಿ ನ್ಯಾಯವಲ್ಲವೆಂದು ನಾನು ಹೇಳುತ್ತೇನೆ.

ಕೊನೆಯದಾಗಿ ಈ ದಿವಸ ನನಗೆ ಇಲ್ಲಿ ಮಾತನಾಡಲು ಕೆಲವು ನಿಮಿಷಗಳ ಅವಕಾಶವನ್ನು ಕಲ್ಪಿಸಿಕೊಟ್ಟಂಥ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಸಭಾಪತಿಯವರೇ, ಆಹಾರದ ಕ್ಷೇತ್ರದಲ್ಲಿ ಸ್ವಸಂಪೂರ್ಣತೆಯನ್ನು ಸಾಧಿಸಬೇಕೆನ್ನುವ ಕೂಗು ದೇಶದ ಮುಂದೆ ಕಳೆದ 18 ವರ್ಷಗಳಿಂದಲೂ ಒಂದೇ ಸಮನೆ ಎಲ್ಲರ ಬಾಯಿಯಿಂದಲೂ ಕೇಳಲ್ಪಡುತ್ತಾ ಇದೆ. ಪ್ರತಿದಿವಸವೂ ನಮ್ಮ ರಾಷ್ಟ್ರದಲ್ಲಿ ಸುಮಾರು 12,700 ಹೊಸ ಜೀವರಾಶಿಗಳನ್ನು ನಾವು ಸೃಷ್ಟಿಸುತ್ತಿದ್ದೇವೆ. ಅಂದಮೇಲೆ ಈಗ ಆಹಾರದ ಸಮಸ್ಯೆ ಎಷ್ಟು ಬೃಹದಾಕಾರವಾಗಿದೆ ಎನ್ನುವುದನ್ನು ನಮ್ಮ ದೇಶದಲ್ಲಿ ಬಹಳ ಜನ ಅರ್ಥಮಾಡಿಕೊಂಡಂತೆ ನನಗೆ ತೋರಿ ಬರುವುದಿಲ್ಲ. ಆಹಾರವನ್ನು ಹೆಚ್ಚು ಬೆಳೆಯಬೇಕೆನ್ನುವುದರಲ್ಲಿ ಯಾರಲ್ಲೂ ಭಿನ್ನಾಭಿಪ್ರಾಯವಿಲ್ಲ. ಆದರೆ ಹೆಚ್ಚು ಆಹಾರವನ್ನು ಹೇಗೆ ಸೃಷ್ಟಿಮಾಡುತ್ತಿದ್ದಾರೆನ್ನುವ ವಿಚಾರವನ್ನು ಕ್ರಿಯಾತ್ಮಕವಾಗಿ ನಾವು ಯೋಚನೆಮಾಡುವುದಕ್ಕೆ ಹೊರಟರೆ ಭಿನ್ನಭಿನ್ನವಾದ ಅಭಿಪ್ರಾಯಗಳು ಕಂಡುಬರುತ್ತವೆ. ಕಳೆದ ಮೂರು ಪಂಚವಾರ್ಷಿಕ ಯೋಜನೆಗಳು ಹೆಚ್ಚು ಆಹಾರ ಬೆಳೆಯುವ ವಿಚಾರದಲ್ಲಿ ಮಾತ್ರ ಸಾಕಾದಷ್ಟು ಪ್ರಗತಿಯನ್ನು ಸಾಧಿಸಿಲ್ಲ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ಸಾಕಾದಷ್ಟು ನಮ್ಮ ಪಂಚವಾರ್ಷಿಕ ಯೋಜನೆಗಳು ನಿರರ್ಥಕವಾಗಿವೆಯೆನ್ನುವುದನ್ನು ಪರಿಣತರು ಒಪ್ಪಿಕೊಳ್ಳುತ್ತಾರೆಯೇ ವಿನಾ ರಾಜಕಾರಣಿಗಳು ಅದನ್ನು ಚರ್ಚೆ ಮಾಡತಕ್ಕ ಗೋಜಿಗೂ ಸಹ ಹೋಗುವುದಿಲ್ಲ. 1948ನೇ ಇಸವಿಯಿಂದ ಒಂದೇ ಸಮನೆ ನಾವು ಆಹಾರ ಧಾನ್ಯಗಳಿಗೋಸ್ಕರ ಪರದೇಶಗಳ ಕಡೆ ನೋಡುತ್ತಿದ್ದೇವೆನ್ನುವುದನ್ನು ಚೆನ್ನಾಗಿ ಮನಗಂಡಿದ್ದೇವೆ. 1962ರಲ್ಲಿ ನಾವು ಹೊರಗಡೆಯಿಂದ 36ಲಕ್ಷ ಟನ್ನುಗಳಷ್ಟು ಆಹಾರಧಾನ್ಯಗಳನ್ನು ತರಿಸಿಕೊಂಡಿದ್ದೇವೆ. ಆ ಆಹಾರ ಧಾನ್ಯಗಳು ಸುಮಾರು 141 ಕೋಟಿ ರೂಪಾಯಿಗಳ ಬೆಲೆ ಬಾಳತಕ್ಕದ್ದು ಆಗಿದೆ. 1963ನೇ ಇಸವಿಯಲ್ಲಿ 45 ಲಕ್ಷ ಟನ್ನುಗಳಷ್ಟು ಆಹಾರಧಾನ್ಯಗಳನ್ನು ಸುಮಾರು 183 ಕೋಟಿ ರೂಪಾಯಿಗಳಷ್ಟು ಬೆಲೆ ಬಾಳತಕ್ಕದ್ದಾಗಿದೆಯೆಂದು ತಿಳಿದು ಹೊರಗಡೆಯ ದೇಶಗಳಿಂದ ತರಿಸಿಕೊಂಡಿದ್ದೇವೆ. 1964ನೇ ಇಸವಿಯಲ್ಲಿ 63 ಲಕ್ಷ ಟನ್ನುಗಳಷ್ಟು ಆಹಾರಧಾನ್ಯಗಳನ್ನು ನಾವು ಹೊರದೇಶಗಳಿಂದ ಸುಮಾರು 266 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ತರಿಸಿಕೊಂಡಂಥ ಪರಿಸ್ಥಿತಿಯಲ್ಲಿದ್ದೆವು. ಈ ಮೂರು ಪಂಚವಾರ್ಷಿಕ ಯೋಜನೆಗಳನ್ನು ಸಂಪೂರ್ಣಗೊಳಿಸಿದ ಮೇಲೆ ಈ ಒಂದು ಸ್ಥಿತಿಯನ್ನು ಮುಟ್ಟಿದ್ದೇವೆ ಎಂಬುದಾಗಿ ಹೇಳಿದರೆ ಈ ಆಹಾರ ಸಮಸ್ಯೆ ಎಷ್ಟು ದೊಡ್ಡದಾಗಿದೆ, ಎಷ್ಟು ಭಯಂಕರವಾಗಿದೆ ಎನ್ನುವುದನ್ನು ಈ ಅಂಕಿ ಅಂಶಗಳು ನಮಗೆ ಅರ್ಥಮಾಡಿಕೊಡುತ್ತವೆ. ಎಲ್ಲದಕ್ಕೂ ಬಹಳ ದುರದೃಷ್ಟಕರವಾದ ಪ್ರಸಂಗವೆಂದರೆ 1964ನೇ ಇಸವಿಯ ಮೊದಲ ಭಾಗದಲ್ಲಿ ಪಾಕಿಸ್ಥಾನದ ಜೊತೆಯಲ್ಲಿ ನಾವು ಒಪ್ಪಂದ ಮಾಡಿಕೊಂಡು 71 ಸಹಸ್ರ ಟನ್ನುಗಳಷ್ಟು ಅಕ್ಕಿಯನ್ನು ಪಾಕೀಸ್ಥಾನ ಇಂಡಿಯಾಕ್ಕೆ ಕೊಡಬೇಕು ಎನ್ನುವುದು ಆಗಿದೆ. ಇದಕ್ಕಿಂತಲೂ ದುರದೃಷ್ಟಕರವಾದ ಅವಹೇಳನ ನಿಜವಾಗಿ ಮತ್ತೊಂದು ಇಲ್ಲವೆಂದು ನಾನು ಒಪ್ಪುತ್ತೇನೆ. ಮನುಷ್ಯ ಒಂದು ಕಾಲದಲ್ಲಿ ಅವನು ಚೋಟುದ್ದ ಹೊಟ್ಟೆಗಾಗಿ ಗೇಣುದ್ದ ಬಟ್ಟೆಗಾಗಿ ಬದುಕಬೇಕಾಗಿತ್ತು. ಆದರೆ ಇತ್ತೀಚಿನ ದಿವಸಗಳಲ್ಲಿ ಮನುಷ್ಯನಾದವನು ಇವೆರಡಕ್ಕೋಸ್ಕರ ಬದುಕಿಲ್ಲ. ಮಹತ್ತರವಾದ ವಿಚಾರಗಳಿಗೋಸ್ಕರ ನಮ್ಮ ದೇಶದ ಜನ ಬದುಕಬೇಕು, ಬಾಳಬೇಕು ಎನ್ನತಕ್ಕ ಮನೋಭಾವನೆ ನಮ್ಮ ಜನಗಳಲ್ಲಿ ಉಂಟಾಗಿದೆ. ಪಾಕೀಸ್ತಾನ ಆಹಾರದ ಬಗ್ಗೆ ಸಾಕಾದಷ್ಟು ಪ್ರಗತಿಯನ್ನು ಸಾಧಿಸಬೇಕಾದರೆ ಇಂಡಿಯಾದೇಶ ಈಗ ಅಂತಹ ಒಂದು ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯವಾಗಿಲ್ಲ ಎಂದಮೇಲೆ, ಇವರಲ್ಲಿ ಎಲ್ಲೋ ಏನೋ ತಪ್ಪು ಇರಬೇಕೆನ್ನುವುದನ್ನು ಈ ದಿವಸ ನಮ್ಮ ರಾಜ್ಯಗಳ ಮತ್ತು ಕೇಂದ್ರ ಸರ್ಕಾರದ ಹೊಣೆಯನ್ನು ಹೊತ್ತಿರತಕ್ಕ ಜನ ಬಹಳ ತೀವ್ರವಾಗಿ ಆಲೋಚನೆ ಮಾಡಬಹುದಾದಂಥ ಸನ್ನಿವೇಶ ಈ ದಿವಸ ಒದಗಿ ಬಂದಿವೆ. ಇದೇ ರೀತಿಯಲ್ಲಿ ನಮ್ಮ ಜನಸಂಖ್ಯೆ ಮುಂದುವರೆಯುತ್ತಾ ಹೋದರೆ

(ಶ್ರೀ ಎಸ್. ಎಂ. ಕೃಷ್ಣ)

1971ನೇ ಇಸವಿಯಲ್ಲಿ ಇಂಡಿಯಾದೇಶದಲ್ಲಿ 52 ಕೋಟಿ ಬಾಯಿಗಳು ಬರುತ್ತವೆ. ಆ 52 ಕೋಟಿ ಬಾಯಿಗಳಿಗೆ ಹೊಟ್ಟೆಗೆ ಆಗುವಷ್ಟು ಅನ್ನವನ್ನು ಹಾಗೂ ಗೋಧಿಯನ್ನು ನಾವು ಈ ರಾಷ್ಟ್ರದಲ್ಲಿ ಹಂಚಿಕೆ ವ್ಯವಸ್ಥೆಯನ್ನು ಮಾಡಬೇಕು. ಆದರೆ ಪರಿಣತರ ಅಂಕಿ ಅಂಶಗಳ ಪ್ರಕಾರ 1966ನೇ ಇಸವಿಯ ಹೊತ್ತಿಗೆ ಸುಮಾರು 10 ಕೋಟಿ ಟನ್ನುಗಳಷ್ಟು ಆಹಾರ ಧಾನ್ಯಗಳನ್ನು ನಾವು ಒದಗಿಸಿ ಕೊಡಬೇಕಾಗುತ್ತದೆ. ಅಂದಮೇಲೆ ಸರ್ವಸಾಮಾನ್ಯವಾಗಿ ಈ ಆಹಾರ ಹಂಚಿಕೆಯನ್ನು ತೃಪ್ತಿಕರವಾಗಿ ಈ ದೇಶದಲ್ಲಿ ಏರ್ಪಾಡುಮಾಡಬೇಕಾಗುತ್ತದೆ.

9-30 A. M.

ನಮಗೆ ಒದಗಿ ಬಂದಿರುವ ಅಂಕಿ ಅಂಶಗಳ ಆಧಾರದ ಮೇಲೆ ಮೊದಲನೇ, ಎರಡನೇ ಹಾಗೂ ಮೂರನೇ ಪಾಂಚವಾರ್ಷಿಕ ಯೋಜನೆಗಳು ಮುಗಿಯುವ ಈ ಕಾಲದಲ್ಲಿ ಸುಮಾರು 75 ಮಿಲಿಯನ್ ಟನ್ನುಗಳು ಎಂದರೆ ಸುಮಾರು ಏಳು ಕೋಟಿ ರೂಪಾಯಿಗಳಷ್ಟು ಬೆಲೆಯ ಆಹಾರ ಧಾನ್ಯಗಳನ್ನು ಉತ್ಪಾದನೆ ಮಾಡಿದ್ದೇವೆ. ಮೂರನೆ ಪಂಚವಾರ್ಷಿಕ ಯೋಜನೆ ಮುಗಿಯುವ ಹೊತ್ತಿಗೆ ಸುಮಾರು 79 ಮಿಲಿಯನ್‌ಗಳಷ್ಟು ಟನ್ನುಗಳ ಆಹಾರ ಧಾನ್ಯಗಳನ್ನು ಬೆಳೆಯಬೇಕೆಂದು ನಾವು ಇಟ್ಟು ಕೊಂಡಿದ್ದರೂ ಕೂಡ ಈಗಾಗಲೇ ನಮಗೆ ಸುಮಾರು ಎರಡು ಕೋಟಿಯಷ್ಟು ಟನ್ನುಗಳ ಆಹಾರ ಧಾನ್ಯಗಳ ಕೊರತೆ ಇದೆ ಎಂದು ನಾವೆಲ್ಲರೂ ಅರಿಯಬೇಕಾಗಿದೆ. ನಾವು ನಿನ್ನೆ ಇಲ್ಲಿ ಭಾಷಣ ಮಾಡಿದ ಶ್ರೀಮಾನ್ ಸಿದ್ದಯ್ಯನವರ ಭಾಷಣವನ್ನು ಕೇಳಿದ್ದೇವೆ. ಅವರು ನಾವು ಉಪಯೋಗಿಸ ತಕ್ಕ ಆಹಾರ ಪದಾರ್ಥಗಳನ್ನು ಕಡಿಮೆ ಮಾಡಬೇಕು ಮತ್ತು ಮಿತವ್ಯಯವನ್ನು ಸಾಧಿಸಬೇಕು ಎಂದು ಹೇಳಿದರು. ಇವುಗಳೆಲ್ಲ ಬಹಳ ಒಳ್ಳೆಯ ಭಾವನೆಗಳೇ ಆಗಿವೆ. ಈ ಭಾವನೆಗಳೆಲ್ಲಾ ದೇಶಾಭಿಮಾನದಿಂದ ಹೊರಬರತಕ್ಕ ಭಾವನೆಗಳು. ಇದರ ಬಗ್ಗೆ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಆದರೆ ಇಂತಹ ಭಾವನೆಗಳೆಲ್ಲಾ ಕೇವಲ ಸಾಂಕೇತಿಕವಾದ ಭಾವನೆಗಳು. ತುರ್ತು ಪರಿಸ್ಥಿತಿಯ ಕಾಲದಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ವಿಧಾನ ಸೌಧದಿಂದ ಅವರ ಮನೆಗೆ ನಡೆದು ಕೊಂಡು ಹೋಗುತ್ತೇವೆಂದು ಹೇಳಿದರು. ಇದು ಒಂದು ಸಾಂಕೇತಿಕ ಒಳ್ಳೆಯ ಸೂಚನೆ. ದೇಶದಲ್ಲಿ ಒಂದು ಭಯಂಕರವಾದ ಹಾಗೂ ಕಷ್ಟಕರವಾದ ಪರಿಸ್ಥಿತಿ ಈಗ ಬಂದೊದಗಿದೆ. ಆದುದರಿಂದ ಈ ರಾಜ್ಯದ ನಾಯಕರಾದ ಮಾನ್ಯ ಮುಖ್ಯ ಮಂತ್ರಿಗಳು ಈ ರೀತಿಯಾದ ಒಂದು ಸಾಂಕೇತಿಕವಾದ ನೀತಿಯನ್ನು ಜನತೆಯ ಮುಂದೆ ಪ್ರದರ್ಶನ ಮಾಡುವುದಕ್ಕಾಗಿ ಇಂತಹ ನಿಲುವನ್ನು ತೆಗೆದು ಕೊಂಡರು. ಇದೇ ರೀತಿಯಾಗಿ ಶ್ರೀಮಾನ್ ಸಿದ್ದಯ್ಯನವರು ಹೇಳುವಾಗ ರಾತ್ರಿಯ ಹೊತ್ತು ಮಾಡುವ ಒಂದು ಊಟವನ್ನು ತುರ್ತು ಪರಿಸ್ಥಿತಿಯ ಕಾರಣಗಳಿಗಾಗಿ ಬಿಡಬೇಕು ಎಂದು ಹೇಳಿದರು. ಇದೂ ಒಂದು ಸಾಂಕೇತಿಕವಾದ ಭಾವನೆ. ಈ ಭಾವನೆಗಳೆಲ್ಲಾ ಒಳ್ಳೆಯ ಅನುಕರಣೆ ಮಾಡಬಹುದಾದ ಭಾವನೆಗಳು. ಆದರೆ ಇದರಿಂದ ನಮ್ಮ ದೇಶದ ಆಹಾರ ಕ್ಷೇತ್ರದಲ್ಲಿ ಒಂದು ಅಡಿಯಷ್ಟು ಮುಂದೆ ತೆಗೆದುಕೊಂಡು ಹೋಗುವುದಕ್ಕೂ ಸಾಧ್ಯವಿಲ್ಲ. ಈ ದೇಶದಲ್ಲಿ ನಾವು ಎಷ್ಟು ಆಹಾರವನ್ನು ಸರಕಾರದಿಂದ ನಿರೀಕ್ಷೆ ಮಾಡುತ್ತಿದ್ದೇವೆ ಎನ್ನುವುದರ ಬಗ್ಗೆ ಇತರ ದೇಶಗಳೊಡನೆ ಹೋಲಿಸಿ ನೋಡಿದರೆ ಇದರ ಬಗ್ಗೆ ಚೆನ್ನಾಗಿ ಗೊತ್ತಾಗುತ್ತದೆ. ಈ ದೇಶದಲ್ಲಿ ದಿನ ನಿತ್ಯ ಬೇಕಾಗಿರತಕ್ಕ ಅವಶ್ಯಕತೆಗಳನ್ನು ತುಲನೆ ಮಾಡಿ ನೋಡಿದರೆ ಸುಮಾರು 2,400 ಕ್ಯಾಲೊರಿಗಳಷ್ಟು ಆಹಾರ ಪದಾರ್ಥಗಳು ಸಾಧಾರಣವಾಗಿ ಜೀವನ ನಡೆಸಿಕೊಂಡು ಹೋಗಲು ಬೇಕಾಗಿದೆ. ಆದರೆ ಇಷ್ಟು ಆಹಾರ ಧಾನ್ಯಗಳನ್ನೂ ಬೆಳೆಯುವುದು ಸದ್ಯಕ್ಕೆ ಕಷ್ಟ. ಒಬ್ಬ ಸಾಧಾರಣವಾದ ಮನುಷ್ಯ ತನ್ನ ಜೀವನ ನಡೆಸಿಕೊಂಡು ಹೋಗಲು 2,400 ಕ್ಯಾಲೊರಿಗಳಷ್ಟು ಆಹಾರದ ಧಾನ್ಯಗಳನ್ನು ಬೆಳೆಸಬೇಕಾಗುತ್ತದೆ. ಆದರೆ ಈಗ ನಮ್ಮ ದೇಶದಲ್ಲಿ 1,500 ಕ್ಯಾಲೊರಿಗಳಷ್ಟು ಮಟ್ಟವನ್ನು ಕೂಡ ಇನ್ನೂ ಮುಟ್ಟಿಲ್ಲ. ಮತ್ತು ನಮ್ಮ ದೇಶದಲ್ಲಿ ಇನ್ನೂ ಹೆಚ್ಚಾಗಿ ಕೃಷಿಗಾಗಿ ಗೊಬ್ಬರಗಳನ್ನು ಉಪಯೋಗಿಸಬೇಕು. ಪ್ರತಿಯೊಂದು ಎಕರೆಭೂಮಿಯಲ್ಲಿಯೂ ಹೆಚ್ಚು ಬೆಳೆಯನ್ನು ಬೆಳೆಯಬೇಕು. ನಮ್ಮ ದೇಶದಲ್ಲಿ ಎಷ್ಟು ಬೆಳೆಯಾಗುತ್ತಿದೆ ಹಾಗೂ ಇನ್ನು ಇತರ ದೇಶಗಳಲ್ಲಿ ಎಷ್ಟು ಬೆಳೆ ಮಾಡುತ್ತಿದ್ದಾರೆನ್ನುವುದಕ್ಕೆ ಒಂದು ಕಂಪಾರಾಟೀವ್ ಸ್ಟೇಟುಮಂಟನ್ನು ಹಾಕಿ ನೋಡುವಾಗ, ಅವರು ಒಂದು ಎಕರೆಗೆ ಎಷ್ಟು ಗೋಧಿ ಬೆಳೆಯುತ್ತಿದ್ದಾರೆ, ಎಷ್ಟು ಭತ್ತ ಬೆಳೆಯುತ್ತಿದ್ದಾರೆ. ಇಲ್ಲಿ ನಾವು ಒಂದು ಎಕರೆಗೆ ಎಷ್ಟು ಗೋಧಿ ಹಾಗೂ ಭತ್ತವನ್ನು ಬೆಳೆಯುತ್ತಿದ್ದೇವೆ ಎನ್ನುವುದನ್ನು ಪರಿಶೀಲನೆ ಮಾಡಿ ನೋಡಿದರೆ ನಾವು ಎಷ್ಟು ಹಿಂದುಳಿದಿದ್ದೇವೆ ಎನ್ನುವುದು ಸ್ವಯಂ ವೇದ್ಯವಾಗುತ್ತದೆ. ಆಲ್ ಇಂಡಿಯಾ ಅವರೇಜ್‌ನಂತೆ ನಮ್ಮ ಇಂಡಿಯಾ ದೇಶದಲ್ಲಿ ಒಂದು ಎಕರೆಯಲ್ಲಿ ಸುಮಾರು 625 ಪೌಂಡು

ಗಳಷ್ಟು ಗೋಧಿಯನ್ನು ಬೆಳೆಸುತ್ತಿದ್ದಾರೆ. ಅದೇ ರೀತಿ ನಮ್ಮ ಪಕ್ಕದ ರಾಜ್ಯವಾದ ಚೈನಾ ದೇಶವೂ ಕೂಡ ಒಂದು ಹಿಂದುಳಿದ ರಾಷ್ಟ್ರವಾಗಿದೆ. ಈ ಚೈನಾ ದೇಶದವರು ಈಗಾಗಲೇ ಒಂದು ಅಣುಬಾಂಬನ್ನು ತಯಾರು ಮಾಡಿದ್ದಾರೆ. ವ್ಯವಸಾಯದ ಕ್ಷೇತ್ರದಲ್ಲಿಯೂ ಸಹ ನಾವು ಏನು ಒಂದು ಗಂಡಾಂತರ ಪರಿಸ್ಥಿತಿಯಲ್ಲಿದ್ದೇವೋ ಅವರೂ ಕೂಡ ಅದೇ ಗಂಡಾಂತರ ಪರಿಸ್ಥಿತಿಯನ್ನು ಅನುಭವಿಸುತ್ತಿದ್ದರೂ ಕೂಡ ಅವರು ಸುಮಾರು ಒಂದು ಎಕರೆಯಲ್ಲಿ 767 ಪೌಂಡುಗಳಷ್ಟು ಗೋಧಿಯನ್ನು ಬೆಳೆಯುತ್ತಿದ್ದಾರೆ. ಅದೇ ರೀತಿ ಈಜಿಪ್ಟ್ ದೇಶದಲ್ಲೂ ಕೂಡ ಸುಮಾರು 2061 ಪೌಂಡುಗಳಷ್ಟು ಗೋಧಿ ಬೆಳೆಯುತ್ತಿದ್ದಾರೆ, ಜಪಾನ್ ದೇಶದಲ್ಲಿ 1900 ಪೌಂಡುಗಳಷ್ಟು ಗೋಧಿಯನ್ನು ಒಂದು ಎಕರೆಯಲ್ಲಿ ಬೆಳೆಯುತ್ತಿದ್ದಾರೆ. ನಮ್ಮ ದೇಶದಲ್ಲಿ ಅಗ್ರಿಕಲ್ಚರ್ ಸೆಕ್ಟರಿನಲ್ಲಿ ಗೊಬ್ಬರವನ್ನು ಎಷ್ಟು ಉಪಯೋಗಿಸುತ್ತಿದ್ದಾರೆ ಎನ್ನುವುದನ್ನು ತುಲನಾತ್ಮಕವಾದ ರೀತಿಯಲ್ಲಿ ವಿವೇಚನೆ ಮಾಡಲು ಒಂದು ಪಟ್ಟಿಯನ್ನು ಈ ಸಭೆಯ ಮುಂದೆ ಇಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಪ್ರತಿಯೊಂದು ಎಕರೆಗೂ ಕೂಡ ಜಪಾನ್ ದೇಶದಲ್ಲಿ ಸುಮಾರು 223 ಪೌಂಡುಗಳಷ್ಟು ಫರ್ಟಿಲೈಸರುಗಳನ್ನು ಉಪಯೋಗಿಸುತ್ತಿದ್ದಾರೆ. ಅದೇರೀತಿ ಅಮೇರಿಕಾ ದೇಶದಲ್ಲಿ ಸುಮಾರು 30. 7 ಪೌಂಡುಗಳಷ್ಟು ಗೊಬ್ಬರವನ್ನುಪಯೋಗಿಸುತ್ತಿದ್ದಾರೆ. ಆದರೆ ನಮ್ಮ ಇಂಡಿಯಾ ದೇಶದಲ್ಲಿ 1.0 ಪೌಂಡುಗಳಷ್ಟು ಗೊಬ್ಬರವನ್ನು ಪ್ರತಿಯೊಂದು ಎಕರೆಗೂ ಉಪಯೋಗಿಸುತ್ತಿದ್ದಾರೆ. ನೈಸರ್ಗಿಕವಾಗಿ ಪ್ರತಿಯೊಂದು ಎಕರೆಯಷ್ಟು ಭೂಮಿಗೂ ಎಷ್ಟು ಗೊಬ್ಬರವನ್ನುಪಯೊಗಿಸುತ್ತಿದ್ದಾರೆ ಎನ್ನುವುದಕ್ಕೆ ಇವೆರೆಡು ಮೂರು ಅಂಶಗಳಿಂದ ಈಗ ನಾವು ಇಲ್ಲಿ ಮನದಟ್ಟುಮಾಡಿಕೊಳ್ಳಬಹುದು. ಕಳೆದ ಹತ್ತು ಹನ್ನೆರಡು ವರ್ಷಗಳಲ್ಲಿ ನಾವು ಏನೇನು ಪ್ರಚಾರಗಳು ಎಂದು ಮಾಡಿರಲಿ, ಸಪ್ತಾಹಗಳೆಂದು ಮಾಡಿರಲಿ, ಹಾಗೂ ಇನ್ನೂ ಬೇಕಾದಷ್ಟು ಕಾರ್ಯಾಚರಣೆಗಳನ್ನು ಮಾಡಿರಲಿ; ಇಲ್ಲಿಯ ಅಧಿಕಾರಿಗಳು ಜನರಿಗೆ ಆಶ್ವಾಸನೆಗಳನ್ನು ಕೊಟ್ಟಿರಲಿ ಅಂತಹ ಪ್ರಚಾರಗಳೆಲ್ಲ ನಿರರ್ಥಕವಾದವುಗಳು ಎಂದು ನಾವು ಈಗ ಅರಿಯಬೇಕಾಗಿದೆ. ದೇಶ ಸ್ವತಂತ್ರವಾಗಿರಬಹುದು. ನಮ್ಮ ದೇಶದ ವಿದೇಶಾಂಗ ನೀತಿ ವಿಶ್ವದ ವಿದೇಶಾಂಗ ನೀತಿಗೆ ಸರಿಸಮನಾಗಿರಬಹುದು. ನಮ್ಮ ದೇಶದ ಅಂತರಿಕ ನೀತಿ ಯಾವ ರೀತಿಯಾಗಿರಬೇಕು ಎನ್ನುವುದಕ್ಕೆ ಇಡೀ ರಾಷ್ಟ್ರದ ಅಡಿಪಾಯದ ನೀತಿಯ ಮೇಲೆ ಇದೂ ಕೂಡ ಅವಲಂಬನೆ ಮಾಡಬೇಕು. ಹದಿನೆಂಟು ವರ್ಷಗಳಾದರೂ ಕೂಡ ಆಹಾರದ ಕ್ಷೇತ್ರದಲ್ಲಿ ಪರಿಪೂರ್ಣತೆ ಸಾಧಿಸುವ ಕಡೆಗೆ ಹೋಗಿಲ್ಲ. ಇದರ ಬಗ್ಗೆ ಸಾಕಾದಷ್ಟು ಯಶಸ್ಸನ್ನು ಗಳಿಸದೇ ಇರುವುದಕ್ಕೆ ಕಾರಣವೇನು ಎನ್ನುವುದಕ್ಕೆ ಇಲ್ಲಿರುವ ಎಲ್ಲ ಸದಸ್ಯರೂ ಪಕ್ಷಾತೀತವಾದ ದೃಷ್ಟಿಯಿಂದ ಇದನ್ನು ಯೋಚನೆ ಮಾಡಬೇಕು. ಕೆಲವರು ಹೇಳಬಹುದು, ಮುಖ್ಯವಾಗಿ ವಿರೋಧ ಪಕ್ಷದಲ್ಲಿರತಕ್ಕವರು ಟೀಕಾಕಾರರಾಗಿ ಈ ದಿವಸ ಭಾಷಣ ಮಾಡುತ್ತಿದ್ದಾರೆ ಎಂದು. ನಾನು ಇಲ್ಲಿ ಬಹಳ ನಮ್ರತೆಯಿಂದ ಒಂದು ವಿಚಾರವನ್ನು ಸೂಚಿಸಬಯಸುತ್ತೇನೆ ಮತ್ತು ನಮ್ಮ ರಾಜ್ಯ ಸರಕಾರಕ್ಕೆ ಒಂದು ಸೂಚನೆಯನ್ನೂ ಕೊಡಬಯಸುತ್ತೇನೆ. ನಾವು ಯಾರಾದರೂ ಆಹಾರದ ವಿಚಾರದಲ್ಲಿಯೇ ಆಗಲಿ ಅಥವಾ ಇನ್ನಾವ ವಿಚಾರದಲ್ಲೇ ಆಗಲೀ ಇಂತಹ ಭಯಂಕರ ಪರಿಸ್ಥಿತಿಯಲ್ಲಿ ನಾವು ಮಾಡತಕ್ಕ ಟೀಕೆಗಳೆಲ್ಲಾ ಸದ್ಭಾವನೆಯಿಂದಲೇ ಕೂಡಿದವುಗಳಾಗಿರುತ್ತವೆ ಎನ್ನುವುದನ್ನು ರಾಜ್ಯಸರಕಾರದವರು ಅರಿತುಕೊಳ್ಳಬೇಕು ಎಂದು ಇಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ನೆನ್ನೆಯ ದಿವಸ ಇಲ್ಲಿ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಶಿವಪ್ಪನವರು ಬಹಳ ಒಳ್ಳೆಯ ಭಾಷಣವನ್ನು ಮಾಡಿದರು ಮತ್ತು ಅವರು ಒಳ್ಳೆಯ ಸಲಹೆಗಳನ್ನೂ ರಾಜ್ಯಸರಕಾರದ ಮುಂದೆ ಇಟ್ಟಿದ್ದಾರೆ. ನಮ್ಮ ದೇಶದಲ್ಲಿ ಈ ದಿವಸ ತುರುಬಿಗೆ ಮಲ್ಲಿಗೆ ಹೂವನ್ನುಸಿಕ್ಕಿಸುವ ಮನೋಭಾವನೆ ಈಗ್ಗೆ ಕೆಲವು ವರ್ಷಗಳಿಂದಲೂ ನಡೆಯುತ್ತಾಬಂದಿದೆ. ಇನ್ನು ಮುಂದೆ ಇದನ್ನು ನಾವು ಕಿತ್ತೊಗೆಯಬೇಕಾದರೆ ಮಿತವ್ಯಯ ಸಾಧನೆ ಮಾಡಬೇಕು. ಏತಕ್ಕೆಂದರೆ ದೇಶದ ರಕ್ಷಣಾ ದೃಷ್ಟಿಯಿಂದ ಯಾವಯಾವ ಮಟ್ಟದಲ್ಲಿ ಯಾವ ಯಾವ ಕ್ಷೇತ್ರದಲ್ಲಿ ಎಷ್ಟೆಷ್ಟು ಮಿತವ್ಯಯ ಸಾಧಿಸಬಹುದೋ ಅಷ್ಟೆಲ್ಲವನ್ನೂತುರ್ತು ದೃಷ್ಟಿಯಿಂದ ಸಾಧಿಸಬೇಕು ಎಂದು ನಾನಾದರೂ ಕೂಡ ಈ ಸಭೆಯಲ್ಲಿ ನಮ್ರತೆಯಿಂದ ಕಳಕಳಿಯಿಂದ ಇಲ್ಲಿ ಹಾಜರಿರುವ ನಮ್ಮ ನಾಯಕರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಇನ್ನೂ ಈ ರಾಜ್ಯಕ್ಕೆ ಭಂಗವಿಲ್ಲದಂತೆ ಮಿತವ್ಯಯ ಸಾಧಿಸಬಹುದು; ನಮ್ಮ ನಮ್ಮ ಕ್ಷೇತ್ರದಲ್ಲಿ ಮಿತವ್ಯಯ ಸಾಧನೆ ಮಾಡುವುದಕ್ಕೆ ಸಾಕಾದಷ್ಟು ಅವಕಾಶವಿಲ್ಲವೇ ? ಮೈಸೂರು ರಾಜ್ಯ ಸರಕಾರದಲ್ಲಿ ಮಂತ್ರಿಮಂಡಲದಲ್ಲಿನ ಮಟ್ಟದಲ್ಲಿ ಮತ್ತು ಅಧಿಕಾರಿಗಳ ಮಟ್ಟದಲ್ಲಿ ಎಷ್ಟು ಮಟ್ಟಿನ ಮಿತವ್ಯಯವನು ಸಾಧಿಸಬಹುದು ಎನ್ನುವುದನ್ನು ಆಳವಾಗಿ ಮತ್ತು ದೂರ ದೃಷ್ಟಿಯಿಂದ ಸರ್ವಸಮರ್ಪಕವಾದ ದೃಷ್ಟಿಯಿಂದ ಯೋಚನೆ ಮಾಡತಕ್ಕ ಈ ಸನ್ನಿವೇಶದಲ್ಲಿ ನಮ್ಮ ಮೈಸೂರು ದೇಶದ ಮುಖ್ಯ ಮಂತ್ರಿಗಳು ಈ ದಿವಸ ಇಲ್ಲಿದ್ದಾರೆ. ನಮ್ಮ ಮೈಸೂರು ಮುಖ್ಯ ಮಂತ್ರಿಗಳು ಒಂದು ತ್ವರಿತವಾದ ನಿರ್ಧಾರವನ್ನು ತೆಗೆದುಕೊಳ್ಳಬೇಕು. ಇಡೀ ರಾಜ್ಯದಲ್ಲಿ ಇಷ್ಟೆಲ್ಲವನ್ನೂ ಸಾಧಿಸಲು ತಕ್ಕ ಒಂದು ನಿರ್ಧಾರವನ್ನು ಕೈಗೊಳ್ಳಬೇಕು. ಹಿಂದೆ ಎಂದೂ ಕಾಣದಂತಹ ಭಯಂಕರ ಪರಿಸ್ಥಿತಿ ಇಡೀ ರಾಜ್ಯದಲ್ಲಿ ಈಗ ಬರುತ್ತಿದೆ ಎಂದು ಶ್ರೀಮಾನ್ ಕೃಷ್ಣಪ್ಪನವರು

(ಶ್ರೀ ಎಸ್. ಎಂ. ಕೃಷ್ಣ)

ಇಲ್ಲಿ ಹೇಳಿದರು. ಸರಕಾರ ಈ ವರ್ಷದಲ್ಲಿ ಯಾವ ರೀತಿಯಾಗಿ ಭತ್ತದ ಬೆಳೆ ಬೆಳೆದರೂ ಅದೇನಾಗಿದೆ ಎನ್ನುವುದರ ಬಗ್ಗೆ ಎಷ್ಟೋ ಘಟನೆಗಳನ್ನು ಇಲ್ಲಿ ತಿಳಿಸಿದರು. ಭಾರತದ ಬಂದ್ ಘಟನೆಗಳು ಇಲ್ಲಿ ನಡೆದವು.

ಅದರಿಂದ ದೇಶದಲ್ಲಿ ಏನೇನೋ ಆಯಿತು, ಬಳ್ಳಾರಿಯಲ್ಲಿ ಗೋಲೀಬಾರಾಯಿತು, ದೇಶದ ನಾನಾ ಕಡೆಗಳಲ್ಲಿ ದಸ್ತಗಿರಿಗಳಾದವು. ಈ ದಿವಸ ದೇಶದಲ್ಲಿರತಕ್ಕ ಜನರು ಏನೊಂದು ತೀರ್ಮಾನಕ್ಕೆ ಬಂದಿದ್ದಾರೆಂದರೆ, ಈ ದೇಶ ಉಳಿದು ಚೆನ್ನಾಗಿ ಬಾಳಬೇಕಾದರೆ, ನಾವೀದಿವಸ ಇಲ್ಲಿ ಏನೊಂದು ಒಗ್ಗಟ್ಟನ್ನು ಪ್ರತಿಬಿಂಬಿಸುತ್ತಿದ್ದೇವೋ ಆದರ ಮೇಲೆ ನಮ್ಮ ದೇಶದ ಭವಿಷ್ಯ, ರಾಜ್ಯದ ಭವಿಷ್ಯ ನಿಲ್ಲುವುದರಿಂದ, ಇಡೀ ರಾಜ್ಯದಲ್ಲಿರತಕ್ಕ ಜನರು ನಮ್ಮನ್ನು ಹಿಂಬಾಲಿಸಿ ಬರುವುದಕ್ಕೆ ತಯಾರಾಗಿದ್ದಾರೆ. ಎಲ್ಲಿಯವರೆಗೂ ನಮ್ಮ ಸರ್ಕಾರ ನಮ್ಮ ಮಂತ್ರಿಮಂಡಲ ದೂರದೃಷ್ಟಿಯಿಂದ ಕೆಲಸಕಾರ್ಯಗಳನ್ನು ನಡೆಸುವುದಕ್ಕೆ ಒಂದು ಸಂಕಲ್ಪವನ್ನು ತೊಡುತ್ತದೋ ಅಲ್ಲಿಯವರೆಗೂ ನಮ್ಮ ಸರ್ಕಾರವನ್ನು ಹಿಂಬಾಲಿಸುವುದಕ್ಕೆ ಈ ಸಭೆ ಹಾಗೂ ದೇಶದಲ್ಲಿರತಕ್ಕ ಜನರೂ ತಯಾರಾಗಿದ್ದಾರೆ. ಆದರೆ ಈಗ ಚೆಂಡು ಮಾನ್ಯ ಮುಖ್ಯ ಮಂತ್ರಿಗಳ ಕೋರ್ಟಿನಲ್ಲಿದೆ. ಈಗ ನಮ್ಮ ಮುಖ್ಯ ಮಂತ್ರಿಗಳು ಈ ಪರಿಸ್ಥಿತಿಯನ್ನು ಎದುರಿಸತಕ್ಕ ಜವಾಬ್ದಾರಿ ಅವರಮೇಲೆ ಬಿದ್ದಿದೆ. ಅವರು ಇದನ್ನು ಎಷ್ಟು ದೂರದೃಷ್ಟಿಯಿಂದ ದಕ್ಷತೆಯಿಂದ ನೇರವೇರಿಸುತ್ತಾರೋ ಅಷ್ಟರಮಟ್ಟಿಗೆ ಈ ರಾಜ್ಯದ ಭವಿಷ್ಯ ಹಾಗೂ ಇದರ ಪ್ರಗತಿ ಅದರ ಮೇಲೆ ನಿಂತಿದೆ. ನಾವಾದರೋ ಹಿಂದೆ ಅನೇಕ ಸಂದರ್ಭಗಳಲ್ಲಿ ಈ ವಿಚಾರವಾಗಿ ಕಟುವಾಗಿ ಮಾತನಾಡಿದ್ದೇವೆ, ಕೋಪವಾಗಿಯೂ ಮಾತನಾಡಿದ್ದೇವೆ, ಹಾಗೂ ನಮ್ರತೆಯಿಂದಲೂ ಹೇಳಿದ್ದೇವೆ, ವಿನಯದಿಂದಲೂ ಹೇಳಿದ್ದೇವೆ. ಆದರೆ ನಾವು ಏನೇನು ಹೇಳಿದ್ದೆವು ಎಂಬುದನ್ನೆಲ್ಲಾ ನಾನೀಗ ಪ್ರಸ್ತಾಪಮಾಡುವುದಕ್ಕೆ ಹೋಗುವುದಿಲ್ಲ. ನಮಗೆ ಅತಿ ಅಗತ್ಯವಾಗಿ ಬೇಕಾಗಿರತಕ್ಕ ಮಿತವ್ಯಯವನ್ನು ಈ ದಿವಸ ನಮ್ಮ ಮುಖ್ಯ ಮಂತ್ರಿಗಳು ಎಲ್ಲಮಟ್ಟಗಳಲ್ಲಿಯೂ ಅಂದರೆ ರಾಜ್ಯ ಮಟ್ಟದಲ್ಲಿಯೂ ದೇಶದ ಮಟ್ಟದಲ್ಲಿಯೂ ಎಷ್ಟರಮಟ್ಟಿಗೆ ಇದನ್ನು ಸಾಧಾನೆಮಾಡುತ್ತಾರೆಂಬುದನ್ನೂ, ಈ ವಿಚಾರದಲ್ಲಿ ಅವರ ಖಚಿತವಾದ ಧೋರಣೆಯೇನಿದೆ ಎಂಬುದನ್ನು ಬಹಳಮಟ್ಟಿಗೂ ರಾಜ್ಯದ ಜನತೆ ನಿರೀಕ್ಷಿಸುತ್ತಿದೆ ; ಎದುರುನೋಡುತ್ತಿದೆ. ದೇಶದಲ್ಲಿರತಕ್ಕ ರೈತರು ಯಾವುದಾದರೊಂದು ಒಳ್ಳೆಯದನ್ನು ಕಲಿಯಬೇಕಾಗಿದ್ದರೆ ಅವರು ಒಂದು ಆದರ್ಶವನ್ನು ಅನುಕರಣೆಗೆ ತರಬೇಕಾದರೆ ಅದನ್ನು ಅವರು ಸರ್ಕಾರದವರಿಂದ ಕಲಿಯಬೇಕಾಗಿದೆ. ನಾನು ಹಿಂದೆ ಹಲವಾರುಬಾರಿ ಸರ್ಕಾರಿ ವ್ಯವಸಾಯದ ಫಾರಂಗಳ ವಿಚಾರವಾಗಿ ಬಹಳ ಕಟುವಾಗಿ ಮಾತನಾಡಿದ್ದೇನೆ. ಈ ದಿವಸ ಸರ್ಕಾರಿ ಫಾರಂಗಳಲ್ಲಿ ಕೆಲಸಕಾರ್ಯಗಳು ನಡೆಯುತ್ತಿರುವಂತೆ ದೇಶದಲ್ಲಿರತಕ್ಕ ರೈತನೂ ನಡೆಸಿದ ಪಕ್ಷಕ್ಕೆ ಇಂದೇ ದೇಶದ ಮಂಗಳದಿನಗಳು ಮುಗಿದುಹೋದವು ಎಂದು ನಾನು ಭಾವಿಸುತ್ತೇನೆ. ಸರ್ಕಾರೀ ಫಾರಂಗಳಲ್ಲಿ ನಡೆಯುತ್ತಿರುವ ಕೆಲಸಕಾರ್ಯಗಳೇನಿವೆ ಅವು ಯಾರಿಗೂ ಯಾವ ಒಂದು ಉತ್ಸಾಹವನ್ನಾಗಲೀ ಒಂದು ಸ್ಫೂರ್ತಿಯನ್ನಾಗಲೀ ಕೊಡುವುದಿಲ್ಲ: ಯಾವುದಾದರೂ ಒಂದು ಜಿಲ್ಲೆಯಲ್ಲಿ ಅಥವಾ ತಾಲ್ಲೂಕಿನಲ್ಲಿ ಒಂದು ಸರ್ಕಾರಿ ಫಾರಂ ಇದ್ದರೆ ಅಂಥ ಫಾರಂನ ಅಕ್ಕಪಕ್ಕದಲ್ಲಿರತಕ್ಕ ಅಜ್ಞಾನಿ ರೈತರುಗಳು ಸರ್ಕಾರದವರು ತಮ್ಮ ಫಾರಂನಲ್ಲಿ ಏನೇನು ಹೊಸಬೆಳೆಗಳನ್ನು ಬೆಳೆಯುತ್ತಾರೆ, ಹೇಗೆ ಬೆಳೆಸುತ್ತಾರೆ ಎಂಬುದನ್ನು ನೋಡುತ್ತಾರೆ. ವ್ಯವಸಾಯದ ಕಾಲೇಜಿನಲ್ಲಿ ವ್ಯಾಸಂಗಮಾಡಿಕೊಂಡು ಬಂದಂಥವರು ಅವರ ನೇತೃತ್ವದಲ್ಲಿ ಒಂದು ಆದರ್ಶಪ್ರಾಯವಾದ ಬೆಳೆಯನ್ನು ತೆಗೆಯುವುದಕ್ಕೆ ಅವರು ಪ್ರಯತ್ನ ಮಾಡಬೇಕು. ಆದರೆ ಹಾಗೆ ನಡೆಯುತ್ತಿಲ್ಲ ; ಅಲ್ಲಿ ನಡೆಯತಕ್ಕ ಕೆಲಸಕಾರ್ಯಗಳು ಸಮರ್ಪಕವಾಗಿಲ್ಲ. ಬಹಳ ಅಸಮಾಧಾನವನ್ನುಂಟುಮಾಡತಕ್ಕ ರೀತಿಯಲ್ಲಿ ಅವು ನಡೆಯುತ್ತಿವೆ. ನಾನು ಇದೇ ವಿಚಾರವನ್ನು ಶ್ರೀ ಜಿ. ನಾರಾಯಣಗೌಡರಿಗೆ ಅನೇಕಾವರ್ತಿ ತಿಳಿಸಿದ್ದೇನೆ. ಅವರಿಗೆ ಯಾವುದಾದರೊಂದು ಸರ್ಕಾರಿ ಫಾರಂಗೆ ಭೇಟಿಕೊಟ್ಟು ಅಲ್ಲಿ ಒಂದು ಎಕರೆಯಲ್ಲಿ ಅವರು ಎಷ್ಟು ಬೆಳೆಯನ್ನು ತೆಗೆಯುತ್ತಾರೆ ಎಂಬುದನ್ನು ಅವರು ಖುದ್ದಾಗಿ ಪರಿಶೀಲನೆ ಮಾಡಬೇಕೆಂದು ಹೇಳಿದ್ದೆ, ಆದರೆ ಅವರಿಗೆ ಸಾಕಷ್ಟು ಕಾಲಾವಕಾಶವಿಲ್ಲದೆಯೋ ಅಥವ ಅವರಿಗೆ ಮನಸ್ಸಿಲ್ಲದೆಯೋ ಅದನ್ನು ಅವರಿನ್ನೂ ಮಾಡಿಲ್ಲ, ಅದು ನಮ್ಮ ದುರದೃಷ್ಟ. ಇಲ್ಲಿಗೆ 20 ವರ್ಷಗಳ ಕೆಳಗೆ ಈಗ ನಡೆಯುತ್ತಿರುವ ಸರ್ಕಾರಿ ಫಾರಂಗಳೇನಿವೆ ಅವುಗಳಿಗೆ ಬೇಕಾದ ಜಮೀನುಗಳನ್ನು ನಾವೇ ಕೊಟ್ಟೆವು. ಅಲ್ಲಿ ಸರ್ಕಾರದವರ ನೇತೃತ್ವದಲ್ಲಿ ವ್ಯವಸಾಯದ ಕೆಲಸಕಾರ್ಯಗಳು ಬಹಳ ಚೆನ್ನಾಗಿ ನಡೆದು ನಮ್ಮ ರೈತಾಪಿ ಜನರಿಗೆ ಅದರಿಂದ ಬಹಳ ಅನುಕೂಲವಾಗುತ್ತದೆ ಎಂದು ನಾವೆಲ್ಲರೂ ಭಾವಿಸಿದ್ದೆವು. ಈ ದಿವಸ ಯಾರೇ ಆಗಲೀ ಯಾವ ಮಂತ್ರಿಗಳೇ ಆಗಲೀ ನಮ್ಮ ಹಳ್ಳಿಯಲ್ಲಿರತಕ್ಕ ಅಂದರೆ ಸೋಮನಹಳ್ಳಿಯಲ್ಲಿರತಕ್ಕ ಫಾರಂಗೆ ಹೋಗಿ ನೋಡಲಿ, ಆಗ ಅವರ ಹೃದಯಗಳೇ ಏನು ಹೇಳುತ್ತೆಂಬುದನ್ನು ಅವರು ನೋಡಲಿ. ಅವರು ಒಂದು ಎಕರೆಯಲ್ಲಿ ಎಷ್ಟು ಬೆಳೆಯನ್ನು ತೆಗೆಯುತ್ತಾರೆಂಬುದನು ನೋಡಲ

ಆ ಸರ್ಕಾರಿ ಫಾರಂನವರಿಗೆ ರೈತರಿಗಿರುವಂತೆ ಗೊಬ್ಬರದ ಕೃತಕ ಗೊಬ್ಬರವಾಗಲೀ—ನೈಸರ್ಗಿಕ ಗೊಬ್ಬರವಾಗಲೀ ಅದರ ತೊಂದರೆಯಿಲ್ಲ. ನೀರಿನ ತೊಂದರೆ ಇಲ್ಲ. ಕಂದಾಯಕ್ಕೇನು ಮಾಡಬೇಕೆಂಬ ಹೆದರಿಕೆಯಿಲ್ಲ. ಯಾರಿಗೆ ನೀರಿಲ್ಲದಿದ್ದರೂ ಸರ್ಕಾರಿ ಜಮೀನಿಗೆ ನೀರು ಸದಾ ಹರಿಯುತ್ತಿರುತ್ತದೆ. ರೈತನು ಜಮೀನನ್ನೋ ಅಥವಾ ದನಕರುಗಳನ್ನೊ ಮಾರಿ ಕಂದಾಯ ಕಟ್ಟತಕ್ಕಂಥ ಸ್ಥಿತಿ ಅವರಿಗಿರುವುದಿಲ್ಲ. ಅಷ್ಟೆಲ್ಲಾ ಅನುಕೂಲಗಳಿದ್ದರೂ ಅವರೇಕೆ ಅವರು ಮಾಡತಕ್ಕ ವ್ಯವಸಾಯದಲ್ಲಿ ಇಳುವಳಿಯನ್ನು ಕಡಿಮೆ ಮಾಡಿದ್ದಾರೆ ಎಂಬುದಕ್ಕೆ ಕಾರಣವೇನೆಂಬುದನ್ನು ತಾವೆಲ್ಲರೂ ಆಲೋಚನೆ ಮಾಡಬೇಕಾಗಿದೆ. ದೇಶದ ಹಿತದೃಷ್ಟಿಯಿಂದ ಇವುಗಳನ್ನೆಲ್ಲಾ ಮುಚ್ಚಿಬಿಟ್ಟು ಈ ಹಿಂದೆ ಯಾರ್ಯಾರಿಂದ ಆ ಜಮೀನುಗಳನ್ನು ಪಡೆಯಲಾಗಿತ್ತೊ, ಅವರವರಿಗೇ ಆ ಜಮೀನುಗಳನ್ನು ವಾಪ್ಸು ಕೊಡತಕ್ಕದ್ದು ಅನುಕೂಲವೆಂದು ನನಗನಿಸುತ್ತಿದೆ.

ಶ್ರೀ ಸಂಜೀವನಾಥ ಐಕಳ (ಸುರತ್ಕಲ್).—ನಾಗನಹಳ್ಳಿಯಲ್ಲೂ ಅಷ್ಟೇ ಸೋಮನಹಳ್ಳಿ ಒಂದೇ ಅಲ್ಲ.....

ಶ್ರೀ ಎಸ್. ಎಂ. ಕೃಷ್ಣ.—ಉದಾಹರಣೆಗಾಗಿ ನಾನು ಸೋಮನಹಳ್ಳಿಯನ್ನು ಹೇಳಿದೆನು. ಎಲ್ಲ ಕಡೆಗಳಲ್ಲೂ ಹಾಗೇ ಇದೆ. ನೆನ್ನೆಯ ದಿವಸ ಶ್ರೀಮಾನ್ ಶಿವಪ್ಪನವರು ಮಾತನಾಡುತ್ತಾ ದಸರಾ ಮಳೆ ಬರಲಿಲ್ಲ ಅಂತ ಹೇಳುತ್ತಿದ್ದರೆ, ಕಂದಾಯದ ಮಳೆ ಕೂಡ ಬರಲಿಲ್ಲ ಎಂದು ಹೇಳಿದರು. ಆದರೆ ಇನ್ನು ಕೆಲವರು ನಾಳೆ 17ನೇ ತಾರೀಖು ಕಾವೇರಿ ಜಾತ್ರೆ ನಡೆಯುತ್ತೆ, ಆ ದಿವಸ ಖಂಡಿತವಾಗಿಯೂ ಮಳೆ ಬರುತ್ತೆಂದು ಹೇಳುತ್ತಿದ್ದಾರೆ. ಅದನ್ನು ನಾವಿನ್ನೂ ಕಾದು ನೋಡಬೇಕಾಗಿದೆ. ಆದರೆ ನಾವು ದೇಶದಲ್ಲಿ ಇಂದು ಕ್ಷಾಮ ಬಂದಿದೆ ಎಂದು ಹೇಳುವುದಿಲ್ಲ. ದೇಶದಲ್ಲಿ ಕ್ಷಾಮ ಪರಿಸ್ಥಿತಿಯಿದ್ದರೂ ಅದನ್ನು ಎದುರಿಸುವುದಕ್ಕೆ ನಮಗೆ ಶಕ್ತಿಯಿದೆ. ನಾವು ಈ ಒಂದು ಕಾರಣಕ್ಕಾಗಿ ಅಮೆರಿಕಾ ದೇಶವಾಗಲೀ, ಕೆನಡಾ ದೇಶವಾಗಲೀ ಅಥವಾ ಮತ್ತೊಂದು ದೇಶವಾಗಲೀ ಅವರು ಆಹಾರ ಧಾನ್ಯಗಳನ್ನು ಕೊಡತಕ್ಕ ಸಂದರ್ಭದಲ್ಲಿ ಹಾಕತಕ್ಕ ಷರತ್ತುಗಳಿಗೆಲ್ಲಾ ನಾವು ಮಣಿಯಬೇಕಾದ್ದಿಲ್ಲ ಎಂದು ಹೇಳಬಯಸುತ್ತೇನೆ. ಇಂದು ಅಭಾವಕ್ಕೊಳಗಾಗಿರತಕ್ಕ ಪ್ರದೇಶಗಳ ಬಗ್ಗೆ ಸರ್ಕಾರದವರ ಜವಾಬ್ದಾರಿ ಒಂದು ಹೊಣೆಗಾರಿಕೆ ಬಹಳವಾಗಿದೆ. ಈ ವಿಚಾರದಲ್ಲಿ ನಮಗೆಲ್ಲರಿಗೂ ಎಷ್ಟರಮಟ್ಟಿನ ಕಳವಳವಿದೆಯೋ ಸರ್ಕಾರದವರಿಗೂ ಅಷ್ಟೇ ಕಳವಳವಿದೆ ಎಂಬುದನ್ನು ನಾನೂ ಕೂಡ ಒಪ್ಪುತ್ತೇನೆ. ಅದರೆ ಈ ವಿಚಾರದಲ್ಲಿ ನಾನೀಗ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ನನಗೆ ತೋಚುವುದೇನೆಂದರೆ, ಇಡೀ ರಾಜ್ಯದಲ್ಲಿರತಕ್ಕ ರೈತರೇನು ಈಗಾಗಲೇ ಸಹಕಾರಿ ಸಂಘಗಳಿಂದ ಸಾಲ ಪಡೆದುಕೊಂಡಿದ್ದರೋ ಅದರ ಮರುಪಾವತಿ ದಿನಗಳು ಹತ್ತಿರವಾಗಿ ಬಂದಿವೆ. ದೇಶದ ನಾನಾ ಭಾಗಗಳಲ್ಲಿ ಮಳೆಯಿಲ್ಲದೆ ಬೆಳೆಯಾಗದೆ ರೈತರು ಕಷ್ಟನಷ್ಟಗಳಿಗೊಳಗಾಗಿದ್ದಾರೆ. ಅವರಿಗೆ ಸಾಲ ತೀರಿಸತಕ್ಕ ಧೈರ್ಯವೇನಿತ್ತು, ಆದಕ್ಕೆ ಈಗ ಸಂಚಕಾರ ಬಂದಿದೆ. ಆದುದರಿಂದ ಈ ಸಾಲ ಮರುಪಾವತಿ ದಿನವನ್ನು ಮುಂದಕ್ಕೆ ಹಾಕಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ, ಯಾವಾಗ ಮಳೆಬಾರದೆ ಖುಷ್ಕಿ ಬೆಳೆಯೆಲ್ಲಾ ಹೋಯಿತೋ ಅಂಥ ಸಂದರ್ಭದಲ್ಲಿ ಸಾಮಾನ್ಯವಾಗಿ ಕಂದಾಯ ಮಾಫಿ ಮಾಡುವುದು ವಾಡಿಕೆ ಆಗಿದೆ. ಆದರೆ ಸರ್ಕಾರದವರಿಗೂ ಹಣ ಬೇಕೇ ಬೇಕು. ಹಣವಿಲ್ಲದಿದ್ದರೆ ದೇಶದ ರಕ್ಷಣೆ ಹಾಗೂ ಅನೇಕ ಅಭಿವೃದ್ಧಿ ಕಾರ್ಯಗಳು ನಡೆಯುವುದಕ್ಕೆ ಬಹಳ ಕಷ್ಟವಾಗುತ್ತದೆ. ನಮ್ಮಲ್ಲಿರತಕ್ಕ ಅಧಿಕಾರಿಗಳು ಕಂದಾಯವನ್ನು ವಸೂಲ್ಮಾಡುವಾಗ ಬಹಳ ನಿಷ್ಕರುಣೆಯಿಂದ ವರ್ತಿಸುತ್ತಾರೆ. ಹಾಗೆ ಮಾಡದಿದ್ದರೆ ನಾಳೆ ಅವರ ಸಂಬಳ ಸಾರಿಗೆಗೆ, ಅವರ ಇನ್‌ಕ್ರಿಮೆಂಟುಗಳಿಗೆ ಮತ್ತು ಪ್ರಮೋಷನ್‌ಗೆ ಧಕ್ಕೆಯಾಗಬಹುದೆಂಬ ಕಾರಣ ಅವರು ಹಾಗೆ ಮಾಡಬಹುದು. ಆದರೆ ಈ ದಿವಸ ಮಳೆಬಾರದೆ ಚಿತ್ರದುರ್ಗ, ತುಮಕೂರು, ಕೋಲಾರ ಮತ್ತು ಹಾಸನ ಇತ್ಯಾದಿ ಜಿಲ್ಲೆಗಳಲ್ಲಿ ಈ ವರ್ಷ ಕಂದಾಯವನ್ನು ಮಾಫಿ ಮಾಡತಕ್ಕದ್ದು ಯೋಗ್ಯವಾದುದೆಂದು ನನಗನಿಸುತ್ತಿದೆ.

ಇನ್ನು ನಾವು ಈ ಆಹಾರ ಕ್ಷೇತ್ರದಲ್ಲಿ ಇದರ ಅಭಿವೃದ್ಧಿಯ ಬಗ್ಗೆ ಏನು ಅಭಿಪ್ರಾಯಗಳನ್ನಿಟ್ಟುಕೊಂಡಿದ್ದೇವೋ ಅವುಗಳನ್ನು ಈಗ ಬದಲಾಯಿಸತಕ್ಕ ಕಾಲ ಬಂದಿದೆ. ಮುಂದೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯನ್ನು ನಮ್ಮ ರಾಜ್ಯದ ಮಟ್ಟಿಗೆ ನಾವು ಕಾರ್ಯಗತ ಮಾಡುವಾಗ ರಕ್ಷಣಾ ವಿಚಾರ ಒಂದು, ವ್ಯವಸಾಯದ ವಿಚಾರ ಇನ್ನೊಂದು ಈ ಎರಡೇ ಎರಡು ಆಲೋಚನೆಯನ್ನು ನಮ್ಮ ರಾಜ್ಯ ಸರ್ಕಾರ ಮಾಡಬೇಕು. ಇನ್ನು ಎಲ್ಲಾ ಆಲೋಚನೆಗಳು—ಶಾಲಾ ಕಟ್ಟಡಗಳು, ಪೋಸ್ಟ್ ಆಫೀಸುಗಳು, ಹೊಟೇಲುಗಳು ಇವೆಲ್ಲವೂ ನಿಂತರೂ ಚಿಂತೆ ಇಲ್ಲ. ಶಾಲಾ ಕಟ್ಟಡಗಳನ್ನು ಗುಡಿಸಲುಗಳಲ್ಲಿ ಮಾಡಬಹುದು. ಇವತ್ತಿನ ಬೆಳಗಿನ ಪತ್ರಿಕೆಯಲ್ಲಿ ಬಂದಿದೆ, ಬಿ.ಟಿ.ಎಸ್. ಬಸ್ಸುಗಳಿಗೆ ಬಣ್ಣ ಹೊಡೆಸುವುದಕ್ಕೆ ಎರಡೂವರೆ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ನಿರತರಾಗಿದ್ದಾರೆ. ಮತ್ತೊಂದು ಕಡೆ ಹೊಟೇಲ್ ಕಟ್ಟಿಸುವುದಕ್ಕೆ 30 ಲಕ್ಷ ರೂಪಾಯಿಗಳನ್ನು ಕೊಡಲು

(ಶ್ರೀ ಎಸ್. ಎಂ. ಕೃಷ್ಣ)

ಸರ್ಕಾರ ಮುಂದೆ ಬರುತ್ತಾ ಇದೆ. ಇದನ್ನೆಲ್ಲ ಮುಂದೆ ಒಳ್ಳೆಯ ದಿನಗಳು ಬಂದಾಗ—ಇನ್ನು 25-30 ವರ್ಷಗಳಲ್ಲಿ ಬರುತ್ತದೆಯೋ ಇಲ್ಲವೋ ಗೊತ್ತಿಲ್ಲ—ಅಂತಹ ಒಳ್ಳೆಯ ದಿನಗಳು ಬಂದಾಗ ಈ ಕೆಲಸ ಕಾರ್ಯಗಳನ್ನು ಇಟ್ಟುಕೊಂಡು ಇವತ್ತಿನ ದಿವಸ ದೇಶ ರಕ್ಷಣೆಯ ಕೆಲಸ ಒಂದು, ವ್ಯವಸಾಯದ ಕೆಲಸ ಒಂದು ಈ ಎರಡೇ ಎರಡಕ್ಕೆ ಹೆಚ್ಚು ಗಮನ, ಆದ್ಯತೆ ಕೊಡಬೇಕೆಂದು ಬಹಳ ಕಳಕಳಿಯಿಂದ ರಾಜ್ಯ ಸರ್ಕಾರದವರನ್ನು ಒತ್ತಾಯಪೂರ್ವಕವಾಗಿ ನಾನು ಪ್ರಾರ್ಥನೆ ಮಾಡಿ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† **Sri R. M. DESAI** (Bilgi).—Mr. Speaker, Sir, with regard to the motion which has been kept before us for consideration by the Government regarding growing more food in this critical time, I would like to place some of my observations and suggestions for immediate implementation by the Government so that we can realise results out of it. Sir, to start with, I am rather sorry, on my part at least, to observe that many of the suggestions so far made by us in this House thinking that they will solve many of our problems, have not had the desired effects and results. It may be due to red-tapism, we cannot say why it is happening. I feel that it should not happen. I humbly request, through you, Sir, that some of the suggestions which are really important should be implemented immediately so that we can achieve some good results.

Coming to the subject, Sir, this food production problem is very acute no doubt. But, we, as villagers, are trying our level best to do something on this front also and I am glad to say that we are achieving good results, at least in our area I can boast of having 50 per cent improvement in food production. We can prove this with facts and figures. I am glad that we are having healthy combination and advice from the respective officers and we are having foreign aid also. The pioneer Bank, *i.e.*, the Syndicate Bank, has really taken interest in this agricultural aspect in our area. They have solved many of our problems and our thanks are due to them. I request the Government to get the statisics which the Bank have collected so far in regard to food production for our useful implementation. I have found them very useful so far as food production is concerned.

We are spending huge amounts on major Irrigation. They have their own benefits, but they are prolonged benefits. The Government is giving top priority for minor irrigation schemes. Our outlay on minor irrigation at present is Rs. 12 crores, out of which we are spending Rs. 2 crores this year and for the Fourth Plan the spillover will be Rs. 10 crores. I would like to stress on this and we should get more funds for minor irrigation. Let us cut short our expenditure as far as we can on many of the other items. For example, we are spending lakhs of rupees on highways and making the roads straight. We can carry on with the present roads. Our immediate problem is food production. All such savings can be usefully spent on food production. For effective implementation of agricultural production my humble suggestion would be to put Food, Agriculture and Civil

Supplies under one port-folio and entrust it to an elderly experienced person, who can effectively deliver the goods to us. Of course, the joint responsibility of the Cabinet is there for effective implementation.

With regard to growing more food, why should we not start thinking of bringing self-sufficiency at the village level ? The proverb is; take care of the penny and the pound takes care of itself., If we start taking care of the village for self-sufficiency, I think, the remaining matters will follow automatically. During the recent Panchayati Raj Seminar organised by our Panchayati Raj Minister the other day at Hubli, we thrashed out many of the points and many useful suggestions were given, and I am sure some good results will come out of these suggestions. When we consider about food production, I need not impress that agriculture should be treated as an industry. It is not a matter to be relied upon. We have got to act according to the changing times. We have got to treat it as an industry, major minor and even sub-minor.

10-00 A.M.

It must be treated as an industry. That is the only way of showing better results. The question of input is more important than any other thing. There are so many inputs that we have to take into consideration and our village people are alert about these things and they are trying to do their best to bring more production. While on this point, I would like to bring to the notice of the House that electricity plays an important part, no doubt. We have found that it is the cheapest mode of power and transport for agricultural purposes. Why I have taken this point even at the risk of being misunderstood for a digression is to point out a few defects in the working of the electricity system. Sir, our area is not electrified. So many lines are being laid just now. The picture is prepared now. What we have observed is, so far, the Electricity Board is not considering or taking anybody's opinion in the matter at all, and which line will be more convenient from our point of view and so on. If we go into the past history of the progress of civilisation, progress of population, we have always seen that the best of civilisation and cultures have flourished and thrived on the banks of ever-flowing rivers. If we look to the history of the nation or the development we find it has always been along the banks of perennial rivers. We are asking the Electricity Board to lay lines in the thickly populated areas where there is good alluvial soil and where much water is available for the purpose of growing crops. Why not give power to the areas on the river banks ? The other day the Panchayati Raj Minister took a serious view of that in our Seminar which I would like to point out here. Our Food Minister also took a serious view of that. The Electricity Board say that they want to take the lines to suit their convenience of maintenance, where their jeeps would be plying—not according to our requirement. It is none of their considerations. They have put it point blank to us. That should not happen.

Mr. SPEAKER.—Do they suggest that production of food is not a consideration for them ?

Sri R. M. DESAI.—They are not considering food production at all in their plan. What matters to them is only their convenience of the line and the maintenance of it for conducting power. It should be easier for them to take their jeeps.

Mr. SPEAKER.—If there are any such ideas, it is better, they are dispelled.

Sri B. D. JATTI (Minister for Food). I shall deal with the point, Sir.

Sri R. M. DESAI.—The present day engineering trend should not be allowed to go on as it was 100 years back. The present day engineers should make it in such a manner that it must suit our requirements and not as it suits their whims. Let them utilise their intelligence, let them make it suitable to our requirements so that the lines are drawn where there is copious water supply and where irrigation can prosper, so that better results could be expected in minimum time. This is a point which I wanted to bring to the notice of the Government.

Mr. SPEAKER.—Does not the Hon'ble Member think that the Engineers are doing a good job, considering that the number of pumpsets serviced during 1956-57 stands at 1,209, in 1957-58 it is 1,278 ; in 1958-59 it is 1,554? Today, we are thinking of 10,000, 20,000 and a lakh !

Sri R. M. DESAI.—Sir, at the time the Electricity Board budget was discussed, I have given these figures. I hope, if I do not mistake there, I have given a comparative study of what is our target figure for pumpsets and what we have achieved here, corresponding to what has been achieved in the neighbouring States. That is staggering. We are actually groping in the dark. So, I request the Government, when electricity is coming in our area, it is absolutely a new area, I very humbly request the Government to see that this Board take us into confidence in laying the first lines, where they will be more useful to us, rather than laying lines and asking us to go behind them. It is very important. I hope it willing be implemented as early as possible. We have resorted to writing and we have written letters. They are not replied. There is no reply at all. And whatever replies are received, it is most disheartening. I tell you one thing. I had discussion with the Hon'ble Minister for Public Works and Electricity about electrifying an area which is called submersible area of Krishna. He agreed and he said that it is not a great matter. The question of submersion may come up after 8 to 10 years and after that time, when submersion takes place, we can take back the material and use it in other places. It does not take much money. When the Government is of that opinion, we requested the M S E B. to take up that area and they are writing to us point blank showing the engineering intelligence that in view of the submersion of the area, this scheme will not be feasible. It is very

disheartening. This will definitely impede food production and we cannot go on with this kind of intelligence. I request the Government to see that the MSEB changes its mind at least as far as this is concerned. They should not make any difference between submersible area and non-submersible area.

Then, Sir, I have been following meticulously and reminding the Government repeatedly to bring three of our lift irrigation schemes which have been laid in 1948 at a cost of 20 lakhs of rupees, which are capable of irrigating 6,000 acres. They are lying idle. I have been requesting the Government repeatedly and the Hon'ble Chief Minister has taken keen interest in that and he replied also to us. But still, to this day no action has been taken on that. I very humbly and respectfully request the Government through you, Sir, to see that these three schemes are revived so that it adds something to our food production. Something will at least be better than nothing. So, I wish to appeal once again to see that they are revived. I tell you, Sir, we make our suggestions here and go with the fond hope that they will be implemented, but so far, we have seen no action has been taken to bring out immediately results at least in this respect. I therefore once again appeal humbly and respectfully that they should be revived and they should be made to irrigate certain areas.

Let me not go into the various aspects of growing more food—how we are doing, how there are drawbacks. I admit there are drawbacks on our part also. But I request the Government to use its good offices with the Central Government to see that top priority is given to the question of importing fertilisers no matter what we spend there, because we will be producing more. It is our personal experience. Let me give you one instance of what happens in the GLBC irrigation system which comprises of four taluks—Jamkhandi, Mudhol, Gokak and other areas. Last year 250 acres were put under hybrid strains. We persuaded the people to take to it. The Rockfeller foundation, the Syndicate people have spent much time, energy and money and convinced the people. We have shown wonderful results. It has enthused the people to take up about—not less than 14,000 acres under maize. This is not a small figure. Where it was 250 acres last year, in the subsequent year it was 14,000 acres and taking at least at 14 quintals per acre, is it not a good achievement ? We in the villages, are not sitting quiet as villagers. We know our responsibility and we want to earn more. This is a time when we can earn more by working more. There is great necessity to earn more because we have to pay more for every other thing that we need. They have become costly. It is not necessary for anybody to tell, please grow more food. We are trying our best. We request the Government to give us more fertilizers and let the Central Government give top most priority for importing fertilisers which is very important, because imported strains of grain which has been developed by experts require the application of more fertilizers. The production goes on increasing as you increase the application of fertilizers.

(SRI R. M. DESAI)

It goes on increasing as you go on increasing the dosage of fertilisers. In the other crops, there is an optimum of production. But the recent strains have developed so much that the more fertilisers you use, the more production you get. It depends on the quantity of fertilisers you use.

As regards food procurement—thanks to the ingenious policy of our Food Minister—he has brought in such a procurement method that it will not fail. We will definitely give whatever is demanded. About storage of foodgrains that are procured. I have suggested to the Government that Pit Storage should be utilised. It will save us of subsidiary charges. The Food Minister himself has knowledge of this Pit storage system. His fathers and forefathers have great experience in this Pit Storage system. They have used this method. Why should that method not be adopted now as it eliminates a lot of investment for storing foodgrains on the part of the Government? About this, I have written to the Chief Minister and also have told him when he had come to Bijapur. If we are given some responsibility in our own taluka, we will show you, how it can be successfully worked.

† ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ಈ ಚರ್ಚೆಯಲ್ಲಿ ನಾನು ನಾಲ್ಕು ಮಾತುಗಳನ್ನಾಡಬೇಕು ಮತ್ತು ಕೆಲವು ಸಲಹೆಗಳನ್ನು ಕೊಡಬೇಕು ಎಂದು ಇಷ್ಟಪಡುತ್ತಿದ್ದೇನೆ.

ಈಗ ಆಹಾರ ಜಾಸ್ತಿ ಬೆಳೆಯಬೇಕು. ಎಲ್ಲರಿಗೂ ಗೊತ್ತಿರುವ ಹಾಗೆ ಭೂಮಿ, ನೀರು, ಗೊಬ್ಬರ, ಬಿತ್ತನೆಯ ಬೀಜ, ಮತ್ತು ಲೇಬರ್ ಈ ಐದರಿಂದ ಆಹಾರ ಜಾಸ್ತಿ ಮಾಡಬಹುದು ಎಂದು ಎಲ್ಲರಿಗೂ ತಿಳಿದಿರುವ ವಿಚಾರವಾಗಿದೆ. ನಮ್ಮ ರೈತರು ಏನು ಮಾಡುತ್ತಾರೆಂದರೆ. ಅವರ ಹತ್ತಿರವಿರುವ ಬಡಕಲ ಎತ್ತುಗಳಿಂದ ಉತ್ತು ಮಳೆ ಬರುತ್ತದೆ ಎಂದು ಕಾದುಕೊಂಡಿರುತ್ತಾರೆ, ಅವರ ಹತ್ತಿರ ಇದ್ದರೆ ಗೊಬ್ಬರ ಹಾಕುತ್ತಾರೆ. ಬಡಕಲ ಎತ್ತುಗಳು ಕೊಡುವ ಗೊಬ್ಬರವನ್ನು ಹಾಕಬೇಕು, ಇಲ್ಲವೇಹೋದರೆ ಇಲ್ಲ. ಇದಾದಮೇಲೆ ತಮ್ಮಲ್ಲಿರುವ ಹುಳುಕು ಪಳುಕು ಆಗಿರುವ ಬಿತ್ತನೆಯನ್ನು ಹಾಕಿ ಕುಳಿತುಕೊಂಡಿರಬೇಕು. ಇಷ್ಟರಲ್ಲಿ ನಮ್ಮ ದುಡಿಮೆ ಎಲ್ಲ ಮುಗಿಯಿತು ಎಂದು ಇರುತ್ತಾರೆ. ಎನ್. ಇ. ಎಸ್. ಮತ್ತು ಕಮ್ಯೂನಿಟಿ ಡೆವಲಪ್‌ಮೆಂಟ್ ಬ್ಲಾಕುಗಳು ವ್ಯವಸಾಯದ ಬಗ್ಗೆ ಮಾಡಿರುವುದಾದರೂ ಏನು ಎಂದು ನೋಡಿದರೆ, ಅವರ 'ಅಚೀವ್‌ಮೆಂಟ್' ಏನು ಎಂದು ನೋಡಿದರೆ ದೊಡ್ಡ ಸೊನ್ನೆ ಎಂದು ನನಗಾದರೂ ಅನ್ನಿಸುತ್ತದೆ. ನಮ್ಮ ಹಳ್ಳಿಗಾಡುಗಳಿಗೆ ಬರತಕ್ಕ ದೊಡ್ಡಮನುಷ್ಯರು, ಅವರಿಗೆ ಬುದ್ಧಿ ಇಲ್ಲದೆ ಇರುವುದರಿಂದ ಅವರ ಹತ್ತಿರ ಕಲಿತುಕೊಳ್ಳತಕ್ಕ ರೈತರು ಇನ್ನು ಎಷ್ಟು ಬುದ್ಧಿಯನ್ನು ಪಡೆಯಬಹುದು! ಇದಲ್ಲದೆ ರೆಡ್ ಟೇಪಿಸಂ, ಮತ್ತು ಲಂಚಗುಳಿತನ ಇವುಗಳಿಂದ ನಮಗೆ ಈ ಗತಿ ಬಂದಿದೆ ಎಂದು ಧಾರಾಳವಾಗಿ ಹೇಳಬಹುದು. ಒಂದು ಸಾಲ ಮಂಜೂರು ಆಗಬೇಕಾದಲ್ಲಿ ಒಂದು ಯೋಜನೆ ಮಂಜೂರಾಗಬೇಕಾದಲ್ಲಿ, ಒಂದು ಪಂಪ್‌ಸೆಟ್ ಕೊಡಬೇಕಾದಲ್ಲಿ, ಫರ್ಟಿಲೈಸರ್ ಸಿಕ್ಕಬೇಕಾದಲ್ಲಿ, ಡೀಸೆಲ್, ಸಿಕ್ಕಬೇಕಾದಲ್ಲಿ, ಬಿತ್ತನೆಯಬೀಜ ಸಿಕ್ಕಬೇಕಾದಲ್ಲಿ ಯಾವುದಕ್ಕೂ "ಇನ್‌ಪ್ಲುಯೆನ್ಸ್" ಇಲ್ಲದೆ ನಡೆಯುವ ಹಾಗೆಯೇ ಇಲ್ಲ. ಉದಾಹರಣೆಗೆ ಹೇಳುವುದಾದರೆ, ಮಾನ್ಯ ಅಧ್ಯಕ್ಷರು ಹೇಳಿದರು ಇಷ್ಟು ಲಕ್ಷ ರೂಪಾಯಿ ಕೊಟ್ಟಿದ್ದಾರೆ, ಪಂಪ್‌ಸೆಟ್ ಕೊಟ್ಟಿದ್ದಾರೆ ಎಂದು. ಎರಡು ವರ್ಷಗಳಿಂದ ನಮ್ಮ ರೈತರು ಹಣ ಕಟ್ಟಿ, 14 ಪಂಪ್‌ಸೆಟ್‌ಗಳು ಸಿದ್ಧವಾಗಿದ್ದರೂ ಕೂಡ ಇನ್ನೂ ಅವರಿಗೆ ವಿದ್ಯುತ್ತನ್ನು ಕೊಟ್ಟಿಲ್ಲ. ಆ ರೈತರು ಏನು ಪಾಪ ಮಾಡಿದ್ದಾರೆಯೊ ಗುಂಡ್ಲುಪೇಟೆ ಏನು ಪಾಪ ಮಾಡಿದೆಯೋ ಗೊತ್ತಿಲ್ಲ. ಇದಕ್ಕೆ ಪ್ರಭಾವ ಬೀರುವುದಕ್ಕೆ, "ಇನ್‌ಪ್ಲುಯೆನ್ಸ್" ಮಾಡುವುದಕ್ಕೆ ಸಾಧ್ಯವಿಲ್ಲವಾಗಿದೆ. ಮೈಸೂರು ಜಿಲ್ಲೆಯಲ್ಲಿ, ಮೈಸೂರು ರಾಜ್ಯದಲ್ಲಿ ಬೇಕಾದಷ್ಟು ಕಡೆ ಪಂಪ್‌ಸೆಟ್‌ಗಳನ್ನು ಹಾಕಿರಬಹುದು, ಮಂಗಳೂರಿನಲ್ಲಿ, ಬೆಂಗಳೂರಿನಲ್ಲಿ, ಕೋಲಾರದಲ್ಲಿ, ಎಲ್ಲಿ ಬೇಕಾದರೂ ಹಾಕಿರಬಹುದು. ಆದರೆ ಗುಂಡ್ಲುಪೇಟೆಯಲ್ಲಿನ 14 ಪಂಪ್

ಸೆಟ್‌ಗಳ ವಿದ್ಯುಚ್ಛಕ್ತಿಯನ್ನು ಪೂರೈಕೆ ಮಾಡಿಲ್ಲ. ಹೋದವರ್ಷ ಇಂಥ ಸ್ಥಿತಿ ಇದ್ದಾಗ ಮಾನ್ಯ ಮುಖ್ಯ ಮಂತ್ರಿಗಳನ್ನು ಕರೆದುಕೊಂಡು ಹೋಗಿದ್ದೆ, ವ್ಯವಸಾಯ ಮಂತ್ರಿಯವರನ್ನು ಕರೆದುಕೊಂಡು ಹೋಗಿದ್ದೆ. ರೆವಿನ್ಯೂ ಮಂತ್ರಿಯವರನ್ನು ಕರೆದುಕೊಂಡು ಹೋಗಿದ್ದೆ. ಎಲ್ಲರೂ ಅಯ್ಯೋ ಪಾಪ ಅಂದರು, ಅಲ್ಲಿಗೆ ಬೇಕಾಗಿದ್ದ ಹುಲ್ಲುಕೊಟ್ಟರು, ಧಾನ್ಯ ಕೊಟ್ಟರು.

ಶ್ರೀ ಎಸ್. ನಿಜಲಿಂಗಪ್ಪ.—ಅಷ್ಟಾದರೂ ಹೇಳುತ್ತೀರಲ್ಲ!

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಕೊಟ್ಟಿದ್ದನ್ನು ಹೇಳಬೇಕು. ಕೊಡದೆ ಇರುವುದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಈ ವರ್ಷ ಏನುಮಾಡಿರುತ್ತೀರಿ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ, ನಮ್ಮಲ್ಲಿ ಬಾವಿ ತೆಗೆದಿರುವವರು ಅರ್ಧಮರ್ಧ ತೆಗೆದಿರುತ್ತಾರೆ. ಪೂರ್ತಿ ಬಾವಿ ತೆಗೆದಿರುವವರು ಪಂಪ್ ಕೇಳಿದರೆ ಕೊಡುತ್ತಿಲ್ಲ. ಹಣ ಕಟ್ಟಿ ಎರಡು ವರ್ಷ ಆದರೂ ಕೂಡ ಅವರಿಗೆ ಪಂಪ್ ಸಿಕ್ಕುವ ಹಾಗಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ನಂಜನಗೂಡಿಗೆ ಬಂದಿದ್ದಾಗ, ನಮ್ಮಲ್ಲಿ ಬೇಕಾದಷ್ಟು ವಿದ್ಯುಚ್ಛಕ್ತಿ ಇದೆ, ನೀವು ಉಪಯೋಗಿಸಿಕೊಳ್ಳಿ ಎಂದರು. ವಿದ್ಯುಚ್ಛಕ್ತಿಯನ್ನು ಕೈಯಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಬರುತ್ತದೆಯೇ, ಸೊಂಟದಲ್ಲಿ ಕಟ್ಟಿಕೊಂಡು ಹೋಗುವುದಕ್ಕೆ ಸಾಧ್ಯವೇ!

ಶ್ರೀ ಎಸ್. ನಿಜಲಿಂಗಪ್ಪ.—ನಾನು ಹಾಗೆ ಹೇಳುವುದಕ್ಕೆ ಅಷ್ಟು ದಡ್ಡನಲ್ಲ,

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ತೆಗೆದುಕೊಂಡು ಹೋಗಿ ಎಂದು ಹೇಳಿದಿರಿ. ನೀವು ದಡ್ಡರಲ್ಲ, ನಾವೇ ದಡ್ಡರು. ನಮಗೆ ವಿದ್ಯುಚ್ಛಕ್ತಿಯನ್ನು ಕೊಡಿಸಿಕೊಡಬೇಕು ಎನ್ನುವುದಕ್ಕೆ ಇಷ್ಟೆಲ್ಲ ನಮ್ಮ ಅಹವಾಲು, ಇನ್ನೇನೂ ಇಲ್ಲ.

ನಾನು ಇತ್ತೀಚೆಗೆ ಅಮೆರಿಕಾ ದೇಶಕ್ಕೆ ಹೋಗಿದ್ದೆ. ಅಲ್ಲಿ ವರ್ಷಕ್ಕೆ 5 ಅಂಗುಲ ಮಳೆಯಾಗುವ ಕಡೆಯಲ್ಲಿ ಲಕ್ಷಣವಾಗಿ ಬೆಳೆ ತೆಗೆದು ಸುಖವಾಗಿದ್ದಾರೆ. ಕ್ಯಾಲಿಫೋರ್ನಿಯಾ ದೇಶದಲ್ಲಿ ಮಳೆ ಬಹಳ ಕಡಮೆ ಇದ್ದರೂ ಕೂಡ 750-800 ಅಡಿ ಆಳದವರೆಗೂ ಬಾವಿಗಳನ್ನು ತೆಗೆದು 250-300 ಅಶ್ವಶಕ್ತಿಯುಳ್ಳ ಪಂಪ್‌ಗಳನ್ನು ಹಾಕಿಕೊಂಡು ನೀರು ತೆಗೆದುಕೊಂಡು ಬತ್ತ, ಗೋಧಿ ಎಲ್ಲವನ್ನೂ ಬೆಳೆಯುತ್ತಾರೆ. ಅವರು ಮಾಡುವ ಕಾರ್ಯವನ್ನು ನೋಡಿ ನನಗೆ ಹೊಟ್ಟೆ ಬೆಂದು ಹೋಯಿತು. ನಮ್ಮಲ್ಲಿ ಈ ರೀತಿ ಮಾಡುತ್ತಿಲ್ಲವಲ್ಲ ಅನ್ನಿಸಿತು. ಅಲ್ಲಿಯ ರೈತರು ಬಹಳ ಶ್ರೀಮಂತರಾಗಿದ್ದು, ತಮಗೆ ಬೇಕಾದ ಸೌಕರ್ಯಗಳನ್ನು ಮಾಡಿಕೊಂಡು ಅನುಭವಿಸುತ್ತಿದ್ದಾರೆ. ಅವರು ಬೆಳೆದ ಪದಾರ್ಥಗಳನ್ನು ಅವರು ತಿಂದು, ಅವರ ದನಕರುಗಳು ತಿಂದು, ಹಂದಿಗಳು ತಿಂದು, ಅದರ ಜೊತೆಗೆ ನಮಗೂ ಸ್ವಲ್ಪ ಕಳಿಸುವಂಥ ಸ್ಥಿತಿಯಲ್ಲಿರುತ್ತಾರೆ. ನಮ್ಮಲ್ಲಿ ಸುಮ್ಮನೆ ಬೆಳೆಯಿರಿ ಎಂದರೆ ನಮ್ಮ ರೈತರು ಏನು ಬೆಳೆಯಬೇಕು? ನಮ್ಮ ರೈತರ ಈ ಕಷ್ಟವನ್ನು ಯಾರು ಪರಿಹಾರ ಮಾಡಬೇಕು!

ಮಾನ್ಯ ದೇಸಾಯಿ ಅವರು ಮಾತನಾಡುತ್ತ ಹೇಳಿದರು. (ಹ್ಯೂಮನ್ ರೆಫ್ಯೂಸ್) ನಮ್ಮಲ್ಲಿ ನಷ್ಟವಾಗುತ್ತದೆ. ಅದನ್ನು ಗೊಬ್ಬರವಾಗಿ ಉಪಯೋಗಿಸಬೇಕು ಎಂದು ಹೇಳಿದರು. ಇದು ಎಲ್ಲಿಯಾದರೂ ಸಾಧ್ಯವೇ? ಇದನ್ನು ದೋಷವಿಲ್ಲದ ಹಾಗೆ ಪರಿವರ್ತನೆ ಮಾಡಲು ಸಾಧ್ಯವೇ? 'ಹ್ಯೂಮನ್ ರೆಫ್ಯೂಸ್' ಉಪಯೋಗಿಸುವ ವಿಚಾರದಲ್ಲಿಯೂ ಎರಡು ವಾದಗಳಿವೆ. ಇದರಿಂದ ನಾನಾ ತರಹ ಕಾಯಿಲೆ ಬರುತ್ತದೆ ಎನ್ನುವ ಅಭಿಪ್ರಾಯವಿದೆ. ಹೀಗಿರುವಾಗ ಏನು ಮಾಡಬೇಕು ಎಂದರೆ ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದೊಂದು ಫರ್ಟಿಲೈಸರ್ ಕಾರ್ಖಾನೆಯನ್ನು ತೆರೆದು ಅಲ್ಲಿಯ ಜನಗಳಿಗೆ ರಸಾಯನಿಕ ಗೊಬ್ಬರವನ್ನು ಕೊಡುವುದಕ್ಕೆ ಏರ್ಪಾಡು ಮಾಡಬೇಕು. ಗೊಬ್ಬರವಿಲ್ಲದೆ ಧಾನ್ಯಗಳನ್ನು ಬೆಳೆಯುವುದಕ್ಕಾಗುವುದಿಲ್ಲ. ದನಗಳು ಗೊಬ್ಬರವನ್ನು ಕೂಡ ಕೊಡುವುದಿಲ್ಲ. ಅವುಗಳಿಗೆ ತಿನ್ನುವುದಕ್ಕೆ ಆಹಾರವಿಲ್ಲ. ತಿನಲು ಹುಲ್ಲು ಇದ್ದರೆ ಅದನ್ನು ತಿಂದು ಸಗಣಿ ಹಾಕುತ್ತವೆ ಮತ್ತು ಅದರಿಂದ ಗೊಬ್ಬರ ನಮಗೆ ಸಿಕ್ಕುತ್ತದೆ. ಹೀಗಿರುವಾಗ ರೈತರಿಗೆ ರಸಾಯನಿಕ ಗೊಬ್ಬರವನ್ನು ಒದಗಿಸುವ ವ್ಯವಸ್ಥೆ ಮಾಡಬೇಕು.

ಬೀಜಗಳ ವಿಷಯ ಹೇಳಬೇಕಾದರೆ ನಮಗೆ ಒಳ್ಳೆಯ ಬೀಜ ಸಿಕ್ಕಬೇಡವೇ? ಆಹಾರವನ್ನು ಆಮದು ಮಾಡಿಕೊಳ್ಳುವುದಕ್ಕೆ ಬದಲು 'ಹೈಬ್ರಿಡ್ ಸೀಡ್ಸ್' ತೆಗೆದುಕೊಂಡು ಧಾನ್ಯವನ್ನು ಬೆಳೆಸಿಕೊಂಡಿದ್ದರೆ ಇಷ್ಟು ಹೊತ್ತಿಗೆ ನಾವು ಆಹಾರದಲ್ಲಿ ಸ್ವಯಂಪೂರ್ಣರಾಗುತ್ತಿದ್ದೆವು. ಅಮೆರಿಕಾ ಮತ್ತು ಇತರ ದೇಶಗಳಲ್ಲಿ ಅವರಿಗೆ ಇರತಕ್ಕ ಅನುಕೂಲತೆಗಳು, ಅವರಿಗೆ ಇರತಕ್ಕ ಟ್ರಾಕ್ಟರುಗಳು, ಫರ್ಟಿಲೈಸರ್ಸ್, ಇವುಗಳಿಂದ 'ಹೈಬ್ರಿಡ್‌ಸೀಡ್ಸ್' ಉಪಯೋಗಿಸಿ ಅವರು ಚೆನ್ನಾಗಿ ಬೆಳೆ ತೆಗೆಯುತ್ತಾರೆಯೇ ಹೊರತು ಅವರು ಏನೇನೂ ವಿಚಿತ್ರ ಮಾಡಿಲ್ಲ. ನಮ್ಮ ರಾಜ್ಯದಿಂದ ಅಲ್ಲಿಗೆ ಇಲಾಖೆಯ ಅಧಿಕಾರಿಗಳನ್ನು ಕಳಿಸಲಾಗುತ್ತಿದೆ. ಅವರು ಅಲ್ಲಿಂದ ಏನು ಕಲಿತುಕೊಂಡು ಬರುತ್ತಾರೆ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಅಲ್ಲಿ ವ್ಯವಸಾಯ ಇಲಾಖೆಯಲ್ಲಿ ದೊಡ್ಡ ದೊಡ್ಡ ಆಫೀಸರುಗಳ ಹತ್ತಿರ ಮಾತನಾಡುವ ಅವಕಾಶ ನನಗೆ ಸಿಕ್ಕಿತು.

Sri R. M. DESAI.—Let the Hon'ble Member know that we are already growing hybrid crops in G. L. B. area and we have achieved that target also.

Smt. K. S. NAGARATHNAMMA.—Can you supply seeds to all of us?

Sri R. M. DESAI.—Yes, Yes. We are producing the seeds.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅದು ಇದ್ದರೆ ಬಹಳ ಸಂತೋಷ. ಅದು ಸರಿಯಾಗಿರುವುದಿಲ್ಲ. 4-5 ಪಟ್ಟು, ಇಷ್ಟು ಇಷ್ಟು ಉದ್ದ ಇರುವುದನ್ನು ನಾನು ನೋಡಿಕೊಂಡು ಬಂದಿದ್ದೇನೆ. ರಿಸರ್ಚ್‌ಗೋಸ್ಕರ ಅದು ಇರಬಹುದು. ಹೈಬ್ರಿಡ್ ಸೀಡ್ ಪ್ರೊಡಕ್ಷನ್‌ಗೋಸ್ಕರ ಕೆಲವು ಕಂಪನಿಗಳಿರುತ್ತವೆ. ಅಲ್ಲಿ ರೈತರಿಗೆ ಎಷ್ಟು ಕೇಳಿದರೂ ಒದಗಿಸಿಕೊಡುತ್ತಾರೆ. 10 ಎಕರೆಯಲ್ಲಿ ಬೆಳೆದರೆ ಅತಿ ಜಾಸ್ತಿ ಎಂದರೆ 1 ಸಾವಿರ ಜನಕ್ಕೆ ಒದಗಿಸಬಹುದು. ಅದು ಎಲ್ಲ ರೈತರಿಗೂ ದೊರಕುವ ಏರ್ಪಾಡು ಆಗಬೇಕು.

ಮೈನರ್ ಇರ್ರಿಗೇಶನ್ನಿಗೆ ಹೆಚ್ಚು ಗಮನ ಕೊಡಬೇಕು. ಈ ದೊಡ್ಡ ದೊಡ್ಡ ಇರ್ರಿಗೇಶನ್ನುಗಳು ಬರುವುದಕ್ಕೆ ಇನ್ನು 10 ವರ್ಷಗಳಾದರೂ ಬೇಕು; ನಾವಂತೂ ಅದನ್ನು ನೋಡುವುದಕ್ಕೆ ಇರುವುದಿಲ್ಲ ಅದಕ್ಕೋಸ್ಕರ, ಚಿಕ್ಕಪುಟ್ಟ ಕೆರೆಗಳಿಗೆ ಜಾಸ್ತಿ ಗಮನ ಶೀಘ್ರವಾಗಿ ಕೊಡುವುದು ಮೇಲು.

ಬೆಳೆಗಳಿಗೆ ಬೇಕಾದಷ್ಟು ರೋಗಗಳು ಬರುತ್ತವೆ. ಅದಕ್ಕೆ ತಗಲುವ ಕ್ರಿಮಿಕೀಟಗಳು ಎಷ್ಟು ಜೋರಾಗಿ ಬೆಳೆಯುತ್ತವೆ ಅಂದರೆ, ಅವು ಪೈರಿನ ಉದ್ದಕ್ಕೂ ಇರುತ್ತವೆ. ಆದ್ದರಿಂದ, ಇನ್‌ಸೆಕ್ಟಿಸೈಡ್ಸ್ ತರಿಸಿಕೊಂಡು, ಪೈರುಗಳಿಗೆ ತಗಲುವ ರೋಗವನ್ನು ನಿವಾರಣೆ ಮಾಡಿ ಜಾಸ್ತಿ ಬೆಳೆಯಲು ಅನುಕೂಲ ಮಾಡಿಕೊಡಬೇಕು.

ನಮಗಂತೂ ಕೂಡಲೆ ಪಂಪುಗಳನ್ನು ಕೊಡುವುದಕ್ಕೆ ಏರ್ಪಾಡು ಮಾಡಬೇಕು. ಹಾಗೆಯೆ ಫರ್ಟಿಲೈಸರ್ಸ್, ಮೈನರ್ ಇರ್ರಿಗೇಶನ್ ಮತ್ತು ಹೈಬ್ರಿಡ್ ಸೀಡುಗಳಬಗ್ಗೆ ಕೊಟ್ಟ ಸಲಹೆಗಳಿಗೆ ಸೂಕ್ತ ಗಮನ ಕೊಟ್ಟು, ಹೆಚ್ಚು ಆಹಾರ ಬೆಳೆಯಲು ಸಹಾಯ ಮಾಡಿಕೊಡಬೇಕು ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಆರ್. ಪಾಟೀಲ್ (ಹುಬ್ಬಳ್ಳಿ).—ಅಧ್ಯಕ್ಷ ಮಹಾಶಯರೆ, ಯಾವ ಒಂದು ಕೆಟ್ಟ ಕಾರಣದಿಂದಲೇ ಆಗಲಿ, ಇವತ್ತಿನ ದಿವಸ ಕೇಂದ್ರ ಸರ್ಕಾರದ, ಪ್ಲಾನಿಂಗ ಕಮಿಶನ್ನಿನ, ರಾಜ್ಯ ಸರಕಾರದ ಮತ್ತು ನಮ್ಮೆಲ್ಲರ ಲಕ್ಷ್ಯವನ್ನು ಒಕ್ಕಲಿಗನ ಕಡೆಗೆ ಮತ್ತು ಒಕ್ಕಲುತನದಅಭಿವೃದ್ಧಿ ಕಡೆಗೆ ಸೆಳೆದಿವೆ ಅನ್ನುವಂಥಾದ್ದು ಸ್ವಾಗತಾರ್ಹ; ಇದು ಶುಭ ಚಿಹ್ನೆ. ಕಾರಣ ಕೆಟ್ಟದ್ದು ಗಂಡಾಂತರ ಪರಿಸ್ಥಿತಿ ಮೂಲಕ ನಮ್ಮ ಲಕ್ಷ್ಯವನ್ನು ಒಕ್ಕಲಿಗನ ಕಡೆಗೆ ಎಳೆದಿವೆಯಾದರೂ ಸಹ, ಅದು ಸ್ವಾಗತಾರ್ಹ.

ನನಗಿರುವ ಸ್ವಲ್ಪ ಸಮಯದಲ್ಲಿ ಒಂದು ಅಥವಾ ಎರಡು ಮಾತುಗಳನ್ನು ವಿಸ್ತಾರವಾಗಿ ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಾನು ಒಕ್ಕಲಿಗ ಮನೆತನದಲ್ಲಿ ಹುಟ್ಟಿದವನು. ನಾನು ಚಿಕ್ಕ ವಯಸ್ಸಿನಲ್ಲಿ ಸ್ವತಃ ಸಾಗುವಳಿ ಮಾಡಿದ್ದೇನೆ. ಇವತ್ತಿನ ದಿವಸ ನಮ್ಮ ಒಕ್ಕಲುತನದ ಭೂಮಿಯನ್ನು ನನ್ನ ಹಿರಿಯ ಮಗ ಸ್ವತಃ ಮಾಡುತ್ತಿದ್ದಾನೆ. ನಾನು ವಾರಕ್ಕೆ ಎರಡು ಸಲ ನನ್ನ ಜಮೀನುಗಳ ಕಡೆ ಹೋಗಿ ಅಡ್ಡಾಡಿ ಬರುತ್ತೇನೆ. ಆದ್ದರಿಂದ ನಮ್ಮಲ್ಲಿ ಏನು ತೊಂದರೆಗಳಿವೆ ಅನ್ನುವುದನ್ನು ಹೇಳುತ್ತೇನೆ. ನಮ್ಮಲ್ಲಿ ಇರುವುದು ಎರೆ ಭೂಮಿ; ಎರೆ ಭೂಮಿಯಲ್ಲಿ ನೀರು ಬೀಳುವುದು ಸ್ವಲ್ಪ ಕಷ್ಟ; ಬಾವಿ ತೆಗೆಯಬೇಕೆಂದರೆ, 120 ಅಡಿ ತೆಗೆದರೂ ನೀರು ಬೀಳುವುದಿಲ್ಲ. ಸಿಹಿ ನೀರು ಸಾಮಾನ್ಯವಾಗಿ ಬರುವುದಿಲ್ಲ. ಉಪ್ಪು ನೀರು ಬರುತ್ತದೆ. ಇವತ್ತಿನ ದಿವಸ ನಾವು ಸ್ವತಃ ಮಾಡುತ್ತಿರುವ ನನ್ನ ಜಮೀನನ್ನೂ ನೋಡುತ್ತಾ ಇರುತ್ತೇನೆ; ಸುತ್ತಮುತ್ತಲೂ ಇರುವಂಥ ಬೇರೆಯವರ ಜಮೀನುಗಳನ್ನೂ ನೋಡುತ್ತಾ ಇರುತ್ತೇನೆ. ಇದಕ್ಕೆ ಇರುವ ವ್ಯತ್ಯಾಸವನ್ನು ನೋಡಬಹುದು: ಇವತ್ತಿನ ದಿವಸ ನನ್ನ ಕೈಲಿ ಹಣವಿರುವುದರಿಂದ, ನನ್ನ ಜಮೀನಿನಲ್ಲಿ ಎಷ್ಟು ಬೆಳೆಯುತ್ತಿದ್ದೇವೆಯೋ ಅದರಲ್ಲಿ ಅರ್ಧದಷ್ಟನ್ನು ಒಂದು ಎಕರೆಯಲ್ಲಿ ಬೇರೆಯವರು ಬೆಳೆಯುತ್ತಿದ್ದಾರೆ. ಅದಕ್ಕೆ ಕಾರಣ ಅದರಲ್ಲಿ ಹಣವಿಲ್ಲ; ಆದ್ದರಿಂದ ನಾನು ಬೆಳೆದಷ್ಟನ್ನು ಬೆಳೆಯುವುದಕ್ಕೆ ಶಕ್ಯವಿಲ್ಲ. ದುಡ್ಡು ಒಂದಿದ್ದರೆ, ಎಷ್ಟು ಬೇಕಾದರೂ ಬೆಳೆಯಬಹುದು. ಎಷ್ಟು ಹೆಚ್ಚು ಪ್ರಮಾಣದಲ್ಲಿ ದುಡ್ಡನ್ನು ಭೂಮಿಯಮೇಲೆ ಹಾಕುತ್ತೀರೋ, ಅಷ್ಟು ಹೆಚ್ಚು ಪ್ರಮಾಣದಲ್ಲಿ ಭೂಮಿಯಲ್ಲಿ ಬೆಳೆ ಬರುತ್ತದೆ; ಆ ಪ್ರಮಾಣವನ್ನು ಅನುಸರಿಸಿ ಬೆಳೆ ಬರುತ್ತದೆ. ಬೇರೆ ಉದ್ಯೋಗದಿಂದ ಜಮೀನಿಗೆ ದುಡ್ಡಿನ ದಾರಿ ಮಾಡಿ ಒದಗಿಸಲಿಕ್ಕೆ ನಮಗೆ ಸಾಧ್ಯವಾಗಿದೆ. ಒಂದು ಊರಿನಲ್ಲಿ ನನ್ನಂಥವರು 3-4 ಜನರಿರಬಹುದು ಯಾರಿಗೆ ಈ ಸಾಮರ್ಥ್ಯವಿಲ್ಲವೊ ಅವರು ಜಮೀನಿಗೆ ದುಡ್ಡು ಹಾಕಲು ಸಾಧ್ಯ

ವಾಗುವುದಿಲ್ಲ, ಹೆಚ್ಚಿಗೆ ಬೆಳೆಯಲು ಆಗುವುದಿಲ್ಲ. ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಚಿಕ್ಕಜೋಗಿಹಳ್ಳಿಯಲ್ಲಿ ಒಬ್ಬ ಶ್ರೀಮಂತ ಲಕ್ಷಾಧೀಶ್ವರರಿದ್ದಾರೆ; ಅವರಲ್ಲಿರುವುದು ಬರಡು ಭೂಮಿ; ಆದರೂ ಬೇಕಾದಷ್ಟು ಬತ್ತ, ಬೇಕಾದಷ್ಟು ಜೋಳ, ಬೇಕಾದಷ್ಟು ಅಕ್ಕಿ ಅದರಲ್ಲಿ ಬೆಳೆಯುತ್ತಾರೆ. ಒಂದಕ್ಕೆ 10 ಪಟ್ಟಿನಷ್ಟು ಬೆಳೆಯುವ ಸುಧಾರಣೆ ಮಾಡಿದ್ದಾರೆ. ನಾನು ಇಲ್ಲಿ ಒತ್ತಿ ಒತ್ತಿ ಸರ್ಕಾರಕ್ಕೆ ಹೇಳುತ್ತೇನೆ: ತಾವು ರೈತನಿಗೆ ಎಲ್ಲಿಯವರೆಗೆ ಧನ ಸಹಾಯ ಮಾಡುವುದಿಲ್ಲವೋ ಅಲ್ಲಿಯವರೆಗೆ ತಾವು ಆಹಾರಕ್ಕೆ ಹೆಚ್ಚಿನ ಆದ್ಯತೆ ಕೊಡುತ್ತಿದ್ದೇನೆ ಎಂದು ತಿಳಿದುಕೊಳ್ಳುವುದು ಮರೆಯತಕ್ಕದ್ದು. ಇವತ್ತಿನ ದಿವಸ ಕೋ-ಆಪರೇಟೀವ್ ಸೊಸೈಟಿಗಳಿಗೆ ಹೋದರೆ, ಒಂದು ಎಕರೆಗೆ 25-30 ರೂಪಾಯಿನಂತೆ ಜೋಳಕ್ಕೆ ಸಾಲ ಕೊಡುತ್ತಾ ಇದ್ದಾರೆ. ಸ್ವತಃ ಭೂಮಿ ಸಾಗುವಳಿ ಮಾಡುವವನಿಗೆ ಎಕರೆಗೆ ಕನಿಷ್ಠ ಪಕ್ಷ 100 ರೂಪಾಯಿ ಸಾಗುವಳಿಗೆ ಕೊಡಬೇಕು. ಇದರಲ್ಲಿ ಒಂದು ವಿಚಾರವಿದೆ. ಕೂಲಿಗಾರರ ಸಲುವಾಗಿ ನಾವು ಖರ್ಚುಮಾಡಬೇಕಾಗುತ್ತದೆ. ನಾವು ನಮ್ಮ ಜೋಳ, ಹೊಟ್ಟು ಎಲ್ಲವನ್ನೂ ಕೂಲಿಗಾರರಿಗೆ, ದನಗಳಿಗೆ ಖರ್ಚು ಮಾಡಿದರೂ ಸಹ, ಒಂದು ಎಕರೆಗೆ 100 ರೂಪಾಯಿ ಖರ್ಚು ಮಾಡುತ್ತೇವೆ. ನಾನು 10 ವರ್ಷಗಳ ಲೆಕ್ಕವನ್ನು ಇಟ್ಟಿದ್ದೇನೆ: ಸರ್ವಸಾಮಾನ್ಯವಾಗಿ ಒಂದು ಎಕರೆಗೆ 100 ರೂಪಾಯಿ ಖರ್ಚಾಗಿದ್ದರೆ, 125 ರೂಪಾಯಿ ಬರುತ್ತದೆ. ಬೇಕಾದರೆ 10 ವರ್ಷಗಳ ಅಂಕಿಸಂಖ್ಯೆಗಳನ್ನು ಕೊಡಬಲ್ಲೆ. ಆದ್ದರಿಂದ ಒಂದು ಎಕರೆಗೆ ಕನಿಷ್ಠ ಪಕ್ಷ 100 ರೂಪಾಯಿ ಸಾಲ ದೊರೆಯುವ ಹಾಗೆ ಮಾಡಬೇಕು. ಅದು ಜೋಳವೇ ಆಗಿರಬಹುದು, ಅಕ್ಕಿಯೇ ಆಗಿರಬಹುದು; ಯಾವ ಪೀಕೇ ಆಗಿರಲಿ, ಎಲ್ಲಿಯವರೆಗೆ ಅಷ್ಟು ಪ್ರಮಾಣದಲ್ಲಿ ಸಾಲ ಕೊಡುವುದಿಲ್ಲವೋ ಅಲ್ಲಿಯವರೆಗೆ ಆಹಾರ ಉತ್ಪನ್ನ ಹೆಚ್ಚಿಗೆ ಆಗುವುದಕ್ಕೆ ಸಾಧ್ಯವಿಲ್ಲ ನಾವು ಕೈಯಲ್ಲಿ ದುಡ್ಡಿರುವವರು. ನಾನು ಮೊದಲೇ ಹೇಳಿದಹಾಗೆ, ನಮ್ಮಂಥವರು ಒಂದು ಊರಿನಲ್ಲಿ 3-4 ಜನರಿದ್ದು, ಹೆಚ್ಚಿಗೆ ದುಡ್ಡು ಹಾಕಿ ಬೆಳೆಯಬಹುದು. ಈ ತೊಂದರೆಗಳೇನಿವೆ, ಅವುಗಳನ್ನು ನಾವು ಅಥವಾ ಸರಕಾರದವರು ನಿವಾರಣೆ ಮಾಡದಿದ್ದರೆ, ಆಹಾರ ಹೆಚ್ಚಿಗೆ ಬೆಳೆಸಲಿಕ್ಕೆ ಸಾಧ್ಯವಿಲ್ಲ.

ಈ ಸರ್ಕಾರಿ ನೌಕರರ ಬಗ್ಗೆ—ಬೂಟು, ಪ್ಯಾಂಟುಗಳನ್ನು ಹಾಕಿಕೊಂಡು ನಮ್ಮನ್ನು ಅಡ್ಡಾಡುವ ವರ್ಗದ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ರೈತನಿಗೆ ಹೆಚ್ಚಿಗೆ ಸಹಾಯ ಮಾಡಬೇಕು ಎಂತ ಹೇಳುತ್ತಲೇ ಇದ್ದೇವೆ. ಆದರೆ ಈ ವರೆಗೂ ತಹಸೀಲುದಾರರ ಕಚೇರಿಯಲ್ಲಿ ಮತ್ತು ಅಸಿಸ್ಟೆಂಟ್ ಕಮಿಶನರ್ ಕಚೇರಿಯಲ್ಲಿರುವ ಕೆಳದರ್ಜೆ ನೌಕರರ ಮನೋಭಾವದಲ್ಲಿ ಇನ್ನೂ ಬದಲಾವಣೆಯಾಗಿಲ್ಲ; ಅವರಿಗೆ ರೈತವರ್ಗಕ್ಕೆ ಸಹಾಯಮಾಡಬೇಕೆಂಬ ಉದ್ದೇಶ ಇನ್ನೂ ಅವರ ಮನಸ್ಸಿನೊಳಗೆ ಹೊಕ್ಕಿಲ್ಲವೆಂದು ವಿಷಾದಪೂರ್ವಕವಾಗಿ ಹೇಳಬೇಕಾಗಿದೆ. ಇವರುಗಳ ತೊಂದರೆಯಿಂದ ನಮ್ಮ ಊರಿನಲ್ಲಿ ತಗಾವಿ ಸಾಲ ಬೇಡವೆಂದೇ ಹೇಳುತ್ತಿದ್ದಾರೆ. ಏಕೆಂದರೆ 100 ರೂಪಾಯಿ ತಗಾವಿ ಸಾಲ ಪಡೆಯಬೇಕಾದರೆ ಕನಿಷ್ಠ ಪಕ್ಷ 15 ರೂಪಾಯಿ, ಸೇಕಡ 5 ರಷ್ಟನ್ನು, ಬೇರೆ ರೀತಿಯಲ್ಲಿ ವೆಚ್ಚ ಮಾಡಬೇಕಾಗಿದೆ. ಈ ಸಂದರ್ಭದಲ್ಲಿ ಸರಕಾರದವರಿಗೆ ಒಂದು ವಿನಂತಿ ಮಾಡಿಕೊಳ್ಳುತ್ತೇನೆ: ನಮ್ಮ ನೀತಿ ನಿಯಮಗಳಲ್ಲಿ ಸರಕಾರಿ ನೌಕರರಿಗೆ ಶಿಕ್ಷೆ ಕೊಡುವ ಬಗ್ಗೆ ತಾವು ಏನಾದರೂ ಸುಧಾರಣೆ ಮಾಡಿಕೊಳ್ಳಬೇಕು. ಯಾವುದಾದರು ತಹಸೀಲದಾರರ ಆಫೀಸಿನಲ್ಲಿ, ಅಥವಾ ಇನ್ಯಾವ ಕಡೆಯಲ್ಲಾದರೂ, ಯಾರಾದರು ನೌಕರ ತಗಾವಿಯಿಂದ ಲಂಚ ತಿನ್ನುತ್ತಾನೆಂದು ಸಾರ್ವಜನಿಕರಿಂದ ಸ್ಪಷ್ಟವಾಗಿ ದೂರು ಕೇಳಿಬಂದರೆ, ನಿಮ್ಮ ನಿಯಮ ನೀತಿಗಳಿಂದ ಕೆಲವು ನೌಕರರನ್ನು ತೆಗೆದುಹಾಕುವ ಯೋಜನೆಯನ್ನು ಮಾಡದಿದ್ದ ಪಕ್ಷದಲ್ಲಿ ತಾವು ಕೊಡುವಂಥ ತಗಾವಿ ಸಾಲದಿಂದ ಯಾವ ಉಪಯೋಗವೂ ಆಗುವುದಿಲ್ಲ.

ಅದರಂತೆಯೇ ಇವತ್ತಿನ ದಿವಸ ಕೋ-ಆಪರೇಟೀವ್ ಸೊಸೈಟಿಗಳಲ್ಲಿ ಒಂದು ಎಕರೆಗೆ 20 ರೂಪಾಯಿನಂತೆ ಸಾಲ ಕೊಡುತ್ತಿದ್ದರೆ. ಅದು ಒಂದು ಎಕರೆಗೆ 100 ರೂಪಾಯಿ ಸಾಲ ದೊರೆಯುವಂತೆ ಮಾಡಬೇಕು. ಸೇಕಡ 8 ರೂಪಾಯಿ ಬಡ್ಡಿ ಎಂಬ ನಿಯಮವನ್ನು ಮಾಡಿಬಿಟ್ಟಿದ್ದಾರೆ. ಪ್ರತಿ ವರ್ಷ 10 ರೂಪಾಯಿ ಶೇರಿಗಾಗಿ ಇಡಬೇಕು. ಈ 8 ಪರ್ಸೆಂಟ್ ಬಡ್ಡಿ ಪಠಾಣರ ಬಡ್ಡಿಗಿಂತಲೂ ಜಾಸ್ತಿಯಾಯಿತು. ಆದಕಾರಣ, ನಾನು ಆಗ್ರಹಪೂರ್ವಕವಾಗಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಕಾಳು, ಧಾನ್ಯ ಹೆಚ್ಚಾಗಬೇಕಾದರೆ, ರೈತನಿಗೆ ವಿಪುಲವಾದಂಥ ಸಾಲ ಕೊಡಬೇಕು, ಕನಿಷ್ಠ ಪಕ್ಷ ಎಕರೆಗೆ 100 ರೂಪಾಯಿ ಸಾಲ ದೊರೆಯುವ ಯೋಜನೆಯನ್ನು ಮಾಡಬೇಕು ಬೇಕಾದರೆ ಲೆವಿ ಹಾಕಬಹುದು; ಬಡ ರೈತರ ಮೇಲೂ ಹಾಕಿ. ತಿಂಗಳಿಗೆ 1–2 ಸಾವಿರ ರೂಪಾಯಿ ಆದಾಯ ಇಟ್ಟುಕೊಂಡು ಕಾರುಗಳಲ್ಲಿ ತಿರುಗಾಡುವವರ ಸೆಟ್ಟಿಗಳಮೇಲೆ ಕರವನ್ನು ಹಾಕಿ. ಅವರುಗಳೆಲ್ಲರೂ ಕಂಪಲ್ಸರಿ ಡಿಪಾಸಿಟ್ ಮಾಡಬೇಕೆಂದು ನಿರ್ಬಂಧಿಸಿ, ಆ ಮೂಲಕ ಹಣ ದೊರಕಿಸಿಕೊಂಡು, ಬ್ಯಾಂಕುಗಳಿಂದ ಮತ್ತಿತರ ಕಡೆಗಳಿಂದ ಶೇಕಡ ಎರಡರ ಬಡ್ಡಿಯಂತೆ ಸಾಲ ರೈತರಿಗೆ ದೊರೆಯುವ ಹಾಗೆ ಮಾಡತಕ್ಕದ್ದು ಅಗತ್ಯ. ಈ ರೀತಿ ಸಾಕಷ್ಟು ಸಾಲ ರೈತರಿಗೆ ದೊರೆಯುವಂತೆ

(ಶ್ರೀ ಎಂ. ಆರ್. ಪಾಟೀಲ್)

ಮಾಡಬೇಕೆಂದು ಸರಕಾರದಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಹಾಗೆಯೇ ತಮ್ಮ ನೌಕರಿವರ್ಗ ಸಹಿತ ರೈತರಿಗೆ ಸಹಾಯಕಾರಿ ಆಗಬೇಕು. ಆಗ ನಮ್ಮ ಫುಡ್ ಪ್ರೊಡಕ್ಷನ್ ಜಾಸ್ತಿಯಾಗುತ್ತದೆ.

ಈ ಸಂದರ್ಭದಲ್ಲಿ ಮತ್ತೊಂದು ವಿಷಯವನ್ನು ಹೇಳಬೇಕಾಗಿದೆ. ಸೂಪರ್‌ಫಾಸ್ಫೇಟ್, ಅಮೋನಿಯಂ ಫಾಸ್ಫೇಟ್ ಮುಂತಾದ ಗುಣಾಂಶವಿರುವ ಗೊಬ್ಬರ ಸೌಕರ್ಯವನ್ನು ರೈತರಿಗೆ ಮಾಡಿಕೊಟ್ಟರೆ, ಅವನು ಹೆಚ್ಚಾಗಿ ಬೆಳೆಯಬಹುದು. ರೈತನು ಹೆಚ್ಚು ಬೆಳೆಯಲು ಏನು ಸಹಾಯ ಮಾಡಿದರೂ ಅದು ಸ್ವಲ್ಪವೇ. ಅವನು ಸಹಾಯ ಮಾಡಿದ್ದನ್ನು ಹಾಳುಮಾಡುವುದಿಲ್ಲ. ಅದು ತಪ್ಪು ಅಭಿಪ್ರಾಯ. ಈ ದಿವಸ ರೈತ ಕಳಕಳಿಯಿಂದ ಕೆಲಸ ಮಾಡುತ್ತಿದ್ದಾನೆ; ಉತ್ಪನ್ನ ಹೆಚ್ಚು ತೆಗೆಯಬೇಕು ಎಂಬ ಅರಿವು ಅವನಿಗಾಗಿದೆ. ಅವನು ಅನಾವಶ್ಯಕವಾಗಿ ಖರ್ಚು ಮಾಡುತ್ತಾನೆಂಬ ಭೀತಿ ಇರಬೇಕಾಗಿಲ್ಲ; ಕೊಟ್ಟ ಹಣವನ್ನು ಹಾಳುಮಾಡುತ್ತಾನೆಂಬ ಸಂಶಯ ಇರಬೇಕಾಗಿಲ್ಲ. ವ್ಯವಸಾಯಗಾರರಿಗೆ ಸಾಕಾದಷ್ಟು ಸಾಗುವಳಿ ಮಾಡಿ, ಕಷ್ಟಪಟ್ಟು ಹೆಚ್ಚು ಆಹಾರ ಬೆಳೆಯಬೇಕು ಎಂಬ ಮನೋಭಾವ, ಹುಮ್ಮಸ್ಸು ಸಾಕಾದಷ್ಟು ಇದೆ. ಆದ್ದರಿಂದ ರೈತರಿಗೆ ಕನಿಷ್ಠ 100 ರೂಪಾಯಿ ಸಾಲ ಒಂದು ಎಕರೆಗೆ ದೊರೆಯುವಂತೆ ಮಾಡಬೇಕು. ಇದರ ಜೊತೆಗೆ ಯಾರೇ ಮಧ್ಯಸ್ಥಗಾರರಿಗೆ ಯಾವ ರೀತಿಯಿಂದಲೂ ಲಂಚ ಹೋಗದಂತೆ, ಅವರಿಗೆ ಪೂರ್ತಿ ಹಣ ದೊರೆಯುವಂತೆ ನೋಡಿಕೊಳ್ಳಬೇಕು.

ರೈತನಿಗೆ ಕಾಂಪ್ಲೇಸ್ಟ್ ಫರ್ಟಿಲೈಸರ್ಸ್ ಸಿಗುವುದಿಲ್ಲ. ಈಗ ಅದರ ಬ್ಲಾಕ್ ಮಾರ್ಕೆಟ್ ರೇಟ್ ಒಂದಕ್ಕೆ ಎರಡರಷ್ಟಿರುತ್ತದೆ. ರಾಕ್-ಫಾಸ್ಫೇಟ್ ಹೊರದೇಶದಿಂದ ಬರುವುದಿಲ್ಲ. ಸೂಪರ್ ಫಾಸ್ಫೇಟ್ ಎಲ್ಲಿಯೂ ಸಿಕ್ಕುತ್ತಾ ಇಲ್ಲ. ಸೂಪರ್ ಫಾಸ್ಫೇಟ್ ಉಪಯೋಗಿಸಬೇಕೆಂದು ಹೋದ ವರ್ಷ ಮತ್ತು ಈ ವರ್ಷ ಕ್ಯಾನ್‌ವಾಸ್ ಮಾಡಿದ ಕೆಲವು ಕಂಪನಿಯವರು ಅದರ ಅಭಾವವಿರುವುದರಿಂದ ಅದನ್ನು ಬ್ಲಾಕ್‌ಮಾರ್ಕೆಟ್ಟಿನಲ್ಲಿ ಮಾರುವುದಕ್ಕೆ ಹೊರಟಿದ್ದಾರೆ. ಅತ್ಯವಶ್ಯಕವಾಗಿ ಬೇಕಾದಂಥ ಸೂಪರ್‌ಫಾಸ್ಫೇಟ್ ಮುಂತಾದ ಸಲಕರಣೆಗಳಿಗಾಗಿ ಕಾರ್ಖಾನೆಗಳನ್ನು ಸರಕಾರದ ವತಿಯಿಂದಲೇ ತೆರೆಯಬೇಕು. ಬೇಕಾದರೆ ಆ ಕಾರ್ಖಾನೆಗಳನ್ನು ನ್ಯಾಶನಲೈಸ್ ಮಾಡಿದರೂ ಅಡ್ಡಿ ಇಲ್ಲ. ಹೋದ ವರ್ಷ ಕ್ಯಾನವಾಸ್ ಮಾಡುತ್ತಿದ್ದವರು, ಈಗ ಬೇರೆ ದಾರಿಯಿಂದ, ಮುಖದಿಂದ ಎರಡು ಪಟ್ಟು ಧಾರಣೆಗೆ ಮಾರುತ್ತಿದ್ದಾರೆ.

ಇನ್ನೊಂದು ಮಾತನ್ನು ವಿಷಾದಕರವಾಗಿ ಹೇಳಲೇ ಬೇಕಾಗಿದೆ. ಅಗ್ರಿಕಲ್ಚರ್ ಇಲಾಖೆಯಿಂದ ಎಷ್ಟು ಪ್ರಮಾಣದಲ್ಲಿ ಸಹಾಯ ಅಪೇಕ್ಷೆ ಪಟ್ಟಿದ್ದೆವೊ, ಆ ಪ್ರಕಾರವಾಗಿಲ್ಲ; ಆದರಿಂದ ಎಳ್ಳಷ್ಟೂ ಉಪಯೋಗವಾಗಿಲ್ಲ. ಅದು ಬರೀ ವೈಟ್ ಎಲಿಫೆಂಟಾಗಿ ಕುಳಿತಿದೆ.

10-30 A. M.

ನಮ್ಮ ಮಿತ್ರರು ಕೆಲವರು ಅಗ್ರಿಕಲ್‌ಚರಲ್ ಆಫೀಸರು ಇದ್ದಾರೆ. ಅವರು ಯಾವಾಗಲೂ ತಮ್ಮ ಸ್ಟೇಟಸ್ ಹೆಚ್ಚಾಗಬೇಕು, ತಮಗೆ ಪ್ರಮೋಷನ್ ಆಗಬೇಕು, ತಮಗೆ ತಮ್ಮ ಊರಿಗೇ ಟ್ರಾನ್ಸ್‌ಫರ್ ಆಗಬೇಕು, ಇತ್ಯಾದಿ ತಮ್ಮ ಒಂದು ಸೌಕರ್ಯವನ್ನು ಕಲ್ಪನೆ ಮಾಡುವುದರಲ್ಲೇ ಕಾಲವನ್ನು ಕಳೆಯುತ್ತಾರೆಯೇ ಹೊರತು ವ್ಯವಸಾಯದ ಅಭಿವೃದ್ಧಿಯ ಸಂಬಂಧದ ಕೆಲಸಕಾರ್ಯಗಳನ್ನು ಸರಿಯಾಗಿ ಮಾಡುವುದಿಲ್ಲ. ನಾನು ಒಂದು ಸಾರಿ ಫರ್ಟಿಲೈಜರ್ಸ್ ಮಿಕ್ಸ್‌ಚರ್ ಮಾಡುವ ಬಗ್ಗೆ ಫಾರ್ಮುಲಾ ಕೇಳುವುದಕ್ಕೆ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ ಹತ್ತಿರ ಹೋದೆ. ಅವರು ಆ ವಿಷಯ ನನಗೆ ಗೊತ್ತಿಲ್ಲ ಡಿಸ್ಟ್ರಿಕ್ಟ್ ಅಗ್ರಿಕಲ್‌ಚರಲ್ ಆಫೀಸರನ್ನು ಕೇಳಿ ಎಂದು ಹೇಳಿದರು. ಅವರ ಹತ್ತಿರ ಹೋಗಿ ಅದನ್ನು ಕೇಳಿದರೆ ಅವರು ಅದು ನನಗೆ ಗೊತ್ತಿಲ್ಲ, ಪುಸ್ತಕವನ್ನು ನೋಡಬೇಕು ಎಂದು ಹೇಳಿದರು. ಆಮೇಲೆ ಡೆಪ್ಯುಟಿ ಡೈರೆಕ್ಟರ್ ಆಫ್ ಅಗ್ರಿಕಲ್‌ಚರ್ ಆಫೀಸರ ಹತ್ತಿರ ಹೋಗಿ ಅವರನ್ನು ಕೇಳಿದರೆ ಅವರೂ ಸಹ ಆ ಫಾರ್ಮುಲಾ ನನಗೆ ಗೊತ್ತಿಲ್ಲ ಎಂದು ಹೇಳಿದರು. ಹೀಗೆ ವ್ಯವಸಾಯದ ವಿಚಾರದಲ್ಲಿ ಒಕ್ಕಲಿಗರಿಗೆ ಇರುವಷ್ಟು ಜ್ಞಾನ ಅಗ್ರಿಕಲ್‌ಚರಲ್ ಆಫೀಸರುಗಳಿಗೆ ಇಲ್ಲ. ವಾಸ್ತವವಾಗಿ ಅವರೇನಿದ್ದರೂ ತಮ್ಮ ಪಗಾರ, ತಮ್ಮ ಮೋಟಾರು, ಇವುಗಳಲ್ಲೇ ಅವರು ತಮ್ಮ ಕಾಲವನ್ನು ಕಳೆಯುತ್ತಾರೆ. ಆ ಆಫೀಸರುಗಳನ್ನು ಸರ್ಕಾರದವರು ವಿಚಾರಮಾಡಿ ಅವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ವ್ಯವಸಾಯವನ್ನು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಮತ್ತು ಈ ವ್ಯವಸಾಯವನ್ನ ಅಭಿವೃದ್ಧಿಮಾಡುವ ವಿಷಯದಲ್ಲಿ ಬರೀ ಅಧಿಕಾರಿಗಳನ್ನೇ ನಂಬದೆ ಸರ್ಕಾರದವರೂ ಸಹ ಈ ಬಗ್ಗೆ ನಿಗಾ ಕೊಡುವುದು ಯೋಗ್ಯ.

ಇನ್ನು ಎನ್.ಇ.ಎಸ್. ಬ್ಲಾಕುಗಳಲ್ಲಿ ಬ್ಲಾಕ್ ಡೆವೆಲಪ್‌ಮೆಂಟ್ ಆಫೀಸರುಗಳಿಗೆ ಸರ್ಕಾರದವರು ಒದಗಿಸಿರತಕ್ಕ ಜೀಪುಗಳು ಏನಿವೆ ಅವು ದುರುಪಯೋಗವಾಗುತ್ತಿವೆ. ಅಸಿಸ್ಟೆಂಟ್ ಕಮೀಷನರುಗಳು, ತಹಶೀಲ್ದಾರರುಗಳು ಎಲ್ಲಿಗಾದರೂ ಟೂರು ಹೋಗಬೇಕಾದರೆ ಈ ಜೀಪುಗಳನ್ನು ತೆಗೆದುಕೊಂಡು ಹೋಗುತ್ತಾರೆ. ಫಾಲ್ಸ್ ಡೈರಿ ಬರೆಯುತ್ತಾರೆ.

Mr. SPEAKER.—Instead of generalisation, the Hon'ble Member may please give one or two instances in writing to the Government and ask them to take action.

Sri M. R. PATIL.—Sir, it is so general. The instances are many. I will bring them to the notice of the Ministers concerned. I did not want to do it so that I may not injure the feelings of any body. If the Government is prepared to take action, I can bring instances to their notice.

Mr. SPEAKER.—When generalistations are made against officers who are not here, it is my duty to see that generalistations or accusations are not made. Members may give instances and ask the Government to take action.

Sri M. R. PATIL.—Sir, this subject was discussed in an open meeting of the Taluk Development Boards and a Resolution has been passed in this respect. We are saying it for the information of the Ministers concerned and it would be worng on my part to make allegations unless I am forced to do against a particular individual. I say the disease is there and let the Government probe into it. Otherwise if I point out individual instances I may myself get into trouble by these officers.

Mr. SPEAKER.—The Hon'ble member should not be afraid of it.

Sri M. R. PATIL.—We shall be doing our best and I will bring to the notice of the Ministers concerned instances where jeeps are misused by the officers. Let them investigate and if the Ministers give me that much of independence I will give as many instances as are necessary for taking action. I do not say that all officers are like that. There are good percentage of officers also. But a large number of them are doing this and I am sorry I have to bring this to the notice of the House.

Mr. SPEAKER.—I want to dispel the idea from the mind of any hon'ble member regardless of party affiliation that if any member has any apprehension in his mind that if he does any act in the discharge of his duty as a member of the Legislature by pointing out any irregularity he is getting into trouble. That fear should be dispelled. Let such instances be brought to the notice of the House or to me. It is my duty to take it up with the Government. To say that in discharging his duty a member is put into needless trouble, is something which I cannot conceive of. The members should not only be free but there should be no apprehension in their mind. That is the basis on which democracy works.

Before I call upon the next member, I would like to assess the situation. I find a very large number of members desirous of participating in the debate. The subject is so important that I also thought

(MR. SPEAKER)

of invoking rule 297 to put forth a few points. With that object in view I brought all papers. But I do not want to do it now because there are many members who deisre to talk. But my, difficulty is how to find time for all these members. Even if I give all the time that is availble without calling upon the Ministers, it will not be finished.

HON'BLE MEMBERS.—Sir, why not we discuss this subject tomorrow also ?

Mr. SPEAKER.—Tomorrow we are taking up non-official business. Are the Hon'ble members prepared to forego it ? Of course this is also as non-official as official business is. So, having regard to the importance of the subject and very valuable suggestions that are being made, shall we devote the whole of tomorrow for this ?

HON'BLE MEMBERS.—Yes, Sir,

Sri S. SHIVAPPA (Shravanabelagola).—Sir, you can hold over the no-nofficial business to some other day and continue this subject tomorrow.

Mr. SPEAKER.—Also, why not drop it if necessary because this is also non-official business. Whichever way it is, there should be no grievance if a day is not available during the period of this sitting that they have not been given a non-official day. If possible I will try to protect it, but otherwise it shall be understood that the House has agreed to drop one non-official day.

† ಶ್ರೀ ಡಿ. ಮುನಿಚಿನ್ನಪ್ಪ (ಬೆಂಗಳೂರು ದಕ್ಷಿಣ ತಾಲ್ಲೂಕು).—ಸ್ವಾಮಿ, ಅಧ್ಯಕ್ಷರೇ, ಈಗ ನಮ್ಮ ದೇಶದಲ್ಲಿ ಉಂಟಾಗಿರತಕ್ಕ ಅಭಾವ ಪರಿಸ್ಥಿತಿಯ ವಿಚಾರದಲ್ಲಿ ಮತ್ತು ನಮ್ಮ ದೇಶದಲ್ಲಿ ಆಹಾರೋತ್ಪಾದನೆಯ ವಿಚಾರದಲ್ಲಿ ಈ ಮಾನ್ಯ ಸಭೆಯ ನಮ್ಮ ಸ್ನೇಹಿತರು ಅನೇಕರು ಒಳ್ಳೆಯ ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿರುತ್ತಾರೆ. ಈ ವಿಚಾರದಲ್ಲಿ ನನ್ನ ಅಭಿಪ್ರಾಯವನ್ನು ಮಾತ್ರ ನಾನು ಈಗ ತಿಳಿಸಲು ಇಷ್ಟಪಡುತ್ತೇನೆ. ಈಗ ದೇಶದಲ್ಲಿ ತುರ್ತು ಪರಿಸ್ಥಿತಿ ಇರುವುದರಿಂದ ನಮ್ಮ ಸರ್ಕಾರದವರು ಸಣ್ಣ ನೀರಾವರಿ ವಿಷಯಗಳಿಗೆ ಹೆಚ್ಚಿನ ಗಮನವನ್ನು ಕೊಟ್ಟರೆ ದೇಶಕ್ಕೆ ಬಹಳ ಅನುಕೂಲವಾಗುತ್ತದೆ ಎಂದು ನನ್ನ ಅಭಿಪ್ರಾಯ. ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಪ್ರತಿಯೊಂದು ಗ್ರಾಮದಲ್ಲಿಯೂ ಕೂಡ ಒಂದು ಕೆರೆ ಇದೆ. ಆ ಕೆರೆಗಳು ಯಾವುದೋ ಕಾಲದಲ್ಲಿ ಕಟ್ಟಿದಂತಹ ಕೆರೆಗಳು. ಇಂಥಾ ಕೆರೆಗಳು ಇವೊತ್ತಿನವರೆಗೂ ದುರಸ್ತು ಆಗಿಲ್ಲ. ಆದ್ದರಿಂದ ಇಂಥಾ ಕೆರೆಗಳಿಗೆ ದುರಸ್ತಿ ಕೆಲಸವನ್ನು ಮಾಡಿಸಲು ಪ್ರಥಮವಾಗಿ ಸರ್ಕಾರದವರು ಗಮನವನ್ನು ಕೊಡಬೇಕು. ಈ ನಮ್ಮ ದೇಶದಲ್ಲಿ ವರ್ಷದ ಪ್ರಾರಂಭದಲ್ಲಿ ಮೊಟ್ಟ ಮೊದಲು 3–4 ಮಳೆಗಳು ಸರಿಯಾಗಿ ಬೀಳುತ್ತವೆ. ಇದು ನಾವು ಕಂಡಿರುವ ವಿಚಾರ. ಆಗ ಬೀಳತಕ್ಕ ಮಳೆಯ ನೀರೆಲ್ಲವೂ ಕೆರೆಗಳಲ್ಲಿ ನಿಂತರೆ ಮುಂದೆ ಮಳೆ ಬೀಳದೆ ತೊಂದರೆಯಾದರೂ ಕೂಡ ಆ ಕೆರೆಗಳ ಹಿಂದೆ ಸ್ವಲ್ಪವಾದರೂ ನಮಗೆ ಬೆಳೆಯಾಗುತ್ತದೆ. ಮೊನ್ನೆ ಈ ಮಾನ್ಯ ಸಭೆಯಲ್ಲಿ ಮಾನ್ಯ ನೀರಾವರಿ ಉಪ ಮಂತ್ರಿಗಳು ಹೇಳಿದರು: ಕೆರೆಗಳ ಹೂಳು ತೆಗೆಯುವ ಉದ್ದೇಶಕ್ಕಾಗಿ ಬುಲ್ಡೋಜರುಗಳನ್ನು ಉಪಯೋಗಿಸುವುದರಿಂದ ಬಹಳ ನಷ್ಟವಾಗುತ್ತದೆ ಎಂದು. ಯಾವುದೋ ಒಂದು ಕಡೆ ಮಾಡಿಬಿಟ್ಟು ಕೆರೆಗಳ ಹೂಳು ತೆಗೆಯುವುದಕ್ಕೆ ಬುಲ್ಡೋಜರುಗಳನ್ನು ಉಪಯೋಗಿಸುವುದರಿಂದ ನಷ್ಟವಾಗುತ್ತದೆ ಎಂದು ಅದನ್ನೇ ಹೇಳುತ್ತಾ ಹೋದರೆ ಪ್ರಯೋಜನವಿಲ್ಲ, ಎಂದು ನನ್ನ ಭಾವನೆ. ಈಗ ಯಾವುದಾದರೂ ಒಂದು ಕೆರೆಯ ಕೆಲಸವನ್ನು ಮಾಡಿಸುವುದಕ್ಕೆ ನನ್ನ ಕೈಯಲ್ಲಿ ಕೊಡಿ, ನಾನು ಅದನ್ನು ಮಾಡಿಸುವುದಕ್ಕೆ ಸಿದ್ಧನಾಗಿದ್ದೇನೆ. ಒಂದು ತಿಂಗಳು ಆ ಕೆಲಸವನ್ನು ಮಾಡಿಸುತ್ತೇನೆ. ಆ ಮೇಲೆ ಅದರ ಲೆಕ್ಕಾಚಾರವನ್ನು ಮಾಡಿ; ಆಗ ನಿಮಗೆ ಅದರಿಂದ ಲಾಭವಾಗುತ್ತದೆಯೋ ಅಥವಾ ನಷ್ಟವಾಗುತ್ತದೆಯೋ ಎಂಬುದನ್ನು ತೋರಿಸಿಕೊಡುತ್ತೇನೆ. ಯಾವುದೋ ಒಂದು ಕೆರೆಯ ಕೆಲಸವನ್ನು ಮಾಡಿಸಿದ್ದೇವೆ, ಅದರಿಂದ ನಷ್ಟವಾಯಿತು ಆದ್ದರಿಂದ ಇನ್ನು ಮುಂದಕ್ಕೆ ಅದನ್ನು ಮಾಡುವುದಿಲ್ಲ ಎಂದರೆ ಹೇಗೆ ? ದೇಶದಲ್ಲಿ

ಹೆಚ್ಚು ಆಹಾರವನ್ನು ಬೆಳೆಯುವುದು ಹೇಗೆ ! ಕೆಲವು ಜಿಲ್ಲೆಗಳಲ್ಲಿ ಯಾವ ನೀರಾವರಿ ವಿಚಾರವೂ ಇಲ್ಲ. ಕೆರೆ, ತಪ್ಪಿದರೆ, ಬಾವಿ. ಅದನ್ನು ಅಭಿವೃದ್ಧಿಪಡಿಸದೆ ಹೋದರೆ, ಹೇಗೆ ಆಹಾರ ಬೆಳೆಯುವುದು ! ಮೊದಲಿನಿಂದಲೂ ದೇಶದಲ್ಲಿ ಮಳೆ ನೀರಿನಿಂದ ಬೆಳೆ ಬೆಳೆಯುತ್ತಾ ಇದ್ದೇವೆ. ಮಳೆಯಿಂದ ಒದಗಿದ ನೀರು ಕೆರೆಯಲ್ಲಿ ನಿಂತರೆ, ಆಹಾರ ಸಮಸ್ಯೆಯನ್ನು ಸುಧಾರಿಸುವುದಕ್ಕೆ ಶಕ್ತಿ ಇರುತ್ತದೆ. ಈಗ ನಮ್ಮ ದೇಶದಲ್ಲಿ ಕೆಲವು ಕೆರೆಗಳಲ್ಲಿ ಸ್ವಲ್ಪ ನೀರೂ ಇದೆ, ಅದರಿಂದ ಅಲ್ಪಸ್ವಲ್ಪ ಬೆಳೆಯೂ ಆಗುತ್ತಿದೆ. ಆದ್ದರಿಂದ ಈ ಯುದ್ಧದ ಪರಿಸ್ಥಿತಿಯಿಂದಲಾದರೂ, ಸಂಬಂಧಪಟ್ಟ ಮಂತ್ರಿಗಳು ಕೆರೆಗಳ ಕೆಲಸವನ್ನು ಮನಸ್ಸಿಗೆ ತೆಗೆದುಕೊಂಡು ಮಾಡಿಕೊಟ್ಟರೆ, ರೈತರಿಗೆ ಎಷ್ಟೋ ಅನುಕೂಲವಾಗುತ್ತದೆ ಎಂದು ನನ್ನ ಅಭಿಪ್ರಾಯ.

ಆಮೇಲೆ ರೈತರಿಗೆ ಗೊಬ್ಬರವನ್ನು ಒದಗಿಸುವುದು ಮುಖ್ಯ. ಸೊಸೈಟಿಗಳಲ್ಲಿ ಗೊಬ್ಬರ ಸಿಗಬೇಕಾದರೆ ಸ್ವಲ್ಪ ಬಾಯಿ ಇರುವವರಿಗೆ ಮಾತ್ರ. ಸೊಸೈಟಿಗಳಿಂದ ಬಡವರಿಗೆ ಸ್ವಲ್ಪವೂ ಅನುಕೂಲವಾಗುತ್ತಿಲ್ಲ. ಈ ವಿಚಾರದಲ್ಲಿ ಕ್ರಮ ತೆಗೆದುಕೊಂಡು ರೈತರಿಗೆ ಅನುಕೂಲ ಮಾಡಿಕೊಡಬೇಕು.

ಬೀಜದ ವಿಚಾರದಲ್ಲಿ ಹೇಳಬೇಕಾಗಿದೆ. ಅಗ್ರಿಕಲ್ಚರ್ ಇಲಾಖೆ ಬಹಳ ದೊಡ್ಡದಾಗಿ ಬೆಳೆದಿದೆ. ಬೀಜದ ವಿಷಯದಲ್ಲಿ ನನಗೆ ಅಸಿಸ್ಟೆಂಟ್ ಡೈರೆಕ್ಟರು, ಡೆಪ್ಯುಟಿ ಡೈರೆಕ್ಟರು. ಜಾಯಿಂಟ್ ಡೈರೆಕ್ಟರು, ಡೈರೆಕ್ಟರು ಎಲ್ಲರೂ ಬರೆದರು. ಆನೇಕಲ್ ಹತ್ತಿರ ರಾಮಕೃಷ್ಣಪುರದಲ್ಲಿ ಬೀಜದ ಫಾರಂ ಮಾಡಿದ್ದೇವೆ, ಅಲ್ಲಿಗೆ ಹೋಗಿ, ಕೊಡುತ್ತಾರೆಂದು ನಾನೇ ಹೋದೆ, ಬೀಜವಿರಲಿಲ್ಲ ಅಲ್ಲಿ. ಇರುವ ಬೀಜವನ್ನು ತೆಗೆದುಕೊಂಡು ಹೋಗಿ, ಸಿಕ್ಕಾಪಟ್ಟೆ ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರುತ್ತಾ ಇದ್ದಾರೆ. ರಾಮಕೃಷ್ಣಪುರದಲ್ಲಿರುವ ಅಧಿಕಾರಿಗಳು ಈ ರೀತಿ ಮಾಡಿದರೆ, ಜನಗಳಿಗೆ ಹೇಗೆ ಅನುಕೂಲವಾಗುತ್ತದೆ ? ಇಂಥಾ ಇಲಾಖೆಗೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಾ ಇದ್ದಾರೆ. ರಾಮಕೃಷ್ಣಪುರದಲ್ಲಿ ಒಂದು ಕಾಳು ಬೀಜವೂ ಇಲ್ಲ. ಸರಕಾರದವರು ಸರಿಯಾದ ಮುತುವರ್ಜಿ ವಹಿಸಿ, ಬೀಜ ಸರಾಗವಾಗಿ ರೈತರಿಗೆ ಸಿಗುವಂತೆ ಮಾಡಬೇಕೆಂದು ಕಳಕಳಿಯಿಂದ ಅವರಲ್ಲಿ ಹೇಳಲಿಚ್ಛಿಸುತ್ತೇನೆ.

ಧಾನ್ಯ ವರ್ತಕರ ಮೇಲೆ, ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಹಾಗೆ, ಸರಿಯಾದ ಕ್ರಮ ತೆಗೆದುಕೊಳ್ಳಬೇಕು. ಅವರು ಕೂಡ ದೇಶಕ್ಕೆ ಕಷ್ಟ ಪರಿಸ್ಥಿತಿ ಬಂದಿರುವ ಈ ಸಮಯದಲ್ಲಿ ಒಳ್ಳೆಯ ರೀತಿಯಿಂದ ವರ್ತಿಸಿ, ಆಹಾರ ಧಾನ್ಯಗಳ ವಿಚಾರದಲ್ಲಿ ಸಹಾಯ ಮಾಡಬೇಕೆಂದು ನಾನು ಅವರಲ್ಲಿ ಬಹಳ ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ.

ಗವರ್ನಮೆಂಟಿನವರು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಫಾರಂಗಳನ್ನು ಮಾಡಿದ್ದಾರೆ. ಯಾವ ಫಾರಮಿನಲ್ಲಿ ಎಷ್ಟು ಬೆಳೆದಿದ್ದಾರೆ, ಏನು ಅನುಕೂಲ ಮಾಡಿಕೊಟ್ಟಿದ್ದಾರೆ ಅನ್ನುವುದನ್ನು ಸರಕಾರ ಹೇಳಲಿ, ನಾನು ಒಪ್ಪಿಕೊಳ್ಳುತ್ತೇನೆ. ಈ ಇಲಾಖೆಯಲ್ಲಿರುವ ಅಧಿಕಾರಿಗಳು ರಾಜಭೋಗದಲ್ಲಿ ಬಿದ್ದಿದ್ದಾರೆ ; ಅದನ್ನು ಮಾನ್ಯ ಮುಖ್ಯ ಮಂತ್ರಿಗಳೂ, ಸಂಬಂಧಪಟ್ಟ ಮಂತ್ರಿಗಳೂ ಗಮನಿಸಬೇಕು. ಅಂಥವರಿಂದ ಏನು ಅನುಕೂಲ ? ಒಂದು ಅನುಕೂಲ ನಮ್ಮ ರೈತರಿಗೆ, ಬಡವರಿಗೆ ಅವರಿಂದ ಆಗುತ್ತಾ ಇಲ್ಲ. ಕೋಟ್ಯಾಂತರ ರೂಪಾಯಿ ಈಗ ಇಲಾಖೆಯ ಮೇಲೆ ಖರ್ಚು ಮಾಡುತ್ತಿದ್ದಾರೆ ; ಆದ್ದರಿಂದ ಇದರ ಮೇಲೆ ಸರಿಯಾದ ನಿಗಾ ಇಟ್ಟು, ನಮ್ಮ ದೇಶಕ್ಕೆ ಆಹಾರ ಒದಗಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಈ ಸಮಯದಲ್ಲಿ ಪ್ರಾರ್ಥಿಸುತ್ತೇನೆ.

ಕೆಲವು ಕಡೆ ಅದರಲ್ಲಿಯೂ ನಮ್ಮ ತಾಲ್ಲೂಕಿನಲ್ಲಿ ಒಂದು ಅಣೆಕಟ್ಟೂ ಇಲ್ಲ, ಒಂದು ನೀರಾವರಿಯೂ ಇಲ್ಲ. ಅಂಥ ಕಡೆ ರೈತನಿಗೆ ಬೆಳೆಯುವುದಕ್ಕೆ ನ್ಯಾಯವಾದ ಸಹಾಯ ಮಾಡಿದರೆ, ಹೆಚ್ಚು ಆಹಾರ ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಈ ವಿಚಾರದಲ್ಲಿ ಸೂಕ್ತ ಸಹಾಯ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇಷ್ಟು ದಿವಸ ಬ್ಲಾಕ್ ಡೆವಲಪ್‌ಮೆಂಟ್ ಶಾಖೆಯವರು ಬಾವಿಗಳಿಗೆ ಹಣ ಕೊಡುತ್ತಿದ್ದರು. ಈಗ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಕೊಡುತ್ತಿದೆ. 10 ವರ್ಷದ ರಿಕಾರ್ಡ್ ನೋಡಿದರೆ, ರೈತರಿಗೆ ಯಾವ ತರಹದ ದುಡ್ಡೂ ಸಿಕ್ಕಿಲ್ಲ. ಮಾನ್ಯ ಮಂತ್ರಿಗಳು ರೈತರಿಗೆ ನ್ಯಾಯವಾದ ರೀತಿಯಲ್ಲಿ ಸಾಲಸೋಲ ಕೊಟ್ಟು, ಅವರು ಮತ್ತು ದೇಶದ ಸ್ಥಿತಿ ಅಭಿವೃದ್ಧಿ ಮಾಡುವುದಕ್ಕೆ ಸೌಲಭ್ಯ ಒದಗಿಸಿಕೊಡಬೇಕೆಂದು ಈ ಸಮಯದಲ್ಲಿ ಹೇಳಬಯಸುತ್ತೇನೆ.

ನಮ್ಮ ತಾಲ್ಲೂಕಿನ ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. ಬೆಂಗಳೂರು ಸುತ್ತಮುತ್ತಲೂ ದೊಡ್ಡ ದೊಡ್ಡ ಫ್ಯಾಕ್ಟರಿಗಳನ್ನು ಮಾಡಲು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನವರು ಬಹಳ ಜಮೀನನ್ನು ಅಕ್ವೈರ್ ಮಾಡಿಕೊಂಡಿದ್ದಾರೆ. ಒಳ್ಳೆಯ ಗೊಬ್ಬರ ಬೆಂಗಳೂರಿನಲ್ಲಿ ಸಿಗುವುದರಿಂದ ಆ ಜಮೀನುಗಳಲ್ಲಿ ಹಿಂದೆ ಬಹಳ ಬೆಳೆ ಬೆಳೆಯುತ್ತಿದ್ದರು. ಹಿಂದೆ ಕಂಟ್ರೋಲ್ ಇದ್ದ ಕಾಲದಲ್ಲಿ 1946-47ನೇ ಇಸವಿಯಲ್ಲಿ, ರಾಗಿ ಬ್ಲಾಕ್ ಮಾರ್ಕೆಟ್ಟಿನಲ್ಲಿ 5 ಸೇರು ರೂಪಾಯಿಗೆ ಸಿಗುತ್ತಿತ್ತು. ಅಂಥ ಜಮೀನುಗಳನ್ನು ಸಿಕ್ಕಾಪಟ್ಟೆ ಅಕ್ವೈರ್ ಮಾಡಿಕೊಂಡರು ; ಅದಕ್ಕೆ ಸರಿಯಾದ ಕಾಂಪೆನ್‌ಸೇಷನ್ನನ್ನು ಕೊಟ್ಟು ರೈತರನ್ನೂ ಉದ್ಧಾರ ಮಾಡಲಿಲ್ಲ; ಅದರಿಂದ ಜನಗಳಿಗೂ

(ಶ್ರೀ ಡಿ. ಮುನಿಚಿನ್ನಪ್ಪ)

ಉಪಯೋಗವಾಗಲಿಲ್ಲ. ಈ ವಿಚಾರಕ್ಕೆ ಸರಕಾರ ಗಮನ ಕೊಡಬೇಕು. ಈ ಫ್ಯಾಕ್ಟರಿಗಳಿಗೆ ಬೇಕಾದ ಭೂಮಿಯನ್ನು 15-20 ಮೈಲಿ ಬೆಂಗಳೂರಿನ ಆಚೆ ಸ್ಥಳಗಳಲ್ಲಿ ಕೊಡಲಿ. ಬೆಂಗಳೂರಿನ ಪಕ್ಕದಲ್ಲಿ ಬಹಳ ಒಳ್ಳೆಯ ಬೆಳೆ ಬೆಳೆಯುತಕ್ಕಂಥ ಜಮೀನುಗಳಿವೆ. ಒಳ್ಳೆಯ ಗೊಬ್ಬರವೂ ಇಲ್ಲಿ ಸಿಗುತ್ತದೆ. ಅಂಥ ಕಡೆ ಇದ್ದ ಜಮೀನನ್ನು ತೆಗೆದುಕೊಂಡುದರ ಫಲವಾಗಿ, ಆ ರೈತರು ತಿರಿದುಕೊಂಡು ತಿನ್ನುತ್ತಿದ್ದಾರೆ; ಅಂಥ ಶೋಚನೀಯ ಪರಿಸ್ಥಿತಿಗೆ ಅವರು ಇಳಿದಿದ್ದಾರೆ. ಅವರಿಗೆ ಕೊಟ್ಟ ಪರಿಹಾರ ಧನ ಕೇವಲ 2-3 ಸಾವಿರ ಅನ್ನುವುದನ್ನು ಸರಕಾರದವರು ಗಮನದಲ್ಲಿ ಇಟ್ಟುಕೊಳ್ಳಬೇಕು.

ಮತ್ತೆ ಸಾಯಿಲ್ ಕನ್‌ಸರ್‌ವೇಷನ್ನು ವಿಚಾರದಲ್ಲಿ ವ್ಯವಸಾಯ ಇಲಾಖೆಯವರು ಜಮೀನನ್ನು ಅಭಿವೃದ್ಧಿ ಮಾಡುವುದಕ್ಕೆ ಸಹಾಯ ಮಾಡುತ್ತಿದ್ದಾರೆ. ಆದರೆ ಈ ಇಲಾಖೆಯವರು ನಮ್ಮ ತಾಲ್ಲೂಕಿನ ಬಗ್ಗೆ ಏಕೋ ಅಲಕ್ಷ್ಯದಿಂದ ಇದ್ದಾರೆ. ನಮ್ಮ ತಾಲ್ಲೂಕು ಸುತ್ತ ಮುತ್ತ 20 ಮೈಲಿಗಳಷ್ಟು ಮೇಲಿದ್ದರೂ ಇಲ್ಲಿ ವ್ಯವಸಾಯ ಇಲಾಖೆಯವರ ಗಮನ ಬೀಳದೆ ಹೋಗಿರುವುದನ್ನು ನೋಡಿ ನನಗೆ ತುಂಬಾ ವಿಷಾದವಾಗಿದೆ. ಏತಕ್ಕಾಗಿ ಇದನ್ನು ಕೈ ಬಿಟ್ಟಿದ್ದಾರೆ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. ಸರಕಾರದವರು ಇದರ ಬಗ್ಗೆ ಇನ್ನೂ ಹೆಚ್ಚು ಗಮನವನ್ನು ಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇಷ್ಟು ಮಾತಾಡಲು ಅವಕಾಶಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕಡಿದಾಳ್ ಮಂಜಪ್ಪ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ಹಿಂದೂಸ್ಥಾನದಲ್ಲಿ ಇತ್ತೀಚಿನ ದಿವಸಗಳಲ್ಲಿ ಹಿಂದೆ ಎಂದೂ ಉದ್ಭವಿಸದೇ ಇದ್ದಂತಹ ಒಂದು ಸನ್ನಿವೇಶ ಇಂದು ಉದ್ಭವಿಸಿದೆ. ಈ ಹೊಸ ಸನ್ನಿವೇಶವನ್ನು ದಿಟ್ಟತನದಿಂದ ಹೊಸ ಭಾವನೆಗಳಿಂದ ಹೊಸ ದೃಷ್ಟಿಕೋಣಗಳಿಂದ ಹೊಸ ಹುರುಪಿನಿಂದ ಎಚ್ಚೆತ್ತು ಎದುರಿಸಬೇಕಾಗಿ ಬಂದಿದೆ. ಯುದ್ಧದಷ್ಟೇ ಭಯಂಕರವಾದ ಸಮಸ್ಯೆ ಅನ್ನದ ಸಮಸ್ಯೆ. ಈ ಅನ್ನದ ಸಮಸ್ಯೆಯನ್ನು ತೃಪ್ತಿಕರವಾಗಿ ಬಗೆಹರಿಸಿದರೆ ಮಾತ್ರ ಯುದ್ಧವನ್ನು ಯಶಸ್ವಿಯಾಗಿ ಮೆಟ್ಟುವುದಕ್ಕೆ ಒಂದು ನವಚೈತನ್ಯವನ್ನು ಪಡೆಯುತ್ತಾರೆ. ಕಳೆದ ಹದಿನೆಂಟು ವರ್ಷಗಳಿಂದ ಅನ್ನದ ಸಮಸ್ಯೆಯ ವಿಚಾರದಲ್ಲಿ ಸಾಕಾದಷ್ಟು ಭಾಷಣಗಳು ನಡೆದಿವೆ. ಸರಕಾರದವರೂ ಸಾಕಾದಷ್ಟು ಪ್ರಯತ್ನಗಳನ್ನೂ ಮಾಡಿದ್ದಾರೆ. ಆದರೆ ಕೆಲವು ಕಾರಣಗಳ ದೆಸೆಯಿಂದಾಗಿ ಈ ಸಮಸ್ಯೆಯನ್ನು ತೃಪ್ತಿಕರವಾಗಿ ಇದುವರೆಗೆ ಬಗೆಹರಿಸುವುದಕ್ಕಾಗಲಿಲ್ಲ ಕಾರಣಗಳು ಗೊತ್ತೇ ಇದೆ. ಮೊದಲನೇ ಕಾರಣ ಅಪರಿಮಿತವಾಗಿ ಪ್ರತಿವರ್ಷವೂ ಹೆಚ್ಚತಕ್ಕ ಜನಸಂಖ್ಯೆ, ಎರಡನೆಯ ಕಾರಣ ಪ್ರಕೃತಿ ನಮ್ಮ ಮೇಲೆ ಕೋಪಗೊಳ್ಳುವುದು, ಮೂರನೇ ಕಾರಣ ಮಧ್ಯವರ್ತಿಯ ಜನರು ತೊಡಗುತ್ತಿರುವ ಸಮಾಜ ಘಾತುಕ ಕೃತ್ಯಗಳಿಗೆ ತೊಡಗಿರುವುದು, ನಾಲ್ಕನೆಯ ಕಾರಣ ಹಣದ ಉಬ್ಬರ. ಈ ಕೆಲವು ಕಾರಣಗಳ ದೆಸೆಯಿಂದಾಗಿ ಅನ್ನದ ಸಮಸ್ಯೆ ಸ್ವರಾಜ್ಯ ಬಂದನಂತರ ಎಂದರೆ ಹದಿನೆಂಟು ವರ್ಷಗಳನಂತರವೂ ಇದು ಭೀಕರವಾದ ಸಮಸ್ಯೆಯಾಗಿಯೇ ಉಳಿದಿದೆ. ಆದರೆ ಇಂತಹ ಸಂದಿಗ್ಧ ಸಮಯದಲ್ಲಿ ನಮ್ಮ ಕಷ್ಟಗಳನ್ನು ಬಹಳ ಉತ್ಪ್ರೇಕ್ಷೆ ಮಾಡಿ ಜನತೆಯಲ್ಲಿ ಕಳವಳವನ್ನುಂಟುಮಾಡುವ ಒಂದು ಸನ್ನಿವೇಶವನ್ನು ಕಲ್ಪನೆ ಮಾಡುವುದು ತಪ್ಪಾಗುತ್ತದೆ. ಆದರೆ ನಮ್ಮ ಕಷ್ಟಗಳೇನು ಎನ್ನುವುದನ್ನು ಹೇಳದೇ ಸುಮ್ಮನೆ ಇರುವುದೂ ತಪ್ಪಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಸರಕಾರದವರು ಜನತೆಯ ಕಷ್ಟ ಕಾರ್ಪಣ್ಯಗಳನ್ನು ತಿಳಿದುಕೊಂಡು ಸಾಧ್ಯವಿರುವಷ್ಟಮಟ್ಟಿಗೆ ಅವರ ಕಷ್ಟಗಳನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕಾದುದು ಬಹಳ ಅಗತ್ಯ. ಸರಕಾರದವರ ಕಷ್ಟವೂ ಕೂಡ ನಮಗೆ ಗೊತ್ತಿದೆ. ಸರಕಾರದವರೊಡನೆ ಸಹಕರಿಸುವುದಕ್ಕೆ ಜನತೆಯೂ ಸಿದ್ಧರಾಗಿದ್ದಾರೆ. ಇಂದು ರೈತಾಪಿ ಜನರಿಗೆ ರಾಜಕಾರಣಗಳ ಅಧಿಕಾರಿಗಳ ಹಿತೋಪದೇಶದ ಭಾಷಣಗಳು ಬೇಕಾಗಿಲ್ಲ. ಭಾಷಣಗಳನ್ನು ಮಾಡುವುವರಿಂದ ಮಳೆಯೂ ಬರುವುದಿಲ್ಲ ಬೆಳೆಯೂ ಆಗುವುದಿಲ್ಲ. ಆದರೆ ಸ್ವಲ್ಪ ಮಟ್ಟಿಗೆ ಭಾಷಣಗಳೂ ಅವಶ್ಯಕವಾಗಿರುತ್ತವೆ. ಇವೊತ್ತಿನ ಪರಿಸ್ಥಿತಿಯಲ್ಲಿ ರೈತಾಪಿ ಜನರಿಗೆ ಉಪದೇಶಗಳನ್ನು ಕೊಡುವುದಕ್ಕೆ ಬದಲಾಗಿ ಅವರಿಗಿರುವ ಕುಂದುಕೊರತೆಗಳೇನು ಎನ್ನುವುದನ್ನು ತಿಳಿದು ಅವನ್ನು ಪರಿಹಾರ ಮಾಡುವುದು ವಾಸಿ ಎಂದು ತೋರುತ್ತದೆ. ರೈತಾಪಿ ಜನರು ಜನಸಾಮಾನ್ಯರಲ್ಲಿ ಯಾವ ರೀತಿಯಾದ ಪರಿಸ್ಥಿತಿಯಲ್ಲಿದ್ದಾರೆಂದರೆ ನಮಗಿಂತ ಹೆಚ್ಚಿನ ತೊಡಕಿನ ಪರಿಸ್ಥಿತಿಯಲ್ಲಿ ಅವರು ಸಿಕ್ಕಿದ್ದಾರೆ. ಇವರಿಗಿಂತ ವರ್ತಕರು ಇದನ್ನು ಹೆಚ್ಚಾಗಿ ಪ್ರದರ್ಶಿಸುತ್ತಿದ್ದಾರೆ. ಇಂದು ರಾಜಕಾರಣಿಗಳಲ್ಲಿ ವರ್ತಕರಲ್ಲಿ ಹಾಗೂ ಅಧಿಕಾರ ವರ್ಗದಲ್ಲಿ ಈ ಮೂರೂ ವರ್ಗಗಳಲ್ಲಿ ಈ ಪ್ರದೇಶದಲ್ಲಿ ಅನ್ನಭಾವದ ಪರಿಸ್ಥಿತಿ ಇದೆ ಯುದ್ಧದ ಭಯವಿದೆ, ನಾವು ರಾಷ್ಟ್ರಾಭಿಮಾನದ ದೃಷ್ಟಿಯಿಂದ ವರ್ತಿಸಬೇಕು ಎಂಬುದನ್ನು ಅವರು ಸರಿಯಾಗಿ ಅರ್ಥ ಮಾಡಿಕೊಂಡರೆ ಈ ಅನ್ನದ ಸಮಸ್ಯೆಯನ್ನು ಬಗೆಹರಿಸಬಹುದು. ಈ ಮೂರು ವರ್ಗದ ಜನರೂ ರೈತಾಪಿ

ಜನರ ಆವಶ್ಯಕತೆಗಳನ್ನು ಅನುಸರಿಸಿಕೊಂಡು ಸರಿಹೋಗಬೇಕಾಗಿದೆ. ನಾನು ಆಹಾರದ ಸಮಸ್ಯೆಯ ವಿಚಾರವಾಗಿ ಮಾತನಾಡುವಾಗ ಕೆಲವು ವಾಸ್ತವವಾದ ವಿಚಾರಗಳನ್ನು ಇಲ್ಲಿ ಹೇಳಬೇಕಾಗಿದೆ. ನನ್ನ ಮಾನ್ಯ ಮಿತ್ರರಾದ ಶ್ರೀ ಮಾನ್ ಎಂ. ಆರ್. ಪಾಟೀಲರವರು ಇಲ್ಲಿ ಮಾತನಾಡುವಾಗ ಒಂದು ಮಾತನ್ನು ಹೇಳಿದರು. ಅವರು ಹೇಳುವಂತೆ ಎಲ್ಲ ಅಧಿಕಾರಿಗಳೂ ಇಲ್ಲಿ ಕೆಟ್ಟುಹೋಗಿಲ್ಲ. ಒಳ್ಳೆಯ ಅಧಿಕಾರಿಗಳೂ ಇದ್ದಾರೆ. ಆದರೆ ನಮ್ಮ ಅಧಿಕಾರಿಗಳಲ್ಲಿ ನೌಕರರುಗಳಲ್ಲಿ ಈ ದೇಶದಲ್ಲಿ ಅನ್ನದ ಅಭಾವವಿದೆ ಅನ್ನದ ಅಭಾವವನ್ನು ತಪ್ಪಿಸಿ ಸುಧಾರಿಸಬೇಕು ಎನ್ನುವ ಭಾವನೆ ಸಂಬಂಧಪಟ್ಟ ಆಡಳಿತದ ಅಧಿಕಾರಿಗಳಲ್ಲಿ ಇಲ್ಲ ಎಂದು ಇಲ್ಲಿ ವಿಷಾದದಿಂದ ಹೇಳಬೇಕಾಗಿದೆ. ಹಿಂದೆ ಕೆಲವು ಬಾರಿ ಹೇಳಿದಂತೆ ಕೆಲವು ಹಂತಗಳಲ್ಲಿ ಆಡಳಿತದ ಅಧಿಕಾರಿಗಳು ನೌಕರರುಗಳು ರೈತಾಪಿ ಜನರ ವಿಚಾರದಲ್ಲಿ ಸಾಕಾದಷ್ಟು ಸಹಾನುಭೂತಿಯ ಮನೋಭಾವನೆಯನ್ನು ಹೊಂದಿಲ್ಲ ಎಂದು ಪುನಃ ನಾನು ಇಲ್ಲಿ ಹೇಳಬೇಕಾಗಿದೆ. ಇದು ಅವರಿಗೆ ಮನವರಿಕೆಯಾಗಬೇಕು. ಅವರು ನಮ್ಮ ರೈತಾಪಿ ಜನರ ವಿಚಾರದಲ್ಲಿ ಸಹಾನುಭೂತಿಯ ಅಭಿಪ್ರಾಯವನ್ನು ಹೊಂದಬೇಕು ಎಂದು ಇಲ್ಲಿ ನಾನು ಕಳಕಳಿಯಿಂದ ಮನವಿ ಮನವಿಮಾಡಿಕೊಳ್ಳುತ್ತೇನೆ. ನಮ್ಮ ವೈಮಾನಿಕರು ಸೈನಿಕರು ಭಾರತದ ಗಡಿಯಲ್ಲಿ ದಿಟ್ಟತನದಿಂದ ಹೋರಾಡುತ್ತಿರುವಾಗ ಇಂದು ನಮ್ಮಲ್ಲಿ ಸುಖವಾಗಿರತಕ್ಕ ಜನ ನಮ್ಮ ಕೈಲಾದಮಟ್ಟಿಗೆ ತ್ಯಾಗ ಮಾಡದಿದ್ದರೆ ಭಾರತ ಮಾತೆ ಏನು ಹೇಳುತ್ತಾಳೆ ಎನ್ನುವುದನ್ನು ತಾವು ಯೋಚನೆ ಮಾಡಬೇಕು. ಭಾರತ ಮಾತೆ ಕೈಮುಗಿದು ಕೇಳಿಕೊಳ್ಳುತ್ತಿದ್ದಾಳೆ, ನಮ್ಮ ಮೇಲೆ ಪಾಕಿಸ್ತಾನ ಹಾಗೂ ಚೀನಾ ದೇಶದವರು ಹಲ್ಲೆಮಾಡುತ್ತಿದ್ದಾರೆ, ಇಂತಹ ತುರ್ತು ಪರಿಸ್ಥಿತಿಯಲ್ಲಿಯೂ ಕೂಡ ನೀವುಗಳು ದೇಶಾಭಿಮಾನದಿಂದ ವರ್ತಿಸಬೇಕೆಂದು ಅವಳು ಕೇಳುತ್ತಿದ್ದಾಳೆ. ಇದನ್ನು ನಾವು ಎಲ್ಲರೂ ಇಲ್ಲಿ ಆಲೋಚನೆ ಮಾಡಬೇಕಾಗಿದೆ. ಈ ಮಧ್ಯವರ್ತಿಯ ಜನ ಏನಿದ್ದಾರೆ, ಅವರು ಮತ್ತು ಸರಕಾರದ ನೌಕರರುಗಳು ಅನ್ನವನ್ನು 'ಮಾಯಾ ಬಜಾರ್'' ನಂತೆ ತಯಾರು ಮಾಡುವುದಕ್ಕೆ ಆಗುವುದಿಲ್ಲ. ಆದರೆ ಅವರಿಂದ ಆಗತಕ್ಕ ಕೆಲಸಗಳು ಪ್ರಾಮಾಣಿಕತೆಯಿಂದ ಆದರೆ ಸ್ವಲ್ಪಮಟ್ಟಿಗಾದರೂ ಈ ಪರಿಸ್ಥಿತಿಯನ್ನು ಸುಧಾರಿಸಬಹುದು ಎಂದು ನನಗನಿಸುತ್ತದೆ. ದುರದೃಷ್ಟವಶಾತ್ ನಮ್ಮ ದೇಶದಲ್ಲಿ ಆಗಾಗ್ಗೆ ಅತಿವೃಷ್ಟಿ ಹಾಗೂ ಅನಾವೃಷ್ಟಿಗಳು ಉದ್ಭವಿಸುತ್ತಲೇ ಇವೆ. ಈ ವರ್ಷ ಮೈಸೂರು ರಾಜ್ಯದಲ್ಲಿ ಅನೇಕ ಕಡೆಗಳಲ್ಲಿ ಕಳೆದ ಸುಮಾರು ಒಂದೂವರೆತಿಂಗಳಿನಿಂದಲೂ ಮಳೆಯೇ ಬರಲಿಲ್ಲ ಎಂದು ನನಗೆ ಗೊತ್ತಾಗಿದೆ. ನನಗೆ ಗೊತ್ತಿರುವಂತ ಕಳೆದ ಐವತ್ತು ವರ್ಷಗಳಲ್ಲಿ ಮಲೆನಾಡಿನಲ್ಲಿ ಮಳೆ ಹೋದದ್ದನ್ನು ನಾನು ನೋಡಿರಲಿಲ್ಲ. ಮಲೆನಾಡು ಪ್ರದೇಶ 'ಮೈಸೂರು ರಾಜ್ಯದ ಕಣಜ' ಎಂದು ಹೇಳುತ್ತಿದ್ದರು. ಈ ವರ್ಷ ಮಲೆನಾಡು ಪ್ರದೇಶದಲ್ಲಿ ಹಿಂದೆ ಆಗುತ್ತಿದ್ದ ಬೆಳೆಯಲ್ಲಿ ಸೇಕಡ ಐವತ್ತರಷ್ಟು ಕೂಡ ಆಗಲಾರದು ಎಂದು ನನಗನಿಸುತ್ತಿದೆ. ನಾನು ಆ ಕಡೆಗೆ ಮೊನ್ನೆ ಹೋಗಿದ್ದೆ. ಆ ಕಡೆ ಮಳೆ ಬಾರದೆ ಜನರು ಅನೇಕ ಕಡೆಗಳಲ್ಲಿ ಕಂಗೆಟ್ಟಿದ್ದಾರೆ. ನನ್ನ ಮಿತ್ರರಾದ ಶ್ರೀಮಾನ್ ಜತ್ತಿಯವರು ಈಗ ಇಲ್ಲಿಲ್ಲ. ತುರ್ತು ಪರಿಸ್ಥಿತಿ ಸಂಭವಿಸಿರುವಾಗ ದೇಶದ ಎಲ್ಲ ಜನರೂ ಅದರಲ್ಲಿ ರೈತಾಪಿ ಜನರೂ ತ್ಯಾಗ ಮಾಡಲು ಸಿದ್ಧರಾಗಿದ್ದಾರೆ. ಅವರು ಬೆಳೆದುದರಲ್ಲಿ ಶಕ್ತಿ ಮೀರಿ ಸರಕಾರಕ್ಕೆ ಆಹಾರದ ದವಸಗಳನ್ನು ಒಪ್ಪಿಸುವುದಕ್ಕೆ ಸಿದ್ಧರಿದ್ದಾರೆ. ಆದರೆ ಬೆಳೆಯೇ ಕಡಿಮೆಯಾಗುವ ಕಾಲದಲ್ಲಿ ತಾವೀಗ ಆಹಾರ ಸಂಗ್ರಹಣೆಯ ಬಗ್ಗೆ ಇದರ ಸಂಬಂಧವಾದ ಪ್ರಕಟಣೆಯಂತೆ ದವಸವನ್ನು ಕೊಡಬೇಕೆಂದು ಹೇಳಿದರೆ ಇದರಿಂದ ಬಹಳ ಜನಕ್ಕೆ ತೊಂದರೆಯಾಗಬಹುದು. ಎಕರೆ ಒಂದಕ್ಕೆ ಸುಮಾರು ಮೂರು ಪಲ್ಲದಷ್ಟು ಕೊಡಬೇಕು ಎಂದು ತಮ್ಮ ಕಾನೂನಿನಲ್ಲಿ ವಿಧಾಯಕವಾಗಿದೆ. ಆದರೆ ಮಳೆಯೇ ಬಾರದೆ ಇರುವುದರಿಂದ ಕೆಲವು ಸನ್ನಿವೇಶಗಳಲ್ಲಿ ಎಕರೆ ಒಂದಕ್ಕೆ ಮೂರು ಪಲ್ಲದಷ್ಟೂ ಬೆಳೆ ಬರುವುದಿಲ್ಲ. ಮಳೆಯಾಗದ ಸ್ಥಿತಿ ಇರುವುದರಿಂದ ಇಂತಹ ಕಡೆಗಳಲ್ಲಿ ಬತ್ತದ ವಸೂಲಿಯನ್ನು ಮಾಡಬೇಕು ಎಂದರೆ ಇದರಿಂದ ಜನಕ್ಕೆ ಬಹಳ ಕಷ್ಟವಾಗುತ್ತದೆ. ಈ ರೀತಿ ಬತ್ತ ಕೊಡಬೇಕು ಎಂದರೆ ಇದು ಸರಿಯಾದುದಲ್ಲ ಎಂದು ನನಗನಿಸುತ್ತದೆ.

11-00 A. M.

ಆಹಾರ ಧಾನ್ಯಗಳನ್ನು ಸಂಗ್ರಹಣೆ ಮಾಡುವುದರಲ್ಲಿ ಸರ್ಕಾರದವರು ಬಹಳ ಸಹಾನುಭೂತಿಯಿಂದ ವರ್ತಿಸಬೇಕೆಂದು ಹೇಳುತ್ತೇನೆ. ಇದಕ್ಕಿಂತ ಈ ವಿಚಾರದಲ್ಲಿ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ನಾವು ಇಲ್ಲಿ ಹೇಳಿದುದನ್ನೇ ಪುನಃ ಪುನಃ ಹೇಳುವುದರಿಂದ ಪರಿಸ್ಥಿತಿಯೇನೂ ಉತ್ತಮವಾಗುವುದಿಲ್ಲ. ಈ ಬೆಳೆಯನ್ನು ಹೆಚ್ಚು ಮಾಡುವುದರಲ್ಲಿ ಸಾಮಾನ್ಯವಾಗಿ ನಮ್ಮ ಒಂದು ದೃಷ್ಟಿಕೋಣವೇನಿದೆ, ಅಂದರೆ ನಾವು ಈ ದಿನ ದೃಷ್ಟಿಯಲ್ಲಿಟ್ಟುಕೊಂಡಿರತಕ್ಕಂಥ ದೊಡ್ಡ ದೊಡ್ಡ ನೀರಾವರಿ ಯೋಜನೆಗಳೇನಿವೆ, ಅವುಗಳ ವಿಚಾರದಲ್ಲಿ ನಮ್ಮ ದೃಷ್ಟಿಕೋಣವನ್ನು ಬದಲಾಯಿಸುವುದು ಅಗತ್ಯವೆಂದು ನನಗನಿಸುತ್ತಿದೆ. ದೊಡ್ಡ ದೊಡ್ಡ ಯೋಜನೆಗಳಿಗೆ ನಾವೀಗ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಬೇಕಾಗಿದೆ. ಹಾಗೆ ನಾವು ಖರ್ಚು ಮಾಡತಕ್ಕ ಹಣದಲ್ಲಿ ಶೇಕಡ ಅರ್ಧದಷ್ಟು

(ಶ್ರೀ ಕಡಿದಾಳ್ ಮಂಜಪ್ಪ)

ಆ ಕಾಂಗಾರಿಗೆ ಸೇರುವುದಿಲ್ಲ. ಅದೆಲ್ಲಾ ವೆಚ್ಚವಾಗಿ ಹೋಗುತ್ತದೆ. ಒಂದು ಕಡೆ ಒಂದು ನೂರು ಕೋಟಿ ರೂಪಾಯಿನ ಕೆಲಸ ನಡೆದರೆ ಆ ಕಾಂಗರಿಗೆ ಖರ್ಚಾಗಿರತಕ್ಕದ್ದೆಲ್ಲಾ 50 ಕೋಟಿ ರೂಪಾಯಿಗಳು ಮಾತ್ರ. ಇಂಥ ತುರ್ತು ಪರಿಸ್ಥಿತಿಯ ಕಾಲದಲ್ಲಿ ನಾವು ಹೀಗೆ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡುವುದು ಸೂಕ್ತವೇ ಎಂಬುದನ್ನು ಸರ್ಕಾರದವರು ತೀವ್ರವಾಗಿ ಆಲೋಚಿಸಬೇಕಾದಂಥ ವಿಷಯವಾಗಿದೆ. ಈ ವಿಚಾರದಲ್ಲಿ ನನ್ನ ಸಲಹೆ ಇಷ್ಟೆ ಈ ದೊಡ್ಡ ದೊಡ್ಡ ಕಾಂಗಾರಿಗಳನ್ನು ತೆಗೆದುಕೊಳ್ಳುವುದರ ಬದಲು ಅಲ್ಲಲ್ಲೇ ನೀರಾವರಿ ಬಾವಿಗಳನ್ನೂ ಮತ್ತು ಸಣ್ಣ ಸಣ್ಣ ನೀರಾವರೀ ಕಾಂಗಾರಿಗಳನ್ನೂ ಕೈಗೊಳ್ಳತಕ್ಕ ವಿಚಾರಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡತಕ್ಕದ್ದಗತ್ಯ ಎಂದು ಹೇಳುತ್ತೇನೆ.

ಇನ್ನು ರೈತರಿಗೆ ದೊರೆಯಬೇಕಾದ ಸಾಲ ಮತ್ತು ವ್ಯವಸಾಯ ಸಾಮಗ್ರಿಗಳ ಬಗ್ಗೆ ಸಾಕಷ್ಟು ಸೌಲಭ್ಯಗಳನ್ನು ಒದಗಿಸಿಕೊಡಬೇಕಾದುದು ಸರ್ಕಾರದವರ ಆದ್ಯ ಕರ್ತವ್ಯ. ನಮ್ಮಲ್ಲಿ ಆಧುನಿಕ ವ್ಯವಸಾಯ ಪದ್ಧತಿಯನ್ನು ಜಾರಿಗೆ ತರತಕ್ಕದ್ದು ಅಷ್ಟು ಯಶಸ್ವಿಯಾಗಿ ನಡೆದಿಲ್ಲ. ಇಷ್ಟು ವಿಚಾರಗಳನ್ನು ಸರ್ಕಾರದವರಿಗೆ ಮನವರಿಕೆ ಮಾಡಿಕೊಳ್ಳಲು ನನಗೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—The House will now rise to meet again at 1 p. m.

The House adjourned for Recess at Five Minutes past Eleven of the Clock and reassembled at Seven Minutes past one of the Clock.

[Mr. Deputy Speaker in the Chair]

ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಮಾನ್ಯ ಅಧ್ಯಕ್ಷರೇ, ಈ ಆಹಾರದ ಅಭಾವವನ್ನು ಕುರಿತು ನೆನ್ನೆಯಿಂದ ನಾವು ಈ ಮಾನ್ಯ ಸಭೆಯಲ್ಲಿ ಚರ್ಚೆ ಮಾಡುತ್ತಾ ಇದ್ದೇವೆ. ಈ ವಿಷಯವನ್ನು ಕಳೆದ ಹತ್ತು ಹದಿನೈದು ವರ್ಷಗಳಿಂದಲೂ ಕೂಡ ಯೋಜನಾಬದ್ಧವಾಗಿ ಮಾಡಿಕೊಂಡು ಬರುತ್ತಾ ಇದ್ದರೂ ಕೂಡ ಇದರಿಂದ ಸರಿಯಾದ ಪ್ರತಿಫಲ ಸಿಕ್ಕದೇ ಇವತ್ತು ಅನ್ನಕ್ಕಾಗಿ ದೇಶದಲ್ಲಿ ಬಹಳ ಬಿಕ್ಕಟ್ಟು ಉಂಟಾಗಿದೆ. ಇದನ್ನು ಹೇಗೆ ಪರಿಹಾರ ಮಾಡಬೇಕು ಎಂಬತಕ್ಕಂತಹ ವಿಚಾರದಲ್ಲಿ ಈಗಾಗಲೇ ಈ ಮಾನ್ಯ ಸಭೆಯ ಸ್ನೇಹಿತರನೇಕರು ಬಹಳ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವು ಪ್ರದೇಶಗಳು ಪ್ರತಿ ವರ್ಷವೂ ಕೂಡ ಈ ಬರಕ್ಕೆ ತುತ್ತಾಗತಕ್ಕ ಪ್ರದೇಶಗಳು ಈ ಸಂಸ್ಥಾನದಲ್ಲಿ ಇವೆ. ಸರ್ಕಾರದ ಮುಖ್ಯಸ್ಥರಿಗೆ ಆ ಪ್ರದೇಶಗಳು ಯಾವುವು ಎನ್ನುವ ಅರಿವೂ ಕೂಡ ಇದೆ. ಹೀಗಿದ್ದರೂ ಕೂಡ ಸಣ್ಣ ನೀರಾವರಿ ಕೆಲಸಗಳಿಗಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ಎಂದು ಹೇಳತಕ್ಕ ಸರ್ಕಾರ ಬೇಕಾದಷ್ಟು ಎಸ್ಟಿಮೇಟ್ಸ್ ವಗೈರೆ ತಯಾರಾಗಿ ಬಂದರೂ ಕೂಡ ಆ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಹಿಂದು ಮುಂದು ನೋಡುತ್ತಾ ಇದ್ದಾರೆ. ಅದೂ ಅಲ್ಲದೆ ಹಿಂದೆ ಈ ನಮ್ಮ ರಾಜ್ಯದಲ್ಲಿ ಒಂದು ಪರಿಸ್ಥಿತಿ ಇತ್ತು, ಮಳೆ ಬೆಳೆ ಅಕಾಲದಲ್ಲಿ ಬರತಕ್ಕ ಪ್ರದೇಶಕ್ಕೆ ರಿಟರ್ನ್ ನೋಡದೇ ಅಲ್ಲಿಂದ ಬರತಕ್ಕ ಎಸ್ಟಿಮೇಟುಗಳನ್ನು ಒಪ್ಪಿ ಕೆಲಸ ಮಾಡಬೇಕೆಂದು ಹೇಳತಕ್ಕ ಒಂದು ಸಂಪ್ರದಾಯ ಇತ್ತು. ಅದು ಈಚೆಗೆ ಹೊಸದಾಗಿ ನಮ್ಮ ದೇಶಕ್ಕೆ ಬಂದಿರತಕ್ಕ ಚೀಫ್ ಇಂಜಿನಿಯರ್ ಜನರಲ್ ಅವರು ಒಂದು ಆರ್ಡರ್ ಪ್ರಕಾರ ಹಿಂದೆ ಆಗುತ್ತಾ ಇದ್ದಂಥ ಎಸ್ಟಿಮೇಟುಗಳಿಗೆ ಎರಡು ಮೂರು ಪಟ್ಟು ಎಸ್ಟಿಮೇಟುಗಳು ಆಗುತ್ತವೆ. ಆ ಕೆಲಸಗಳನ್ನು ತೆಗೆದುಕೊಳ್ಳಬೇಕಾದರೆ ಅವರ ಆರ್ಡರ್ ಪ್ರಕಾರ ತೆಗೆದುಕೊಂಡರೆ ನಮ್ಮ ಪ್ರದೇಶದಲ್ಲಿ ಒಂದು ಕೆಲಸವೂ ಆಗುವುದಿಲ್ಲ ಎಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿ ಬರುತ್ತದೆ. ಅದೂ ಅಲ್ಲದೆ ಕಳೆದ ಸಾರಿ ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ತಾಲ್ಲೂಕಿನ ಪರಿಸ್ಥಿತಿಯನ್ನು ನೋಡಿ ಕೆಲವು ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಸರಕಾರಕ್ಕೆ ಬರೆದಿದ್ದರು. ಆದರೂ ಕೂಡ ಅವನ್ನು ತೆಗೆದುಕೊಂಡಂತೆ ಕಾಣುವುದಿಲ್ಲ.

ಈಗ ನೀರಾವರಿ ಬಾವಿಗಳನ್ನು ಕೊಡುತ್ತಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ತಾಲ್ಲೂಕು ಬೋರ್ಡ್ ವತಿಯಿಂದ ಈವರೆಗೆ ಸುಮಾರು 300 ಬಾವಿಗಳಿಗೆ ಗ್ರಾಂಟನ್ನು ಕೊಟ್ಟಿದ್ದಾರೆ. ಆದರೆ ಇವತ್ತಿನ ವರೆಗೆ ಕೇವಲ 40 ಬಾವಿಗಳು ಮಾತ್ರ ಪೂರ್ತಿಯಾಗಿವೆ. ಬಂಡವಾಳವಿರುವ ರೈತರು ಮಾತ್ರ ಅವನ್ನು ಮಾಡಿಕೊಂಡಿದ್ದಾರೆ, ಉಳಿದವರು ಅರ್ಧ, ಕಾಲು ಹೀಗೆ ತೆಗೆದು ನಿಲ್ಲಿಸಿದ್ದಾರೆ, ಪರಿಸ್ಥಿತಿ ಹೀಗಿದೆ. ಇದಕ್ಕೆ ನನ್ನ ಸಲಹೆ ಏನೆಂದರೆ ರೈತರೇ ಬಾವಿಗಳನ್ನು ತೆಗೆಯುವುದಕ್ಕೆ ಬಿಡದೆ ಸರಕಾರ ದವರೇ ಮೈನರ್ ಇರಿಗೇಷನ್ ವೆಲ್ಸ್ ಮತ್ತು ಬೋರ್ ವೆಲ್ಸ್‌ಗಳನ್ನು ಎಲ್ಲಿ ನೀರು ಸಿಕ್ಕಲು ಅವಕಾಶ ವಿದೆಯೋ ಅಲ್ಲಿ ರೆಗ್ಯುಲರ್ ಆಗಿ ಪಬ್ಲಿಕ್ ವರ್ಕ್ಸ್ ಇಲಾಖೆಯಿಂದ ತೆಗೆಸಿ ನೀರು ಬಿದ್ದನಂತರ ರೈತರಿಗೆ ಕೊಟ್ಟು ಕಂಟ್ರಿಬ್ಯೂಷನ್ ವಗೈರೆ ಕೆರೆಕಟ್ಟೆಗಳ ವಿಷಯದಲ್ಲಿ ವಸೂಲು ಮಾಡುವಂತೆ 10—20 ವರ್ಷ ಗಳಲ್ಲಿ ವಸೂಲು ಮಾಡಿಕೊಂಡರೆ ರೈತರಿಗೆ ಸಹಾಯವಾಗುತ್ತದೆ. ಇಲ್ಲದಿದ್ದರೆ ಕೊಡುವ 3 ಸಾವಿರ ರೂಪಾಯಿ ಬಾವಿ ತೆಗೆಯಲು ಸಾಲುವುದಿಲ್ಲ. ರೈತರು ಸಾಮಾನ್ಯವಾಗಿ ಪುಣ್ಯವಂತರಲ್ಲ, ಆದುದ ರಿಂದ ಅವರು ಹೆಚ್ಚು ಬಂಡವಾಳ ಹಾಕುವುದಕ್ಕಾಗುವುದಿಲ್ಲ. ಸರಕಾರದಿಂದ 3 ಸಾವಿರ ರೂಪಾಯಿ ಗಳನ್ನು ತೆಗೆದುಕೊಳ್ಳಬೇಕಾದರೆ ರೈತರು ತಮ್ಮ ಆಸ್ತಿಯನ್ನು ಆಧಾರ ಮಾಡಬೇಕು, ಒಂದು ಸಲ ಮಾಡಿ ಹಣ ತೆಗೆದುಕೊಂಡ ಮೇಲೆ ಅವು ಸಾಲದಿದ್ದರೆ ಮತ್ತೆ ಆಧಾರ ಮಾಡಲು ಬೇರೆ ಆಸ್ತಿ ಇರು ವುದಿಲ್ಲ. ಪರಿಸ್ಥಿತಿ ಹೀಗಿದೆ.

ಮುಖ್ಯವಾಗಿ ನಮ್ಮ ದೇಶದಲ್ಲಿ ಈ ದಿವಸ ಅನ್ನವಿಲ್ಲದೆ ಸತ್ತರು ಎಂದು ಹೇಳುವುದು ಯಾರ ಗಮನಕ್ಕೂ ಬಂದಿಲ್ಲ. ಅನ್ನವಿದೆ ಆದರೆ ವಿತರಣೆಯಿಂದ ಸರಿಯಾದ ರೀತಿಯಲ್ಲಿ ಹಂಚಿಕೆಯಾಗು ತ್ತಿಲ್ಲ ಎಂಬುದು ಎಲ್ಲರೂ ಒಪ್ಪುವ ಮಾತು. ನಮ್ಮ ಮುಖ್ಯ ಮಂತ್ರಿಗಳು ಕೆಲವು ದಿವಸಗಳಿಂದ ವರ್ತಕರಿಗೆ ಬೆದರಿಕೆ ಹಾಕುವ ಕೆಲವು ಭಾಷಣಗಳನ್ನು ಮಾಡಿದ್ದಾರೆ. ಈ ಭಾಷಣಗಳನ್ನು ನೋಡಿ ದಾಗ ನನಗೆ ತೋಳ—ಕುರಿಮರಿ ಕಥೆ ಜ್ಞಾಪಕಕ್ಕೆ ಬರುತ್ತದೆ. ತೋಳ ಬಾರದಿದ್ದಾಗ ತೋಳ ಬಂತು ಎಂದು ಕೂಗಿಕೊಂಡುದರಿಂದ ಬಂದಾಗ ಕೂಗಿದರೆ ಸಹಾಯ ಬಾರದೆ ಅನಾಹುತವಾಯಿತು. ಈ ರೀತಿ ಭಾಷಣದಲ್ಲಿ ಎಚ್ಚರಿಕೆ ಕೊಡುವುದಕ್ಕೆ ಬದಲಾಗಿ ತಪ್ಪು ಮಾಡಿದವರನ್ನು ನೇಣು ಹಾಕಿದರೆ ಪಾಪ ಬರುವುದಿಲ್ಲ ಎಂದು ನಾನು ಹೇಳಬೇಕಾಗಿದೆ. ಅನ್ನಕ್ಕಿಂತ ಶ್ರೇಷ್ಠವಾದುದು ಯಾವುದೂ ಇಲ್ಲ. ಕಾಳಸಂತೆ ಮಾಡಿ ಜೀವನ ಮಾಡುವುದು ಧರ್ಮಕ್ಕೆ ವಿರುದ್ಧವಾದುದು. ಈ ವಿಚಾರದಲ್ಲಿ ಎಷ್ಟು ಉಗ್ರ ಕಾರ್ಯ ಕ್ರಮ ಕೈಕೊಂಡರೂ ಅದಕ್ಕೆ ದೇಶದ ಜನರ ಸಂಪೂರ್ಣ ಬೆಂಬಲವಿದೆ ಎಂದು ಹೇಳಲು ಇಷ್ಟಪಡುತ್ತೇನೆ. ಇಂಥ ಹೇಳಿಕೆ ಕೊಡುವುದಕ್ಕೆ ಬದಲಾಗಿ ಸರಕಾರದವರು ಈಗಾಗಲೆ ಯಾರು ತಪ್ಪು ಮಾಡುತ್ತಿದ್ದಾರೆಂಬುದನ್ನು ತಿಳಿದುಕೊಂಡಿದ್ದಾರೆ. ಅವರು ಎಷ್ಟೇ ದೊಡ್ಡ ಮನುಷ್ಯ ರಾದರೂ ಗಣ್ಯ ಸ್ಥಾನ ಪಡೆದಿದ್ದರೂ ಅವರ ಮೇಲೆ ಕಟ್ಟುನಿಟ್ಟಾಗಿ ಕ್ರಮ ಕೈಕೊಂಡು ಶಿಕ್ಷೆ ವಿಧಿಸು ವಂತೆ ಏರ್ಪಾಡು ಮಾಡಿದರೆ ಒಳ್ಳೆಯದು. ಹಾಗಿಲ್ಲದೆ ಬರೀ ಹೇಳಿಕೆಗಳನ್ನು ಕೊಡುತ್ತಾ ಹೋದರೆ ಖಂಡಿತ ದುರ್ಭಿಕ್ಷ ತಪ್ಪುವುದಿಲ್ಲ ಎಂದು ನಾನು ಭಾವಿಸುತ್ತೇನೆ.

[MR. SPEAKER in the Chair].

ಜೊತೆಗೆ ಗೊಬ್ಬರದ ವಿಚಾರದಲ್ಲಿ ಬಹಳ ಜನ ಹೇಳಿದರು. ಸೀಮೆ ಗೊಬ್ಬರಗಳನ್ನು ತಯಾರು ಮಾಡುವ ಕಾರ್ಖಾನೆ ನಮ್ಮ ದೇಶದಲ್ಲಿ ಬೆಳಗೊಳದಲ್ಲಿ ಒಂದು ಇದೆ. ಮಂಗಳೂರಿನಲ್ಲಿ ಆಗ ತಕ್ಕಂತ ಒಂದು ಬೃಹತ್ ಕಾರ್ಖಾನೆ ಯಾವ ಮಟ್ಟದಲ್ಲಿ ಬಂದಿದೆಯೆಂದು ನನಗೆ ಗೊತ್ತಿಲ್ಲ. ಇಂತಹ ಹತ್ತಾರು ಕಾರ್ಖಾನೆಗಳು ಇದ್ದರೂ ಕೂಡಾ ನಮಗೆ ಗೊಬ್ಬರ ಸಾಲದೆ ಬರುತ್ತದೆ. ಅಲ್ಲದೆ ಹಳ್ಳಿಯ ರೈತನು ಗೊಬ್ಬರಕ್ಕೆ ಅಷ್ಟೊಂದು ಬೆಲೆ ಕೊಟ್ಟು ಕೊಂಡುಕೊಂಡು ಗೊಬ್ಬರವನ್ನು ಹಾಕ ತಕ್ಕ ಸ್ಥಿತಿಯಲ್ಲಿಲ್ಲ. ಅವನು ಕುರಿ, ಕತ್ತೆ, ಹಂದಿ, ದನಗಳನ್ನು ಸಾಕಿಕೊಂಡು ಅವುಗಳ ಮೂಲಕ ಗೊಬ್ಬರ ಮಾಡಿಕೊಳ್ಳತಕ್ಕ ಸ್ಥಿತಿಯಲ್ಲಿಯೂ ಇಲ್ಲ. ಕಾರಣ, ಇದ್ದಬದ್ದ ಗೋಮಾಳಗಳನ್ನೆಲ್ಲಾ ದರಕಾಸ್ತು ಮೂಲಕ ವಿರ ಮಾಡಿದ್ದಾರೆ. ಗೋಸಂಪತ್ತುಗಳ ಮೇವಿಗೆ ಸ್ಥಳವಿಲ್ಲದಿರತಕ್ಕ ಸಂದರ್ಭದಲ್ಲಿ ಈ ಗೊಬ್ಬರವನ್ನು ರೈತನು ಉತ್ಪಾದಿಸತಕ್ಕ ರೀತಿಯಾದರೂ ಹೇಗೆ? ಕುರಿ ದನ ಗಳನ್ನು ಸಾಕುವುಕ್ಕೆ ಏನು ಏರ್ಪಾಡು ಮಾಡಿದ್ದಾರೆಂದು ನನಗಂತೂ ಗೊತ್ತಾಗುವುದಿಲ್ಲ. ಕೊಟ್ಟಿಗೆ ಗೊಬ್ಬರಕಿಂತ ಶ್ರೇಷ್ಠವಾದುದು ಇನ್ನಾವ ಗೊಬ್ಬರವಿಲ್ಲವೆಂದು ನಾನು ಹೇಳುತ್ತೇನೆ. ಕೆಲವರು ಹೇಳುತ್ತಾರೆ, ರಾಸಾಯನಿಕ ಗೊಬ್ಬರಗಳನ್ನು ನಾವು ಹೆಚ್ಚಾಗಿ ಉಪಯೋಗಿಸುವು ದರಿಂದ, ಕಾಲಕ್ರಮೇಣ ಭೂಸಾರ ಹೋಗುತ್ತದೆ, ಇದರಿಂದ ನಮ್ಮ ಆಹಾರ ಬೆಳೆ ಕಡಿಮೆಯಾಗು ತ್ತದೆ ಎಂದು. ಇದರ ಜೊತೆಗೆ ಬೆಲೆ ಏರತಕ್ಕ ಕಬ್ಬು ಮತ್ತು ಇತರ ಹಣ ತರತಕ್ಕ ಬೆಳೆಗಳನ್ನು ಬೆಳೆಯುತಕ್ಕ ಪ್ರದೇಶ ದೇಶದಲ್ಲಿ ಇಂದು ಜಾಸ್ತಿಯಾಗಿದೆ. ಇವತ್ತು ಬೆಳಗ್ಗೆ ಶ್ರೀಮತಿ ಸುಬ್ಬಮ್ಮ ನವರು ಒಂದು ವಿಚಾರ ಹೇಳಿದರು. ಸಕ್ಕರೆ ಕಾರ್ಖಾನೆಗಳಿಗೆ ವಿಪರೀತ ಲೈಸೆನ್ಸನ್ನು ಕೊಟ್ಟಿದ್ದಾರೆ

(ಶ್ರೀ ಟಿ. ಎನ್. ಮಾದಪ್ಪ ಗೌಡ)

ಎಂದು. ನಾನು ಮಂಡ್ಯ ಜಿಲ್ಲೆಯಿಂದ ಬರತಕ್ಕ ಸದಸ್ಯ. ಸದ್ಯ ನಮ್ಮಲ್ಲಿ ಎರಡು ಸಕ್ಕರೆ ಕಾರ್ಖಾನೆಗಳು ಇವೆ. ಮಳವಳ್ಳಿ ಮದ್ದೂರು ಮಧ್ಯೆ ಇನ್ನೊಂದು ಕಾರ್ಖಾನೆಗೆ ಲೈಸನ್ಸ್ ಕೊಡಬೇಕೆಂದು ಪ್ರಯತ್ನ ನಡೆಯುತ್ತಿದೆ ಎಂದು ನಾನು ಕೇಳುತ್ತಾ ಇದ್ದೇನೆ. ಮಂಡ್ಯ ಜಿಲ್ಲೆಯಲ್ಲಿ ಕಾವೇರಿ ಹೊಳೆಯ ನಾಲೆಯು ನಾಗಮಂಗಲ, ಕೃಷ್ಣರಾಜಪೇಟೆ ವಿನಹ ಬಾಕಿ ಎಲ್ಲಾ ತಾಲೂಕುಗಳಲ್ಲೂ ಹರಿಯುತ್ತಿರುವುದರಿಂದ ಇದು ಭತ್ತ ಬೆಳೆಯುವುದಕ್ಕೆ ಹಿಂದಿನಿಂದಲೂ ಬಹಳ ಪ್ರಸಿದ್ಧಿಯಾದ ಪ್ರದೇಶ. ಇವತ್ತು ಬೆಂಗಳೂರಿನಿಂದ ಮೈಸೂರಿಗೆ ಹೋದರೆ ಅಲ್ಲಿ ಇರತಕ್ಕ ಪ್ರದೇಶದಲ್ಲಿ ಮುಕ್ಕಾಲು ಪಾಲು ಕಬ್ಬಿನ ಬೆಳೆಯನ್ನು ನೋಡುತ್ತಿದ್ದೇವೆ. ಅಷ್ಟೊಂದು ದೊಡ್ಡ ಪ್ರದೇಶದಲ್ಲಿ ಭತ್ತ ಬೆಳೆಯುವುದು ಕಡಿಮೆಯಾಗಿದೆ. ಈ ರೀತಿ ರೈತನಿಗೆ ಸರಿಯಾದ ಬೆಲೆ ಸಿಕ್ಕದೆ ಇರುವುದರಿಂದ ಅವನು ಆಲುಗೆಡ್ಡೆ, ಹೊಗೆಸೊಪ್ಪು ಮುಂತಾದ ಬೆಳೆಗಳನ್ನು ಬೆಳೆಸುತ್ತಿದ್ದಾನೆ. ರಾಗಿ, ಜೋಳ, ಭತ್ತ ಇವನ್ನು ಬೆಳೆಯತಕ್ಕ ಪ್ರದೇಶ ಬಹಳ ಕಡಿಮೆಯಾಗಿದೆ. ದೇಶದಲ್ಲಿ ದಿನೇ ದಿನೇ ಜನಸಂಖ್ಯೆ ಜಾಸ್ತಿಯಾಗುತ್ತಿವೆ. ನಿನ್ನೆ ಪ್ರಶ್ನೋತ್ತರ ಕಾಲದಲ್ಲಿ ಕಡ್ಡಾಯವಾಗಿ ಸಂತಾನ ನಿಯಂತ್ರಣವನ್ನು ಕೈಗೊಳ್ಳುವ ಕ್ರಮವನ್ನು ನಾವು ಆದಷ್ಟು ಬೇಗನೇ ತೆಗೆದುಕೊಳ್ಳಬೇಕೆಂದು ಹೇಳಿದರು. ಈಗ ದೇಶದಲ್ಲಿ ರತಕ್ಕ ಕೆಲವು ಮತೀಯರು ಇದಕ್ಕೆ ಒಪ್ಪದೆ ಹೋಗುತ್ತಾರೆ. ಇದರಿಂದ ಒಂದು ಭಯ ನಮ್ಮ ಮನಸ್ಸಿನಲ್ಲಿ ಬರುತ್ತದೆ. ಇವತ್ತು ಪಾಕಿಸ್ತಾನ-ಚೈನಾದವರು ನಮ್ಮ ಮೇಲೆ ಬಿದ್ದಿರತಕ್ಕ ಸಂದರ್ಭದಲ್ಲಿ, ಇದೇ ರೀತಿ ಇಲ್ಲಿ ಒಂದು ಕೋಮಿನ ಆರು ಕೋಟಿ ಪ್ರಜಾಸಂಖ್ಯೆ ನಮ್ಮ ಮಧ್ಯದಲ್ಲಿರುವಾಗ, ಅವರನ್ನು ಮಾತ್ರ ಹಾಗೇ ಬಿಟ್ಟು ನಾವು ಮಾತ್ರ ಮಿತಸಂತಾನ ಮಾಡಿದರೆ, ಇನ್ನು ಹತ್ತಾರು ವರ್ಷಗಳಲ್ಲಿ ನಮ್ಮ ಗತಿ ಏನು ಎಂಬುದನ್ನು ಯೋಚನೆ ಮಾಡಬೇಕಾಗಿ ಬರುತ್ತದೆ. ಆದ್ದರಿಂದ ಯಾವುದೇ ಸೆಕ್ಯೂಲರ್ ಸ್ಟೇಟ್ ಎಂದು ಹೇಳಿಬಿಟ್ಟಿದ್ದೆವೊ, ಈ ದೇಶದಲ್ಲಿ ಇರತಕ್ಕ 2-3 ಮಕ್ಕಳಿಗೆ ಮೇಲ್ಪಟ್ಟಿರತಕ್ಕಂತ ಎಲ್ಲರನ್ನು ಸಂತಾನ ನಿಯಂತ್ರಣ ಯೋಜನೆಗೆ ಒಳಪಡಬೇಕು.

Mr. SPEAKER.—That is not food production. Limiting the family or even reducing the family by any means, right or wrong, is not stepping up food production. You can avoid the scarcity by reducing the number of mouths to be fed.

ಶ್ರೀ ಟಿ. ಎನ್. ಮಾದಪ್ಪ ಗೌಡ.—ನಾನು ಹೇಳತಕ್ಕದ್ದೇನೆಂದರೆ ರೈತನಿಗೆ ಇವತ್ತು ಸೊಸೈಟಿಗಳಿಂದ ಸಕಾಲದಲ್ಲಿ ಸರಿಯಾದ ರೀತಿಯಲ್ಲಿ ಸಾಲ ಸಿಗುವುದಿಲ್ಲ, ಕಾಲಕ್ಕೆ ಸರಿಯಾಗಿ ಗೊಬ್ಬರ ಸಿಕ್ಕುತ್ತಾ ಇಲ್ಲ. ಮಂಡ್ಯದಲ್ಲಿ ನಮ್ಮ ಸರ್ಕಾರದವರು ಜಪಾನ್ ಸರ್ಕಾರದ ಸಹಾಯ ಸೌಲಭ್ಯಗಳನ್ನು ಪಡೆದು ಒಂದು ಫಾರ್ಮು ಮಾಡಿದ್ದಾರೆ. ಆ ಫಾರಂ ಪ್ರಾರಂಭವಾದ ಮೇಲೆ, ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳು ಅದರ ಪ್ರಾರಂಭೋತ್ಸವವನ್ನು ಮಾಡಿದ ಮೇಲೆ ನಾಲ್ಕು ಸಲ ನಾನು ಆ ಜಾಗಕ್ಕೆ ಹೋಗಿದ್ದೆ. ಅಲ್ಲಿ ನಾಲ್ಕು ಸಂಸಾರಗಳಿವೆ. 12 ಎಕರೆ ಭೂಮಿಯನ್ನು ಅವರಿಗೆ ಕೊಟ್ಟಿದ್ದಾರೆ. ನಾಲ್ಕು ಸ್ಥಳಗಳಲ್ಲಿ ಮೂರು ಮೂರು ಎಕರೆ ಪ್ರದೇಶವನ್ನು ಬಹಳ ಅಚ್ಚುಕಟ್ಟಾಗಿ ಮಾಡುತ್ತಿದ್ದಾರೆ. ಉಳುವ ಕಾಲದಿಂದ ಹಿಡಿದು ಇಲ್ಲಿಯವರೆಗೂ ನಾಲ್ಕು ಸಲ ಆ ಪ್ರದೇಶವನ್ನು ನಾನು ನೋಡಿದ್ದೇನೆ. ಆ ಜಮೀನುಗಳು ಬಹಳ ಉತ್ತಮ ಸ್ಥಿತಿಯಲ್ಲಿವೆ ಎನ್ನುವುದು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೂ ಬಂದಿರುತ್ತದೆ. 12 ಎಕರೆಗೆ ಅವರು ಎಷ್ಟು ಗೊಬ್ಬರ ಹಾಕಿದ್ದಾರೆ, ಅವರಲ್ಲಿ ಎಷ್ಟು ಸಾಮಾನು ಇದೆ ಅದನ್ನೆಲ್ಲ ನೋಡಿದರೆ, ನಮ್ಮ ಬಡ ರೈತರು ಅಷ್ಟನ್ನು ಒದಗಿಸಿಕೊಂಡು ವ್ಯವಸಾಯ ಮಾಡುವುಕ್ಕೆ ಸಾಧ್ಯವೇ ಎನ್ನುವುದನ್ನು ಅವರ ಗಮನಕ್ಕೆ ಈಗಾಗಲೇ ಬಂದಿರಬಹುದು ಎಂದು ತಿಳಿದುಕೊಂಡಿದ್ದೇನೆ. ಹೆಚ್ಚು ಸಹಾಯ ಸೌಲಭ್ಯಗಳನ್ನು ನಮ್ಮ ರೈತರಿಗೆ ಒದಗಿಸಿ ಕೊಡುವುದಾದರೆ ಜಪಾನ್ ದೇಶದವರು ಯಾವರೀತಿ ಬೆಳೆಯುತ್ತಾರೆಯೋ ಆ ರೀತಿ ಬೆಳೆಯುವುದಕ್ಕೆ ಹಿಂದೆ ಬೀಳುವುದಿಲ್ಲ, ಕಷ್ಟಪಟ್ಟು ಬೆಳೆಯುವುದಕ್ಕೆ ಸಿದ್ಧರಾಗಿದ್ದಾರೆ. ಆದರೆ ಅವರಿಗೆ ಸರಿಯಾದ ಪದಾರ್ಥಗಳನ್ನು ಕೊಡಬೇಕು.

ಇವತ್ತು ನಾನು ನಮ್ಮ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮಾಡಿಕೊಳ್ಳುವ ಸವಿನಯ ಪ್ರಾರ್ಥನೆ ಏನೆಂದರೆ ಬರ ಬರತಕ್ಕ ತಾಲ್ಲೂಕುಗಳಲ್ಲಿ ಖರ್ಚು ಮಾಡುವ ಹಣಕ್ಕೆ ಪ್ರತಿಫಲ ಏನು ಎನ್ನುವುದನ್ನು ದಯವಿಟ್ಟು ಕೇಳಬೇಡಿ. ಕ್ಷಾಮ ಪರಿಹಾರ ಕಾರ್ಯಗಳಿಗಾಗಿ 50 ಸಾವಿರ, 60 ಸಾವಿರ, ಒಂದು ಲಕ್ಷ ರೂಪಾಯಿ ಹೀಗೆ ಕೊಡುತ್ತೀರಿ. ಈ ಹಣ ಸರಿಯಾದ ರೀತಿ ವಿನಿಯೋಗವಾಗುವುದಿಲ್ಲ. ಒಂದು ಲಕ್ಷ ಮತ್ತು ಹೆಚ್ಚು ಜನ ಇರುವ ಕಡೆಗಳಿಗೆ 50–60 ಸಾವಿರ ರೂಪಾಯಿ ಕೊಟ್ಟರೆ ಯಾರ ಹೊಟ್ಟೆಯನ್ನೂ ತುಂಬುವುದಕ್ಕೆ ಸಾಧ್ಯವಿಲ್ಲ. ಕ್ಷಾಮ ಪರಿಹಾರಕ್ಕೆ ಕೊಡುವ ಹಣವನ್ನು ಹೆಚ್ಚು

ಮಾಡಬೇಕು. ಅಲ್ಲದೆ ಅಂದಾಜುಗಳು ತಯಾರಾಗಿ, ಅದಕ್ಕೆ ಸರಿಯಾದ ಪ್ರತಿಫಲ ಬರುವುದಿಲ್ಲ ಎಂದು ಕ್ಷಾಮ ಪ್ರದೇಶದಲ್ಲಿ ಕೈಕೊಳ್ಳಬೇಕಾಗಿರುವ ಕಾರ್ಯಗಳನ್ನು ನಿಲ್ಲಿಸದೆ ಆ ಕಾರ್ಯಗಳನ್ನು ತೆಗೆದುಕೊಂಡು ಕೆರೆ ಕಟ್ಟೆಗಳನ್ನು ನಿರ್ಮಿಸುವುದಾದರೆ ಕಾಲ ಕ್ರಮೇಣ ಅವುಗಳಿಂದ ಉಪಯೋಗ ವಾಗುತ್ತದೆ. ಹಿಂದೆ 1928ನೆಯ ಇಸವಿಯಲ್ಲಿ ರಾಜ್ಯದಲ್ಲಿ ಏನು ಪರಿಸ್ಥಿತಿ ಇವತ್ತು ಇದೆಯೋ ಅದೇ ಪರಿಸ್ಥಿತಿ ಇತ್ತು. ಆ ಪರಿಸ್ಥಿತಿಯಲ್ಲಿ ಕೊನೆಯ ಒಂದೆರಡು ಮಳೆಗಳು ಬಂದು ಹೋಯಿತು. ಆಗ ಕೆರೆಕಟ್ಟೆಗಳನ್ನು ಕಟ್ಟಿದ್ದರೆ ಸ್ವಲ್ಪ ಅನುಕೂಲವಾಗುತ್ತಿತ್ತು ಎಂದು ನಾನು ಭಾವಿಸುತ್ತೇನೆ. ದಯ ವಿಟ್ಟು ಬರಗಾಲ ಪ್ರದೇಶದಿಂದ ಬರತಕ್ಕ ಯಾವುದೇ ಅಂದಾಜುಗಳನ್ನು ಹಿಂದಕ್ಕೆ ಹಾಕದೆ ಆ ಕೆಲಸ ಗಳನ್ನು ಮಾಡಿಸಿ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಈಗ ನಾವು ನಾಸ್ತಿಕರಾಗುತ್ತಿದ್ದೇವೆ. ಹಿಂದೆ ಈ ರೀತಿ ಮಳೆ ಇಲ್ಲದ ಕಾಲದಲ್ಲಿ—ನಾನು ನೋಡಿದುದನ್ನು, ನನ್ನ ಅನುಭವವನ್ನು ಹೇಳುತ್ತಿದ್ದೇನೆ ಗ್ರಾಮಸ್ಥರೆಲ್ಲ ಒಂದು ದಿವಸ ಸ್ನಾನ ಮಾಡಿ, ಮಡಿ ಮಾಡಿ, ಪಕ್ಕದಲ್ಲಿರವ ಬೆಟ್ಟಗಳಿಗೆ ಹೋಗಿ ಪೂಜೆ ಪುನಸ್ಕಾರ ಮಾಡಿದರೆ ಮಳೆ ಬರು ತ್ತಿತ್ತು. ಮಾನ್ಯ ಮುಖ್ಯ ಮಂತ್ರಿಯವರಿಂದ ಹಿಡಿದು ಕೆಳಗಿನವರೆಗೂ ಒಳ್ಳೆಯವರು ಯಾರಾದರೂ ಇದ್ದಾರೆಯೇ ಎಂದು ಹುಡುಕಬೇಕಾಗಿದೆ. ಅನೂಚಾನವಾಗಿ ಬಂದಂಥ ಕೆಲವು ಪದ್ಧತಿಗಳನ್ನು ನಾವು ಬಿಟ್ಟು ಬಿಟ್ಟಿದ್ದೇವೆ. ಧರ್ಮ ಕಾರ್ಯದಲ್ಲಿ ಆಸಕ್ತಿ ವಹಿಸಿ ಪೂಜೆ ಪುನಸ್ಕಾರ ಮಾಡಿಸಿದರೆ ಮಳೆ ಬರುತ್ತದೆ ಎನ್ನುವ ಪ್ರತೀತಿ ಹಿಂದಿನಿಂದಲೂ ಇದೆ. ನಮ್ಮ ಸರ್ಕಾರದವರು ಈ ಕೆಲಸವನ್ನು ಆದಷ್ಟು ಬೇಗ ಮಾಡಿಸಿದರೆ ಯಾರಾದರೂ ಪುಣ್ಯವಂತರಿದ್ದು, ಅವರ ಪ್ರಾರ್ಥನೆ ಭಗವಂತನಿಗೆ ಮುಟ್ಟಿದರೆ ಮಳೆ ಬರಬಹುದು. ಈ ಕೆಲಸವನ್ನು ಆದಷ್ಟು ಬೇಗ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ, ಸ್ವಾಮಿ.

ಶ್ರೀ ಟಿ. ಮಾದಯ್ಯ ಗೌಡ (ರಾಮನಗರಂ).—ಮಾನ್ಯ ಸಭಾಧ್ಯಕ್ಷರೇ, ನಮ್ಮ ಮುಂದೆ ಇಟ್ಟಿರತಕ್ಕ ನಿರ್ಣಯ ಬಹಳ ಅಮೋಘವಾದುದು ಮತ್ತು ಅವಶ್ಯಕವಾದುದು ಎಂದು ಹೇಳುವುದರಲ್ಲಿ ಏನೂ ಸಂಶಯವಿಲ್ಲ. ಸರ್ಕಾರದವರು ಈ ವಿಚಾರವಾಗಿ ಪ್ರಸ್ತಾಪಮಾಡಿ ಮೊದಲಿನಿಂದಲೂ ಕೂಡ ಈ ಬೆಳೆ ಜಾಸ್ತಿ ಮಾಡಬೇಕು, ನಮಗೆ ಸಿಕ್ಕತಕ್ಕ ಆಹಾರ ಪದಾರ್ಥ ಕಡಿಮೆ. ಅದನ್ನು ಏನಾದರೂ ಮಾಡಿ ದೇಶಕ್ಕೆ ಎಷ್ಟು ಬೇಕಾಗಿದೆಯೋ ಅಷ್ಟನ್ನಾದರೂ ಬೆಳೆಯಲೇಬೇಕೆಂದು ಪ್ರಯತ್ನಗಳನ್ನು ಮಾಡಿದೆವು. ಹೋದ ವರ್ಷ ನಮ್ಮ ದೇಶದ ನಾಡು ಹಬ್ಬದ ಸಂದರ್ಭದಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ನಮಗೆ ಎಲ್ಲರಿಗೂ ಕಾಗದಗಳನ್ನು ಬರೆದು ನಮ್ಮ ಭಾಗದ ಕರ್ತವ್ಯ ಏನು ? ಸದಸ್ಯರು ಯಾವರೀತಿ ಸಹಕರಿಸಿ ಹೆಚ್ಚಾಗಿ ಆಹಾರೋತ್ಪಾದನೆಯನ್ನು ಮಾಡಬೇಕು ಎನ್ನುವುದನ್ನು ತಿಳಿಸಿದರು. ಅವರು ಏನೇನು ಮಾಡಿದರೆ ಹೆಚ್ಚಿನ ಆಹಾರೋತ್ಪತ್ತಿ ಮಾಡಬಹುದು ಎನ್ನುವುದನ್ನು ಅವರು ಕಾಗದದಲ್ಲಿ ಹೇಳಿದರು. ಹೆಚ್ಚು ಗೊಬ್ಬರ ಉತ್ಪತ್ತಿಮಾಡಿಕೊಳ್ಳತಕ್ಕದ್ದು, ಕೆರೆಕಟ್ಟೆಗಳನ್ನು ಸರಿಯಾಗಿ ನೋಡಿಕೊಳ್ಳತಕ್ಕದ್ದು ಮತ್ತು ವಿವಿಧ ರೀತಿಯಲ್ಲಿ ಕೆರೆಗಳ ನೀರನ್ನು ಉಪಯೋಗಿಸಿಕೊಳ್ಳತಕ್ಕದ್ದು. ಇಂಪ್ರೂವ್ಡ್ ಸೀಡ್ಸ್, ಕೆಮಿಕಲ್ ಫರ್ಟಿಲೈಸರ್ಸ್, ಪ್ಲಾಂಟ್ ಪ್ರೊಟೆಕ್ಷನ್ ಮೆಷರ್ಸ್, ಎಕ್ಸ್‌ಟೆನ್ಸೀವ್ ಯೂಸ್ ಆಫ್ ಗ್ರೀನ್ ಮೆನ್ಯೂರ್ ಫಾರಂ ಯಾರ್ಡ್ ಮೆನ್ಯೂರ್ ಇತ್ಯಾದಿ ಬಹಳ ಪ್ರಾಮುಖ್ಯವಾದ ವಿಷಯಗಳು, ನಮ್ಮ ಮುಂದೆ ಮತ್ತು ನಮ್ಮ ದೃಷ್ಟಿ ಪಥದಲ್ಲಿ ಇರಬೇಕು ಎಂದು ಅವರು ಬರೆದಿರುವ ಉದ್ದವಾದ ಪತ್ರದಲ್ಲಿ ತಿಳಿಸಿ ದ್ದಾರೆ. ದೇಶದಲ್ಲಿನ ಬೆಳವಣಿಗೆಯಲ್ಲಿ ಮುಖ್ಯವಾಗಿ ರೈತರಲ್ಲಿ ತಕ್ಕಷ್ಟು ಆಸಕ್ತಿ ಇಲ್ಲ. ಅಲ್ಲಲ್ಲಿ ಸರ್ಕಾರಿ ವ್ಯವಹಾರದಲ್ಲಿ ಲೋಪದೋಷಗಳು ಇದೆಯೆಂದು ಅರ್ಥವಾಗುತ್ತದೆ. ಇದನ್ನೆಲ್ಲಾ ತಾವು ನೋಡಿ ಏನಾಗಬೇಕು ಎನ್ನುವುದನ್ನು ಬರೆಯಬೇಕು ಎಂದು ಹೇಳಿದರು. ಈ ಸಭೆಯ ಮಾನ್ಯ ಸದಸ್ಯರನೇ ಕರು ಬರೆದಿರಬಹುದು ? ನಾನೂ ಕೂಡ ನಮ್ಮ ಕ್ಷೇತ್ರದಲ್ಲಿ ಅಲ್ಲಲ್ಲಿ ಪ್ರವಾಸ ಮಾಡಿ ತಾಲ್ಲೂಕಿನ ಮುಖ್ಯ ರೈತರುಗಳನ್ನು ಬರಮಾಡಿಕೊಂಡು ಮತ್ತು ಪಂಚಾಯಿತಿ ಅಧ್ಯಕ್ಷರುಗಳನ್ನು ಬರಮಾಡಿ ಕೊಂಡು ಅವರಲ್ಲಿ ಚರ್ಚೆಮಾಡಿ 9 ಪಾಯಿಂಟ್‌ಗಳನ್ನು ಹಾಕಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಕಾಗದ ಬರೆದೆ. ಅವರು ಹೀಗೆ ಸೂಚಿಸಿದರು. ನಾನು 9 ಪಾಯಿಂಟ್‌ಗಳನ್ನು ನೋಡಿದ್ದೇನೆ ಬಹಳ ಒಳ್ಳೆಯ ಪಾಯಿಂಟ್ಸ್, ಅದಕ್ಕೆ ತಕ್ಕ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳುತ್ತೇವೆ ಎಂದು ಪತ್ರ ವನ್ನೂ ಕೂಡ ಬರೆದಿದ್ದಾರೆ. ನಾನು ಎಷ್ಟರಮಟ್ಟಿಗೆ ಈ ಕೆಲಸಕಾರ್ಯಗಳು ಆಯಿತು ಎನ್ನುವುದನ್ನು ನಿರೀಕ್ಷಣೆ ಮಾಡುತ್ತಾ ಇದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಏನು ಮಾಡಬೇಕಾಗಿತ್ತೋ ಅದನ್ನು ಮಾಡಿದ್ದಾರೆ. ಯಾವ ಯಾವ ಇಲಾಖೆಗೆ ಯಾವ ಯಾವ ವಿಚಾರವಾಗಿ ಏನನ್ನು ಬರೆಯಬೇಕು ಅದನ್ನು ಆ ಇಲಾಖೆಗೆ ಕಳುಹಿಸಿಕೊಟ್ಟಿದ್ದಾರೆ. ಕಳುಹಿಸಿಕೊಟ್ಟಮೇಲೆ ಅವುಗಳು ಏನು ಆಯಿತು ಎನ್ನುವುದನ್ನು ಯಾರಾದರೂ ವಿಚಾರ ಮಾಡಿದರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಇಲಾಖೆಗೆ ಪತ್ರ ಬರೆಯುತ್ತೇನೆ. ಉತ್ತಮವಾದ ಆಹಾರ ಬೆಳೆಯುವುದಕ್ಕೆ ಅತಿ ಕ್ಷಿಪ್ರವಾಗಿ ಏನೇನು ಕೆಲಸ ಕಾರ್ಯಗಳು ಆಗಬೇಕೆಂದು ಬರೆಯುತ್ತೇನೆ. ಅವರು ಅಧಿಕಾರಿಗಳಿಗೆ ಕಳುಹಿಸಿ ಆ ಕೆಲಸ ಆಗ

(ಶ್ರೀ ಟಿ. ಮಾದಯ್ಯ ಗೌಡ)

ಬೇಕೆಂದು ಬರೆಯುತ್ತಾರೆ. ಆಮೇಲೆ ಅವು ಎಷ್ಟರಮಟ್ಟಿಗೆ ಆಯಿತು ಎನ್ನುವುದನ್ನು ಪರ್‌ಸ್ಯೂ ಮಾಡುವ ಪದ್ಧತಿ ನಮ್ಮಲ್ಲಿ ಇವೆಯೋ ಇಲ್ಲವೋ ಎಂದು ನಾನು ಅನೇಕವೇಳೆ ಸಂಶಯ ಪಟ್ಟಿದ್ದೇನೆ. ನನ್ನ ಕ್ಷೇತ್ರದಲ್ಲಿ ಪ್ರಾಮುಖ್ಯವಾಗಿ ಮುಖ್ಯ ಮಂತ್ರಿಗಳ ಗಮನಕ್ಕೆ ತಂದದ್ದು, ಕೋ ಆಪರೇಟೀವ್ ಸೊಸೈಟಿಗಳು ಎಷ್ಟರಮಟ್ಟಿಗೆ ಕೆಲಸಮಾಡುತ್ತಿವೆ ಎಂದು. ನಾನು ಉತ್ತಮವಾದ ಬೀಜಕ್ಕೆ, ಗೊಬ್ಬರಕ್ಕೆ ಮತ್ತು ಆಹಾರಧಾನ್ಯಗಳನ್ನು ಹಂಚುವುದಕ್ಕೆ ಇತ್ಯಾದಿ ಪ್ರಾಮುಖ್ಯವಾದ ವಿಚಾರಗಳಿಗೆಲ್ಲಾ ಸೊಸೈಟಿಗಳ ಮೇಲೆ ಅವಲಂಬಿಸಬೇಕು ಎನ್ನುವುದು ಸರ್ಕಾರದ ಉದ್ದೇಶ. ಸಣ್ಣಪುಟ್ಟ ಸಾಲಗಳು ಬೇಕಾದರೆ ನಾವು ಸೊಸೈಟಿಗೆ ಹೋಗಬೇಕು ಮತ್ತು ಅದು ರೈತರಿಗೂ ಅವಶ್ಯಕವಾದುದು. ರಾಮನಗರ ತಾಲ್ಲೂಕಿನಲ್ಲಿ 45 ಸರ್ವಿಸ್ ಸೊಸೈಟಿಗಳಿವೆ. ಆ ಸರ್ವಿಸ್ ಸೊಸೈಟಿಗಳಲ್ಲಿ ಬಹಳ ಸೊಸೈಟಿಗಳು ಕೆಲಸ ಮಾಡುತ್ತಿಲ್ಲ. ಆದುದರಿಂದ ರೈತರುಗಳಿಗೂ ಬಹಳ ತೊಂದರೆಯಾಗಿದೆ ಅದನ್ನು ನಿವಾರಣೆ ಮಾಡಬೇಕೆಂದು ನಾನು ಪತ್ರದಲ್ಲಿ ಬರೆದಿದ್ದೇನೆ. ಇಲಾಖೆಯವರು ಈ ವಿಚಾರದಲ್ಲಿ ಇದುವರೆಗೂ ಏನಾದರೂ ಕೆಲಸಕಾರ್ಯಗಳನ್ನು ತೆಗೆದುಕೊಂಡರೋ ಇಲ್ಲವೋ ನನಗೆ ತಿಳಿಯದು.

1-30 P.M.

ಇನ್ನು ಎಲೆಕ್ಟ್ರಿಕ್ ಪಂಪುಸೆಟ್ಟುಗಳ ವಿಚಾರ. ರಾಮನಗರ ತಾಲ್ಲೂಕು ಬಹಳ ಹಿಂದುಳಿದ ಪ್ರದೇಶವೆಂಬುದು ಮಾನ್ಯ ಮಂತ್ರಿಗಳಿಗೆ ಗೊತ್ತು. ಅಲ್ಲಿ ಸಾಕಷ್ಟು ನೀರಾವರಿ ಸೌಕರ್ಯಗಳಿಲ್ಲ. ನಮ್ಮ ತಾಲ್ಲೂಕಿನಲ್ಲಿರತಕ್ಕ ಎರಡು ದೊಡ್ಡ ಕೆರೆಗಳಿಂದ ಅಷ್ಟಾಗಿ ನೀರಿನ ಸೌಕರ್ಯ ಸಾಲದು. ಅದಕ್ಕಾಗಿ ನಮಗೆ ಹೆಚ್ಚಿಗೆ ನೀರಾವರಿ ಸೌಕರ್ಯಗಳಿರಬೇಕು. ಆದಕಾರಣ ಬಾವಿಗಳನ್ನು ವಿಶೇಷವಾಗಿ ತೆಗೆಸಿ, ಪಂಪುಸೆಟ್ಟುಗಳನ್ನು ಹಾಕಿಕೊಟ್ಟರೆ ರಾಮನಗರದ ರೈತರು ಬದುಕುತ್ತಾರೆ. ಈ ವಿಚಾರವನ್ನು ಅನೇಕವೇಳೆ ನಾನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ನಾವು ಈಚೆಗೆ ಸರ್ಕಾರದವರಲ್ಲಿ ಎಷ್ಟು ಒತ್ತಾಯಮಾಡಿದರೂ ರೈತರಿಗೆ ಬಾವಿಗಳನ್ನು ತೆಗೆಯುವುದಕ್ಕೆ ಸಹಾಯಮಾಡುವುದರಲ್ಲಿಯೂ ಹಾಗೂ ಅವರಿಗೆ ಪಂಪುಸೆಟ್ಟುಗಳನ್ನು ಒದಗಿಸಿಕೊಡುವುದರಲ್ಲಿಯೂ ಸರ್ಕಾರದವರು ಏಕೋ ಅನಾದರಣೆ ಮಾಡುತ್ತಿದ್ದಾರೆಂದು ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ರೈತರು ಹೆಚ್ಚಿಗೆ ಬೆಳೆಯಬೇಕು ಎಂದು ಹೇಳುತ್ತಾರೆ. ರೈತರಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ನಾನು ಮೊದಲು ಹೇಳಿದ ಹಾಗೆ ಆ ಕೆಲಸಗಳು ಆಗದೇ ಹೋದರೆ ಹೇಗೆ ಭೂಮಿಯಲ್ಲಿ ಬೆಳೆಯನ್ನು ಅಭಿವೃದ್ಧಿಪಡಿಸಬೇಕು ಎಂಬುದಾಗಿ ನಾನು ಮಂತ್ರಿಗಳಲ್ಲಿ ಬಹಳ ವ್ಯಸನದಿಂದ ಕೇಳುತ್ತೇನೆ. ಇನ್ನು ಚಾಮರಾಜನಗರ ಮತ್ತು ನಂಜನಗೂಡು ಪ್ರಾಂತಗಳಲ್ಲಿ ಪ್ರತಿಯೊಂದು ಗ್ರಾಮದಲ್ಲಿಯೂ 8-10 ಬಾವಿಗಳನ್ನು ತೆಗೆದಿದ್ದಾರೆ ಮತ್ತು ಪಂಪುಸೆಟ್ಟುಗಳನ್ನು ಹಾಕಿಕೊಂಡಿದ್ದಾರೆ. ಅದನ್ನು ಕೇಳಿ ನನಗೆ ಬಹಳ ಸಂತೋಷವಾಯಿತು. ಆ ಒಂದು ಸೌಕರ್ಯವನ್ನು ಎಲ್ಲಾ ತಾಲ್ಲೂಕುಗಳಿಗೂ ಏಕೆ ದೊರಕಿಸಲಿಲ್ಲವೆಂದು ನಾನು ಕೇಳುತ್ತೇನೆ. ಆರೀತಿಯಾದ ಅನುಕೂಲ ನಮ್ಮ ತಾಲ್ಲೂಕಿಗೂ ದೊರಕಿದರೆ ಹೆಚ್ಚು ಆಹಾರ ಬೆಳೆಯಲಿಕ್ಕೆ ಅನುಕೂಲವಾಗುತ್ತದೆ ಎಂಬುದಾಗಿ ನಾನು ಯೋಚನೆ ಮಾಡುತ್ತೇನೆ. ನಾನು ಮುಖ್ಯ ಮಂತ್ರಿಗಳು ಬಂದಿದ್ದ ಕಾಲದಲ್ಲಿ ಒಂದು ವಿಷಯವನ್ನು ಬಹಳ ಚೆನ್ನಾಗಿ ಬರೆದಿದ್ದೆ. ಅದು ಈ ರೀತಿ ಇದೆ.

> "Greater contact and greater vigilance is required by the Co-operation, Agriculture and other departments. Closer touch and sympathetic touch with farmers will bring about much desired results. There does not seen to be quick response by many of the departments to the requests of the farmers. They must keep out the bureaucratic attitude that still persists in the departments."

ಈ ವಿಚಾರವನ್ನು ಈ ಸಂದರ್ಭದಲ್ಲಿ ನಾನು ಒತ್ತಿ ಹೇಳಬೇಕೆಂದು ಅಪೇಕ್ಷೆಪಡುತ್ತೇನೆ. ನಾವು ನಮ್ಮ ಅಧಿಕಾರಿಗಳಿಂದ ಏನೊಂದು ಸಹಾನುಭೂತಿ ಹಾಗೂ ಏನೊಂದು ಸಹಕಾರವನ್ನು ನಿರೀಕ್ಷಿಸುತ್ತೇವೊ ಅದು ಈಗ ಸಾಕಷ್ಟು ಬರುತ್ತಿಲ್ಲವೆಂದು ನಾನು ರೈತರ ಪರವಾಗಿ ಸರ್ಕಾರಕ್ಕೆ ದುಃಖದಿಂದ ಹೇಳುತ್ತೇನೆ. 'ಬ್ಯೂರೊಕ್ರಟಿಕ್ ಅಟಿಟ್ಯೂಡ' ಎಲ್ಲಿಯವರೆಗೂ ನಮ್ಮ ಅಧಿಕಾರಿಗಳಲ್ಲಿ ಹೋಗುವುದಿಲ್ಲವೋ ಅಲ್ಲಿಯವರೆಗೂ ಇವರು ಏನು ಮಾಡುವುದಕ್ಕೂ ಸಾಧ್ಯವಾಗುವುದಿಲ್ಲವೆಂದು ನನ್ನ ಮನಸ್ಸಿಗೆ ಚೆನ್ನಾಗಿ ಅರ್ಥವಾಗುತ್ತದೆ.

ಇನ್ನು ಕೆರೆಗಳ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಸರ್ಕಾರದವರು ಬಹಳ ಪ್ರಯಾಸಪಟ್ಟು ನೀರಾವರಿ ಸೌಕರ್ಯಗಳನ್ನು ಹೆಚ್ಚಿಸಬೇಕು ಎಂದು ಪ್ರಯತ್ನಮಾಡುತ್ತಿದ್ದಾರೆ. ನೀರಾವರಿ ಸೌಕರ್ಯಗಳನ್ನು ಹೆಚ್ಚಿಸಬೇಕಾದರೆ ಅಲ್ಲಲ್ಲಿರತಕ್ಕ ಪಿಕಪ್ಪುಗಳನ್ನು ಮತ್ತು ಕೆರೆಗಳನ್ನೇನೋ ದುರಸ್ತುಮಾಡುತ್ತಿದ್ದಾರೆ. ಆದರೆ ಮಾಡತಕ್ಕ ಕೆಲಸ ಎಷ್ಟು ತ್ವರಿತವಾಗಿ ಆಗಬೇಕೋ ಅಷ್ಟು ತ್ವರಿತವಾಗಿ ಆಗುತ್ತಿಲ್ಲ. ಸಾಮಾನ್ಯವಾಗಿ ಒಂದು ಕೆಲಸವನ್ನು ಈ ದಿವಸ ಪ್ರಾರಂಭಿಸಿದರೆ ಸುಮಾರು 2-3 ತಿಂಗಳಲ್ಲಿಯೂ ಆಗುತ್ತಿಲ್ಲ. ಆ ಕೆಲಸ ಇನ್ನು ಎರಡು ಮೂರು ವರ್ಷಗಳಾದರೂ ಮುಗಿಯುವುದಿಲ್ಲ. ಇದು ಬಹಳ ಶೋಚನೀಯವಾದುದಾಗಿದೆ. ಸರ್ಕಾರಕ್ಕೇನೋ ಹೆಚ್ಚು ಹಣ ಖರ್ಚಾಗುತ್ತಿದೆ. ಆದರೆ ರೈತರಿಗೆ ಎಷ್ಟು ಚೆನ್ನಾಗಿ ಸೌಕರ್ಯ ಒದಗಬೇಕೋ ಅಷ್ಟು ಚೆನ್ನಾಗಿ ಒದಗಲಿಲ್ಲ. ಅಲ್ಲದೆ ಇರತಕ್ಕ ಕೆರೆಗಳ ಅಥವಾ ನಾಲೆಗಳ ಕೆಳಗೆ ನೀರನ್ನು ಉಪಯೋಗಿಸುವ ವಿಧಾನದಲ್ಲಿ ಸರ್ಕಾರದವರು ಎಷ್ಟರಮಟ್ಟಿಗೆ ರೈತರಿಗೆ ಸಹಾಯಮಾಡಬೇಕೋ ಅಷ್ಟು ಮಾಡುತ್ತಿಲ್ಲ. ಅನೇಕ ಕಡೆಗಳಲ್ಲಿ ಕೆರೆಗಳಿಗೆ ಇರ್ರಿಗೇಷನ್ ಕಮಿಟಿಗಳೆಂದು ಮಾಡಿದ್ದಾರೆ. ರೈತರೆಲ್ಲರೂ ಸೇರಿ ಸಿಕ್ಕಿದ ನೀರಿನಿಂದ ಯಾವ ರೀತಿಯಲ್ಲಿ ಬೆಳೆ ಮಾಡಬೇಕು ಎಂಬುದನ್ನು ನಿರ್ಧಾರಮಾಡಬೇಕು. ಹಾಗೆ ಮಾಡಲು ಆಗದಿದ್ದರೆ ಅದಕ್ಕೆ ಸಂಬಂಧಪಟ್ಟ ಡೆಪ್ಯುಟಿ ಕಮಿಷನರ್ ಅಧ್ಯಕ್ಷರಾಗಿದ್ದುಕೊಂಡು ಗಮನ ಕೊಡದಿದ್ದರೆ ನಮಗೇನೋ ಅಪರೂಪವಾಗಿ ಸಿಕ್ಕತಕ್ಕಂಥ ನೀರೂ ಕೂಡ ಪೋಲಾಗುತ್ತದೆ. ಆದ್ದರಿಂದ ಇಂತಹ ಕಷ್ಟವನ್ನು ನಿವಾರಣೆ ಮಾಡಿದಿದ್ದರೆ ಬಹಳ ತೊಂದರೆಯಾಗುತ್ತದೆ. ಹಾಗೆಯೇ ಕೆರೆಗಳಿಗೆ ಹೂಳು ಬಂದು ತುಂಬುವುದನ್ನೂ ಸಹ ನಿವಾರಣೆ ಮಾಡಬೇಕು. ಈ ಕೆಲಸವೂ ಸಹ ಬಹಳ ಮುಖ್ಯವಾದುದು. ಏಕೆಂದರೆ ನಮ್ಮ ರೈತರೆಲ್ಲಾ ಮಳೆಯ ಅಭಾವದಿಂದ ಒದ್ದಾಡುತ್ತಿದ್ದಾರೆ. ಈ ಒಂದು ಅನಾನುಕೂಲತೆ ಬಹಳಮಟ್ಟಿಗೆ ನಿವಾರಣೆಯಾಗಬಹುದೆಂಬುದಾಗಿ ನಾನು ನಂಬುತ್ತೇನೆ. ಇನ್ನು ಬಾವಿಗಳನ್ನು ತೆಗೆಯುವ ಕೆಲಸ ಅನೇಕ ಕಡೆಗಳಲ್ಲಿ ತ್ವರಿತವಾಗಿ ನಡೆಯುತ್ತಿಲ್ಲ. ಆದರಿಂದಲೇ ಅನೇಕ ಕಡೆಗಳಲ್ಲಿ ಜನರು ಮತ್ತು ಖಾಸಗಿಯವರು ಮುತುವರ್ಜಿ ವಹಿಸಿ ಬಾವಿಗಳನ್ನು ತೆಗೆಸುತ್ತಿದ್ದಾರೆ. ಸರ್ಕಾರದವರು 2,500 ರೂಪಾಯಿಗಳ ಸಾಲ ಹಾಗೂ 500 ರೂಪಾಯಿಗಳ ಸಬ್ಸಿಡಿಯನ್ನು ರೈತರಿಗೆ ಕೊಡುತ್ತಾರೆ. ಈ ರೀತಿಯಾಗಿ ಕೊಡುವುದಕ್ಕೆ ಬದಲಾಗಿ 5 ಸಾವಿರ ರೂಪಾಯಿಗಳನ್ನು ಕೊಟ್ಟರೆ ಸಾಕು. ಬಾವಿಯನ್ನು ತೆಗೆಯಬಹುದು. ಶ್ರೀಮಾನ್ ಸಿದ್ಧಯ್ಯನವರು ನಿನ್ನೆ ಪ್ರಸ್ತಾಪಮಾಡುತ್ತಾ ಒಂದು ಮಾತನ್ನು ಅಪ್ಪಣೆ ಕೊಡಿಸಿದರು. ನನಗನ್ನಿಸುತ್ತದೆ, ಎಲ್ಲಾ ಕಡೆಯೂ ಬಾವಿ ತೆಗೆಸಲಿಕ್ಕೆ 5 ಸಾವಿರ ರೂಪಾಯಿಗಳು ಬೇಕಿಲ್ಲ. ಕೆಲವು ಕಡೆಗಳಲ್ಲಿ ಕಮ್ಮಿಯಲ್ಲಿಯೂ ಆಗಬಹುದು.

Mr. SPEAKER.—If he gets into the details of small facts there will be no end for this. I have got a large list of members who want to participate and ten minutes are allotted to each. Hon'ble Members may kindly sympathise with me and try to help me. 10 minutes time of Sri T. Madaiah Gowda is over.

ಶ್ರೀ ಟಿ. ಮಾದಯ್ಯ ಗೌಡ.—ಇನ್ನು ಬಾವಿ ತೆಗೆಸಲಿಕ್ಕೆ 2,500 ರೂಪಾಯಿಗಳ ಸಾಲ ಮತ್ತು 500 ರೂಪಾಯಿಗಳ ಸಬ್ಸಿಡಿ ಕೊಡುವುದಕ್ಕೆ ಬದಲಾಗಿ ಸರ್ಕಾರದವರು ಯಾವ್ಯಾವ ಕಡೆ ಎಷ್ಟೆಷ್ಟು ಹಣ ಬೇಕಾಗುವುದು ಎಂಬುದನ್ನು ತಿಳಿದು ಅದರಲ್ಲಿ ಶೇಕಡ 20 ಅಥವಾ 25ರಷ್ಟು ಸಬ್ಸಿಡಿ ಕೊಡುವುದು ಯೋಗ್ಯವೆಂದು ನಾನು ಸಲಹೆಮಾಡುತ್ತೇನೆ. ನಾನು ಕೆರೆಗಳ ವಿಚಾರವನ್ನು ಹೇಳುವಾಗ ಒಂದು ಮಾತನ್ನು ಮರೆತೆ. ತೂಬುಗಳಿಗೆ ಹಾಗೂ ಕೋಡಿಗಳಿಗೆ ಅಥವಾ ನಾದುರಸ್ತು ಕೆರೆಗಳಿಗೆ ಕೇವಲ 4-5 ಸಾವಿರ ರೂಪಾಯಿಗಳನ್ನು ಖರ್ಚುಮಾಡಿದರೆ ಕೆರೆ ಚೆನ್ನಾಗಿ ದುರಸ್ತಾಗಿ ರೈತರಿಗೆ ಉತ್ತಮ ಸೌಕರ್ಯ ಒದಗುತ್ತದೆ. ಅನೇಕ ಕಡೆಗಳಲ್ಲಿ ವರ್ಷಾನುಗಟ್ಟಲೆ ಒಂದು ತೂಬು ಆಗಲೀ ಅಥವಾ ಒಂದು ಕೋಡಿಯಾಗಲೀ ರಿಪೇರಿಯಾಗುವುದಿಲ್ಲ. ಇಂಥಾದ್ದಕ್ಕೆ ಸರ್ಕಾರದವರು ಬಹಳ ಹೆಚ್ಚಿನ ಗಮನವನ್ನು ಕೊಡುವುದು ಅಗತ್ಯವೆಂದು ನಾನು ಹೇಳುತ್ತೇನೆ.

Mr. SPEAKER.—If the member has got better points, he could have touched on all those points earlier. The points that contribute for the stepping up of food production must be brought, otherwise this is an endless subject.

ಶ್ರೀ ಟಿ. ಮಾದಯ್ಯ ಗೌಡ.—ಇನ್ನು ಹಸುರೆಲೆ ಗೊಬ್ಬರದ ಸಾರವನ್ನು ಮಾನ್ಯ ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ತಿಳಿದುಕೊಂಡಿದ್ದಾರೆ. ಇದು ಈಗ ಸಿಗುತ್ತಾ ಇಲ್ಲ. ಅದನ್ನು ಕಾಡುಗಳಲ್ಲಿ ವಿಶೇಷವಾಗಿ ಬೆಳೆಯುತ್ತಾರೆ. ಹಿಂದೆ ರೈತರಿಗೆ ಫ್ರೀಸ್ ಕೊಟ್ಟು ಇದನ್ನು ನೋಡಿ

(ಶ್ರೀ ಟಿ. ಮಾದಯ್ಯಗೌಡ)

ಕೊಳ್ಳುವಂತೆ ವ್ಯವಸ್ಥೆ ಮಾಡುತ್ತಿದ್ದರು. ಆದರೆ ಈಗ ಯಾವ ಕಾಡಿನಲ್ಲಿಯೂ ಹಸುರೆಲೆ ಗೊಬ್ಬರವನ್ನು ಬೆಳೆಯುತ್ತಾ ಇಲ್ಲ. ಅರಣ್ಯ ಇಲಾಖೆಯವರು ಇದನ್ನು ಬೆಳೆದರೆ ಹಸುರೆಲೆ ಗೊಬ್ಬರದ ಸೌಕರ್ಯ ರೈತರಿಗೆ ಯಥೇಚ್ಛವಾಗಿ ಒದಗುತ್ತದೆಂದು ನಾನು ಸೂಚಿಸಬಯಸುತ್ತೇನೆ. ನಮ್ಮ ರೈತರಿಗೆ ಬೇಕಾದ ಸಲಕರಣೆಗಳನ್ನು ಅಂದರೆ ಸಣ್ಣ ಟ್ರಾಕ್ಟರುಗಳು, ನೇಗಿಲು ಮುಂತಾದ ವ್ಯವಸಾಯೋಪಕರಣಗಳು ಈಗ ಸಾಕಷ್ಟು ದೊರೆಯುವುದಿಲ್ಲ. ಅವು ಸೊಸೈಟಿಗಳ ಮುಖಾಂತರ ಸುಲಭ ರೀತಿಯಲ್ಲಿ ದೊರೆಯುವಂತೆ ಸರ್ಕಾರದವರು ಸೂಕ್ತ ಏರ್ಪಾಡು ಮಾಡಬೇಕು. ಬೆಳೆಯನ್ನು ನಾಶ ಮಾಡತಕ್ಕ ಕೋತಿ, ಹೆಗ್ಗಣ ಮತ್ತು ಪೋಲಿ ದನಗಳ ವಿಚಾರದಲ್ಲಿ ತಕ್ಕ ಏರ್ಪಾಡನ್ನು ಸರ್ಕಾರದವರು ಮಾಡಬೇಕೆಂದು ನಾನು ಸಲಹೆಮಾಡುತ್ತೇನೆ.

Mr. SPEAKER.—If the member has got new points worth to be mentioned, he can mention.

ಶ್ರೀ ಟಿ. ಮಾದಯ್ಯ ಗೌಡ.—ಇನ್ನು ದನಗಳಿಗೆ ಆಹಾರವನ್ನು ಒದಗಿಸುವುದು ಬಹು ಮುಖ್ಯ. ಉಳುವುದಕ್ಕೆ ಮಳೆ ಇಲ್ಲದ ಅಭಾವ ಪರಿಸ್ಥಿತಿ ಬೇರೆ. ಸಾವಿರಾರು ದನಗಳು ಮೇವು ಇಲ್ಲದೆ ಇವೆ. ಇಂತಹ ತೊಂದರೆಗಳನ್ನು ತಪ್ಪಿಸಲು ತಕ್ಕ ಏರ್ಪಾಡನ್ನು ಸರ್ಕಾರದವರು ಕ್ಷಿಪ್ರದಲ್ಲಿ ಮಾಡದೇ ಇದ್ದರೆ ಇರತಕ್ಕ ದನಗಳು ಕ್ಷೀಣವಾಗಿ ಮುಂದಿನ ವರ್ಷ ಉಳುವುದಕ್ಕೆ ತೊಂದರೆಯಾಗುತ್ತದೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ಈ ಮಾನ್ಯ ಸಭೆ ಒಂದು ಬಹು ಮುಖ್ಯವಾದ ಪ್ರಸ್ತಾವದ ಮೇಲೆ ಚರ್ಚೆ ಮಾಡುತ್ತಿದೆ. ಇಂಥ ಚರ್ಚೆ ಈ ಸಭೆಯಲ್ಲಿ ಚರ್ಚೆಯಾಗುತ್ತಿರುವುದು ಇದು ಮೊದಲನೆಯ ಸಲ ಅಲ್ಲ. ಈ ದೇಶದಲ್ಲಿ ಪ್ರತಿ ವರ್ಷವೂ ಅತಿವೃಷ್ಟಿ ಅನಾವೃಷ್ಟಿ ಇಂತಹ ಪ್ರಕೃತಿಯ ಪ್ರಕೋಪಗಳಿಗೆ ತುತ್ತಾಗಿ ಕಷ್ಟ ನಷ್ಟಗಳನ್ನು, ಅಭಾವ ಪರಿಸ್ಥಿತಿಯನ್ನೂ ಮೇಲಿಂದ ಮೇಲೆ ನಾವು ಎದುರಿಸುತ್ತಾ ಬಂದಿದ್ದೇವೆ. ಆದರೆ ದುರದೃಷ್ಟವಶಾತ್ ನಮ್ಮ ಸರ್ಕಾರದವರು ಈ ಪರಿಸ್ಥಿತಿಯನ್ನು ತಡೆಗಟ್ಟುವುದಕ್ಕೆ, ಪರಿಹರಿಸುವುದಕ್ಕೆ ಎಷ್ಟರಮಟ್ಟಿನ ಪ್ರಯತ್ನಗಳನ್ನು ಮಾಡಬೇಕಾಗಿತ್ತೋ ಅಷ್ಟರಮಟ್ಟಿನ ಪ್ರಯತ್ನಗಳನ್ನು ಮಾಡಿಲ್ಲ. ಮಾಡಿದಂತಹ ಪ್ರಯತ್ನಗಳೂ ಕೂಡ ಬಹಳ ಸಲ ಅನೇಕ ಕಾರಣಗಳಿಂದಾಗಿ ಸಫಲವಾಗಿಲ್ಲ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಬಹಳ ವಿಷಾದದಿಂದ ಹೇಳಬೇಕಾಗಿದೆ. ಮೂರು ಪಂಚವಾರ್ಷಿಕ ಯೋಜನೆಗಳನ್ನು ರಾಜ್ಯ ಸರ್ಕಾರ ಕಾರ್ಯಗತ ಮಾಡಿದ್ದಾರೆ. ಈ ವರ್ಷ ಮೂರನೆಯ ಪಂಚವಾರ್ಷಿಕ ಯೋಜನೆಯ ಕೊನೆಯ ವರ್ಷದಲ್ಲಿ ನಾವು ಇದ್ದೇವೆ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಕರಡು ಪ್ರತಿ ಈಗಾಗಲೇ ಸಿದ್ಧವಾಗಿದೆ. ಕೃಷಿಯೇ ಪ್ರಧಾನವಾದ ಈ ದೇಶದಲ್ಲಿ ನಾವು ಮುಖ್ಯವಾಗಿ ಮಳೆಯ ನೀರಿನ ಆಶ್ರಯವನ್ನೇ ಹೊಂದಿ 100ಕ್ಕೆ 90 ರಷ್ಟು ಜಮೀನನ್ನು ಸಾಗುವಳಿ ಮಾಡಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಕಳೆದ ಅನೇಕ ವರ್ಷಗಳಿಂದಲೂ ನೀರಾವರಿಗಾಗಿ ಮಾಡಿರತಕ್ಕಂಥ ಪ್ರಯತ್ನಗಳಿಂದ ಸುಮಾರು 22 ಲಕ್ಷ ಎಕರೆಗಳಷ್ಟು ಮಾತ್ರ ನೀರಾವರಿ ಸೌಕರ್ಯಗಳನ್ನು ಕಲ್ಪಿಸುವುದಕ್ಕೆ ಸಾಧ್ಯವಾಗಿದೆ. ಇತ್ತೀಚಿನ ವರ್ಷಗಳಲ್ಲಿ ನೀರಾವರಿಯಲ್ಲಿ ಪ್ರಗತಿ ಬಹಳ ಕುಂಠಿತವಾಗಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕೆಂದು ಇಷ್ಟಪಡುತ್ತೇನೆ. ತುಂಗಭದ್ರಾ ಪ್ರಾಜೆಕ್ಟನ್ನು ಕಟ್ಟಿ ಅನೇಕ ವರ್ಷಗಳಾದುವು. ಅಲ್ಲಿ ಐದು ಲಕ್ಷ ಎಕರೆಗೆ ನೀರನ್ನು ಉಣಿಸಬೇಕಾಗಿತ್ತು. ಅಲ್ಲಿ ಡ್ರೈಕಂಪೆಟ್ ಎನ್ನುವ ವ್ಯವಸ್ಥೆಯನ್ನು ಮಾಡಿದರೂ ಕೂಡ ಇವೊತ್ತಿಗೂ ಅಲ್ಲಿ ಎರಡು ಲಕ್ಷ ಎಕರೆಗಿಂತ ಹೆಚ್ಚು ಎಕರೆಗೆ ನೀರನ್ನು ಉಣಿಸುವುದಕ್ಕೆ ಸಾಧ್ಯವಾಗಿಲ್ಲ. ಮೂರು ಲಕ್ಷ ಎಕರೆಗೆ ಆಗುವಷ್ಟು ನೀರನ್ನು ನಮ್ಮ ಸರ್ಕಾರದವರು ಆಂಧ್ರ ಪ್ರದೇಶಕ್ಕೆ ಬಿಟ್ಟುಕೊಟ್ಟಿದ್ದಾರೆ. ಇದು ಬಹಳ ವಿಷಾದಕರವಾದ ಸಂಗತಿ. ಜೊತೆಗೆ ನಮ್ಮ ರಾಜ್ಯ ಬಹಳ ಹಿಂದಿನಿಂದ ವಿದ್ಯುಚ್ಛಕ್ತಿಯಲ್ಲಿ ಪ್ರಗತಿಯನ್ನು ಸಾಧಿಸಿದಂತಹ ರಾಜ್ಯ. ಇವೊತ್ತು ನಾವು ಉತ್ಪಾದನೆ ಮಾಡತಕ್ಕ ವಿದ್ಯುಚ್ಛಕ್ತಿಯನ್ನು ಕೂಡ ನಾವು ಬಳಸತಕ್ಕ ವ್ಯವಸ್ಥೆಯನ್ನು ಹೊಂದಿಲ್ಲ. ಆದ್ದರಿಂದ ಇವೊತ್ತು ನಮ್ಮಲ್ಲಿ ಉತ್ಪಾದನೆಯಾಗತಕ್ಕ ವಿದ್ಯುಚ್ಛಕ್ತಿಯನ್ನು ಆಂಧ್ರ, ಕೇರಳ ಮತ್ತು ಮದ್ರಾಸು ಪ್ರಾಂತಗಳವರಿಗೆ ಕೊಡುವಂತಹ ಒತ್ತಾಯ ನಮ್ಮ ಮೇಲೆ ಬಂದಿದೆ. ನೆರೆ ರಾಜ್ಯಗಳಿಗೆ ನಾವು ವಿದ್ಯುಚ್ಛಕ್ತಿಯನ್ನು ಕೊಡಬೇಕಾದಂತಹ ಸಂದರ್ಭ ಬಂದಿದೆ. ಇದೂ ಕೂಡ ವಿಷಾದಕರವಾದ ಸಂಗತಿ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನೀರಾವರಿಗೆ ಸಂಬಂಧಪಟ್ಟ ಹಾಗೆ ಮಾನ್ಯ ಉಪಮಂತ್ರಿಗಳು ತಿಳಿಸಿದಂತೆ ಈ ಯೋಜನೆಯನ್ನು ಇನ್‌ವೆಸ್ಟಿಗೇಷನ್ ಮಾಡತಕ್ಕವರು ಸುಮಾರು 1440 ಯೋಜನೆಗಳನ್ನು ಸಿದ್ಧಪಡಿಸಿದ್ದಾರೆ,

ಅವುಗಳನ್ನು ಕಾರ್ಯಗತ ಮಾಡುವುದಕ್ಕೆ 17 ಕೋಟಿ ರೂಪಾಯಿಗಳು ಬೇಕಾಗುತ್ತದೆ ಎಂದು ಹೇಳಿದರು. 1,440 ಯೋಜನೆಗಳು ಏನು ಸಿದ್ಧವಾಗಿದೆಯೋ ಅದಕ್ಕೆ ಸಂಬಂಧಪಟ್ಟ ಎಂಜಿನಿಯರುಗಳು ಇನ್ನೂ ರುಜುಹಾಕಿಲ್ಲ, ಅವು ಇನ್ನೂ ಮಂಜೂರಾತಿಯನ್ನು ಕಂಡಿಲ್ಲ.

ಇನ್ನು ಪಂಪು ಸೆಟ್ಟುಗಳನ್ನು ಒದಗಿಸತಕ್ಕ ವಿಚಾರದಲ್ಲಿ ಹೇಳುವುದಾದರೆ, ಇವೊತ್ತು ತಾವು ಅಪ್ಪಣೆ ಕೊಡಿಸಿದಿರಿ ಪಂಪ್ಪು ಸೆಟ್ಟುಗಳ ವಿಷಯದಲ್ಲಿ ನಮ್ಮ ರಾಜ್ಯದಲ್ಲಿ ಬಹಳ ಪ್ರಗತಿ ಸಾಧನೆಯಾಗಿದೆ ಎಂದು. ಅವಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ ಮಾನ್ಯ ಸದಸ್ಯರೊಬ್ಬರು ಉತ್ತರ ಕೊಟ್ಟರು. ಪಕ್ಕದ ರಾಜ್ಯಗಳೊಡನೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ಪಂಪುಸೆಟ್ಟುಗಳ ಬಳಕೆಯ ಸಂಖ್ಯೆ ತೀರಾ ಕಡಿಮೆ ಎಂದು. ಅದಕ್ಕೆ ತಾವು ಏನೂ ಹೇಳಲಿಲ್ಲ. ಈಗ ಉದಾಹರಣೆಗೆ ನನ್ನ ತಾಲ್ಲೂಕಿನ ವಿಷಯವನ್ನೇ ಹೇಳುವುದಾದರೆ, ನನ್ನ ತಾಲ್ಲೂಕಿನಲ್ಲಿ ರೈತರು ಪಂಪು ಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಕೇಳಿ ಹಾಕಿದ ಅರ್ಜಿಗಳು ಎರಡು ವರ್ಷ, ಮೂರು ವರ್ಷ ನಾಲ್ಕು ವರ್ಷಗಳಾದರೂ ಇತ್ಯರ್ಥವಾಗಿಲ್ಲ. ಇದಕ್ಕಿಂತ ಒಂದು ಕೆಟ್ಟ ಅವಮಾನಕರವಾದ ಸಂಗತಿ ಮತ್ತೊಂದಿಲ್ಲ ಎಂದು ನಾನು ಭಾವಿಸುತ್ತೇನೆ. ಸ್ವಾಮಿ, ಒಂದೇ ಮಾತಿನಲ್ಲಿ ಹೇಳುವುದಾದರೆ ರೈತರಿಗೂ ಈ ಮಾನ್ಯ ಸಭೆಗೂ ಮಧ್ಯ ಒಂದು ಸರ್ಕಾರದ ಆಡಳಿತ ಯಂತ್ರ ಇದೆ. ಯಾವ ಯೋಜನೆ ಮಾಡಿದರೂ ಕೂಡ ರೈತನಿಗೆ ಸೌಲಭ್ಯವನ್ನು ಒದಗಿಸಿಕೊಡಬೇಕಾದರೆ ಈ ಸರ್ಕಾರಿ ಆಡಳಿತ ಯಂತ್ರದ ಮೂಲಕವೇ ಒದಗಿಸಿಕೊಡಬೇಕು. ಹಿಂದೆ ದೆಹಲಿಯಲ್ಲಿ ಆಡಳಿತವನ್ನು ಮಾಡತಕ್ಕವರ ದೃಷ್ಟಿ ಬ್ರಿಟನ್ನಿನ ಕಡೆ ಇತ್ತು. ಸಂಸ್ಥಾನದಲ್ಲಿ ಆಡಳಿತ ಮಾಡತಕ್ಕವರ ದೃಷ್ಟಿ ದೆಹಲಿಯ ಕಡೆ ಇತ್ತು. ಜಿಲ್ಲೆ ತಾಲ್ಲೂಕುಗಳಲ್ಲಿ ಆಡಳಿತ ಮಾಡತಕ್ಕವರ ದೃಷ್ಟಿ ಬೆಂಗಳೂರಿನ ಕಡೆ ಇತ್ತು, ಆದರೆ ಈ ಹದಿನೆಂಟು ವರ್ಷಗಳಲ್ಲಿ ಈ ಯಂತ್ರದ ದೃಷ್ಟಿ ಗ್ರಾಮಾಂತರಗಳ ಕಡೆ ಎಷ್ಟರ ಮಟ್ಟಿಗೆ ಹರಿದಿದೆ ಎಂಬುದನ್ನು ವಿಚಾರ ಮಾಡಿ ನೋಡಬೇಕು. ಸರ್ಕಾರದ ದೃಷ್ಟಿ ಗ್ರಾಮಾಭಿಮುಖವಾಗಬೇಕು ; ಜನಾಭಿಮುಖರಾಗಬೇಕು. ಈಗ ಸರ್ಕಾರದವರು ಎಷ್ಟರ ಮಟ್ಟಿಗೆ ರೈತರಿಗೆ ಸವಲತ್ತುಗಳನ್ನು ಕೊಡುತ್ತಿದ್ದಾರೆ ಎನ್ನುವುದನ್ನು ಈ ಮಾನ್ಯ ಸಭೆಯಲ್ಲಿ ಮಾನ್ಯ ಸದಸ್ಯರನೇಕರು ನಿವೇದನೆ ಮಾಡಿ ಕೊಂಡಿದ್ದಾರೆ. ಅದೆಲ್ಲವನ್ನೂ ಸರ್ಕಾರದವರು ಗ್ರಹಿಸಿ ಸರ್ಕಾರದ ಆಡಳಿತ ಯಂತ್ರ ಹೆಚ್ಚು ಆಸಕ್ತಿಯಿಂದ ಕೆಲಸ ಮಾಡುವಂತೆ ತಕ್ಕ ಕ್ರಮವನ್ನು ತೆಗೆದುಕೊಳ್ಳುವುದು ಅಗತ್ಯ ಎಂದು ನಾನು ಹೇಳುತ್ತೇನೆ.

ಇಂದು ನಮ್ಮ ರಾಜ್ಯದಲ್ಲಿ ಅಭಾವ ಪರಿಸ್ಥಿತಿ ತೀವ್ರ ಸ್ವರೂಪ ತಾಳುತ್ತಿದೆ. ಈ ವರ್ಷ ಮುಂಗಾರು ಮಳೆ ಚೆನ್ನಾಗಿ ಬಂದಿಲ್ಲ. ಹಿಂದೆ ಒಮ್ಮೆ ನಮ್ಮ ದೇಶದಲ್ಲಿ ಧಾತು, ಈಶ್ವರನಾಮ ಸಂವತ್ಸರದಲ್ಲಿ ದೊಡ್ಡ ಕ್ಷಾಮ ಬಂದಿತ್ತು. ಆಗ ಸುಮಾರು ಹತ್ತು ಲಕ್ಷ ಜನರು ಈ ಸಣ್ಣ ರಾಜ್ಯದಲ್ಲಿ ಮೃತರಾದರು ಅಥವಾ ರಾಜ್ಯ ಬಿಟ್ಟು ದೇಶಾಂತರ ಹೋದರು ಎಂದು ಕೇಳುತ್ತೇವೆ. ಇವೊತ್ತು ನಮ್ಮ ದೇಶದಲ್ಲಿ ನಾವು ಹೆಚ್ಚು ಆಹಾರೋತ್ಪಾದನೆಯನ್ನು ಮಾಡಬೇಕಾದರೆ ತಾವು ಆಧುನಿಕವಾದ ಬೇಸಾಯದ ಕ್ರಮಗಳನ್ನು ಅನುಸರಿಸಬೇಕು. ನೀರಾವರಿ ಸೌಕರ್ಯವನ್ನು ಸಾಧ್ಯವಾದ ಮಟ್ಟಿಗೆ ಅಭಿವೃದ್ಧಿ ಪಡಿಸಬೇಕು. ನೀರು ಅತ್ಯಮೂಲ್ಯವಾದ ವಸ್ತು. ನಮ್ಮ ದೇಶದಲ್ಲಿ ದೊರೆಯುತಕ್ಕಂಥ ನೀರಿನ ಬಳಕೆಯನ್ನು ಚೆನ್ನಾಗಿ ಮಾಡಿಕೊಂಡರೆ, ನಮಗೆ ಬಹುಶಃ ಎಂದೂ ಅಭಾವ ಉಂಟಾಗುವುದಿಲ್ಲ ಎಂದು ನನಗೆ ಅನಿಸುತ್ತದೆ. ಎರಡನೆಯದಾಗಿ ಮಾನ್ಯ ಸದಸ್ಯರೊಬ್ಬರು ಹೇಳಿದ ಹಾಗೆ ಎಷ್ಟು ಹಣವನ್ನು ನಾವು ಭೂಮಿಯಲ್ಲಿ ತೊಡಗಿಸುವುದಕ್ಕೆ ಸಾಧ್ಯವೋ ಅಷ್ಟು ಹೆಚ್ಚು ಬೆಳೆಯನ್ನು ನಾವು ನಿರೀಕ್ಷೆ ಮಾಡುವುದಕ್ಕೆ ಸಾಧ್ಯ. ನಮಗೆ ಇರತಕ್ಕ ಎರಡು ಕೋಟಿ ಎಕರೆ ಜಮೀನಿನಲ್ಲಿ ನಮ್ಮ ಬೆಳೆಯನ್ನು ದ್ವಿಗುಣ ಮಾಡಬೇಕಾಗಿದ್ದರೆ ಕನಿಷ್ಠ 200 ಕೋಟಿ ರೂಪಾಯಿಗಳನ್ನಾದರೂ ತೊಡಗಿಸಬೇಕಾಗುತ್ತದೆ. ಅಷ್ಟೊಂದು ಹಣವನ್ನು ಎಲ್ಲಿಂದ ತರಬೇಕು ಎನ್ನುವ ಪ್ರಶ್ನೆ ಇದೆ. ಸರ್ಕಾರದವರು ಏಕ ಕಾಲದಲ್ಲಿ ಅದಕ್ಕೆ ಹಣವನ್ನು ಒದಗಿಸುದಕ್ಕೂ, ಅದಕ್ಕಾಗಿ ರೈತರ ಮೇಲೆ ನಾನಾ ತೆರಿಗೆ ಹೇರುವುದಕ್ಕೂ ಹೋಗುತ್ತಾರೆ. ಹಾಗೆ ಮಾಡುವುದರಿಂದ ರೈತನ ಹಿತ ಸಾಧಿತವಾಗುವುದಿಲ್ಲ. ಹೀಗಿದ್ದಲ್ಲಿ ರೈತ ಹೇಗೆ ಹೆಚ್ಚು ಬೆಳೆಯನ್ನು ತೆಗೆಯಬೇಕು ? ಇದಕ್ಕೆ ಏನು ಮಾಡಬೇಕೆಂದು ಹೇಳುತ್ತಿದ್ದಾರೆಂದರೆ, ನೀರಾವರಿ ತೆರಿಗೆಯನ್ನು ಹಾಕುವುದು, ಭೂಕಂದಾಯವನ್ನು ಎರಡರಷ್ಟು ಮಾಡುವುದು ಮತ್ತು ಇತರ ತೆರಿಗೆಗಳನ್ನು ರೈತರ ಮೇಲೆ ಹೊರಿಸುವುದಕ್ಕೆ ಹೋಗುತ್ತಿದ್ದಾರೆ. ಅವರು ಎಷ್ಟರ ಮಟ್ಟಿಗೆ ಚೇತರಿಸಿಕೊಂಡು ಹಣವನ್ನು ಕೊಡಬಲ್ಲರು ಎಂಬುದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಮಾನ್ಯ ಮುಖ್ಯ ಮಂತ್ರಿಗಳು ನುಗು ಜಲಾಶಯಕ್ಕೆ ಈಚೆಗೆ ಭೇಟಿ ಕೊಟ್ಟಿದ್ದರಂತೆ. ಅಲ್ಲಿಂದ ನನಗೆ ಒಂದು ಪತ್ರ ಬಂದಿದೆ: ಮಾನ್ಯ ಮುಖ್ಯ ಮಂತ್ರಿಗಳು ಬಂದಿದ್ದರು, ಕೆಲವು ಭರವಸೆಗಳನ್ನು ಕೊಟ್ಟಿದ್ದರು, ಆ ಭರವಸೆಗಳಿಂದ ಏನೂ ಪ್ರಯೋಜನವಾಗಿಲ್ಲ-ಎಂದು ಬರೆದಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಿದರು : ಸುಮಾರು 20 ಸಾವಿರ ಎಕರೆಯಷ್ಟು ನೀರಾವರಿ ಪ್ರದೇಶ ಇವತ್ತು ಎಲ್ಲಾ ಉರಿದು ನಿಂತಿದೆ ಅಂತ.

ಶ್ರೀ ಎಸ್. ನಿಜಲಿಂಗಪ್ಪ.—20 ಅಲ್ಲ, 15.

ಶ್ರೀ ಎಸ್. ಗೋಪಾಲ ಗೌಡ.—ಈ ಜಲಾಶಯದಿಂದ 20 ಸಾವಿರ ಎಕರೆಯಷ್ಟು ನೀರಾವರಿ ಆಗುವುದು ಎಂದು ಅಂದಾಜು ಮಾಡಲಾಗಿತ್ತು. ಆ ಸ್ಕೀಮನ್ನು ಆರಿಸುವುದರಲ್ಲಿ ಏನೋ ದೋಷ ದೋಷವಿದೆ ಎಂದೂ ಅದನ್ನು ತಜ್ಞರಿಂದ ಪರಿಶೀಲನೆ ಮಾಡಿಸಬೇಕು ಅಂತ ಕೂಡ ಅವರು ಕೇಳಿದ್ದಾರೆ. ಏಳು ವರ್ಷಗಳಿಂದ 4 ಬೆಳೆಗಳನ್ನು ಮಾತ್ರ ಆ ಜಲಾಶಯದ ಕೆಳಗಿರತಕ್ಕಂಥ ಅಚ್ಚುಕಟ್ಟಿನ ಜಮೀನಿನಿಂದ ಪಡೆದುಕೊಳ್ಳಲು ಸಾಧ್ಯವಾಗಿದೆ ಎಂದೂ, ರೈತರಿಗೆ ಬಹಳ ನಷ್ಟವಾಗಿದೆ ಎಂದೂ ತಿಳಿಸಿದ್ದಾರೆ. ಇರ್ರಿಗೇಶನ್ ಸೆಸ್ ಹಾಕುವುದನ್ನು ಮನ್ನಾ ಮಾಡಬೇಕೆಂದೂ ಕೇಳಿದ್ದಾರೆ. ಇನ್ನೂ ಬೇರೆ ಕಡೆಗಳಿಂದ ನನಗೆ ಪತ್ರಗಳು ಬಂದಿವೆ, ಪರಿಹಾರ ದೊರಕಿಸಿ ಕೊಡಿ ಎಂದು.

ಮಾನ್ಯ ಅಧ್ಯಕ್ಷರು ಕಾಲವನ್ನು ಮಿತಿ ಮಾಡಿದ್ದಾರೆ. ಜೊತೆಗೆ ಎತ್ತುವಳಿ ನೀತಿಯನ್ನೂ ಸ್ವಲ್ಪ ಸೂಕ್ಷ್ಮವಾಗಿ ಪ್ರಸ್ತಾಪ ಮಾಡುತ್ತೇನೆ. ಸರಕಾರದವರು ಸಪ್ಪೋರ್ಟ್ ಪ್ರೈಸ್ ಮತ್ತು ಪರ್ಚೇಸ್ ಪ್ರೈಸ್ ಎಂದು ಎರಡು ವಿಧವಾಗಿ ಮಾಡಿದ್ದಾರೆಂದು ಮಾನ್ಯ ಸಚಿವರು ನಿನ್ನೆ ತಿಳಿಸಿದರು. ನೀವು ಜೂನ್ ತಿಂಗಳಿನಲ್ಲಿ ಒಂದು ಆಜ್ಞೆಯನ್ನು ಹೊರಡಿಸಿದಿರಿ. ಈಗ ಪುನಃ ಸೆಪ್ಟೆಂಬರ್ 21ರಂದು ಮತ್ತೊಂದು ಆಜ್ಞೆಯನ್ನು ಹೊರಡಿಸಿದ್ದೀರಿ—ಆ ಆಜ್ಞೆಯನ್ನು ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್ ಅಧೀನದಲ್ಲಿ ಹೊರಡಿಸಿದ್ದಾರೆ ಎಂದು ವಿಷಾದದಿಂದ ಹೇಳಬೇಕಾಗಿದೆ. ಆಹಾರ ಧಾನ್ಯಗಳನ್ನು ಕೊಳ್ಳುವ, ಮಾರುವ ಮತ್ತು ಸ್ಟಾಕ್ ಇಡುವ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರಕಾರಗಳ ಮುಂದೆ ಒಂದು ನೀತಿ ಇಲ್ಲವೆ? ಇದನ್ನು ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್ ಪ್ರಕಾರ ಎಮರ್ಜನ್ಸಿಯಲ್ಲಿ ಮಾತ್ರ ಮಾಡತಕ್ಕಂಥವರು ನೀವೆ? ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಹೋದ ವರ್ಷ ನಿಮ್ಮ ನೀತಿ ಸ್ಪಷ್ಟವಿರಲಿಲ್ಲ. ಕೆಲವು ತಾಲ್ಲೂಕುಗಳಲ್ಲಿ ಜನರ ಸಹಕಾರದಿಂದ ಗೊತ್ತಾದ ದರದಲ್ಲಿ ಕೆಲವು ಸಾವಿರ ಕ್ವಿಂಟಾಲುಗಳನ್ನು ಸಂಗ್ರಹ ಮಾಡಿದ್ದಾರೆ. ಕೆಲವರು ಮಾಡಲಿಲ್ಲ. ಏತನ್ಮಧ್ಯೆ ಫುಡ್ ಕಾರ್ಪೊರೇಷನ್ ಎನ್ನತಕ್ಕಂಥ ಸಂಸ್ಥೆ ರಚನೆಯಾಗಿದೆ. ಇನ್ನೂ ಅವರ ಕಾರ್ಯಕ್ರಮಗಳು ಏನೇನು ಎಂಬುದು ಸ್ಪಷ್ಟವಾಗಿ ಗೊತ್ತಾಗಿಲ್ಲ. ಮೈಸೂರು ರಾಜ್ಯದಲ್ಲಿಯೂ ಅವರ ಕೆಲಸ ಪ್ರಾರಂಭ ವಾಗಿದೆ. ಸರ್ಕಾರದವರು ಈ ವರ್ಷ ಜೋಳ ಮತ್ತು ಅಕ್ಕಿಯನ್ನು ಎತ್ತುವಳಿ ಮಾಡಬೇಕೆಂದು ಹೊರಟಿದ್ದಾರೆ. ಸರ್ಕಾರ ಕೊಳ್ಳುವ ಧಾನ್ಯದ ಬೆಲೆ ಗೊತ್ತಾಗಿದೆ. ಈ ದರಗಳಿಗೆ ಸಪ್ಪೋರ್ಟಿಂಗ್ ಪ್ರೈಸ್ ಎಂದು ಹೇಳುತ್ತಾರೆ. ಒಂದು ಎಕರೆಗೆ ಎಕ್ಸೆಂಪ್ಷನ್ ಕೊಟ್ಟು, 2–5 5–10 ಎಕರೆ—10ರಿಂದ ಮೇಲೆ ಹೀಗೆ ಇದ್ದವರು ಒಂದು ಗೊತ್ತಾದ ಪ್ರಮಾಣದಲ್ಲಿ ಬತ್ತ ಜೋಳ ಕೊಡಬೇಕೆಂದು ಹೇಳಿದ್ದಾರೆ. ನಿಮಗೆ ಪೂರ್ತಿ ಜವಾಬ್ದಾರಿಯನ್ನು ಹೊತ್ತುಕೊಳ್ಳುವುದಕ್ಕೆ ಹಣವಿಲ್ಲ, ಸಿಬ್ಬಂದಿ ಇಲ್ಲ. ಹೇಗೋ ಹೋಣೆ ಹಾರಿಸಿಕೊಂಡು ಹೋಗುತ್ತಾ ಇದ್ದೀರಿ. ಸುಗ್ಗಿಯಲ್ಲಿ ಸರ್ಕಾರದ ದರದಂತೆ 45 ರೂಪಾಯಿಗೆ ಮಾರಾಟವಾಗುತ್ತಿದ್ದ ಭತ್ತ, ಇವತ್ತು 90 ರೂಪಾಯಿಗೆ ಮಾರಾಟವಾಗುತ್ತಾ ಇದೆ. ಈ ಸುಲಿಗೆಯನ್ನು ಯಾವ ರೀತಿಯಲ್ಲಿ ತಡೆಗಟ್ಟಿದ್ದಾರೆ ಅನ್ನುವುದನ್ನು ನಾನು ಕೇಳುತ್ತೇನೆ. ನನ್ನ ಸ್ನೇಹಿತರು ಒಬ್ಬರು ಬರೆದಿದ್ದಾರೆ: ಸರ್ಕಾರ ದೊಡ್ಡ ಬತ್ತ ಕ್ವಿಂಟಾಲಿಗೆ 60 ರೂಪಾಯಿ, ಸಣ್ಣ ಬತ್ತ 65 ರೂಪಾಯಿ ಗೊತ್ತುಮಾಡಬೇಕೆಂದು ಈಗಿನ ದರಗಳನ್ನು ಸೂಕ್ತವಾಗಿ ಮಾರ್ಪಾಟು ಮಾಡದೇ ಹೋದರೆ ಸರ್ಕಾರ ಯಾವರೀತಿ ರೈತರ ಹಿತರಕ್ಷಣೆ ಮಾಡುವುದು? ಓಪನ್ ಮಾರ್ಕೆಟ್ಟಿನಲ್ಲಿ ದೊಡ್ಡದೊಡ್ಡದಾಗಿ ಸಂಗ್ರಹ ಮಾಡತಕ್ಕಂಥವರು, 3 ತಿಂಗಳ ನಂತರ 100ಕ್ಕೆ 100 ಪರ್ಸೆಂಟ್ ಲಾಭ ಮಾಡಿಕೊಳ್ಳುತ್ತಾರೆ; ನೀವು ಏನೂ ಮಾಡುವುದಿಲ್ಲ. ಡಿಫೆನ್ಸ್ ರೂಲ್ಸ್ ಅಧೀನದಲ್ಲಿ ಏತಕ್ಕೆ ಒಂದು ಎತ್ತುವಳಿ ನೀತಿಯನ್ನು ಹೊರಡಿಸಬೇಕು? ಯಾರ ಹಿತರಕ್ಷಣೆ ಮಾಡಿದ್ದೀರಿ ಈ ಎತ್ತುವಳಿ ಆಜ್ಞೆಯನ್ನು ಹೊರಡಿಸಿದ್ದರಿಂದ ಎಂದು ನಾನು ಪ್ರಶ್ನೆ ಮಾಡುತ್ತೇನೆ. ನಿಮ್ಮ ಪರ್ಚೇಸ್ ಪ್ರೈಸ್ ಅನ್ನುವುದೂ ವಿಚಿತ್ರವಿದೆ. ಅಕ್ಕಿ ದರ ಮತ್ತು ಭತ್ತದ ದರಕ್ಕೆ ಸುಮಾರು ಕ್ವಿಂಟಾಲಿಗೆ 6–7 ರೂಪಾಯಿ ಉಳಿತಾಯವಾಗುವಂತೆ ಮಾಡಿದ್ದೀರಿ. 3 ಕ್ವಿಂಟಾಲ್ ಭತ್ತಕ್ಕೆ 2 ಕ್ವಿಂಟಾಲ್ ಅಕ್ಕಿಯಾದರೆ ಆರೂವರೆ ರೂಪಾಯಿ ಒಂದು ಕ್ವಿಂಟಾಲಿಗೆ ಬರೀ ದರದಲ್ಲಿ ಸಿಗುತ್ತದೆ. ಮಿಲ್ಲಿನವರಿಗೆ ಕ್ವಿಂಟಾಲ್ ಒಂದಕ್ಕೆ ಕನಿಷ್ಠ ಪಕ್ಷ 3 ಕಿಲೊ ಅಕ್ಕಿ ಉಳಿಯುತ್ತದೆ. ಇಷ್ಟು ಎಲ್ಲಾ ಲಾಭ ಅವರಿಗೆ ಇರುವುದರಿಂದ, ನನಗೆ ಬಹಳ ಆಶ್ಚರ್ಯವಾಗುತ್ತಿದೆ. ನಮ್ಮ ದೇಶದಲ್ಲಿ ಸರ್ಕಾರ ಇದೆಯೇ ಅಥವಾ ಸರಕಾರದ ಮುಂದೆ ಏನಾದರೂ ನೀತಿ ಇದೆಯೆ ಎಂದು ನನಗೆ ದಿಗ್ಭ್ರಾಂತಿಯಾಗುತ್ತಿದೆ. ನಮ್ಮ ರೇಡಿಯೋ ಮತ್ತು ಪತ್ರಿಕೆಗಳಲ್ಲಿ ಹೇಳುತ್ತಿದ್ದಾರೆ: 140 ರೂಪಾಯಿನಂತೆ ಕ್ವಿಂಟಾಲ್ ಅಕ್ಕಿ ಮಾರಾಟವಾಗುತ್ತಿದೆ ಎಂದು. ಮ್ಯಾಕ್ಸಿಮಮ್ ಸೀಲಿಂಗ್ ಪ್ರೈಸ್ ಫಿಕ್ಸ್ ಮಾಡಬೇಕು. ಸರ್ಕಾರ ದೇಶದಲ್ಲಿ ಇರುವುದಾದರೆ ತಾನು ಗೊತ್ತುಮಾಡಿರುವ 80 ರೂಪಾಯಿ ದರಕ್ಕಿಂತ ಯಾರೂ ಅಕ್ಕಿಯನ್ನು ಜಾಸ್ತಿ ದರದಲ್ಲಿ ಮಾರಕೂಡದು ಎಂದು ಮಾಡಬೇಕು. ನಮ್ಮಲ್ಲಿ ಇಂದು ಅಕ್ಕಿ 140 ರೂಪಾಯಿನಂತೆ ಕ್ವಿಂಟಾಲಿಗೆ ಮಾರಾಟವಾಗುತ್ತಿದೆ. ಇಷ್ಟು ದರವಿದ್ದರೆ, ಅಕ್ಕಿಯನ್ನು ತಿನ್ನತಕ್ಕಂಥವರು ಏನು ಮಾಡಬೇಕು? ತಾವಾದರೂ ಮುಖ್ಯ ಮಂತ್ರಿಗಳ ಸಮ್ಮೇಳನದಲ್ಲಿ 1 ಲಕ್ಷದ

ಮೇಲೆ ಜನಸಂಖ್ಯೆ ಇರತಕ್ಕಂಥ ಪಟ್ಟಣಗಳಲ್ಲಿ ಪಡಿತರ ವಿಧಾನವನ್ನು ಜಾರಿಗೆ ತರಬೇಕೆಂದು ತೀರ್ಮಾನ ಮಾಡಿದ್ದೀರಿ. ಆ ತೀರ್ಮಾನ ಎಲ್ಲಿ ಹೋಯಿತು? 15 ಲಕ್ಷ ಜನಸಂಖ್ಯೆ ಇರತಕ್ಕ ಬೆಂಗಳೂರಿನಲ್ಲಿ ಕೂಡಾ ಇವತ್ತು ಪಡಿತರ ವಿಧಾನವನ್ನು ತರಲಿಲ್ಲ. ನಿಮ್ಮ ಹೊಣೆಗಾರಿಕೆಯನ್ನು ಹಾರಿಸಿಕೊಳ್ಳುತ್ತಿದ್ದೀರಿ. ಇಂಥ ಜವಾಬ್ದಾರಿ ಹೀನವಾದ ನೀತಿಗಳನ್ನು ಸರಕಾರದವರು ಆಹಾರದ ವಿಷಯದಲ್ಲಿ ತಳೆಯುವುದಾದರೆ, ಈ ಪ್ರಕರಣದ ಮೇಲೆ ಬಹಳ ದೊಡ್ಡ ಪ್ರಮಾಣದಲ್ಲಿ ಜನ ಸರಕಾರದ ವಿರುದ್ಧ ಹೋಗುತ್ತಾರೆ ಎಂಬ ಮಾತನ್ನು ಬಹಳ ವಿಷಾದದಿಂದ ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಈ ವಿಚಾರದಲ್ಲಿ ಸರ್ಕಾರಕ್ಕೆ ಬಹಳ ಸ್ಪಷ್ಟವಾಗಿ ಮನವಿಮಾಡಿಕೊಳ್ಳುತ್ತೇನೆ. ನಾನು ಮೊನ್ನೆ ಒಂದು ಪಾತ್ರೆ ಅಂಗಡಿಗೆ ಹೋಗಿದ್ದೆ. ಆ ಅಂಗಡಿ ಯವರನ್ನು ಕೇಳಿದೆ: ಸಾಮಾನ್ಯವಾಗಿ ವ್ಯಾಪಾರ ಹೇಗಿದೆ ಎಂದು. ಅವನು ಯಾವ ವ್ಯಾಪಾರ ಅಂತ ಕೇಳಿದ: ಪಾತ್ರೆ ಕೊಳ್ಳುವ ವ್ಯಾಪಾರವೋ, ತಂದುಕೊಡುವ ವ್ಯಾಪಾರವೋ ಎಂದು. ಅಂದರೆ, ಅದರಿಂದ ತಿಳಿಯಬಹುದು—ಪಾತ್ರೆ ತೆಗೆದುಕೊಳ್ಳುವವರೇ ಇಲ್ಲ, ತಮ್ಮ ಮನೆಯಲ್ಲಿರುವ ಪಾತ್ರೆ ಪಡಗ ಮಾರಿ ಜನ ಅಕ್ಕಿ ರಾಗಿ ಜೋಳ ಕೊಂಡು ಜೀವಿಸುತ್ತಿದ್ದಾರೆ. ಸಾಮಾನ್ಯವಾಗಿ ಪಾತ್ರೆಯನ್ನು ಮಾರುವುದಕ್ಕೆ ತಂದುಕೊಡುತ್ತಾರೆ. ಇವತ್ತು ಕಡಿಮೆ ಬೆಳೆಯುತಕ್ಕ ರೈತರು, ಸಣ್ಣಪುಟ್ಟ ಸಂಬಳ ಪಡೆಯುತಕ್ಕಂಥವರು ಮೈಮೇಲೆ ಇರುವ ಬಟ್ಟೆಯನ್ನು ಅಡವಿಟ್ಟು ಜೋಳ, ಅಕ್ಕಿ, ರಾಗಿ, ಗೋಧಿಯನ್ನು ಹೊಂದುವ ಸ್ಥಿತಿ ಬಂದಿದೆ. ಇದನ್ನು ಸರ್ಕಾರ ವಿಚಾರ ಮಾಡಬೇಕು.

ನನಗೆ ಸಾಕಷ್ಟು ಸಮಯಾವಕಾಶವಿಲ್ಲ. ಆದ್ದರಿಂದ ಅವಸರದಲ್ಲಿ ಇನ್ನು ಒಂದೆರಡು ವಿಷಯ ಹೇಳುತ್ತೇನೆ. ಫುಡ್ ಕಾರ್ಪೊರೇಷನ್ನಿನವರು, ಮಾನ್ಯ ಅಧ್ಯಕ್ಷರು ಕ್ಷಮಿಸಬೇಕು—ವ್ಯಾಪಾರವನ್ನು ಮಾಡುತ್ತಾರೆ.

ಅಧ್ಯಕ್ಷರು.—ಅಧ್ಯಕ್ಷರು ವ್ಯಾಪಾರ ಮಾಡುತ್ತಾರೆಯೇ? ನಾನು ಇಲ್ಲಿ ಇಲ್ಲದೆ ಇರುವಾಗ ತಾವು ಸಾಮಾನ್ಯವಾಗಿ ಏನೇನೋ ಹೇಳುವುದುಂಟು. ತಾವು ಫುಡ್ ಕಾರ್ಪೊರೇಷನ್ನಿನವರು, ಕ್ಷಮಿಸ ಬೇಕು, ಅಧ್ಯಕ್ಷರು ಎಂದು ಹೇಳಿದಿರಿ. ವ್ಯಾಪಾರ ಮಾಡುತ್ತಾರೆ ಎಂದು ಹೇಳಿದಿರಿ. ಹಾಗಾದರೆ ಅಧ್ಯಕ್ಷರು ವ್ಯಾಪಾರ ಮಾಡುತ್ತಾರೆ ಎಂಬ ಭಾವನೆ ಉಂಟುಮಾಡುವುದಕ್ಕೆ ಹೊರಟಿದ್ದೀರಿ. ನಾನು ಇಲ್ಲಿ ಕುಳಿತಿರುವ ಸಮಯದಲ್ಲಿಯೇ ಹೀಗೆ ಹೇಳುತ್ತಿರುವಾಗ, ನಾನು ಇಲ್ಲಿ ಇಲ್ಲದ ಸಮಯದಲ್ಲಿ ಏನು ಹೇಳುತ್ತೀರೋ ನನಗೆ ಗೊತ್ತಿಲ್ಲ!

ಶ್ರೀ ಎಸ್. ಗೋಪಾಲಗೌಡ.—ಕಾರ್ಪೊರೇಷನ್ನಿನವರು ಟೆಂಡರ್ ಕರೆದರು. ಒಬ್ಬರು ಸುಮಾರು 19 ರೋಡ್ ಅಕ್ಕಿಯನ್ನು ಶಿವಮೊಗ್ಗದಿಂದ ಬೆಂಗಳೂರಿಗೆ ಬರುವಾಗ ಮಾರಿಕೊಂಡು ಬಂದು, ಸರಕಾರದವರಿಗೆ ಬೇಕಾದರೆ ದುಡ್ಡು ಕೊಡುತ್ತೇನೆ ಎಂದು ಹೇಳಿದರು. ಅದನ್ನು ಕ್ವಿಂಟಾಲಿಗೆ 140 ರೂಪಾಯಿನಂತೆ ಮಾರಿಕೊಂಡರು. ಮಾನ್ಯ ಸಚಿವರು ಮೊನ್ನೆ ತಾನೆ ಹುರಿಗಡ್ಲೆ ಮತ್ತು ಕಡ್ಲೆಯ ಒಂದು ಪ್ರಕರಣವನ್ನು ಬೆಳಕಿಗೆ ತಂದರು. ತಮಗೆ ಹೊರಗಡೆಯಿಂದ ಬರತಕ್ಕ ಗೋಧಿ ದರವೇನು? ಆ ಗೋಧಿಯನ್ನು ರವೆ ಮಾಡಿ ಮಾರಿದರೆ, ಅದು ಯಾವ ದರದಲ್ಲಿ ಹೋಗುತ್ತೆ ಅನ್ನುವುದೂ ಗೊತ್ತಿದೆ. ಇಷ್ಟು ಅಪಾರವಾದ ಲೂಟಿ ಫುಡ್ ಇಲಾಖೆ ಕೊಡತಕ್ಕಂಥ ಆರ್ಡರ್‌ಗಳಲ್ಲಿ ನಡೆಯುತ್ತಾ ಇದೆ. ತಿನ್ನತಕ್ಕಂಥ ಜನ, ಹೊಟ್ಟೆಗಾಗಿ, ಒಂದೊಂದು ಸೇರಿಗಾಗಿ, ಅಮೂಲ್ಯ ವಾದ ಪ್ರಾಣಾಧಾರವಾದ ಆಹಾರಕ್ಕಾಗಿ ಜೀವನ ಮರಣದ ಹೋರಾಟ ಮಾಡುತ್ತಿರುವಾಗ, ಕೆಲವು ಜನ ಈ ಧಾನ್ಯಗಳ ವ್ಯಾಪಾರದಿಂದ ಲಕ್ಷಗಟ್ಲೆ ಲಾಭ ಸಂಪಾದನೆ ಮಾಡುತ್ತಿದ್ದಾರೆ. ಅವರ ಮೇಲೆ ಡಿ.ಐ.ಆರ್. ಪ್ರಕಾರ ಕ್ರಮ ತೆಗೆದುಕೊಂಡಿದ್ದಾರೆಯೆ? ಮೈಸೂರು ಸರಕಾರದವರು ಒಬ್ಬನ ಮೇಲೆ ಕ್ರಮ ತೆಗೆದುಕೊಂಡು ಒಂದು ನಿದರ್ಶನ ತೋರಿಸಲಿ. ಶ್ರೀ ವಿ. ಎಸ್. ಪಾಟೀಲರು ಚೆನ್ನಾಗಿ ಹೇಳಿದರು—ಎಲ್ಲಾ ವ್ಯಾಪಾರಿಗಳೂ ಕಾಂಗ್ರೆಸ್ಸಿನವರು ಎಂದು. ಅದನ್ನು ಇನ್ನೊಂದು ಸ್ವಲ್ಪ ಬೇರೆ ರೀತಿಯಲ್ಲಿ ಹೇಳಬೇಕಾಗಿದೆ. ಸ್ವಾತಂತ್ರ್ಯಾನಂತರ ಕಾಂಗ್ರೆಸ್ ಸದಸ್ಯತ್ವ 25 ಲಕ್ಷಕ್ಕೆ ಹೋಯಿತು. ಹಿಂದೆ ವ್ಯಾಪಾರಿಗಳಾಗಿದ್ದವರೆಲ್ಲಾ ಇಂದು ಕಾಂಗ್ರೆಸ್ಸಿಗ ರಾಗಿ ಬಿಳೀ ಟೋಪಿ ಹಾಕಿದ್ದಾರೆ; ಆದರೆ ಅದು ಖಾದಿಯದಾಗಿರುವುದಿಲ್ಲ, ಮಲ್ಲಿನದಾಗಿ ರುತ್ತದೆ. ತಾವೇ ತಮ್ಮ ಪಕ್ಷದವರನ್ನು ಶಿಕ್ಷೆಗೆ ಗುರಿಮಾಡುವುದು ಸಾಧ್ಯವೆ?

2-00 P.M.

ಆದುದರಿಂದ ಇವತ್ತು ಆಹಾರದ ವಿಷಯದಲ್ಲಿ ಸರಕಾರದ ನೀತಿ ಏನಿದೆಯೋ ಅದು ಮಾರ್ಪಾಡು ಆಗಬೇಕು, ಜೊತೆಗೆ ನೀರಾವರೀ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಇವತ್ತಿನವರೆಗೆ ಈ ಯೋಜನೆ ಗಳನ್ನು ನಡೆಸಲು ಏನು ನೀತಿಗಳನ್ನು ಅನುಸರಿಸುತ್ತಿದ್ದೀರೋ ಅವನ್ನು ಬದಲಾವಣೆ ಮಾಡಿ

(ಶ್ರೀ ಎಸ್. ಗೋಪಾಲಗೌಡ)

ಆದಷ್ಟು ಬೇಗ ಈ ಕೆಲಸಗಳು ಕಾರ್ಯಗತವಾಗುವಂತೆ ಮಾಡಬೇಕು. ನೀರಾವರಿಗಾಗಿ ಕೊಡುವ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಬೇಗನೆ ಒದಗಿಸಿಕೊಡಬೇಕು. ಅಲ್ಲದೆ, ತುಂಗಾ, ಭದ್ರಾ, ನುಗು ಹಾಗೂ ತುಂಗಭದ್ರಾ ಅಣೆಕಟ್ಟುಗಳಲ್ಲಿರುವ ನೀರಿನ ಆಸರೆಯಲ್ಲಿರುವ ಜಮೀನುಗಳಿಗೆ ಆದಷ್ಟು ತ್ವರಿತವಾಗಿ ನೀರನ್ನು ಒದಗಿಸಿಕೊಡುವುದರಲ್ಲಿ ಸಹಾಯ ಮಾಡಬೇಕು. ರೈತರಿಗೆ ಬೇಕಾಗುವ ಬೀಜ ಹಾಗೂ ಗೊಬ್ಬರಗಳನ್ನು ಆದಷ್ಟು ಬೇಗ ಸಕಾಲದಲ್ಲಿ ಒದಗಿಸಬೇಕು. ಇದುವರೆವಿಗೂ ಏನು ವಿಳಂಬ ನೀತಿಯನ್ನು ಅನುಸರಿಸಿಕೊಂಡು ಬಂದಿದ್ದೀರಿ ಅದನ್ನು ಸರಕಾರ ಈಗ ಕೈ ಬಿಟ್ಟು ಇದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು. ಅಲ್ಲದೆ ಮಾನ್ಯ ಸದಸ್ಯರಾದ ಶ್ರೀಮಾನ್ ದೇಸಾಯಿಯವರು ಹೇಳಿದಂತೆ ಇಂತಹ ಕೆಲಸಗಳ ಆಡಳಿತದ ಹತೋಟಿಯನ್ನೆಲ್ಲಾ ಒಬ್ಬರೇ ಇಟ್ಟುಕೊಳ್ಳುವುದು ಒಳ್ಳೆಯದು. ಅಲ್ಲದೆ ಎಲೆಕ್ಟ್ರಿಸಿಟಿ ಬೋರ್ಡಿನ ಬಗ್ಗೆ ಸರಕಾರದವರು ಅವರ ತೊಂದರೆಗಳೇನಿವೆ ಎನ್ನುವುದನ್ನು ಪರಿಶೀಲನೆ ಮಾಡಬೇಕು. ಅವರಿಗೆ ಪಂಪು ಸೆಟ್ಟುಗಳನ್ನು ಕೊಡುವುದಕ್ಕೆ ಅಡ್ಡಿ ಬರುವಂತಹ ಸಮಸ್ಯೆಗಳೇನಿವೆ, ಅವನ್ನು ಪರಿಹರಿಸಿ, ನೀರಾವರಿಗೆ ಪ್ರಯಾರಿಟಿ ಮೇಲೆ ವಿದ್ಯುಚ್ಛಕ್ತಿ ಕೊಡುವಾಗ ಅವರಿಗೆ ಯಾವ ವಸ್ತುಗಳ ಕೊರತೆ ಇದೆ, ಅವುಗಳನ್ನು ಪೂರೈಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕು ಎನ್ನುವುದನ್ನು ತೀವ್ರವಾಗಿ ಪರಿಶೀಲನೆ ಮಾಡಬೇಕು ಮತ್ತು ಈ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಹಾಯ ಮಾಡಬೇಕು. ಇವತ್ತಿನ ಸ್ಥಿತಿಯಲ್ಲಿ ಕಂಗಾಲಾಗಿರುವ ರೈತರ ಸ್ಥಿತಿಯನ್ನು ನೋಡಿಕೊಂಡು ಈಗ ತಾವು ತಂದಿರುವ ಎತ್ತುವಳಿ ನೀತಿಯನ್ನು ಎಂದರೆ ಎರಡು ಎಕರೆಗಳಿಗೆ ನಾಲ್ಕು ಕ್ವಿಂಟಾಲುಗಳಷ್ಟು ದವಸ ಕೊಡಬೇಕು ಎನ್ನುವುದನ್ನು ಸರಿಯಾದ ರೀತಿಯಲ್ಲಿ ಮಾರ್ಪಾಡು ಮಾಡಬೇಕು. ಮತ್ತು ಎಲ್ಲೆಲ್ಲಿ ಹೆಚ್ಚುವರಿ ದವಸಗಳು ಗ್ರಾಮಗಳಲ್ಲಿವೆಯೋ ಅಂತಹ ಗ್ರಾಮಗಳಲ್ಲಿ ಸಂಗ್ರಹಣೆ ಮಾಡಬೇಕು ಮತ್ತು ಆ ದವಸಗಳನ್ನು ಆ ಗ್ರಾಮಗಳಲ್ಲೇ ಇರುವಂತೆ ಮಾಡಬೇಕು. ಮತ್ತು ಆ ದವಸಗಳನ್ನು ತರಿಸಲು ನಿಮಗೆ ಬೇಕಾದಾಗ ನೀವೇ ನೇರವಾಗಿ ತರಿಸಿಕೊಳ್ಳುವ ವ್ಯವಸ್ಥೆ ಮಾಡಬೇಕು. ಇದೂ ಅಲ್ಲದೆ ಈ ರಾಜ್ಯದಲ್ಲಿ ಎಷ್ಟು ಖಾಸಗಿ ಮಿಲ್ಲುಗಳಿವೆ ಅವುಗಳನ್ನೆಲ್ಲಾ ಸರಕಾರದವರೇ ವಹಿಸಿಕೊಂಡು ಅವರಿಗೆ ಕೊಡಬೇಕಾದ ಹಲ್ಲಿಂಗ್ ಛಾರ್ಜ್‌ಗಳನ್ನು ಮಾತ್ರ ಕೊಟ್ಟು ಲಾಭ ಹಾಗೂ ಇಳುವರಿ ಇತ್ಯಾದಿಗಳನ್ನು ಕ್ರಮಪಡಿಸಲು ಅವರೊಡನೆ ಮಾತುಕತೆ ನಡೆಸಿ ತಕ್ಕ ವ್ಯವಸ್ಥೆ ಮಾಡಬೇಕು ಮತ್ತು ಇಷ್ಟು ಪ್ರಮಾಣದ ಭತ್ತವನ್ನು ಹಲ್ ಮಾಡಿದರೆ ಇಷ್ಟು ರೂಪಾಯಿಗಳಷ್ಟು ಹಲ್ಲಿಂಗ್ ಛಾರ್ಜ್ ಕೊಡಬೇಕೆಂದು ಮಾಡಬಹುದು. ಈ ಸಂದರ್ಭದಲ್ಲಿ ಇನ್ನೂ ಒಂದು ವಿಚಾರವನ್ನು ಹೇಳಬೇಕಾಗಿದೆ. ಈ ವರ್ಷ ಮಳೆಯಾಗದೆ ಬೆಳೆಗಳು ತೀವ್ರವಾಗಿ ನಷ್ಟವಾಗಿರುವ ಕಡೆಗಳಲ್ಲಿ ಕಂದಾಯದ ಮಾಫಿಯನ್ನು ಜೊತೆಗೆ ನೀರಾವರಿ ತೆರಿಗೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ರದ್ದು ಮಾಡಲು ಪ್ರಯತ್ನ ಮಾಡಬೇಕು. ಅಲ್ಲದೆ ಎಲ್ಲೆಲ್ಲಿ ಸಾಧ್ಯವೋ ಅಷ್ಟು ಕಂಗಾಲಾಗಿರುವ ರೈತರಿಗೆ ಸಬ್‌ಸಿಡಿ ಮೂಲಕ ಸುಲಭ ದರದಲ್ಲಿ ಕಾಳು ಸಿಗುವ ವ್ಯವಸ್ಥೆ ಮಾಡಬೇಕು, ಕಾಳನ್ನು ಕೊಳ್ಳಲಾಗದ ಕೂಲಿಗಾರರು ಬಡ ರೈತರುಗಳಿಗಾಗಿ ಕೆಲಸ ಕಾರ್ಯಗಳನ್ನು ಆರಂಭ ಮಾಡಿ ಅವರಿಗೆ ಸರಕಾರದ ಕಡೆಯಿಂದಲೇ ಒಂದು ಸೇರು ಅಕ್ಕಿಯನ್ನೋ ಅಥವಾ ಬೇರೆ ಕಾಳನ್ನೋ ಸರಕಾರದವರೇ ಒದಗಿಸಿಕೊಡಬೇಕು. ಇದರಿಂದ ಸರಕಾರಕ್ಕೆ ನಷ್ಟವಾದರೂ ಚಿಂತೆ ಇಲ್ಲ. ಇದಕ್ಕೆ ಕೇಂದ್ರ ಸರಕಾರದವರೂ ಸಹ ಸಹಾಯ ಮಾಡುತ್ತಾರೆ. ಕೇಂದ್ರದವರೂ ನಮ್ಮ ಸರಕಾರದವರೂ ಸೇರಿಕೊಂಡು ಈ ನಷ್ಟವನ್ನು ಸರಿಪಡಿಸಿಕೊಳ್ಳಬಹುದು. ಈ ಮೇಲೆ ಹೇಳಿದ ವ್ಯವಸ್ಥೆಗಳನ್ನೆಲ್ಲಾ ರಾಜ್ಯ ಸರಕಾರದವರು ಕೈಗೊಂಡರೆ ಈ ಒಂದು ಸಮಸ್ಯೆಯನ್ನು ಯಶಸ್ವಿಯಾಗಿ ಬಗೆಹರಿಸಲು ಅನುಕೂಲವಾಗುತ್ತದೆ ಎಂದು ಆಶಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ (ಬಾಗೇವಾಡಿ).—ಮಾನ್ಯ ಅಧ್ಯಕ್ಷರೇ, ಆಹಾರ ಧಾನ್ಯಗಳ ಪರಿಸ್ಥಿತಿ ಇಂದು ದೇಶದಲ್ಲಿ ಒಂದು ಚಿಂತಾಜನಕವಾದ ಸ್ಥಿತಿಯಲ್ಲಿದೆ. ಇಂತಹ ಮುಖ್ಯವಾದ ವಿಷಯದ ಬಗ್ಗೆ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ದಯ್ಯನವರು ಇಲ್ಲಿ ತಂದಿರುವ ಗೊತ್ತುವಳಿಯನ್ನು ಸ್ವಾಗತ ಮಾಡುತ್ತಾ ಇಲ್ಲಿ ಕೆಲವು ವಿಚಾರಗಳನ್ನು ಸರಕಾರದ ಮುಂದೆ ಇಡುತ್ತೇನೆ. ನಮ್ಮ ದೇಶದಲ್ಲಿ ಆಹಾರ ಧಾನ್ಯದಲ್ಲಿ ಶೇಕಡಾ ಎಂಟರಷ್ಟು ಕೊರತೆ ಇದೆ. ಇದನ್ನು ಪರಿಹಾರ ಮಾಡಲು ಸರಕಾರ ಮತ್ತು ಜನತೆ ಇವೆರಡೂ ಕೂಡಿದರೆ ಸರಿಪಡಿಸಬಹುದು. ಅಲ್ಲದೆ ಈಗ ನಮ್ಮ ದೇಶದ ಮೇಲೆ ಪಾಕೀಸ್ತಾನದವರು ಯುದ್ಧ ಮಾಡಲಿಕ್ಕೆ ಹತ್ತಿದ್ದಾರೆ. ಹಾಗೂ ಚೀನಾದೇಶದವರೂ ಯುದ್ಧ ಮಾಡಲಿಕ್ಕೆ ಹತ್ತಿದ್ದಾರೆ. ಇಂತಹ ಸಮಯದಲ್ಲಿ ನಮ್ಮ ದೇಶದಲ್ಲಿ ಎಷ್ಟು ಆಹಾರದ ದವಸಗಳನ್ನು ಬೆಳೆಯಬೇಕಾಗಿತ್ತೋ ಅಷ್ಟು ಆಗದೆ ಇರುವುದರಿಂದ ಈಗ ಇಂತಹ ಕಷ್ಟದ ಪರಿಸ್ಥಿತಿಯುಂಟಾಗಿದೆ. ಇದನ್ನು ಸರಕಾರದವರು ಜನತೆ ಕೂಡಿಕೊಂಡು ಇದುವರೆಗೆ ಪ್ರಯತ್ನ ಮಾಡದೇ ಇರುವುದು ತುಂಬಾ ಶೋಚನೀಯವಾಗಿದೆ, ಅಲ್ಲದೆ ಸರಕಾರ

ದವರು ಈಗ ಕೆಲವು ಕಡೆಗಳಲ್ಲಿ ಬಾವಿಗಳನ್ನು ತೆಗೆಸುವುದಕ್ಕಾಗಿ ಜನರಿಗೆ ಸಹಾಯ ಮಾಡುತ್ತಿದ್ದಾರೆ. ಆದರೆ ಈ ಕೆಲಸಗಳು ಈಗ ಬಹಳ ವಿಳಂಬವಾಗಿ ನಡೆಯುತ್ತಲಿವೆ. ಇದನ್ನು ಇನ್ನೂ ತೀವ್ರವಾಗಿ ಕೆಲಸ ಮಾಡುವಂತೆ ಏರ್ಪಾಡು ಮಾಡಬೇಕು. ಅಲ್ಲದೆ ನಮ್ಮ ಭಾಗದಲ್ಲಿ ಎಷ್ಟೋ ಬಾವಿಗಳಿಗಾಗಿ ಬಂದ ಅರ್ಜಿಗಳಿಗೆ ಬಾವಿಯನ್ನೇ ಮಂಜೂರು ಮಾಡಿಲ್ಲ. ನಮ್ಮ ಬಿಜಾಪುರ ಜಿಲ್ಲೆಯೊಂದರಿಂದಲೇ ಸರಕಾರಕ್ಕೆ ಬಾವಿಗಳಿಗಾಗಿ ಪಂಪುಸೆಟ್ಟುಗಳಿಗಾಗಿ ಬಂದಿರುವ ಅರ್ಜಿಗಳಲ್ಲಿ ಇನ್ನೂ 300 ಅರ್ಜಿಗಳು ಹಾಗೇ ಪೆಂಡಿಂಗ್ ಆಗಿ ನಿಂತಿವೆ, ನಮ್ಮ ಭಾಗದಲ್ಲಿ ಸುಮಾರು 17 ಇಂಚುಗಳಷ್ಟು ಕೂಡ ಮಳೆ ಬರುವುದಿಲ್ಲ, ಆದುದರಿಂದ ಸರಕಾರದವರು ನಮ್ಮ ಬಿಜಾಪುರ ಹಾಗೂ ಬೆಳಗಾಂ ಜಿಲ್ಲೆಯ ಬಗ್ಗೆ ಇನ್ನೂ ಹೆಚ್ಚು ಗಮನ ಕೊಟ್ಟು ಬಾವಿಗಳನ್ನು ಹೆಚ್ಚು ಹೆಚ್ಚಾಗಿ ಕೊಡಲು ಪ್ರಯತ್ನ ಮಾಡಬೇಕು. ಅದಷ್ಟು ಹೆಚ್ಚು ಪಂಪು ಸೆಟ್ಟುಗಳನ್ನು ಕೊಡಿಸಿಕೊಡಲು ಸಹಾಯ ಮಾಡಬೇಕು. ಅಲ್ಲದೆ ನಮ್ಮ ಭಾಗದಲ್ಲಿರುವ ರೈತರಿಗೆ ಸಕಾಲದಲ್ಲಿ ಬೀಜ ಹಾಗೂ ಗೊಬ್ಬರಗಳನ್ನು ಒದಗಿಸಿ ಕೊಡುತ್ತಿಲ್ಲ. ಸಕಾಲದಲ್ಲಿ ರೈತರಿಗೆ ಬೀಜ ಹಾಗೂ ಗೊಬ್ಬರ ಸಿಗದೇ ಹೋದರೆ ಅವರು ಬೆಳೆಯನ್ನು ಹೇಗೆ ತಾನೆ ಮಾಡಬೇಕು ? ಇದರಿಂದಾಗಿ ಬರುವ ಉತ್ಪನ್ನದಲ್ಲಿ ಅರ್ಧದಷ್ಟು ಕೂಡ ಉತ್ಪನ್ನ ಬರುವುದಿಲ್ಲ. ಆದುದರಿಂದ ಸರಕಾರ ತ್ವರಿತವಾಗಿ ಸಕಾಲದಲ್ಲಿ ರೈತರಿಗೆ ಬೀಜ ಹಾಗೂ ಗೊಬ್ಬರವನ್ನು ಕೊಡುವ ವ್ಯವಸ್ಥೆ ಮಾಡಬೇಕು. ಕೆಲವು ಕಡೆ ಸೀಮೆ ಗೊಬ್ಬರವನ್ನು ಹಂಚುವಾಗ ನಾನು ನೋಡಿದ್ದರಲ್ಲಿ ಆ ಗೊಬ್ಬರದೊಡನೆ ಬೂದಿ ಹಾಗೂ ಸಿಮೆಂಟು ಚೂರುಗಳನ್ನು ಬೆರೆಸಿ ಮಾರಾಟ ಮಾಡುತ್ತಿರುವುದನ್ನು ನೋಡಿದ್ದೇನೆ. ಇದರಿಂದ ಮುಕ್ಕಾಲು ಪಾಲು ಬರುವ ಬೆಳೆಯೂ ಕೂಡ ಹಾಳಾಗಿ ಹೋಗುತ್ತದೆ. ಇಂತಹ ಬೂದಿ ಹಾಗೂ ಇನ್ನಿತರ ಅನವಶ್ಯ ವಸ್ತುಗಳ ಬೆರಕೆಯಿಂದ ಹಂಚುವ ಗೊಬ್ಬರವನ್ನು ತಪ್ಪಿಸಲು ಸರಕಾರ ತಕ್ಕ ವ್ಯವಸ್ಥೆ ಮಾಡಬೇಕು. ಅಲ್ಲದೆ ರೈತರಿಗೆ ಹೆಚ್ಚು ಹೆಚ್ಚಾಗಿ ಗೊಬ್ಬರವನ್ನು ಸಕಾಲದಲ್ಲಿ ಒದಗಿಸುವ ವ್ಯವಸ್ಥೆ ಮಾಡಬೇಕು.

ಅಲ್ಲದೆ ಈಚೆಗೆ ನಮ್ಮ ರಾಜ್ಯದಲ್ಲಿ ಜಪಾನ್ ದೇಶದವರಿಂದ ಮಾಡಿದ ಸಣ್ಣ ಸೈಜಿನ ಟ್ರಾಕ್ಟರು ಎರಡೆತ್ತುಗಳು ಎಳೆಯುವಂತಹುದನ್ನು ಕೆಲವು ಕಡೆ ರೈತರಿಗೆ ಹಂಚಲು ಏರ್ಪಾಡು ಮಾಡುತ್ತಾರೆಂದು ಗೊತ್ತಾಗಿದೆ. ಇಂತಹ ಸಣ್ಣ ಟ್ರಾಕ್ಟರುಗಳನ್ನು ಇನ್ನೂ ಹೆಚ್ಚು ಹೆಚ್ಚಾಗಿ ತರಿಸಿ ನಮ್ಮ ಭಾಗದಲ್ಲರುವ ರೈತರಿಗೂ ಹಂಚುವ ವ್ಯವಸ್ಥೆ ಮಾಡಬೇಕು ಎಂದು ಕೇಳುತ್ತೇನೆ. ಅಲ್ಲದೆ ಸರಕಾರದವರು ಬಾವಿಗಳನ್ನು ಬೇಗನೆ ತೆಗೆಸಿ ಕೊಟ್ಟರೆ ರೈತರು ಒಂದು ಬೆಳೆ ತೆಗೆಯುವ ಕಡೆಗಳಲ್ಲಿ ಎರಡು ಬೆಳೆ ತೆಗೆಯಲು ಒಂದು ಅವಕಾಶವನ್ನೂ ಅವರಿಗೆ ಕಲ್ಪಿಸಿಕೊಟ್ಟಂತಾಗುತ್ತದೆ. ಇದರ ಕಡೆಗೆ ಸರಕಾರ ಗಮನ ಕೊಡಬೇಕು. ಅಲ್ಲದೆ ನಮ್ಮ ಕಡೆಯಲ್ಲಿ ಹೈಬ್ರಿಡ್ ಮಾದರಿಯ ಜೋಳದ ಬೀಜವನ್ನು ಸರಬರಾಜು ಮಾಡಬೇಕು. ಇಂತಹ ಬೀಜಗಳನ್ನು ಸಪ್ಲೈ ಮಾಡಿದರೆ ಒಂದು ಎಕರೆಗೆ 30 ಪಲ್ಲದಷ್ಟು ಜೋಳ ಬೆಳೆಯಲು ಅನುಕೂಲವಾಗುತ್ತದೆ. ನಾನು ಒಂದು ಕಡೆ ಹೋಗಿ ಇಲಾಖೆಯವರಲ್ಲಿ ಬೀಜ ಸಿಗುತ್ತಿಲ್ಲ ಎಂದು ಕೇಳಿ ಅವರಿಂದ ಐದು ಕಿಲೋದಷ್ಟು ಜೋಳವನ್ನು 40 ರೂಪಾಯಿಗಳಷ್ಟು ಕೀಮತ್ತು ಕೊಟ್ಟು ತಂದು ಒಂದು ಎಕರೆಯಷ್ಟು ಭೂಮಿಯಲ್ಲಿ ಉಪಯೋಗಿಸಬೇಕಾಯಿತು ಆದುದರಿಂದ ಹೈಬ್ರಿಡ್ ಮಾದರಿಯ ಜೋಳದ ಬೀಜವನ್ನು ಸರಕಾರದವರೇ ಎಲ್ಲ ರೈತರಿಗೂ ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ನಮ್ಮ ಬಿಜಾಪುರದಲ್ಲಿರುವ ಭೂಮಿ ಜೌಳು ಭೂಮಿ. ಇಲ್ಲಿ ಆಹಾರ ಧಾನ್ಯದ ಕೊರತೆ ಇದೆ. ಆದರೂ ನಮ್ಮ ಭಾಗದಲ್ಲಿರುವ ಕರಿ ಮಣ್ಣಿನ ಭೂಮಿಯಲ್ಲಿ ಒಳ್ಳೆಯ ಬೆಳೆ ಮಾಡಲು ಅವಕಾಶವಿದೆ. ಇದಕ್ಕೆ ಸರಕಾರ ಸಹಾಯ ಮಾಡಿಕೊಡಬೇಕು. ಅಲ್ಲದೆ ನಮ್ಮ ಭಾಗದಲ್ಲಿ ಬಗೀಚಾಗಳನ್ನು ಮಾಡಿ ಅಲ್ಲಲ್ಲಿ ತರಕಾರಿಗಳು ಹಾಗೂ ಹಣ್ಣು ಹಂಪಲುಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಯಲು ಅವಕಾಶ ಮಾಡಿಕೊಡಬೇಕು. ನಮ್ಮ ಬೊಂಬಾಯಿ ರಾಜ್ಯದಲ್ಲಿ ದೊಡ್ಡ ದೊಡ್ಡ ಬಂಗಲೆಗಳಿರುವ ಕಡೆಗಳಲ್ಲಿ ಬಗೀಚಾ ಮಾಡಿ ಅಲ್ಲಿ ಹೆಚ್ಚು ಹೆಚ್ಚಾಗಿ ತರಕಾರಿ ಹಾಗೂ ಹಣ್ಣು ಹಂಪಲುಗಳ ಗಿಡಗಳನ್ನು ಬೆಳೆಯುತ್ತಿದ್ದರು. ಇದರಿಂದ ಬರಗಾಲದ ಪರಿಸ್ಥಿತಿಯಲ್ಲಿ ಹೆಚ್ಚು ಹಣ್ಣು ಹಂಪಲುಗಳನ್ನು ಉಪಯೋಗಿಸುವುದರಿಂದ ಪರಿಸ್ಥಿತಿ ಎಷ್ಟೋ ಸುಧಾರಿಸುತ್ತದೆ. ಇದರಿಂದಲೂ ಆಹಾರದ ಸಮಸ್ಯೆಯನ್ನು ಬಗೆಹರಿಸಲು ಸಹಾಯ ಮಾಡಿದಂತಾಗುತ್ತದೆ. ನಮ್ಮ ಬೆಂಗಳೂರಿನಲ್ಲಿರುವ ದೊಡ್ಡ ದೊಡ್ಡ ಬಂಗಲೆಗಳಲ್ಲಿ ಬರಿಯ ಚೆಂಡುಮಲ್ಲಿಗೆಯ ಹೂ ಹಾಗೂ ಇನ್ನಿತರ ಬಗೆಯ ಹೂ ಗಿಡಗಳನ್ನು ಬೆಳೆಸುತ್ತಿದ್ದಾರೆ. ಇದನ್ನು ಬೆಳೆಸುವುದಕ್ಕೆ ಬದಲಾಗಿ ಇಲ್ಲೆಲ್ಲಾ ತರಕಾರಿ ಹಾಗೂ ಹಣ್ಣು ಹಂಪಲುಗಳ ಗಿಡಗಳನ್ನು ಬೆಳೆಯುವ ವ್ಯವಸ್ಥೆ ಮಾಡಬೇಕು. ನಾನು ಮೈಸೂರು ರಾಜ್ಯದಲ್ಲಿ ನೋಡಿರುವಂತೆ ಒಂದೊಂದು ದೊಡ್ಡ ಬಂಗಲೆಯಲ್ಲೂ ಸುಮಾರು ಒಂದೆರಡು ಫರ್ಲಾಂಗಿನಷ್ಟು ದೂರದಲ್ಲಿ ಅಲ್ಲೆಲ್ಲಾ ಹೂವಿನ ಗಿಡಗಳನ್ನು ಬೆಳೆಸುತ್ತಿದ್ದಾರೆ. ಇದಕ್ಕೆ ಬದಲಾಗಿ ಸರಕಾರದವರು ಹೆಚ್ಚು ಹೆಚ್ಚು ತರಕಾರಿಗಳ ಬೀಜಗಳು ಹಾಗೂ ಹಣ್ಣು ಹಂಪಲುಗಳ ಗಿಡಗಳ ಬೀಜಗಳನ್ನು ಕೊಟ್ಟು ಅವನ್ನು ಬೆಳೆಸುವ ವ್ಯವಸ್ಥೆ ಮಾಡಿದರೆ ಈ ಆಹಾರದ ಸಮಸ್ಯೆಯನ್ನು ಎಷ್ಟೋ ಸುಧಾರಿಸಿದಂತಾಗುತ್ತದೆ. ಇದರ ಬಗ್ಗೆ

(ಶ್ರೀಮತಿ ಸುಶೀಲಾಬಾಯ್ ಹಿರಾಚಂದ್ ಷಾ)

ಸರಕಾರದವರು ಒಂದು ಸರಿಯಾದ ಪ್ರಯೋಗವನ್ನು ನಡೆಸಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಆರ್. ರಂಗೇಗೌಡ (ಮಾಗಡಿ).—ಪೂಜ್ಯ ಸಭಾಪತಿಯವರೇ, ಶ್ರೀಮಾನ್ ಡಿ. ಎಂ. ಸಿದ್ದಯ್ಯನವರು ಸಭೆಯ ಮುಂದೆ ಮಂಡಿಸಿರತಕ್ಕ ನಿರ್ಣಯವನ್ನು ನಾನು ಸ್ವಾಗತಿಸುತ್ತ ಕೆಲವು ವಿಷಯಗಳನ್ನು ನಾನೀಗ ಈ ಸಭೆಯ ಮುಂದಿಡಬಯಸುತ್ತೇನೆ.

ಈ ದಿವಸ ನಮ್ಮ ರಾಜ್ಯಾಡಳಿತದ ಸೂತ್ರವನ್ನು ಕೈಲಿ ಹಿಡಿದಿರತಕ್ಕ ನಮ್ಮ ಮುಖಂಡರು ಹೋದ ಹೋದ ಕಡೆಗಳಲ್ಲೆಲ್ಲಾ ಭಾಷಣಗಳನ್ನು ಮಾಡುತ್ತ ವ್ಯವಸಾಯ ಕ್ಷೇತ್ರದಲ್ಲಿ ಸರ್ಕಾರದವರು ಬಹಳ ಅಭಿವೃದ್ಧಿಕಾರ್ಯಗಳನ್ನು ಮಾಡಿದ್ದಾರೆಂದೂ ಅದರಿಂದ ಈ ದಿವಸ ಅದು ರೈತರಿಗೆ ಒಂದು ಲಾಭದಾಯಕವಾದ ಉದ್ಯಮವಾಗಿದೆಯೆಂದು ಹೇಳುತ್ತಿದ್ದಾಗ್ಯೂ, ಗ್ರಾಮಾಂತರ ಪ್ರದೇಶಗಳಲ್ಲಿ ಹಾಗೆ ಭಾಷಣಗಳನ್ನು ಮಾಡಿ ಇಲ್ಲಿಗೆ ಬಂದು ರಾಜ್ಯದ ಆಯವ್ಯಯಪಟ್ಟಿಯನ್ನು ತಯಾರಿಸುವಾಗ ವ್ಯವಸಾಯ ಬಾಬನ್ನು ಅಲಕ್ಷ್ಯ ಮಾಡಿ ಕೈಗಾರಿಕಾ ಕ್ಷೇತ್ರಗಳಿಗೆ ಅಂದರೆ ಕಾರ್ಖಾನೆಗಳ ಸ್ಥಾಪನೆಗೆ ಹೆಚ್ಚಿನ ಅನುಕೂಲಗಳನ್ನು ಒದಗಿಸುತ್ತಿದ್ದಾರೆ. ಹೀಗೆ ಸರ್ಕಾರದವರು ವ್ಯವಸಾಯದ ಬಾಬಿಗೂ ಮತ್ತು ಕೈಗಾರಿಕಾ ಬಾಬಿಗೂ ವೆಚ್ಚ ಮಾಡುತ್ತಿರುವ ಹಣದಲ್ಲಿ ಅಜಗಜಾಂತರ ವ್ಯತ್ಯಾಸವಿದೆ. ಸರ್ಕಾರದವರು ಕೈಗಾರಿಕೋದ್ಯಮಿಗಳಿಗೆ ಬೇಕಾದ ಕಟ್ಟಡ ಹಾಗೂ ಯಂತ್ರೋಪಕರಣಗಳಿಗೂ ವಿಶೇಷವಾಗಿ ಹಣವನ್ನು ಕೊಡುತ್ತಾರೆ. ಈ ಒಂದು ಕಾರಣದಿಂದ ಅವರು ಅತ್ಯಲ್ಪ ಕಾಲದಲ್ಲೇ ಹೆಚ್ಚು ಆದಾಯ ಗಳಿಸುವುದಕ್ಕೆ ಒಂದು ಅವಕಾಶವಿದೆ. ಆದರೆ, ರೈತನ ವಿಚಾರದಲ್ಲಿ ಹಾಗಿಲ್ಲ. ವ್ಯವಸಾಯೋದ್ಯಮದಲ್ಲಿ ಅನೇಕ ಅಡಚಣೆಗಳಿವೆ. ಉದಾಹರಣೆಗೆ ಹೇಳುವುದಾದರೆ— ರೈತನಾದವನು ತನ್ನ ಪೂರೈಕೆಗಳನ್ನು ಪಡೆಯಲು ಒಂದೊಂದು ವಿಚಾರಕ್ಕೂ ಅವನು ಒಂದೊಂದು ಆಫೀಸಿಗೆ ಹೋಗಬೇಕಾಗಿರುತ್ತೆ. ಪಂಪ್‌ಸೆಟ್ ಬೇಕಾಗಿದ್ದರೆ ಅದಕ್ಕೇ ಒಂದು ಆಫೀಸಿಗೆ ಹೋಗಬೇಕು, ವಿದ್ಯುಚ್ಛಕ್ತಿ ಬೇಕಾಗಿದ್ದರೆ ಅದಕ್ಕೇ ಒಂದು ಆಫೀಸು, ಬಿತ್ತನೆ ಬೀಜ ಬೇಕಾದರೆ ಅದಕ್ಕೇ ಒಂದು ಆಫೀಸು-ಹೀಗೆ ಆತನು ನಾಲ್ಕಾರು ಆಫೀಸುಗಳನ್ನು ದಿನವೆಲ್ಲಾ ತಿರುಗಾಡಬೇಕಾಗುವುದು. ಕಡೆಗೆ ಕೆಲಸವಾದರೂ ಆಯಿತು, ಇಲ್ಲದಿದ್ದರೆ ಅವನು ಬರಿಗೈಲಿ ಮನೆಗೆ ಹೋಗಬೇಕು. ಅಥವಾ ಸರ್ಕಾರದಿಂದ ಆತನು ನಿರೀಕ್ಷಿಸುತ್ತಿದ್ದ ಅನುಕೂಲ ಸಿಕ್ಕಿದರೂ ಅಲ್ಲಿಗೆ ಆತನಿಗೆ ಬಿತ್ತನೆ ಹದ ಮೀರಿರುತ್ತೆ. ಅಕಾಲದಲ್ಲಿ ಬಿತ್ತನೆ ಮಾಡಿದರೆ ಬೆಳೆ ಹುಲುಸಾಗಿರುವುದಿಲ್ಲ. ಹೀಗಾಗಿ ಇಂಥ ಅನೇಕ ಕಾರಣಗಳಿಂದ ಈ ದಿವಸ ನಮ್ಮಲ್ಲಿ ಇಂಥ ಒಂದು ಪರಿಸ್ಥಿತಿಯುಂಟಾಗಿದೆ. ಇಲ್ಲಿಯವರೆಗಾದರೂ ಅಧಿಕಾರಿಗಳಾಗಲೀ ಅಥವಾ ನಮ್ಮ ಮುಖಂಡರುಗಳಾಗಲೀ ಯಾರೂ ರೈತನ ಹತ್ತಿರ ಹೋಗಿ ಆತನ ಕಷ್ಟಸುಖಗಳೇನು, ನಮ್ಮಲ್ಲಿ ಏತಕ್ಕೆ ಇಲ್ಲಿಯತನಕ ಈ ಆಹಾರ ವಿಚಾರದಲ್ಲಿ ಸ್ವಪರಿಪೂರ್ಣತೆಯನ್ನು ಪಡೆಯಲಿಕ್ಕಾಗಲಿಲ್ಲ ಎಂಬುದನ್ನು ವಿಚಾರ ಮಾಡಿಲ್ಲ. ಇದೇ ಮಾರ್ಗವನ್ನು ಇನ್ನು ಮುಂದಕ್ಕೂ ಅನುಸರಿಸಿದಲ್ಲಿ ನಮ್ಮ ಇಲ್ಲಿಯ ಸಲಹೆಗಳೂ, ಆಶೋತ್ತರಗಳೆಲ್ಲಾ ಗಾಳೀಗೋಪುರವಾಗುತ್ತವೆ. ಇತ್ತೀಚೆಗೆ ಗ್ರಾಮಾಂತರ ಪ್ರದೇಶದಲ್ಲಿ ಅಗ್ರಿಕಲ್‌ಚರಲ್ ಪ್ರೊಡಕ್ಷನ್ ಪ್ಲಾನ್ ಎಂದು ಮಾಡಿದ್ದಾರೆ. ಈ ಬಗ್ಗೆ ತಾಲ್ಲೂಕ್ ಬೋರ್ಡಿನವರೂ ಮತ್ತು ಪಂಚಾಯ್ತಿಗಳಾದರೂ ವ್ಯವಸಾಯಾಭಿವೃದ್ಧಿಯ ಬಗ್ಗೆ ಸಾವಿರಾರು ರೂಪಾಯಿಗಳ ಯೋಜನೆಯನ್ನೇನೋ ಸಿದ್ಧಗೊಳಿಸಿದ್ದಾರೆ. ಆದರೆ ನಾನು ಅವರನ್ನು ಉತ್ತಮ ಥಳೀ ಬೀಜದ ಸರಬರಾಯಿಗೆ ಹಣವನ್ನು ಒದಗಿಸಿದ್ದಾರೆಯೇ ರಸಾಯನಿಕ ಗೊಬ್ಬರಕ್ಕೆ ಮತ್ತು ರೈತನ ತುರ್ತುಕಾರ್ಯಕ್ಕೆ ಹಣ ಒದಗಿಸಿಕೊಂಡಿದ್ದೀರಾ ಎಂದು ಕೇಳಿದುದಕ್ಕೆ ಅದಕ್ಕೆ ಸಂಬಂಧಪಟ್ಟ ಸರ್ಕಾರೀ ಕಛೇರಿಯಲ್ಲಿ ವ್ಯವಹಾರ ಮಾಡುತ್ತಿದ್ದೇವೆ ಎಂದು ಹೇಳಿದರು. ಇಂಥ ಯೋಜನೆಗಳಿಂದ ಖಂಡಿತ ಫಲಪ್ರದವಾಗುವುದಿಲ್ಲ. ರೈತನಿಗೆ ಅನುಕೂಲವಾದ ಬಿತ್ತನೆಕಾಲ ಆತನ ಅನುಕೂಲವನ್ನು ಹೇಳಿ ಕೇಳಿ ಬರುವುದಿಲ್ಲ. ಅದಕ್ಕೆ ರೈತನಾದವನು ಹೊಂದಿಕೊಂಡು ಕೆಲಸಮಾಡಬೇಕು. ರೈತನಿಗೆ ಸಕಾಲಕ್ಕೆ ಅನುಕೂಲಗಳನ್ನೊದಗಿಸಿ ಕೊಟ್ಟರೆ ಆತನು ಹೆಚ್ಚು ಬೆಳೆಯನ್ನು ತೆಗೆಯಲು ಅನುಕೂಲವಾಗುವುದು. ಇನ್ನು ನನ್ನ ಕ್ಷೇತ್ರದ ವಿಚಾರಕ್ಕೆ ಬಂದರೆ ಹಿಂದೆ ಕಂಟ್ರೋಲ್ ಕಾಲದಲ್ಲಿ ಸರ್ಕಾರಕ್ಕೆ ಬೇಕಾದಷ್ಟು ಧಾನ್ಯವನ್ನು ಕೊಟ್ಟೆವು. ಆದರೆ ಈ ದಿವಸ ಅಲ್ಲಿ ಮಳೆಯಿಲ್ಲದೆ ಯಾವತ್ತೂ ಭಿಕ್ಷಾಟನೆಗೆ ಕೈಚಾಚದವರು ಇಂದು ಪ್ರಕೃತಿಯ ವಿಕೋಪದಿಂದ ಅಲ್ಲಿರತಕ್ಕವರಿಗೆ ತಿನ್ನುವುದಕ್ಕಿಲ್ಲದಂತಾಗಿದೆ. ಪೈರುಗಳೆಲ್ಲಾ ಒಣಗಿವೆ. ನಾನು ಇದೇ ಸಭೆಯಲ್ಲಿ ಹಿಂದೆ ಅನೇಕಾವರ್ತಿ ನಮ್ಮ ತಾಲ್ಲೂಕಿನಲ್ಲಿ ಸಣ್ಣನೀರಾವರಿ ಕಾಂಗಾರಿಗಳಿಲ್ಲ, ಅದಕ್ಕೆ ಅನುಕೂಲ ಮಾಡಿ ಕೊಡಿ ಎಂದು ಸರ್ಕಾರದವರನ್ನು ಪ್ರಾರ್ಥಿಸಿದ್ದೆನು. ಆದಾಗ್ಯೂ ಸರ್ಕಾರಕ್ಕೆ ದಯಬಾರಲಿಲ್ಲ. ಅಲ್ಲೊಂದು ಇಲ್ಲೊಂದು ಬಾವಿಗಳಿಗೇನೋ ಒಂದು ಸಾವಿರ

ರೂಪಾಯಿಗಳತನಕ ಹಣವನ್ನು ಕೊಟ್ಟಿದ್ದಾರೆ. ಆದರೆ ಕೆಲಸ ಅರ್ಧಮರ್ಧವಾಗಿ ಅಷ್ಟಕ್ಕೇ ನಿಂತಿದೆ. ನಾನು ಈ ವಿಚಾರಕ್ಕೆ ಅನೇಕಾವರ್ತಿ ಸರ್ಕಾರದವರ ಗಮನವನ್ನು ಸೆಳೆದೆ. ಆದರೆ ಸರ್ಕಾರದವರು ಅಧಿಕಾರಿಗಳು ಕೊಟ್ಟ ಸುಳ್ಳುಲೆಕ್ಕ ಪತ್ರಗಳನ್ನು ನಂಬಿಕೊಂಡು ಅತ್ತಕಡೆಗೆ ಗಮನವನ್ನೇ ಕೊಡಲಿಲ್ಲ. ಹೀಗಾಗಿ ಅಲ್ಲಿಯ ರೈತರು ಇಂದು ಬಹಳ ಶೋಚನೀಯವಾದ ಸ್ಥಿತಿಯಲ್ಲಿದ್ದಾರೆ. ಇಲ್ಲಿಯವರೆಗೂ ಸರ್ಕಾರದವರು ಸಣ್ಣ ನೀರಾವರಿ ಕಾಂಗಾರಿಗಳನ್ನು ಆಗ ಮಾಡಿಕೊಡುತ್ತೇವೆ, ಈಗ ಮಾಡಿಕೊಡುತ್ತೇವೆಂದು ಹೇಳುತ್ತಿದ್ದು ಈಗ ಕಣ್ವ, ಅರ್ಕಾವತಿ ಜಲಾಶಯಗಳಲ್ಲಿ ಸಣ್ಣ ನೀರಾವರಿ ಕಾಂಗಾರಿಗಳನ್ನು ಮಾಡುವುದಕ್ಕೆ ಅವಕಾಶವಿಲ್ಲವೆಂಬ ನೆಪವನ್ನು ಹೇಳುತ್ತಿದ್ದಾರೆ. ಈಗಲಾದರೂ ಸರ್ಕಾರದವರು ಅಲ್ಲಿ ಸರ್ವೆ ಕಾರ್ಯವನ್ನು ಮಾಡಿ ಅಲ್ಲಿ ಸಣ್ಣ ಜಲಾಶಯಗಳನ್ನು ನಿರ್ಮಾಣ ಮಾಡಿದರೆ ಅಲ್ಲಿರತಕ್ಕ ಜನರು ಆದಷ್ಟು ಶೀಘ್ರವಾಗಿ ಅಭಾವ ಪರಿಸ್ಥಿತಿಯನ್ನು ನೀಗುವುದಕ್ಕೆ ಶ್ರಮಿಸುತ್ತಾರೆಂಬ ಭರವಸೆಯನ್ನು ಕೊಡುತ್ತೇನೆ. ಕಣ್ವ ಜಲಾಶಯದಿಂದ ಹಿಂಭಾಗದ ರೈತರಿಗೆ ಅಧಿಕ ಬೆಳೆಗೆ ನೆರವು ನೀಡುವ ಸರ್ಕಾರ ಜಲಾಶಯದ ಮೇಲ್ಗಡೆಯ ರೈತರ ಶ್ರೇಯಸ್ಸನ್ನು ಕೋರ ಬೇಕಾದುದು ಸರಿಯಲ್ಲವೆ? ಅಂದಮೇಲೆ ಅಲ್ಲಿ ನೀರಾವರಿ ಜಲಾಶಯಕ್ಕೆ ಅವಕಾಶವಿಲ್ಲದಿದ್ದಲ್ಲಿ ನೀರಾವರಿ ಭಾವಿಗಳನ್ನು ಮಾಡಿಸಿ ವಿದ್ಯುಚ್ಛಕ್ತಿ ಮತ್ತು ಪಂಪ್‌ಸೆಟ್‌ಗಳನ್ನಾದರೂ ಉದಾರವಾಗಿ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನು ಇಲ್ಲಿಯವರೆಗೆ ಮಾಡಿರತಕ್ಕ ಸಣ್ಣ ಜಲಾಶಯಗಳಲ್ಲಿ ಹೂಳು ತುಂಬಿದೆ; ಅದನ್ನು ತೆಗೆಸುವು ದಕ್ಕೆ ಕೂಡಲೆ ಪ್ರಯತ್ನ ಮಾಡಬೇಕು. ಇನ್ನು ಕೆಲವು ಕೆರೆಗಳ ಹಿಂದೆ ಮತ್ತು ಪಿಕಪ್‌ಗಳ ಕೆಳಗೆ ನಾಲೆಗಳನ್ನು ಮಾಡಿಲ್ಲ. ಅವುಗಳನ್ನು ಪ್ರಾರಂಭ ಮಾಡಿದರೆ ಆ ಕೆಲಸವು ಆಯಿತು, ಜನರಿಗೆ ಈ ದುರ್ಭಿಕ್ಷಕಾಲದಲ್ಲ ಜೀವನಕ್ಕೆ ಕೂಲಿ ಕೆಲಸವನ್ನೂ ಒದಗಿಸಿದಂತಾಗುವುದು. ಇನ್ನು ದನಗಳ ಮೇವಿನ ವಿಚಾರದಲ್ಲಿ ತುಂಬಾ ಕಷ್ಟ ಉಂಟಾಗಿದೆ. ಅದಕ್ಕಾಗಿ ನಮ್ಮ ಪ್ರಾಂತ್ಯದಲ್ಲ ಸಾವನದುರ್ಗ ಫಾರೆಸ್ಟಿನಲ್ಲಿ ಜಾನುವಾರುಗಳ ಮೇವಿಗೆ ಅವಕಾಶ ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅಂದರೆ ಮೇಕೆ ಕುರಿಗಳನ್ನು ಮೇಯಿಸುವುದಕ್ಕೆ ಅವಕಾಶಕೊಡಿ ಎಂದು ನಾನು ಸಹಾ ಹೇಳುವುದಿಲ್ಲ. ನೆನ್ನೆಯ ದಿವಸ ಶ್ರೀಮಾನ್ ಸುಬ್ಬಯ್ಯ ನಾಯಕ್ ಅವರು ಮಾತನಾಡುತ್ತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವರ್ಷಕ್ಕೆ ಮೂರು ಬೆಳೆಯನ್ನು ತೆಗೆಯತಕ್ಕ ಅವಕಾಶವಿದೆ ಎಂದು ಹೇಳಿದರು. ನಾನು ಕಳೆದ ವರ್ಷ ಇದೇ ಸಭೆಯಲ್ಲಿ ಅಂಥ ಒಂದು ಪ್ರಶ್ನೆಯನ್ನು ಅಂದರೆ ಹಣ್ಣು ತರಕಾರಿಗಳನ್ನು ಬೆಳೆಯತಕ್ಕ ಬಗ್ಗೆ ತಂದಿದ್ದೆನು. ಅದಕ್ಕೂ ಕೂಡ ಸರ್ಕಾರದವರು ಉತ್ತೇಜನ ಕೊಡಲಿಲ್ಲ. ಇಂಥ ನಿಕೃಷ್ಟಪರಿಸ್ಥಿತಿಯಲ್ಲಿ ಅದಕ್ಕಾದರೂ ಅವಕಾಶವಿದ್ದರೆ ಬಹಳ ಅನುಕೂಲವಾಗುತ್ತಿತ್ತು. ಈಗ ನಮ್ಮ ಸರ್ಕಾರದವರ ಮುಂದೆ ಆ ಟೆನೆಸಿವ್ಯಾಲಿ ಮಾದರಿಯ ಯೋಜನೆಯೊಂದು ಇದೆಯೆಂದು ಕೇಳುತ್ತಿದ್ದೇನೆ. ಸದರಿ ಟೆನೆಸಿವ್ಯಾಲಿ ಮಾದರಿಯ ಮಲೆನಾಡು ಡೆವಲಪ್‌ಮೆಂಟ್ ಸ್ಕೀಮ್‌ನ್ನು ಈ ಅಭಾವದ ಪರಿಸ್ಥಿತಿಯಲ್ಲಿ ಕಾರ್ಯರೂಪಕ್ಕೆ ತರುವುದರಿಂದ ಆ ಯೋಜನೆಯಲ್ಲಿ ಅಡಕವಾಗಿರುವ ವಿವರಗಳನ್ನು ಒಂದೊಂದಾಗಿ ಪರಿಶೀಲಿಸಿ ಅದಕ್ಕೆ ಹಣ ಒದಗಿಸಿಕೊಳ್ಳುವುದರಿಂದ ದೇಶದಲ್ಲಿ ತಲೆದೋರಿರುವ ಆಹಾರದ ಅಭಾವವು ತ್ವರಿತದಲ್ಲಿಯೇ ನಿವಾರಣೆಯಾಗುವುದು. ನಾನು ಬಯಲು ಪ್ರದೇಶದವನಾದರೂ ಪ್ರಕೃತಿದೇವಿಯ ಪ್ರಸಾದದಿಂದ ಮಲೆನಾಡು ಪ್ರದೇಶದಲ್ಲಿ ದೊರೆಯುವ ಅನುಕೂಲವನ್ನು ನಾವು ಉಪಯೋಗಿಸಿಕೊಂಡರೆ ನಮ್ಮದೇ ಆದ ಆ ಪ್ರದೇಶದಲ್ಲಿ ದೊರೆಯುವ ಆಹಾರವು ನಮಗೂ ಅತಿಯಾಗಿ ದೊರೆಯುವುದೆಂಬ ಆಶಾವಾದಿಯಾಗಿರುತ್ತೇನೆ. ಆದುದರಿಂದ ಸದರಿ ಮಲೆನಾಡು ಡೆವಲಪ್‌ಮೆಂಟ್ ಸ್ಕೀಮನ್ನು ಕಾರ್ಯರೂಪಕ್ಕೆ ತಂದು ದೇಶವು ಆಹಾರಕ್ಕಾಗಿ ಪರಕೀಯರಲ್ಲಿ ಭಿಕ್ಷೆಬೇಡುವುದನ್ನು ತಡೆಯಲು ನೆರವಾಗಬೇಕೆಂದು ಆಶಿಸಿ ಪೂಜ್ಯ ಸಭಾಪತಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಸಭೆಯ ಮುಂದೆ ಶ್ರೀಮಾನ್ ಡಿ. ಎಂ. ಸಿದ್ದಯ್ಯನವರು ಮಂಡಿಸಿರತಕ್ಕ ನಿರ್ಣಯವನ್ನು ಹೃತ್ಪೂರ್ವಕವಾಗಿ ನಾನು ಸ್ವಾಗತ ಮಾಡುತ್ತಾ ಎರಡು ಸಲಹೆಗಳನ್ನು ಮಾಡಬೇಕೆಂದು ಅಭಿಪ್ರಾಯಪಡುತ್ತೇನೆ. ನಮ್ಮ ದೇಶದ ಆಹಾರದ ಉತ್ಪಾದನೆ ವಿಚಾರವಾಗಿ ನಾವು ಯೋಜನೆಗಳನ್ನು ಹೊಸದಾಗಿ ರೂಪಿಸ ಬೇಕಾಗಿಲ್ಲ. ಮೂರು ಪಂಚವಾರ್ಷಿಕ ಯೋಜನೆಗಳಲ್ಲೂ ಕೂಡ ಇದಕ್ಕೆ ಒಂದು ಆದ್ಯ ಸ್ಥಾನವನ್ನು ಕೊಟ್ಟು ನಡೆಸಿಕೊಂಡು ಬಂದಿದ್ದೇವೆ. ಆದರೂ ಕೂಡ ನಾವು ಎಷ್ಟು ಆಹಾರವನ್ನು ಉತ್ಪಾದನೆ ಮಾಡಬೇಕೆಂದು ನಿರೀಕ್ಷೆ ಮಾಡಿದ್ದೆವೋ ಆ ಮಟ್ಟಕ್ಕೆ ಮುಟ್ಟುವುದಕ್ಕೆ ಆಗಿಲ್ಲ. ಈ ದಿವಸ ಈ ಪರಿಸ್ಥಿತಿಯನ್ನು ನೋಡಿದ ಪಕ್ಷದಲ್ಲಿ ಹೆಚ್ಚಿನ ಒಂದು ಪ್ರಯತ್ನ ಅವಶ್ಯಕ ಎಂದು ಹೇಳಿ ಎಲ್ಲಾ ವಲಯ ಗಳಲ್ಲೂ ಕೂಡ ಕೇಳಿ ಬರುತ್ತಾ ಇದೆ. ಸರ್ಕಾರದವರು ತೆಗೆದುಕೊಳ್ಳಬಹುದಾದ ಅಥವಾ ಅವರು ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬಹುದು ಎಂದು ಆಲೋಚನೆ ಮಾಡುವುದಕ್ಕೆ ಮುಂಚೆ ಈಗಾಗಲೇ ಅವರು ತೆಗೆದುಕೊಂಡಿರತಕ್ಕ ಕಾರ್ಯಕ್ರಮಗಳಲ್ಲಿ ಎಷ್ಟುಮಟ್ಟಿನ ಸಾಧನೆಯಾಗಿದೆ.

(ಶ್ರೀ ಎಂ. ಸಿ. ಬಸಪ್ಪ)

ಸಾಧನೆಯಾಗದೇ ಇದ್ದ ಪಕ್ಷದಲ್ಲಿ ಏಕೆ ಆಗಿಲ್ಲ ಎಂಬುದನ್ನು ನೋಡುವುದು ಮುಖ್ಯ ಎಂದು ನಾನು ತಿಳಿದುಕೊಂಡಿದ್ದೇನೆ ಸಣ್ಣ ನೀರಾವರಿ ಯೋಜನೆಗಳಿಗಾಗಿ ನಾವು ಮಾಡಿರತಕ್ಕ ಪ್ರಯತ್ನ ಏನು ಎಂದು ತಾವು ಕೇಳಿದ ಪಕ್ಷದಲ್ಲಿ ಮೂರು ಪಂಚವಾರ್ಷಿಕ ಯೋಜನೆಗಳಲ್ಲಿ ಸುಮಾರು 8—10 ಕೋಟಿ ರೂಪಾಯಿಗಳ ಹಣವನ್ನು ವ್ಯಯಮಾಡಬೇಕೆಂದು ನಿಗದಿ ಮಾಡಿದ್ದೆವು ; ಆದರೆ ವಾಸ್ತವಾಂಶ ಇವತ್ತು ನೋಡುವುದಾದ ಪಕ್ಷದಲ್ಲಿ ಈ ವರ್ಷದ ಸಾಲ್ ಆಖೈರಿಗೆ ಸುಮಾರು 15 ಕೋಟಿ ರೂಪಾಯಿಗಳಿಗಿಂತಲೂ ಕೂಡ ಹೆಚ್ಚಿನ ಹಣವನ್ನು ಖರ್ಚು ಮಾಡಬಹುದು ಎಂದು ಅಂದಾಜು ಮಾಡಲಾಗಿದೆ. ಅಲ್ಲದೆ ಆರು ಸಾವಿರ ಕೆಲಸಗಳಷ್ಟು ಪ್ರಾರಂಭ ಮಾಡಿದ್ದೇವೆ. ಇದನ್ನೆಲ್ಲಾ ಮುಗಿಸಬೇಕಾಗಿದ್ದರೆ 12 ಕೋಟಿ ರೂಪಾಯಿಗಳು ಬೇಕಾಗುತ್ತದೆ ಎಂದು ಸರ್ಕಾರದವರು ಹೇಳುತ್ತಾ ಇದ್ದಾರೆ. ಇವತ್ತು ಸಣ್ಣ ನೀರಾವರಿ ಯೋಜನೆಗಳ ಗತಿ ಏನಾಗಿದೆ ಎಂದು ನೋಡುವುದಾದ ಪಕ್ಷದಲ್ಲಿ ಸರ್ಕಾರದವರು ಒಂದು ಆಜ್ಞೆಯನ್ನೂ ಕೂಡ ಇಲಾಖಾ ಅಧಿಕಾರಿಗಳಿಗೆ ಕೊಟ್ಟಿದ್ದಾರೆ ; ಹಣದ ಅಭಾವ ಇರುವುದರಿಂದ ಹೆಚ್ಚಿನ ಕೆಲಸಗಳನ್ನು ಪ್ರಾರಂಭ ಮಾಡಬಾರದು; ಮಂಜೂರಾತಿ ಕೂಡ ಕೊಡಬಾರದು ಎಂದು ಹೇಳಿ ಒಂದು ಆಜ್ಞೆ ಇವತ್ತೂ ಕೂಡ ಜಾರಿಯಲ್ಲಿದೆ. ಅದನ್ನು ಯಾವಾಗ ಹಿಂತೆಗೆದುಕೊಳ್ಳುತ್ತಾರೆ ಎಂಬುದು ಗೊತ್ತಿಲ್ಲ. ಬಹುಶಃ ಸರ್ಕಾರದ ದೃಷ್ಟಿಕೋಣ ದುಡ್ಡಿನ ಒಂದು ಸಮಸ್ಯೆ. ಎಲ್ಲಿಂದ ಹಣವನ್ನು ಒದಗಿಸುವುದು ಅಂತ ಹೇಳಿ ಅದೇ ಒಂದು ದೊಡ್ಡ ಸಮಸ್ಯೆಯಾಗಿದೆ ಎಂದು ಕಾಣುತ್ತದೆ ಎಂಬುದಾಗಿ ನಾನು ಅಂದುಕೊಂಡಿದ್ದೇನೆ. ಈ ಸಮಸ್ಯೆಯನ್ನು ಎದುರಿಸಲೇಬೇಕು ಎಂದು ಪ್ರಯತ್ನ ಮಾಡುತ್ತಾ ಇದ್ದೇವೆ. ಈ 12 ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಆಗದಿದ್ದರೆ ಅಥವಾ ಅದನ್ನು ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ನಿಧಾನವಾಗಿ ಮಾಡೋಣ ಎಂದು ಹೇಳಿ ನಾವೇನಾದರೂ ತೀರ್ಮಾನ ತೆಗೆದುಕೊಳ್ಳುವುದಾದ ಪಕ್ಷದಲ್ಲಿ ನಮ್ಮ ಸಣ್ಣ ನೀರಾವರಿ ಯೋಜನೆಗಳು ಕಾರ್ಯಗತಗೊಳ್ಳುತ್ತವೆಯೇ ಅಥವಾ ಅದರಿಂದ ಹೆಚ್ಚಿನ ಆಹಾರವನ್ನು ಉತ್ಪಾದನೆ ಮಾಡುವುದಕ್ಕೆ ಆಗುತ್ತದೆಯೇ ಎಂಬ ಶಂಕೆ ನನಗೆ ಬರುತ್ತದೆ. ಅದಕ್ಕೆ ಈಗ ನಾನು ಸರ್ಕಾರದವರಿಗೆ ಸೂಚನೆ ಮಾಡಬಯಸುತ್ತೇನೆ ತಾವು ಒಂದು ಆರ್ಡರ್ ಹೊರಡಿಸಿ ಸಣ್ಣ ನೀರಾವರಿ ಯೋಜನೆಗಳಿಗೆ ಮಂಜೂರಾತಿ ಕೊಡಕೂಡದು ಎಂದು ಏನೊಂದು ನಿರ್ಬಂಧವನ್ನು ಹಾಕಿದ್ದೀರಿ ಅದನ್ನು ವಾಪಸು ತೆಗೆದುಕೊಳ್ಳುವುದು ಬಹಳ ಅವಶ್ಯಕವಾಗಿದೆ. ಅದಕ್ಕೆ ಹಣವನ್ನು ಎಲ್ಲಿಂದ ಒದಗಿಸಬೇಕೆಂದು ತಾವು ಆಲೋಚನೆ ಮಾಡಬೇಕಾದ್ದು ಬಹಳ ಮುಖ್ಯವಾದದ್ದಾಗಿದೆ. ಅದಕ್ಕೆ ನನಗೆ ತೋರಬಹುದಾದ ಒಂದೆರಡು ಸಲಹೆಗಳನ್ನು ಮಾತ್ರ ಈ ಸಭೆಯ ಮುಂದೆ ಮತ್ತು ತಮ್ಮ ಮುಖಾಂತರ ಸರ್ಕಾರದವರಿಗೆ ಸೂಚಿಸಬಯಸುತ್ತೇನೆ.

ಸ್ವಾಮಿ, ಈ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು 17 ಕೋಟಿ ರೂಪಾಯಿಗಳನ್ನು ಸಣ್ಣನೀರಾವರಿಗೆ ಖರ್ಚು ಮಾಡಬೇಕೆಂದು ತಾವು ಆಲೋಚನೆ ಮಾಡಿರುವ ಹಾಗೆ ಕಾಣುತ್ತದೆ ಭಾರಿ ಪ್ರಮಾಣದ ನೀರಾವರಿ ಯೋಜನೆಗಳಲ್ಲೂ ಕೂಡ ನೀವು ಎಷ್ಟುಮಟ್ಟಿನ ಮಿತವ್ಯಯ ಸಾಧನೆ ಮಾಡಬಹುದು ಎಂದು ಆಲೋಚನೆ ಮಾಡಿದರೆ 1974ಕ್ಕೆ ಬಹುಶಃ ಮುಗಿಯುತಕ್ಕ ಕಾವೇರಿ ಅಗ್ರಿಮೆಂಟ್, ಆಂಧ್ರ ಪ್ರದೇಶಕ್ಕೂ ಮತ್ತು ನಮಗೂ ಇರತಕ್ಕ ನೀರಿನ ವಿವಾದಗಳನ್ನು ನೋಡಿದ ಪಕ್ಷದಲ್ಲಿ ಆ ಭಾರಿ ನೀರಾವರಿ ಯೋಜನೆ ಕಾರ್ಯಕ್ರಮಗಳನ್ನೂ ಕೂಡ ಕಡಿಮೆ ಮಾಡತಕ್ಕ ಸ್ಥಿತಿಯಲ್ಲಿ ಇಲ್ಲ. ಎಂದಮೇಲೆ ಹಣವನ್ನು ಯಾವ ರೀತಿ ಒದಗಿಸಬಹುದು ಎಂದರೆ ನನಗೆ ತೋರುವುದು, ಒಂದೇ ಯೋಚನೆ. ನಾವು ವಿದ್ಯುತ್ ಯೋಜನೆಗಳಿಗೆ ಅಪಾರವಾದ ಹಣವನ್ನು ಖರ್ಚು ಮಾಡಬೇಕೆಂದು ಇದ್ದೇವೆ. ಇವತ್ತು ಶರಾವತಿಯಲ್ಲಿ ಎರಡು ಯೂನಿಟ್ಟುಗಳನ್ನು ಮಾತ್ರ—ಅವುಗಳ ಕಾರ್ಯವನ್ನು ಪ್ರಾರಂಭ ಮಾಡಿದ್ದೇವೆ. ಆ ಎರಡು ಯೂನಿಟ್ಟುಗಳನ್ನು ಪ್ರಾರಂಭ ಮಾಡಿದ ಮಾತ್ರಕ್ಕೆ ಇವತ್ತು ನಮ್ಮ ನೆರೆ ಪ್ರಾಂತ್ಯವಾದ ಮದರಾಸಿಗೆ 50 ಸಾವಿರ ಕಿಲೋವಾಟ್ ಕೊಡುವುದಕ್ಕೆ ತಯಾರಾಗಿದ್ದೇವೆ. ತಿರುವಾಂಕೂರಿಗೆ 15 ಸಾವಿರ, ಹಾಗೂ ಆಂಧ್ರಕ್ಕೆ ಐದು ಸಾವಿರ ಕಿಲೋವಾಟ್ ಕೊಡುತ್ತೇವೆ ಎಂದು ಹೇಳುತ್ತಾ ಇದ್ದೇವೆ. ಇನ್ನೂ ಕೂಡ ಎಂಟು ಯೂನಿಟ್ಟುಗಳನ್ನು ಕಾರ್ಯರೂಪಕ್ಕೆ ತರಬೇಕಾಗಿದೆ. ಬಹುಶಃ ಶರಾವತಿಯಿಂದ ಬರುವ ವಿದ್ಯುಚ್ಛಕ್ತಿಯನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕಾದರೆ ಕೈಗಾರಿಕೆಯಲ್ಲಾಗಲಿ, ವ್ಯವಸಾಯದಲ್ಲಾಗಲಿ ಸುಮಾರು ಸಾವಿರಾರು ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಬೇಕಾಗುತ್ತದೆ. ಈ ರೀತಿ ಹೆಚ್ಚಿನ ವಿದ್ಯುತ್ ತಯಾರಾಗಿ ಹೆಚ್ಚು ಹಣವನ್ನು ಖರ್ಚು ಮಾಡಿ ನೆರೆ ಪ್ರಾಂತ್ಯಗಳಿಗೆ ನಾವು ವಿದ್ಯುತ್ತನ್ನು ಮಾರುವುದೇ ಆದ ಪಕ್ಷದಲ್ಲಿ ಆ ಹಣವನ್ನು ಸಣ್ಣ ನೀರಾವರಿ ಯೋಜನೆಗೆ ನಾಲ್ಕನೆಯ ಯೋಜನೆ ಮುಗಿಯುವುದರೊಳಗಾದರೂ ಏಕೆ ಉಪಯೋಗಿಸಿಕೊಳ್ಳಬಾರದು ಎಂಬ ಒಂದು ಸೂಚನೆಯನ್ನು ಸರ್ಕಾರದವರಿಗೆ ಕೊಡುವುದಕ್ಕೆ ಬಯಸುತ್ತೇನೆ.

ಎರಡನೆಯದು, ನೀರಾವರಿ ಬಾವಿಗಳ ವಿಚಾರ. ಇಂದು ತಾನೆ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಅದರ ಪ್ರಕಾರ 40 ಕೋಟಿ ರೂಪಾಯಿಗಳನ್ನು ಬಾವಿ ತೆಗೆಯುವುದಕ್ಕೆ ರೈತರಿಗೆ ಕೊಡಬೇಕೆಂದು ಅಪೇಕ್ಷೆ ಪಟ್ಟಿದ್ದೇವೆ. ಅದನ್ನು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮುಖಾಂತರ ಕೊಡಬೇಕೆಂದು ಅಪೇಕ್ಷೆ ಮಾಡುತ್ತಾ ಇದ್ದೇವೆ ಎಂದು ಸಹಕಾರ ಮಂತ್ರಿಗಳು ಕೊಟ್ಟ ಹೇಳಿಕೆಯನ್ನು ಪತ್ರಿಕೆಯಲ್ಲಿ ನೋಡಿವೆ. ಅದರಲ್ಲೂ ಕೂಡ ಅವರು ಒಂದು ರೀತಿಯ ಸೂಚನೆಯನ್ನು ಕೊಟ್ಟಿದ್ದಾರೆ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಹಣವನ್ನು ಒದಗಿಸತಕ್ಕ ಒಂದು ಏಜೆನ್ಸಿಯಾದರೂ ಕೂಡ ಅರ್ಜಿಗಳನ್ನು ಸ್ಕ್ರುಟಿನೈಸ್ ಮಾಡುವುದು, ಪರಿಶೀಲನೆ ಮಾಡುವುದು ಮತ್ತು ಅದಕ್ಕೆ ಮಂಜೂರಾತಿಯನ್ನು ಕೊಡುವುದನ್ನು ಬಿ.ಡಿ.ಓ., ಅಸಿಸ್ಟೆಂಟ್ ಕಮಿಷನರ್ ಹಾಗೂ ಜಿಲ್ಲಾಧಿಕಾರಿಗಳಿಗೆ ಬಿಟ್ಟಿದೆ ಎಂದು ಹೇಳಿದ್ದಾರೆ. ಬಹುಶಃ ನನಗೆ ಅನಿಸುತ್ತದೆ, ಲ್ಯಾಂಡ್ ಡೆವಲಪ್‌ಮೆಂಟ್ ಇನ್‌ಸ್ಟಿಟ್ಯೂಷನ್‌ಗಳು ಸರಿಯಾಗಿ ಕೆಲಸ ಮಾಡಬೇಕೆಂದು ಹೇಳಿ ಅವುಗಳ ಈ ಒಂದು ಜವಾಬ್ದಾರಿಯನ್ನು ನಿರ್ವಹಿಸಬೇಕೆಂದು ಸರ್ಕಾರದವರ ಸೂಚನೆ ಇರಬೇಕಾದರೆ ಮಧ್ಯ ರೀತಿಯ ಅಧಿಕಾರಿಗಳು ಬಿ.ಡಿ.ಓ., ಆಗಲಿ ಅಸಿಸ್ಟೆಂಟ್ ಕಮಿಷನರ್ ಆಗಲಿ ಏಕೆ ಈ ಒಂದು ಪ್ರಸಂಗಕ್ಕೆ ತಂದಿದ್ದಾರೋ ಎಂದು ಅನಿಸುತ್ತದೆ. ನಮಗೆ ಗೊತ್ತಿದೆ, ಸರಿಯಾದ ಒಂದು ಏಜೆನ್ಸಿ ಮುಖಾಂತರ ಸಾಲ ತೆಗೆದುಕೊಳ್ಳಬೇಕಾದರೆ ಮೂರು ತಿಂಗಳು, ಆರು ತಿಂಗಳು, ಒಂದು ವರ್ಷ ಆಗಿರತಕ್ಕ ಅನೇಕ ಸನ್ನಿವೇಶಗಳು ಇವೆ. ಅವರ ಹೇಳಿಕೆಯಲ್ಲಿ ಅವರು ಏನು ಹೇಳಿದ್ದಾರೆಂದರೆ, ಅರ್ಜಿ ಸರ್ಕಾರಕ್ಕೆ ಬಂದ ಮೇಲೆ ಮೂರು ತಿಂಗಳ ಒಳಗಾಗಿ ಅಥವಾ ಸಾಲ ದೊರೆಯತಕ್ಕದ್ದು, ಇಲ್ಲದೇ ಇರತಕ್ಕದ್ದು ಯಾವುದಾದರೂ ಒಂದು ವಿಚಾರವನ್ನು ಅರ್ಜಿದಾರರಿಗೆ ತಿಳಿಸತಕ್ಕ ವ್ಯವಸ್ಥೆಯನ್ನು ಮಾಡುತ್ತೇವೆ ಎನ್ನತಕ್ಕ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆದರೂ ಸಹ ಅನೇಕ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ಗಳು ಈಗಾಗಲೇ ತಮ್ಮ ಕೆಲಸಗಳನ್ನು ಬಹಳ ಚೆನ್ನಾಗಿ ನಡೆಸಿಕೊಂಡು ಬರುತ್ತಾ ಇರುವುದರಿಂದ, ಅವರಿಗೆ ಈ ಒಂದು ಸಂಪೂರ್ಣ ಜವಾಬ್ದಾರಿಯನ್ನು ವಹಿಸುವುದರಿಂದ ಹೆಚ್ಚಿನ ಒಂದು ರೀತಿಯಲ್ಲಿ ಬಾವಿಗಳನ್ನು ತೆಗೆದುವುದಕ್ಕೆ ಅವಕಾಶವಾಗುತ್ತದೆ ಎಂದು ನಾನು ಅಂದುಕೊಂಡಿದ್ದೇನೆ. ನೀರಾವರಿ ಪಂಪುಗಳನ್ನು ಕೊಡತಕ್ಕ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ನಂಜನಗೂಡಿನಲ್ಲಿ ಪ್ರವಾಸ ಮಾಡತಕ್ಕ ಕಾಲದಲ್ಲಿ ಒಂದು ಲಕ್ಷ ಪಂಪ್ ಸೆಟ್ಟುಗಳನ್ನು ಹಂಚಬೇಕೆಂಬ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ ಎಂದು ಹೇಳಿದರು. ನಿಜವಾಗಿಯೂ ಕೂಡ ಅದು ಬಹಳ ಅವಶ್ಯಕವಾದ ಯೋಜನೆಯಾಗಿದೆ. ಸುಮಾರು ಎರಡು ವರ್ಷಗಳಿಂದ ಒಂದು ಕೋಟಿ ರೂಪಾಯಿಗಳನ್ನು ವಿದ್ಯುತ್ ಬೋರ್ಡಿನವರಿಗೆ ವಹಿಸಿದಾಗಿನಿಂದಲೂ ಈ ಒಂದು ಯೋಜನೆಯನ್ನು ನಡೆಸಿಕೊಂಡು ಬಂದಿದ್ದ ಪಕ್ಷದಲ್ಲಿ ಇವತ್ತು ಈ ಒಂದು ವಿದ್ಯುತ್ತನ್ನು ಬಳಸದೇ ಇರತಕ್ಕ ತೊಂದರೆಯಾಗಲಿ ಅಥವಾ ವಿದ್ಯುತ್ ಬೇಕು ಎನ್ನತಕ್ಕ ಹಾಹಾಕಾರ ಕಡಿಮೆಯಾಗುತ್ತಾ ಇತ್ತು. ಕಳೆದ ವರ್ಷ ಮತ್ತು ಈ ವರ್ಷ ಬಹುಶಃ ವಿದ್ಯುತ್‌ಮಂಡಲಿಯವರು ಹೆಚ್ಚಿನ ಗ್ರಾಂಟನ್ನು ಪಡೆದಿದ್ದಾರೆ. ಈ ವರ್ಷದ ಆಯವ್ಯಯದ ಅಧಿವೇಶನ ನಡೆದು ಆರು ತಿಂಗಳು ಕಾಲ ಕಳೆದಿದ್ದರೂ ಸಹ ಇವತ್ತಿನವರೆಗೂ ಈ ವರ್ಷದ ಗ್ರಾಂಟು ಪಂಪುಸೆಟ್ಟುಗಳಿಗೆ, ಇಲ್ಲಿಯವರೆಗೂ ವಿದ್ಯುತ್ ಮಂಡಲಿಗೆ ದೊರೆತಿಲ್ಲ ಎಂದರೆ ಇಷ್ಟು ನಿಧಾನವಾಗುವುದಕ್ಕೆ ಕಾರಣವೇನು ? ಎಲ್ಲಿ ನಿಧಾನವಾಗಿದೆ ಎಂಬುದನ್ನು ಪರಿಶೀಲನೆ ಮಾಡುವುದು ಬಹಳ ಅತ್ಯಗತ್ಯವಾಗಿದೆ.

ಎರಡನೆಯದಾಗಿ, ಕ್ರಾಷ್ ಪ್ರೋಗ್ರಾಂ ಪ್ರಕಾರ ಕೇಂದ್ರ ಸರ್ಕಾರದವರು ಸುಮಾರು 40 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ಅವರ ಆದೇಶದಂತೆ ಒಂದು ಅಶ್ವ ಶಕ್ತಿ ವಿದ್ಯುತ್ ಬಳಕೆ ಮಾಡತಕ್ಕ ಸಂದರ್ಭದಲ್ಲಿ 600 ರೂಪಾಯಿಗಳಿಗೆ ಕಡಿಮೆ ಖರ್ಚಾಗತಕ್ಕ ಅರ್ಜಿದಾರರಿಗೆ ಪ್ರಾಮುಖ್ಯತೆ ಕೊಡಬೇಕೆಂಬ ಒಂದು ಆದೇಶವನ್ನು ಕೊಟ್ಟು ಅದನ್ನು ವಿದ್ಯುತ್ ಮಂಡಲಿಯವರು ಅನುಸರಿಸುತ್ತಾ ಇರುವಂತೆ ಕಾಣುತ್ತದೆ. ಅದು ನಿಜವಾಗಿಯೂ ಕೂಡ ಒಳ್ಳೆಯದೇ ಕೆಟ್ಟದ್ದೇ ಎಂಬುದನ್ನು ನಾನು ಹೇಳುವುದಿಲ್ಲ. ಮಾನ್ಯ ಸಭೆಯ ಅಧ್ಯಕ್ಷರೂ ಕೂಡ ನಾರ್ಮಲ್ ಮತ್ತು ಕ್ರಾಷ್ ಪ್ರೋಗ್ರಾಂ ಎಂದು ಹಾಕಿಕೊಂಡಿದ್ದಾರೆ. ನಾರ್ಮಲ್ ಪ್ರೋಗ್ರಾಂಗಳಿಗೆ ಅನ್ವಯಿಸುವುದಿಲ್ಲ ಎಂದು ಹೇಳಿದರು. ನನಗೆ ಅನಿಸುತ್ತದೆ ನಾರ್ಮಲ್ ಪ್ರೋಗ್ರಾಂಗೂ ಕ್ರಾಷ್ ಪ್ರೋಗ್ರಾಂಗೂ ಅಂತರ ಇದೆ, ಕ್ರಾಷ್ ಪ್ರೋಗ್ರಾಂ ಕೆಲಸ ಎಷ್ಟು ಆಗಿದೆ ಇವತ್ತು ಎಂದರೆ, ವಿದ್ಯುತ್ ಮಂಡಲಿಯ ಅಂಕಿ-ಅಂಶದ ಪ್ರಕಾರ ಎರಡು ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಹಣ ಈ 600 ರೂಪಾಯಿ ಎಂದು ಅವರು ಏನು ನಿಯಮ ಮಾಡಿದ್ದಾರೆ, ಆ ಕಾರ್ಯಗಳಿಗೇ ಬೇಕಾಗುತ್ತದೆ. ನಮಗೆ ಕೇಂದ್ರ ಸರ್ಕಾರದವರು ಕೊಟ್ಟಿರುವುದಾದರೂ ಕೂಡ 40 ಲಕ್ಷ ರೂಪಾಯಿಗಳು ಬಹುಶಃ ಎರಡು ಕೋಟಿ ರೂಪಾಯಿಗಳು ಬೇಕಾಗಿರತಕ್ಕ ಸಂದರ್ಭದಲ್ಲಿ 40 ಲಕ್ಷ ರೂಪಾಯಿಗಳನ್ನು ಬಳಸಬೇಕಾದರೆ ಅದು ಹೇಗೆ ಸಾಧ್ಯವಾದೀತು ? ಮೆಟೀರಿಯಲ್ಸ್ ಕಡಿಮೆ ಇದೆ, ಕಂಬ ಇಲ್ಲ, ವೈರ್ ಇಲ್ಲ ಎಂದಾಗ ಕೇಂದ್ರದವರು ಕೊಟ್ಟಿರತಕ್ಕ ಹಣವನ್ನು ಖರ್ಚು ಮಾಡುವುದು ಬಹಳ ಅವಶ್ಯಕ ಎಂದರೂ ಕೂಡ, ಅದನ್ನು

(ಶ್ರೀ ಎಂ. ಸಿ. ಬಸಪ್ಪ)

ಖರ್ಚುಮಾಡುವುದಾದರೂ ಹೇಗೆ? ಆದರೂ ಕೂಡ ಇನ್ನೂ 20 ಲಕ್ಷ ರೂಪಾಯಿ ಹೆಚ್ಚಾಗಿ ತೆಗೆದುಕೊಳ್ಳತಕ್ಕ ಅವಕಾಶ ಏಕೆ ಕಳೆದುಕೊಳ್ಳಬೇಕು ಎಂದು ಹೇಳಿ ಅದಕ್ಕೆ ಆದ್ಯತೆ ಕೊಡುತ್ತಾ ಇರುವ ಸಂದರ್ಭದಲ್ಲಿ ನಾರ್ಮಲ್ ಆಗಿ ಮಾಡತಕ್ಕ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವೇ ಇಲ್ಲ.

2–30 P.M.

ಇದನ್ನು ಮುಂದುವರೆಸಿ ಏಪ್ರಿಲ್ ಒಂದರವರೆಗಾದರೂ ಅವಕಾಶ ಕೊಡಬೇಕಾಗುತ್ತದೆ. ಕ್ರಾಷ್ ಪ್ರೋಗ್ರಾಂನಲ್ಲಿ 600 ರೂಪಾಯಿಗಳಿಗಿಂತಲೂ ಕಡಮೆ ಖರ್ಚಿನಲ್ಲಿ ತೆಗೆದುಕೊಳ್ಳುವವರಿಗೆ ಕೊಡಬೇಕಾಗುತ್ತದೆ. ಈ ದಿವಸದ ಪರಿಸ್ಥಿತಿಯಲ್ಲಿ ವಿದ್ಯುತ್ ಮಂಡಲಿಯ ಕಾರ್ಯಕ್ರಮವನ್ನು ಗಮನಿಸಬೇಕಾಗುತ್ತದೆ. 600 ರೂಪಾಯಿಗಳಿಗಿಂತ ಕಡಮೆ ಖರ್ಚು ಆಗುತ್ತದೆಂದು ಈಗಾಗಲೆ ಕೊಟ್ಟಿರುವ ಎಲ್ಲ ಅರ್ಜಿದಾರರಿಗೂ ಈ ವರ್ಷ ಏಕೆ ವಿದ್ಯುತ್ತನ್ನು ಕೊಡಬಾರದು? ಈ ಸಮಯದಲ್ಲಿ ಹಂಚಿಕೆ ವಿಷಯ ಪ್ರಸ್ತಾಪ ಮಾಡುವುದಾದರೆ ನಾನು ಒಂದು ಸಲ ಚೀಫ್ ಎಂಜಿನಿಯರನ್ನು ಭೇಟಿ ಮಾಡಿದಾಗ ಅವರು ತಾವು ಬಂದು ತಾಲ್ಲೂಕುಗಳ ಹಂಚಿಕೆ ಮಾಡುವುದಕ್ಕಾಗುವುದಿಲ್ಲ. ನಾವು ಸರ್ಕಲ್ಲಿಗೆ ಕೊಡುತ್ತೇವೆ, ಸರ್ಕಲ್ಲಿನವರು ಡಿವಿಜನ್ನಿಗೆ ಹಂಚುತ್ತಾರೆ, ಅಲ್ಲಿಂದ ಸಬ್-ಡಿವಿಜನ್ನಿಗೆ ಹಂಚಲ್ಪಡುತ್ತದೆ ಎಂದು ಹೇಳಿದರು. ಆದರೆ ಅಗತ್ಯವೆಲ್ಲಿದೆ, ಎಲ್ಲೆಲ್ಲಿದೆ ಎಷ್ಟು ಬೇಕು ಎಂದು ಕೊಡುವ ಜವಾಬ್ದಾರಿ ಹೊತ್ತಿರುವವರು ಆಗಾಗ್ಗೆ ನೋಡಿ ಹಂಚದೇ ಹೋದರೆ ಹೇಗೆತಾನೆ ಅವಶ್ಯಕತೆ ಪೂರೈಸೀತು?

Mr. SPEAKER.—The allotment to Mysore is Rs. 40 lakhs. But the demand from Mysore State was Rs. 2½ crores what was available for distribution was Rs. 6 crores as against the demand from all other States of 14 crores. This is the tentative first instalment allotted. Much time need not be spent on this. They are very very generous and they are bent upon giving money. Resolution intends to give suggestions to Government so that all schemes can be taken up.

ಶ್ರೀ ಎಂ. ಸಿ. ಬಸಪ್ಪ.—600 ರೂಪಾಯಿಗಳಿಗಿಂತ ಕಡಿಮೆ ಖರ್ಚಾದರೆ ಅದಷ್ಟು ಬೇಗನೆ ವಿದ್ಯುತ್ ಸರಬರಾಯಿ ಮಾಡುವುದು ಬಹಳ ಆವಶ್ಯಕ. ಪಂಪುಸೆಟ್ಟುಗಳ ಸರಬರಾಯಿ ವಿಚಾರದಲ್ಲಿ ಕೇಳಿದರೆ ಅನೇಕ ಸಬ್-ಡಿವಿಜನ್ನುಗಳಲ್ಲಿ ಕಂಬಗಳಿಲ್ಲ ತರಿಸಿ ಹಾಕಬೇಕು ಎಂದು ಹೇಳುವುದು ಗಮನಕ್ಕೆ ಬಂದಿದೆ. ಅದನ್ನು ಮೈಸೂರಿನ ಎಗ್ಸಿಕ್ಯುಟಿವ್ ಎಂಜಿನಿಯರು ಮತ್ತು ಸೂಪರಿಂಟೆಂಡಿಂಗ್ ಎಂಜಿನಿಯರಿಗೆ ಹೇಳಿದಾಗ ತರಿಸಿ ರೀ ಅಲಾಟ್ ಮಾಡಿದ್ದಾರೆ. ಆದರೆ ಆಹಾರದ ಉತ್ಪತ್ತಿಯನ್ನು ಫಾರ್‌ಪುಟಿಂಗ್ ಆಧಾರದ ಮೇಲೆ ಮಾಡಬೇಕೆಂದು ಹೇಳುವಾಗ ವಿದ್ಯುಚ್ಛಕ್ತಿ ಇರಾಜಿ ಕಂಬವಿಲ್ಲವೆಂದು ಸರಬರಾಯಿ ಮಾಡದಿರುವ ನಿದರ್ಶನಗಳಿವೆ. ಈ ದಿವಸ ಕಾಂಕ್ರೀಟ್ ಕಂಬ ತಯಾರಿಸುವುದು 4-5 ಯೂನಿಟ್ ಇರಬಹುದು. ಅದನ್ನು ಜಾಸ್ತಿ ಮಾಡುವುದಕ್ಕೆ ಹಣ ಇರುವುದಿಲ್ಲ. ಈ ಬಗ್ಗೆ ಇಂದೂ ಕೂಡ ಸರಿಯಾದ ಪ್ರಯತ್ನ ಮಾಡಿಲ್ಲ. ಇದ್ದರೆ ಕೊಡುತ್ತೇವೆ, ಇಲ್ಲದಿದ್ದರೆ ಇಲ್ಲ ಎಂದು ಈಗಲೂ ಹೇಳುವುದುಂಟು. ಪರಿಸ್ಥಿತಿ ಗಮನಿಸಿ ಹೆಚ್ಚು ವಿದ್ಯುತ್ತನ್ನು ಒದಗಿಸುವುದು ಆವಶ್ಯಕ.

ಇನ್ನು ಒಂದೇ ಒಂದು ಅಂಶ. ಆಹಾರ ಮಂತ್ರಿಗಳು ವರ್ತಕರಿಗೆ ಎಚ್ಚರಿಕೆ ಕೊಡುವುದು ಮತ್ತು ಸಾಧ್ಯವಾದಷ್ಟು ಸಹಕಾರ ಸಂಘಗಳ ಮೂಲಕ ಹಂಚಲು ಏರ್ಪಾಡು ಮಾಡುವುದು ಮುಂತಾದ್ದಕ್ಕೆ ಗಮನ ಕೊಡುತ್ತಿದ್ದಾರೆ. ಆದರೆ ಅನೇಕ ಸಹಕಾರ ಸಂಘಗಳಲ್ಲಿ ಏನೊಂದು ಮನೋಭಾವವಿದೆ ಎಂಬುದನ್ನು ಸರಕಾರದ ಗಮನಕ್ಕೆ ತರುತ್ತೇನೆ. ಮೈಸೂರು ಜಿಲ್ಲೆಯ ಆಹಾರ ಸಮಿತಿಗೆ ಡೆಪ್ಯುಟಿ ಕಮೀಷನರು ಅಧ್ಯಕ್ಷರಾಗಿದ್ದಾರೆ. ಎರಡು ಮೂರು ಸಂಘಗಳು ಬತ್ತವನ್ನು ಸರಕಾರ ನಿಗದಿ ಮಾಡಿರುವ ದರದಂತೆ ಮಾರಿರುವುದಿಲ್ಲ, ಸರಕಾರ ಗೊತ್ತುಮಾಡಿರುವ ದರದಲ್ಲಿ ಶೇಖರಣೆ ಮಾಡಿ ಒಂದು ಸಾವಿರ ಕ್ವಿಂಟಾಲನ್ನು ಮಾರಾಟ ಮಾಡಬೇಕೆಂದು ಜಿಲ್ಲಾಧಿಕಾರಿಗಳು ಹೇಳಿದಾಗ ಅದನ್ನು ಉಲ್ಲಂಘನೆ ಮಾಡಿದರು. ಆ ವಿಚಾರವನ್ನು ಜಿಲ್ಲಾಧಿಕಾರಿಗಳಿಗೆ ತಿಳಿಸಿದೆ. ನಂತರ ಆ ಬಗ್ಗೆ ಏನು ಕಾರ್ಯಕ್ರಮ ಕೈಕೊಂಡಿರಿ ಎಂದು ಕೇಳಲು ಅವರು ಆ ರೀತಿ ನಡೆದಿರುವುದು ನಿಜ, ಇರುವ ಅಂಶವನ್ನು ಸರ್ಕಾರಕ್ಕೆ ವರದಿ ಮಾಡಿದ್ದೇನೆ ಎಂದು ಹೇಳಿದರು. ಕಾನೂನು ನೋಡಿ

ದರೆ ಡೆಪ್ಯುಟಿ ಕಮಿಷನರಿಗೆ ಎಷ್ಟೋ ಅಧಿಕಾರವಿದೆ, 40 ಕ್ವಿಂಟಾಲಗಿಂತ ಹೆಚ್ಚು ಬತ್ತವಿದ್ದರೆ ಅದನ್ನು ಡಿಕ್ಲೇರ್ ಮಾಡದಿದ್ದರೆ ವಶಪಡಿಸಿಕೊಂಡು ಹಂಚಿಕೆ ಮಾಡುವುದಕ್ಕೆ ಅವರಿಗೆ ಅಧಿಕಾರವಿದರೂ, ಅದನ್ನು ಅವರು ಚಲಾಯಿಸಿರುವುದಿಲ್ಲ.

Mr. SPEAKER.—There is still a large number of members to speak. I am settling the agenda for tomorrow. Should I include the Question Hour in it ?

(The House was of the opinion that the Question Hour might be dropped as there were many members to speak),

Mr. SPEAKER.—So, the Question Hour will be dropped.

ಶ್ರೀ ಜೆ. ದೇವಯ್ಯ (ಮಂಡ್ಯ).—ಸಭಾಪತಿಯವರೇ, ತಾವು ಆಹಾರದ ವಿಷಯದಲ್ಲಿ ಮಾತ ನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ನನ್ನ ವಂದನೆಗಳನ್ನರ್ಪಿಸುತ್ತಾ ಎರಡು ಮೂರು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ನಿಂತಿದ್ದೇನೆ. ಮಂಡ್ಯ ಜಿಲ್ಲೆಯಲ್ಲಿ ಸರ್ಕಾರ ದವರು ಪ್ಯಾಕೇಜ್ ಯೋಜನೆಯನ್ನು ಜಾರಿಗೆ ಕೊಟ್ಟಿದ್ದಾರೆ. ಅದರಿಂದ ರೈತರು ಕೆಲವು ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಅನುಕೂಲವಾಗಿದೆ. ಅದರಿಂದ ಅನೇಕ ಸಾಲಸೋಲ ಸಿಕ್ಕುತ್ತಿದೆ. ಈ ವರ್ಷ ನಮಗೆ ಬೂದಿ ದೊರೆತಿಲ್ಲ. ಸಕಾಲದಲ್ಲಿ ಯಾವ ಗೊಬ್ಬರ ಹಾಕಬೇಕೋ ಅದು ದೊರೆಯ ದಿದ್ದರೆ ಪೈರಿಗೆ ತೊಂದರೆಯಾಗುತ್ತದೆ. ಕಾವೇರಿ ನದಿಯ ನೀರಿನಿಂದ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಬತ್ತ ಬೆಳೆಯಲು ಅವಕಾಶವಾಗಿದೆ. ಆದರೆ ಕಾವೇರಿ ನದಿಗೆ ಮೇಲೆ ಅಣೆ ಕಟ್ಟುವಾಗ ಕೆಳಗಿರುವ ರೈತರಿಗೆ ನೀರಿಗೆ ತೊಂದರೆಯಾಗಬಹುದೆಂದು ನಮ್ಮ ಮಂತ್ರಿಗಳಿಗೆ ಅನೇಕ ಸಲ ಹೇಳಿ ದ್ದೇನೆ. ಈ ವರ್ಷ 110 ಅಡಿ ಮಾತ್ರ ನೀರಿದೆ ಎಂದು ಎಂಜಿನಿಯರಿಂಗ್ ಇಲಾಖೆಯವರು ಹೇಳುತ್ತಿ ದ್ದಾರೆ. ಆದರೆ ಮಂಡ್ಯ ಮತ್ತು ಪಾಂಡವಪುರದಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಬೆಳೆಯಲು ಈ ನೀರು ಸಾಲದೆ ಕಬ್ಬು ಒಣಗಿ ತೊಂದರೆಯಾಗುತ್ತದೆ. ಬತ್ತದ ಬೆಳೆಯಲ್ಲಿ ಎರಡು ರೀತಿ ಇದೆ. ಕಾವೇರಿ ನೀರನ್ನುಪಯೋಗಿಸಿ ಬೆಳೆಯುವುದು ಒಂದು, ವಿಶ್ವೇಶ್ವರಯ್ಯ ನಾಲೆ ಕೆಳಗೆ ಬೆಳೆಯುವುದು ಇನ್ನೊಂದು. ಆದರೆ ವಿಶ್ವೇಶ್ವರಯ್ಯ ನಾಲೆಯಿಂದ ಬರುವ ನೀರಿನಲ್ಲೂ ಮೂರು ದಿವಸ ಮಾತ್ರ ನೀರು ಕೊಡುತ್ತಾರೆ. ಒಂದು ವಾರಕ್ಕೆ 3 ದಿವಸ ಮಾತ್ರ ನೀರು ಕೊಟ್ಟರೆ ಎಷ್ಟು ತೊಂದರೆಯಾಗುತ್ತದೆ. ಎಂಬುದನ್ನು ಯೋಚನೆ ಮಾಡಬೇಕು.

ಇನ್ನೊಂದು ವಿಚಾರ. ಒಂದು ಎಕರೆಗೆ ಇಷ್ಟು ಬತ್ತ ಕೊಡಬೇಕೆಂದು ನಿಗದಿ ಮಾಡಿದ್ದಾರೆ. ಅದರ ಮೇಲೆ ತಕರಾರು ಮಾಡುವುದಿಲ್ಲ. ಇಂಥ ದರಿದ್ರ ಕಾಲದಲ್ಲಿ ಜನರಿಗೆ ಬೆಳೆದುದನ್ನು ಸರಬ ರಾಯಿ ಮಾಡಬೇಕಾದ್ದು ಧರ್ಮ. ಆದರೆ ನಮ್ಮ ಆಹಾರ ಮಂತ್ರಿಗಳು 15 ದಿನಗಳಿಗೊಂದು ಸಲ 40 ಕ್ವಿಂಟಾಲಿನ ಮೇಲೆ ಬತ್ತ ಇದ್ದರೆ ಲೆಕ್ಕ ಕೊಡಬೇಕೆಂದು ಹೇಳುತ್ತಾರೆ. ಅವಿದ್ಯಾವಂತನಾದ ರೈತನಿಗೆ ಹೀಗೆ ಪದೇ ಪದೇ ಲೆಕ್ಕ ಕೊಡುವುದು ಎಷ್ಟು ಕಷ್ಟವೆಂಬುದನ್ನು ಯೋಚನೆ ಮಾಡಿ ಶ್ರೀಮಾನ್ ಜತ್ತಿಯವರು ರಿಯಾಯಿತಿ ತೋರಿಸಬೇಕು. ಕೆಲವರು ಲೆಕ್ಕ ಕೊಡದೆ ಈಗಾಗಲೆ ಕೇಸಿಗೆ ಸಿಕ್ಕಿ ಕೊಂಡಿದ್ದಾರೆ. ಈಗ ಹಳೆಯ ಕೇಸುಗಳನ್ನು ವಾಪಸು ತೆಗೆದುಕೊಂಡು ಮುಂದೆ ನಿಗದಿ ಮಾಡಿರು ವಂತೆ ವಸೂಲು ಮಾಡಬಹುದು.

ಮಂಡ್ಯ ಜಿಲ್ಲೆಯಲ್ಲಿ ಪ್ಯಾಕೇಜ್ ಸ್ಕೀಂನಿಂದ ಸೊಸೈಟಿಗಳು ಬಹಳ ಚೆನ್ನಾಗಿ ನಡೆಯುತ್ತಿವೆ. ಯಾವ ರೀತಿ ಚೆನ್ನಾಗಿ ನಡೆಯುತ್ತಿವೆ, ಎಂದರೆ, ಅವನ್ನು ನಡೆಸುವ ಕ್ರಮದಲ್ಲಿ ಚೆನ್ನಾಗಿ ನಡೆಯುತ್ತಿಲ್ಲ. ಆದರೆ ಸರ್ಕಾರದವರು ಕೊಟ್ಟಿರುವ ದುಡ್ಡಿನಲ್ಲಿ ಚೆನ್ನಾಗಿ ನಡೆಯುತ್ತಿದೆ. ಅದರಲ್ಲಿ ಸೇಕಡ ಇಷ್ಟು ಕಮಿಷನ್ ಬರಬೇಕು ಎಂದು ಇದೆ. ಎಷ್ಟು ಲಾಭ ಬಂದರೂ ಕೂಡ ಷೇರು ದಾರರಿಗೆ ನೂರಕ್ಕೆ ಆರೂಕಾಲು ಪ್ರಕಾರ ಡಿವಿಡೆಂಟ್ ಕೊಡುವುದು ಎಂದು ಇದೆ. ಈಗ ಆಹಾರವನ್ನು ಕೊಂಡು ಮಾರುವ ಯೋಜನೆಯಿಂದ ಲಕ್ಷಾಂತರ ರೂಪಾಯಿ ವ್ಯಾಪಾರವಾಗುತ್ತಿರುವುದರಿಂದ ಹೆಚ್ಚು ಹಣ ಸಹಕಾರ ಸಂಘಗಳಲ್ಲಿ ಲಾಭ ಬರುತ್ತಿದೆ. ಇದರಿಂದ ವ್ಯವಸಾಯಗಾರನಿಗೆ ಯಾವ ಅನುಕೂಲವೂ ಆಗುತ್ತಿಲ್ಲ. ನೂರಕ್ಕೆ ಆರೂಕಾಲರಂತೆ ಮಾತ್ರ ಡಿವಿಡೆಂಡ್ ಕೊಟ್ಟು ಉಳಿದುದನ್ನು ಸೊಸೈಟಿ ಕಟ್ಟಡವನ್ನು ಕಟ್ಟುವುದಕ್ಕೆ, ಲಾರಿ ತೆಗೆದುಕೊಳ್ಳುವುದಕ್ಕೆ, ಕಾರು ತೆಗೆದುಕೊಳ್ಳುವುದಕ್ಕೆ, ಜೀಪ್ ತೆಗೆದುಕೊಳ್ಳುವುದಕ್ಕೆ, ವ್ಯಾನುಗಳನ್ನು ತೆಗೆದುಕೊಳ್ಳುವುದಕ್ಕೆ ಉಪಯೋಗಿಸುತ್ತಾರೆ. ಸದ್ಯಕ್ಕೆ ಇಂಥ ವೆಚ್ಚಗಳನ್ನು ತಪ್ಪಿಸಿ ವ್ಯವಸಾಯಗಾರನಿಗೆ ಬೇಕಾದ ಸಹಾಯವನ್ನು ಮಾಡುವ ವ್ಯವಸ್ಥೆ ಮಾಡಬೇಕು ಕೆಲವು ಕೆಲಸಗಳಿಗೆ ಸರ್ಕಾರದಿಂದ ಸಾಲ ಸಿಕ್ಕುತ್ತದೆ. ಸಾಲ ಸಿಕ್ಕಿದರೆ ಕಳ್ಳತನ ಏಕೆ ಮಾಡಬೇಕು ಎನ್ನುವ ಗಾದೆ ಇದೆ. ಪ್ಯಾಕೇಜ್ ಸ್ಕೀಂನಲ್ಲಿ ಸಾಲವನ್ನು ಕೊಡುತ್ತಾರೆ.

(ಶ್ರೀ ಜೆ. ದೇವಯ್ಯ)

ಆದರೆ ವ್ಯವಸಾಯಗಾರರಿಗೆ ಯಾವ ತರಹದ್ದೂ ಗ್ರ್ಯಾಂಟ್ ಕೊಡುತ್ತಿಲ್ಲ. ಸಹಕಾರ ಸಂಘಗಳಲ್ಲಿ ಉತ್ಪತ್ತಿಯಾಗತಕ್ಕ ಹಣದಲ್ಲಿ ಕೆಲವು ಭಾಗವನ್ನು ಗ್ರ್ಯಾಂಟ್ ರೂಪದಲ್ಲಿ ರೈತರಿಗೆ ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಅದರಿಂದ ಗೊಬ್ಬರ ವಗೈರೆ ಕೊಂಡುಕೊಳ್ಳುವುದಕ್ಕಾಗುವುದಿಲ್ಲ. ಈಗ ಮಳೆ ಇಲ್ಲದೆ ಇರುವುದರಿಂದ ಬತ್ತಕ್ಕೆ ಹುಳು ಬರುತ್ತಿದೆ. ಅದನ್ನು ನಾಶ ಮಾಡಲು ಒಂದು ಎಕರೆಗೆ 10 ರೂಪಾಯಿ ಖರ್ಚಾಗುತ್ತದೆ. ಇದನ್ನಾದರೂ ಸರ್ಕಾರ ಗ್ರ್ಯಾಂಟ್ ರೂಪದಲ್ಲಿ ಕೊಡಬೇಕು. ರೈತರಿಗೆ ಎಷ್ಟು ಕಷ್ಟವಿದೆ ಎನ್ನುವುದನ್ನು ಸರ್ಕಾರ ಮನಗಾಣಬೇಕು. ಈಗ ರೂಪಾಯಿಗೆ ಒಂದು ಸೇರು ಹುರುಳಿ ಮೂರು ಪಾವು ಬೇಳೆ ಆಗಿದೆ. ಹತ್ತಿ ಬೀಜ, ಹಿಂಡಿ ತೆಗೆದುಕೊಳ್ಳಬೇಕಾದರೆ ಏನು ಖರ್ಚಾಗುತ್ತದೆ ಎನ್ನುವುದನ್ನು ತಾವು ಯೋಚನೆ ಮಾಡಬೇಕು. ಇದನ್ನೆಲ್ಲ ಗಮನಕ್ಕೆ ತೆಗೆದುಕೊಂಡು ರೈತರಿಗೆ ಸರ್ಕಾರ ಯಾವ ವಿಧದಲ್ಲಾದರೂ ಸಹಾಯ ಮಾಡಿ ಹೆಚ್ಚು ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಆಹಾರ ಮಂತ್ರಿಗಳು ಬತ್ತದ ಧಾರಣೆಯನ್ನು ನಿಷ್ಕರ್ಷೆ ಮಾಡಿದ್ದಾರೆ. ಹೋದ ವರ್ಷಕ್ಕಿಂತ ಈ ಬೆಲೆ ಒಂದೆರಡು ರೂಪಾಯಿ ಕಡಮೆಯಾಗುತ್ತದೆ. ಈ ಬೆಲೆಯನ್ನು ಹೆಚ್ಚು ಮಾಡಬೇಕೆಂದು ಹೇಳುತ್ತೇನೆ.

ಪಂಪ್‌ಸೆಟ್‌ಗಳ ವಿಷಯ ಹೇಳಬೇಕಾದರೆ ಮಂಡ್ಯ ತಾಲ್ಲೂಕು ಬಸರಾಳು ಹೋಬಳಿ ನಾಗಮಂಗಲ ತಾಲ್ಲೂಕಿನ ಸರಹದ್ದಿನಲ್ಲಿದೆ. ಒಂದು ಊರಿಗೆ ಪಂಪ್‌ಸೆಟ್ ಕೊಟ್ಟಿದ್ದಾರೆ.—ಈಗ ಎರಡು ವರ್ಷದಲ್ಲಿ ಕಂಬಗಳನ್ನು ನೆಟ್ಟಿದ್ದಾರೆ, ಸ್ವಲ್ಪ ದೂರ ತಂತಿ ಎಳೆದಿದ್ದಾರೆ. ಒಂದೆರಡು ಫರ್ಲಾಂಗ್ ದೂರ ತಂತಿ ಹಾಕಲಿಲ್ಲ. ಎರಡು ಮೂರು ಜನ ವಿದ್ಯುತ್ತನ್ನು ತೆಗೆದುಕೊಳ್ಳಲು ಕಾದು ಕುಳಿತಿದ್ದಾರೆ.

ಶ್ರೀ ಎಸ್. ನಿಜಲಿಂಗಪ್ಪ.—ಎಂಟು ಹತ್ತು ಜನ ಸೇರಿದರೆ ಒಂದು ವಾರದಲ್ಲಿ ಕೆಲಸ ಮಾಡಿಸುತ್ತೇನೆ.

ಶ್ರೀ ಜೆ. ದೇವಯ್ಯ.—ಬಸರಾಳು ಹೋಬಳಿ ಬಾಲೇನಹಳ್ಳಿಯಲ್ಲಿ ಇಬ್ಬರು ಮೂವರು ಪಂಪ್‌ಸೆಟ್‌ಗಾಗಿ ಕಾದಿದ್ದಾರೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಕೃಪೆ ತೆಗೆದುಕೊಳ್ಳಬೇಕು. ಈ ಗ್ರಾಮದಿಂದ ಮುಂದಕ್ಕೆ ಅನೇಕ ಜನ ಬಾವಿ ತೆಗೆದುಕೊಂಡು ವಿದ್ಯುಚ್ಛಕ್ತಿಗಾಗಿ ಕಾಯುತ್ತಿದ್ದಾರೆ. ಒಂದು ಫರ್ಲಾಂಗ್ ದೂರ ತಂತಿ ಎಳೆಯಲು ಎರಡು ವರ್ಷದಿಂದ ಕೇಳುತ್ತಿದ್ದರೂ ಇನ್ನೂ ಮಾಡಿಲ್ಲ. ಇದು ವಿಶ್ವೇಶ್ವರಯ್ಯ ನಾಲಾ ಪ್ರದೇಶದಲ್ಲಿ ಬರುವುದಿಲ್ಲ.

ಮಂಡ್ಯ ಸಕ್ಕರೆ ಕಾರ್ಖಾನೆಗೆ ಮೂರು ಕೋಟಿ ರೂಪಾಯಿ ಸಾಲವಾಗಿದೆ. ಸಕ್ಕರೆ ತಯಾರು ಮಾಡಲು ಹೊಸ ಕಾರ್ಖಾನೆಗಳಿಗೆ ಲೈಸೆನ್ಸ್ ಕೊಡುತ್ತಿದ್ದಾರೆ. ಬೆಲ್ಲದ ದರ ಹೋದ ವರ್ಷದಿಂದ ಕಡಮೆಯಾಗಿ ರೈತರು ಬಹಳ ನಷ್ಟ ಹೊಂದುತ್ತಿದ್ದಾರೆ. ಈಗ ಕೃಷ್ಣರಾಜಸಾಗರದಲ್ಲಿ ನೀರು ಕಡಮೆ ಇರುವುದರಿಂದ ಜನವರಿ ತಿಂಗಳವರೆಗೂ ಕಬ್ಬಿಗೆ ನೀರನ್ನು ಕೊಡುವುದಕ್ಕೆ ಆಗದೆ ಇರಬಹುದು. ಹೀಗಾದರೆ ಕಬ್ಬು ಒಣಗಿಹೋಗಿ ಜನರೆಲ್ಲ ಪಾಪರಾಗುತ್ತಾರೆ. ಇಂಥ ಕಡೆಗಳಿಗೆ ಪಂಪ್‌ಸೆಟ್‌ಗಳನ್ನಾದರೂ ಕೊಟ್ಟು ಕಬ್ಬಿನ ಬೆಳೆಯನ್ನು ಉಳಿಸಬೇಕು ಇಲ್ಲದೆ ಇದ್ದರೆ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತದೆ. ಅದಕ್ಕೋಸ್ಕರ ಹಂಗಾಮಿಯಾಗಿ ಪಂಪ್‌ಸೆಟ್‌ಗಳನ್ನು ಈ ಪ್ರದೇಶಕ್ಕೆ ಕೊಟ್ಟು ಕಬ್ಬನ್ನು ಉಳಿಸಿಕೊಡಬೇಕು ಎಂದು ಹೇಳುತ್ತೇನೆ.

ಮಂಡ್ಯ ಕಾರ್ಖಾನೆಯವರು ಸಾಲ ಎತ್ತಿದ್ದಾರೆ. ಡಿಸ್ಟ್ರಿಕ್ಟ್ ಬ್ಯಾಂಕಿನಿಂದ 50 ಲಕ್ಷ ರೂಪಾಯಿಗಳನ್ನು ಸಾಲವಾಗಿ ಪಡೆದು, ಒಂದು ಸೊಸೈಟಿ ಎಂದು ಮಾಡಿಕೊಂಡು ಅಲ್ಲಿ ಹಣ ಪಾವತಿ ಮಾಡುವ ಅವಕಾಶವನ್ನು ಮಾಡಿಕೊಂಡಿದ್ದಾರೆ. ಏತಕ್ಕಾಗಿ ಮೂರು ಕೋಟಿ ರೂಪಾಯಿ ಸಾಲವಾಯಿತು, ಅದಕ್ಕೆ ಕಾರಣವೇನು ಎನ್ನುವುದನ್ನು ಸರ್ಕಾರದವರು ಗಮನಿಸಬೇಕು. ಎರಡು ಕೋಟಿ ಜನ ಸಂಖ್ಯೆಯಲ್ಲಿ ನಾವೂ ನಿಮ್ಮ ಶಿಷ್ಯರೇ. ನಿಮ್ಮ ಪಕ್ಷದ ಶಿಷ್ಯರು ಮಾತ್ರ ಹೇಳಿದರೆ ಅದನ್ನು ನಿಜ ಎಂದು ನಂಬಿ ಅದರಂತೆ ಮಾಡಬಾರದು. ಕಾರ್ಖಾನೆಗೆ ಮೂರು ಕೋಟಿ ರೂಪಾಯಿ ಸಾಲ ಏಕೆ ಆಯಿತು, ಕಾರ್ಖಾನೆ ಉಳಿಯುತ್ತದೆಯೇ ? ಡಿಸ್ಟ್ರಿಕ್ಟ್ ಬ್ಯಾಂಕಿನಿಂದ ಸಾಲ ತೆಗೆದು ಸೊಸೈಟಿಯ ಮುಖಾಂತರ ಹಣ ಪಾವತಿ ಮಾಡುತ್ತಿದ್ದಾರೆ. ಸಕ್ಕರೆ ಕಾರ್ಖಾನೆಯಿಂದ ನೇರವಾಗಿ ಪಾವತಿಯಾಗುತ್ತಿದುದನ್ನು ಏಕೆ ನಿಲ್ಲಿಸಿದರು ? ಒಂದು ವೇಳೆ ಮಂಡ್ಯ ಕಾರ್ಖಾನೆ ಹೋದರೆ ಎಷ್ಟು ಕೋಟಿ ರೂಪಾಯಿ ನಷ್ಟವಾಗುತ್ತದೆ, ರೈತರಿಗೂ ಎಷ್ಟು ನಷ್ಟವಾಗುತ್ತದೆ ಎನ್ನುವುದನ್ನು ಮಾನ್ಯ ಮುಖ್ಯ ಮಂತ್ರಿಗಳು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಬಸರಾಳು ಹೋಬಳಿಯ ಒಂದು ಕೆರೆ ವಿಚಾರವನ್ನು ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಹೇಳಿಕೊಂಡೆ. ಎರಡು ವರ್ಷವಾದರೂ ಅದನ್ನು ಮಾಡಿಸಿಕೊಟ್ಟಿಲ್ಲ. ಇದು ನಾಗಮಂಗಲ ತಾಲ್ಲೂಕಿನ ಸರಹದ್ದಿನಲ್ಲಿದೆ. ಈ ಕೆರೆಯ ಕೆಲಸವನ್ನು ಜನಗಳಿಗೋಸ್ಕರ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಈಚೆಗೆ ಬಳಕೆದಾರರ ಸೊಸೈಟಿ ಎಂದು ಮಾಡಿದರು. ಇದನ್ನು ಪ್ರಾರಂಭಮಾಡಿದ ಆರೇಳು ತಿಂಗಳಿನಲ್ಲಿಯೇ ಒಂದು ಜೀಪು ತೆಗೆದುಕೊಂಡರು. ಅದರಿಂದ ಏನು ಕೆಲಸವಾಗಬೇಕಾಗಿದೆ? ಸೊಸೈಟಿಯಿಂದ ಬರತಕ್ಕ ಉತ್ಪನ್ನವನ್ನು ರೈತರಿಗೆ ಕೊಟ್ಟು ಹೆಚ್ಚು ಬೆಳೆ ಬೆಳೆಯಿರಿ ಎಂದು ಹೇಳಿ ಬತ್ತದ ಬೆಳೆಗೆ ಅಥವಾ ಇನ್ನು ಯಾವುದಾದರೂ ಬೆಳೆ ತೆಗೆಯಲು ಸಹಾಯ ಮಾಡಬಹುದು.

ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತ ವರ್ತಕರು ಅನ್ಯಾಯ ಮಾಡುತ್ತಾರೆಂದು ಅನೇಕ ಸಲ ಹೇಳಿದರು. ಆದರೆ ಅದೇ ಪ್ರಕಾರವಾಗಿ ಸೊಸೈಟಿಯವರೂ ಅನ್ಯಾಯ ಮಾಡುತ್ತಿದ್ದಾರೆ. ಸೊಸೈಟಿಯ ಅಧಿಕಾರವನ್ನು ನಡೆಸಲು ಬಂದ ಮೇಲೆ ಅದನ್ನು ನಡೆಸುವವರು ಯಾವ ಯಾವ ರೀತಿ ಮುಂದೆ ಬಂದಿದ್ದಾರೆ, ಏನೇನು ಮಾಡಿದ್ದಾರೆ ಎನ್ನುವುದನ್ನೆಲ್ಲ ಪರಿಶೀಲಿಸಬೇಕು. ವರ್ತಕರ ವಿಷಯವನ್ನು ಹೇಳುವಾಗ ಮಾನ್ಯ ಮಂತ್ರಿಯವರು ಎಲ್ಲವನ್ನೂ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಬೆಂಗಳೂರು ನಗರದಲ್ಲಿ ಹೋದ ವರ್ಷ ಸಾವಿರಾರು ದನಗಳು ಸತ್ತು ಹೋದುವು. ದನಗಳನ್ನು ಕಳೆದುಕೊಂಡವರಿಗೆ ಸಾಲದ ರೂಪದಲ್ಲಾಗಲೀ, ಗ್ರಾಂಟ್ ರೂಪದಲ್ಲಾಗಲೀ ಇದುವರೆಗೂ ಸಹಾಯ ಮಾಡಿಲ್ಲ. ಬೆಂಗಳೂರು ನಗರದಲ್ಲಿ ಹುಲ್ಲಿಗೆ ಬೇಕಾದಷ್ಟು ಅಭಾವವಿದೆ. ಶ್ರೀಮಾನ್ ಕೃಷ್ಣಪ್ಪನವರು ಹೊರದೇಶಗಳಿಗೆ ಹೋಗಿ ಅಲ್ಲಿನ ರೀತಿ ನೀತಿಗಳನ್ನು ನೋಡಿಕೊಂಡು ಬಂದಿದ್ದಾರೆ. ಅಲ್ಲೆಲ್ಲ ಚೆನ್ನಾಗಿ ಹುಲ್ಲು ಸಿಕ್ಕುತ್ತದೆ. ಹೊರದೇಶಗಳಿಂದಲಾದರೂ ಹುಲ್ಲನ್ನು ತರಿಸಿ ಬೆಂಗಳೂರು ನಗರಕ್ಕೆ ಸರಬರಾಜು ಮಾಡಬೇಕೆಂದು ಸೂಚಿಸುತ್ತೇನೆ. ಈಗ ಒಂದು ಚಿಕ್ಕ ಗಾಡಿ ಹುಲ್ಲಿಗೆ 100 ರಿಂದ 125 ರೂಪಾಯಿ ಬೆಲೆ ಆಗುವಾಗ ಈ ಬೆಲೆಯಲ್ಲಿ ಯಾರುತಾನೇ ದನಗಳನ್ನು ಸಾಕುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ನೋಡಬೇಕು.

ಡಿಸೆಂಬರ್ ತಿಂಗಳಿನಲ್ಲಿ ನಮ್ಮ ಯೋಧರಿಗೋಸ್ಕರ ಎರಡು ಕ್ವಿಂಟಾಲ್ ಅಕ್ಕಿಯನ್ನು ಕೊಡುತ್ತೇನೆ, ನಮ್ಮ ನಾಯಕರು ಅದನ್ನು ಪ್ರಧಾನಿಗಳಿಗೆ ತಲುಪಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ. ಬಿ. ಎಲ್. ಗೌಡ (ಚಳ್ಳಕೆರೆ).—ಮಾನ್ಯ ಸಭಾಪತಿಗಳೇ, ಪ್ರಥಮವಾಗಿ ಮಾನ್ಯ ಶ್ರೀಮಾನ್ ಸಿದ್ದಯ್ಯನವರು ಇಂತಹ ಒಂದು ನಿರ್ಣಯವನ್ನು ತಂದು ವ್ಯವಸಾಯಗಾರರ ಮತ್ತು ಅಧಿಕ ಆಹಾರೋತ್ಪಾದನೆಯ ಬಗ್ಗೆ ಈ ಸಭೆಯ ಗಮನವನ್ನು ಸೆಳೆಯಲು ನನಗೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರನ್ನು ನಾನು ವಂದಿಸುತ್ತೇನೆ. ನಾನು ಚಿತ್ರದುರ್ಗ ಜಿಲ್ಲೆಯಿಂದ ಬಂದಿರುವವನು. ತಮಗೆ ತಿಳಿದಿರುವಹಾಗೆ ಪದೇ ಪದೇ ನಮ್ಮ ಜಿಲ್ಲೆ ಆಹಾರಭಾವಕ್ಕೆ ತುತ್ತಾಗುತ್ತಲೇ ಇರುತ್ತದೆ. ಬಹುಶಃ ಮಳೆ ಬಂದು ಫಸಲು ಆಗುವುದೇ ಅಪರೂಪ. ನಮ್ಮ ತಾಲ್ಲೂಕಿನಲ್ಲಿ ಯಾವಾಗಲೂ ಇರತಕ್ಕ ಪರಿಸ್ಥಿತಿ ಹೀಗಿದೆ. ಹೋದವರ್ಷ ದೇವರು ಕಣ್ಣುಬಿಟ್ಟು ನೋಡಿದ್ದರಿಂದ ಮಳೆ ಬೆಳೆ ಸ್ವಲ್ಪಮಟ್ಟಿಗೆ ಆಯಿತು. ಆದರೆ ಈ ವರ್ಷ ನಮ್ಮ ಜಿಲ್ಲೆಯ ಅನೇಕ ಭಾಗಗಳಲ್ಲಿ ಬಿತ್ತೇ ಇಲ್ಲ. ಮಳೆ ಒಂದು ಹನಿಯೂ ಬೀಳಲಿಲ್ಲವೆಂದು ಹೇಳಿದರೆ ಅದೇನು ಉತ್ಪ್ರೇಕ್ಷೆಯಾಗಲಾರದು. ಇಂತಹ ಕಠಿಣ ಪರಿಸ್ಥಿತಿ ಇರುವಾಗ ಸರ್ಕಾರದವರು ಸೂಕ್ತ ಕ್ರಮವನ್ನು ಕೂಡಲೇ ಕೈಗೊಳ್ಳಬೇಕು. ಏನೇನು ಕ್ರಮಗಳನ್ನು ಸರ್ಕಾರದವರು ಇಂತಹ ಪರಿಸ್ಥಿತಿ ಮುಂದೆ ಎಂದೂ ಬಾರದೇ ಇರುವುದಕ್ಕೆ ತೆಗೆದುಕೊಳ್ಳಬೇಕೆಂಬ ಬಗ್ಗೆ ಈಗಾಗಲೇ ಅನೇಕ ಸಾರಿ ಈ ಮಾನ್ಯ ಸಭೆಯ ಸದಸ್ಯರನೇಕರು ಈ ಸಭೆಯಲ್ಲಿಯೇ ಪ್ರಸ್ತಾಪ ಮಾಡಿದ್ದಾರೆ. ಆ ಪ್ರಕಾರ ಸರ್ಕಾರದವರೂ ಸಹ ಅನೇಕ ಶಿಫಾರಸ್ಸುಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದಾರೆ. ಆದರೆ ಇವತ್ತಿನವರೆಗೂ ಯಾವುದೂ ಜಾರಿಗೆ ಬಂದ ಹಾಗೆ ಕಾಣಲಿಲ್ಲ. ಮುಖ್ಯವಾಗಿ ರೈತರಿಗೆ ಬೇಕಾಗಿರುವುದು ನೀರು. ಮಳೆ ಕಡಿಮೆಯಾಗಿ ಬೀಳುವ ಪ್ರದೇಶಗಳಿಗೆ ನೀರಾವರಿ ಬಾವಿಗಳು ಅತ್ಯಾವಶ್ಯಕ. ಕೆಲವು ಕಡೆಗಳಲ್ಲಿ ವರ್ಷಕ್ಕೆ 15"ಕ್ಕಿಂತ ಕಡಿಮೆ ಮಳೆ ಬೀಳುತ್ತದೆ. ಅಂತಹ ಕಡೆಗಳಲ್ಲಿ ಬಾವಿಗಳ ಕೆಲಸವನ್ನು ಜಾಸ್ತಿ ಮಾಡಬೇಕಾಗುತ್ತದೆ. ಚಳ್ಳಕೆರೆ ತಾಲ್ಲೂಕಿನಲ್ಲಿ ಸುಮಾರು 4,800 ನೀರಾವರಿ ಬಾವಿಗಳಿವೆ. ಅಲ್ಲಿ ಇನ್ನು ಹೆಚ್ಚಿಗೆ ಬಾವಿಗಳನ್ನು ತೆಗೆಯಲು ಸಾಕಷ್ಟು ಅವಕಾಶವಿದೆ. ಶ್ರೀಮಾನ್ ಕೃಷ್ಣಪ್ಪನವರು ಇತ್ತೀಚೆಗೆ ಬೇಕಾದಷ್ಟು ಬಾವಿಗಳನ್ನು ತೆಗೆಯಲು ಸರ್ಕಾರ ಎಷ್ಟೋ ಹಣವನ್ನು ಖರ್ಚುಮಾಡುತ್ತಿದ್ದಾರೆಂದು ಹೇಳಿದರು. ಇವತ್ತಿನ ದಿವಸ ಒಂದು ಹನಿ ಮಳೆ ಬಾರದೇ ಹೋದರೂ ಇಂತಹ ಒಂದು ತುರ್ತು ಪರಿಸ್ಥಿತಿಯಲ್ಲಿ ನಿಜವಾಗಿ ನಾವು ರೈತರನ್ನು ವಂದಿಸಬೇಕಾಗಿದೆ. ಏಕೆಂದರೆ, ಅವರು ಯಾವ ಒಂದು ಆಕ್ರೋಶ, ಗಲಾಟೆ ಮಾಡದೆ ತಮ್ಮ ಕಸುಬನ್ನು ಇರತಕ್ಕ ನೀರಾವರಿ ಬಾವಿಗಳಿಂದಲೇ ನಡೆಸಿಕೊಂಡು ಹೋಗುತ್ತಿದ್ದಾರೆ. ಕಾರಣವಿಷ್ಟೇ : ಅಲ್ಲಲ್ಲಿ ಅಲ್ಪಸ್ವಲ್ಪ ಬಾವಿಗಳಿವೆ. ಏನೇ ಕಷ್ಟವಾಗಲಿ, ಸುಮಾರು ಐದು ಎಕರೆ ಖುಷ್ಕಿ ಜಮೀನು ಇರುವವರು ಒಂದೊಂದು ಬಾವಿಯನ್ನು ತೆಗೆಸಬೇಕೆಂದು ನಾಲ್ಕಾರು ಯೋಜನೆಗಳನ್ನು ಹಾಕಿದ್ದಾರೆ. ಇದಕ್ಕಾಗಿ ಹಿಂದೆ ಸರ್ಕಾರದವರು ನೇರವಾಗಿ ಒಂದು ಸಾವಿರ ರೂಪಾಯಿಗಳನ್ನು ಸಬ್ಸಿಡಿ ರೂಪದಲ್ಲಿ ಕೊಡುತ್ತಿದ್ದರು. ಅದನ್ನು ತಪ್ಪಿಸಿ ಈಗ ಸುಮಾರು 3 ಸಾವಿರ ರೂಪಾಯಿಗಳ ಸಾಲ 500 ರೂಪಾಯಿಗಳ ಸಬ್ಸಿಡಿ ಕೊಡುತ್ತಿದ್ದಾರೆ. ಇದನ್ನು

(ಶ್ರೀ ಬಿ. ಎಲ್. ಗೌಡ)

ಕೊಡುವುದರಲ್ಲೂ ಒಂದು ನೀತಿ ನಿಯಮವಿರಬೇಕು. ಇಲ್ಲದಿದ್ದರೆ ಅದರಿಂದೇನೂ ರೈತರಿಗೆ ಉಪಯೋಗವಾಗುವುದಿಲ್ಲ. ಬಾವಿ ಕೆಲಸ ಪೂರ್ತಿಯಾಗಲಾರದು. ಕೆಲವು ಕಡೆಗಳಲ್ಲಿ ಒಂದೊಂದು ಬಾವಿಕೆಲಸ ಪೂರ್ತಿಯಾಗಬೇಕಾದರೆ 5 ಸಾವಿರ ರೂಪಾಯಿಗಳಿಗಿಂತ ಜಾಸ್ತಿ ಬೇಕಾಗುತ್ತದೆ. ಸರ್ಕಾರದವರು ಕೊಡತಕ್ಕ ಹಣಸಹಾಯ ಸಾಲದೆ ಅನೇಕ ರೈತರು ಇದರಿಂದ ಸಾಲಗಾರರಾಗಿದ್ದಾರೆ. ಆ ಸಾಲವನ್ನು ಅವರು ತೀರಿಸುವುದಕ್ಕೂ ಕೂಡ ಆಗುತ್ತಿಲ್ಲ. ಈ ವಿಚಾರವನ್ನು ಸರ್ಕಾರದ ಗಮನಕ್ಕೂ ಹಾಗೂ ವೈಯುಕ್ತಿಕವಾಗಿ ಜಿಲ್ಲಾ ಅಭಿವೃದ್ಧಿ ಮಂಡಲಿ ಮುಖಾಂತರವೂ ಮಾನ್ಯ ಮಂತ್ರಿಗಳ ಗಮನಕ್ಕೂ ಎಷ್ಟೋ ಸಾರಿ ತಂದಿದ್ದೇನೆ. ಆದರೆ ಆ ಬಗ್ಗೆ ಯಾವ ತೀರ್ಮಾನವನ್ನೂ ಸರ್ಕಾರದವರು ಇದುವರೆಗೆ ತೆಗೆದುಕೊಂಡಿಲ್ಲ. ಇದು ಬಹಳ ಮುಖ್ಯವಾದುದು. ಆದ್ದರಿಂದ ನೀರಾವರಿ ಬಾವಿಗಳನ್ನು 5 ಎಕರೆ ಜಮೀನು ಇರತಕ್ಕ ಪ್ರತಿಯೊಬ್ಬ ರೈತನಿಗೂ ಎಲ್ಲೆಲ್ಲಿ ನೀರು ಬರುವುದಕ್ಕೆ ಅವಕಾಶವಿದೆಯೋ ಅಲ್ಲೆಲ್ಲಾ ಒದಗಿಸಿಕೊಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಪೂರ್ವಕವಾಗಿ ಹೇಳಬಯಸುತ್ತೇನೆ.

ಇನ್ನು ನೀರಾವರಿ ಬಾವಿಗಳ ಜೊತೆಗೆ ವಿದ್ಯುಚ್ಛಕ್ತಿ ಬಹಳ ಮುಖ್ಯವಾದುದು. ಈ ವಿಚಾರದ ಬಗ್ಗೆ ನಮ್ಮ ವ್ಯವಸಾಯ ಮಂತ್ರಿಗಳು ಬಹಳ ಉದಾರವಾಗಿ ಅನೇಕ ಯೋಜನೆಗಳನ್ನು ತಂದರು. ಆದರೆ ಅವನ್ನು ಒಂದು ಆಧಾರದ ಮೇಲೆ ತರದೇ ಹೋದುದರಿಂದ ಅವುಗಳಿಂದ ಅಷ್ಟಾಗಿ ಪ್ರಯೋಜನ ರೈತರಿಗೆ ಉಂಟಾಗಲಿಲ್ಲ. ಕೇವಲ 480 ಪಂಪುಸೆಟ್ಟುಗಳನ್ನು ನಮ್ಮ ತಾಲ್ಲೂಕಿಗೆ ಕೊಟ್ಟಿದ್ದಾರೆ. 4,800 ನೀರಾವರಿ ಬಾವಿಗಳು ಇರತಕ್ಕ ನಮ್ಮ ಸ್ಥಳಕ್ಕೆ ಅಷ್ಟು ಪಂಪುಸೆಟ್ಟುಗಳನ್ನು ಕೊಟ್ಟರೆ ಏನು ಪ್ರಯೋಜನ ? 1,500 ಅರ್ಜಿಗಳಿಗೆ ಕಂತಿನ ರೂಪದಲ್ಲೋ ಅಥವಾ ಸಾಲದ ರೂಪದಲ್ಲೋ ಪಂಪುಸೆಟ್ಟುಗಳನ್ನು ಕೊಡಲು ಈಗ ಶಿಫಾರ್ಸು ಮಾಡಿದ್ದಾರೆಂಬುದಾಗಿ ನಾನು ತಿಳಿದಿದ್ದೇನೆ. ಆದರೂ ಆ ಬಗ್ಗೆ ಕೂಡಲೇ ತಕ್ಕ ಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳಬೇಕು. ವಿದ್ಯುಚ್ಛಕ್ತಿ ಇಲಾಖೆಯ ಬಗ್ಗೆ ನನ್ನ ಕೆಲವು ಸ್ನೇಹಿತರು ಹೇಳಿದಹಾಗೆ, ಇದರ ಕಾರ್ಯಾಚರಣೆಯಲ್ಲಿ ನನಗೆ ಸ್ವಲ್ಪ ಅಪನಂಬಿಕೆ ಇದೆ. ಕೆಲವು ಹಳ್ಳಿಗಳಲ್ಲಿ 3-4 ವರ್ಷಗಳಿಂದಲೂ ರೈತರೇ ತಮ್ಮ ಸ್ವಂತ ಖರ್ಚಿನಿಂದ ಈ ಪಂಪುಸೆಟ್ಟುಗಳನ್ನು ಕೊಂಡು ಇಟ್ಟಿದ್ದಾರೆ. ಇದುವರೆಗೂ ಅವರಿಗೆ ವಿದ್ಯುಚ್ಛಕ್ತಿ ಸಹಾಯ ಒದಗಿಲ್ಲ. ಇದು ಬಹಳ ವಿಷಾದಕರವಾದ ಸಂಗತಿ. ಒಬ್ಬ ಬಡ ರೈತ ಸುಮಾರು 3—4 ವರ್ಷಗಳಿಂದ ಅದಕ್ಕಾಗಿ 1½ ಅಥವಾ 2 ಸಾವಿರ ರೂಪಾಯಿಗಳನ್ನು ಹಾಕಿ ಸಾಹುಕಾರನಿಗೆ ಬಡ್ಡಿ ಕೊಡುವ ಪರಿಸ್ಥಿತಿ ಬಂದೊದಗಿದೆ. ಅನೇಕಸಲ ಈ ವಿಚಾರವನ್ನು ನಾನೇ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಆದರೆ ವಿದ್ಯುಚ್ಛಕ್ತಿಯನ್ನು ವಿತರಣೆ ಮಾಡುವ ರೀತಿಯಲ್ಲಿ ಇವರಿಗೆ ಒಂದು ನೀತಿ ನಿಯಮವೇನೂ ಇಲ್ಲ. ಇಲಾಖೆಯ ಅಧಿಕಾರಿಗಳು ಸ್ವೇಚ್ಛೆಯಾಗಿ ವರ್ತಿಸುತ್ತಿದ್ದಾರೆ. ಕೆಲವರಿಗೆ ಕೊಡುತ್ತಾರೆ ಮತ್ತೆ ಕೆಲವರಿಗೆ ಕೊಡುವುದಿಲ್ಲ. ಅವರು ಅವನ್ನು ಕೊಟ್ಟಿಲ್ಲದೆ ಅದರ ಉಪಯೋಗ ಮಾಡುವುದು ಹೇಗೆ ಎಂಬುದಾಗಿ ನಾನು ಈ ಸಂದರ್ಭದಲ್ಲಿ ಕೇಳಬಹುದು. ಇಂಥಾದ್ದಕ್ಕೆ ಸರ್ಕಾರದವರು ಆದಷ್ಟು ಜಾಗ್ರತೆಯಾಗಿ ಪ್ರಿಫರೆನ್ಸ್ ಕೊಡುವುದು ಮುಖ್ಯ. ಯಾರ್ಯಾರಿಗೆ ಇವು ಅವಶ್ಯಕವಿದೆಯೋ, ಯಾರ್ಯಾರಿಗೆ ಜೀವಿಸಲು ಬೇರೆ ಮಾರ್ಗವಿಲ್ಲವೋ ಅಂತಹವರಿಗೆ ಇವನ್ನು ಮುಫತ್ತಾಗಿ ಕೊಡಲು ವ್ಯವಸ್ಥೆ ಮಾಡಬೇಕು. ಲ್ಯಾಂಡ್ ಮಾರ್ಟಗೇಜ್ ಬ್ಯಾಂಕ್ ಮುಖಾಂತರ, ಕೇಂದ್ರ ಸರ್ಕಾರದ ಸಹಾಯದಿಂದ ರೈತರಿಗೆ ಈ ಪಂಪು ಸೆಟ್ಟುಗಳನ್ನು ಒದಗಿಸಬೇಕು. ಕೆಲವು ಕಡೆಗಳಲ್ಲಿ ಕೇವಲ 600 ರೂಪಾಯಿಗಳಲ್ಲಿ ಬಾವಿ ಕೆಲಸ ಮಾಡುತ್ತಾರೆ. ಒಂದುವೇಳೆ ಆ ಹಣ ಸಾಲದೇ ಇದ್ದ ಪಕ್ಷದಲ್ಲಿ ಬ್ಯಾಂಕುಗಳ ಮೂಲಕ ಸಹಾಯ ಪಡೆಯುತ್ತಾರೆ. ಇನ್ನು ಮಾಮೂಲಾಗಿರತಕ್ಕ ಯೋಜನೆಗಳು ನಮ್ಮಲ್ಲಿ ಬಹಳ ಇವೆಯೆಂದು ನಮಗೆ ಸಮಾಧಾನವನ್ನೇನೋ ಸರ್ಕಾರದವರು ಹೇಳುತ್ತಿದ್ದಾರೆ. ನಮ್ಮಲ್ಲಿರತಕ್ಕ ಈಗಿನ ಒಂದು ಆಹಾರಾಭಾವ ಪರಿಸ್ಥಿತಿಯನ್ನು ನೀಗಬೇಕಾದರೆ ಕೇಂದ್ರಸರ್ಕಾರದ ಕೆಲವು ಯೋಜನೆಗಳನ್ನು ಬಿಡಬೇಕು. ನಮ್ಮ ಸರ್ಕಾರದವರು ಹಾಕಿರತಕ್ಕ ನೀರಾವರಿ ಯೋಜನೆಗಳಿಗೆ ಬೇಕಾಗುವಷ್ಟು ಪಂಪುಸೆಟ್ಟುಗಳನ್ನು ಅವರು ಕೊಡುತ್ತಿಲ್ಲ. ಬಾವಿಗಳು ಇಂತಹ ತುರ್ತು ಪರಿಸ್ಥಿತಿಯಲ್ಲಿ ಬಹಳ ಮುಖ್ಯ. ರೈತರು ಬಾವಿಗಳಿಲ್ಲದೆ ಬದುಕುವುದೇ ಕಷ್ಟ. ನಮ್ಮ ರೈತರ ಗೋಳು, ಕೂಗು ಇವರಿಗೆ ಇನ್ನು ಮುಟ್ಟಿಲ್ಲವೆಂದು ನಾನು ಹೇಳುತ್ತೇನೆ. ಬಾವಿ ಮತ್ತು ಪಂಪು ಸೆಟ್ಟುಗಳನ್ನು ರೈತರಿಗೆ ಒದಗಿಸಬೇಕೆಂಬುದೇ ನಮ್ಮ ಆಶೆ. ಆ ಆಶೆಯನ್ನು ಸರ್ಕಾರದವರು ಈಡೇರಿಸಿಕೊಡಬೇಕೆಂದು ನಾನು ಸರ್ಕಾರದವರಲ್ಲಿ ಎಷ್ಟೋಸಾರಿ ಈಗಾಗಲೇ ಪ್ರಾರ್ಥಿಸಿಕೊಂಡಿದ್ದೇನೆ.

ಇನ್ನು ಪದೇ ಪದೇ ಕ್ಷಾಮಕ್ಕೆ ತುತ್ತಾಗುವ ಕ್ಷಾಮ ಪ್ರದೇಶಗಳಲ್ಲಿ ರಿಲೀಫ್ ಫಂಡ್ ಅಥವಾ ಖಾಯಂ ಪರಿಹಾರ ಕೊಡುವುದು ಬಹಳ ಮುಖ್ಯವಾದುದಾಗಿದೆ. ಇದಕ್ಕೋಸ್ಕರ ನಾನು ಈಗಾಗಲೇ ಸೂಚನೆಮಾಡಿದಹಾಗೆ ರೈತರಿಗೆ ಬಾವಿಗಳನ್ನು ಕಟ್ಟಿಸುವುದರ ಜೊತೆಗೆ ಕೆಲವು ಸಣ್ಣ ನೀರಾವರಿ

ಯೋಜನೆಗಳನ್ನು ಕೈಗೊಳ್ಳುವುದು ಅವಶ್ಯಕವಾಗಿದೆ. ಸುವರ್ಣಮುಖಿ ನದಿಯ ಕೆಳಗಿನ ಕೆಲವು ಪ್ರದೇಶಗಳಲ್ಲಿ ಕೂಡಲೇ ನಾಲೆಗಳನ್ನು ತೆಗೆಸಬೇಕೆಂದು ನಾನು ಬಹಳ ದಿವಸಗಳಿಂದಲೂ ಈ ಸರ್ಕಾರ ದಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಆ ಬಗ್ಗೆ ಈಗಾಗಲೇ ಅಂದಾಜುಗಳು ತಯಾರಾಗಿವೆಯೆಂದು ಕೇಳಿದ್ದೇನೆ. ಆದ್ದರಿಂದ ಆ ಕಾಮಗಾರಿಗಳನ್ನು ಶೀಘ್ರದಲ್ಲಿಯೇ ಮಾಡಿದರೆ ಬಹುಶಃ ವರ್ಷೇ ವರ್ಷೇ ಏನು ರಿಲೀಫ್ ಕಾಮಗಾರಿಗಳಿಗೆ ಹಣವನ್ನು ನಮ್ಮ ಸರ್ಕಾರದವರು ಖರ್ಚು ಮಾಡುತ್ತಾರೋ ಅದು ಉಳಿಯುತ್ತದೆ.

ಇನ್ನೊಂದು ಬಹಳ ಮುಖ್ಯವಾದ ವಿಷಯ. ಅದು ಅಧಿಕ ಆಹಾರ ಉತ್ಪನ್ನದ ವಿಚಾರ. ಪಂಚ ವಾರ್ಷಿಕ ಯೋಜನೆಯಲ್ಲಿ ಅಗ್ರಿಕಲ್‌ಚರಲ್ ಪ್ರೊಡಕ್ಷನ್ನಿಗೆ ಆದ್ಯ ಗಮನವನ್ನು ಕೊಡಬೇಕಾಗಿದೆ. ಒಡಜನರಿಗೆ ತಾಲ್ಲೂಕು ಬೋರ್ಡಿನಿಂದ ಹೆಚ್ಚಿನ ನಿಕಟ ಸಂಬಂಧವನ್ನು ಕಲ್ಪಿಸಿಕೊಡಬೇಕಾಗಿದೆ. ಈ ವಿಚಾರದಲ್ಲಿ ಪಂಚಾಯಿತಿಯವರಿಗೂ ತಾಲ್ಲೂಕ್ ಬೋರ್ಡಿನವರಿಗೂ ಹೆಚ್ಚಿನ ನಿಕಟ ಸಂಬಂಧವುಂಟಾ ಗಬೇಕು. ಪ್ರತಿಯೊಂದು ಪಂಚಾಯಿತಿಯವರು ಆಯಾ ಊರಿನ ರೈತರನ್ನು ಕರೆದು ಅವರಿಗೆ ಬೇಕಾದ ಗೊಬ್ಬರ, ಬೀಜ, ಮತ್ತು ಇತರ ಸಲಕರಣೆಗಳನ್ನು ಲೆಕ್ಕಹಾಕಿ, ಒಂದು ಅಂದಾಜನ್ನು ಗೊತ್ತುಮಾಡಿ ಸರ್ಕಾರದಿಂದ ತೆಗೆದುಕೊಳ್ಳಬೇಕು. ಆ ಒಂದು ಅಂದಾಜಿಗನುಗುಣವಾಗಿ ಆಯಾ ಊರಿನ ಸಹಕಾರ ಸಂಘಗಳ ಮೂಲಕ ಬೀಜ, ಗೊಬ್ಬರವನ್ನು ಒದಗಿಸಿಕೊಡಬೇಕು ಎಂಬುದಾಗಿ ಈಗಾಗಲೇ ನಮ್ಮಲ್ಲಿ ತೀರ್ಮಾನಮಾಡಿದ್ದಾರೆ. ಮೈಸೂರು ರಾಜ್ಯದಲ್ಲಿ 3—4 ದೊಡ್ಡ ಕೇಂದ್ರ ಸಹಕಾರ ಬ್ಯಾಂಕುಗಳಿವೆ. ಆದರೆ ಅವುಗಳಿಂದ ರೈತರು ತೆಗೆದುಕೊಂಡು ಹೋಗತಕ್ಕ ಸಾಲವನ್ನು ಪುನಃ ಅವರಿಗೆ ಮರುಪಾವತಿ ಮಾಡುತ್ತಿಲ್ಲ. ಅಲ್ಲಿ ಶೇಕಡ 65 ರಷ್ಟನ್ನು ರೈತರು ಮರುಪಾವತಿ ಮಾಡದಿದ್ದರೆ ಕೊಟ್ಟಿರತಕ್ಕ ಸಾಲ ವನ್ನು ಅವರಿಗೆ ಪುನಃ ಕೊಡುತ್ತಿಲ್ಲ. ಸಾಮಾನ್ಯವಾಗಿ ವ್ಯವಸಾಯಕ್ಕನುಗುಣವಾಗಿ ಬೇಕಾದ ಬೀಜ ಗೊಬ್ಬರ, ಇತರೇ ಖರ್ಚುಗಳಿಗೆ ಬೇಕಾದ ಹಣ ಸರ್ಕಾರದಿಂದ ಸಕಾಲಕ್ಕೆ ರೈತರಿಗೆ ಒದಗದೇ ಹೋದರೆ ಹೆಚ್ಚಿಗೆ ಆಹಾರೋತ್ಪಾದದೆ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದು ಏನೆಂದರೆ, ಸಹಕಾರ ಸಂಘಗಳ ಮೂಲಕ ಸಾಲ ಕೊಡತಕ್ಕ ನೀತಿಯ ಬಗ್ಗೆ ಆಲೋಚನೆಮಾಡಿ ಅದನ್ನು ಪುನರ್ವಿಮರ್ಶೆ ಮಾಡಬೇಕು. ಯಾರು ಸಾಲವನ್ನು ಹಿಂದಕ್ಕೆ ಕೊಡು ತ್ತಾರೋ ಅಂತಹವರಿಗೆ ಸಾಲವನ್ನು ಮರುಪಾವತಿ ಮಾಡಬೇಕು, ಆಗ ಬಹುಶಃ ಪಂಚಾಯಿತಿ ಮತ್ತು ಅಗ್ರಿಕಲ್‌ಚರಲ್ ಪ್ರೊಡಕ್ಷನ್ ಯೋಜನೆಗಳು ವಿಫಲವಾಗುತ್ತವೆಂದು ನಾನು ತಮ್ಮಲ್ಲಿ ಹೇಳು ತ್ತೇನೆ. ರೈತ ತಾನು ತೆಗೆದುಕೊಂಡ ಸಾಲದ ಹಣವನ್ನು ವಾಪಸು ಕೊಟ್ಟರೆ ಅದನ್ನು ಮರುಪಾವತಿ ಸಾಲ ಕೊಡುವ ಯೋಜನೆಯನ್ನು ಕೂಡಲೆ ಜಾರಿಗೆ ತರಬೇಕು. ಆದರೆ ಈ ರೀತಿ ಸಾಲ ಕೊಡುವುದಕ್ಕೂ ಮಾರ್ಕೆಟಿಂಗಿಗೂ ಏನೂ ಸಂಬಂಧವಿಲ್ಲ. ಯಾವ ಸಹಕಾರ ಸಂಘಗಳ ಮೂಲಕ ರೈತನಾದವನು ಸಾಲ ತೆಗೆದುಕೊಂಡನೋ ಆ ಸಹಕಾರ ಸಂಘಗಳ ಮೂಲಕವೇ ವ್ಯವಸಾಯಕ್ಕೆ ಬೇಕಾದ ಸಕಲ ಸೌಲಭ್ಯಗಳನ್ನೂ ಪಡೆಯುವಂತೆ ವ್ಯವಸ್ಥೆಮಾಡಬೇಕು. ಆದರೆ ಆ ರೀತಿ ಆ ಮಾರಾಟ ಸಹಕಾರ ಸಂಘಗಳ ಮೂಲಕ ಅವನು ವ್ಯವಸಾಯದ ವಹಿವಾಟುಗಳನ್ನು ಮಾಡಬೇಕೆಂದು ಹೇಳದೇಹೋದರೆ ನಾವು ಕೊಟ್ಟ ಸಾಲ ಖಂಡಿತವಾಗಿ ಬರುವುದಿಲ್ಲ, ಮತ್ತೆ ನಮ್ಮ ಯೋಜನೆಗಳು ಯಶಸ್ವಿಯಾಗಿ ಜಾರಿ ಯಾಗುವುದಿಲ್ಲ. ಇದಾವುದೂ ಇನ್ನೂ ಇದುವರೆಗೆ ಜಾರಿಗೆ ಬಂದಿಲ್ಲ. ಕಾರ್ಯತಃ ನಡೆಯುತ್ತಾ ಇಲ್ಲ. ಈ ಯೋಜನೆಗಳನ್ನು ಏತಕ್ಕೋಸ್ಕರ ಜಾರಿಗೆ ತರುತ್ತಿಲ್ಲವೋ ನನಗೆ ಗೊತ್ತಾಗಲಿಲ್ಲ. ಆದ್ದರಿಂದ ಅದನ್ನೆಲ್ಲಾ ಪುನರ್ವಿಮರ್ಶೆ ಮಾಡಬೇಕು. ರೈತರ ಪ್ರತಿನಿಧಿಗಳನ್ನೊಳಗೊಂಡಂತೆ ಇಂತಹ ವಿಷಯ ಗಳನ್ನು ಪರಿಶೀಲನೆ ಮಾಡುವುದಕ್ಕೋಸ್ಕರ ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ನಾನು ಮಂತ್ರಿಗಳಲ್ಲಿ ಪ್ರಾರ್ಥಿಸುತ್ತೇನೆ.

3-00 P.M.

ಇನ್ನು ಎಲ್ಲಕ್ಕಿಂತ ಮುಖ್ಯವಾದದ್ದು ರೈತರಿಗೆ ಗೊಬ್ಬರವನ್ನು ಒದಗಿಸುವುದು. ಈಗ ಒಂದ ಸಂತೋಷದ ಸಂಗಂತಿಯೇನೆಂದರೆ, 3-4 ವರ್ಷಗಳ ಹಿಂದೆ ನಮ್ಮ ಜಿಲ್ಲೆಯಲ್ಲಿ ರಸಾಯನಿಕ ಗೊಬ್ಬರವನ್ನು ವ್ಯವಸಾಯಕ್ಕೆ ಉಪಯೋಗಿಸಲು ರೈತರಿಗೆ ಆಸಕ್ತಿ ಇರಲಿಲ್ಲ. ಇವೊತ್ತು ರಸಾ ಯನಿಕ ಗೊಬ್ಬರವನ್ನು ರೈತರಿಗೆ ಸರಬರಾಜು ಮಾಡುವುದಕ್ಕೆ ನಾವು ವಿಫಲರಾಗಿದ್ದೇವೆ. ಅಂಥಾ ಒಂದು ಆಸಕ್ತಿ ರಸಾಯನಿಕ ಗೊಬ್ಬರವನ್ನು ಉಪಯೋಗಿಸುವುದರಲ್ಲಿ ರೈತರಿಗೆ ಬಂದಿದೆ. ಅವರಿಗೆ ವ್ಯವಸಾಯಕ್ಕೆ ಗೊಬ್ಬರವನ್ನು ಉಪಯೋಗಿಸಲು ಜ್ಞಾನೋದಯವಾಗಿರುವುದರಿಂದ ಅವರಿಗೆ ಗೊಬ್ಬರವನ್ನು ಸರಬರಾಜು ಮಾಡುವ ಶಕ್ತಿ ನಮಗೆ ಇಲ್ಲ. ಅದಕ್ಕೋಸ್ಕರವಾಗಿ ನಮ್ಮ ಪ್ರಾಂತ ದಲ್ಲಿ ಒಂದು ಗೊಬ್ಬರದ ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕು. ನೈಸರ್ಗಿಕ ಗೊಬ್ಬರ, ಕಂಪೋಸ್ಟ್ ಗೊಬ್ಬರ ಇವುಗಳಿಗೆ ಸಂಬಂಧಪಟ್ಟ ಹಾಗೆ ಒಂದು ಯೋಜನೆಯನ್ನು ತಯಾರು ಮಾಡು ವುದು ಒಳ್ಳೆಯದು ಎಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ. ಮೆಕನ್ಸೈಜ್ ಅಗ್ರಿಕಲ್‌ಚರಲ್

(ಶ್ರೀ ಬಿ. ಎಲ್. ಗೌಡ)

ವಿಷಯದಲ್ಲಿ ತೀವ್ರವಾಗಿ ನೋಡಿಕೊಳ್ಳಬೇಕು. ಟ್ರ್ಯಾಕ್ಟರು ಮತ್ತು ಬುಲ್ಡೋಜರ್ ಸೆಕ್ಷನ್ ತೆಗೆಯಬೇಕೆಂದು ನಾವು ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಶಿಫಾರಸ್ಸು ಮಾಡಿದ್ದೆವು. ನಾವು ಆಹಾರದ ವಿಷಯದಲ್ಲಿ ಸ್ವಪರಿಪೂರ್ಣತೆಯನ್ನು ಸಾಧನೆ ಮಾಡಬೇಕಾದರೆ ಮೆಕನೈಜ್ಡ್ ಅಗ್ರಿಕಲ್ಚರ್ ಆಗಬೇಕು. ಬೇಬಿ ಬುಲ್ಡೋಜರ್ ಯೋಜನೆಯನ್ನು ಜಾಗ್ರತೆಯಾಗಿ ಕಾರ್ಯರೂಪಕ್ಕೆ ತರಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ಡಿ. ಪಾಟೀಲ್ (ಇಂಡಿ).—ಮಾನ್ಯ ಅಧ್ಯಕ್ಷರೇ ಈಗ ಈ ಸಭೆಯ ಮುಂದಿರುವ ನಿರ್ಣಯದ ಬಗ್ಗೆ ಮಾತನಾಡುತ್ತಾ ಆಹಾರೋತ್ಪಾದನೆಯನ್ನು ಹೆಚ್ಚಿಸುವ ವಿಷಯದಲ್ಲಿ ಒಕ್ಕಲಿಗರ ಉದ್ದೇಶ ಏನು ಎಂಬುದನ್ನು ಒಂದೆರಡು ಮಾತುಗಳಲ್ಲಿ ಹೇಳಬೇಕೆಂದು ನಾನು ಎದ್ದು ನಿಂತಿದ್ದೇನೆ. ಒಕ್ಕಲಿಗರು ಹೆಚ್ಚು ಆಹಾರವನ್ನು ಉತ್ಪಾದನೆ ಮಾಡಬೇಕಾದರೆ ಅವರಿಗೆ ಬೇಕಾದ ಬೀಜ, ಗೊಬ್ಬರ ಮತ್ತು ನೀರಾವರಿ ಸೌಕರ್ಯಗಳನ್ನು ಸರಿಯಾಗಿ ಸರ್ಕಾರದವರು ಒದಗಿಸಬೇಕು. ಅದು ಸಾಧ್ಯವಾಗದೆ ಇದ್ದರೆ ಆಹಾರದ ಸಮಸ್ಯೆಯು ದೊಡ್ಡ ಸಮಸ್ಯೆಯಾಗಿ ಅದನ್ನು ಪರಿಹಾರ ಮಾಡುವುದು ಬಹಳ ಕಷ್ಟವಾಗುತ್ತದೆ. ನಮ್ಮ ಭಾಗದಲ್ಲಿ ನೀರಾವರಿ ಯೋಜನೆಗಳಾಗಲೀ, ಕೆರೆಗಳಾಗಲೀ ಇಲ್ಲ. ಇಂಡಿ ಮತ್ತು ಸಿಂದಗಿ ತಾಲ್ಲೂಕುಗಳಲ್ಲಿ ನೀರಾವರಿ ಬಾವಿಗಳು ಇವೆ. ಆದರೆ ಅವುಗಳಿಗೆ ವಿದ್ಯುಚ್ಛಕ್ತಿ ಪಂಪು ಸೆಟ್ಟುಗಳನ್ನು ಒದಗಿಸಿ ಕೊಟ್ಟಿಲ್ಲ. ಆದ್ದರಿಂದ ಆ ಪ್ರದೇಶದ ಒಕ್ಕಲಿಗರಿಗೆ ಪಂಪು ಸೆಟ್ಟು ಮತ್ತು ವಿದ್ಯುಚ್ಛಕ್ತಿಯನ್ನು ಒದಗಿಸಿದರೆ ಅನುಕೂಲವಾಗುತ್ತದೆ. ಮತ್ತು ಆ ಪ್ರದೇಶದಲ್ಲಿ ಒಕ್ಕಲಿಗರಿಗೆ ಬುಲ್ಡೋಜರ್ಸ್ ಮತ್ತು ಟ್ರ್ಯಾಕ್ಟರ್ಸ್‌ಗಳನ್ನು ಸಾಕಷ್ಟು ಒದಗಿಸಿ ಕೊಟ್ಟಿಲ್ಲ. ಇದರ ದೆಶೆಯಿಂದ ಒಕ್ಕಲಿಗರು ಬೇಡಿದರೂ ಸಹ ಅವರಿಗೆ ಟ್ರ್ಯಾಕ್ಟರುಗಳು ಮತ್ತು ಬುಲ್ಡೋಜರುಗಳು ಸಿಕ್ಕುವುದಿಲ್ಲ. ಆದ್ದರಿಂದ ನಾಲ್ಕಾರು ಬುಲ್ಡೋಜರು ಮತ್ತು ಟ್ರ್ಯಾಕ್ಟರುಗಳನ್ನು ನಮ್ಮ ಭಾಗಕ್ಕೆ ಒದಗಿಸಿ ಕೊಡಬೇಕೆಂದು ನಾನು ಸರ್ಕಾರಕ್ಕೆ ಸೂಚನೆ ಮಾಡುತ್ತೇನೆ. ಈಗ ದೇಶದಲ್ಲಿ ಒತ್ತಾಯ ಶಿಕ್ಷಣವನ್ನು ಯಾವ ರೀತಿ ಜಾರಿಗೆ ತಂದಿದ್ದೀರೋ ಹಾಗೆ ಒಕ್ಕಲಿಗರಿಗೆ ಒತ್ತಾಯದಿಂದ ಭೂಮಿ ಲೆವಲ್ ಮಾಡಿಸುವದು ಮತ್ತು ಕರ್ಜ ತೆಗೆಯುವುದೂ ಮಾಡಿ ನೀರಾವರಿ ಸೌಕರ್ಯವನ್ನು ಒದಗಿಸಿ ಕೊಡಬೇಕು, ಟ್ರ್ಯಾಕ್ಟರನ್ನು ಒದಗಿಸಿ ಭೂಮಿಯನ್ನು ಲೆವೆಲ್ ಮಾಡಿ ಕೊಡಬೇಕು, ಬೀಜ ಮತ್ತು ಗೊಬ್ಬರವನ್ನು ಸರಿಯಾಗಿ ಒಕ್ಕಲಿಗರಿಗೆ ಒದಗಿಸಬೇಕು ಎನ್ನುವ ಒಂದು ಯೋಜನೆಯನ್ನು ಮಾಡಬೇಕು ಎಂದು ನಾನು ಸರ್ಕಾರಕ್ಕೆ ಸೂಚನೆ ಮಾಡುತ್ತೇನೆ. ನಮ್ಮ ಇಂಡಿ ಮತ್ತು ಸಿಂದಗಿ ತಾಲ್ಲೂಕುಗಳಲ್ಲಿ ಸಾಕಷ್ಟು ನೀರಾವರಿ ಸೌಕರ್ಯ ಇಲ್ಲ. ಈಗ ಅಲ್ಲಿ 6 ಸಾವಿರ ಬಾವಿಗಳಿವೆ. ಆ ಪ್ರದೇಶದಲ್ಲಿ ಸುಮಾರು 5 ಸಾವಿರ ಪಂಪ್‌ಸೆಟ್ ಆದರೂ ಬಾವಿಗಳಿಗೆ ಕೊಡಿಸಬೇಕಾಗಿದೆ. ಇಂಥಾ ಪರಿಸ್ಥಿತಿಯಲ್ಲಿ ಅಲ್ಲಿಗೆ ಬರೀ 500 ಪಂಪು ಸೆಟ್ಟು ಕೊಟ್ಟರೆ ಸಾಕಾಗುವುದಿಲ್ಲ. ಈಗ ಅಲ್ಲಿ ಪಂಪು ಸೆಟ್ಟುಗಳಿಗೆ ಆಯಿಲ್ ಇಂಜಿನ್ ಉಪಯೋಗಿಸುವುದರಿಂದ ರೈತರಿಗೆ ಖರ್ಚು ಜಾಸ್ತಿ ಬಂದು ಅವರಿಗೆ ಲುಕ್ಸಾನು ಆಗುತ್ತಿದೆ. ಆದ್ದರಿಂದ ಅವರಿಗೆ ಆದಷ್ಟು ಬೇಗ ಎಲೆಕ್ಟ್ರಿಸಿಟಿ ಮತ್ತು ಪಂಪುಸೆಟ್ಟುಗಳನ್ನು ಹೈರ್ ಪರ್‌ಚೇಸ್ ಸ್ಕೀಮಿನಲ್ಲಿ ಒದಗಿಸಬೇಕು. ಈಗ ಒಕ್ಕಲಿಗರಿಗೆ ಗೊಬ್ಬರ ಎಷ್ಟು ಬೇಕೋ ಅಷ್ಟನ್ನು ಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅವರ ಹತ್ತಿರ ರೊಕ್ಕ ಇರುವುದಿಲ್ಲ. ಎಷ್ಟೋ ಮಂದಿ ಸೊಸೈಟಿಗಳಲ್ಲಿಯೂ ಸಹ ಸಾಲವನ್ನು ತೆಗೆದುಕೊಂಡು ಬಾಕಿದಾರರಾಗಿರುವುದರಿಂದ ಅವರಿಗೆ ಮತ್ತೆ ಸಾಲ ಸಿಕ್ಕುವುದಿಲ್ಲ. ಆದ್ದರಿಂದ ಅವರು ಗೊಬ್ಬರವನ್ನು ಉಪಯೋಗ ಮಾಡಬೇಕು ಎನ್ನುವ ಮನಸ್ಸನ್ನು ಹೊಂದಿದ್ದರೂ ಕೂಡ ಅವರು ಗೊಬ್ಬರವನ್ನು ಉಪಯೋಗ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ರೈತರಿಗೆ ಗೊಬ್ಬರವನ್ನು ಒದಗಿಸುವ ಜವಾಬ್ದಾರಿಯನ್ನು ಸೊಸೈಟಿಗಳೇ ವಹಿಸುವುದರಿಂದ ಅವರು ರೈತರಿಗೆ ಹೆಚ್ಚಿನ ಸಾಲವನ್ನು ಕೊಡುತ್ತಾರೆ. ಈ ದೃಷ್ಟಿಯಿಂದ ಸಹಕಾರಿ ಸಂಘಗಳಿಂದಲೇ ತಗಾಯಿ ಸಾಲದ ರೂಪದಲ್ಲಿ ಗೊಬ್ಬರವನ್ನು ಒದಗಿಸುವ ಏರ್ಪಾಡನ್ನು ಮಾಡಬೇಕೆಂದು ನನ್ನ ಒಂದು ಸೂಚನೆಯನ್ನು ಈ ಸಭೆಯಲ್ಲಿ ಇಡುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ರಾಮನಹಳ್ಳಿ ಕೆರೆ ಎಂದು ಇದೆ. ಅದು ರಾಮನ ಹಳ್ಳಿಗೆ 9 ಮೈಲಿ ದೂರದಲ್ಲಿ ಇದೆ. ಬಳಗನೂರು ಮತ್ತು ಚಾಂದತವರೆ ಹತ್ತಿರ ಇದೆ. ಅದಕ್ಕೆ ಹೆಸರು ಮಾತ್ರ ರಾಮನಹಳ್ಳಿ ಕೆರೆ ಎಂದು ಇದೆ. ಅಲ್ಲಿ ಟ್ರ್ಯಾಕ್ಟರು ಮತ್ತು ಬುಲ್ಡೋಜರುಗಳಿಂದ ಭೂಮಿಯನ್ನು ಲೆವೆಲ್ ಮಾಡುವಂಥಾದ್ದು ಇದೆ. ಆ ಕೆಲಸವನ್ನು ಮಾಡಿದರೆ ಅಲ್ಲಿ ಕನಿಷ್ಟ ಪಕ್ಷ 6 ಸಾವಿರ ಎಕರೆ ನೀರಾವರಿ ಆಗುತ್ತದೆ. ನಮ್ಮ ತಾಲ್ಲೂಕು ಬೋರ್ಡಿನಲ್ಲಿ ಒಂದು ರೆಸೊಲ್ಯೂಷನ್ ಮಾಡಿದ್ದೇವೆ. ಅದು ಏನೆಂದರೆ ಪ್ರತಿಯೊಂದು ಸೇವಾ ಸಹಕಾರ ಸಂಘದಲ್ಲಿಯೂ ಒಂದೊಂದು ಟ್ರ್ಯಾಕ್ಟರನ್ನು ಇಟ್ಟರೆ ಪ್ರತಿಯೊಬ್ಬ ಒಕ್ಕಲಿಗರಿಗೂ ಅದರ ಉಪಯೋಗ ಸಿಕ್ಕುವ ಹಾಗಾಗುತ್ತದೆ ಎಂಬುವ ಉದ್ದೇಶದಿಂದ ಠರಾವು ಮಾಡಿದ್ದು ಅದಕ್ಕೆ ಮಂಜೂರು ಕೊಡಬೇಕೆಂದು ಆಶಿಸುತ್ತೇನೆ.

ಇನ್ನು ಮಳೆಯ ವಿಷಯದಲ್ಲಿ ಹೇಳುವುದಾದರೆ ಈಗ ನಮ್ಮಲ್ಲಿ ಮಳೆ ಇಲ್ಲ. ಈ ವರ್ಷ ಅಲ್ಲಿ ರೈತರು ಕಂಗಾಲಾಗಿದ್ದು ಅಷ್ಟು ಹೆಚ್ಚಿನ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅಲ್ಲಿ ಯಾವಾಗಲೂ ಅಭಾವ ಪರಿಸ್ಥಿತಿ ಇದ್ದೇ ಇದೆ. ಮಳೆ ಬಾರದೆ ಇರುವುದರಿಂದ ಒಕ್ಕಲಿಗರಿಗೆ ತುಂಬಾ ನಷ್ಟವಾಗಿದೆ. ಆದ್ದರಿಂದ ಕಂದಾಯವನ್ನು ವಸೂಲು ಮಾಡುವುದರಲ್ಲಿ ಸ್ವಲ್ಪ ರಿಯಾಯಿತಿ ತೋರಿಸಬೇಕು. ಒಕ್ಕಲಿಗರಿಗೆ ಅನುಕೂಲ ಮಾಡಬೇಕು. ಅಲ್ಲಿ ಕಾಳಿನ ಅಭಾವ ಆಗದಂತೆ ನೋಡಿಕೊಳ್ಳಬೇಕು. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರಿಗೆ ನಾನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ (ಸಾಗರ).—ಮಾನ್ಯ ಸಭಾಪತಿಯವರೇ, ಈ ಸಭೆಯ ಮುಂದಿಟ್ಟಿರತಕ್ಕ ನಿರ್ಣಯವನ್ನು ನಾನು ಬೆಂಬಲಿಸುತ್ತೇನೆ. ಈಗಾಗಲೇ ಅನೇಕ ಮಾನ್ಯ ಸದಸ್ಯರು ಇವೊತ್ತಿನ ಆಹಾರದ ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸತಕ್ಕ ಕ್ರಮಗಳ ವಿಚಾರವಾಗಿ ಹೇಳಿದ್ದಾರೆ. ನಮ್ಮ ದೇಶದಲ್ಲಿ ಆಹಾರದ ಒಂದು ಸಮಸ್ಯೆ ಎಷ್ಟು ವರ್ಷಗಳಿಂದ ಇದೆಯೆಂದರೆ ನಮಗೆ ಸ್ವಾತಂತ್ರ್ಯ ಬರುವುದಕ್ಕಿಂತ ಮುಂಚೆಯೇ ಇದು ಪ್ರಾರಂಭವಾಗಿದೆ. ಸ್ವಾತಂತ್ರ್ಯ ಬಂದ ನಂತರ ಇವೊತ್ತಿನವರೆಗೂ ಈ ಒಂದು ಸಮಸ್ಯೆ ಬಿಡಿಸಲಾಗದ ಒಂದು ಸಮಸ್ಯೆಯಾಗಿದೆ. ಈ ಸಮಸ್ಯೆಯನ್ನು ಯಾವ ರೀತಿ ನಮ್ಮ ವೀರಯೋಧರು ಗಡಿಯಲ್ಲಿ ವೈರಿಗಳನ್ನು ಸದೆ ಬಡಿಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಯೋ ಅದೇ ರೀತಿ ನಮ್ಮ ಸರ್ಕಾರದವರು ಮತ್ತು ಜನಗಳು ಶ್ರಮವಹಿಸಿ ಈ ಒಂದು ಆಹಾರದ ಸಮಸ್ಯೆಯನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಈ ಸನ್ನಿವೇಶದಲ್ಲಿ ಹೇಳಬಯಸುತ್ತೇನೆ. ಇದರ ಅಂಗವಾಗಿ ನಾನು ಒಂದೆರಡು ಸಲಹೆಗಳನ್ನು ಕೊಡಬಯಸುತ್ತೇನೆ. ವ್ಯವಸಾಯ ಸರಿಯಾದ ರೀತಿಯಲ್ಲಿ ನಡೆಯಬೇಕಾದರೆ ಮುಖ್ಯವಾಗಿ ನೀರಾವರಿ ಸೌಲಭ್ಯಗಳು ಇರಬೇಕು. ನಮ್ಮ ರಾಜ್ಯದಲ್ಲಿ ರೈತರಿಗೆ ಮೈನರ್ ಇರಿಗೇಷನ್ ಸೌಲಭ್ಯಗಳನ್ನು ಒದಗಿಸಿಕೊಡಲು ಸುಮಾರು 17-20 ಕೋಟಿ ರೂಪಾಯಿಗಳನ್ನ ಖರ್ಚುಮಾಡಬೇಕೆಂದಿದ್ದೇವೆ ಎಂದು ಸರ್ಕಾರದವರು ಈ ಸಭೆಯಲ್ಲಿ ಅನೇಕ ಸಾರಿ ಹೇಳಿದ್ದಾರೆ. ಅದಕ್ಕೆ ಬೇಕಾದಂತಹ ಹಣವನ್ನು ಸಹ ಸಂಗ್ರಹಣೆ ಮಾಡುತ್ತಿದ್ದೇವೆ ಎನ್ನುವ ಆಶ್ವಾಸನೆಯನ್ನು ಕೂಡ ಸರ್ಕಾರದವರು ಕೊಟ್ಟಿದ್ದಾರೆ. ಈಗ ನಮ್ಮ ಶಿವಮೊಗ್ಗ ಜಿಲ್ಲೆ ಒಂದರಲ್ಲೇ ಸುಮಾರು 12 ಸಾವಿರ ಕೆರೆಗಳಿವೆ. ಅದರಲ್ಲಿ ನನ್ನ ಕ್ಷೇತ್ರದಲ್ಲಿ ಸುಮಾರು 4 ಸಾವಿರ ಕೆರೆಗಳಿವೆ. ಈ ಕೆರೆಗಳಲ್ಲಿ ನೀರು ಇಲ್ಲ. ಮಲೆನಾಡು ಪ್ರದೇಶದಲ್ಲಿ ಇವೊತ್ತಿನ ಪರಿಸ್ಥಿತಿಯಲ್ಲಿ ಮಳೆ ಇಲ್ಲದೆ ಪೈರುಗಳೆಲ್ಲಾ ಒಣಗಿ ಹೋಗಿವೆ. ಇದು ಒಂದು ದುರದೃಷ್ಟಕರವಾದ ಸಂಗತಿಯಾಗಿದೆ. ಹೆಚ್ಚು ಬತ್ತವನ್ನು ಬೆಳೆಯತಕ್ಕ ಮಲೆನಾಡು ಪ್ರದೇಶದಲ್ಲಿ ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸಬೇಕಾದರೆ ಅಲ್ಲಿರತಕ್ಕ ಕೆರೆಗಳ ದುರಸ್ತಿಯನ್ನು ಮಾಡಿಸಲು ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ. ಈ ವರ್ಷದ ಪರಿಸ್ಥಿತಿಯಲ್ಲಿ ನಮ್ಮ ಅನುಭವವನ್ನು ನೋಡುವುದಕ್ಕೆ ಹೊರಟರೆ. ಯಾವ ಕೆರೆಗಳೂ ದುರಸ್ತಿ ಇಲ್ಲದೆ ಬಂದ ನೀರು ಹಾಗೆಯೇ ಹೋಗಿ, ನಮಗೆ ನೀರಿನ ಸಂಗ್ರಹಣೆ ಇಲ್ಲದೆ ಬತ್ತ ಒಣಗಲು ಅವಕಾಶವಾಗಿದೆ. ಅದೇ ಈಗಾಗಲೇ ನಮ್ಮಲ್ಲಿರತಕ್ಕಂಥ ಕೆರೆಗಳ ಹೂಳನ್ನು ಸಾಧಾರಣಮಟ್ಟಿಗೆ ತೆಗಿಸಿ, ಬಂಡನ್ನು ಹಾಕಿಸಿಬಿಟ್ಟು, ಅಲ್ಲಿಯ ತೂಬುಗಳನ್ನು ದುರಸ್ತಿ ಇಟ್ಟುಕೊಂಡಿದ್ದರೆ, ಈಗ ಬಂದಿರುವ ಪರಿಸ್ಥಿತಿಯನ್ನು ನಾವು ಎದುರಿಸಬಹುದಾಗಿತ್ತು; ಕೆಲವು ಭಾಗಗಳಲ್ಲಿ ಆಹಾರ ಬೆಳೆಯುವುದಕ್ಕೆ ಅವಕಾಶವಾಗುತ್ತಿತ್ತು. ಅಂಥ ಅವಕಾಶಗಳನ್ನು ಕಳೆದುಕೊಂಡು ಕೆರೆಗಳನ್ನು ನಾದುರಸ್ತಿ ಸ್ಥಿತಿಯಲ್ಲಿಟ್ಟುಕೊಂಡು, ತೂಬುಗಳನ್ನು ಸಹ ಮಾಡಿಸದೆ, ಇಂಥ ಪರಿಸ್ಥಿತಿಗೆ ಬಂದಿರುವುದು ಶೋಚನೀಯ. ಅನೇಕ ಸಾರಿ ಕೇಳಿಕೊಂಡು, ಆಶ್ವಾಸನೆಗಳನ್ನು ಕೊಟ್ಟಿದ್ದರೂ ಸಹ, ಮಾಡದೆ ಇರುವುದರಿಂದ ಇವತ್ತಿನ ದಿವಸ ಅಭಾವ ಪರಿಸ್ಥಿತಿ ಉಂಟಾಗಿದೆ.

ಈ ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸಬೇಕಾದರೆ, ಸರ್ಕಾರ ಒಂದು ನಿರ್ದಿಷ್ಟವಾದ ನಿಲುವನ್ನು ತೆಗೆದುಕೊಳ್ಳಬೇಕು. ಯಾವ ಅಚ್ಚುಕಟ್ಟು ಜಮೀನುಗಳಿಂದ ನೀರು ಕಂದಾಯವನ್ನು ಪಡೆಯುತ್ತಿದ್ದೀರೋ, ಅಲ್ಲಿ ಯಾವಾಗ ನೀರಾವರಿ ಬಾವಿ, ಕೆರೆಗಳನ್ನು ಕಟ್ಟಿಸಲಿಲ್ಲವೋ, ಆವಾಗ ಆ ಜಮೀನುಗಳಿಂದ ನೀರಾವರಿ ಕಂದಾಯವನ್ನು ವಸೂಲು ಮಾಡದೆ ಇರುವುದಕ್ಕೆ ಒಂದು ಕಾನೂನನ್ನು ಮಾಡಬೇಕು. ಅಂಥ ಕಾನೂನು ಮಾಡಿದಾಗ ಮಾತ್ರ ಕೆರೆ ದುರಸ್ತಿಯಲ್ಲಿ ಇರುವುದಕ್ಕೆ ಅವಕಾಶವಾಗುತ್ತದೆ.

ಇನ್ನೊಂದು ತೊಂದರೆಯಾಗಿದೆ. ವ್ಯವಸಾಯ ಇಲಾಖೆಯವರೂ, ಪಬ್ಲಿಕ್ ವರ್ಕ್ಸ್ ಇಲಾಖೆಯವರೂ ಸಹಪ್ರಯತ್ನದಿಂದ ಕೆಲಸ ನೋಡುತ್ತಾ ಇಲ್ಲ. ವ್ಯವಸಾಯ ಇಲಾಖೆಯ ಮಂತ್ರಿಗಳು ಬೇರೆ, ಪಬ್ಲಿಕ್‌ವರ್ಕ್ಸ್ ಇಲಾಖೆಯ ಮಂತ್ರಿಗಳು ಬೇರೆ, ಆಹಾರ ಇಲಾಖೆಯ ಮಂತ್ರಿಗಳು ಬೇರೆ ಈ ಮೂರು ಇಲಾಖೆಗಳೂ ಬೇರೆ ಬೇರೆ ಇರುವುದರಿಂದ, ಆಹಾರ ಹೆಚ್ಚಾಗಿ ಬೆಳೆಯುವುದಕ್ಕೆ ಅನಾನುಕೂಲವಾಗುತ್ತಿದೆ ಎಂದು ನನ್ನ ಅಭಿಪ್ರಾಯವಿದೆ. ಈ ಮೂರು ಜನ ಮಂತ್ರಿಗಳೂ ಸೇರಿ ಒಮ್ಮತದಿಂದ ಆಹಾರದ ವಿಷಯದಲ್ಲಿ ಹೆಚ್ಚಿನ ಶ್ರದ್ಧೆವಹಿಸತಕ್ಕಂಥ ಸನ್ನಿವೇಶ ಬರುವವರೆಗೂ ಈ

(ಶ್ರೀ ಪಿ. ಎಸ್. ಲಕ್ಷ್ಮೀಕಾಂತಪ್ಪ)

ಕಷ್ಟ ಪರಿಸ್ಥಿತಿ ಇರುತ್ತದೆ. ಒಬ್ಬರೇ ಈ ಒಂದು ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು. ಈ ಆಹಾರ ಸಮಸ್ಯೆ ನಿವಾರಣೆ ಬಗ್ಗೆ ನಾವು ಅನೇಕ ಸಲ ಹೇಳಿದಾಗ್ಯೂ ಕೂಡ, ಬಾಯಿನಲ್ಲಿ ಹೇಳಿದ್ದು ಹಾಗೆಯೇ ಹೋಗತಕ್ಕಂಥ ಸನ್ನಿವೇಶ ಇದೆ. ನಾವು ಹೇಳಿದಂತೆ ಆಗುತ್ತಾ ಇಲ್ಲ. ಈ ಆಹಾರ ಅಭಾವವನ್ನು ಎದುರಿಸಬೇಕಾದರೆ, ಅದರ ಪೂರ್ಣ ಜವಾಬ್ದಾರಿಯನ್ನು ಒಂದು ಮಂತ್ರಿ ಶಾಖೆ ನಿರ್ವಹಿಸಬೇಕು. ಇದನ್ನು ನಿರ್ವಹಿಸಬೇಕಾದರೆ ತಕ್ಕ ಸಾಧನಗಳಿರಬೇಕು. ಮೊದಲು ನೀರಿನ ವ್ಯವಸ್ಥೆಯಾಗಬೇಕು. ನೀರಿನ ವ್ಯವಸ್ಥೆಯಾಗಬೇಕಾದರೆ ಕೆರೆಯನ್ನು ದುರಸ್ತಿ ಇಟ್ಟುಕೊಳ್ಳಬೇಕು ಇದಕ್ಕೆ ಸಂಬಂಧಪಟ್ಟ ಇಲಾಖೆ ಕೆಲಸ ಮಾಡಬೇಕು ಹೀಗೆ ಕೆಲಸವಾಗುವುದಕ್ಕೆ ಏನು ಆಗಬೇಕು ಅನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ಈಗಿರುವ ಅಭಾವ ಕಷ್ಟವನ್ನು ಹೋಗಲಾಡಿಸಬೇಕಾದರೆ, ನೀರಾವರಿ ಸೌಲಭ್ಯವನ್ನು ಸರಿಯಾದ ರೀತಿಯಲ್ಲ ಜವಾಬ್ದಾರಿ ಸರ್ಕಾರ ವಹಿಸಬೇಕು.

ಅದರ ಜೊತೆಗೆ, ಮಲೆನಾಡಿನಲ್ಲಿ ಗಾಡಿಗಳಲ್ಲಿ ಗೊಬ್ಬರವನ್ನು ತೆಗೆದುಕೊಂಡು ಹೋಗುವುದಕ್ಕೆ ಸರಿಯಾದ ಗಾಡಿದಾರಿಗಳು ಸಹ ಇಲ್ಲದೆ ಇರತಕ್ಕಂಥ ಪ್ರದೇಶಗಳು ಬಹಳವಿದೆ. ಅಂಥ ಸ್ಥಳಗಳಿಗೆ ಸಾಧಾರಣವಾದ ಮಟ್ಟಿಗೆ ಸೌಕರ್ಯವನ್ನು ಒದಗಿಸದಿದ್ದರೆ, ಅಲ್ಲಿಗೆ ಗೊಬ್ಬರ ಹೇಗೆ ಹೋಗಬೇಕು ? ಪುಷ್ಕಳವಾಗಿ ಗೊಬ್ಬರ ಬೀಳದಿದ್ದರೆ, ಯಾವ ಬೆಳೆಯೂ ಸರಿಯಾಗಿ ಬರುವುದಿಲ್ಲ. ನಮ್ಮ ಹಳ್ಳಿಗಳ ಕಡೆ ಹೇಳುವ ಒಂದು ಗಾದೆ ಜ್ಞಾಪಕಕ್ಕೆ ಬರುತ್ತದೆ. ಅದು ಏನು ಹೇಳುತ್ತದೆಂದರೆ, ''ದಡ್ಡನ ಗದ್ದೆಗೆ ಗೊಬ್ಬರವೇ ಮದ್ದು'' ಎಂತಹದಡ್ಡನೇ ಆಗಿರಲಿ, ಅವನು ಹೆಚ್ಚಿಗೆ ಗೊಬ್ಬರವನ್ನು ಹಾಕಿದರೆ ಬೆಳೆಯನ್ನು ಬೆಳೆಯಬಲ್ಲ ಎಂದು. ಅಂಥ ಒಂದು ಸೌಲಭ್ಯವಾಗಬೇಕಾದರೆ, ಅದರಲ್ಲಿಯೂ ಮಲೆ ನಾಡು ಭಾಗದಲ್ಲಿ, ಗೊಬ್ಬರವನ್ನು ತೆಗೆದು ಕೊಂಡು ಹೋಗುವುದಕ್ಕೆ ಗಾಡಿ ಮಾರ್ಗ ಬಹಳ ಅವಶ್ಯಕ, ಸಣ್ಣ ಸಣ್ಣ ಮಾರ್ಗಗಳನ್ನಾದರೂ ಮಾಡಿದರೆ ಅದಕ್ಕೆ ಅವಕಾಶವಾಗುತ್ತದೆ.

ಸರ್ಕಾರ ಕೆರೆಗಳನ್ನು ದುರಸ್ತಿಯಲ್ಲಿ ಇಟ್ಟುಕೊಳ್ಳಬೇಕು. ನಂತರ, ಈ 5-6 ವರ್ಷಗಳಿಂದ ನೋಡುವುದಾದರೆ, ಹೆಚ್ಚಿಗೆ ಮಳೆ, ಇಲ್ಲ ಕಡಿಮೆ ಮಳೆಯ ದೆಶೆಯಿಂದ, ಅನಾವೃಷ್ಟಿ, ಅತಿವೃಷ್ಟಿಯಾಗಿ, ನೈಸರ್ಗದೊಂದಿಗೆ ಹೋರಾಡುತ್ತಿದ್ದೇವೆ. ಇಂಥ ಸನ್ನಿವೇಶಗಳನ್ನು ಹೋಗಲಾಡಿಸುವುದಕ್ಕೆ ಸಾಕಷ್ಟು ಬಾವಿಗಳಿಗೆ ಪಂಪುಗಳನ್ನು ಹಾಕಿಕೊಳ್ಳಬೇಕು ಮಲೆನಾಡಿನವರಿಗೆ ಸಾಕಷ್ಟು ಉತ್ತೇಜನ ಕೊಡಬೇಕಾಗಿದ್ದರೆ, ಎಲೆಕ್ಟ್ರಿಕ್ ಇಲಾಖೆಯವರು ಅವರಿಗೆ ಇಷ್ಟೇ ವರಮಾನ ಒಂದು ಪಂಪ್‌ಸೆಟ್ ಕನೆಕ್ಷನ್ನಿಂದ ಬರಬೇಕೆಂದು ಏನು ಒಂದು ನಿಯಮವನ್ನು ಹಾಕಿಕೊಂಡಿದ್ದಾರೆ, ಅದನ್ನು ಸಡಲಿಸಿ, ಯಾವ ಭಾಗದಲ್ಲಿ ಕೇಳಿದರೂ ಕೂಡ ವಿದ್ಯುಚ್ಛಕ್ತಿ ಸೌಲಭ್ಯವನ್ನು ಕೊಡಬೇಕು ಮತ್ತು ಮುಂದುವರಿಸಬೇಕು. ಹೀಗೆ ಮುಂದುವರಿಸುತ್ತಾ, ಒಬ್ಬೊಬ್ಬರೂ ವಿದ್ಯುಚ್ಛಕ್ತಿ ತೆಗೆದುಕೊಂಡಹಾಗೆ, ಬೇಸಾಯಗಾರರು ಅಭಿವೃದ್ಧಿ ಹೊಂದುವುದಕ್ಕೆ ಅವಕಾಶವಾಗುತ್ತದೆ. ಪ್ರತಿಯೊಬ್ಬ ಬೇಸಾಯಗಾರನೂ ವಿದ್ಯುಚ್ಛಕ್ತಿ ಉಪಯೋಗ ಹೊಂದಲು ಉತ್ತೇಜನ ಕೊಟ್ಟರೆ, ಮುಂದಕ್ಕೆ ಇಲಾಖೆಯ ವರಮಾನ ತಾನಾಗಿಯೇ ಹೆಚ್ಚಲು ಅವಕಾಶವಾಗುತ್ತದೆ.

ಈ ಒಂದು ಸನ್ನಿವೇಶದಲ್ಲಿ ಈ ವಿದ್ಯುಚ್ಛಕ್ತಿ ಮಂಡಳಿಯ ಅಲಕ್ಷ್ಯ ಮನೋಭಾವನೆಯನ್ನು ತೋರಿಸಲು, ಒಂದು ಉದಾಹರಣೆಯನ್ನು ಈ ಸಭೆಯ ಮೂಲಕ ಸರ್ಕಾರಕ್ಕೆ ತಿಳಿಸಬೇಕಾಗಿದೆ, ಸೊರಬ ತಾಲ್ಲೂಕು ಲಕ್ಕವಳ್ಳಿ ಹತ್ತಿರ ಒಂದು ಹಳ್ಳಿಯಲ್ಲಿ ಲಿಫ್ಟ್ ಇರಿಗೇಷನ್ ಸೊಸೈಟಿ ಅಂತ ಹೇಳಿ ಒಂದು ಸೊಸೈಟಿಯನ್ನು ಮಾಡಿ, 56 ಸಾವಿರ ರೂಪಾಯಿ ಖರ್ಚುಮಾಡಿ ವಿದ್ಯುಚ್ಛಕ್ತಿ ಇಲಾಖೆಯವರಿಂದ ಒಂದು ಲಿಫ್ಟ್ ಇರಿಗೇಶನ್ ಪಂಪನ್ನು 1957 ನೇ ಇಸವಿಯಲ್ಲಿ ಹಾಕಿಸಿದರು. 56 ಸಾವಿರ ಖರ್ಚು ಮಾಡಿಯೂ, ಸರಿಯಾದ ರೀತಿಯಲ್ಲಿ ಪಂಪು ಹಾಕದ್ದರಿಂದ, ಇವತ್ತಿಗೂ ಅಲ್ಲಿನ ರೈತರಿಗೆ ನೀರು ಕೊಟ್ಟಿಲ್ಲ. ಅದಕ್ಕೆ ಸರ್ಕಾರದ ಗ್ರಾಂಟು ನಾಲ್ಕು ಸಾವಿರ ರೂಪಾಯಿ ಮಾತ್ರ ಇರುವುದರಿಂದ, ಮಿಕ್ಕ 53 ಸಾವಿರ ರೂಪಾಯಿಯನ್ನು ರೈತರೇ ಕೊಟ್ಟಿದ್ದಾರೆ. ಈಗ ಅಲ್ಲಿ ಯಾವ ಪರಿಸ್ಥಿತಿ ಇದೆಯೆಂದರೆ, ಪುನಃ ರೈತರಿಗೆ ಬೇರೆ ಸಾಲಗಳು ಸಿಗದೆ ನಿರಾಶಾ ಮನೋಭಾವದಿಂದ ಅವರು ನರಳುತ್ತಿದ್ದಾರೆ. ಈ ವಿಷಯವನ್ನು ನಮ್ಮ ಮುಖ್ಯಮಂತ್ರಿಗಳಿಗೂ, ಸಂಬಂಧಪಟ್ಟ ಮಂತ್ರಿಗಳಿಗೂ, ಎಲೆಕ್ಟ್ರಿಸಿಟಿ ಬೋರ್ಡಿನವರಿಗೂ, ಎಲ್ಲರಿಗೂ ತಿಳಿಸಿದ್ದೇವೆ. 10-12 ಸಾರಿ ಎಲ್ಲ ಅಧಿಕಾರ ವರ್ಗದವರನ್ನೂ ಕೇಳಿಕೊಂಡಿದ್ದೇವೆ; ಜಿಲ್ಲಾ ಅಧಿಕಾರಿಗಳನ್ನೂ ಕರೆದುಕೊಂಡು ಹೋಗಿ ತೋರಿಸಿದ್ದೇವೆ. ಇವತ್ತಿಗೂ ವಿದುಚ್ಛಕ್ತಿ ಸಪ್ಲೈ ಆಗದೆ, ಒಂದು ನಿರಾಶಾ ಮನೋಭಾವ ಮೂಡಿದೆ. ಸಾವಿರ ಎಕರೆಗೆ ಉಪಯೋಗವಾಗಿ ಭಾರಿ ಬೆಳೆಯನ್ನು ತೆಗೆಯಬೇಕಾಗಿದ್ದ ಜಮೀನು ನಿರುಪಯೋಗವಾಗಿ ನಿಂತಿದೆ, ಅಧಿಕಾರಿಗಳು ಮಾಡಿದ ತಪ್ಪಿಗಾಗಿ ರೈತರು ದುಷ್ಫಲ ಅನುಭವಿಸಬೇಕಾಗಿದೆ. ಸಣ್ಣ ಸಣ್ಣ ವಿಚಾರಗಳಲ್ಲಿಯೂ ಸಹ ಅಲಕ್ಷ್ಯ ಮಾಡಿ ಸಾವಿರ ಎಕರೆ ಭೂಮಿಯನ್ನು ಬಂಜರು ಇಟ್ಟಿರುವಂತೆ

ಅಧಿಕಾರಿಗಳು ಮಾಡಿದ್ದಾರೆ. ಈ ಅಲಕ್ಷ್ಯ ಮನೋಭಾವಕ್ಕಾಗಿ ಸರ್ಕಾರ ಸಂಬಂಧಪಟ್ಟವರಿಗೆ ಸರಿಯಾದ ರೀತಿಯಲ್ಲಿ ಎಚ್ಚರಿಕೆ ಕೊಡಬೇಕೆಂದು ಹೇಳಿ ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.

ಇನ್ನು ಆಹಾರದ ಒಂದು ಬೆಳೆಗೆ ಹೆಚ್ಚಿಗೆ ನಿಮ್ಮಿಂದ ಆಗಬೇಕಾದ್ದು ಎಂದರೆ, ವ್ಯವಸಾಯಗಾರರು ಬೆಳೆದಿರತಕ್ಕಂಥ ಪದಾರ್ಥಗಳಿಗೆ ಸರಿಯಾದ ದರ ಸಿಗಬೇಕು. ಈ ಸರಿಯಾದ ದರ ಸಿಗದಿದ್ದರೆ, ಅವರಿಗೆ ಏನೇನೆ ಉತ್ತೇಜನ ಕೊಡಿ, ಎಷ್ಟೇ ಹಣವನ್ನು ಕೊಡಿ, ಸಾಲವನ್ನು ಕೊಡಿ ಏನೂ ಉಪಯೋಗವಾಗುವುದಿಲ್ಲ. ಅವರು ಬೆಳದಿರತಕ್ಕಂಥ ಪದಾರ್ಥಗಳಿಗೆ ಧಾರಣೆ ಸಿಕ್ಕರೆ ಮಾತ್ರ ಹೆಚ್ಚಿಗೆ ಬೆಳೆಯುವುದಕ್ಕೆ ಉತ್ತೇಜನವಾಗುತ್ತದೆ. ಸರಿಯಾದ ರೀತಿಯಲ್ಲಿ ಸಾಲದ ಸೌಲಭ್ಯವೂ ಇರಬೇಕು; ಸಹಕಾರ ಸಂಘಗಳ ಮೂಲಕ ಸೌಲಭ್ಯಗಳಿದ್ದರೂ, ಕೆಲವು ತೊಂದರೆಗಳನ್ನು ಅನಭವಿಸುತ್ತಾ ಇದ್ದೇವೆ. ಯಾರು ಸಕಾಲದಲ್ಲಿ ತೆಗೆದುಕೊಂಡ ಸಾಲವನ್ನು ವಾಪಸು ಕೊಡುತ್ತಾರೋ, ಅವರಿಗೆ ಪುನಃ ಸಾಲ ದೊರೆಯುವುದಿಲ್ಲ. ಸಾಲ ವಾಪಸು ಮಾಡದಿದ್ದವರು, ವಾಪಸು ಮಾಡಿದವರು ಎಲ್ಲರೂ ಒಂದೇಸಮ ಸಾಲ ತೀರಿಸಿದ್ದರೂ ಪುನಃ ಸಾಲ ಸಿಗದೆ ಜನ ತೊಂದರೆ ಅನುಭವಿಸುತ್ತಿದ್ದಾರೆ. ಸಹಕಾರ ಸಂಘದ ನಿಯಮಗಳಲ್ಲಿ ಬದಲಾವಣೆಯಾಗಬೇಕು. ಈ ಸಹಕಾರ ಸಂಘಗಳ ಬದಲು ಹೋಬಳಿ ಹೆಡ್‌ಕ್ವಾರ್ಟರುಗಳಲ್ಲಿ ಶೆಡ್ಯೂಲ್ಡ್ ಬ್ಯಾಂಕುಗಳನ್ನು ಪ್ರಾರಂಭಿಸಿ, ಈ ಶೆಡ್ಯೂಲ್ಡ್ ಬ್ಯಾಂಕ್ ಮೂಲಕ ಸಾಲ ಸೌಲಭ್ಯ ಸಕಾಲದಲ್ಲಿ ಸಿಗುವಂತೆ ಏರ್ಪಾಡು ಮಾಡಬೇಕು. ಹೆಚ್ಚಿಗೆ ಬೆಳೆ ಬೆಳೆಯುವುದಕ್ಕೆ ಪ್ರೋತ್ಸಾಹ ಕೊಡಬೇಕು. ಬೆಳೆಯತಕ್ಕಂಥ ಪದಾರ್ಥಗಳಿಗೆ ಹೋದ ವರ್ಷ ಲೆವಿ ಆರ್ಡರ್ ಮೇರೆಗೆ ದರಗಳನ್ನು ನಿಗದಿಮಾಡುವಾಗ ಕಡಿಮೆ ಮಾಡಿದ್ದೀರಿ. ನಮ್ಮಲ್ಲಿ ಬೆಳೆಯತಕ್ಕ ಬತ್ತಕ್ಕೆ, ಹೋದವರ್ಷ 45 ರೂಪಾಯಿ ಇದ್ದದ್ದನ್ನು, 39 ರೂಪಾಯಿಗೆ ನಿಗದಿ ಮಾಡಿದ್ದೀರಿ. ಅದರಲ್ಲಿ ಇನ್ನೊಂದು ಲೋಪ ದೋಶವನ್ನು ನೋಡುತ್ತಿದ್ದೇವೆ. ಯಾವುದೇ ಒಂದು ಕಾಲಕ್ಕೆ ವ್ಯಾಪಾರಗಾರನು ಅಕ್ಕಿಯಿಂದ 8 ಆಣೆ, 1 ರೂಪಾಯಿ ಫ್ರೀ ಮಾರ್ಕೆಟ್ಟಿನಲ್ಲಿ ಲಾಭ ತೆಗೆದುಕೊಳ್ಳುವುದಕ್ಕೆ ಅವಕಾಶವಿರಲಿಲ್ಲ. ಈ ಒಂದು ಲೆವಿ ಆರ್ಡರ್ ಹೊರಟಾರಭ್ಯ 10 ರೂಪಾಯಿವರೆಗೆ ಲಾಭ ಬರುವುದಕ್ಕೆ ಅವಕಾಶವನ್ನು ದರದಲ್ಲಿ ಕಲ್ಪಿಸಿಕೊಟ್ಟಿದ್ದೀರಿ. ಬೆಳೆಯುವವನಿಗೆ ಏನಾದರೂ ಲಾಭ ಬರಬೇಕಾದರೆ, ಅಕ್ಕಿಯ ರೀಟೇಲ್ ದರದಲ್ಲಿ ಸಿಕ್ಕುವ 12 ರೂಪಾಯಿ ವ್ಯತ್ಯಾಸವನ್ನು ಬೆಳೆಯುವಾತನಿಗೆ ಬರುವಂತೆ ಮಾಡಿ ಒಂದು ಕ್ವಿಂಟಾಲನ್ನು 52 ರೂಪಾಯಿಗೆ ಕೊಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಹಿಂದೆ ಕಂಟ್ರೋಲು ಇದ್ದ ಕಾಲದಲ್ಲಿ ಯಾವ ರೀತಿಯಾಗಿ ಕಮಿಷನ್ನು ಮೇಲೆ ಒಂದು ರೂಪಾಯಿ ಅಥವಾ ಎಂಟಾಣೆ ಎಂದು ಕೊಡುತ್ತಿದ್ದರೋ ಆ ರೀತಿಯಾಗಿ ಮಾರಾಟದ ಕಮಿಷನ್ ಎಂದು ಕೊಡುವ ವ್ಯವಸ್ಥೆ ಮಾಡುವುದು ಸೂಕ್ತವಾಗಿದೆ. ಇದರಿಂದ ಬೆಳೆದವನಿಗೆ ಒಂದು ನಿಗದಿಯಾದ ಬೆಲೆ ಸಿಗಲು ಅವಕಾಶವಾಗುತ್ತದೆ. ಹೋದ ವರ್ಷ ನಮ್ಮ ಶಿವಮೊಗ್ಗ ಜಿಲ್ಲೆಗೆ ನಿಗದಿಯಾಗಿದ್ದ ಬೆಲೆಗಿಂತ ಈ ಸಾರಿಯ ನಿಗದಿ ಬೆಲೆ ಬಹಳ ಕಡಿಮೆಯಾಗಿದೆ. ಇದನ್ನು ಸರಿಪಡಿಸಿ ಬೆಳೆಯುವವನಿಗೆ ಸರಿಯಾದ ಬೆಲೆ ಸಿಗುವಂತೆ ವ್ಯವಸ್ಥೆ ಮಾಡಬೇಕಾದುದು ಅಗತ್ಯವಾಗಿದೆ. ಈಗಿರುವಂತೆ ಆಗಿರುವ 10-12 ರೂಪಾಯಿಗಳ ವ್ಯತ್ಯಾಸವನ್ನೂ ಸರಿಪಡಿಸಬೇಕಾಗಿದೆ. ಹಿಂದಿನ ವರ್ಷದಲ್ಲಿ ನಮ್ಮ ಶಿವಮೊಗ್ಗಾ ಜಿಲ್ಲೆಯಲ್ಲಿ 45-46 ರೂಪಾಯಿಗಳಷ್ಟು ಇದ್ದುದಕ್ಕೆ ಈ ಸಾರಿ ಮಾಡಿರುವ ಸರಕಾರದ ಆಜ್ಞೆಯಂತೆ ಸುಮಾರು 39-40 ರೂಪಾಯಿಗಳಷ್ಟು ಬರುತ್ತದೆ. ಇದನ್ನು ಸರಿಪಡಿಸಿದರೆ ಬೆಳೆಯುವವರಿಗೂ ಸರಿಯಾದ ಬೆಲೆ ಸಿಗಲು ಅವಕಾಶವಾಗುತ್ತದೆ. ಇದರ ಬಗ್ಗೆ ತಕ್ಕ ಏರ್ಪಾಡು ಮಾಡಬೇಕೆಂದು ಸಲಹೆ ಮಾಡುತ್ತೇನೆ. ಅಲ್ಲದೆ ಪಂಪುಸೆಟ್ಟುಗಳಿಗಾಗಿ ಅಲ್ಲಲ್ಲಿ ಸರಿಯಾಗಿ ಎಲೆಕ್ಟ್ರಿಸಿಟಿಯನ್ನು ಕೊಡುವ ವ್ಯವಸ್ಥೆಯನ್ನೂ ಮಾಡಬೇಕು ಮತ್ತು ವ್ಯವಸಾಯಗಾರರಿಗೆ ಸರಕಾರ ಆದಷ್ಟು ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು, ಅಲ್ಲದೆ ಎಲ್ಲೆಲ್ಲಿ ರೈತರಿಗೆ ಬಹಳ ಅನಾನುಕೂಲಗಳು ಆಗುತ್ತಿವೆಯೋ ಅಂತಹ ಕಡೆಗಳಲ್ಲಿ ಎಲೆಕ್ಟ್ರಿಸಿಟಿಯನ್ನು ಸುಲಭ ರೀತಿಯಲ್ಲಿ ಒದಗಿಸಿಕೊಡಲು ಸರಕಾರ ಸಹಾಯಮಾಡಬೇಕು. ಇವುಗಳನ್ನೆಲ್ಲಾ ಮಾಡಿದರೆ ದೇಶದಲ್ಲಿರುವ ಈಗಿನ ಅಭಾವದ ಒಂದು ಸಮಸ್ಯೆಯನ್ನು ತಪ್ಪಿಸಲು ಸಹಾಯವಾದೀತು. ಇವುಗಳನ್ನೆಲ್ಲಾ ಮಾಡಲು ಸರಕಾರ ಪ್ರಯತ್ನ ಮಾಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಹೊಳೆನರಶೀಪುರ).—ಮಾನ್ಯ ಅಧ್ಯಕ್ಷರೇ, ಈಗ ಇಲ್ಲಿ ಶ್ರೀಮಾನ್ ಸಿದ್ದಯ್ಯನವರು ಏನು ನಿರ್ಣಯವನ್ನು ತಂದಿದ್ದಾರೆ ಆ ನಿರ್ಣಯ ಮಾನ್ಯ ಸಭೆಯ ಎಲ್ಲ ಸದಸ್ಯರುಗಳೂ ಹೃತ್ಪೂರ್ವಕವಾಗಿ ಸ್ವಾಗತಿಸತಕ್ಕಂತಹ ಒಂದು ನಿರ್ಣಯ ಎಂದು ಹೇಳಬಹುದು. ಈ ನಿರ್ಣಯವನ್ನು ನೋಡಿದರೆ ಬಹುಶಃ ಸರಕಾರ ಈ ದಿವಸ ನಿದ್ರೆಯಿಂದ ಮಲಗಿದೆ. ಆ ನಿದ್ರೆಯಿಂದ ಮಲಗಿರತಕ್ಕ ಸರಕಾರವನ್ನು ಹೊಡೆದೆಬ್ಬಿಸಿ ಚುರುಕುಗೊಳಿಸುವುದಕ್ಕಾಗಿ ಶ್ರೀಮಾನ್ ಸಿದ್ದಯ್ಯನವರು ಈ ನಿರ್ಣಯವನ್ನು ತಂದಿದ್ದಾರೆ ಎನ್ನುವುದು ವ್ಯಕ್ತವಾಗುತ್ತದೆ. ಏಕೆಂದರೆ ಈ ನಿರ್ಣಯದ

(ಶ್ರೀ ಹೆಚ್. ಡಿ. ದೇವೇಗೌಡ)

ಒಂದು ಅರ್ಥವನ್ನು ನೋಡುವುದಾದರೆ ಸರಕಾರ ತನ್ನ ನಿರ್ಣಯವನ್ನು ರೀಓರಿಯಂಟೇಟು ಮಾಡ ಬೇಕಾಗಿದೆ ಮತ್ತು ಈಗ ತಂದಿರತಕ್ಕ ನಿರ್ಣಯವೂ ಕೂಡ ಒಂದು ಅರ್ಥವುಳ್ಳ ನಿರ್ಣಯವಾಗಿದೆ. ಸರಕಾರ ಈ ದಿವಸ ಆಹಾರವನ್ನು ಹೆಚ್ಚು ಹೆಚ್ಚಾಗಿ ಬೆಳೆಯಬೇಕು ಎಂಬುದರ ಬಗ್ಗೆ ಬಹುಶಃ ನಮ್ಮ ಈ ಸಭೆಯಲ್ಲಿ ಹಾಗೂ ದೇಶದ ಜನತೆಯಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಆದರೆ ಹೇಗೆ ಬೆಳೆಯ ಬೇಕು ಎನ್ನುವುದೇ ನಮ್ಮ ಮುಂದಿರುವ ಪ್ರಶ್ನೆ. ಇವಕ್ಕೆಲ್ಲಾ ಹಣ ಎಲ್ಲಿದೆ? ಇರತಕ್ಕ ಹಣವನ್ನು ಯಾವ ರೀತಿಯಾಗಿ ಉಪಯೋಗಿಸಿಕೊಳ್ಳಬೇಕು ? ಫುಡ್ ಪ್ರೊಡಕ್ಷನ್ನನ್ನು ಹೆಚ್ಚು ಮಾಡಲು ಯಾವ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಂಡು ಮಾಡಬೇಕು ಎನ್ನುವುದೇ ನಮ್ಮ ಮುಂದೆ ಇರುವ ಪ್ರಶ್ನೆ. ಕಳೆದ ತಿಂಗಳು ಈ ಸಭೆಯ ನಾಯಕರಾದ ಶ್ರೀ ಮಾನ್ ನಿಜಲಿಂಗಪ್ಪನವರು ದೆಹಲಿಯಿಂದ ಬಂದಾಗ ವಿಮಾನ ನಿಲ್ದಾಣದಲ್ಲಿ ಪತ್ರಿಕರ್ತರೊಡನೆ ಮಾತನಾಡತಕ್ಕ ಕಾಲದಲ್ಲಿ ಈ ಸಂಸ್ಥಾನದಲ್ಲಿ ಆಹಾರವನ್ನು ಶರವೇಗದಿಂದ ಬೆಳೆಯಲು ತಕ್ಕ ಕಾರ್ಯಕ್ರಮವನ್ನು ಸರಕಾರ ಹಾಕಿಕೊಳ್ಳುತ್ತದೆ ಎಂದು ನಾವು ಪೇಪರಿನಲ್ಲಿ ಓದಿದೆವು. ಇದರಿಂದ ನಾವು ಆಗ ಊಹಿಸಿದೆವು. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ದೆಹಲಿಯಿಂದ ಬರುವಾಗ ಜೋಬು ತುಂಬಾ ದುಡ್ಡನ್ನು ತೆಗೆದುಕೊಂಡು ಬಂದಿದ್ದಾರೆಯೇ ಇಲ್ಲವೇ ಇನ್ನಾವ ರೀತಿಯಾಗಿ ಲೆಕ್ಕಾಚಾರ ಹಾಕಿದರು ಎನ್ನುವುದನ್ನು ನಾವೆಲ್ಲ ಯೋಚನೆ ಮಾಡುತ್ತಿದ್ದೆವು. ಇದಕ್ಕೆಲ್ಲಾ ಹಣವೆಲ್ಲಿಂದ ಬರುತ್ತದೆ ? ಇದರಂತೆ ನಾವು ನಮ್ಮ ಕ್ಷೇತ್ರದಿಂದ ಮಾನ್ಯ ಮುಖ್ಯ ಮಂತ್ರಿಗಳಾದ ನಿಜಲಿಂಗಪ್ಪನವರಿಗೆ ಪತ್ರ ಬರೆದರೆ ಅದರೊಳಗೆ 'ವೇಟ್' ಎಂದು ಬರೆಯುತ್ತಾರೆ. ಇಲ್ಲಿಯೂ ಕೂಡ ಈ ಆಹಾರ ಸಮಸ್ಯೆಯ ನಿರ್ಣಯದ ಮೇಲೆ ಹಿಂದೆ ಮೂರು ದಿನಗಳ ಕಾಲ ಚರ್ಚೆ ನಡೆಯಿತು. ಈಗಲೂ ಎರಡು ದಿನಗಳಿಂದ ಚರ್ಚೆಯಾಗುತ್ತಿದೆ. ಇದರಿಂದ ಸಭೆಯ ಕಾಲ ವ್ಯರ್ಥವಾಗಿ ಹೋಗುತ್ತದೆ ಎಂದು ಹೇಳುವ ಗೋಜಿಗೆ ನಾನು ಹೋಗವುದಿಲ್ಲ. ಇಂತಹ ಒಂದು ನಿರ್ಣಯವನ್ನು ಶ್ರೀಮಾನ್ ಸಿದ್ದಯ್ಯನವರು ಕೂಡ ಇಲ್ಲಿ ತಂದು ಸರಕಾರವನ್ನು ಚುರುಕು ಗೊಳಿಸಲು ಈ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಇಷ್ಟು ದಿವಸಗಳೂ ಜಡತ್ವದಿಂದ ಇರುವ ಸರಕಾರವನ್ನು ಹೊಡದೆಬ್ಬಿಸಲು ಸರ್ಕಾರಕ್ಕೆ ಹಣ ಎಲ್ಲಿದೆ ಎನ್ನುವುದೇ ಈಗ ಇರುವ ಪ್ರಶ್ನೆ. ನಮ್ಮ ಮುಂದೆ ಇರುವ ಯೋಜನೆಗಳು ಡಿಫನ್ಸ್ ಓರಿಯಂಟೇಟೆಡ್ ಆಗಿರಬೇಕು, ಅಗ್ರಿಕಲ್‌ಚರಲ್ ಡೆವಲಪ್‌ಮೆಂಟು ಆಗಬೇಕು. ಹೀಗೆ ಪ್ರತಿಯೊಂದು ಡೆವಲಪ್‌ಮೆಂಟು ಕೆಲಸಗಳಲ್ಲಿಯೂ ಒಂದ ಕ್ಕೊಂದು ಲಿಂಕ್ ಇದ್ದಂತೆ ಇರಬೇಕು. ಇರಿಗೇಷನ್ ಡೆವಲಪ್ ಆಗಬೇಕು, ಪವರ್ ಡೆವಲಪ್‌ಮೆಂಟು ಆಗಬೇಕು, ರೂರಲ್ ಡೆವಲಪ್‌ಮೆಂಟು ಆಗಬೇಕು, ಹೀಗೆ ಒಂದಕ್ಕೊಂದು ಕೋ ಆರ್ಡಿನೇಷನ್ ಫುಡ್ ಪ್ರೊಡಕ್ಷನ್ನಿನಲ್ಲಿ ಹೇಗೆ ಮಾಡಬೇಕು ಎನ್ನುವುದು ನಮ್ಮ ಮುಂದಿರುವ ಪ್ರಶ್ನೆ. ಆದರೆ ಯಾವ ಇಲಾಖೆಯಲ್ಲೇ ಆಗಲಿ ಹಣವನ್ನು ಖರ್ಚು ಮಾಡಲು ನಮ್ಮಲ್ಲಿರತಕ್ಕ ರಿಸೋರ್ಸುಗಳಲ್ಲಿ ಎಷ್ಟು ಮಟ್ಟಿಗೆ ಉಪಯೋಗಿಸಲು ಸಾಧ್ಯ ಎನ್ನುವುದೇ ನಮ್ಮ ಮುಂದಿರುವ ಪ್ರಶ್ನೆ. ನಿನ್ನೆಯ ದಿನ ಇಲ್ಲಿ ಮಾನ್ಯ ಸಭಾಧ್ಯಕ್ಷರು ಇಲ್ಲಿ ಸರಕಾರದವರು ಆಹಾರದ ಬಗ್ಗೆ ಯಾವ ಯಾವ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ, ಯಾವ ರೀತಿಯಾದ ಯೋಜನೆಯನ್ನು ಮಾಡಿದ್ದಾರೆನ್ನುವುದನ್ನು ಈ ಸಭೆಗೆ ಮೊದಲೇ ತಿಳಿಸಿದರೆ ಅದರಿಂದ ಇಲ್ಲಿನ ಸದಸ್ಯರುಗಳಿಗೆ ಹೆಚ್ಚು ಉಪಯೋಗವಾಗಿ ಇನ್ನೂ ಹೆಚ್ಚು ಸಲಹೆಗಳನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆ ಮತ್ತು ಈ ಸಭೆಯ ಸದಸ್ಯರುಗಳ ಚರ್ಚೆಗೂ ಅನುಕೂಲವಾಗುತ್ತದೆ ಎಂದು ಹೇಳಿದರೂ ಕೂಡ ಸರಕಾರದವರು ಫುಡ್ ಪ್ರೊಡಕ್ಷನ್ ಬಗ್ಗೆ ಇಲ್ಲಿ ಇಂದು ಏನನ್ನೂ ಹೇಳಲಿಲ್ಲ. ಹಾಗೆ ಸರಕಾರ ತಿಳಿಸಿದ್ದರೆ ಈ ಸಭೆಯ ಕಾಲ ವ್ಯರ್ಥವಾಗದ ರೀತಿ ಯಲ್ಲಿ ಸಭೆಯ ಸದಸ್ಯರು ಇದಕ್ಕಾಗಿ ಎಲ್ಲಿಂದ ಹಣ ಒದಗಿಸಬೇಕು ಎನ್ನುವುದನ್ನು ಚೆನ್ನಾಗಿ ಚರ್ಚೆ ಮಾಡಬಹುದಾಗಿತ್ತು ಎಂದು ನಿನ್ನೆಯ ದಿನವೇ ಇಲ್ಲಿ ಮಾನ್ಯ ಸಭಾಪತಿಗಳು ತಿಳಿಸಿದ್ದರು. ನಾನೂ ಕೂಡ ಇವೊತ್ತು ಬೆಳಗ್ಗೆ ಇಲ್ಲಿಗೆ ಬಂದಾಗ ಸರಕಾರದ ವತಿಯಿಂದ ಏನಾದರೂ ಸರಿಯಾದ ವಿವರಗಳು ಬರುತ್ತವೆ ಎಂದು ಆಶಿಸಿದ್ದೆ, ಜವಾಬ್ದಾರಿಯುತವಾದ ಸಲಹೆಗಳು ಬರಬಹುದು ಎನ್ನುವ ಆಸೆ ಯಿಂದಲೂ ಬಂದೆ. ಇದುವರೆಗೂ ಯಾರೂ ಇಲ್ಲಿ ಹೇಳಲಿಲ್ಲ. ಆದರೆ ನಮ್ಮ ಒಂದು ಸಲಹೆ ಗಳನ್ನು ಈಡೇರಿಸುವುದಕ್ಕಾದರೂ ಸಾಧ್ಯವಿದೆಯೇ ಎಂದು ಇಲ್ಲಿ ನಾನು ಕೇಳಬೇಕಾಗಿದೆ. ನಿನ್ನೆ ದಿವಸ ಇಲ್ಲಿ ನಮ್ಮ ಮಾನ್ಯ ಉಪಮಂತ್ರಿಗಳಾಗಿರುವ ಶ್ರೀಮಾನ್ ಆಲೂರು ಹನು ಮಂತಪ್ಪನವರು ಮೈನರು ಇನ್‌ವೆಸ್ಟಿಗೇಷನ್ನು ಪ್ರಾಜೆಕ್ಟುಗಳಿಗಾಗಿ ಒಂದು ಸಬ್‌ಡಿವಿ ಜನ್ನು ಮಾಡುವುದಕ್ಕಾಗಿ ಅವರ ಎಸ್ಟಾಬ್ಲಿಷ್‌ಮೆಂಟ್‌ಗಾಗಿ ಸುಮಾರು 50 ಲಕ್ಷ ರೂಪಾಯಿ ಗಳಷ್ಟು ಖರ್ಚು ಮಾಡಿದ್ದೇವೆಂದು ಹೇಳಿದರು. ಇಂತಹ ಅವಶ್ಯಕತೆಯಾದರೂ ಏನಿತ್ತು ? ನಮಗೆ ಹಣದ ಕೊರತೆ ಇರುವಾಗ ಒಂದು ಇನ್‌ವೆಸ್ಟಿಗೇಷನ್ ಸರ್ಕಲ್ ಮಾಡಿ ಅದರ ಎಸ್ಟಾಬ್ಲಿಷ್ ಮೆಂಟ್‌ಗಾಗಿ ಸರಕಾರ ಇಂದು 50 ಲಕ್ಷದಷ್ಟು ಹಣವನ್ನು ಖರ್ಚು ಮಾಡುವುದು ಸೂಕ್ತವಾಗಿದೆಯೇ

ಎಂದು ನಾನು ಇಲ್ಲಿ ಕೇಳುತ್ತೇನೆ. ಇಂತಹ ಕಾಲದಲ್ಲಿ ಇಷ್ಟು ಹಣವನ್ನು ಇಲ್ಲಿ ಖರ್ಚು ಮಾಡಬಾರದಾಗಿತ್ತು. ಇದಕ್ಕೆ ಬದಲಾಗಿ ಆಹಾರದ ಉತ್ಪಾದನೆಯನ್ನು ಎಲ್ಲಿ ಹೆಚ್ಚು ಮಾಡಬಹುದು ಅದರ ಬಗ್ಗೆ ಸರಿಯಾದ ಮಾರ್ಪಾಡುಗಳನ್ನು ಮಾಡಲು ಇಲ್ಲಿ ರೀಆರ್ಗನೈಜು ಮಾಡುವುದು ಸೂಕ್ತ. ಈಗ ಕ್ರಾಷ್ ಪ್ರೋಗ್ರಾಮನ್ನು ಜಾರಿಗೆ ತರಬೇಕು ಎಂದು ಯೋಜನೆ ಹಾಕಿಕೊಂಡಿದ್ದೀರಿ. ಇದರಿಂದ ಸುಮಾರು ಏಳೆಂಟು ಜಿಲ್ಲೆಗಳಿಗೆ ಅನುಕೂಲವಾಗುತ್ತದೆ. ಇಂತಹ ಒಂದು ಯೋಜನೆಯನ್ನು ಹಾಕಬೇಕೆಂದು ಕೇಂದ್ರದ ಆಹಾರ ಮಂತ್ರಿಗಳಾದ ಶ್ರೀಮಾನ್ ಸುಬ್ರಮಣ್ಯಂರವರು ತಯಾರು ಮಾಡಬೇಕೆಂದು ಹೇಳಿದ್ದರು. ಅದರಂತೆ ಇಲ್ಲೂ ಮಾಡಬೇಕೆಂದು ಹೇಳಿದ್ದರು. ಅದರಂತೆ ಈ ಸರಕಾರದವರೂ ಯೋಜನೆ ಮಾಡಿದ್ದಾರೆ. ಸರಕಾರದವರು ಲಿಫ್ಟ್ ಇರಿಗೇಷನ್ ಸ್ಕೀಂಸ್ ಎಲ್ಲೆಲ್ಲಿ ಮಾಡಬಹುದು ಎಲ್ಲಿ ಇದಕ್ಕಾಗಿ ಹಣವನ್ನು ಒದಗಿಸಬೇಕು ಎಂದು ಒಂದು ಸ್ಕೀಂನ್ನು ವರ್ಕ್‌ಔಟು ಮಾಡಿ ಸರಕಾರದ ಮುಂದೆ ಇಟ್ಟಿದ್ದಾರೆ. ಆದರೆ ಈ ಇಲಾಖೆಯಲ್ಲಿರುವ ಮಂತ್ರಿಗಳೇ ಆಗಲೀ, ಉಪ ಮಂತ್ರಿಗಳೇ ಆಗಲೀ ಯಾರೂ ಕೂಡ ಇದರ ಕಡೆಗೆ ಗಮನ ಸರಿಯಾಗಿ ಕೊಡುತ್ತಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ, ಅಲ್ಲದೆ ತಾವು ನಮ್ಮ ದೇಶದಲ್ಲಿರುವ ಹೇಮಾವತಿ, ಎಗಚಿ, ಹಾಗೂ ಕಾವೇರಿ ನದಿಯ ಪ್ರದೇಶಗಳ ಆವರಣದಲ್ಲಿರುವ ನೀರನ್ನು ಉಪಯೋಗಿಸಿಕೊಂಡರೆ ಎಷ್ಟೋ ಎಕರೆಗಳಷ್ಟು ಭೂಮಿ ಸಾಗುವಳಿ ಮಾಡಲು ಅನುಕೂಲವಾಗುತ್ತದೆ. ನನ್ನ ಕ್ಷೇತ್ರದಲ್ಲಿರುವ ಹಾಸನ ಜಿಲ್ಲೆಯಲ್ಲೇ ಹಾಗೂ ಚಿಕ್ಕಮಗಳೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ ಹೆಚ್ಚು ನೀರಾವರಿಯಾಗುವ ಪ್ರದೇಶಗಳು ಇವೆ. ಇವಕ್ಕೆ ಕಡಿಮೆ ಹಣ ವೆಚ್ಚ ಮಾಡಿ ಹೆಚ್ಚಿನ ಪ್ರತಿಫಲವನ್ನು ಕಮ್ಮಿ ಕಾಲದಲ್ಲಿ ಪಡೆಯಬಹುದು. ಇಂತಹ ಕೆಲಸಗಳನ್ನು ಮಾಡಲು ಸರಕಾರ ಮುಂದೆ ಬರಲಿಲ್ಲ. ಬರೀ ಒಂದು ಸಣ್ಣ ಇನ್‌ವೆಸ್ಟಿಗೇಷನ್ನು ಸರ್ಕಲಿನ ಎಸ್ಟಾಬ್ಲಿಷಮೆಂಟ್‌ಗಾಗಿ 50 ಲಕ್ಷದಷ್ಟು ಹಣವನ್ನು ಸರಕಾರದವರು ಈಗ ಖರ್ಚು ಮಾಡಿದ್ದಾರೆ. ಇದರಿಂದ ಸರಕಾರ ಎಷ್ಟುಮಟ್ಟಿಗೆ ಉಪಯೋಗಕರವಾದ ಕೆಲಸಗಳಿಗೆ ಖರ್ಚು ಮಾಡುತ್ತಿದೆ ಎನ್ನುವುದು ವೇದ್ಯವಾಗುತ್ತದೆ. ಈ ನಿರ್ಣಯದಲ್ಲಿ ಇನ್ನೂ ಒಂದು ವಿಚಾರ ಇದೆ. ಇದು ಶಾಶ್ವತವಾಗಿ ಅಭಾವವನ್ನು ಹೇಗೆ ಪರಿಹಾರ ಮಾಡಬಹುದು ಎನ್ನುವುದರ ಬಗ್ಗೆ ಸರಕಾರಕ್ಕೆ ಶಿಫಾರಸು ಮಾಡಬಹುದು ಎಂದೂ ಇದೆ. ಶ್ರೀಮಾನ್ ಸಿದ್ದಯ್ಯನವರು ಒಂದು ಒಳ್ಳೆಯ ಸುದುದ್ದೇಶದಿಂದ ಈ ನಿರ್ಣಯವನ್ನು ತಂದು ಇಲ್ಲಿ ನಮ್ಮ ಮುಂದಿಟ್ಟಿದ್ದಾರೆ. ನಾನು ಹಿಂದೆ ಇದೇ ಸಭೆಯಲ್ಲಿ ಕಾವೇರಿ ನದಿಯ ನೀರನ್ನು ಎಷ್ಟರಮಟ್ಟಿಗೆ ಉಪಯೋಗಿಸಬಹುದು ಎನ್ನುವ ಒಂದು ನಿರ್ಣಯವನ್ನು ಇಲ್ಲಿ ತಂದಿದ್ದೆ. ಅದರ ಬಗ್ಗೆ ಇಲ್ಲಿ ಎರಡು ಮೂರು ದಿನಗಳ ಚರ್ಚೆಯಾಗಿ ನಮ್ಮ ನಾಯಕರು ಇದಕ್ಕೆ ಉತ್ತರಕೊಟ್ಟ ಕಾಲದಲ್ಲಿ ಏನು ಭರವಸೆಯನ್ನು ಕೊಟ್ಟಿದ್ದರು ಅದನ್ನು ಪೂರ್ಣಯಾಗಿ ಈಡೇರಿಸಿದರೆ ಎಂದು ನಾನು ಇಲ್ಲಿ ಕೇಳಲು ಇಚ್ಛೆಪಡುತ್ತೇನೆ. ತಾವು ಕೊಟ್ಟ ಭರವಸೆಯನ್ನೇ ಇನ್ನೂ ಪೂರ್ತಿ ಮಾಡದೇ ಹೋದರೆ ನಿಮ್ಮಲ್ಲಿ ನಮಗೆ ನಂಬಿಕೆಯಾದರೂ ಹೇಗೆ ಬರುತ್ತದೆ ? ಈ ಕಾವೇರಿ ನದಿಯ ಬಯಲಿನಲ್ಲಿ ಸುಮಾರು 13 - 14 ಯೋಜನೆಗಳನ್ನು ಮಾಡಲು 30 ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಿ ಅದನ್ನು ಕಾರ್ಯಗತ ಮಾಡಿದರೆ ಅದರಿಂದ ಸುಮಾರು ಮೂರು ಲಕ್ಷ ಎಕರೆಗಳಷ್ಟು ಭೂಮಿಗೆ ನೀರಿನ ಸಹಾಯ ಸಿಕ್ಕಿ ಹೆಚ್ಚು ಬೆಳೆಯನ್ನು ಮಾಡಲು ಅನುಕೂಲವಾಗುತ್ತಿತ್ತು. ಇದಕ್ಕಾಗಿ ಸ್ವಲ್ಪ ಹಣವನ್ನು ಇನ್ನೂ ಖರ್ಚು ಮಾಡಲು ಸರಕಾರ ಏತಕ್ಕಾಗಿ ಮನಸ್ಸು ಮಾಡಲಿಲ್ಲ ಎಂದು ಇಲ್ಲಿ ವಿಷಾದವಾಗಿ ಹೇಳಬೇಕಾಗಿದೆ. ನೂರು, ನೂರಿಪ್ಪತ್ತು ಕೋಟಿ ರೂಪಾಯಿಗಳಷ್ಟು ಇತರ ದೊಡ್ಡ ಯೋಜನೆಗಳಿಗಾಗಿ ಖರ್ಚು ಮಾಡುವುದಕ್ಕೆ ಬದಲಾಗಿ ಕೇವಲ ಮೂವತ್ತು ಕೋಟಿಯಷ್ಟು ಖರ್ಚು ಮಾಡಿ ಅದರಿಂದ ಸುಮಾರು 13 ಯೋಜನೆಗಳನ್ನು ನಮ್ಮಲ್ಲಿ ತೆಗೆದುಕೊಂಡರೆ ಎಷ್ಟೋ ಹೆಚ್ಚು ಬೆಳೆಯನ್ನು ಮಾಡಬಹುದಾಗಿತ್ತು. ಇಂತಹ ಉಪಯುಕ್ತವಾದ ಯೋಜನೆಗಳನ್ನು ಇದುವರೆಗೆ ಏಕೆ ಮಾಡಲಿಲ್ಲ ಎಂದು ವಿಷಾದ ಮನಸ್ಸಿನಿಂದ ಇಲ್ಲಿ ಕೇಳಬೇಕಾಗಿದೆ.

3-30 P.M.

ಈ ದಿವಸ ಸರ್ಕಾರದವರು ಆ 13 ಯೋಜನೆಗಳನ್ನು ಕಾರ್ಯಗತ ಮಾಡಿದರೆ—ಅದರಿಂದ ಎಂಟು ಜಿಲ್ಲೆಗಳಿಗೆ ಖಾಯಂ ಪರಿಹಾರ ಒದಗಿಸುವುದಕ್ಕೆ ಸಾಧ್ಯವಿದೆ ಎಂದು ಹೇಳುತ್ತೇನೆ. ಈ 13 ಯೋಜನೆಗಳಿಗೆ ತಗಲುವ ಆ 50 ಕೋಟಿ ರೂಪಾಯಿಗಳೇನಿದೆ ಅದನ್ನು ಒದಗಿಸುವುದು ಅಷ್ಟು ಕಷ್ಟವಾದ್ದೇನಲ್ಲ. ಆದರೆ ಈ ವಿಚಾರದಲ್ಲಿ ಸರ್ಕಾರದವರು ತಮ್ಮ ಧ್ಯೇಯವನ್ನು ಸ್ವಲ್ಪ ಬದಲಾವಣೆ ಮಾಡಿಕೊಳ್ಳಬೇಕು. ಅಲ್ಲಿ 3 ಲಕ್ಷ ಎಕರೆ ನೀರಾವರಿಯಾಗುತ್ತದೆ. 30 ಲಕ್ಷ ಪಲ್ಲ ದವಸವನ್ನು ಬೆಳೆಯಬಹುದು. ಇದರಿಂದ ನಮ್ಮ ಡಿಫಿಷಿಯೆಟ್ಸನ್ನು ಸರಿದೂಗಿಸಲು ಸಾಧ್ಯವಿದೆ ಎಂದು ಹೇಳುತ್ತೇನೆ. ಹಣದಕೊರತೆ ಇದೆ ಅನ್ನುವುದೇ ಒಂದು ದೊಡ್ಡದಲ್ಲ. ಯಾವ ಕೆಲಸವನ್ನು ಮೊದಲು ಮಾಡಬೇಕು, ಯಾವ ಕೆಲಸವನ್ನು ಕಡೆಗೆ ಮಾಡಬೇಕು ಎಂಬ ವಿವೇಚನೆಯಿಂದ ಕೆಲಸಮಾಡಿದರೆ ಎಲ್ಲವೂ ಸರಿಹೋಗುತ್ತದೆ. ಈ ವಿಚಾರದಲ್ಲಿ ನಾವು ನಮ್ಮ ಸಲಹೆಗಳನ್ನು ನೀಡಬೇಕಾದ್ದು ನಮ್ಮ

(ಶ್ರೀ ಹೆಚ್. ಡಿ. ದೇವೇಗೌಡ)

ಕರ್ತವ್ಯ. ಹೀಗೆ ನಮ್ಮ ಆ ಕಾವೇರಿ, ಯಗಚಿ ಮತ್ತು ಹೇಮಾವತಿ ನದಿಗಳ ದಂಡೆಯಲ್ಲಿ ಲಿಫ್ಟ್ ಇರಿಗೇಷನ್‌ಗೆ ಅನುಕೂಲ ಮಾಡಿಕೊಟ್ಟರೆ ಅತ್ಯಲ್ಪ ಕಾಲದಲ್ಲೇ ಕಡಮೆ ಖರ್ಚಿನಲ್ಲಿ ಅಭಾವಪರಿಸ್ಥಿತಿಯನ್ನು ನೀಗುವುದಕ್ಕೆ ಸಾಧ್ಯವಿದೆ ಎಂದು ಹೇಳುತ್ತೇನೆ. ಮೊನ್ನೆ ನಮ್ಮ ಹಾಸನ ಜಿಲ್ಲೆಗೆ ಇದೇ ಸಭೆಯ ಮಾನ್ಯ ಅಧ್ಯಕ್ಷರು ದಯಮಾಡಿಸಿದ್ದ ಕಾಲಕ್ಕೆ ನಮ್ಮ ಜನರು ಈ ಕೆಲಸದಲ್ಲಿ ಅಲ್ಲಿ ಎಷ್ಟರ ಮಟ್ಟಿನ ಆಸಕ್ತಿವಹಿಸಿದ್ದಾರೆಂಬುದನ್ನು ನೋಡಿ ಅವರೂ ಸಹಾ ಸರ್ಕಾರಕ್ಕೆ ಒತ್ತಾಯಹಾಕಿ ಅನುಕೂಲ ಕಲ್ಪಿಸಲು ... .

[Mr. Speaker in the Chair.]

Mr. SPEAKER.—I do not commit the Government; I only said that the scheme is worth pursuing. Only a Minister can commit the the Government. ನಾನು ಅಲ್ಲಿಗೆ ಅನುಕೂಲ ಮಾಡಿಕೊಡಲು ಈಗಲೂ ಬರುತ್ತೇನೆ, ಮುಂದಕ್ಕೂ ಬರುತ್ತೇನೆ. ಆದರೆ ನಾನು ಆಗ ಆರೀತಿಯಾಗಿ ಹೇಳಲಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಆಹಾರವನ್ನು ಹೆಚ್ಚುಮಾಡಬೇಕು ಎಂದು ಹೇಳತಕ್ಕ ಕಾಲದಲ್ಲಿ ನಾವು ವ್ಯವಸಾಯದ ಇಲಾಖೆಯನ್ನು ರೀಆರ್ಗನೈಜ್ ಮಾಡಬೇಕಾದ್ದು ಅಗತ್ಯ. ಈ ವಿಚಾರ ಮಾನ್ಯ ಮಂತ್ರಿಗಳಿಗೂ ಅರಿವಾಗಿದೆ. ಇನ್ನು ಎನ್. ಇ. ಎಸ್. ವಿಭಾಗದಲ್ಲಿ ಕೆಲಸಮಾಡತಕ್ಕ ಜನರು ಸರಿಯಾಗಿ ಕೆಲಸಮಾಡುತ್ತಿಲ್ಲ. ಆ ಭಾಗದಲ್ಲಿ ಕೆಲಸಕಾರ್ಯಗಳು ಫಲಪ್ರದವಾಗಿಲ್ಲ. ಶ್ರಮಪಟ್ಟಿದಕ್ಕೂ ಸಾರ್ಥಕವಾಗಲಿಲ್ಲ. ಇನ್ನು ಕೃತಕ ಗೊಬ್ಬರವನ್ನು ಒದಗಿಸತಕ್ಕ ವಿಚಾರಕ್ಕೆ ಬಂದರೆ—ಅದರಲ್ಲಿ ಅಡಲ್ಟ್ರೇಷನ್ ಜಾಸ್ತಿಯಾಗಿದೆ. ಇಲಾಖೆಯವರು ಹೇಳತಕ್ಕ ಪ್ರಮಾಣದಲ್ಲಿ ಅವರು ಅದನ್ನು ತಯಾರಿಸುತ್ತಿಲ್ಲ. ಆಹಾರದ ವಸ್ತುಗಳಲ್ಲಿ ಅಡಲ್ಟ್ರೇಷನ್ ಆದರೆ ಹೇಗೆ ಸರ್ಕಾರದವರು ಕ್ರಮ ಕೈಗೊಳ್ಳುತ್ತಾರೋ ಹಾಗೇ ಇದರ ಬಗ್ಗೆಯೂ ಕ್ರಮ ಕೈಗೊಂಡರೆ ಅನುಕೂಲವಾಗಬಹುದೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಗಾಂಜಿ ವೀರಪ್ಪ (ದಾವಣಗೆರೆ).—ಮಾನ್ಯ ಅಧ್ಯಕ್ಷರೆ, ಈ ನಿರ್ಣಯವನ್ನು ಮಂಡಿಸುವ ಕಾಲಕ್ಕೆ ಇದನ್ನು ತಂದಿರತಕ್ಕ ಶ್ರೀಮಾನ್ ಡಿ.ಎಂ. ಸಿದ್ದಯ್ಯನವರು ಅನೇಕ ವಿಚಾರಗಳನ್ನು ಬಹಳ ವಿವರವಾಗಿಯೂ, ವಿಶದವಾಗಿಯೂ ತಿಳಿಸಿದ್ದಾರೆ. ಇಲ್ಲಿಯ ತನಕ ಮಾತನಾಡಿರತಕ್ಕ ಅನೇಕ ಜನ ಮಾನ್ಯ ಸದಸ್ಯರುಗಳೂ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ನಾನು ಹೆಚ್ಚಿಗೆ ಇದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಹೇಳಬೇಕೆಂದಿರತಕ್ಕ ಒಂದು ಮುಖ್ಯವಾದ ವಿಚಾರವೇನೆಂದರೆ. ಈ ಯುದ್ಧ ಪ್ರಾರಂಭವಾದ ಮೇಲೆ ನಮ್ಮ ಪ್ರಧಾನ ಮಂತ್ರಿಗಳು ನಮ್ಮ ರಾಷ್ಟ್ರರಕ್ಷಣೆಯ ಬಗ್ಗೆ ಅವರೇನು ಇಡೀ ರಾಷ್ಟ್ರಕ್ಕೇ ಒಂದು ಕರಗೊಟ್ಟರೋ, ಆ ಕರೆಗನುಗುಣವಾಗಿ ದೇಶದಲ್ಲಿರತಕ್ಕ ಜನತೆಯೂ ಸಹಾ ಹೇಗೆ ಸರ್ವ ತ್ಯಾಗಕ್ಕೂ ಸಿದ್ಧರಾಗಿ ನಿಂತರೋ ಅದೇರೀತಿ ಅದೇ ಪ್ರಧಾನ ಮಂತ್ರಿಗಳೂ ಈ ಆಹಾರೋತ್ಪನ್ನವನ್ನು ದೇಶದಲ್ಲಿ ಹೆಚ್ಚಿಸತಕ್ಕ ಬಗ್ಗೆ ಕರೆಯನ್ನಿತ್ತಿದ್ದಾರೆ. ಆದರೆ ದೇಶದಲ್ಲಿರತಕ್ಕ ಜನತೆ ದೇಶದ ಸಂರಕ್ಷಣೆಯ ಬಗ್ಗೆ ಎಷ್ಟು ಕಾತರತೆಯನ್ನು ತೋರಿಸಿದರೋ ಅಷ್ಟು ಕಾತರತೆಯನ್ನು ತೋರಿಸಿದಂತೆ ಕಾಣುತ್ತಿಲ್ಲ. ನಮಗೆ ಇಂದು ಒದಗಿರತಕ್ಕ ಆಹಾರದ ಕೊರತೆಯನ್ನು ನೀಗಲು ಸರ್ಕಾರ ಹಾಗೂ ಸಾರ್ವಜನಿಕರೂ ಎಲ್ಲರೂ ಒಗ್ಗಟ್ಟಾಗಿ ನಾವೆಲ್ಲರೂ ದೇಶರಕ್ಷಣೆಯ ಕಾರ್ಯದಲ್ಲಿ ಎಷ್ಟು ಆಸಕ್ತಿಯನ್ನು ತೋರಿಸಿದೆವೋ ಅಷ್ಟೇ ಆಸಕ್ತಿ ಹಾಗೂ ಕಾತರತೆಯನ್ನು ತೋರಿಸಿದರೆ ಮಾತ್ರ ನಾವು ಇದರಲ್ಲಿ ಯಶಸ್ವಿಯಾಗಬಹುದೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ವ್ಯವಸಾಯದಲ್ಲಿ ತೊಡಗಿರತಕ್ಕ ಜನರು ಶೇಕಡ 80ರಷ್ಟು ಹಳ್ಳಿಗಳಲ್ಲಿದ್ದಾರೆ. ನಾವು ಇಲ್ಲಿ ಭಾಷಣಗಳನ್ನೇನೋ ಮಾಡಬಹುದು ಆದರೆ ಅಷ್ಟಕ್ಕೇ ಕಾರ್ಯ ಸಾಧನೆಯಾಗಲಿಲ್ಲ. ಸರ್ಕಾರದವರೂ ರೈತರಿಗೆ ಬಿತ್ತನೆ ಬೀಜ, ಗೊಬ್ಬರಗಳಿಗಾಗಿ ಹೆಚ್ಚು ಹಣವನ್ನು ಒದಗಿಸಬಹುದು. ಆದರೆ ಅದಷ್ಟು ಸಾಲದು. ಅದರಲ್ಲಿರತಕ್ಕ ಕೊರತೆಯೇವೆಂಬುದನ್ನು ನಾವು ಪರಿಶೀಲಿಸಬೇಕಾದ್ದು ಅಗತ್ಯ. ಸರ್ಕಾರದವರು ಇಲ್ಲಿ ಏನೇ ಸಮಾಧಾನ ಹೇಳಿದರೂ ರೈತರಿಗೆ ಒದಗಿಸಬೇಕಾದ ಬಿತ್ತನೆ ಬೀಜ, ಗೊಬ್ಬರ ಮತ್ತು ಸಾಲ ವಗೈರೆಗಳು ಆತನಿಗೆ ಸಕಾಲಕ್ಕೆ ಒದುಗುತ್ತಿಲ್ಲ. ಈ ವಿಚಾರವನ್ನು ಈಗಾಗಲೇ ಅನೇಕ ಜನ ಮಾನ್ಯ ಸದಸ್ಯರು ಹೇಳಿದ್ದಾರೆ. ಆದ್ದರಿಂದ ಸರ್ಕಾರದವರು ಈ ಬಗ್ಗೆ ತೀವ್ರವಾದ ಕಾರ್ಯಕ್ರಮವನ್ನು ಕೈಗೊಂಡು ಆ ತೊಂದರೆಯನ್ನು ಪರಿಹಾರಮಾಡಬೇಕು. ಮತ್ತು ಆ ಸೌಲಭ್ಯಗಳು ರೈತರಿಗೆ ಸಕಾಲಕ್ಕೆ ಮುಟ್ಟುವಂತೆ ಮಾಡಬೇಕು. ಈ ವಿಚಾರದಲ್ಲಿ ಯಾರು ವಿನಾ ತೊಂದರೆ ಕೊಟ್ಟು ಕೆಲಸಗಳನ್ನು ನಿಧಾನ ಮಾಡುತ್ತಾರೋ ಅಂಥವರನ್ನು ಶಿಕ್ಷೆಗೊಳಪಡಿಸಬೇಕೆಂದು

ಹೇಳುತ್ತೇನೆ. ನಮ್ಮಲ್ಲಿ ಕೇವಲ 5-8 ಎಕರೆ ಭೂಮಿಯನ್ನಿಟ್ಟುಕೊಂಡಿರುವಂಥ ಸಣ್ಣ ಸಣ್ಣ ರೈತರು ಬಹಳವಾಗಿದ್ದಾರೆ. ಅಂಥವರಿಗೆ ಈ ರೀತಿ ಅಲ್ಲಸಲ್ಲದ ತೊಂದರೆಯನ್ನು ಕೊಡುತ್ತಿರುವುದರಿಂದ ಅವರು ಈ ಕೆಲಸವನ್ನು ಎಷ್ಟು ಉತ್ಸಾಹದಿಂದ ಮಾಡಬೇಕೋ ಅಷ್ಟು ಉತ್ಸಾಹದಿಂದ ಅವರು ಕೆಲಸ ಮಾಡುತ್ತಿಲ್ಲ. ಅದರಿಂದ ದೇಶದಲ್ಲಿ ಬೆಳೆ ಕಡಿಮೆಯಾಗಿದೆ. ಆದ್ದರಿಂದ ಈ ವಿಚಾರಕ್ಕೆ ಸರ್ಕಾರದವರು ತೀವ್ರಗಮನ ಕೊಡಬೇಕಾದುದು ಅತ್ಯಗತ್ಯ. ಆಗಲೇ ಸರ್ಕಾರದವರು ಈ ವ್ಯವಸಾಯಾಭಿವೃದ್ಧಿ ಬಾಬಿಗೆ ಒದಗಿಸಿರತಕ್ಕ ಹಣ ಸದ್ವಿನಿಯೋಗವಾಗುವುದು ಮತ್ತು ನಮ್ಮ ಉದ್ದೇಶವೂ ಕೂಡ ಸಫಲವಾಗುತ್ತೆ. ಆದರೆ ನಾನು ವ್ಯವಸಾಯ ಇಲಾಖೆಯಲ್ಲಿ ಇರತಕ್ಕವರೆಲ್ಲರೂ ದೇಶಭಕ್ತರಲ್ಲ ಎಂದು ಹೇಳಲಾರೆ. ಕೆಲವರು ಹಾಗೂ ಇರಬಹುದು, ಕೆಲವರು ಹೀಗೂ ಇರಬಹುದು. ಯಾರು ಸರಿಯಾಗಿ ಕೆಲಸಮಾಡುವುದಿಲ್ಲವೋ ಅಂಥವರಿಗೆ ಶಿಕ್ಷೆ ಮಾಡಲೇ ಬೇಕು. ನಾವು ಇಂದು ರೈತರಿಗೆ ಒಳ್ಳೆಯ ಬೀಜಗಳನ್ನು ಒದಗಿಸಬೇಕಾದ್ದು ಬಹಳ ಮುಖ್ಯವಾದದು. ನಮ್ಮಲ್ಲಿರತಕ್ಕ ಸೀಡ್ ಫಾರಂಗಳು ಸರಿಯಾಗಿ ಕೆಲಸಮಾಡುತ್ತಿಲ್ಲ. ಅಲ್ಲಿ ಉತ್ಪತ್ತಿಯಾದ್ದನ್ನು ಸರಿಯಾಗಿ ಹಂಚುತ್ತಿಲ್ಲ. ನಮಗೆ ಎಷ್ಟು ಅಗತ್ಯವೋ ಅಷ್ಟನ್ನು ಅಲ್ಲಿ ಬೆಳೆಯುತ್ತಿಲ್ಲ. ಸರ್ಕಾರದವರು ಈ ವಿಚಾರದಲ್ಲಿ ಹೆಚ್ಚು ಶ್ರಮ ವಹಿಸಬೇಕು ; ಉತ್ತಮ ದರ್ಜೆಯ ಬಿತ್ತನೆ ಬೀಜವನ್ನು ಹೆಚ್ಚು ಹೆಚ್ಚು ಉತ್ಪತ್ತಿಮಾಡಿ ಅದನ್ನು ರೈತರಿಗೆ ಸರಿಯಾದ ವಿತರಣೆಯಿಂದ ಹಂಚಿಕೆ ಮಾಡತಕ್ಕದ್ದು ಅತಿ ಜರೂರಾಗಿ ಆಗಬೇಕಾಗಿದೆ. ಈ ದಿವಸ ನಾನು ನಮ್ಮಲ್ಲಿರತಕ್ಕ ಜೋಳದ ಬಗ್ಗೆ ಹೇಳುವುದಾದರೆ—ಎಕರೆಗೆ 4-5 ಪಲ್ಲಕ್ಕೆ ಮೇಲಾಗುವುದಿಲ್ಲ. ಅಂಥ ಕಡೆಗಳಲ್ಲಿ ಉತ್ತಮದರ್ಜೆಯ ಹೈಬ್ರಿಡ್ ಬಿತ್ತನೆ ಜೋಳವನ್ನು ಒದಗಿಸಿದ್ದೇ ಆದರೆ ಅಲ್ಲಿ ಎಕರೆಗೆ 10-15 ಪಲ್ಲ ಬೆಳೆಯಬಹುದು. ಇನ್ನು ಗೊಬ್ಬರಕ್ಕೆ ಪ್ರಪಂಚದಲ್ಲೇ ಕೊರತೆ ಇದೆ. ಆದಾಗ್ಯೂ ಸರ್ಕಾರದವರು ಅದಷ್ಟು ಪ್ರಯತ್ನ ಮಾಡಿ ರೈತರಿಗೆ ಒಳ್ಳೆಯ ಬೀಜ ಮತ್ತು ಗೊಬ್ಬರವನ್ನು ಒದಗಿಸಬೇಕಾದ್ದು ಅವರ ಮುಖ್ಯ ಕರ್ತವ್ಯ. ನಮ್ಮಲ್ಲೇ ತಯಾರಾಗತಕ್ಕ ಕಾಂಪೋಸ್ಟ್ ಗೊಬ್ಬರವೇನಿದೆ ಅದನ್ನು ವಿಲೇಜ್‌ವರ್ಕರುಗಳು ಸರಿಯಾಗಿ ತಯಾರಿಸುವಂತೆ ಸಲಹೆ ಕೊಡುತ್ತಿಲ್ಲ; ಆದ್ದರಿಂದ ಅದೂ ಸಹಾ ಸರಿಯಾಗಿ ದೊರೆಯುತ್ತಿಲ್ಲ, ಅದಕ್ಕೂ ಅಭಾವ ಬಂದಿದೆ. ಸರ್ಕಾರದವರ ಉದ್ದೇಶ ಈಡೇರಬೇಕಾಗಿದ್ದರೆ ಅವರು ಹೆಚ್ಚಿನ ಶ್ರದ್ಧೆಯಿಂದ ಒಂದು ವಾರ್ ಫೂಟಿಂಗ್ ಮೇಲೆ ಕೆಲಸಮಾಡಬೇಕಾಗಿದೆ. ಆಗ ನಮಗೆ ಈ ತೊಂದರೆಗಳು ತಪ್ಪಬಹುದು. ಆದ್ದರಿಂದ ಅಧಿಕಾರಿಗಳು ಸ್ವಲ್ಪ ದಕ್ಷತೆಯಿಂದ ಕೆಲಸ ಮಾಡಬೇಕು. ಚೆನ್ನಾಗಿ ಕೆಲಸ ಮಾಡಿದರೆ ಅದನ್ನು ಮಾನ್ಯ ಮಾಡುತ್ತೇವೆ ಎಂದು ಹೇಳಬೇಕು, ಮಾಡದಿದ್ದರೆ ಅವರಿಗೆ ಶಿಕ್ಷೆ ಮಾಡಬೇಕು. ಆ ರೀತಿ ಹೆದರಿಕೆ ಇಲ್ಲದೇ ಇದ್ದರೆ ಕೆಲಸವಾಗುವುದಿಲ್ಲ. ಈ ರೀತಿ ಹೆಚ್ಚು ತೀವ್ರತೆಯಿಂದ ಕೆಲಸ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಅಷ್ಟೇ ಅಲ್ಲದೆ ಜನಸಂಖ್ಯೆಯೂ ಕೂಡ ಕಡಿಮೆ ಆಗುವುದಕ್ಕೆ ಇದೇ ಕಾಲದಲ್ಲಿ ನಾನು ಮೇಲೆ ಹೇಳಿದ ಕೆಲಸದ ಜೊತೆಗೆ ಪ್ರಯತ್ನ ನಡೆಸಬೇಕು. ಹಾಗೆ ಮಾಡದೇ ಹೋದರೆ ಜನಸಂಖ್ಯೆಯನ್ನು ತಡೆಗಟ್ಟುವುದಕ್ಕೆ ಆಗುವುದಿಲ್ಲ. ಹೆಚ್ಚು ಆಹಾರ ಬೆಳೆಯದೆ ಜನಸಂಖ್ಯೆ ಹೆಚ್ಚಾದರೆ, ಆಹಾರದ ಬೆಳೆಗೆ ತಕ್ಕಂತೆ ಜನಸಂಖ್ಯೆಯ ಮಿತಿ ಇಲ್ಲದೇ ಹೋದರೆ ಒಂದು ಬಹಳ ಕಷ್ಟ ಪರಿಸ್ಥಿತಿ ಉಂಟಾಗುತ್ತದೆ. ಆದ್ದರಿಂದ ಸರ್ಕಾರದವರು ಇದನ್ನೆಲ್ಲಾ ಬಹಳ ಶ್ರದ್ಧೆಯಿಂದ ಕೆಲಸ ಮಾಡಿ ಎಷ್ಟೇ ಹಣ ಖರ್ಚಾದರೂ ಚಿಂತೆ ಇಲ್ಲ. ನಮ್ಮಲ್ಲಿ ಬಹಳ ಕೆಲಸಕ್ಕೆ ಬಾರದ ಸ್ಕೀಂಗಳು ಇವೆ ಅದನ್ನೆಲ್ಲಾ ಬಿಟ್ಟುಬಿಡಿ. ಅದನ್ನೆಲ್ಲಾ ರೈತರು ಹೆಚ್ಚು ಆಹಾರ ಬೆಳೆಯಲಿಕ್ಕೆ ಖರ್ಚು ಮಾಡಿ ಅದರಿಂದ ರೈತನಿಗೆ ಅನುಕೂಲಮಾಡುವುದು ಒಳ್ಳೆಯದು. ವಿಶದವಾಗಿ ಹೇಳಬೇಕಾದರೆ ಹಣ ಒದಗಿಸಿದ ಯಾವ ಸ್ಕೀಮನ್ನು ತೆಗೆದುಹಾಕಬಹುದೋ ಆ ಸ್ಕೀಮನ್ನು ತೆಗೆದು ಹಾಕಿ, ಮತ್ತು ಇನ್ನು ಕೆಲವು ಸ್ಕೀಮುಗಳು ಇನ್ನು ಕೆಲವು ವರ್ಷಗಳ ಕಾಲ ತಡೆಯುವಂತಹ ಪರಿಸ್ಥಿತಿಯಲ್ಲಿ ಇರುತ್ತವೆ, ಅಂತಹ ಸ್ಕೀಮುಗಳನ್ನು ನಿಧಾನವಾಗಿ ಮಾಡಬಹುದು, ಆ ರೀತಿ ಮಾಡಬೇಕೆಂದು ಸರ್ಕಾರದವರನ್ನು ಒತ್ತಾಯಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಅಧ್ಯಕ್ಷರೇ, ಪಾಕಿಸ್ಥಾನ ನಮ್ಮ ಮೇಲೆ ಯುದ್ಧ ಮಾಡುವ ಹೊತ್ತಿನಲ್ಲಿ ಆಹಾರದ ಕೊರತೆ ಇದೆ ಎಂದು ಹೇಳಿ 'ಸಂಕಟ ಬಂದಾಗ ವೆಂಕಟರಮಣ' ಎನ್ನುವಂತೆ ಆಹಾರ ಬೆಳೆಯಬೇಕು, ಆಹಾರ ಬೆಳೆಯದೇ ಹೋದರೆ ಕಷ್ಟವಾಗುತ್ತದೆ, ಪರಕೀಯರನ್ನು ಎಷ್ಟು ದಿನ ಅವಲಂಬನೆ ಮಾಡಿ 'ಅನ್ನ ಅನ್ನ' ಅಂತ ಅವರನ್ನು ಕೇಳಿಕೊಂಡು ಹೋಗುವುದು ಎಂದು ಈ ದಿವಸ ಹೇಳುತ್ತಾ ಇದ್ದೇವೆ. ದುರ್ದೈವ ವರುಣ ದೇವ ವನವಾಸ ಹೋಗಿರುವಾಗ ಅನ್ನ ದೇವರ ಮುಂದೆ ಇನ್ನಾವ ದೇವರು ಇಲ್ಲ ಎಂದು ಅಂದುಕೊಳ್ಳತಕ್ಕ ರಾಜಸ್ವ ಸಚಿವರು ಹೇಳುತ್ತಾ ಇರುತ್ತಾರೆ, ರೈತರಿಗೆ ಮಳೆ ಇದ್ದರೆ ಸರ್ಕಾರಕ್ಕೆ ಅವರು ಯಾವಾಗಲೂ ಕೈಕೊಡುವುದಿಲ್ಲ ಎಂದು. ಮಳೆ ಬರದಿದ್ದರೆ, ಸತ್ಯಹರಿಶ್ಚಂದ್ರ ವಚನಭ್ರಷ್ಟನಾಗಿ ಕತ್ತೆ ಮೇಲೆ ಕುಳಿತು ದಕ್ಷಿಣ ದಿಕ್ಕಿಗೆ ಹೇಗೆ ಹೊರಟು ಹೋಗುತ್ತಾ ಇದ್ದನೋ ಹಾಗೆ ನಾನೂ ಕತ್ತೆ ಮೇಲೆ ಕುಳಿತು ಹೊರಟು ಹೋಗುತ್ತೇನೆ ಎಂದು ಹೇಳಿದಂತೆ ಅವರು ಹೊರಟು ಹೋಗಬೇಕಾಗುತ್ತದೆ. ಇವತ್ತು ಹಸ್ತ, ಚಿತ್ತ, ವಿಶಾಖಾ ಎಲ್ಲಾ ಮಳೆ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಗಳೂ ಕೂಡ ಕೈಕೊಟ್ಟು ಬಿಟ್ಟಿವೆ. ಇವತ್ತು ಹೆಚ್ಚು ಆಹಾರವನ್ನು ಬೆಳೆಯ ಬೇಕಾಗಿದೆ. ಯಾವ ರೀತಿ ಬೆಳೆಯಬೇಕು? ಬಾವಿ ತೋಡಬೇಕು, ಕೆರೆ ಕಟ್ಟಬೇಕು, ನಾಲೆ ತೆಗೆಯಬೇಕು, ಗೊಬ್ಬರ ಹೊಂದಿಸಬೇಕು, ಗುಳ ಹೊಂದಿಸಬೇಕು, ಎತ್ತು ಕೊಡಬೇಕು, ರೈತನಿಗೆ ಬೇಕಾದ ಸಕಲ ಸಂಪತ್ತನ್ನೂ ಕೊಟ್ಟು ಯುದ್ಧ ಭೂಮಿಯಲ್ಲಿ ಯೋಧನಿಗೆ ತನ್ನ ಕೈಯಲ್ಲಿ ಉಪಯೋಗಿಸಲು ಬೇಕಾದಂತಹ ಮೆಷಿನ್‌ಗನ್, ಪೇಟನ್ ಟ್ಯಾಂಕ್‌ಗಳನ್ನು ಒದಗಿಸಿ ಹೋರಾಡಲು ಹುರಿದುಂಬಿಸುವಂತೆ ರೈತನಿಗೆ ಬೇಕಾದ ಸಕಲ ಸಾಮಾಗ್ರಿಗಳನ್ನೂ ಕೊಟ್ಟು ಅವನು ಭೂಮಿಯ ಮೇಲೆ ಹೋರಾಟ ಮಾಡಿ ತಮಗೆ ಬೇಕಾದ ಪ್ರತಿಫಲ ಏನೋ ಅದನ್ನು ಕೊಡುತ್ತಾನೆಯೋ ಹೊರತು ಇಲ್ಲದೇ ಇದ್ದರೆ ಸಾಧ್ಯವಿಲ್ಲ. ಇವತ್ತು ತಾವು ಏನು ಹೇಳುತ್ತಾ ಇದ್ದೀರಿ? ಯಾವುದನ್ನು ಕೇಳಿದರೂ ಹಣಬೇಕು ಎಂದು ಹೇಳುತ್ತಾ ಇದ್ದೀರಿ, ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರದವರೆಗೂ ಇವತ್ತಿನ ದಿವಸ ಇಂತಹ ಒಂದು ದುಃಖ ಸಮಯದಲ್ಲಿ ಹಣ ಹೇಗೆ ಹೊಂದಿಸುತ್ತೀರಿ ಎಂಬುದೇ ಒಂದು ಮಹತ್ತರವಾದ ಪ್ರಶ್ನೆಯಾಗಿದೆ. ಹಣ ಹೊಂದಿಸಬೇಕಾದರೆ ಶ್ರೀಮಾನ್ ಗಾಂಜಿ ವೀರಪ್ಪನವರು ಹೇಳಿದ ಹಾಗೆ ಕೆಲಸಕ್ಕೆ ಬಾರದೇ ಇರತಕ್ಕ ಕೆಲವು ಖಾತೆಗಳಲ್ಲಿ ಖರ್ಚು ಮಾಡತಕ್ಕ ಹಣವನ್ನು ನಿಲ್ಲಿಸಿ. ಅದರಿಂದ ಬಂದ ಹಣವನ್ನು ಡಿಫೆನ್ಸ್ ಪ್ರೊಡಕ್ಷನ್‌ಗಾಗಿ ಹೆಚ್ಚಾಗಿ ಉಪಯೋಗ ಮಾಡಿ, ಬಂದೂಕುಗಳನ್ನು ತಯಾರು ಮಾಡಿ, ಪೇಟನ್ ಟ್ಯಾಂಕುಗಳನ್ನು ತಯಾರು ಮಾಡಿ, ಏರೋ ಪ್ಲೇನ್‌ಗಳನ್ನು ತಯಾರು ಮಾಡಿ; ಅದೇ ರೀತಿ ದೇಶದಲ್ಲಿ ಅತಿ ಮುಖ್ಯವಾಗಿರತಕ್ಕ ಆಹಾರದ ಉತ್ಪಾದನೆಯನ್ನು ಹೆಚ್ಚು ಮಾಡಲು ಪ್ರಯತ್ನ ಮಾಡಿ, ಈ ದಿಶೆಯಲ್ಲಿ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟು ಮತ್ತು ಅದಕ್ಕೆ ಸಂಬಂಧಪಟ್ಟ ಅಲೈಡ್ ಡಿಪಾರ್ಟ್‌ಮೆಂಟುಗಳು ಯಾವುವು ಇವೆ ಅವುಗಳು ಹೆಚ್ಚು ಉತ್ಪಾದನೆಯನ್ನು ಮಾಡಲು—ಡಬ್ಬಲ್ ಮಾಡುವುದು ಟ್ರಬಲ್ ಮಾಡುವುದು—ಆ ಕೆಲಸದಲ್ಲಿ ಉತ್ಸಾಹ ಬರುವಂತೆ ಮಾಡಲು ಏನು ಮಾಡಿದ್ದೀರಿ? ಅದಕ್ಕೆ ನನ್ನ ಸಲಹೆ ಏನೆಂದರೆ ಮೈನರ್ ಇರಿಗೇಷನ್‌ನಲ್ಲಿ, ಕೆರೆ ಕಟ್ಟುವುದಕ್ಕೆ ಪ್ರಯತ್ನ ಮಾಡಿ, ಆಸ್ಪತ್ರೆಗಳನ್ನು ಕಟ್ಟುವುದನ್ನು ಎರಡು ವರ್ಷ ನಿಲ್ಲಿಸಿ, ಸ್ಕೂಲು ತೆಗೆಯುವುದನ್ನು ಎರಡು ವರ್ಷ ನಿಲ್ಲಿಸಿ, ರಸ್ತೆ ಹಾಕುವುದನ್ನು ಎರಡು ವರ್ಷ ನಿಲ್ಲಿಸಿ ಸೇತುವೆ ಕಟ್ಟುವುದನ್ನು ಎರಡು ವರ್ಷ ನಿಲ್ಲಿಸಿ. ಸಿ.ಡಿ.,ಎನ್.ಇ.ಎಸ್. ಬ್ಲಾಕುಗಳಲ್ಲಿ ಅಪವ್ಯಯವಾಗತಕ್ಕ ಹಣವನ್ನು ನಿಲ್ಲಿಸಿ, ಜೀಪುಗಳಲ್ಲಿ ಓಡಾಡತಕ್ಕ ಹವ್ಯಾಸವನ್ನು ಕೆಲವು ಕಾಲ ನಿಲ್ಲಿಸಿ. ಆ ರೀತಿ ಮಾಡಿ ಇವತ್ತಿನ ದಿವಸ ಹೆಚ್ಚು ಆಹಾರ ಉತ್ಪನ್ನವನ್ನು ಮಾಡುವುದಕ್ಕೆ ಪ್ರಯತ್ನ ಮಾಡಿ ಎಂದು ನಾನು ಸರ್ಕಾರದವರಿಗೆ ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತಿನ ದಿವಸ ಗೊಬ್ಬರ ಇಲ್ಲ, ವರುಣ ಏನಾದರೂ ಮಳೆಗರೆದರೆ ನೀರು ಇಲ್ಲದೇ ಇದ್ದರೆ ನೀರು ಇಲ್ಲ. ತುಂಗಭದ್ರಾ ಅಣೆಕಟ್ಟು ಕಟ್ಟಿ ಆದರಿಂದ ಬಂದ ನೀರನ್ನು ಆಂಧ್ರದವರಿಗೆ ಕೊಟ್ಟರಿ, ಮೈಸೂರಿನವರೇ ಆದ ನಾವು ಆ ನೀರನ್ನು ಉಪಯೋಗಿಸುವುದಕ್ಕೆ ಯಾವ ಅನುಕೂಲವನ್ನು ಮಾಡಿಕೊಟ್ಟಿದ್ದೀರಿ? ವ್ಯವಸಾಯದ ಇಲಾಖೆಯಾಗಲಿ, ಇರಿಗೇಷನ್ ಡಿಪಾರ್ಟ್‌ಮೆಂಟ್ ಆಗಲಿ ಅಥವಾ ಇನ್ನಾವುದೇ ಇಲಾಖೆಯಾಗಲಿ ತಾವು ಆ ವಿಷಯದಲ್ಲಿ ಏನು ಮಾಡಿದ್ದೀರಿ ಎಂಬ ಅಂಕಿಅಂಶಗಳನ್ನು ನಮ್ಮ ಮುಂದೆ ಇಟ್ಟಿದ್ದರೆ ಚೆನ್ನಾಗಿತ್ತು. ಇವತ್ತಿನ ದಿವಸ ತುರ್ತು ಪರಿಸ್ಥಿತಿ ಎಂದು ಹೇಳಿದ ಮಾತ್ರಕ್ಕೆ ಅದು ಹಿಂದೂಸ್ಥಾನಕ್ಕೆ ಆಗಲಿ, ಮೈಸೂರು ರಾಜ್ಯಕ್ಕೆ ಆಗಲಿ ಈ ಆಹಾರದ ಅಭಾವ ಇಲ್ಲ, ಇದನ್ನು ಇವತ್ತಿನ ದಿವಸ ಅಲ್ಲ ಹದಿನೆಂಟು ವರ್ಷಗಳಿಂದಲೂ ಕೇಳುತ್ತಾ ಇದ್ದೇವೆ. 1947 ರಲ್ಲಿ ನಮ್ಮ ದೇಶವನ್ನು ಬಿಟ್ಟು ಹೋದ ಬ್ರಿಟಿಷರ ಕಾಲದಿಂದಲೂ ಕೂಡ ನಾವು ಅನ್ನ ಕ್ಷಾಮಕ್ಕೆ ತುತ್ತಾಗಿದ್ದೇವೆ, ನಮಗೆ ಸ್ವಾತಂತ್ರ್ಯ ಬಂದ ಮೇಲೆ ಆಹಾರವನ್ನು ಉತ್ಪಾದನೆ ಮಾಡತಕ್ಕ ದಿಶೆಯಲ್ಲಿ ಎಷ್ಟರಮಟ್ಟಿನ ಹೆಚ್ಚಿನ ಕೆಲಸ ನಡೆದಿದೆ; ಆಹಾರವನ್ನು ದ್ವಿಗುಣಗೊಳಿಸತಕ್ಕ ಕೆಲಸದಲ್ಲಿ ಎಷ್ಟು ಮಟ್ಟಿನ ಸಾಧನೆಯಾಗಿದೆ ಎಂಬುದನ್ನು ತಾವು ಹೇಳುವುದಾದರೆ, ನಿಜವಾಗಿಯೂ ಕೂಡ ಅದನ್ನು ಬಹಳ ವಿನಯದಿಂದ ಕೇಳುವುದಕ್ಕೆ ತಯಾರಾಗಿದ್ದೇನೆ. ಇವತ್ತು ಕೋಟಿ ಕೋಟಿ ರೂಪಾಯಿಗಳ ಲೆಕ್ಕ ಹಾಕಿ ಭಿಕ್ಷಾಪಾತ್ರೆ ಹಿಡಿದು ತಂದಂತಹ ಹಣವನ್ನು ನೀವೇನು ಮಾಡಿದಿರಿ?......

Mr. SPEAKER.—The Hon'ble Member is taking the bulk of his time which is over for analysing the past and apportioning blame. The Resolution does not relate to that. It is not a no-confidence motion. It would be very helpful if he directly brings into focus what steps he would like the Government to take for improving food production.

Sri C. J. MUCKANNAPPA.—That is what I am trying to do. Experience is a good guide. Our past experience must tell us what we should do for the future. What we have done in the past years must

shed some light as to what we should do to see that production is geared up, how the defects that were experienced are to be overcome and how our officers should implement our principles and policies. ಇವತ್ತು ಏನಾಗ ಬೇಕೆಂಬುದನ್ನು ಹೇಳುತ್ತಾ ಇದ್ದೇನೆ. ಆಲೂರು ಹನುಮಂತಪ್ಪನವರು ಕೋಟಿ ಕೋಟಿ ರೂಪಾಯಿ ಗಳ ಮೈನರ್ ಇರಿಗೇಷನ್ ಕೆಲಸಕಾರ್ಯಗಳನ್ನು ಮಾಡಬೇಕೆಂದು ಇದ್ದಾರೆ. ಸಣ್ಣ ನೀರಾವರಿ ಯೋಜನೆಗಳಿಗೆ ಹಣವನ್ನು ಎಷ್ಟು ಕನ್‌ಸರ್ವ್ ಮಾಡುವುದಕ್ಕೆ ಸಾಧ್ಯವಿದೆ, ಕೇಂದ್ರದಿಂದ ಎಷ್ಟು ಹಣ ತರುವುದಕ್ಕೆ ಸಾಧ್ಯವಿದೆ, ಎಷ್ಟು ದೊರೆತರೆ ಕಾಲುವೆ, ಕೆರೆ ಅಣೆಕಟ್ಟು ಕಟ್ಟುವುದಕ್ಕೆ ಸಾಧ್ಯ ಎಂಬ ಪ್ರೋಗ್ರಾಂ ತಮ್ಮ ಮುಂದೆ ಇದೆಯೇ ? ಹಾಗೆ ಇಟ್ಟುಕೊಂಡಿದ್ದರೆ ಸರ್ಕಾರ ಸ್ತುತ್ಯಾರ್ಹ ವಾದುದು ; ಇಲ್ಲದೇ ಹೋದರೆ ತಾವು ಮಾಡಿರತಕ್ಕ ವ್ಯವಹಾರಗಳಲ್ಲಿ, ಎಸ್ಟಿಮೇಟುಗಳಲ್ಲಿ ಅದಕ್ಕೆ ಹಣ ಇಲ್ಲದೇ ಇದ್ದರೆ ಅವುಗಳನ್ನು ಕಾರ್ಯಗತ ಮಾಡುವುದಕ್ಕೆ ಆಗುವುದಿಲ್ಲ. ಹೆಚ್ಚು ಆಹಾರ ಉತ್ಪಾದನೆ ಮಾಡಬೇಕೆನ್ನುವುದು ಬರೀ ಫಾರ್ಸ್ ಆಗುತ್ತದೆ. ಆದ್ದರಿಂದ ಹಣ ಎಷ್ಟು ಇದೆ ಎಂಬು ದನ್ನು ನೋಡಿಕೊಂಡು ಅದನ್ನು ಶೇಖರ ಮಾಡುವುದಕ್ಕೆ ನಾನು ಹೇಳಿದ ಕೆಲವು ಕೆಲಸ ಕಾರ್ಯ ಗಳನ್ನು ನಿಲ್ಲಿಸಿ ಎರಡು ವರ್ಷಗಳ ಕಾಲ. ಇವತ್ತಿನ ದಿವಸ ತಾವು ವ್ಯವಸಾಯದ ಕ್ಷೇತ್ರದಲ್ಲಿ ಹೆಚ್ಚು ಆಹಾರದ ಉತ್ಪನ್ನವನ್ನು ಮಾಡಬೇಕೆಂದು ಇದ್ದೀರಿ ; ಆ ರೀತಿ ಮಾಡಬೇಕಾದರೆ ರೈತನಿಗೆ ಬೇಕಾದ ವ್ಯವಸಾಯೋಪಕರಣಗಳನ್ನು ಒದಗಿಸಬೇಕು. ಡೆಲ್ಲಿಯಿಂದ ಹಿಡಿದು ಮೈಸೂರಿನವರೆಗೂ ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಅಗ್ರೋ-ಇಂಡಸ್ಟ್ರಿಯಲ್ ಕಾರ್ಪೊರೇಷನ್‌ನ್ನು ರಚನೆ ಮಾಡಿ ತನ್ಮೂಲಕ ಅಗ್ರಿಕಲ್ಚರ್ ಮತ್ತು ಇಂಡಸ್ಟ್ರೀಸ್ ಎರಡೂ ಕೋಆರ್ಡಿನೇಟೆಡ್ ಆಗಿ ಕೆಲಸ ಮಾಡಿ ಅಗ್ರಿಕಲ್ಚರಿಸ್ಟ್ಸ್‌ಗೆ ಬೇಕಾದ ಇಂಪ್ಲಿಮೆಂಟ್ಸ್‌ನ್ನು ಇಂಡಸ್ಟ್ರೀಸ್ ಅವರು ಒದಗಿಸಬೇಕು. ಹಾಗೆ ಅವರು ಒದಗಿಸದಿದ್ದರೆ, ರೈತನಿಗೆ ಬೇಕಾದ ಗೊಬ್ಬರ ಮತ್ತು ಇತರ ಸಲಕರಣೆಗಳನ್ನು ಕೊಡದಿದ್ದರೆ ಇವತ್ತಿನ ದಿವಸ ಹೆಚ್ಚಿಗೆ ಆಹಾರವನ್ನು ಬೆಳೆಯುವುದಕ್ಕೆ ಸಾಧ್ಯವಿಲ್ಲ. ಗುಳೆ ಬೇಕಾದಾಗ ರೈತನಿಗೆ ಗುಳೆ ಸಿಕ್ಕುವುದಿಲ್ಲ, ಗೊಬ್ಬರ ಬೇಕಾದಾಗ ಗೊಬ್ಬರ ಸಿಕ್ಕುವುದಿಲ್ಲ, ಇಂಪ್ರೂವ್ಡ್ ಸೀಡ್ಸ್ ಸಿಕ್ಕುವುದಿಲ್ಲ, ಇವೆಲ್ಲಾ ಸಿಕ್ಕಿದರೂ ಕೂಡ ವ್ಯವಸಾಯದ ಇಲಾಖೆಯಿಂದ ಏನಾದರೂ ಸಲಹೆ ಬೇಕೆಂದಾಗ ಅದು ಸಿಕ್ಕುವುದಿಲ್ಲ. ಒಂದು ಉದಾಹರಣೆ ಕೊಡುತ್ತೇನೆ. ತ್ತೇನೆ. ನಾನು ಒಂದು ತರಹ ಬತ್ತವನ್ನು ಅಂದರೆ ರೈಸ್ ಪ್ಲಾಂಟ್‌ನ್ನು ಹಾಕಿದ್ದರೆ ವ್ಯವಸಾಯದ ಇಲಾಖೆಯವರು ಬಂದು ನೋಡಿ ಅದು ಬೇರೆ ತರಹದ್ದು ಎಂದು ಹೇಳಿ ಜೆ.ಪಿ.ಸಿ. ಸಿಸ್ಟಂ ಎಂದು ಬೋರ್ಡ್ ಹಾಕಿದರು. ಅದು ಯಾವುದ ನೋಡಿ ಎಂದು ಬಿ.ಡಿ.ಓ. ಮುಂತಾದವರನ್ನು ಕರೆದು ಕೊಂಡು ಹೋಗಿ ತೋರಿಸಿದರೆ ಅವರು ಜಪಾನ್ ಮೆಥಡ್‌ನಲ್ಲಿ ಬೆಳೆದದ್ದು ಎಂದು ಹೇಳಿದರು. ಹೀಗೆ ಒಬ್ಬೊಬ್ಬರು ಒಂದೊಂದು ರೀತಿ ಹೇಳುವುದಾದರೆ ಹೇಗೆ ತಾನೆ ಬೆಳೆಸಲು ಸಾಧ್ಯ ಎಂಬುದನ್ನು ಯೋಚನೆಮಾಡಬೇಕು. ಒಂದು ಎಕರೆಗೆ ಎಷ್ಟು ಗೊಬ್ಬರ ಹಾಕಬಹುದೆಂದು ಶ್ರೀ ಎಂ. ಆರ್. ಪಾಟೀಲರು ಹೇಳಿದರು. ಮೂರು ಮೂಟೆ ಯೂರಿಯ 5 ಎಕರೆಗೆ ಹಾಕಿದಾಗ ಜೊಂಡು ಬೆಳೆದು ಬತ್ತದ ಫಸಲು ಕಡಮೆಯಾಯಿತು. ಇದನ್ನು ಸರಿಯಾಗಿ ತಿಳಿಸದಿದ್ದರೆ ರೈತರು ಹೇಗೆ ಬೆಳೆ ಹೆಚ್ಚು ಬೆಳೆಯುವುದು ? ವ್ಯವಸಾಯದ ಇಲಾಖೆಗೆ 18 ವರ್ಷಗಳಿಂದ ಸರಿಯಾಗಿ ಏನನ್ನೂ ಸಾಧಿಸುವುದಕ್ಕೆ ಸಾಧ್ಯವಾಗಿಲ್ಲ. ಈ ದಿವಸ ತುರ್ತು ಪರಿಸ್ಥಿತಿ ಇರುವಾಗ ಹೆಚ್ಚು ಬೆಳೆಯಬೇಕು, ಅದಕ್ಕೆ ಬರೀ ರಾಜಕಾರಣಿಗಳಲ್ಲ, ಅಧಿಕಾರಿಗಳೂ ಕೂಡ ದೇಶಭಕ್ತಿಯಿಂದ ಕೆಲಸ ಮಾಡಬೇಕು ಎಂದು ನಮ್ಮ ರಾಷ್ಟ್ರದ ಪ್ರಧಾನಿಗಳು ಹೇಳಿದ್ದಾರೆ. ಅವರೂ ಮನಸ್ಸು ಮಾಡಿ ರಾಷ್ಟ್ರದ ಸಂಪತ್ತನ್ನು ಹೆಚ್ಚಿಸ ಬೇಕೆಂದು ಪ್ರಸಾರ ಭಾಷಣದಲ್ಲಿ ನಮ್ಮ ಪ್ರಧಾನ ಮಂತ್ರಿಗಳು ಹೇಳಿದ್ದಾರೆ. ಅದಕ್ಕಾಗಿ ನಾನು ಅಧಿಕಾರಿಗಳಲ್ಲಿ ಬಹಳ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ. ರಾಜಕಾರಣಿ ಬೇರೆ, ಅಧಿಕಾರಿಗಳು ಬೇರೆ, ಜನರು ಬೇರೆ ಎಂದು ತಿಳಿಯಬಾರದು, ಭೇದಭಾವವನ್ನು ಮರೆತು ಎಲ್ಲರೂ ಕೂಡ ಸಹಕರಿಸಿ ಇಂದಿನ ತುರ್ತು ಪರಿಸ್ಥಿತಿಯಲ್ಲಿ ಒಮ್ಮನಸ್ಸಿನಿಂದ ಕೆಲಸಮಾಡಿ ಹೆಚ್ಚು ಆಹಾರ ಬೆಳೆಯಲು ಅವಕಾಶ ಮಾಡಿಕೊಡುತ್ತಾರೆಂದು ನಂಬುತ್ತೇನೆ. ಇವತ್ತು ನಮಗೆ ಬೇಕಾದ ಫರ್ಟಿಲೈಜರುಗಳನ್ನು ತಯಾರಿ ಸುವ ಕಾರ್ಖಾನೆಗಳು ನಮ್ಮ ದೇಶದಲ್ಲಿಲ್ಲ. ಈಗ ವಿದ್ಯುಚ್ಛಕ್ತಿಯನ್ನು ದೀಪಗಳಿಗಾಗಿ ಹಳ್ಳಿಗಳಿಗೆ ಕೊಡಬೇಕೆಂದು ಹೊರಟಿದ್ದಾರೆ. ಅದಕ್ಕೆ ಬದಲಾಗಿ ಆ ಪವರನ್ನು ಐ.ಪಿ. ಸೆಟ್ಟುಗಳಿಗೆ ಒದಗಿಸುವುದು ಉತ್ತಮ. ಇದಕ್ಕೆ ತೊಂದರೆ ಇದೆ, ಕೇಂದ್ರ ಸರಕಾರ ಒಪ್ಪುವುದಿಲ್ಲ. ಎಂದು ಮುಖ್ಯ ಮಂತ್ರಿಗಳು ಹೇಳಿದರು. ಅವರು ಹೇಳುವುದು ಸರಿಯಾದರೂ ರಾಜ್ಯ ಸರಕಾರ ತನಗೆ ಆವಶ್ಯಕವಾದುದನ್ನು ಹೇಳುವುದಕ್ಕೆ ಅಧಿಕಾರವಿದೆ. ಹಾಗೆ ಮಾಡಿ ಗದ್ದೆಗಳಿಗೆ ಬೇಕಾಗುವ ಐ.ಪಿ. ಸೆಟ್ಟುಗಳಿಗೆ ಪವರನ್ನು ಕೊಟ್ಟು ಹಳ್ಳಿಗಳಿಗೆ ದೀಪಕ್ಕೆ ಕೊಡುವ ಪವರನ್ನು ಉಳಿಸುವುದು ಮತ್ತು ವಿದ್ಯುಚ್ಛಕ್ತಿಯ ಉಪಕರಣ ಗಳನ್ನು ಒದಗಿಸುವುದು ಅಗತ್ಯವಾಗಿದೆ.

Mr. SPEAKER.—Debate is always good if the member is very precise. Does the Member suggest that the lamps, street lights, etc., in villages should be plugged away or stop laying of new lines ?

Sri C. J. MUCKANNAPPA.—My intention is, rural electrification should be stopped for sometime.

Mr. SPEAKER.—There is plenty of power.

Sri C. J. MUCKANNAPPA.—But, where is the material ? I am suggesting only not to draw new lines and not to electrify new villages.

Mr. SPEAKER.—11 KV or 33 KV line drawn for one pump set can as well light one or two lamps without any extra cost.

Sri C. J. MUCKANNAPPA.—But, what about the material, Sir ? There is no material. By using materials required for electrifying a village, I think, we can service three or four pump sets.

Mr. SPEAKER.—Loop line material is different ; main line material is different.

Sri C. J. MUCKANNAPPA.—I know what is a main line, what is a loop line and what is a subsidiary line.

Mr. SPEAKER.—I apologize to the Member.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹತ್ತು ಪಂಪುಸೆಟ್ಟುಗಳಿಗೆ ಉಪಕರಣಗಳನ್ನು ಕೊಟ್ಟು ಪವರ್ ಒದಗಿಸಿದರೆ 30 ಎಕರೆ ಭೂಮಿಯಲ್ಲಿ ಸಾಗುಮಾಡಿ ನಾಲ್ಕೈದು ಗ್ರಾಮಗಳವರು ಜೀವನ ಮಾಡಬಹುದು. ಈ ದಿವಸ ಊರುಗಳಿಗೆ ಬೆಳಕಿಲ್ಲದಿದ್ದರೂ ಪರವಾಗಿಲ್ಲ, ಅನೇಕ ವರ್ಷಗಳಿಂದ ವಿದ್ಯುಚ್ಛಕ್ತಿಯಿಲ್ಲದೆ ಸೀಮೆಎಣ್ಣೆ ದೀಪಗಳನ್ನು ಉಪಯೋಗಿಸುತ್ತಿದ್ದರು. ತುರ್ತು ಪರಿಸ್ಥಿತಿ ಇರುವಾಗ ಬೆಳಕಿಗಿಂತ ಆಹಾರಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕಾಗಿರುವುದರಿಂದ ಈ ಕಡೆ ಸರಕಾರ ಹೆಚ್ಚು ಗಮನ ಕೊಡಬೇಕು. ಇದನ್ನು ಅನೇಕರು ಹೇಳಿದ್ದಾರೆ.

ಇಷ್ಟೆಲ್ಲಾ ಆದಮೇಲೆ ಆಹಾರದ ವಿತರಣೆ ಬಹಳವಾಗಿ ಕೆಟ್ಟಿದೆ ಎಂದು ಹೇಳಿದ್ದಾರೆ. ಈಗ ಮೀನು ತಿನ್ನುವವರಿಗೆ ಅದನ್ನೊದಗಿಸಲು ಏನು ಏರ್ಪಾಡು ಮಾಡಿದ್ದೀರಿ ? ಆಲೂಗಡ್ಡೆ ಮತ್ತು ಅದರ ಚಿಪ್ಸ್ ಉಪಯೋಗಿಸಲು ಸದವಕಾಶವಿದೆ.

Mr. SPEAKER.—Member should be fully informed. Government of Mysore is installing 7 ice factories—quick freezing and processing plants—for Fish.

Sri C. J. MUCKANNAPPA.—But, what is the percentage of population that is consuming fish ?

Mr. SPEAKER.—Government has not excluded anybody. Anybody can eat it.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದನ್ನೆಲ್ಲಾ ಹೇಳುವುದು ಏಕೆಂದರೆ, ಮಾನ್ಯ ಪ್ರಧಾನಿಗಳು ಮಾತನಾಡುವಾಗ ಮಾಂಸಾಹಾರಿಗಳು ಒಂದು ದಿವಸವಾದರೂ ಬರೀ ಮಾಂಸ ಊಟಮಾಡಿ ಇತರ ಆಹಾರ ಉಳಿಸಬಹುದು ಎಂದು ಹೇಳಿದ್ದಾರೆ. ಹಾಗೆ ಮಾಡಿದರೆ ಅನೇಕ ಜನ ಸಸ್ಯಾಹಾರಿಗಳಿಗೆ, ಒಂದು ಊಟ ಸಹ ದೊರೆಯದಿರುವವರಿಗೆ ಸ್ವಲ್ಪವಾದರೂ ದೊರೆಯಲು ಅವಕಾಶವಾಗುತ್ತದೆ.

Mr. SPEAKER.—That co-operation must come from you and me, not from the Government. Among the two crores of people, you and I must co-operate with the Government. I am not a fish eater. I will not eat it ; I will give it to you.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪಟ್ಟಣಗಳಲ್ಲಿರುವ ಶಾಖಾಹಾರಿಗಳು ಆಲೂಗಡ್ಡೆ ಚಿಪ್ಸ್ ಮಾಡಿ ಅದನ್ನು ಪ್ರಿಸರ್ವ್‌ಮಾಡಿ ಒಂದು ದಿವಸ ಅದರಿಂದ ಕಾಲಹಾಕಬಹುದು. ಸಾಲದ್ದಕ್ಕೆ ಮೈಸೂರಿನಲ್ಲಿ ಆಹಾರ ಸಂಶೋಧನಾ ಕೇಂದ್ರವಿದೆ, ಅದರಿಂದಲೂ ಉಪಯೋಗ ಪಡೆಯಬಹುದು ಬಾಳೆಹಣ್ಣು ಈ ದಿವಸ ಯಥೇಚ್ಛವಾಗಿ ದೊರೆಯುತ್ತದೆ, ಎರಡು ಮೂರು ಆ ಹಣ್ಣುಗಳನ್ನು ತಿಂದು ಜೀವನ

ಮಾಡುವವರೂ ಇದ್ದಾರೆ. ಒಂದು ಬಾಳೆಹಣ್ಣಿನ ಬೆಲೆ ಈಗ 15 ಪೈಸೆ ಆಗಿದೆ. ಅದನ್ನು ಕೊಳೆಯದ ಹಾಗೆ ರಕ್ಷಿಸಿದರೆ ಬೆಂಗಳೂರಿನವರಿಗೆ ಅದರಿಂದ ಎರಡು ದಿವಸಗಳ ಆಹಾರ ಒದಗಿಸಬಹುದು. ಹೀಗೆಯೇ ಹಣ್ಣುಹಂಪಲುಗಳು ಕೊಳೆಯದಂತೆ ಕೋಲ್ಡ್ ಸ್ಟೋರೇಜಿನಲ್ಲಿಟ್ಟು ರಕ್ಷಿಸಿದರೆ ಅದರಿಂದಲೂ ಕೂಡ ಆಹಾರದ ಕೊರತೆಯನ್ನು ನೀಗಬಹುದು. ತರಕಾರಿಯನ್ನೂ ಕೂಡ ಕೊಳೆಯದಂತೆ ರಕ್ಷಿಸಬೇಕು. ಪರಂಗಿಹಣ್ಣು ಕೊಯಮತ್ತೂರಿನಲ್ಲಿ ದೊರೆಯುವುದು 8 ಪೌಂಡ್ ತೂಗುತ್ತದೆ, ಅದನ್ನು ನಾಲ್ಕೈದು ಜನರು ತಿಂದು ಒಂದು ದಿನದ ಆಹಾರ ತ್ಯಾಜ್ಯ ಮಾಡಬಹುದು. ಈ ರೀತಿ ಮಾಡಿದರೆ ಎಷ್ಟೋ ಆಹಾರ ಸಮಸ್ಯೆಯನ್ನು ನೀಗಬಹುದು.

4-00 P. M.

ಇವತ್ತಿನ ದಿವಸ ಆಹಾರವನ್ನು ಸೊಸೈಟಿಗಳ ಮುಖೇನ ಮಾರುತ್ತಿದ್ದಾರೆ. ರಾಜಾಸ್ಥಾನದಿಂದ ತರಿಸಿದಂಥ ಕಡಲೆಯ ಗತಿ ಏನಾಯಿತು ? ರೈತರ ಹತ್ತಿರ ಪಲ್ಲ ಒಂದಕ್ಕೆ 44 ರೂಪಾಯಿಗಳಂತೆ ಕೊಂಡಂಥ ಬತ್ತ ಏನಾಯಿತು ? ಸಹಕಾರ ಸಂಘಗಳವರು ಈ ಬತ್ತವನ್ನು ಬೆಳಗಾಂ ಜಿಲ್ಲೆಯ ಗಡಿ ಪ್ರದೇಶದಲ್ಲಿ 78 ರೂಪಾಯಿ ಪ್ರಕಾರ ಮಾರಿದ್ದಾರೆ. ಇಂಥವರ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮವೇನು ? ಸಹಕಾರ ಸಂಘಗಳವರು ಕೊಂಡುಕೊಳ್ಳಬೇಕೆಂದು ಹೇಳಿ, 42 ರಿಂದ 44 ರೂಪಾಯಿ ಪ್ರಕಾರ ಕೊಂಡ ಬತ್ತವನ್ನು ನನ್ನ ಜಿಲ್ಲೆಯಲ್ಲಿಯ 78 ರೂಪಾಯಿಗಳಿಗೆ ಮಾರಾಟ ಮಾಡಿದ್ದಾರೆ. ನಾನು ಸರ್ಕಾರಕ್ಕೆ ಒಂದು ಹೃದಯವೇದನೆಯಾಗತಕ್ಕ ವಿಷಯವನ್ನು ಹೇಳುತ್ತೇನೆ. ಸಿರಾ ಮತ್ತು ಹಿರಿಯೂರು, ಎರಡು ತಾಲ್ಲೂಕುಗಳಲ್ಲಿ ಲಕ್ಷಾಂತರ ಮೂಟೆ ಬತ್ತವನ್ನು 44 ರಿಂದ 50 ರೂಪಾಯಿಗಳವರೆಗೂ ಕೊಟ್ಟು ತೆಗೆದುಕೊಂಡು ಅದನ್ನು ಹೆಚ್ಚು ಬೆಲೆಗೆ ಮಾರಿ ಎರಡು ಲಕ್ಷ, ಮೂರು ಲಕ್ಷ, ಹತ್ತು ಲಕ್ಷ ಹೀಗೆ ಹಣ ಸಂಪಾದನೆಮಾಡಿ ಶ್ರೀಮಂತರಾಗಿದ್ದಾರೆ. ಒಂದು ಕಡೆ ಸೊಸೈಟಿಗೆ ಮಾರಬೇಕೆಂದು ಹೇಳುವುದು, ಇನ್ನೊಂದು ಕಡೆ ಫ್ರೀ ಮಾರ್ಕೆಟ್ ಎಂದು ಹೇಳುವುದು ಸರಿಯಲ್ಲ. ಸಹಕಾರ ಸಂಘಗಳ ಮುಖಾಂತರ ವ್ಯಾಪಾರ ನಡೆಸಬೇಕು, ವಹಿವಾಟು ನಡೆಸಬೇಕು, ಚಿಲ್ಲರೆ ವ್ಯಾಪಾರ ಮಾಡಬೇಕು, ಎಂದು ಸರ್ಕಾರದವರ ಮನಸ್ಸಿನಲ್ಲಿದ್ದರೆ ಸೊಸೈಟಿಗಳ ಮೇಲೆ ಭದ್ರವಾದ ಹತೋಟಿಯನ್ನು ಇಟ್ಟುಕೊಳ್ಳದೆ ಹೋದರೆ ತಪ್ಪಾಗುತ್ತದೆ ಎಂದು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

1959ರಲ್ಲಿ ದಿವಂಗತ ಪ್ರಧಾನಿ ನೆಹರು ಅವರು ಒಂದು ಮಾತನ್ನು ಹೇಳಿದ್ದಾರೆ ! ನಮ್ಮ ದೇಶದಲ್ಲಿರುವ ಮೂರು ಲಕ್ಷ ಜನ ಆಹಾರ ಧಾನ್ಯ ವ್ಯಾಪಾರ ಮಾಡುವವರು ದೇಶದ 45 ಕೋಟಿ ಜನಗಳ ಅನ್ನದ ಕತ್ತನ್ನು ಹಿಡಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದನ್ನು ತಪ್ಪಿಸಲು ಆಹಾರ ಕಾರ್ಪೊರೇಷನ್ ಆಗಬೇಕು, ಇಲ್ಲದೆ ಇದ್ದರೆ ಸ್ಟೇಟ್ ಕಾರ್ಪೊರೇಷನ್ ಈ ಕೆಲಸ ವಹಿಸಿಕೊಳ್ಳಬೇಕು, ಇಲ್ಲದೆ ಹೋದರೆ ದಕ್ಷತೆಯಿಂದ ಸಹಕಾರ ಸಂಘಗಳ ಮುಖಾಂತರವಾಗಿ ಮಾಡಬೇಕು ಎಂದು ಹೇಳಿದರು. ಅವರು ಹೇಳಿದುದನ್ನು ನಾನು ಸರ್ಕಾರದ ಗಮನಕ್ಕೆ ಏಕೆ ತರುತ್ತಿದ್ದೇನೆಂದರೆ, ಇವತ್ತು ಆಹಾರ ಕಾರ್ಪೊರೇಷನ್ ಕೂಡ ತನ್ನ ಕರ್ತವ್ಯ ಮಾಡುವುದರಲ್ಲಿ ಕುಂಠಿತವಾಗುತ್ತಿದೆ ಎಂದು ಹೇಳುತ್ತಿದ್ದೇವೆ. ಅಲ್ಲಿ ಲಾಹೋರ್ ಸೆಕ್ಟರಿನಲ್ಲಿ, ಸಯಾಲ್‌ಕೋಟ್ ಸೆಕ್ಟರಿನಲ್ಲಿ ಬೇಕಾದಂಥ ಜೀಪುಗಳು ಮತ್ತು ಇತರ ವಾಹನಗಳು ಬೆಂಗಳೂರಿನ ಗಾಂಧಿನಗರದಲ್ಲಿರುತ್ತವೆ. ಅವರು ಏನು ಮಾಡುತ್ತಾರೋ ತಿಳಿಯದು. ಆಹಾರ ಕಾರ್ಪೊರೇಷನ್ ರಚನೆಯಾದ ಮೇಲೆ ವ್ಯವಸಾಯಗಾರನಿಗೂ ಮತ್ತು ಮಾರುಕಟ್ಟೆಗೂ ಇದ್ದ ಸಂಬಂಧ ಕಡಿದು ಹೋಗಿರುವುದರಿಂದ ವ್ಯವಸಾಯಗಾರನಿಗೆ ಬೇಕಾದ ಸವಲತ್ತುಗಳನ್ನು ಒದಗಿಸುವ ಕಾರ್ಯವನ್ನು ಆಹಾರ ಕಾರ್ಪೊರೇಷನ್ ಹೊರಬೇಕು. ನಮ್ಮ ರಾಜ್ಯದಲ್ಲಿ ಒಂದು ಅಗ್ರೋ-ಇಂಡಸ್ಟ್ರಿಯಲ್ ಕಾರ್ಪೊರೇಷನ್ ಸ್ಥಾಪನೆ ಮಾಡಿ ತನ್ಮುಖೇನ ಆಹಾರವನ್ನು ಹೆಚ್ಚು ಬೆಳೆಯುವ ರೀತಿಯಲ್ಲಿ, ಅದಕ್ಕೆ ಅನುಕೂಲವಾಗುವ ರೀತಿಯಲ್ಲಿ ಸಹಾಯ ಮಾಡಬೇಕೆಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†Sri S. S KOLKEBAIL.—I rise to support the resolution moved by Mr. D M. Siddaiah. The resolution moved here must have reached the ears of Lord Devendra. To-day we got the rain in Bangalore. Anyway, the war waged by Pakistan has done something good in various sectors. The country is united as one. America at the instance of Pakistan has refused to give us food.

Mr. SPEAKER.—Does the member mean that America refused or delayed the food supply?

Sri S. S. KOLKEBAIL.—American Government refused to give food. Several members have said about this. It is stated by almost all the members that something has to be done for the poor cultivators. But the Government either for taking up some big schemes or for some other reasons have not taken adequate steps to ameliorate the conditions of the ryots in the grow more food schemes. This scheme was just introduced during 1943 during which time the World War II was going on. During those years nothing was done by the then British Government because there was not much co-operation by the people. Again after the Constitution came into existence, the Government of India appointed a Grow More Food Committee. That Committee was presided over by Sri V. T. Krishnamachari and it submitted its report. Ths Report of the Committee was pigeon-holed and no action was taken. The recommendation of the Committee was that Minor Irrigation must be given top priority, I. P. sets should be supplied, loans must be given and fertiliser factories must be started. But to-day we find there is dearth of electricity, I. P. sets, fertilizers and seeds. I feel that we must fight this on war footing. With regard to the electricity there is abundant supply now. I am only concerned with my district. The water is available at the lowest level. It is only in South Kanara that the water is available at the lower level.

Mr. SPEAKER.—Why not in North Kanara?

Sri S. S. KOLKEBAIL.—In North Kanara also there is water available at the lowest level because they are coastal Districts. A number of tributaries are there to rivers. There are not only 21 rivers, but also 500 to 1,000 tributaries are there. So, there is abundant scope for tapping water.

Mr. SPEAKER.—Some Hon'ble member was suggesting that the water that is available at the lowest level is more useful in other districts than water at a higher level in South Kanara and it is easily utilisable.

Sri S. S. KOLKEBAIL.—We can get the water in abundance at the coastal districts, but not in other Districts.

Sri B. D. JATTI.—The water that is available in other Districts can be utilised and much more results can be obtained than in coastal areas because the nature of the soil is such. We can doubly grow the food grains in other Districts.

Sri S. S. KOLKEBAIL.—We are growing three crops. My name 'Kolkebail' means three crops. So, we are regularly growing three crops. The ryots of the coastal Districts are asking for facilities for minor irrigation. We are spending and have to spend crores of rupees on this. The minor irrigation scheme was being investigated for the last 15 years. I think the investigation is not yet completed.

From 1962 onwards I have been asking to give 15 to 20 vented dams; 1962 was over; 1963 was over; 1964 was over and now 1965 is completing: yet not a single vented dam has been constructed.

Mr. SPEAKER.—The Member is thinking that he is asking for certain things in the course of a Budget Debate. But the resolution deals with all possible expansion; so let him ask for something more.

Sri S. S. KOLKEBAIL.—What I say is if only we execute minor irrigation schemes instead of spending crores and crores of rupees on building major irrigation projects—I do not oppose it—we will get results immediately; suppose a vented dam is put up; we can raise first, second and third crops; not only we can double the production, but we can treble the production. For example, in my own constituency, there are 63,000 acres of cultivable land; first crop only is grown in that; second crop drops down to 9,000 acres; third crop drops down still to 6,000; the reason is dearth of water, dearth of power and dearth of I.P. sets. If these are available, then crops can be grown on more acres. That particular fact must be impressed upon the Government. The Central Food Department representatives came the other day to our place and they were flabergasted to see that in the months of April and May, people were lifting water from the river and raising paddy crop. So, if only the Government were to help us with power and I.P. sets, our food production will not only double up but treble up. The Hon'ble Member Srimathi Nagarathnamma and another have stated that it is really very difficult to get power. I endorse every word she has said about it. In my area, 112 raiyats have deposited money to get power and I.P. sets and they had installed pumps in 1963 but they could not get power till 1964. Then I issued an invitation saying that the Chief Minister will inaugurate the pumpsets. Then the entire Board officers rushed to the village and they gave us power to some of the I.P. sets.

Mr. SPEAKER.—All this should not be disclosed on the floor of the House, that the member managed to issue invitations and got power, etc.

Sri S. S. KOLKEBAIL.—I am pointing out the difficulty that the raiyat experiences even to get power for I.P. sets. On account of these I.P. sets which were inaugurated on 13th December 1964 about 250 quintals of rice had been raised in the third crop, *i.e.*, between February and May. If this kind of encouragement is given to raiyats, I am sure our food problem can be very easily solved. In this connection, of course, everybody talked about other amenities which the raiyats should be given by the Government. But I am going to confine myself to fisheries. Most probably all others who talked are all vegetarians. The ready-made non-vegetarian food is in the Arabian sea. Our fishing area in Mysore State is 10,000 sq. miles but our fishermen fish in about 800 sq. miles both in North Kanara and South Kanara. They are not supplied with mechanised boats or marine nets or any machinery which would preserve fish just like in Japan or any of the other facilities in spite of the crash programme which the Central Government is ready

(SRI S. S. KOLKEBAIL)

to sponsor for the benefit of marine States. The Government has to consider this aspect seriously. There are 3 lakhs of fishermen in the shores of Mysore State.

MR. SPEAKER.—The Hon'ble Member is talking about ancient past. The boat-building capacity of Mysore State has gone up to the level of 350 a year from about 10. That is something which goes to the credit of the Government.

Sri S. S. KOLKEBAIL.—All those schemes we find only on paper. But in actual implementation, whatever the scheme which the Government has propounded at the Secretariat level has not reached the common man. This is the categorical statement I am making. The fertiliser, or loan or implements never reach the people who grow food or catch the fish. That is the difficulty. This is on account of the red tapism or some other difficulty which we experience at the lowest level. When we go to our constituency, we find nothing there. Though fishermen can get so many things, we find nothing there. That was what I was just trying to impress on the Government.

MR. SPEAKER.—Supposing what the Hon'ble Member calls as paper-schemes, are all implemented and some more schemes are taken up, will the Member be satisfied ?

Sri S. S. KOLKEBAIL.—Not only myself; the entire country will be satisfied. The other day the Prime Minister was telling that not an inch of land should be left uncultivated......

MR. SPEAKER.—Having dealt with fish, the Hon'ble member may deal with poultry.

Sri S. S. KOLKEBAIL.—Even under the crash programme, poultry has not been included at all. We have to pay 30 paise per egg. Formerly, we were getting one for 6 or 7 paise. Today on account of dearth of either poultry or on account of feeding cost, in my own village, I find the price is 30 paise per egg. If this were to continue, it will be very difficult to enhance our calories. Now of course they are having 3,000 calories per day. But I am afraid whether we are getting even 1,200 calories is a debatable point. With regard to piggery, there is vast scope. I think in Bangalore only they are just giving some encouragement. In villages where there is vast scope, no encouragement is given. I request the Government to see that necessary encouragement is given with regard to piggery. So, my appeal to Government in order to step up food, is to give us minor irrigation facilities and I.P. sets and electricity. Of course my friend Sri Muckannappa said rural electrification is not necessary. But without rural electrification, I.P. sets cannot work and so that is necessary.

Another matter of importance is, last year the price of paddy was fixed by Government at Rs. 49 per quintal in South Kanara district. This year, I think most probably after seeing that the raiyat is given all the necessary incentive to grow more food, Government has reduced from Rs. 49 to Rs. 39 per quintal. This will retard the grow

more food campaign. If the raiyat is to be encouraged to grow more food, he must be given all the price support. That is what is done in America. Not only they are giving price support to the farmers but they even asked them not to grow and they offered some money compensation also for that. They have so much of abundance of money and grain, whereas, we are having scarcity. If the raiyat has to grow more, let the Government subsidise and the raiyat should not be made to suffer. The price of one quintal of ragi is fixed at Rs. 50 whereas one quintal of paddy is fixed at Rs. 49. This will cause great hardship to the raiyats of South Kanara, Shimoga and Coorg Districts, because we are the people who eat mostly boiled rice...

Mr. SPEAKER.—Everybody eats rice only after boiling.

Sri S. S. KOLKEBAIL.—I am making a difference between rice and boiled rice.

Mr. SPEAKER.—Does anybody eat raw rice or after boiling it?

Sri S. S. KOLKEBAIL.—I mean par-boiled rice, Sir. It is boiled paddy. I wanted to say that the price of paddy has to be fixed in such a way as to give some encouragement to the raiyat. That will also help the production of more food in South Kanara and other malnad areas.

Sri ANNA RAO GANAMUKHI (Afzalpur).—Sir, I support the resolution, inasmuch as it is a very important and urgent resolution which will have to engage the attention of the whole country. Here the resolution says that the Government should take all measures to step up food production. I do not know whether we can take measures to step up food production unless the plan priorities are re-ordered and unless we slash the expenditure on other measures. Unless that is done, Government cannot take any effective steps to step up food production in the State. I should say Sir, the State Government and the Central Government are very much dependent on the Planning Commission and unless the Planning Commission takes note of the emergency conditions in the country and prepares a crash programme so that it may be adjusted in the State plan year after year unless that is done, the State Government also cannot take any effective action. The problem is so big, it is very difficult to tackle this unless sufficient finances are made available to the Departments. Here in our Government one Minister deals with food, another Minister deals with agriculture, and a third deals with finances and a fourth deals with land. These are inter-related problems. If the agriculture Minister grows more food, the Food Minister can distribute more. Otherwise, he will be helpless. Therefore, I should say to tackle this problem effectively, agriculture and food should be combined in one Minister so that both port-folios can be tackled effectively. It is not with any other view that I suggest this, but with a view to step up food production. This has to be done.

Now Sir, we are much dependent on foreign food and our plan also is very much dependent upon foreign aid. The Government of India and all the State Govrnments have opened their eyes and agriculture, I

(SRI ANNA RAO GANAMUKHI)

think, has been given top priority, second only to defence. Therefore, and so it is that we have to concentrate our energies on this. The American Ambassador has said that about 60 per cent of the wheat eaten in this country comes from America and he has at the same time said that it is 15 per cent of the wheat production of America. We can see what a tremendous problem it is for all of us. Though it seems that food deficit in India is only 8 to 10 per cent, the people are living on marginal subsistence level. Therefore, if we tell them to tighten their belt, it will be at the risk of their lives. Therefore, I think as some Hon'ble Members have suggested that we must slash or cut other programmes such as road-building, construction of buildings, school buildings-all these programmes should be slashed and money provided for agriculture. Now, Sir, our lands are so de-fertilised that the fertilizer has become very important. In India one acre can grow 1000 lbs per acre, whereas in Egypt they grow about 3,000 lbs per acre, in Japan they grow 3,500 times per acre, in China 2,400 lbs per acre and in U.S., it is 2,000 per acre. This is the difference between these countries and ourselves. So, if this gap has to be bridged, then we have to take up many programmes. For instance, as far as fertilizers are concerned, I should say that we are only applying 2.11 lbs per acre, whereas if we take Japan, they are putting 200 lb per acre. That is the difference. Unless we establish more fertilzer factories in the country, I do not think any agriculturist or agriculture can make any significant improvement in this field. Because it is said in USA the fertilizer companies tell the agriculturist: 'one dollar worth of fertiliser will bring you 3 dollar worth of crops', and the agriculturist in America knows it fairly well that certainly one dollar worth of fertilizer will bring him 3 dollar worth of crop.

Whereas, in our country, I think we are not doing much in this direction, nor do the agriculturists know how to apply the fertilisers. In Russia, Lenin once said that Communism is Soviet Power plus electrification of the whole country. And, Mr. Kruschev once quoted it and then said, if Lenin was alive, he would have said that Communism is Soviet Power plus electrification of the whole country and plus chemicalisation of agriculture. Unless an agro-chemical service is constituted, I do not think we can make any significant progress in this direction.

4-30 P.M.

Our agriculturists do not know what the soil definitely consists of and what are the good seeds. Our community projects, if I may be permitted to say so, are simply bogus. They are sending only paper statistics to the State, not only to the State, but also to the Centre they are supplying bogus statistics. Everything is in paper. There are Panchayat Production plans. When I participated in the taluka and district development meetings, I found that they did not know what it was. It is only the gramsevakas who prepare the statistics and send

them. The Gram Panchayats do not know anything. If this is the condition, then I think we should not rely upon the paper statistics, but should take active interest in stepping up food production.

As far as prices are concerned, let me state that the purchase price fixed does not provide an incentive to production. But it has a disincentive effect on the agriculturists. If we take industry, we see that they have the National Productivity Council. They advise the industries how to produce and how to increase industrial goods, whereas there is no such council for agriculture. There is the Tariff Commission which looks after the incentives to the industries. All possible help is given to the industries, whereas agriculture is neglected, and there is no one to look after it.

To give incentive for more production, I would say that all marginal lands which have been brought under the plough should be given land remission for at least five years, so that the farmers who cultivate such land may invest more money on those lands. Unless it is made an attractive proposition, the farmers cannot do much in this direction. I would therefore urge upon the Government to give this remission to the agriculturists.

As far as prices are concerned, there is the Agricultural Prices Commission. At least when the prices of steel, cement or sugar are fixed, the producers of such commodities are consulted as to how much price should be fixed for their products. They ask them what their labour charges, and wages are, what the labour Bill would be, what the capital invested was, what should be the depreciation that should be allowed and many other things. But, as far as agriculture is concerned, who fixed the prices—we do not know. The agriculturist is never consulted. This is the condition of the agriculturists. If we have to bring about parity with the industrial prices, there should be a spurt in prices of cash crops and food crops. Thus we will be providing much incentive to the farmer. I therefore suggest that the farmer should be treated on a par with the industrialist.

Increasing the growth of output is the *sine quo non* with food stabilisation on the supply side; and reduction of the rate of money supplied to the people is *sine quo non* of stablisation on the demand side. Unless both these things are integrated or co-ordinated, I do not think that we will be successful in this matter.

Lastly, I should like to say that a well-trained fieldman in scientific agriculture should supervise the agricultural operations in an area of 5,000 acres at least. He should see that the right kind of seed is chosen, the right kind of fertiliser is applied. He should see whether the sowing operations are done correctly. All these things have to be supervised by this well-trained fieldman in scientific agriculture. Unless this is done, we cannot do anything. For all these things we require finances. For every five thousand acres, one agricultural depot should be established where the farmer can have manure, good seed, implements and everything that he needs.

(SRI ANNA RAO GANAMUKHI)

Lastly, I should say that like the Coffee Board, we must establish or constitute boards for rice, for jowar and for wheat. Just as the Coffee Board does, these Boards should work out the costs, supply the mannure and fertilisers and advance money to the growers, and then acquire the whole production and dispose of it.

SRI B. D. JATTI.—Commodity Boards.

SRI ANNA RAO GANAMUKHI.—Whatever the name may be, it does not matter. Just on the lines of the Coffee Board, if we establish boards, one board for rice for the whole State, one board for wheat for the whole State, one for jowar, I think we will be doing some justice to the agriculturist. If the Agricultural Prices Commission sits in Delhi and works out the figures, how can it help the agriculturist. I do not know how they work out. Even the Central Statistical Organisation has stated that agriculture is not a paying proposition. On the other hand it is stated that no profit can be eked out of agriculture. This Agricultural Prices Commission, however expert it may be,—I do not know whether they have consulted any agriculturists. Every one gives importance to agriculture. But the man behind the plough is neglected.

I would now like to stress upon one aspect of agriculture and I request the Government and especially the Hon'ble Minister for Agriculture to examine it. It is with regard to soil testing laboratories. The soil testing laboratories are not found in any district headquarters. One soil testing laboratory is there and so many samples are sent to it, so that they are pending there for years. Is it correct for the Government who want agriculture to improve not to start soil testing laboratories in each district headquarters. For every five acres, one sample is necessary to be tested. If one sample is sent for every five acres to the Central Laboratory, it will take more than 25 years to test the soil mechanism in the entire State. Therefore, we must have soil testing laboratories at every district headquarters.

AN HON'BLE MEMBER.—For each taluk ?

SRI ANNA RAO GANAMUKHI.—When we have not one at each district headquarters, what is the use of saying for every taluk. At least, one such laboratory should be established at each district headquarters.

† SMT. V. V. MIRJANKAR (Kumta).—Mr. Speaker, Sir, let me first congratulate the Hon. Member for having brought this Resolution before the House which has not only opened the eyes of the public but also the Government to know the actual position and I render my full support to the resolution. Many Hon'bel Members who have participated in the discussion have brought to focus the problems that are facing the State in the field of development of agriculture and have suggested ways and measures which will help in achieving self-sufficiency in food production. After all, this is not a great and difficult task to achieve, provided proper understanding exists between the government machinery, the public as well as the agriculturists.

No doubt, Sir, at the production front, steps should be taken to see that food production is put on a war footing but at the same time, it should not be neglected to see that developmental machinery at the taluka level, district level and the Secretariat level should be geared up and geared up to the best extent possible. From the earlier speeches of several Hon'bel members, I have observed that there is inordinate delay in sanctioning loans. I also support this view. It is my experience in my area that the works started in respect of irrigation wells, could not be completed for non-sanction of funds in time and thus putting the agriculturists to heavy losses. Such of of the works which would give yield in short-term should be given priority. Sir, one of the Hon'bel members was highly opposed to the rural electrification. But, Sir, I would like to say that the experience that we have gained in the district of North Kanara is, in the year 1962 the first K. V. line was drawn and we are now in 1965. As soon as the town was electrified, the response from the agriculturists was very good and many came forward with their deposits and applications for electric pumps. I am sorry to say, except for domestic lighting, I do not think our Government has given any encouragement in this regard. The priority that was given formerly to pump sets is slowly drifting away and the Board has put forward a plea that why not include electrification also? This is rather confusing and I hope that priority will be given to electric pump sets. I hope, these people will get power as early as possible.

Sir, I do not want to say much about fertilisers and the methods adopted in cultivation because I do not want to take much time of this House nor do I like you to ring the bell. (laughter). But, I want to say that at the consumer level also stricter measures are adopted to avoid wastage of food. The Maharastra and other Governments have imposed a ban on parties like marriages and other occasions with regard to the number of invitees and the food to be served on such occasions. I do not know why our State is lagging behind in enforcing such a ban on such occasions. I am sure the programme to educate people to change their food habits also will be taken up.

I would like to say here as was pointed out by Sri Kolkebail that fishery industry has not been given due importance. Though the Speaker was good enough to bring to our notice that seven crash programmes are sanctioned, I am sorry to see that not one has come to our district.

Mr. SPEAKER.—It is in the second instalment of the crash programme; first instalment—65 lakhs, second instalment—17 lakhs one at Bhatkal and another at Krishnarajasagar.

Smt. V. V. MIRJANKAR.—Out of the seven, there is none in my district.

Mr. SPEAKER.—There must be electricity in such parts.

Smt. V. V. MIRJANKAR.—But, Kumta, Honnavar and Bhatkal, all have electricity. The one that was intended to be started at Bhatkal has not yet been commissioned.

(SMT. V. V. MIRJANKAR)

As regards fishery, the procedure adopted in sanctioning mechanised boats is a lenghty one which involves much delay than expected. I suggest to decentralise the Board and to see that the District Superintendents are empowered to recommend the applications directly to the Director. There are 100 or 150 applications pending for the last two years and none of them have been sanctioned and neither the mechanised boat or engine has been given. That has been our experience in the past. Today we are seeing schemes on the papers. Let not the schemes be on the paper only. We should show by action that agriculturists can take advantage of this scheme. Let no time be wasted by making him to run from office to office, from B. D. O. to Deputy Commissioner and again from Deputy Commissioner to B. D. O. I may mention for the information of the House that cases in respect of land improvement loans are pending for the last three to four years. A little initiative on the part of officers concerned would have avoided this delay. Today papers are returned to the Taluks, from B. D. O. to Deputy Commissioner. And again if any querries are to be made, I would request the department concerned to see that they are made at a time and in a proper way so that papers need not be unnecessarily delayed. It takes a long way from Bangalore to taluk place. What I would request is, as some members suggested that stern measures should be taken against the blackmarketeers and hoarders, such measures should be taken against such officers also who directly or indirectly are responsible in delaying the matters.

Thank you.

† Sri L. B. BIRJE (Khanapur)—[MARATHI]

† Sri M. Y. GHORPADE (Sandur).—Sir, as repeatedly suggested by you, I shall confine myself to a few practical suggestions without going into any long-term aspects of agriculture.

5-00 P.M.

The first question is, who says that our farmer does not know or is not willing to adopt new methods. My contention is, give him power, water, fertilizer, seed and insecticide and he will certainly deliver the goods. I say this out of my practical experience on my own farm at Sandur where during this season it has been possible to grow as much as 20 quintals of jowar per acre by follwing the recommended methods of agriculture. What I am trying to suggest is that, based upon my practical experience, it should be possible to grow the same quantities in some of the fields having the same facilities. What I am suggesting is a special crash programme for Mysore which I would describe as an intensified integrated programme of production, purchase and distribution. Let us select such people who are in an immediate position to grow this much quantity of foodgrains in each taluka having such facilities. Tell them that if cultivation is as per this ideal programme, we will give you 150 rupees worth of seeds and 100 rupees worth of

fertilizers. Supposing they do this, we shall enter into an agreement with such farmers. We shall put in a condition that if he is supplied with 250 rupees worth of direct assistance, he should return Rs. 500 worth of grain at Government rate. Then, I submit that we will be able to make the maximum use of the limited fertilizer capacity. I want to say on the Floor of the House that there is such an extreme shortage of fertilizers that blackmarket is going on in it. So, there is great need to make the maximum use of whatever little is available. What little is available should be committed as first priority on such a programme. If that is done it will be easy to produce more.

After all, if you do 500 acres in a taluka, 500 acres growing 20 quintals per acre, even if half of it is taken as the production, we will be able to produce 5,000 quintals. These 5,000 bags are sufficient to feed that taluka. In my taluka at Sandur with 500 Bags which we stocked at harvest time we have been able to introduce informal rationing for a population of 50,000. Every family has a ration card guaranteeing half a kg. per head per week for a period of 10 weeks which is approximately the lean period. If we can do this in Sandur, why can't we do this for a taluk with a population of 5 lakhs. It will require 5,000 quintals which may be got from 500 acres. It will serve as an example to the rest of the taluks and it will make a tremendous impact on everybody. This is an immediate programme. These 500 acres can also produce the required quantity of seed. This is not asking too much of the Community Development. After all, if each V. L. W. enlists the support of 4 to 5 cultivators *i.e.* 10 to 20 acres in his circle, it is possible to achieve this programme. If the Community Development staff is not in a position to do even this much, then naturally the conutry will think of scrapping such an institution. Therefore, this is a positive suggestion and I appeal with all the strength at my disposal to immediately start on this programme. If this is taken up all over the conutry, we can do away with P. L. A. 780 on which we have to lean very heavily for our food requirements. This is something which we have implemented in Sandur successfully and so this is feasible and can be done elsewhere also. Take a taluk with a population of 1 lakh. It requires only 50,000 kg. per week *i.e.*, 500 bags per week. For 10 weeks it comes 5,000 bags. If you have to purchase at Government rate, it will require Rs. 2½ lakhs. If you take this much loan from the co-operative finance, it will solve the problem in a particular taluk. This can be done throughout the State. This is my major suggestion and I do hope that when the Ministers reply they will say something for or against it.

Then, I would say that power is a very crucial input. There has been very considerable discussion on the Floor of the House on power. I am one of those who believe that if the Government makes up its mind, it is possible to supply power to all the villages of the Mysore State by the end of the Fourth Plan. I would like to say that in the State of Madras to-day there are 2.5 lakhs pump sets.

MR. SPEAKER.—The difficulty is not about pumpsets and energy, but of line material and equipment.

Sri M. Y. GHORPADE.—I will come to that. Out of a total of 4.55 lakhs pumpsets in the whole country, 2.5 lakhs pump sets are in Madras. They did not have a magic wand for achieving it. What they did was in the previous two plan periods they invested whatever they had in distribution and drawing lines in the rural areas which no other State had done. Let us accept that. It is only a question of investing in materials to draw the lines and I am suggesting that the topmost priority should be given to them. After all, what is required is only poles and aluminium wires and this can be had easily. I consider the argument about feasibility as absolutely bogus. There are 350 pumpsets and the average consumption is 4,400 units. For putting up 350 pumpsets it works out to Rs. 70 per H. P. ; to the Electricity Board it would not work out to more than Rs. 60 per H. P. Whereas it costs Rs. 600 here, in Madras it costs only Rs. 300. What is urgently required is to draw the 11 K.V. main lines and the rest of the things will follow. As I have no time, I do not want to go to further details about this.

Next I come to fertilizers. It is a very crucial input. All that we get is only about 15 per cent of our actual requirement. It would be interesting to know that the price we are paying for fertilizers is twice as high as the price in the U. K. and the U.S.A., but the per acre consumption of nutrients in this country is 1/90th of Japan and 1/150th of Netherlands. From this you can see the deficiency in fertilizer. What is immediately needed is to put up a number of fertilizer factories to make up the deficiency and in the meanwhile whatever little fertilizer is available should be used on a priority basis for the programme which I have already indicated, namely, for intensive integrated production, purchase and distribution.

Then one word about hybrid. Hybrid seeds have been a great success. If the Government could arrange for hybrid seeds for jowar, maize and bajra in every block in the next season it will make a perceptible impact in food production. There is also hybrid seed in wheat. The much publicised Mexican wheat we do not seem to have received in Mysore yet. But at least immediate arrangements should be made to supply hybrid seeds of maize, bajra and jawar to all the Blocks by next season.

Then every block should be supplied with atleast one bore-well-unit on a priority basis so that it can go on digging bore wells. They should also be given a tractor unit. After all, we are giving tractors to individuals on higher purchase basis and so why not we give it to every block one unit each so that they could hire it to the cultivators ?

Then Dairy, sheep, poultry and piggery also should be developed This has been neglected so far and no beginning has been made in this direction. A specific limited beginning should be made in one or two blocks in each district, and there should be intensive activity in the direction of dairy, sheep, poultry and piggery development and also the growing of the stuff required to maintain these.

These are the suggestions I wanted to make. As my time is up, I would like to conclude by once again reiterating that in each block there should be an intensive integrated programme of production, purchase and distribution so that it will solve the problem of production and distribution in the taluk. We should apply all the available fertilizers for production purposes. Such a programme will enthuse the people and will serve as a first class demonstration and it will activise the community development staff which today is threatened with extinction for lack of programme. It will also activise and bring about a dynamic approach to the panchayats and co-operatives. If this is done, we would have done a good job.

MR. SPEAKER.—Now I have got a list of 27 members of the Congress Party and 9 members of the Opposition Parties left over. I would request these members to put themselves in my position and guide me as to how I can solve this problem. In the meanwhile Sri G. N. Patil will speak.

† ಶ್ರೀ ಜಿ. ಎನ್. ಪಾಟೀಲ್ (ತಾಳೀಕೋಟೆ).—ಸಭಾಪತಿಯವರೇ, ನಿನ್ನೆಯ ದಿವಸ ಮಾನ್ಯ ಡಿ. ಎಂ. ಸಿದ್ದಯ್ಯನವರು ಮಂಡಿಸಿದ ಹೆಚ್ಚು ಆಹಾರ ಬೆಳೆಯಲು ಯಾವ ಯಾವ ಕಾರ್ಯಕ್ರಮ ಕೈಕೊಳ್ಳಬೇಕೆಂಬ ನಿರ್ಣಯದ ವಿಚಾರದಲ್ಲಿ ನನಗೆ ತಿಳಿದಮಟ್ಟಿಗೆ ನಾಲ್ಕು ವಿಷಯಗಳನ್ನು ತಮ್ಮ ಮುಂದಿಡಲು ಬಯಸುತ್ತೇನೆ. ಈಗಾಗಲೇ ಎಷ್ಟೋ ಜನರು ಹೆಚ್ಚು ಉತ್ಪನ್ನದ ಸಲುವಾಗಿ ರೈತರಿಗೆ ಯಾವ ಯಾವ ಸೌಕರ್ಯಗಳನ್ನು ಸರಕಾರದವರು ಒದಗಿಸಬೇಕು ಎಂದು ಹೇಳಿದ್ದಾರೆ. ಅದರಲ್ಲಿಯೂ ನಮ್ಮ ರೈತರಿಗೆ ಬೇಕಾಗುವುದು ಮುಖ್ಯವಾಗಿ ನೀರು, ವಿದ್ಯುಚ್ಛಕ್ತಿ, ಬೀಜ, ಗೊಬ್ಬರ, ಔಷಧ ಮತ್ತು ಒಕ್ಕಲುತನಕ್ಕೆ ಸಾಗುವಳಿಗೆ ಬೇಕಾಗುವ ಆಧುನಿಕ ಉಪಕರಣಗಳು. ಇವೆಲ್ಲವುಗಳ ಬಗ್ಗೆ ಸಾಕಾದಷ್ಟು ಜನರು ಮಾತನಾಡಿದ್ದಾರೆ. ಇವೆಲ್ಲವನ್ನೂ ಒದಗಿಸುವುದು ಹೇಗೆ ಎಂಬುದರ ವಿಚಾರದಲ್ಲಿ ಬಹಳ ಜನರು ಮಾತನಾಡಿಲ್ಲ. ಅದಕ್ಕೆ ಹೆಚ್ಚು ಹಣ ಬೇಕಾಗುವುದು ಎಂಬುದು ಎಲ್ಲರ ಗಮನದಲ್ಲೂ ಇರಬೇಕಾಗುತ್ತದೆ. ಅದನ್ನೊದಗಿಸುವುದು ಯಾವ ರೀತಿ ಎಂದು ಯೋಚನೆ ಮಾಡಬೇಕಾಗುತ್ತದೆ. ಹೆಚ್ಚಿನ ಹಣ ಯಾವ ವಿಧವಾಗಿ ತರಬೇಕು, ಎಲ್ಲಿಂದ ತರಬೇಕು ಎಂದು ಕೂಲಂಕಷವಾಗಿ ಈ ದಿನ ವಿಚಾರಮಾಡಬೇಕು. ಸಾಧಾರಣವಾಗಿ ನಮ್ಮ ಬೊಕ್ಕಸದಲ್ಲಿದ್ದ ಹಣದಲ್ಲೇ ನಾವು ಸರಿದೂಗಿಸಬೇಕೆಂಬುದು ಎಲ್ಲರೂ ತಿಳಿಯಬೇಕಾದ ವಿಚಾರ. ಕೇಂದ್ರ ಸರಕಾರವನ್ನು ಕೇಳಬಹುದು. ಅಥವಾ ನಮ್ಮಲ್ಲಿ ಅನಾವಶ್ಯಕವಾಗಿ ಅಂದರೆ ಅನ್‌ಪ್ರೊಡಕ್ಟಿವ್ ಇಲಾಖೆಗಳಲ್ಲಿ ಅಂಥ ಕೆಲಸಗಳೇನಿವೆ ಅವನ್ನು ನಿಲ್ಲಿಸಬಹುದು. ಉದಾಹರಣೆಗೆ ರಸ್ತೆ ನಿರ್ಮಾಣ, ಸೇತುವೆ ಕಾಂಪೌಂಡು ಮುಂತಾದುವುಗಳ ಕೆಲಸ—ಈ ಬಗೆಯ ಕಾರ್ಯಗಳನ್ನು ಕೈಬಿಟ್ಟು ಅದಕ್ಕೆ ಉಪಯೋಗಿಸುವ ಹಣವನ್ನು ಒಕ್ಕಲುತನದ ಉಪಯೋಗಕ್ಕೆ ಖರ್ಚುಮಾಡಿದರೆ ಉತ್ಪತ್ತಿ ಹೆಚ್ಚಿಸಲು ಸಾಧ್ಯವಾಗುತ್ತದೆ. ಹೀಗೆ ಮಾಡಿದರೆ ಎಷ್ಟೋ ಆಹಾರವನ್ನು ಹೆಚ್ಚಾಗಿ ಉತ್ಪನ್ನಮಾಡಲು ಸಾಧ್ಯವಿದೆ ಎಂದು ಹೇಳಬಹುದು. ಪ್ರಮುಖ್ಯವಾಗಿ ನಮ್ಮ ಒಕ್ಕಲುತನಕ್ಕೆ ಸಂಬಂಧಪಟ್ಟ ಖಾತೆ ಯಾವುದೆಂದರೆ ವ್ಯವಸಾಯ ಖಾತೆ. ಈ ದಿವಸ ವ್ಯವಸಾಯ ಖಾತೆ ನಮ್ಮ ಸಂಸ್ಥಾನದಲ್ಲಿಯೇ ಇದೆಯೇ, ಇಲ್ಲವೇ ಎಂದು ಹೇಳುವುದು ಸ್ವಲ್ಪ ಕಷ್ಟ. ಏಕೆಂದರೆ ಯಾವುದೇ ಜಿಲ್ಲೆಯಲ್ಲಿ ನೋಡಿದರೂ ವ್ಯವಸಾಯದ ಇಲಾಖೆ ಆಫೀಸರೇ ಇರುವುದಿಲ್ಲ ಅಥವಾ ಅವರ ನೇಮಕವಾಗಿರುವುದಿಲ್ಲ. ಒಬ್ಬೊಬ್ಬ ಆಫೀಸರೇ 2-3 ಆಫೀಸುಗಳನ್ನು ನೋಡಿಕೊಂಡು ಹೋಗುತ್ತಿದ್ದಾರೆ. ಅವರಿಂದ ಸರಿಯಾದ ಕೆಲಸ ಅಪೇಕ್ಷೆ ಮಾಡುವುದು ಕಠಿಣವಾಗಿದೆ. ಮೊನ್ನೆ ಕ್ಯಾಬಿನೆಟ್ ತೀರ್ಮಾನವಾಗಿ ನೇಮಕಗಳಾಗಲಿವೆ ಎಂದು ವರ್ತಮಾನ ಬಂದಿದೆ. ಹಾಗಾದರೆ ಅನುಕೂಲವಾಗುತ್ತದೆ.

ಇನ್ನು ಮುಂದೆ ಒಂದೆರಡು ವಿಷಯಗಳನ್ನು ವ್ಯವಸಾಯದ ಇಲಾಖೆಗೆ ಸಂಬಂಧಪಟ್ಟ ಹಾಗೆ ಮಾತನಾಡಬೇಕಾಗಿದೆ. ನಮ್ಮಲ್ಲಿ ಒಂದು ಟ್ರಾಕ್ಟರ್ ಯೂನಿಟ್ ಇತ್ತು. ಈ ದಿವಸ ಅದನ್ನು ಅಲ್ಲಿಂದ ತೆಗೆಯಬೇಕೆಂದು ಹೇಳುತ್ತಿದ್ದಾರೆ, ಕಾರಣ ಗೊತ್ತಿಲ್ಲ. ನಮ್ಮಲ್ಲಿ 3 ಟ್ರಾಕ್ಟರುಗಳಿವೆ, ಹನ್ನೊಂದು ತಾಲ್ಲೂಕ್ ಹಳ್ಳಿಗಳಿಂದ ಅವಕ್ಕೆ ಬೇಡಿಕೆ ಬಂದಿವೆ, ಅವರಿಗೆ ದೊರೆತಿಲ್ಲ. ನಾನು ಅಗ್ರಿಕಲ್ಚರಲ್ ಆಫೀಸರರಿಗೆ ಭೆಟ್ಟಿಯಾಗಿ ಕೆಲವೊಂದು ಭಾಗಗಳಿಗೆ ಕಳಿಸಿಕೊಡಲಾಯಿತು. ಮುಂದೆ ಎರಡು ಮೂರು ದಿವಸಗಳಲ್ಲಿ ಟ್ರಾಕ್ಟರ್‌ಗಳು ಬಂದು ಬಿದ್ದುವು ಏತಕ್ಕಾಗಿ ನಿಂತವು ಎಂದರೆ

(ಶ್ರೀ ಜಿ. ಎನ್. ಪಾಟೀಲ್)

ಎಣ್ಣೆ ಇಲ್ಲ ಎಂದು ಹೇಳಿದರು. ರೈತರು ಮತ್ತೆ ಬಂದು ಎಣ್ಣೆಯ ಸಲುವಾಗಿ ರೊಕ್ಕ ಕೊಡುತ್ತೇವೆ, ಇಲಾಖೆಯವರು ತೆಗೆದುಕೊಂಡು ಟ್ರ್ಯಾಕ್ಟರ್ ಉಪಯೋಗಕ್ಕೆ ಕೊಡಿರಿ ಎಂದರೂ ಸಹಿತ ನಮಗೆ ಆರ್ಡರ್ಸ್ ಇಲ್ಲ, ನಾವು ಕೊಡುವುದಿಲ್ಲ ಎಂದು ಹೇಳಿದರು. ಇದರಿಂದ ಟ್ರ್ಯಾಕ್ಟರ್ಸ್ ನಡೆಸುವ ಡ್ರೈವರ್ ಮತ್ತು ಅವನಿಗೆ ಸಹಾಯಕವಾಗಿ ಕೆಲಸ ಮಾಡುವ ಅಸಿಸ್ಟೆಂಟ್ ಕೆಲಸವಿಲ್ಲದೆ ಒಂದು ತಿಂಗಳು ಇರಬೇಕಾಯಿತು. ಟ್ರ್ಯಾಕ್ಟರ್ ಸಹಿತ ಹಾಗೆಯೇ ಉಳಿಯಬೇಕಾಯಿತು. ನಮ್ಮಲ್ಲಿ ಟ್ರ್ಯಾಕ್ಟರ್ ಹೊಡೆಯುವ ಸೀಸನ್ ವರ್ಷದಲ್ಲಿ ಮೂರು ತಿಂಗಳು ಮಾತ್ರ. ಅದರಲ್ಲಿ ಎರಡು ತಿಂಗಳು ಈ ರೀತಿ ಟ್ರ್ಯಾಕ್ಟರ್ ದೊರೆಯದೆ ನಷ್ಟವಾದರೆ ಹೇಗೆ ಬೆಳೆಯುವುದಕ್ಕೆ ಸಾಧ್ಯ ಎಂದು ಯೋಚನೆ ಮಾಡಬೇಕು. ಟ್ರ್ಯಾಕ್ಟರುಗಳನ್ನು ವ್ಯವಸಾಯ ಇಲಾಖೆಯವರು ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಾಗದೆ ಇದ್ದ ಪಕ್ಷದಲ್ಲಿ ಆ ಕೆಲಸವನ್ನು ತಾಲ್ಲೂಕು ಬೋರ್ಡಿಗೆ ವಹಿಸಿದರೆ ಅವರಾದರೂ ಅದನ್ನು ನಡೆಸಬಲ್ಲರು ಎಂದು ನಾನು ಹೇಳಬಯಸುತ್ತೇನೆ. ಮುಧೋಳ್ ಮತ್ತು ಜಮಖಂಡಿ ತಾಲ್ಲೂಕು ಬೋರ್ಡುಗಳವರು ತಾವೇ ಸ್ವತಃ ಬೋರಿಂಗ್ ಯಂತ್ರಗಳು, ಮತ್ತು ಕಬ್ಬಿನ ಗಾಣಗಳನ್ನು ತಂದಿಟ್ಟುಕೊಂಡು ಅವರು ಹಾಕಿದಂಥ ಕಿಮ್ಮತ್ತನ್ನು ಈಗಾಗಲೇ ತಿರುಗಿ ಪಡೆದುಕೊಂಡು, ಅವುಗಳ ಪ್ರಯೋಜನವನ್ನು ಜನರಿಗೆ ಕೊಟ್ಟು ತಾಲ್ಲೂಕು ಬೋರ್ಡಿಗೆ ಹಣವನ್ನು ಸಂಪಾದನೆ ಮಾಡಿಕೊಂಡು ಆ ಹಣವನ್ನು ಅಭಿವೃದ್ಧಿ ಕಾರ್ಯಗಳಲ್ಲಿ ಉಪಯೋಗಿಸಿ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಟ್ರ್ಯಾಕ್ಟರ್‌ಗಳನ್ನು ಸಹಿತ ತಾಲ್ಲೂಕು ಅಭಿವೃದ್ಧಿ ಮಂಡಳಿಗಳಿಗಾಗಲೀ ಅಥವಾ ಸ್ಥಳದಲ್ಲಿರುವ ಸಂಸ್ಥೆಗಳಿಗಾಗಲೀ ಒಪ್ಪಿಸಿಕೊಟ್ಟರೆ ಸರಿಯಾದ ರೀತಿಯಲ್ಲಿ ಅವರು ಕೆಲಸ ಮಾಡಿ ಹೆಚ್ಚು ಉತ್ಪಾದನೆಯನ್ನು ಮಾಡಲಿಕ್ಕೆ ಸಾಧ್ಯವಿದೆ ಎಂದು ನಾನು ಸರ್ಕಾರದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ನಾನು ಇವತ್ತಿನ ದಿವಸ ಹೇಳಬೇಕಾದ ಮತ್ತೊಂದು ವಿಷಯವೆಂದರೆ, ನಮ್ಮಲ್ಲಿ ಮಳೆಯಿಂದ ಎಷ್ಟೋ ಮಣ್ಣು ಹರಿದುಕೊಂಡು ಹೋಗುತ್ತದೆ. ಅದನ್ನು ತಡೆಯಲು ಬಂಡಿಂಗ್ ಅತ್ಯಾವಶ್ಯಕವಾಗಿ ಬೇಕಾಗುತ್ತದೆ. ಇದು ಪೂರ್ವ ಕಾಲದಿಂದಲೂ ಎಲ್ಲರಿಗೂ ಗೊತ್ತಿರುವ ಮಾತಾಗಿದೆ. ಇದಕ್ಕಾಗಿ ಇವತ್ತು ನಮ್ಮ ಸರ್ಕಾರ ಚಾರ್ಜ್ ಮಾಡುವುದು ಒಕ್ಕಲಗರಿಗೆ ಬಹಳ ಭಾರವಾಗಿದೆ. ಅದರಲ್ಲಿಯೂ ಅವರು ಹಾಗೆ ಚಾರ್ಜ್ ಮಾಡಿದ್ದನ್ನು ಬಂಡಿಂಗ್ ಹಾಕಿದ ಮರು ವರ್ಷವೇ ವಸೂಲ್ಮಾಡುವುದಕ್ಕೆ ಹೋಗುತ್ತಾರೆ. ಒಂದು ಎಕರೆಗೆ 40-45 ರೂಪಾಯಿ ಚಾರ್ಜ್ ಮಾಡುತ್ತಾರೆ. ಉದಾಹರಣೆಗೆ ಹೇಳಬೇಕಾದರೆ 20 ಎಕರೆ ಜಮೀನು ಒಬ್ಬ ರೈತನ ಕಡೆಗೆ ಇದೆ ಅದರ ಭೂಕಂದಾಯ ಎರಡು ರೂಪಾಯಿ ಇರುತ್ತದೆ ಮತ್ತು ಅದರ ಕಿಮ್ಮತ್ತು ಈಗ 500-600 ರೂಪಾಯಿ ಆಗುತ್ತದೆ. ಆದರೆ ಬಂಡಿಂಗ್ ಸ್ಕೀಂ ಪ್ರಕಾರ ಲೆಕ್ಕ ಹಾಕಿದರೆ ಬಂಡಿಗದಿಂದ ಅವನ ಮೇಲೆ ಹೇರಿದ ಚಾರ್ಜ್ 1,200 ರೂಪಾಯಿ ಆಗುತ್ತದೆ. ಅಂದರೆ ಈ ಬಂಡಿಂಗ್ ಸ್ಕೀಂ ಪ್ರಕಾರ ಒಡ್ಡು ಹಾಕಲು ಆಗಿರುವ ವೆಚ್ಚವನ್ನು ತೀರಿಸಬೇಕಾದರೆ ರೈತ ತನ್ನ ಹೊಲವನ್ನೇ ಮಾರಿಕೊಂಡು ಹೋಗಬೇಕಾಗುತ್ತದೆ. ಈ ವಿಚಾರವನ್ನು ಸರ್ಕಾರ ಕೂಲಂಕಷವಾಗಿ ವಿಚಾರ ಮಾಡಬೇಕು. ಬೊಂಬಾಯಿ ಸರ್ಕಾರದಲ್ಲಿದ್ದಾಗ ಅವರು ಒಡ್ಡು ಹಾಕುವ ಕೆಲಸಕ್ಕೆ ಎಸ್ಟ್ಯಾಬ್ಲಿಷ್‌ಮೆಂಟ್ ಚಾರ್ಜನ್ನು ಸೇರಿಸುತ್ತಿರಲಿಲ್ಲ ಮತ್ತು ಕೆಲವೊಂದು ಪ್ರಮಾಣ ಸಬ್ಸಿಡಿಯನ್ನು ಕೊಟ್ಟು ಕಡಮೆ ಚಾರ್ಜ್ ಮಾಡುತ್ತಿದ್ದರು. ಇದರಿಂದ ರೈತರಿಗೆ ಅನುಕೂಲ ಆಗುತ್ತಿತ್ತು. ದೇಶದಲ್ಲಿರುವಂಥ ಮಣ್ಣು ಸರ್ಕಾರದ ಸಂಪತ್ತು, ರಾಜ್ಯದ ಸಂಪತ್ತು ಎಂದು ತಿಳಿದುಕೊಂಡಿದ್ದೇನೆ. ಸರ್ಕಾರದವರು ಮುಂದೆ ಬಂದು ಮಣ್ಣು ಹರಿದು ಹೋಗದಂತೆ ನೋಡಿಕೊಳ್ಳುವುದು ಅವರ ಕರ್ತವ್ಯ ಎಂದು ನನ್ನಗನ್ನಿಸುತ್ತದೆ. ಹೊಲ ನನ್ನದೇ ಇರಬಹುದು. ಮತ್ತೊಬ್ಬರದೇ ಇರಬಹುದು. ಆದರೆ ಹೊಲದಲ್ಲಿರುವ ಮಣ್ಣು ಹರಿದು ಹೋಯಿತು ಎಂದರೆ ಅದು ಯಾರಿಗೂ ಉಪಯೋಗಕ್ಕೆ ಬರುವುದಿಲ್ಲ. ಮಣ್ಣು ಹರಿದು ಹೋಗದಂತೆ ಸರ್ಕಾರ ಕೆಲಸ ಮಾಡಿದರೆ ಅದರಿಂದ ಅಪ್ರತ್ಯಕ್ಷವಾಗಿಯಾದರೂ ಸರ್ಕಾರಕ್ಕೆ ಫಲ ಸಿಕ್ಕುತ್ತದೆ. ಸರ್ಕಾರ ಒಡ್ಡು ಹಾಕುವ ಕೆಲಸಕ್ಕೆ ಹೆಚ್ಚು ಗಮನ ಕೊಡಬೇಕು ಮತ್ತು ಈಗ ಇರುವ ಪದ್ಧತಿಯಲ್ಲಿ ಪರಿವರ್ತನೆ ಮಾಡಬೇಕೆಂದು ತಿಳಿಸಬಯಸುತ್ತೇನೆ.

ಮಾನ್ಯ ಸದಸ್ಯರಾದ ಸಿದ್ದಯ್ಯನವರು ನಿನ್ನೆಯ ದಿನ ಮಾತನಾಡುತ್ತ ಶ್ರೀಮಂತ ವ್ಯವಸಾಯಗಾರರು ಕಾಳು ಕಡ್ಡಿಗಳನ್ನು ಹಿಡಿದು ಇಡುತ್ತಾರೆ ಎನ್ನುವ ಅರ್ಥದಲ್ಲಿ ಹೇಳಿದರು. ಇದರಿಂದ ನಮ್ಮ ಜನಗಳಿಗೆ ತೊಂದರೆಯಾಗುತ್ತದೆ ಎಂದೂ ಅವರು ಹೇಳಿದರು. ನಾನು ಹೇಳುವುದು ಏನೆಂದರೆ ಇವತ್ತಿನ ದಿವಸ ನಮ್ಮ ಹಿಂದೂಸ್ಥಾನದಲ್ಲಿ ಎಲ್ಲ ರೈತರೂ ತಮ್ಮ ಮುಂದಿನ ವಿಚಾರವನ್ನು ಇಟ್ಟುಕೊಂಡು ವಿಚಾರ ಮಾಡುತ್ತಾನೆ. ರೈತ ಮಾರುವುದೇ ಕಡಮೆ. ಅವನಿಗೆ ಬಂದುದರಲ್ಲಿ ಅರ್ಧವನ್ನು ಒಕ್ಕಲತನಕ್ಕೆ ಖರ್ಚು ಮಾಡುತ್ತಾನೆ. ಉಳಿದುದರಲ್ಲಿ ಸ್ವಲ್ಪವನ್ನು ಮುಂದಿನ ವರ್ಷ ಪರಿಸ್ಥಿತಿ ಯಾವ ರೀತಿ ಇರುತ್ತದೆಂದು ಹೇಳುವುದಕ್ಕೆ ಬರುವುದಿಲ್ಲವಾದ ಕಾರಣ ಮುಂದಿನ ವರ್ಷದ

ಸಲುವಾಗಿ ಕಾಯ್ದುಕೊಂಡಿರಬೇಕು ಎಂದು ಸ್ವಲ್ಪ ಕಾಳನ್ನು ಇಟ್ಟುಕೊಂಡಿರುತ್ತಾರೆ. ಇವತ್ತಿನ ದಿವಸ ಜನರು ಅಧಿಕಾರಿಗಳನ್ನು ಮತ್ತು ಸರಕಾರವನ್ನು ಟೀಕಿಸುವುದು ಮತ್ತು ಸರಕಾರ ಮತ್ತು ರಾಜಕಾರಣಿಗಳು ವ್ಯವಸಾಯಗಾರರನ್ನು ಮತ್ತು ವ್ಯಾಪಾರಸ್ಥರನ್ನು ಬಯ್ಯುತ್ತಾರೆ; ವ್ಯಾಪಾರಸ್ಥರು ಮತ್ತು ಒಕ್ಕಲಿಗರು ಕಡೆಗೆ ರಾಜಕಾರಣಿಗಳನ್ನೂ ಮತ್ತು ಸರ್ಕಾರವನ್ನೂ ಬಯ್ಯುತ್ತಾರೆ. ಹೀಗೆ ಒಬ್ಬರು ತಮ್ಮ ಮೇಲಿನ ಜವಾಬ್ದಾರಿಯನ್ನು ಮತ್ತೊಬ್ಬರ ಮೇಲೆ ಹಾಕುತ್ತ ಹೋಗುವುದರಿಂದ ನಮ್ಮ ಕರ್ತವ್ಯದಲ್ಲಿ ಚ್ಯುತಿಯುಂಟಾಗುತ್ತಿದೆ. ಪ್ರತಿಯೊಬ್ಬ ವ್ಯಕ್ತಿಯ ಪ್ರಾಮಾಣಿಕತೆಯ ಪ್ರಶ್ನೆಯೂ ಇದರಲ್ಲಿ ಬರುತ್ತದೆ. ಒಬ್ಬರು ಮತ್ತೊಬ್ಬರನ್ನು ಬಯ್ಯುತ್ತ ಕೂಡದೆ ನೌಕರ ವರ್ಗವಾಗಲಿ, ರಾಜಕಾರಣಿಗಳಾಗಲೀ, ವ್ಯಾಪಾರಸ್ಥರಾಗಲೀ, ರೈತರೇ ಆಗಲೀ, ದೇಶದ ಜನರೇ ಆಗಲೀ, ಎಲ್ಲರೂ ಪ್ರಾಮಾಣಿಕತೆಯಿಂದ ವರ್ತಿಸಿದ್ದೇ ಆದರೆ, ಕೆಲಸ ಮಾಡಿದ್ದೇ ಆದರೆ ಈಗ ನಮಗೆ ಬಂದಿರುವ ಆಹಾರ ಸಮಸ್ಯೆಯೇ ಆಗಲೀ; ಯುದ್ಧದ ಸಮಸ್ಯೆಯೇ ಆಗಲೀ, ಯಾವುದೇ ಸಮಸ್ಯೆಯಾಗಲೀ ಅದನ್ನು ಸುಲಭವಾಗಿ ಬಿಡಿಸಲಿಕ್ಕೆ ಸಾಧ್ಯವಾಗುತ್ತದೆ. ಎಲ್ಲರಲ್ಲಿಯೂ ಪ್ರಾಮಾಣಿಕತೆ ಬರಬೇಕಾಗಿದೆ. ತಾವೆಲ್ಲರೂ ಪ್ರಾಮಾಣಿಕತೆಯಿಂದ ವರ್ತಿಸಬೇಕು, ನಾವೆಲ್ಲರೂ ಪ್ರಾಮಾಣಿಕತೆಯಿಂದ ವರ್ತಿಸಬೇಕು ಎಂದು ಹೇಳುತ್ತ, ಮಾನ್ಯ ಸಭಾಪತಿಯವರು ನನಗೆ ಮಾತನಾಡಲಿಕ್ಕೆ 10 ನಿಮಿಷ ಅವಕಾಶ ಕೊಟ್ಟಿದ್ದಕ್ಕೆ ಅವರಿಗೆ ವಂದಿಸಿ ನನ್ನ ನಾಲ್ಕು ಮಾತನ್ನು ಮುಗಿಸುತ್ತೇನೆ.

Mr. SPEAKER.—Before I call upon another Member, I would like to make one suggestion. It is humanly impossible to give chance to every person. Therefore, I want to place two ideas before the House. One is, that if there is any district which has not been represented by the participants or in other words if any member who has not participated, or if there is any district in which even a single member has not participated, I would like to give chance to that member.

Sri R. S. PATIL.—Belgaum District is not represented.

Mr. SPEAKER.—Where does Sri V. S. Patil come from ?

Sri K. L. SHIVALINGE GOWDA.—Bangalore District, Sir.

Mr. SPEAKER.—I do not have a full grip over this at the moment. The Whips may kindly help me if they please.

The other idea is that all the members who have given names may kindly pass on the points to me and I will pass them on to the Hon'ble Minister for dealing with it, in the course of the reply. Suppose they are made available to me tomorrow ten minutes before we begin, I will try to pass them to the Hon'ble Minister so that they might be dealt with. They should be points which have not been already suggested. In that respect, perhaps, it is a difficult job because Members do not remain throughout the Debate; they come and go as they like.

5-30 P. M.

† ಶ್ರೀ ಆರ್. ಎನ್. ಲಕ್ಷ್ಮೀಪತಿ (ಗೌರಿಬಿದನೂರು).—ಮಾನ್ಯ ಸಭಾಪತಿಯವರೇ, ಈಗ ಸಭೆಯ ಮುಂದಿರುವ ನಿರ್ಣಯದ ಬಗ್ಗೆ ನಾನು 'ಒಂದೆರಡು' ಸಲಹೆಗಳನ್ನು ಮಾಡಲು ಇಷ್ಟಪಡುತ್ತೇನೆ. ನಮ್ಮ ದೇಶ ಆಹಾರದಲ್ಲಿ ಮೊದಲಿನಿಂದಲೂ ಅಭಾವವಿದ್ದ ದೇಶ. ಸ್ವಾತಂತ್ರ್ಯ ಬಂದ ನಂತರ ನಾವು ಮೊದಲನೆಯದಾಗಿ ಪ್ರಾಧಾನ್ಯತೆ, ಆದ್ಯತೆಯನ್ನು ವ್ಯವಸಾಯಕ್ಕೆ ಕೊಡಬೇಕಾಗಿತ್ತು. ಎಲ್ಲಾ ಪಕ್ಷದವರೂ ಎಲ್ಲಾ ಪ್ರಮುಖ ಅಧಿಕಾರಿಗಳು ಮತ್ತು ಮಂತ್ರಿಗಳು ನಮ್ಮ ದೇಶದಲ್ಲಿ ವ್ಯವಸಾಯಕ್ಕೆ ಹೆಚ್ಚು ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಟ್ಟರೆ ಆಗ ಬಡತನ ನೀಗುತ್ತದೆ ಎಂದು ಹೇಳುತ್ತಾರೆ. ಇವತ್ತಿನ ದಿವಸ ಶ್ರೀಮಾನ್ ಡಿ. ಎಂ. ಸಿದ್ದಯ್ಯನವರು ಹೇಳುತ್ತಿರುವುದೇನೆಂದರೆ, ದೇಶದಲ್ಲಿ ವಿಪರೀತವಾದ ಆಹಾರದ ಅಭಾವದ ಪರಿಸ್ಥಿತಿ ಕಾಣುತ್ತಾ ಇರುವುದರಿಂದ ಈ ಒಂದು ಠರಾವನ್ನು ಇಲ್ಲಿ ತಂದಿದ್ದೇನೆ ಎಂದು. ಇವತ್ತು ಮಾನ್ಯ ಸಭೆಯಲ್ಲಿ ನನ್ನ ಅನೇಕ ಜನ ಸ್ನೇಹಿತರು ಸೂಚಿಸಿರುವ ಸಲಹೆಗಳಿಗೆಲ್ಲಾ ಸರ್ಕಾರದವರು ಮಾನ್ಯತೆ ಕೊಡುತ್ತಾರೆಯೇ ಎಂದು ನನಗೆ ಖಂಡಿತ ಅನುಮಾನವಾಗುತ್ತದೆ.

Mr. SPEAKER.—The Hon'ble Member is thinking of implementing something which is to come after the Resolution is passed. The Resolution recommends to the Government to take all the steps. What steps would the member like to suggest ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಇವತ್ತು ನಾವು ಹೇಳಿದುದನ್ನು 10 ಪರ್ಸೆಂಟ್ ಅಥವಾ ಇನ್ನೂ ಕಡಿಮೆಯೇ ಇಂಪ್ಲಿಮೆಂಟ್ ಮಾಡಿದರೆ, ಆಹಾರದ ಅಭಾವ ಏನು ನೋಡುತ್ತಿದ್ದೇವೆ ಅದು ಇರಲಾರದು ಎಂದುಕೊಂಡಿದ್ದೇನೆ. ಮೊದಲನೆಯದಾಗಿ ಒಂದು ವಿಚಾರ ಈ ಸಭೆಗೆ ಸೂಚನೆ ಮಾಡಬಯಸುತ್ತೇನೆ. ಮಾನ್ಯ ರೆವಿನ್ಯೂ ಮಂತ್ರಿಗಳಲ್ಲಿ ನಾನು ಒಂದು ಪ್ರಾರ್ಥನೆ ಮಾಡಿಕೊಂಡಾಗ ಹೊಸದಾಗಿ ಜಮೀನು ಅನೇಕ ಜನರಿಗೆ ಉಳುವುದಕ್ಕೆ ಕೊಟ್ಟಿದ್ದೇವೆಂದು ಹೇಳಿದರು. ನಾನು ನನ್ನ ಸ್ವಂತ ಹಳ್ಳಿಯಲ್ಲಿ ತಿರುಗಾಡಿ ನೋಡಿದರೆ 100ಕ್ಕೆ 10 ಭಾಗ ಜಮೀನು ಬೀಳು ಇದೆ. ಅನೇಕ ಜನರು ಪ್ರತಿಯೊಂದು ಹಳ್ಳಿಯಲ್ಲೂ 100ಕ್ಕೆ 10 ಭಾಗ ಜಮೀನುಗಳನ್ನು ಬೀಳು ಬಿಟ್ಟಿದ್ದಾರೆ, ಬೆಳೆ ಬೆಳೆಯುತ್ತಾ ಇಲ್ಲ. 30 ಪರ್‌ಸೆಂಟ್ ಜಮೀನಿನಲ್ಲೇ ಎಕ್ರೆ ಒಂದಕ್ಕೆ ಒಂದು ಪಲ್ಲ ರಾಗಿಯಷ್ಟು ಬೆಳೆಯುತ್ತಾರೆ, ಮಿಕ್ಕ ಜಮೀನಿನಲ್ಲಿ ಮೂರು ನಾಲ್ಕು ಪಲ್ಲ ಬೆಳೆಯುತ್ತಾರೆ.

ಶ್ರೀ ಎಂ. ಆರ್. ಪಾಟೀಲರು ಹೇಳಿದರು, ಜಮೀನಿಗೆ ಎಷ್ಟು ಗೊಬ್ಬರ ಹಾಕುತ್ತೇವೆಯೋ ಅಷ್ಟು ಬೆಳೆಯನ್ನು ತೆಗೆಯಬಹುದು ಎಂದು. ಆದರೆ ನಾನು ಕೆಮಿಕಲ್ ಫರ್ಟಿಲೈಸರ್ಸ್, ಸೂಪರ್ ಫೊಟೇಶ್, ನೈಟ್ರೋಜನ್ ಫರ್ಟಿಲೈಸರ್ಸ್ ಹಾಕಿದ್ದೇನೆ. ಬೆಳೆ ಒಣಗಿ ಹೋಗಿದೆ. ನನ್ನ ಬೆಳೆ ನೋಡಿದರೆ ಎಕ್ರೆಗೆ 5 ಪಲ್ಲ ಬರಬಹುದು. ಇವತ್ತು ದೇಶದಲ್ಲಿ ಜನಸಂಖ್ಯೆ ಜಾಸ್ತಿಯಾಗುತ್ತಾ ಇದೆ. ಜನಸಂಖ್ಯೆ ಕಡಮೆ ಮಾಡಬೇಕೆಂದು ದೇಶದಲ್ಲಿ ಎಲ್ಲರೂ ಕೂಗು ಎಬ್ಬಿಸಿದ್ದಾರೆ. ಈಗ ಒಬ್ಬ ರೈತನು ಒಂದು ಎಕರೆಗೆ ಒಂದು ಪಲ್ಲ ಬೆಳೆಯನ್ನು ಮಾತ್ರ ಬೆಳೆಯುತ್ತಿದ್ದಾನೆ. ಒಂದು ಪಲ್ಲವನ್ನು ಕನಿಷ್ಟ ಪಕ್ಷ ಎರಡಕ್ಕೆ ಏರಿಸಿದರೆ ಆಗ ಬೆಳೆಯೂ ಜಾಸ್ತಿಯಾಗಬಹುದು. ನನ್ನ ಸ್ವಂತ ಜಮೀನಿಗೆ ಕೆಮಿಕಲ್ಸ್ ಫರ್ಟಿಲೈಸರ್ಸ್ ಹಾಕುವುದಕ್ಕೆ ಸ್ವಲ್ಪ ಶಕ್ತಿ ಇದೆ. ನನಗೆ ಏನು ಶಕ್ತಿ ಇದೆಯೊ ಆ ಶಕ್ತಿಯನ್ನು ಪ್ರತಿಯೊಬ್ಬ ಬಡ ರೈತನಿಗೂ ಕೊಟ್ಟರೆ ಜನಸಂಖ್ಯೆ ಜಾಸ್ತಿಯಾದರೂ ಕೂಡಾ ಸಂತೃಪ್ತಿಯಾಗಿರಬಹುದು. ಹೊಟ್ಟೆ ಬಟ್ಟೆಗೆ ಯಾವ ರೀತಿಯ ತೊಂದರೆಯೂ ಇಲ್ಲದೆ ಇರಬಹುದೆಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ತಾಲ್ಲೂಕಿನಲ್ಲಿ ನಮ್ಮ ಹಳ್ಳಿಗಳಲ್ಲಿ ನೋಡಿದರೆ, ಕೇವಲ ಒಬ್ಬ ರೈತನು 30 ಪಲ್ಲ ಭತ್ತ ಬೆಳೆಯುತ್ತಾನೆ; 100 ಮಣ ಒಣ ಮೆಣಸಿನಕಾಯಿ ಮತ್ತು 5 ಪಲ್ಲ ರಾಗಿಯನ್ನು ಬೆಳೆಸುತ್ತಿದ್ದಾನೆ. ಕಮಿಕಲ್ ಫರ್ಟಿಲೈಸರ್ಸನ್ನು ಜಾಸ್ತಿ ಸಪ್ಲೈ ಮಾಡುವುದರಿಂದ ಹುಲ್ಲು ಜಾಸ್ತಿಯಾಗಿ ಬೆಳೆಯುತ್ತಿದ್ದಾರೆ. 18 ವರ್ಷಗಳಿಂದಲೂ ಸರ್ಕಾರ ರಾಜ್ಯದ ಆಡಳಿತ ಮಾಡುತ್ತಿದ್ದರೂ, ವ್ಯವಸಾಯಕ್ಕೋಸ್ಕರ ಸರ್ಕಾರ ಏನು ಸಾಧನೆ ಮಾಡಿದೆಯೆಂದು ನಾನು ಕೇಳುತ್ತೇನೆ.

Mr. SPEAKER.—Does this help production ? Is it a suggestion for increasing production ?

Sri R. N. LAKSHMIPATHI.—Unless they supply chemicals, how can we grow more ?

Mr. SPEAKER.—That suggestion has been made by more than one member. He may please come to the next point direct.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಇವತ್ತು ಫರ್ಟಿಲೈಸರ್ ಹೆಚ್ಚು ಹೆಚ್ಚಾಗಿ ರೈತರಿಗೆ ಸಿಕ್ಕುತ್ತಾ ಇಲ್ಲ. ಇವತ್ತು ಫರ್ಟಿಲೈಸರ್ ಮೂಟೆ ಒಂದಕ್ಕೆ 50-55 ರೂಪಾಯಿಯಂತೆ ಮಾರುತ್ತಿದಾರೆ. ಅವರಿಗೆ ಅದು ಹೇಗೆ ಬಂತು ? ಅದನ್ನು ತಡೆಗಟ್ಟುವುದಕ್ಕೆ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಒಂದು ಮೂಟೆ ಉಪ್ಪು ಬೇಕು ಎಂದರೆ ಸಿಕ್ಕುತ್ತಿಲ್ಲ. ಎಲ್ಲಾ ವರ್ತಕರ ಕೈಗೆ ಹೋಗುತ್ತದೆ. ಕಾಳಸಂತೆಕೋರರನ್ನು ಅಲ್ಲಿ ಹಿಡಿಯುತ್ತೇವೆ, ಇಲ್ಲಿ ಹಿಡಿಯುತ್ತೇವೆ ಎಂದು ಹೇಳುತ್ತಾರೆ. ಆದರೆ ಬ್ಲಾಕ್ ಮಾರ್ಕೆಟ್ ಯಾರು ಮಾಡುತ್ತಾರೊ, ಲೆಕ್ಕ ಇಡದೆ ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸನ್ನು ಯಾರು ಮಾರುತ್ತಿದ್ದಾರೋ, ಅಂಥವರ ಮೇರೆ ಉಗ್ರವಾದ ಕ್ರಮವನ್ನು ತೆಗೆದುಕೊಂಡಿರುವ ಯಾವುದಾದರೂ ಒಂದು ಉದಾಹರಣೆಯನ್ನು ಕೊಡಲಿ. ಸಂಸ್ಥಾನದಲ್ಲಿ ಅಂಥ ನಾಲ್ಕು ಜನರ ಮೇಲೆ ಉಗ್ರ ಕ್ರಮವನ್ನು ತೆಗೆದುಕೊಂಡಿದ್ದೀರಾ ? ಕಾಳಸಂತೆ ಮಾಡುವವರನ್ನು ಬಿಟ್ಟು ಬಿಡುತ್ತೀರಿ. ಸರ್ಕಾರದವರು ಹೀಗೆ ಮಾಡಿದರೆ ಗುರಿಮುಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ಇರುವ ಮೇನ್ಯೂರನ್ನು ಸರಿಯಾಗಿ ಹಂಚಿದರೆ ಖಂಡಿತವಾಗಿಯೂ ಆಹಾರದ ಸಮಸ್ಯೆಯು ಅತೀ ಬೇಗನೆ ನೀಗುವುದು. ನಮ್ಮ ತಾಲ್ಲೂಕಿನಲ್ಲಿ ಅನೇಕ ಕೆರೆಗಳನ್ನು ದುರುಸ್ತಿಪಡಿಸಲು ಲಕ್ಷಾಂತರ ರೂಪಾಯಿಗಳನ್ನು ಖರ್ಚ

ಮಾಡಿದ್ದೇವೆ ಮತ್ತು ಲಕ್ಷಾಂತರ ರೂಪಾಯಿಗಳನ್ನು ಪ್ರತಿಯೊಂದು ತಾಲ್ಲೂಕಿಗೂ ಖರ್ಚು ಮಾಡುತ್ತಿದ್ದೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. 'ನಮ್ಮ ತಾಲ್ಲೂಕಿನಲ್ಲಿ ಎಷ್ಟು ಎಕರೆ ಹೊಸದಾಗಿ ಅಚ್ಚುಕಟ್ಟಾಗಿ ಮಾಡಿದ್ದೀರಿ ? 12 ವರ್ಷಗಳ ಲೆಕ್ಕ ಹಾಕಿಕೊಂಡರೆ 44 ಲಕ್ಷ ರೂಪಾಯಿ ಹಣ ಮಂಜೂರು ಮಾಡಿದ್ದೀರಿ. 23 ಲಕ್ಷ ಖರ್ಚು ಮಾಡಿ ಕೇವಲ 35 ಎಕರೆ ಹೊಸದಾಗಿ ಅಚ್ಚುಕಟ್ಟು ಕೊಟ್ಟಿದ್ದೀರಿ ಎಂದು ಗೊತ್ತಿದೆ. ಮಿಕ್ಕ ಹಣವು ಎಲ್ಲಿ ಹೋಯಿತು ? ಅದಕ್ಕೆ ಯಾರು ಹೊಣೆ ಎಂದು ನಾನು ಕೇಳುತ್ತೇನೆ. ಯಾರು ಇವತ್ತು ಕೆಲಸದಲ್ಲಿ ಲೋಪದೋಷ ಮಾಡಿದ್ದಾರೋ ಅವರ ಮೇಲೆ ತೀವ್ರ ಕ್ರಮ ತೆಗೆದುಕೊಳ್ಳದಿದ್ದರೆ ಶ್ರೀಮಾನ್ ಸಿದ್ದಯ್ಯನವರು ತಂದಿರತಕ್ಕ ಠರಾವು ಏನೂ ಸಫಲವಾಗುವುದಿಲ್ಲ.

ಎರಡನೆಯದಾಗಿ ನಾನು ಒಂದು ಸಲಹೆಯನ್ನು ಕೊಡುತ್ತೇನೆ. ಅದೇನೆಂದರೆ ಪ್ರತಿಯೊಂದ ಹೋಬಳಿಯಲ್ಲೂ ಹೊಸದಾಗಿ ಸುಪರ್‌ವೈಸರ್ ಕೊಟ್ಟಿದ್ದೀರಿ ಎಂದು ಹೇಳಿದ್ದೀರಿ. ಅವರ ಸಹಾಯದಿಂದ ಯಾವ ಯಾವ ತೂಬು ಕೆಟ್ಟು ಹೋಗಿದೆ, ಕೆರೆ ಕೋಡಿ ಕೆಟ್ಟು ಹೋಗಿದೆ ಅದನ್ನೆಲ್ಲಾ ದುರಸ್ತುಪಡಿಸಿ, ಹೊಸ ಕಟ್ಟೆ ಕಟ್ಟದಿದ್ದರೂ ಪರವಾ ಇಲ್ಲ, ಹೊಸ ಕಾಲುವೆ ತೆಗೆಯದಿದ್ದರೂ ಪರವಾ ಇಲ್ಲ, ಅವರು ನೀರು ಪೋಲಾಗದಂತೆ ತಡೆಗಟ್ಟಿದರೆ ಹೆಚ್ಚು ಬೆಳೆಯುವಂತೆ ಮಾಡಲು ಅನುಕೂಲವಾಗುತ್ತದೆ. ಹತ್ತಾರು ಕೆರೆಗಳು ನಮ್ಮ ತಾಲ್ಲೂಕಿನಲ್ಲಿವೆ. ಅವನ್ನು ದುರುಸ್ತಿ ಮಾಡಬೇಕೆಂದು ಎಷ್ಟು ಅರ್ಜಿಗಳನ್ನು ಕೊಟ್ಟರೂ, ಅವರು ಸುಮ್ಮನೆ ಕಾಲ ತಳ್ಳುತ್ತಿದ್ದಾರೆ. ಇವತ್ತು ದೇಶಕ್ಕೆ ಬಂದಿರುವ ತೀವ್ರತೆ ಖಂಡಿತ ಯಾರ ಮನಸ್ಸಿನಲ್ಲೂ ಇಲ್ಲ.

ಇನ್ನು ಎಲೆಕ್ಟ್ರಿಸಿಟಿ ವಿಚಾರದಲ್ಲಿ ಅನೇಕ ಜನರು ಹೇಳಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಹೆಚ್ಚಿನ ವಿದ್ಯುಚ್ಛಕ್ತಿಯನ್ನು ವ್ಯವಸಾಯಕ್ಕೆ ಉಪಯೋಗಿಸುತ್ತಿದ್ದಾರೆಂದು ಹೇಳುತ್ತಾರೆ. ಅವರೆ ಯುನಿಟ್ಟು ಒಂದಕ್ಕೆ ಚಾರ್ಜು ಮಾಡುತ್ತಿರುವ ದರ ಬಹಳ ಜಾಸ್ತಿಯಾಗಿದೆ. ಒಂದು ಯೂನಿಟ್ಟಿಗೆ 9 ಪೈಸಾ ಚಾರ್ಜು ಮಾಡುತ್ತಾ ಇರುವುದು ತುಂಬಾ ಜಾಸ್ತಿ. ಒಬ್ಬ ರೈತನಿಗೆ 31-41 ಎಕರೆ ಜಮೀನನ್ನು ಸಾಗುವಳಿ ಮಾಡಲು ಈ ಎಲೆಕ್ಟ್ರಿಸಿಟಿ ಉಪಯೋಗಿಸಿದರೆ 100 ರೂಪಾಯಿಗಳವರೆಗೆ ಕರೆಂಟ್ ಚಾರ್ಜು ಬರುತ್ತದೆ. ಒಂದು ತಾಲ್ಲೂಕಿನಲ್ಲಿ ಎರಡು ಸಾವಿರ ಐ. ಪಿ. ಸೆಟ್ಟುಗಳಿದ್ದರೆ, ಒಂದು ಐ. ಪಿ. ಸೆಟ್ಟಿಗೆ ಹತ್ತು ಎಕರೆಯಂತೆ ಸಾಗು ಮಾಡಿದರೆ ಸುಮಾರು ಇಪ್ಪತ್ತು-ಮುವತ್ತು ಸಾವಿರ ಎಕರೆಯವರೆಗೆ ಸಾಗುವಳಿಯಾಗುತ್ತದೆ. ಇಷ್ಟು ಎಕ್ರೆ ಸಾಗುವಳಿ ಮಾಡುತ್ತಿರುವಾಗ ಕರೆಂಟ್ ಜಾಸ್ತಿಯಾಗಿ ಖರ್ಚಾಗುತ್ತದೆ. ಆದ್ದರಿಂದ ರೈತರು ಉಳುವುದನ್ನು ಕಡಿಮೆ ಮಾಡಿದ್ದಾರೆ. ಈಗ ಸರ್ಕಾರದವರು ಕೋಟಿಗಟ್ಟಲೆ ಹಣ ಕೊಟ್ಟು ಹೊರಗಡೆಯಿಂದ ಆಹಾರಧಾನ್ಯಗಳನ್ನು ತರಿಸುತ್ತಿದ್ದಾರೆ. ಆದ್ದರಿಂದ ರೈತರಿಗೆ ಬೆಂಬಲ ಕೊಡುವ ಸಲುವಾಗಿ ಎಲೆಕ್ಟ್ರಿಸಿಟಿ ಚಾರ್ಜನ್ನು ಯಾತಕ್ಕೆ ಕಡಿಮೆ ಮಾಡಬಾರದು ? ಬೆಳಗಾಂನಲ್ಲಿ ನೀರಾವರಿಗೋಸ್ಕರ 12 ಪೈಸಾ ಚಾರ್ಜು ಮಾಡುತ್ತಾರೆ ಎಂದು ಹೇಳಿದ್ದೀರಿ. ಆದುದರಿಂದ ಈ ಚಾರ್ಜು ಏನಿದೆ ಅದನ್ನು ಅವರಿಗೂ ಕಡಿಮೆ ಮಾಡಿ, ನಮಗೂ ಕಡಿಮೆ ಮಾಡಿ ಎಂದು ನಾನು ಕೇಳಿಕೊಳ್ಳುತ್ತೇನೆ. ಬಾವಿಯಲ್ಲಿ ನೀರು ಕೆಳಗೆ ಹೋಗುವುದರಿಂದ ನೀರು ಹತ್ತಬೇಕಾದರೆ ಕರೆಂಟ್ Consumption ಜಾಸ್ತಿಯಾಗುತ್ತಿದೆ. ಆದ್ದರಿಂದ 9 ಪೈಸಾ ಇರುವುದನ್ನು 3 ಪೈಸಾ ಮಾಡಿದರೆ ರೈತನು ಹೆಚ್ಚು ಬೆಳೆ ಬೆಳೆಯಲು ಅನುಕೂಲವಾಗುತ್ತದೆ. ಇದನ್ನು ಸರ್ಕಾರದವರು ಮಾಡುತ್ತಾರೆಂದು ನಾನು ನಂಬಿದ್ದೇನೆ.

ಇನ್ನು ಅಗ್ರಿಕಲ್ಚರ್ ಇಲಾಖೆಯ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ವ್ಯವಸಾಯ ಮಂತ್ರಿಗಳು ನಮ್ಮ ಜಿಲ್ಲೆಯವರು. ಭಾವಿಗಳಿಂದ ಯಥೇಚ್ಛವಾಗಿ ವ್ಯವಸಾಯಕ್ಕೆ ಅನುಕೂಲವಾಗುತ್ತದೆ ಎಂಬುದು ಗೊತ್ತಿದೆ. ಅನೇಕ ಭಾವಿಗಳನ್ನು ಎಲ್ಲಾ ಕಡೆ ತೋಡುವುದಕ್ಕೆ ಆಗುವುದಿಲ್ಲ. ಸಾಕಾದಷ್ಟು ದುಡ್ಡು ಸಿಕ್ಕದೆ ಬಾವಿಗಳಿಂದ ಪ್ರಯೋಜನವಾಗುತ್ತಾ ಇಲ್ಲ. ಆಂಧ್ರದ ಕಡೆ ಏನೋ ಚೆನ್ನಾಗಿದೆ, ನೀರು Bore-well ನಿಂದ ಟ್ಯಾಪ್ ಮಾಡುತ್ತಾರೆ, ವ್ಯವಸಾಯಕ್ಕೆ ಉಪಯೋಗಿಸುತ್ತಾರೆ. ಈ ವಿಷಯವನ್ನು ಹಿಂದಿನಿಂದಲೂ ಹೇಳುತ್ತಲೇ ಬಂದಿದ್ದೇನೆ. ಈ ವಿಷಯದಲ್ಲಿ ಸರ್ಕಾರದ ಸಹಾಯವಾಗಿಲ್ಲ. ಈ ರೀತಿ ಆದರೆ ವ್ಯವಸಾಯಕ್ಕೆ ಏನು ಮಾಡುತ್ತೀರಿ ? ಇದನ್ನು ಕಾರ್ಯರೂಪಕ್ಕೆ ತಂದರೆ ದೇಶದ ಪರಿಸ್ಥಿತಿ ಉತ್ತಮವಾಗುತ್ತದೆ.

ಒಂದೇ ಒಂದು ವಿಷಯ ಹೇಳುತ್ತೇನೆ. ನಾನು ಒಂದು ಹಳ್ಳಿಗೆ ಹೋಗಿದ್ದೆ. ಒಬ್ಬ ಮುದುಕ ಬಸ್ಸಿನಲ್ಲಿ ಕೂತಿದ್ದ. ಅವನಿಗೆ 82-83 ವರ್ಷ ವಯಸ್ಸು ಇರಬಹುದು. ಏತಕ್ಕೆ ಹೋಗುತ್ತಾನೆಂದು ಕೇಳಿದೆ. ಎಷ್ಟು ದಿವಸ ಉಪವಾಸ ಇರಲಿ ಎಂದು ಹೇಳಿದ. ದುಡಿಯುವುದಕ್ಕೆ ಮಕ್ಕಳು ಇದ್ದರೂ ಏತಕ್ಕೆ ಹೋಗುತ್ತಾನೆಂದು ನೋಡಲು ಮನೆಯ ಹತ್ತಿರ ಹೋದೆ. ಆದರೆ ಅಲ್ಲಿ ಅವನ ಮಕ್ಕಳಿಗೆ ಒಂದೆರಡು ಮಕ್ಕಳು ಇದ್ದರು. ಅವರಿಗೇ ಊಟಕ್ಕೆ ಸಾಲದು. ಅವರೂ ಉಪವಾಸ ಬಿದ್ದಿರುವಾಗ ಆ ಮುದುಕನಿಗೆ ಏನು ಹಾಕುತ್ತಾರೆಂದು ಗೊತ್ತಾಯಿತು. ಇದು ನಾಚಿಕೆಗೇಡುತನ. ಎಲ್ಲಾ

(ಶ್ರೀ ಆರ್. ಎನ್. ಲಕ್ಷ್ಮೀಪತಿ)

ಇಲಾಖೆಗಳಲ್ಲಿ ಪೋಲಾಗುವ ದುಡ್ಡು ನಿಲ್ಲಿಸಿ. ಅನೇಕ ಮಂತ್ರಿಗಳು ಇದ್ದಾರೆ. ಅವರಲ್ಲಿ ಕೆಲವರನ್ನು ತೆಗೆದು ದುಡ್ಡು ಉಳಿಸಿ. ಅನೇಕ ಇಲಾಖೆ ಪೋಲಾಗುತ್ತಾ ಇರುವುದನ್ನು ನಿಲ್ಲಿಸಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀಮತಿ ನಾಗಮ್ಮ (ಕಲ್ಮರೆ).—ಸ್ವಾಮಿ, ಶ್ರೀ ಡಿ. ಎಮ್. ಸಿದ್ದಯ್ಯನವರು ನಮ್ಮ ಮುಂದೆ ಇಟ್ಟಿರುವ ನಿರ್ಣಯವನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಇದುವರೆಗೆ ಅನೇಕ ಮಾನ್ಯ ಸದಸ್ಯರು ರೈತರಿಗೆ ಏನು ಏನು ಅನುಕೂಲಗಳನ್ನು ಮಾಡಿಕೊಡಬೇಕು ಎಂದು ಹೇಳಿದ್ದಾರೆ. ನಾನೂ ಒಂದೆರಡು ಮಾತುಗಳನ್ನು ಆಡಬೇಕೆಂದು ನಿಂತಿದ್ದೇನೆ. ಸ್ವಾಮಿ, ರೈತರು ಬೆಳೆಯನ್ನು ಚೆನ್ನಾಗಿ ಬೆಳೆಸಲು ಏನು ಏನು ಸೌಕರ್ಯಗಳನ್ನು ಒದಗಿಸಿದ್ದೀರಿ. ರೈತನಿಗೆ ಬೇಕಾದ ಭಾವಿ, ಕೆರೆ, ಔಷಧಿ, ಗೊಬ್ಬರ ಮುಂತಾದುವನ್ನು ಒದಗಿಸಿಕೊಡಲು ಏನು ಪ್ರಯತ್ನಮಾಡಿದ್ದೀರಿ. ನಾವು ಮಾಡಿರುವ ಪ್ರಯತ್ನಗಳು ಸಾಲದು. ರೈತ ಇಲ್ಲದೇ ಇದ್ದರೆ ನಮ್ಮ ದೇಶ ಉಳಿಯುವುದಿಲ್ಲ ಎಂಬುದನ್ನು ತಾವು ತಿಳಿದುಕೊಳ್ಳಬೇಕು ಅದುದರಿಂದ ನಮ್ಮ ರೈತರಿಗೆ ಬೇಕಾದ ಎಲ್ಲಾ ವಸ್ತುಗಳನ್ನೂ ಬೇಗನೆ ಒದಗಿಸಿದರೆ ನಮಗೆ ಬೇಕಾದ ಆಹಾರಧಾನ್ಯಗಳನ್ನು ಒದಗಿಸಲು ರೈತರು ಮುಂದೆ ಬರುತ್ತಾರೆ. ಅವರು ರಾತ್ರಿ ಹಗಲು ದುಡಿದು ಬೆಳೆಗಳನ್ನು ಬೆಳೆಸುತ್ತಾರೆ. ಆದುದರಿಂದ ರೈತರಿಗೆ ಬೇಕಾದ ಅನುಕೂಲತೆಗಳನ್ನು ಕೂಡಲೇ ಒದಗಿಸಿಕೊಡಿ. ಈಗ ಏನಾಗಿದೆ ಎಂದರೆ ರೈತರು ವರ್ಷಾನುಗಟ್ಟಲೆ ಆಫೀಸುಗಳಿಗೆ ತಿರುಗಿದರೂ ಅವರಿಗೆ ಬೇಕಾದ ಸೌಲಭ್ಯ ಸಿಕ್ಕುತ್ತಾ ಇಲ್ಲ. ಅವರಿಗೆ ಬೇಕಾದ ಸಾಲ ದೊರೆಯುತ್ತದೆ ಎಂದು ನಾವು ಹೇಳಿದರೂ, ಅಲ್ಲಿ ತಾಲ್ಲೂಕು ಆಫೀಸಿಗೆ ಹೋದರೆ ಅವರಿಗೆ ತಕ್ಷಣ ಹಣ ದೊರೆಯುತ್ತಾ ಇಲ್ಲ. ಅವರು ತಿರುಗಿ ತಿರುಗಿ ಬೇಸತ್ತಿದ್ದಾರೆ. ಪಟ್ಟಣಕ್ಕೆ ಹೋಗಿ ದುಡಿದು ಜೀವನ ಮಾಡೋಣ ಹಳ್ಳಿಯಲ್ಲೇ ಇದ್ದು ಏತಕ್ಕೆ ಸಾಯುವುದು ಎಂದು ಅವರಿಗೆ ಭಾವನೆ ಬಂದಿರುತ್ತದೆ. ಅದುದರಿಂದ ನೀವು ರೈತರಿಗೆ ಬೇಕಾದ ಸಾಮಾನುಗಳನ್ನು ಒದಗಿಸಿದರೆ ಅವನು ತನ್ನ ಕಾಲ ಮೇಲೆ ನಿಂತು ನಮಗೆ ಬೇಕಾದಷ್ಟನ್ನು ಒದಗಿಸುತ್ತಾನೆ. ಈಗ ನಮಗೆ ಪಾಕೀಸ್ಥಾನ ಮತ್ತು ಚೀಣೀಯರಿಂದ ವಿಪತ್ತು ಒದಗಿದೆ. ಅವರನ್ನು ಹೊಡೆದಟ್ಟಲು ನಮ್ಮ ರೈತರ ಮಕ್ಕಳು ಯಾವಾಗಲೂ ಸಿದ್ಧರಾಗಿದ್ದಾರೆ. ನಮ್ಮ ವೈರಿಗಳನ್ನು ಹೊಡೆದೋಡಿಸುವ ತ್ರಾಣ ನಮ್ಮ ರೈತರಲ್ಲಿದೆ. ಈಗ ನಾವು ಪರದೇಶದಿಂದ ಧಾನ್ಯವನ್ನು ತಂದು ಹಂಚುತ್ತಾ ಇದ್ದೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಅದಕ್ಕೆ ಬದಲಾಗಿ ನಮ್ಮ ರೈತರಿಗೆ ಬೇಕಾದಷ್ಟು ನೀರಾವರಿ ಭಾವಿಗಳನ್ನು ಮತ್ತು ದೊಡ್ಡ ದೊಡ್ಡ ಕೆರೆಗಳನ್ನು ಕಟ್ಟಿಸಿಕೊಟ್ಟರೆ ರೈತರು ಬೇಕಾದಷ್ಟು ಬೆಳೆಯುತ್ತಾರೆ. ಕಲವು ಕಾಲದ ಹಿಂದೆ ಸಣ್ಣ ನೀರಾವರಿ ಮಂತ್ರಿಗಳು ನಮ್ಮ ಊರಿಗೆ ಬಂದು ನಮಗೆ ಬಾವಿಗಳನ್ನು ಬೇಕಾದಷ್ಟು ಕೊಡುತ್ತೇವೆಂದು ಹೇಳಿದರು ಆದರೆ ಇದುವರೆಗೂ ಒಂದು ಬಾವಿಯನ್ನೂ ಕೊಟ್ಟಿಲ್ಲ. ದೊಡ್ಡ ದೊಡ್ಡ ಜಲಾಶಯಗಳನ್ನು ಕಟ್ಟಿದರೆ ಅವುಗಳಿಂದ ಉತ್ಪತ್ತಿ 20 ವರ್ಷದ ಮೇಲೆ ಬರುತ್ತದೆ. ಆದರೆ ಕೆರೆಗಳನ್ನು ದುರಸ್ತು ಮಾಡಿ ಜನರಿಗೆ ನೀರನ್ನು ಒದಗಿಸಿದರೆ ನಮ್ಮ ರೈತರು ನಮಗೆ ಬೇಕಾದ ಬೆಳೆಯನ್ನು ಬೆಳೆಯುತ್ತಾರೆ. ಅವರಿಗೆ ದುಷ್ಟಬುದ್ಧಿ ಇಲ್ಲ. ಸರ್ಕಾರಕ್ಕೆ ಸಹಾಯವನ್ನು ಮಾಡಲು ಸದಾ ಸಿದ್ಧರಾಗಿದ್ದಾರೆ. ಆದುದರಿಂದ ರೈತರಿಗೆ ಬೇಕಾದ ಸಹಾಯವನ್ನು ಒದಗಿಸಿ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಡಬ್ಬಲ್ ಕಂದಾಯ ಮಾಡಿದ್ದಾರೆ.

ಶ್ರೀಮತಿ ನಾಗಮ್ಮ.—ಡಬ್ಬಲ್ ಕಂದಾಯ ಕೊಡೋಣ. ಆದರೆ ರೈತರಿಗೆ ಸರಿಯಾದ ಅನುಕೂಲಗಳನ್ನು ಮಾಡಿಕೊಡಲಿ. ಈಗ ಆಹಾರ ಧಾನ್ಯಗಳನ್ನು ಸರಬರಾಜು ಮಾಡುವ ಸೊಸೈಟಿಗಳನ್ನು ಆಹಾರ ಮಂತ್ರಿಗಳು ಬೇಕಾದಷ್ಟು ಪ್ರಾರಂಭಿಸಿದ್ದಾರೆ. ಆದರೆ ಆ ಸೊಸೈಟಿಗಳು ಈ ಅವಕಾಶವನ್ನು ಬೇಕಾದಷ್ಟು ದುರುಪಯೋಗಪಡಿಸಿಕೊಂಡಿವೆ ಅದನ್ನು ಸರಿಪಡಿಸಬೇಕೆಂದು ಮನವಿಮಾಡಿಕೊಳ್ಳುತ್ತೇನೆ. ರೈತರು ಚೆನ್ನಾಗಿ ದುಡಿದರೇನೇ ಎಲ್ಲರಿಗೂ ಅನುಕೂಲವಾಗುತ್ತದೆ. ಅದುದರಿಂದ ತಾವು ರೈತರಿಗೆ ಬೇಕಾದ ಅನುಕೂಲಗಳನ್ನು ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Tomorrow we will assemble at 8-30 A.M.

Sri B. D. JATTI.—But it will be difficult if there is no quorum. Everybody will try to come but they may not come exactly at 8-30.

Mr. SPEAKER.—May I take it that all those that are present here atleast will undertake to come at 8-30 A. M. so that we may have

quorum? I am suggesting this because it is a very important subject and the reply has to cover every point. If I am informed properly, there will be three Hon'ble Ministers participating in the debate, the Hon'ble Chief Minister, Hon'ble Minister for Agriculture and the Hon'ble Minister for Food. I want them to exhaustively deal with the points that have been raised. I am reserving the last half an hour for allowing questions or clarifications to be sought. If there is time left over, I will allow other members also to participate. Whatever might be said tomorrow by members will be dealt with by the Hon'ble Ministers. Supposing the answer covers all the points, then the time that is spent will have been better utilised. Suppose the Minister forgets or does not deal with it, then questions will deal with it so that it will be more comprehensive and we will have utilised the time to the maximum advantage.

SRI K. V. BYRE GOWDA (Yeshwanthapur).—Nobody from Bangalore District has spoken.

SRI H. R. KESHAVA MURTHY (Gandasi).—What about people who have sent adjournment motions, Sir?

SRI B. J. LINGE GOWDA (Channapatna).—We have not been given a chance.

MR. SPEAKER.—The adjournment motions have been rejected. They have no value whatsoever. I have said even those names ought to have been included in the list submitted by the Whips so that they might be given a chance to speak. I am giving them a chance.

†SRI K. M. DEVAYYA (Periyapatna).—Mr. Speaker, Sir, while supporting the resolution moved by my Hon'ble friend Sri D. M. Siddiah, I would like to give a few suggestions. I do not mean to speak for a long time. The country is passing through troublous times. Pakistan on the one side and China on the other side are giving us trouble and India is placed in a difficult position. We have to be united and there is no doubt, we are united. We are experiencing considerable difficulty on the food front also. Therefore, Government wants, our Prime Minister wants the raiyats to play their worthy roll in the matter of increasing food production. I can tell you Sir, the raiyats are very loyal and patriotic. Even without being told, they will do their very best provided they are given some facilities. Hon'ble Members who have spoken before me have already made suggestions and they have said that for the purpose of grow more food, we want water, electricity, fertiliers, etc.

MR. SPEAKER.—A representation was made to say that Members from certain districts have not been given a chance to participate. I now find from the list of speakers there are Members from those districts who have spoken. Members from Bangalore District have spoken. Members must verify before saying anything. But certain others who could not speak, I will give them a chance to put questions at the time of clarifications.

SRI H. R. KESHAVA MURTHY.—What about people who have sent adjournment motions, Sir?

Mr. SPEAKER.—Can the Hon'ble Member sit late till 7 o'clock ? We have been sitting for longer hours. But I am prepared to sit for any length of time. He must speak to the Whips and come to some arrangement about these things.

Sri B. J. LINGE GOWDA.—It is our misfortune that some members are not at all given an opportunity.

Mr. SPEAKER.—By whom ?

Sri B. J. LINGE GOWDA.—Either by the Whips or by the Hon'ble Speaker.

Mr. SPEAKER.—If it is by Whips, I am not responsible. But as far as the Speaker is concerned, if I read out the names that are with me, you will be surprised. I have tried to give a fair opportunity to as many members as possible. One Hon'ble Member says in his chit sent to me : 'I want to go urgently ; will you kindly permit me ?'. Another Hon'ble Member says : 'please give me priority'. I have to respect the wishes of all persons in the House. Why should not the Hon'ble Members approach the Whips and give their names. We have already exceeded the time allotted for this business. Is it that all the 209 members can speak to their heart's content in four days ? I am coming here at 7-30 A.M. if necessary. Try to do something, I am quite prepared.

Sri K. M. DEVAYYA.—There are only four minutes left. I may be permitted to continue tomorrow, Sir.

Mr. SPEAKER.—Tomorrow I will call upon the Hon'ble Ministers.

Sri S. SIVAPPA.—We can meet at 8-30 tomorrow and go on till one of the clock. Further discussion may be allowed for one hour and the rest of the time may be given to the Ministers.

Mr. SPEAKER.—How many will be able to speak in one hour, at the rate of 10 minutes each ?

Sri S. SIVAPPA.—Make it five minutes each, Sir.

Mr. SPEAKER.—I have the time analysis here. Many members have taken more time than was permitted. Any way let us see. At the rate of five minutes, we will be able to cover another 12 members. And Ministers' replies will begin at 9-30 A.M. There will be no question for anybody. Then I will have to provide for some reply by Sri D. M. Siddiah the mover of the Resolution under the rules.

Sri M. R. PATIL.—When the Hon'ble Minister is replying Mr. Siddiah may kindly forego his right of reply and make more time available for the members to participate.

6-00 P.M.

Mr. SPEAKER.—But, how can I presume ?

Sri M. R. PATIL.—I request Mr. Siddiah through you, Sir.

Mr. SPEAKER.—Why not the Hon'ble Members consult each other and then convey it to me ? Why should they make me a messenger to interpret.

SRI D. M. SIDDIAH.—I want five minutes.

MR. SPEAKER.—Let Sri Devayya continue. I do not think that the five minutes time limit will be possible for each member. However, Hon'ble Minister may kindly get ready to reply at 9-30 A.M. tomorrow.

SRI K. M. DEVAYYA.—Sir, suggestions have to be taken and implemented. Most of the Hon'ble Members have said that minor irrigation is very important and it should be taken up immediately so that we can get quick results. But, where is the money to come from ?

MR. SPEAKER.—Money will come from the Centre. On that supposition the member may suggest.

SRI K. M. DEVAYYA.—The first thing that we want is water for cultivation. Water should be given to us. The second thing is minor irrigation facilities. In Coorg, all such facilities should be given and work should be taken up immediately. I come from Malnad. We are very good ryots. We are very patriotic. We are also good fighters and we have sent soldiers to the front. We stand second to none in our patriotism in fighting for our country.

MR. SPEAKER.—As regards food production, scope for producing fruits and vegetables is almost unlimited in Coorg.

SRI K. M. DEVAYYA.—If we are given water facilities, we assure that in Coorg, we will produce four times more than what we are producing now. One thing is that Government should come to our rescue. I have got here a list of minor irrigation works and I will pass it on to the Hon'ble Speaker. The total outlay on all these works will be only ten lakhs of rupees. If Government takes up all these works and finish within one year, we promise to produce and supply ten times more than what we produce now. Ours is a surplus district. Our ryots are intelligent. They are very hard working. But they require Government help. Government should give us water, manure and other facilities. To produce more, we should have fertilisers. But there is one danger. If these fertilisers are used without full knowledge of the soil, it will have a bad effect on the lands. It will harm the crops. Soil is different from place to place. Some soil requires more nitrogen, some phosphates and some potash. An ordinary ryot does not know what soil requires what kind of fertiliser. Therefore it has to be examined. If we simply use fertilisers without this knowledge, it may harm the land and the crops and production as well. Therefore, the first thing that Government should do is to set up soil testing laboratories in each district headquarters, apart from the one at the Centre. Otherwise, I will suggest this. In America, they have solved this problem by the manufacture of a small kit for testing soil which can be taken from farm to farm or field to field and the soilstested then and there and the ryots told what kind of manure should be used. The gramsevaks in our State could be provided with this kind of a kit. They can test the soil and tell the ryots what kind of manure should be applied to the particular land. The other thing which I would like to

(SRI K. M. DEVAYYA)

tell is about the prohibitive cost of the fertilisers which the ryots are unable to meet. Government should see that the ryot gets fertilisers at reasonable prices and he gets it in time. These are very necessary.

MR. SPEAKER.—In England, even today, purchase of fertilisers is subsidised. If a farmer used a certain quantity of fertilisers, there is a certain rate at which it is subsidised. Does the member think it is good ?

SRI K. M. DEVAYYA.—I am just coming to that, Sir. Our Government is getting food supplies from outside worth 200 to 300 crores. If money now spent to get foodgrains from outside is given to the ryot as subsidy for fertilisers, etc, he will do better and produce more which will suffice all of us. I therefore suggest that these fertilisers should be given to ryots at subsidised rates.

Then as regards electricity—in Coorg, there are many streams and rivers. If pumpsets are put, by lift irrigation people would utilise water. Lift irrigation is very necessary and in Coorg, it will work well. We in Coorg require minor irrigation and lift irrigation facilities. With these facilities, I think we will be able to produce much more than what we are producing now. We need not advise the ryots. For example in South Canara, prices of areca has gone up and every man makes efforts to the best of his abilities to grow more area, because he knows he can get a good price on areca. In Coorg there is the Coffee Board. The Board helps and there is a good price for coffee. Formerly, to grow one candy of coffee in one acre, it was a big thing. But today, they can grow one ton. No one need tell the ryot. If proper encouragement in price is given, he will come forward and do his work to the best of his abilities. There should be proper prices for the produce. Should not the cultivator live ? Should not the family of the cultivator live ? We should see whether the prices that are fixed for the commodities he produces is remunerative. Can he look after the members of his family on the prices given to him for his produce ? The prices should be attractive. At the same time, I would say that the consumers should not be hit hard. Some measure should be taken to protect the consumers as well. Let the consumers be supplied at a subsidised rate. If the Government encourage the ryots and he will do well. Last year, at this time, the price of paddy in Coorg was Rs. 42 per quintal. This year, the Government has fixed it at Rs. 39, *i.e.*, they have reduced the price. I do not know why they did so. Is it because the prices of other commodities have gone down ? It is because the cost of cultivation has gone down ? I request the Food Minister to revise the price structure. Sir, on account of scanty rains, we are not sure of our crops this time. In Coorg if we do not get rains within 8 or 10 days, we will be almost on the verge of famine. Fixation of paddy price must be based on the cost of production also. Taking all these aspects into consideration, I request the Food Minister once again to revise the price of paddy to at least 42 rupees per quintal. If proper encouragement is given to the ryots, they will not fail to grow more. He is as patriotic and loyal as anybody else. If

proper prices are given, I assure the Food Minister that we will grow more and see that India is self-sufficient.

† ಶ್ರೀ ಎ. ಶರಣಪ್ಪ (ದೇವದುರ್ಗ).—ಮಾನ್ಯ ಸಭಾಪತಿಗಳೇ, ಈ ದಿವಸ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಡಿ. ಎಂ. ಸಿದ್ದಯ್ಯನವರು ಈ ಒಂದು ಆಹಾರ ಸಮಸ್ಯೆಯನ್ನು ನಾವು ಹೇಗೆ ನೀಗಬೇಕು, ನಾವು ಆಹಾರ ಉತ್ಪತ್ತಿಯನ್ನು ಹೇಗೆ ಹೆಚ್ಚಿಸಬೇಕು, ಅನ್ನುವ ಒಂದು ವಿಚಾರ ಹಾಗೂ ಅದರ ಸಂಗ್ರಹಣೆ ಮತ್ತು ಹಂಚಿಕೆ ವಿತರಣೆಯ ವಿಚಾರದಲ್ಲಿ ಏನೇನು ಕ್ರಮಗಳನ್ನು ಕೈಗೊಳ್ಳ ಬೇಕು ಅನ್ನುವ ಬಗ್ಗೆ ನಾವೆಲ್ಲರೂ ಇಲ್ಲಿ ಚರ್ಚೆ ಮಾಡಿ ಸರ್ಕಾರದವರೂ ಮತ್ತು ನಾವೂ ಉಭಯತ್ರರೂ ಒಂದು ಯೋಗ್ಯ ಮಾರ್ಗ ಕಂಡುಹಿಡಿಯಲು ಈ ಒಂದು ಒಳ್ಳೆಯ ಸೂಚನೆಯನ್ನೇ ತಂದಿದ್ದಾರೆ. ಈಗಾಗಲೇ ಅನೇಕ ಮಾನ್ಯ ಸದಸ್ಯರು ತಮ್ಮ ಅಮೋಘವಾದ ಸೂಚನೆಗಳನ್ನೂ ಹಾಗೂ ಸಲಹೆಗಳನ್ನೂ ನೀಡಿದ್ದಾರೆ. ಹಾಗೆ ಅವರು ನೀಡಿರತಕ್ಕ ಸಲಹೆಗಳು ಕೇವಲ ನಮ್ಮ ಮೈಸೂರು ರಾಜ್ಯಕ್ಕಷ್ಟೇ ಅಲ್ಲ. ಅವು ಇಡೀ ಭಾರತಕ್ಕೇ ಅನ್ವಯಿಸುವಂಥವುಗಳಾಗಿವೆ.

ಈಗ ನಮ್ಮ ಮುಂದಿರತಕ್ಕ ವಿಷಯವನ್ನು ನಾವೊಂದು ದೃಷ್ಟಿಯಿಂದ ವಿಚಾರ ಮಾಡಿ ನೋಡು ವುದಾದರೆ, ಒಕ್ಕಲುತನವೆಂಬುದಾಗಲೀ ಅಥವಾ ಬೇಸಾಯವೆಂಬುದಾಗಲೀ ನಮ್ಮ ದೇಶಕ್ಕೆ ಹೊಸ ದೇನೂ ಅಲ್ಲ. ಈ ಒಕ್ಕಲುತನವನ್ನು ನಮ್ಮ ದೇಶ ಇಲ್ಲಿಗೆ ಸಹಸ್ರಾರು ವರ್ಷಗಳಿಂದಲೂ ನಡೆಸಿ ಕೊಂಡು ಬರುತ್ತಿದೆ. ದೇಶದಲ್ಲಿರತಕ್ಕ ಬಹುಪಾಲು ಜನ ಈ ಉದ್ಯೋಗದಲ್ಲಿ ತೊಡಗಿದ್ದಾರೆ. ಅಷ್ಟಾಗಿದ್ದರೂ ನಮಗೆ ಈ ಹೊತ್ತು ಆಹಾರ ಕೊರತೆಯುಂಟಾಗಿದೆ. ಅದನ್ನು ನಿವಾರಣೆ ಮಾಡಿ ಕೊಳ್ಳಲು ನಾವೀಗ ಇಲ್ಲಿ ಚರ್ಚೆ ಮಾಡಬೇಕಾದ ಒಂದು ಪ್ರಸಂಗ ಬಂದಿದೆ. ಇಲ್ಲಿ ನಾನೀಗ ಹೇಳಬೇಕಾದ ಒಂದು ಪ್ರಸಂಗವೇನಿದೆ ಎಂದರೆ ಇಲ್ಲಿಯವರೆಗೂ ಒಕ್ಕಲುತನದಲ್ಲಿರತಕ್ಕವರು ಅವರದೇ ಆದ ಒಂದು ಸಂಘವನ್ನು ಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಅವರಲ್ಲಿ ಆ ಒಂದು ಸಂಘಟನಾ ಶಕ್ತಿಯನ್ನೂ ಬೆಳೆದು ಬಂದಿಲ್ಲ. ಆದರೆ ನಮ್ಮ ಒಂದು ದೃಷ್ಟಿ ರಾಜಕೀಯದತ್ತಲಾಗಲೀ ಅಥವಾ ಸಾಮಾಜಿಕದತ್ತಲಾಗಲೀ ಹೋದಾಗ ಅಲ್ಲಿ ನಾವು ಅನೇಕ ಸಂಘ ಸಂಸ್ಥೆಗಳನ್ನು ಕಾಣಬಹುದು. ಅವರೆಲ್ಲರೂ ಅವರ ಕಷ್ಟ ಸುಖಗಳನ್ನು ನೋಡಿಕೊಳ್ಳುವು ದಕ್ಕೂ, ಅವರ ಹಕ್ಕುಬಾಧ್ಯತೆಗಳನ್ನು ಕಾಪಾಡಿಕೊಳ್ಳುವುದಕ್ಕೂ ಅಂಥ ಅನೇಕ ಮಾರ್ಗಗಳನ್ನು ಮಾಡಿಕೊಂಡಿದ್ದಾರೆ. ಒಕ್ಕಲಿಗರಲ್ಲಿ ಅಂಥಾ ಒಂದು ಸಂಘಟನೆಯಿನ್ನೂ ಆಗಿಲ್ಲ. ಅವನಿಗೆ ಯಾರೂ ಈ ವಿಚಾರದಲ್ಲಿ ಸಹಾಯಮಾಡತಕ್ಕವರಿಲ್ಲ. ಕಾಲಕ್ರಮೇಣ ಅವನೇ ಬುದ್ಧಿವಂತನಾಗಿ ಅವನ ಹಕ್ಕುಭಾದ್ಯತೆಗಳಿಗೆ ಹೋರಾಡತಕ್ಕ ಕಾಲ ಸದ್ಯದಲ್ಲೇ ಬರಬಹುದು. ಆದರೆ ನಾವು ಅಲ್ಲಿಯ ವರೆಗೆ ಅಷ್ಟಕ್ಕೆ ಅವಕಾಶ ಕೊಡಬಾರದು. ನಾವೆಲ್ಲರೂ ಈ ದಿವಸ ಇಲ್ಲಿ ರೈತನ ಪ್ರತಿನಿಧಿಗಳೆಂದು ಹೇಳಿಕೊಂಡು ಇಲ್ಲಿ ಕುಳಿತಿದ್ದೇವೆ. ಆದುದರಿಂದ ಆತನ ಹಿತರಕ್ಷಣೆಯನ್ನು ನೋಡಿಕೊಳ್ಳತಕ್ಕ ವಿಚಾರದ ಹೊಣೆಗಾರಿಕೆ ನಮ್ಮ ಮೇಲೂ ಮತ್ತು ಸರ್ಕಾರದವರಮೇಲೂ ಬಿದ್ದಿದೆ. ಆ ವಿಚಾರದಲ್ಲಿ ಈ ದಿವಸ ಇಲ್ಲಿ ಒಂದು ಚರ್ಚೆ ಮಾಡಬೇಕಾದ ಪ್ರಸಂಗ ಬಂದಿರುವುದರಿಂದ ನಾನು ಈ ಮಾನ್ಯ ಸಭೆಯ ಮುಂದೆ ಒಂದೆರೆಡು ವಿಷಯಗಳನ್ನು ಹೇಳಬೇಕೆಂದಿದ್ದೇನೆ. ಅದಕ್ಕಾಗಿ ನಾನೀಗ ತಮ್ಮ ಮುಂದೆ ನಿಂತಿದ್ದೇನೆ. ನಾವೀದಿವಸ ಹೆಚ್ಚು ಆಹಾರವನ್ನು ಉತ್ಪತ್ತಿ ಮಾಡಬೇಕೆಂದರೆ ಅದು ಹೇಗೆ ? ಉತ್ಪತ್ತಿ ಮಾಡಿದ್ದನ್ನು ಸಂಗ್ರಹಣೆ ಮಾಡುವುದು ಹೇಗೆ ? ಹಾಗೆ ಸಂಗ್ರಹಣೆ ಮಾಡಿ ದ್ದನ್ನು ಹಂಚತಕ್ಕದ್ದು ಹೇಗೆ ಎಂಬುದನ್ನು ವಿಚಾರ ಮಾಡತಕ್ಕ ಕಾಲದಲ್ಲಿ ನಾವು ನಮ್ಮ ದೇಶದಲ್ಲಿರ ತಕ್ಕ ಒಕ್ಕಲುತನದ ಪದ್ಧತಿ ಯಾವ ರೀತಿ ಇದೆ ಎಂಬುದನ್ನು ತಿಳಿದುಕೊಳ್ಳಬೇಕಾದುದು ಬಹಳ ಮುಖ್ಯವಾದ ವಿಚಾರ. ನಮ್ಮ ದೇಶದ ಒಕ್ಕಲುತನ ಒಂದು ರೀತಿಯಾಗಿಲ್ಲ. ಅದು ಒಂದೊಂದು ಭಾಗದಲ್ಲಿ ಒಂದೊಂದು ರೀತಿಯಾಗಿದೆ. ಒಂದು ಕಡೆ ತರೀ ಬೇಸಾಯವಿದ್ದರೆ ಇನ್ನೊಂದು ಕಡೆ ಬಾಗಾಯತು ಇದೆ, ಮತ್ತೊಂದು ಕಡೆ ಖುಷ್ಕಿ ಬೇಸಾಯವಿದೆ. ಹೀಗೆ ಒಂದೊಂದು ಕಡೆ ಒಂದೊಂದು ರೀತಿ ಬೇಸಾಯವಿದೆ. ಕೆಲವು ಕಡೆ ಇತ್ತೀಚೆಗೆ ನೀರಾವರಿ ಸೌಕರ್ಯಗಳನ್ನು ಒದಗಿಸಿ ದ್ದಾರೆ. ಆದರೆ ಅಲ್ಲಿರತಕ್ಕ ಜನರಿಗೆ ಅದರ ಅನುಭವವಿಲ್ಲ. ಉದಾಹರಣೆಗೆ ಹೇಳುವುದಾದರೆ— ನಮ್ಮ ರಾಯಚೂರು ಜಿಲ್ಲೆಯಲ್ಲಿ ತುಂಗಭದ್ರ ಪ್ರಾಜೆಕ್ಟಿನ ಅನುಕೂಲವಿದೆ. ಆದರೆ ಅಲ್ಲಿರತಕ್ಕ ಜನರಿಗೆ ತರೀ ಬೇಸಾಯದ ಅನುಭವವಿಲ್ಲ. ಆ ಜನರಿಗೆ ಆ ಬೇಸಾಯದಲ್ಲಿ ಅನುಭವವುಂಟು ಮಾಡಿ ಕೊಡತಕ್ಕ ಜನರೂ ಅಲ್ಲಿಲ್ಲ. ಹೀಗಾಗಿ ಅಲ್ಲಿರತಕ್ಕ ಜನರಿಗೆ ಆ ಬೇಸಾಯದಲ್ಲಿ ಒಂದು ಉತ್ಸಾಹ ಚಟುವಟಿಕೆಯನ್ನುಂಟುಮಾಡಲು ಯಾವ ಪ್ರಯತ್ನಗಳೂ ನಡೆದಿಲ್ಲ. ಹೀಗಾಗಿ ಅಲ್ಲಿ ತರೀಬೇಸಾಯ ಮಾಡಲು ನೀರಿನ ಸೌಕರ್ಯವಿದ್ದಾಗ್ಯೂ ಅಷ್ಟು ತ್ವರಿತವಾಗಿ ಅದು ಮುಂದುವರೆಯುತ್ತಿಲ್ಲ, ನಿಧಾನ ವಾಗಿ ಸಾಗುತ್ತಿದೆ. ಅಲ್ಲಿ ಅನುಕೂಲವಿದ್ದರೂ ಹೆಚ್ಚು ಆಹಾರವನ್ನು ಉತ್ಪತ್ತಿ ಮಾಡುವುದಕ್ಕಾಗಿಲ್ಲ. ಆದ್ದರಿಂದ ಅಲ್ಲಿರತಕ್ಕ ಜನರಿಗೆ ತರೀಬೇಸಾಯದಲ್ಲಿ ಒಂದು ತಿಳುವಳಿಕೆಯನ್ನು ಕೊಡಲು ವ್ಯವಸ್ಥೆ ಮಾಡಬೇಕು. ಆ ಜನರಿಗೆ ಒಳ್ಳೆಯ ಬೀಜದ ಬತ್ತವನ್ನು ಒದಗಿಸಬೇಕು.

(ಶ್ರೀ ಎ.ಶರಣಪ್ಪ)

ಇನ್ನು ಎರಡನೆಯದಾಗಿ ಖುಷ್ಕಿಯ ಬೇಸಾಯಕ್ಕೆ ಬಂದರೆ—ಅಲ್ಲಿನ ಒಕ್ಕಲುತನದವರೆಲ್ಲಾ ಮಳೆಯ ನೀರನ್ನೇ ಅವಲಂಬಿಸಿ ಬೇಸಾಯ ಮಾಡಬೇಕಾಗಿದೆ. ಅಲ್ಲಿನ ಜನರು ಯಾವಾಗ ಜಮೀನಿಗೆ ಬಿತ್ತನೆ ಮಾಡಬೇಕು, ಯಾವ ಕಾಲಕ್ಕೆ ಎಂಥ ಬೀಜ ಬಿತ್ತಬೇಕು, ಭೂಮಿಯಲ್ಲಿ ಯಾವ ಯಾವ ಕಾಲಕ್ಕೆ ಎಷ್ಟೆಷ್ಟು ತಂಪನ್ನಿಟ್ಟುಕೊಳ್ಳುತ್ತದೆ, ಯಾವ ಜಮೀನಿಗೆ ಎಂತ ಗೊಬ್ಬರ ಹಾಕಬೇಕು ಅನ್ನುವುದು ಅವರಿಗೆ ಗೊತ್ತಿಲ್ಲ. ಏನೋ ಅವನ ದೈವದಲ್ಲಿದ್ದಷ್ಟಾಗಲಿ ಎಂದು ಅವನು ಬೇಸಾಯ ಮಾಡುತ್ತಿದ್ದಾನೆ. ಹೀಗಾಗಿ ಖುಷ್ಕಿ ಬೆಳೆ ತೆಗೆಯುವುದು ಋತುಮಾರುತಗಳೊಂದಿಗೆ ಜೂಜಾಡಿ ದಂತಿದೆ. ಆದುದರಿಂದ ಈ ಭಾಗದಲ್ಲಿ ಬೇಸಾಯ ಮಾಡತಕ್ಕ ಜನರಿಗೆ ಭೂಮಿಯಲ್ಲಿ ಅಲ್ಲಲ್ಲೇ ತಂಪು ನಿಲ್ಲುವಂತೆ ಕಾಂಟೂರ್ ಬಂಡಿಂಗ್‌ಗಳನ್ನು ಹಾಕಬೇಕು. ಭೂಮಿಯಲ್ಲಿರತಕ್ಕ ತಂಪಿಗೆ ತಕ್ಕ ಬಿತ್ತನೆ ಬೀಜಗಳನ್ನು ಒದಗಿಸುವುದು, ಇಷ್ಟು ಅನುಕೂಲ ಮಾಡಿಕೊಟ್ಟರೆ ಅಲ್ಲಿ ಮಳೆ ಸ್ವಲ್ಪ ಕಡಮೆಯಾದರೂ ಬೆಳೆಯನ್ನು ತೆಗೆಯಬಹುದು. ನಮ್ಮಲ್ಲಿ ಬಿಜಾಪುರ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಈ ಬೇಸಾಯದಲ್ಲಿ ತೊಡಗಿರತಕ್ಕ ಜನರು ನೂರಕ್ಕೆ ಎಂಭತ್ತಿದ್ದಾರೆ. ಅವರಿಗೆಲ್ಲಾ ಇದೇ ಮುಖ್ಯ ಜೀವನಾಧಾರ. ಆ ಜನರಿಗೆ ಒಳ್ಳೆಯ ಬಿತ್ತನೆ ಬೀಜಗಳನ್ನು ಅಂದರೆ ಜೋಳ, ನವಣೆ, ಸಜ್ಜೆ ಇವು ಗಳನ್ನು ಒದಗಿಸಿದರೆ ಅನುಕೂಲವಾಗುತ್ತದೆ. ಇನ್ನು ಕೆಲವೊಂದು ಜಿಲ್ಲೆಗಳಲ್ಲಿ ಪ್ಯಾಕೇಜ್ ಸ್ಕೀಂ ಅಂತ ಮಾಡಿದ್ದಾರೆ. ಇಂಥ ಅನುಕೂಲಗಳನ್ನು ಎಲ್ಲಾ ಕಡೆಗಳಿಗೂ ಹೆಚ್ಚಿಸಬೇಕು. ಜಲಾಶಯ ವಿರುವ ಕಡೆ ಇನ್‌ಟೆನ್‌ಸಿವ್ ಕಲ್ಟಿವೇಷನ್‌ಗೆ ಅವಕಾಶ ಮಾಡಬೇಕು. ಸರ್ಕಾರದವರು ಇಷ್ಟು ವಿಷ ಯಗಳಿಗೆ ಲಕ್ಷ್ಯ ಕೊಟ್ಟರೆ ಹೆಚ್ಚು ಆಹಾರ ಬೆಳೆಯಲು ಅನುಕೂಲವಾಗುವುದು. ಒಳ್ಳೆಯ ಬೀಜ ಗೊಬ್ಬರ ಇವುಗಳನ್ನೆಲ್ಲಾ ಸರ್ಕಾರದ ವತಿಯಿಂದ ಕೊಡುತ್ತೇವೆ ಎಂದು ಹೇಳುತ್ತೀರಿ ಆದರೂ ಕೂಡ ಇವತ್ತಿಗೂ ಹಳ್ಳಿಗಳಲ್ಲಿ ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕ ವ್ಯವಸಾಯದ ಪದ್ಧತಿ ಏನಿದೆ ಅದೇ ಇವತ್ತಿಗೂ ಒಂದಲ್ಲ ಒಂದು ರೀತಿಯಲ್ಲಿ ನಡೆದುಕೊಂಡು ಬರುತ್ತಾ ಇದೆ. ಆದ್ದರಿಂದ ರೈತರ ಕಡೆಗೆ ಸ್ವಲ್ಪ ಹೆಚ್ಚು ಗಮನ ಕೊಟ್ಟು ಅವರಿಗೆ ಬೇಕಾದ ಅನುಕೂಲಗಳನ್ನು ಒದಗಿಸಿದ್ದೇ ಆದರೆ ಹೆಚ್ಚು ಆಹಾರವನ್ನು ಬೆಳೆಯುವುದಕ್ಕೆ ಸಾಧ್ಯವಾದೀತು. ದೇಶದಲ್ಲಿ ಈಗಿನ ಒಂದು ಪ್ರಸಂಗ ಏನಿದೆ, ಒಂದು ಕಡೆ ಪಾಕಿಸ್ಥಾನ, ಮತ್ತೊಂದು ಕಡೆ ಚೈನಾ ದೇಶದವರು ನಮ್ಮ ಮೇಲೆ, ನಮ್ಮ ಗಡಿಯಲ್ಲಿ ಆಕ್ರಮಣ ಮಾಡಿ ಕೆಲವೊಂದು ಪ್ರದೇಶಗಳನ್ನು ಹಿಡಿದುಕೊಂಡಿದ್ದಾರೆ. ಅದರ ಜೊತೆಗೆ ನಮ್ಮ ದೇಶದಲ್ಲಿ ಆಹಾರವನ್ನು ಕೂಡ ಬೆಳೆಯದೆ ಹೋದರೆ ಅದರಿಂದ ಚೈನಾ, ಪಾಕಿಸ್ಥಾನದ ಆಕ್ರಮಣಕ್ಕಿಂತ ಇನ್ನೂ ಹೆಚ್ಚಿನ ಹಾನಿ ದೇಶಕ್ಕೆ ಉಂಟಾಗಬಹುದು. ಆದ್ದರಿಂದ ಹೆಚ್ಚು ಆಹಾರ ಉತ್ಪಾದನೆ ಮಾಡಬೇಕಾದ್ದು ಬಹಳ ಮಹತ್ವದ ಅಂಶವಾಗಿದೆ. ಇದಕ್ಕಿಂತ ಸಮಾಜದ ಮತ್ತು ದೇಶದ ಹಿತ ಮತ್ತೊಂದು ಇಲ್ಲ. ಅನ್ನ ಇಲ್ಲದೇ ಇದ್ದರೆ ಯಾವ ಕೆಲಸವೂ ಆಗುವುದಿಲ್ಲ ಎಲ್ಲಕ್ಕೂ ಕೂಡ ಅನ್ನವೇ ಮುಖ್ಯವಾದದ್ದು. ಸರ್ವ ಪ್ರಯತ್ನ ಮಾಡಿ ಹೆಚ್ಚು ಆಹಾರ ಧಾನ್ಯ ಉತ್ಪಾದನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಈಗಾಗಲೆ ಮಾನ್ಯ ಸಭೆಯ ಸದಸ್ಯರನೇಕರು ತಮ್ಮ ಸಲ ಹೆಗಳನ್ನು ಕೊಟ್ಟಿದ್ದಾರೆ, ಉತ್ತರ ಪ್ರದೇಶದವರು ನಮ್ಮ ದೇಶದ ಗಡಿಯನ್ನು ಯಾವ ರೀತಿ ರಕ್ಷಣೆ ಮಾಡುತ್ತಾ ಇದ್ದಾರೋ ಅದೇ ರೀತಿ ದಕ್ಷಿಣ ಪ್ರದೇಶದವರು ನಮ್ಮ ದೇಶವನ್ನು ರಕ್ಷಣೆ ಮಾಡಲು ಹೆಚ್ಚು ಆಹಾರವನ್ನು ಉತ್ಪಾದನೆ ಮಾಡಬೇಕು. ಆ ರೀತಿ ಮಾಡಲು ಸರ್ಕಾರದವರೂ ಮತ್ತು ಒಕ್ಕಲಿಗರೂ ಧೃಢ ಮನಸ್ಸು ಮಾಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ಒಂದು ಮಾತು ಹೇಳಿ ಮುಗಿಸುತ್ತೇನೆ. ಒಕ್ಕಲಿಗರಿಗೆ ವ್ಯವಸಾಯಕ್ಕೆ ಬೇಕಾಗತಕ್ಕ ಪಟ್ಟೆ, ಗುಳ, ಕಬ್ಬಿಣ, ಗೊಬ್ಬರ ಮುಂತಾದುವುಗಳನ್ನು ಯೋಗ್ಯ ದರದಲ್ಲಿ ಮಾರಾಟ ಮಾಡಬೇಕು. ಯಾವ ರೀತಿ ಆಹಾರವನ್ನು ಹತೋಟಿಯಲ್ಲಿಟ್ಟುಕೊಂಡು ಮಾರಾಟ ಮಾಡಬೇಕೆಂಬ ವಿಚಾರ ಸರ್ಕಾರದ ಮುಂದೆ ಇದೆಯೋ ಅದೇ ರೀತಿ ಒಕ್ಕಲಿಗನಿಗೆ ಬೇಕಾದ ಸಲಕರಣೆಗಳನ್ನು ಸುಲಭವಾದ ದರದಲ್ಲಿ ಒದಗಿಸುವುದರ ಕಡೆಗೆ ಗಮನ ಕೊಡಬೇಕೆಂದು ಹೇಳುತ್ತೇನೆ. 10–15 ಎಕರೆ ಇರತಕ್ಕವರ ಮೇಲೆ ಹೆಚ್ಚಿನ ಒತ್ತಾಯವನ್ನು ಹಾಕದೇ ನೂರಾರು ಎಕರೆ ಇದ್ದಂತಹ ಹಿಡುವಳಿ ದಾರರ ಮೇಲೆ ಒತ್ತಾಯ ಹಾಕಿ ಕಾಳಿನ ಸಂಗ್ರಹ ಮಾಡಿ, ಅವರು 200 ಕ್ವಿಂಟಾಲ್ ಬೆಳೆದರೆ 100 ಕ್ವಿಂಟಾಲ್ ಸರ್ಕಾರದವರಿಗೆ ಕೊಡಬೇಕೆಂಬ ನಿರ್ಬಂಧವನ್ನು ಹಾಕಿದ್ದೇ ಆದರೆ ಅಂತಹ ಭಾವನೆ ಜನಗಳಿಗೆ ಬಂದದ್ದೇ ಆದರೆ, ಹೆಚ್ಚಿನ ಕಾರ್ಯಸಾಧನೆಯಾಗುತ್ತದೆಯೇ ಹೊರತು ಕಡಿಮೆ ಹಿಡುವಳಿ ಇರತಕ್ಕವರಿಂದ ಈ ಕಾರ್ಯ ಸಾಧನೆಯಾಗುವುದಿಲ್ಲ. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Now, the House will rise and meet tomorrow at 8-30 A.M.

[The House adjourned at Thirty minutes past Six of the Clock to meet again at Thirty minutes past Eight of the clock on Saturday, the 16th October 1965.]

WD 5587—G PB—500—8-12-1965.